ಶ್ರೀ ವೇದವ್ಯಾಸ ಮಹರ್ಷಿ ಪ್ರಣೀತ

ಸ್ಕಾಂದಪುರಾಣದ ಭಾಗತ್ರಯಾತ್ಮಕವಾದ

ಪಂಪಾಮಾಹಾತ್ಮ್ಯೆ



ಶ್ರೀ ಪಂಪಿ ಮಹಾಕ್ಷೇತ್ರವು

ವಿಜಯನಗರದ ಇತಿಹಾಸ ಮತ್ತು ಮಾರ್ಗದರ್ಶಕ
ವನ್ನೊಳಗೊಂಡ ಐತಿಹಾಸಿಕ ವಿಭಾಗ
ಹಾಗೂ 28 ಚಿತ್ರಗಳ ಸಹಿತ.

ಡಿಸೆಂಬರ್ 1963

ಶ್ರೀ ವೇದವ್ಯಾಸ ಮಹರ್ಷಿ ಪ್ರಣೀತ

ಸ್ಕಾಂದಪುರಾಣದ

ಹೇಮಕೂಟ ಖಂಡದ

ಭಾಗತ್ರಯಾತ್ಮಕವಾದ

ಪಂಪಾಮಾಹಾತ್ಮ್ಯ

ವಿಜಯನಗರದ ಇತಿಹಾಸ ಮತ್ತು ಮಾರ್ಗದರ್ಶಕ

ವನ್ನೊಳಗೊಂಡ ಐತಿಹಾಸಿಕ ವಿಭಾಗ

ಹಾಗೂ **28 ಚಿತ್ರಗಳ** ಸಹಿತ.

ವಿಷ್ಣುತೀರ್ಥ

ಕನ್ನಡದಲ್ಲಿ ಸಂಗ್ರಹಿಸಿದ್ದು

ಡಿಸೆಂಬರ್ 1963

ಪ್ರಕಾಶಕ :

ಪಿ. ವಿಷ್ಣುತೀರ್ಥ

ನವವೃಂದಾವನ, ಆನೆಗೊಂದಿ (ಗಂಗಾವತಿ ತಾ॥ ರಾಯಚೂರು ಜಿಲ್ಲೆ)

ಪ್ರಥಮ ಸಂಸ್ಕರಣ 1000 ಪ್ರತಿ

Copyright Registered.

★

ಬೆಲೆ : ನಾಲ್ಕು ರೂಪಾಯಿ.

★

ಮುದ್ರಕರು :

1 ರಿಂದ 120 ಪುಟಗಳು—ಶ್ರೀರಾಮ ಪ್ರೆಸ್, ಬೆಂಗಳೂರು-4

121 ರಿಂದ 256 ಪುಟಗಳವರೆಗೆ ಶ್ರೀ ಸತ್ಯಾನಂದ ಪ್ರೆಸ್,

ಭಾಷ್ಯಂ ರೋಡ್, ಬೆಂಗಳೂರು-2.

ಪ್ರಸ್ತಾವನೆ

ಶ್ರೇಯಾಂಸಿ ಬಹುವಿಘ್ನಾನಿ ಎಂಬ ಮಾತಿನ ಅನುಭವ ನನಗೆ ಹೆಜ್ಜೆ ಹೆಜ್ಜೆಗೂ ಆಗಿದೆ. ವಾಸ್ತವವಾಗಿ ನಮ್ಮಂಥ ನಿಷ್ಕಿಂಚನರು ಇಂಥಾ ಗುರುತರ ಕಾರ್ಯಕ್ಕೆ ಕೈಹಾಕಲೇ ಬಾರದಾಗಿತ್ತು. ಆದರೆ ಏನೋ ದೈವಿಕ ಘಟನೆಗಳಿಂದ ಈ ಕಾರ್ಯ ನನ್ನ ಪಾಲಿಗೆ ಬಂತು.

ನಮ್ಮ ಗುರುವರ್ಯರಾದ ಶ್ರೀಮದ್ರಾಘವೇಂದ್ರ ಸ್ವಾಮಿಗಳು ನನಗೆ ಯಂತ್ರೋದ್ಧಾರಕ ಪ್ರಾಣದೇವರ ಸೇವೆಮಾಡೆಂದು ಆದೇಶಮಾಡಿದ ಪ್ರಕಾರ ನಾನು ಹಂಪೆಗೆ ಬರಬೇಕಾಯಿತು. ಮೂರು ವರ್ಷಗಳಾದ ಬಳಿಕ ಒಂದು ದಿನ ಅಕಸ್ಮಾತ್ತಾಗಿ ಮೂಲ ಪಂಪಾಮಾಹಾತ್ಮ್ಯ ನನ್ನ ಕಣ್ಣಿಗೆ ಬಿತ್ತು. ಇಷ್ಟುದಿವಸ ಹಂಪೆಯಲ್ಲಿದ್ದು ಈ ಕ್ಷೇತ್ರ ಸ್ವಾಮಿಗೆ ನಾನು ಯಾವ ಸೇವೆ ಸಲ್ಲಿಸಲಿ ಎಂದು ಚಿಂತಿಸುತ್ತಿದ್ದ ನನಗೆ ಈ ಗ್ರಂಥ ನೋಡಿದಾಗ ಇದರ ಸಾರ ತೆಗೆದು ಕನ್ನಡ ಇಂಗ್ಲೀಷ್ ಹಿಂದೀ ತೆಲುಗು ಎಲ್ಲಭಾಷೆಗಳಲ್ಲೂ ಪ್ರಚಾರಮಾಡುವುದೇ ಒಂದು ದೊಡ್ಡ ಸೇವೆ ಎನಿಸಿತು. ಆದರೂ ಈ ಕಾಪಿ ರೈಟ್ ಗ್ರಂಥವನ್ನು ಸಂಗ್ರಹಿಸಲು ಅನುಮತಿ ಸಿಗುವುದೋ ಇಲ್ಲವೋ ಎಂದು ಅಳೆದು ಸುರಿದು ಕೊನೆಗೆ 1957ನೇ ಏಪ್ರಿಲ್ ಕಡೇವಾರ ಕರಡುಪ್ರತಿ ಬರೆಯಲು ಆರಂಭಿಸಿದೆ. ಅದು 24-6-1957ರಲ್ಲಿ ಸಮಾಪ್ತಿಯಾಯಿತು. ಮುದ್ರಿಸಲು ಬಹಳ ವಿಘ್ನಗಳು ಬಂದು ಕಡೆಗೆ ಈ ವರ್ಷ ಹೇಗೋ ಏನೋ ಭಗವದನುಗ್ರಹದಿಂದಲೇ ಮುದ್ರಣ ಕೆಲಸವು ಮುಗಿಯಿತು.

ನನಗೆ ಇದರ ಎರಡು ಪ್ರತಿಗಳು (ಮೂಲ) ಸಿಕ್ಕವು—(a) ವೇ॥ ಶ್ರೀ॥ ಮತ್ತೂರು ದತ್ತಂಭಟ್ಟರ ಹಸ್ತಲಿಖಿತ ಪ್ರತಿ. ಇದು ಶುದ್ಧವಾಗೇನೋ ಇದೆ, ಆದರೆ ಅಸಮಗ್ರವಾಗಿದೆ. (b) ಕೀರ್ತಿಶೇಷ ಜೆ. ವೆಂಕಟೇಶ್ವರ ಶಾಸ್ತ್ರಿಗಳು ತೆಲುಗು ಲಿಪಿಯಲ್ಲಿ ಮುದ್ರಿಸಿ ಪ್ರಕಟಿಸಿದ ಗ್ರಂಥ. ಅಧ್ಯಾಯಕ್ರಮದಲ್ಲಿ ಎರಡಕ್ಕೂ ಬಹಳ ಅಂತರವಿದೆ. ಲಿಖಿತ ಗ್ರಂಥ ಅಸಮಗ್ರವೂ, ಎಲ್ಲರಿಗೂ ಅಪ್ರಾಪ್ಯವೂ ಆಗಿದ್ದಕಾರಣ ನಾನು ಮುದ್ರಿತಗ್ರಂಥವನ್ನೇ ಅನುಸರಿಸಬೇಕಾಯಿತು. ಇದು ಈಗ ಶ್ರೀ ಜೆ. ಶ್ರೀನಿವಾಸ ಶಾಸ್ತ್ರಿ, B.A., ಹಾಲಹರ್ವಿ P. O., (ಆಲೂರು ತಾ॥ ಕರ್ನೂಲು ಜಿ॥) ಇವರಲ್ಲಿ ದೊರಕುತ್ತದೆ. ಈ ಮಹನೀಯರು ನನಗೆ ಒಂದು ಪ್ರತಿಯನ್ನು ಕೊಟ್ಟಿದ್ದಲ್ಲದೆ ಕಾಪಿ ರೈಟ್ ಆಗಿರುವ ಈ ಗ್ರಂಥದ ಕಥಾಸಂಗ್ರಹವನ್ನು ಕನ್ನಡದಲ್ಲಿ ಬರೆದು ಪ್ರಕಟಿಸಲು ಅನುಮತಿಕೊಟ್ಟೂ ಮಹೋಪಕಾರಮಾಡಿದರು. ಇದಕ್ಕಾಗಿ ಇವರಿಗೆ ನಾನು ಚಿರ ಋಣಿಯಾಗಿದ್ದೇನೆ.

ಮುದ್ರಿತ ಗ್ರಂಥದಲ್ಲೂ ಸಹ ಕೆಲವುಕಡೆ ಗ್ರಂಥಪಾತವಾಗಿರುವ ಹಾಗಿದೆ: ಇದನ್ನು ಒಂದೆರಡುಕಡೆ ಈ ಸಂಗ್ರಹದಲ್ಲಿ ಸಹ ಸೂಚಿಸಿದೆ. ಯಾರಾದರೂ ಮಹನೀಯರ ಬಳಿ ಹಳೆಯ ಪಂಪಾಮಾಹಾತ್ಮ್ಯದ ಹಸ್ತಲಿಖಿತ ಪ್ರತಿಗಳು ಉಪಲಭ್ಯವಿದ್ದು ಅವನ್ನು ನನಗೆ ಕಳುಹಿಸಿದರೆ ಅವರು ಲೋಕಕ್ಕೆ ದೊಡ್ಡ ಉಪಕಾರಮಾಡಿದಂತಾಗುತ್ತದೆ; ಬಿಟ್ಟುಹೋಗಿರುವ ಭಾಗಗಳನ್ನು ಸೇರಿಸಿಕೊಳ್ಳುವುದಕ್ಕೂ ಪಾಠಾಂತರಗಳನ್ನು ಗುರುತುಮಾಡಿಕೊಳ್ಳುವುದಕ್ಕೂ ಸಹಾಯವಾಗುತ್ತದೆ.

ಹಂಪೆಗೆ ವರ್ಷೇ ವರ್ಷೇ ಲಕ್ಷಾಂತರ ಯಾತ್ರಿಕರು ಬಂದು ಹೋಗುತ್ತಿದ್ದರೂ ಎಲ್ಲರಿಗೂ ಎಲ್ಲ ಸ್ಥಳಗಳನ್ನೂ ಸಂದರ್ಶಿಸುವುದಕ್ಕಾಗುವುದಿಲ್ಲ. ಆದಕಾರಣ ಎಲ್ಲರಿಗೂ ಅನುಕೂಲವಾಗುವಂತೆ ಮುಖ್ಯಮುಖ್ಯ ಸ್ಥಳಗಳ **ಚಿತ್ರಗಳನ್ನೂ** ಕೊಟ್ಟಿದೆ. ಇದೇ ರೀತಿ ಹಂಪೆಗೆ ಬರುವವರೆಲ್ಲ ಪ್ರಾಯಶಃ ವಿಜಯನಗರದ ಅವಶೇಷಗಳನ್ನೂ ನೋಡಿಯೇ ಹೋಗುವರು. ಸರಿಯಾದ ಇತಿಹಾಸ ತಿಳಿಯದಿದ್ದರೆ ಕಟ್ಟು ಕತೆಗಳನ್ನು ಕೇಳಿ ತಪ್ಪು ಕಲ್ಪನೆ ಬರುವುದು. ಇದನ್ನು ನಿವಾರಿಸಲು **ವಿಜಯನಗರದ ಇತಿಹಾಸವನ್ನೂ** ಬರೆದು ಸೇರಿಸಿದ್ದೇನೆ; ಇದನ್ನು ಹೆಚ್ಚು ಬೆಳೆಸಲು ಅವಕಾಶವಿಲ್ಲದ್ದಕ್ಕಾಗಿ ಖೇದಪಡಬೇಕಾಗಿದೆ. ಎಲ್ಲಕ್ಕೂ ಕಡೆಯದಾಗಿ ಯಾತ್ರಿಕರಿಗೆ—ಎಲ್ಲಿಳಿಯಬೇಕು? ಏನೇನು ಸೌಕರ್ಯಗಳಿವೆ? ಎಂಬ ಅಂಶಗಳನ್ನೂ **ಮಾರ್ಗದರ್ಶಕ**ವೆಂಬ ಅಧ್ಯಾಯದಲ್ಲಿ ವಿವರಿಸಲಾಗಿದೆ. ಹೀಗೆ ಕೈಲಾದವುಟ್ಟಿಗೆ ಎಲ್ಲರಿಗೂ ಅನುಕೂಲವಾಗುವಂತೆ ಎಲ್ಲ ವಿಷಯಗಳನ್ನೂ ಈ ಚಿಕ್ಕ ಪುಸ್ತಕದಲ್ಲಿ ಕ್ರೋಡೀಕರಿಸುವ ಪ್ರಯತ್ನಮಾಡಿದ್ದೇನೆ. ಈ ಕ್ಷೇತ್ರಕ್ಕೆ ಬರುವ ಲಕ್ಷಾಂತರ ಯಾತ್ರಿಕರ ಮಧ್ಯೆ ಕೆಲವರಿಗಾದರೂ ಹಂಪೆ ಮಹಿಮೆ ತಿಳಿಯಲು, ಇಲ್ಲಿರುವ ಸ್ಥಳಗಳಿಗೆ ನಿರಾಯಾಸವಾಗಿ ಹೋಗಿ ಬರಲು ಈ ಪುಸ್ತಕದಿಂದ ಸಹಾಯವಾದರೆ ನನ್ನ ಶ್ರಮ ಸಫಲವಾದ ಹಾಗೆ; ನನ್ನ ಸೇವೆ ಪೂರ್ಣವಾದಂತೆ.

ಈ ಪುಸ್ತಕದಲ್ಲಿ ಹಂಪೆಯ ಕೆಲವು ರಕ್ಷಿತ ಸ್ಮಾರಕಗಳ ಚಿತ್ರಗಳನ್ನೂ ಕೃಷ್ಣದೇವರಾಯನ ಶಿಲಾಶಾಸನದ ಚಿತ್ರ ಮತ್ತು ಮೂಲವನ್ನೂ ಭಾರತ ಸರ್ಕಾರದ ಪುರಾತತ್ತ್ವ ಶಾಖೆಯ ಡೈರೆಕ್ಟರ್ ಜನರಲ್ ಅವರ ಅನುಮತಿಯ ಮೇಲೆ ಪ್ರಕಟಿಸಲಾಗಿದೆ; ಇವುಗಳ ಕಾಪಿರೈಟ್ ಹಕ್ಕು ಭಾರತ ಸರ್ಕಾರದ ಆರ್ಕಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ ಅವರಿಗೆ ಸೇರಿದೆ. (Vide L. No. 14/20/1/63-M., Government of India, Archaeological Survey of India, New Delhi, dated the 10 Dec. 1963.) ಹೀಗೆ ಅನುಮತಿ ಕೊಟ್ಟುದಕ್ಕಾಗಿ ಅವರಿಗೆ ನನ್ನ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮತ್ತು ಇದರಲ್ಲಿ ಪ್ರಕಟಿಸಿರುವ ಚಿತ್ರಗಳ ಫೋಟೋಗಳನ್ನು ತೆಗೆದುಕೊಟ್ಟು ಉಪಕಾರ ಮಾಡಿದ್ದಕ್ಕಾಗಿ ಧಾರವಾಡದ ಶ್ರೀ ಕೆ. ಜಿ. ಹಲಸಿಗಿಯವರಿಗೂ ಹೊಸಪೇಟೆಯ ಸಿಟಿ ಸ್ಟೂಡಿಯೋ ಒಡೆಯರಿಗೂ ಬಹಳ ಕೃತಜ್ಞನಾಗಿದ್ದೇನೆ. ಹಾಗೆಯೇ ಹಂಪೆಯ ಕೆಲವು ಸಿದ್ಧವಾದ ಬ್ಲಾಕುಗಳನ್ನು ಮುದ್ರಿಸಿಕೊಳ್ಳಲು ಕೊಟ್ಟಿದ್ದಕ್ಕಾಗಿ ಹಂಪೆಯ ಪ್ರಸಿದ್ಧ ಚಿತ್ರಪ್ರಕಾಶಕ

ರಾದ ಶ್ರೀ ಬಿ. ಎನ್. ಸುಬ್ಬರಾಯರಿಗೂ ನಾನು ಆಭಾರಿಯಾಗಿದೇನೆ. ಅಲ್ಲದೆ ಅನೇಕ ಮಹನೀಯರು ಇತಿಹಾಸ ಸಂಬಂಧಿ ಪುಸ್ತಕಗಳನ್ನು ಒದಗಿಸಿಕೊಟ್ಟರು ; ಶ್ರೀ ಸಂಪದ್ಗಿರಿ ರಾವ್ ಮೊದಲಾದ ಅನೇಕರು ಅನೇಕ ಸಲಹೆಗಳನ್ನಿತ್ತಿದ್ದಾರೆ; ಇನ್ನೂ ಅನೇಕರು ಬಗೆಬಗೆಯಿಂದ ಉಪಕಾರ ಮಾಡಿದ್ದಾರೆ ; ಅವರೆಲ್ಲರಿಗೂ ನಾನು ಚಿರಕೃತಜ್ಞನಾಗಿದ್ದೇನೆ. ತತ್ರಾಪಿ ಶ್ರೀಮದವಿರಲಪರಂಜ್ಯೋತಿಃಸ್ವರೂಪೇತ್ಯಾದಿ ಬಿರುದಾಂಕಿತರಾದ ಶ್ರೀ ಶ್ರೀ ಚಿಂತಾಮಣಿಸ್ವಾಮಿಗಳ ಉಪಕಾರ ಮರೆಯುವಹಾಗಿಲ್ಲ.

ಎಷ್ಟೋ ಎಚ್ಚರಿಕೆಯಿಂದ ತಿದ್ದಿದರೂ ಸಹ ಪ್ರಮಾದವಶಾತ್ ಹಲವು ಅಕ್ಷರ ಸ್ಖಾಲಿತ್ಯಾದಿ ದೋಷಗಳು ಅಲ್ಲಲ್ಲೇ ಉಳಿದುಕೊಂಡಿವೆ ; ಹೆಚ್ಚು ಅವಕಾಶವಿಲ್ಲದುದೇ ಇದಕ್ಕೆ ಕಾರಣ. ಅವುಗಳನ್ನು ಅಭಿಜ್ಞರು ತಾವೇ ತಿದ್ದಿಕೊಂಡು ಓದಬೇಕಾಗಿ ಸವಿನಯ ಪ್ರಾರ್ಥನೆ. ಹೀಗೆಯೇ ಈ ಗ್ರಂಥದಲ್ಲಿ ಬಂದಿರುವ ಎಲ್ಲಾ ಹೆಸರುಗಳ ಅಕಾರಾದಿ ಯಾದಿಯನ್ನೂ (index) ಸೇರಿಸಬೇಕೆಂಬ ಆಸೆಯಿತ್ತು : ಅದಕ್ಕೂ ಕಾಲಾವಕಾಶವಿಲ್ಲವೆ ಹೋಯಿತು.

ಈ ಕನ್ನಡ ಸಂಗ್ರಹಕ್ಕೆ ಪ್ರೋತ್ಸಾಹ ದೊರೆತರೆ ಇದನ್ನೇ ಇಂಗ್ಲೀಷ್ ಹಿಂದೀ ತೆಲುಗು ಭಾಷೆಗಳಲ್ಲೂ ಬರೆದು ಪ್ರಕಟಿಸಬೇಕೆಂಬ ಆಸೆ ನನಗಿದೆ. ಅದಕ್ಕೆ ಜನ-ಧನ ಸಹಾಯ ಒದಗಿಸುವ ಭಾರ ಆ ಪಂಪಾ-ವಿರೂಪಾಕ್ಷರದೇ.

ತಾತ್ಕಾಲಿಕ ನಿವಾಸ
931, 1ನೇ ರಸ್ತೆ, IVನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು 10
ದಿನಾಂಕ 25-12-1963.

ವಿಷ್ಣುತೀರ್ಥ,
ನವವೃಂದಾವನ, ಆನೆಗೊಂದಿ.

ವಿಷಯಾನುಕ್ರಮಣಿಕೆ

I—ಪೂರ್ವಭಾಗ

ಅಧ್ಯಾಯ		ಪುಟ	ಅಧ್ಯಾಯ		ಪುಟ
1	ಸಂವಾದ ಪರಂಪರೆ	1	30	ಭದ್ರಾದೇವಿ	38
2	ಸಪ್ತರ್ಷಿಗಳ ಕ್ಷೇತ್ರ ದರ್ಶನ	3	31	ಭದ್ರೆಯ ತಪಸ್ಸು	39
3	ಕ್ಷೇತ್ರಪಾಲಾಗಮನ	5	32	ತಪಸ್ಸಿಗೆ ವಿಘ್ನ	,,
4	ಪಂಪಾ ಕಥೆ	6	33	ವಿಂಧ್ಯಾದ್ರಿವಾಸ	40
5	ಪಂಪಾಗೆ ಈಶ್ವರನ ವರ	7	34	ಪುನಃ ಯಥಾಸ್ಥಾನ	,,
6	ಪೇಟಕನಿಗೆ ಶಾಪ	8	35	ಶಾಪವಿಮೋಚನೆ	41
7	ಪಂಪಾ–ವಿರೂಪಾಕ್ಷ ವಿವಾಹ	10	36	ಭದ್ರಾ–ಜಾಂಬವತೀಶ್ವರ ವಿವಾಹ	,,
8	ಪಂಪಾ ಪೂರ್ವವೃತ್ತಾಂತ		37-8	ಶಂಕರತೀರ್ಥ	42–43
	ಹರಮಿತ್ರ ,,	12	39	ಅಗಸ್ತ್ಯತೀರ್ಥ	44
9	ಹರಮಿತ್ರ ವಿಮಲಾ ಸಂವಾದ	14	40	ಸೋಮತೀರ್ಥ	45
10	ಶಿವಪೂಜಾಮಹಿಮೆ	15	41	ವ್ಯಾಘ್ರಪ್ಲುತತೀರ್ಥ	46
11	ಕಲ್ಯಾಣತೀರ್ಥ	16	42	ಚರ್ಚಾತೀರ್ಥ	47
12	ಬಕದಾಲ್ಭ್ಯತೀರ್ಥ	18	43	ನಾಭಿಮತೀತೀರ್ಥ	84
13	ಋಷ್ಯಶೃಂಗಪರ್ವತ	19	44	ಸುವ್ರತನಿಗೆ ಸದ್ಗತಿ	50
14	ಕೂರ್ಮ, ಅನುಗ್ರಹತೀರ್ಥಗಳು	20	45	ದೇವೀಕುಂಡ	51
15	ಕ್ರತುತೀರ್ಥ	21	46	ಅಮೃತತೀರ್ಥ	,,
16	ಕಿನ್ನರೇಶ	22	47	ಪಾಪನಾಶನ ತೀರ್ಥ	52
17	ಮಾತಂಗೀ ವೃತ್ತಾಂತ	24	48	ದೇವತೆಗಳ ಗರ್ವ	55
18	ಮಾತಂಗೀ ವಿವಾಹ	25	49	,, ಗರ್ವಭಂಗ	57
19	ಸಿದ್ಧೇಶ್ವರತೀರ್ಥ	26	50	ಪ್ರಸನ್ನತೀರ್ಥ	59
20	ವರಾಹಪ್ಲುತತೀರ್ಥ	27	51	ಋಷಭತೀರ್ಥ	61
21	ಕಾಂಚನತೀರ್ಥ	28	52	ರತ್ನತೀರ್ಥ	63
22	ರಾಕ್ಷಸನಿಗೆ ಮುಕ್ತಿ	29	53	ಮುಕ್ತಿತೀರ್ಥ	65
23	ಮಾಂಡವ್ಯರ ಕಥೆ	30	54	ಮಾಣಿಭದ್ರೋಪಾಖ್ಯಾನ	67
24	ಶತಚರ್ಚಾಶ್ರಮ	32	55	ಮಾಣಿಭದ್ರನ ತಪಸ್ಸು	69
25	ವಿಮಲಾತೀರ್ಥ	33	56	ಮೃಗದ ದೌತ್ಯ	71
26	ಶಂಡಿಲನ ವೃತ್ತಾಂತ	34	57	ವಿವಾಹಸನ್ನಾಹ	73
27	ತೀರ್ಥಸ್ನಾನದ ಮಹಿಮೆ	36	58	ವಿವಾಹವರ್ಣನೆ	75
28	ಜಾಂಬವಂತನ ವೃತ್ತಾಂತ	,,	59	ಕಕುಭತೀರ್ಥ	77
29	ರಾಕ್ಷಸ ಶಿವಸೇವಕ	37	60	ನಾಗತೀರ್ಥ	78

ಅಧ್ಯಾಯ		ಪುಟ
61	ಮಾಲ್ಯವಂತ ಗಿರಿ	80
62	ಬ್ರಹ್ಮಶಿಲಾದಿತೀರ್ಥಗಳು	82
63	ಖರ್ಜೂರೀ–ಅಮರೀಸಂಗಮ	84
64	ಮನುತೀರ್ಥ	86
65	ವ್ಯಾಧಾರಣ್ಯ, ಶಬರೀತೀರ್ಥ	87
66	ಆಮ್ರಕೂಟೇಶ್ವರ ಪ್ರಾದುರ್ಭಾವ	89
67	ರಂಗನಾಥನ ಪ್ರಾದುರ್ಭಾವ	91
68	ಪುಷ್ಕರತೀರ್ಥ	95
69	ತಾರಾಪರ್ವತ	97
70	ಕಪಿಲಾದಿತೀರ್ಥಗಳು	98
71	ಕಲಿತಾರಕತೀರ್ಥ	100
72-3	ಸೀತಾಸರೋವರ	101-04
74	ರಾಮತೀರ್ಥ	107
75	ಕೋಟಿತೀರ್ಥ	109
76	ಚಕ್ರತೀರ್ಥ	111
77	ಗೌರೀಮುಖತೀರ್ಥ	113
78	ಮತಂಗಗಿರಿ	116
79	ಅಗ್ನಿತೀರ್ಥ	119
80	ಸಾಂಬತೀರ್ಥ	120
81	ಕುಮಾರತೀರ್ಥ	121
82	ವ್ಯಾಸಾಶ್ರಮ	123
83	ಹರಿಣಪ್ಲುತತೀರ್ಥ	126
84	ಶೌನಕಾದಿಗಳ ಯಜ್ಞ	128
85	ವ್ಯಾಘ್ರಾಸುರ-ಗಜಾಸುರವಧ	131
86	ಯಜ್ಞಸಮಾಪ್ತಿ	135
87	ದಾಕ್ಷಾಯಣೀಜನನ	136
88	ದಾಕ್ಷಾಯಣೀ ವಿವಾಹ	137
89	ದಕ್ಷನಿಗೆ ಶಾಪ	138
90	ವೀರಭದ್ರಾದಿಗಳು	140
91-2	ಮುಕ್ತಿನರಸಿಂಹ	142-3
93	ಪಾತಾಳೇಶ್ವರ, ನವದುರ್ಗಿ	145
94-6	ವ್ಯೋಮಕೇಶ್ವರ	148-9-50
97	ಬ್ರಹ್ಮಕುಂಡ	151
98	ಭುವನೇಶ್ವರೀ	152

II A—ಮಧ್ಯಭಾಗ-ಪೂರ್ವಾರ್ಧ

99	ಹೇಮಕೂಟದರ್ಶನ	154
100	ಹಂಪೆಪ್ರವೇಶ	155
101	ಮಂಟಪಪ್ರವೇಶ	,,
102	ವಿರೂಪಾಕ್ಷಾರ್ಚನೆ	156
103	ವಿರೂಪಾಕ್ಷಸ್ತವ	,,
104	ವರಪ್ರಸಾದ	,,
105	ಹಂಪೆಯಲ್ಲಿ ವಾಸ	157
106	ವಿಷ್ಣುವೃದ್ಧನ ಪ್ರಶ್ನೆ	,,
107	ಪೂರ್ವದ್ವಾರ	158
108	ಕಿನ್ನರೇಶ	,,
109	ದಕ್ಷಿಣದ್ವಾರ	158
110	ಪಶ್ಚಿಮದ್ವಾರ	159
111	ಉತ್ತರದ್ವಾರ	161
112-3	ಉಪದ್ವಾರಗಳು	161-2
114	ನಾನಾತೀರ್ಥಗಳು	163
115-29	ಹರಿಶ್ಚಂದ್ರೋಪಾಖ್ಯಾನ	167
130	ನದೀತೀರದ ತೀರ್ಥಗಳು	174

II B—ಮಧ್ಯಭಾಗ ಉತ್ತರಾರ್ಧ

131	ಮನ್ಮುಖ ತೀರ್ಥ	176
132	ಅವಾಂತರ ತೀರ್ಥಗಳು	177
133	ಪ್ರಾಕಾರ ಮೂರ್ತಿಗಳು	178
134	ಉಳಿದ ಮೂರ್ತಿಗಳು	181

III—ಉತ್ತರಭಾಗ

135	ದೇಶಕಾಲಾದಿ ವಿಚಾರ	183
136	ವೇದಮಹಿಮೆ	184
137	ವೇದವಿಭಜನೆ	185
138	ನವವಿಧ ಸೃಷ್ಟಿ	186
139	ಭುವನಕೋಶ ವರ್ಣನೆ	,,
140	ಕಾಲಾಧಿಕಾರಿ ನಿರೂಪಣ	187

ಅಧ್ಯಾಯ		ಪುಟ	ಅಧ್ಯಾಯ		ಪುಟ
141	ಸದಾಚಾರ	188	146	ಪಾಶುಪತವ್ರತ	193
142	ಪಂಚಾಕ್ಷರೀ	189	147	ಶೈವಚರ್ಯೆ	194
143	ಪಂಚಾಕ್ಷರಿಯ ಸರ್ವೋತ್ತಮತ್ವ	191	148-9	ಕಾಲಾಮುಖ	195
144	ಜಪವಿಧಿ	192	150	ಗ್ರಂಥೋಪಸಂಹಾರ	197
145	ಪಂಚಾರ್ಥಚರಣಗಳು	193			

IV—ಐತಿಹಾಸಿಕ ವಿಭಾಗ—ವಿಜಯನಗರದ ಇತಿಹಾಸ

	ಮಂಗಳ ಶ್ಲೋಕಗಳು	199	4	ಸಾಮ್ರಾಜ್ಯ ಸ್ಥಾಪನೆ	218
1	ಹಂಪೆ-ವಿಜಯನಗರ	,,	5	ವಿಜಯನಗರ ಸಂಸ್ಥಾಪಕರು	227
2	ಐತಿಹಾಸಿಕ ಹಿನ್ನೆಲೆ	204	6	ನಾಲ್ಕು ರಾಜವಂಶಗಳು	235
3	ಮುಸಲ್ಮಾನರ ಧಾಳಿಗಳು	208			

V—ಹಂಪೆ—ವಿಜಯನಗರ ಮಾರ್ಗದರ್ಶಕ

ಚಿತ್ರಗಳ ಸೂಚಿ

1	ಪಂಪಾ ಸರೋವರ, ಆನೆಗೊಂದಿ	1	15	ಕೃಷ್ಣದೇವರಾಯನ ಶಾಸನ	201
2	ಜಂಬುನಾಥ, ಹೊಸಪೇಟೆ	,,	16	ನರಹರಿತೀರ್ಥರ ವೃಂದಾವನ	216
3	ಹಂಪೆಗುಡಿಯ ಗೋಪುರಗಳು	12	17	ವ್ಯಾಸರಾಯರ ವೃಂದಾವನ, ಪುರಂದರದಾಸರು	217
4	ಕೋದಂಡರಾಮನ ಗುಡಿ	13	18	ವಿದ್ಯಾರಣ್ಯರು	230
5	ಮಾಣಿಭದ್ರೇಶ್ವರನ ಗುಡಿ	52	19	ಭುವನೇಶ್ವರೀ	231
6	ಮಾಲ್ಯವಂತ	,,	20	ಶ್ರೀಕೃಷ್ಣದೇವರಾಯ	239
7	ಗವಿರಂಗನಾಥ, ಆನೆಗೊಂದಿ	92	21	ತುಲಾಭಾರ	240
8	ಕಪಿಲಾಶ್ರಮ,	,,	22	ಕುಹುಯೋಗಪರಿಹಾರ	241
9	ಪುಣ್ಯಕೋಟಿ-ವಿರಜಾ-ತೀರ್ಥ	100	23	ಬಿಷ್ಟಪ್ಪಯ್ಯನ ಗೋಪುರ	246
10	ಮಲಪ್ರಹಾರಿಣೀ ; ಚಿಂತಾಮಣಿ ಮಠ	,,	24	ಕಲ್ಲು ತೇರು	248
11	ಸೀತಾಸರೋವರ, ಸುಗ್ರೀವಗವಿ	112	25	ಕನಕಗಿರಿ ಗೋಪುರ	,,
12	ಋಷ್ಯಮೂಕ, ಚಕ್ರತೀರ್ಥ	,,	26	ಗಜಶಾಲೆ	249
13	ಮುಕ್ತಿನರಸಿಂಹ	144	27	ರಾಣಿಯರ ಸ್ನಾನಾಗಾರ	,,
14	ಬ್ರಹ್ಮಕುಂಡ (ಮನ್ಮುಖತೀರ್ಥ)	176	28	ಪಂಪಾ - ವಿರೂಪಾಕ್ಷರು— ರಕ್ಷಾಪತ್ರ	

-: ಪಂಪಾ ಯಾತ್ರೆ :-



ಪಂಪಾ ಸರೋವರ, ಆನೆಗೊಂದಿ (ಪುಟ 7–10)



ಜಂಬುನಾಥ, ಹೊಸಪೇಟೆ (ಪುಟ–36)

|| ಶ್ರೀಃ ||

ಸ್ಕಾಂದಪುರಾಣದ

ಹೇಮಕೂಟಖಂಡ-ಪ್ರೋಕ್ತವಾದ "ಸಪ್ತರ್ಷಿಯಾತ್ರಾ ಪ್ರಕಾಶಿಕಾ"ಎಂಬ

ಪಂಪಾಮಾಹಾತ್ಮ್ಯ

ಪೂರ್ವಭಾಗ

ಅಧ್ಯಾಯ 1 ಸಂವಾದ ಪರಂಪರೆ

ಮಂಗಳಾಚರಣೆ

ಶ್ರೀಗುರುಭ್ಯೋ ನಮಃ | ಹರಿಃ ಓಂ ||

ಯಃ ಶಿವೋ ನಾಮರೂಪಾಭ್ಯಾಂ ಯಾ ದೇವೀ ಸರ್ವಮಂಗಳಾ ।
ತಯೋಃ ಸಂಸ್ಮರಣಾತ್ ಪುಂಸಾಂ ಸರ್ವತೋ ಜಯ-ಮಂಗಳೇ ॥
[ಅಸ್ಮತ್ಸದ್ಗುರುಪಾದಾನಾಂ ಪ್ರಣಮ್ಯ ಚರಣಾಂಬುಜಮ್ ।
ಪಂಪಾಕ್ಷೇತ್ರಸ್ಯ ಮಾಹಾತ್ಮ್ಯಂ ಸಂಗ್ರಹೀಷ್ಯೇ ಯಥಾಮತಿ ॥]

ಮಂಗಳಶ್ಲೋಕಾರ್ಥ–ಶಿವನು ಹೆಸರಿಗೆ ತಕ್ಕಂತೆ ಮಂಗಳರೂಪಿ[1]. ಅದರಂತೆ ಪಾರ್ವತಿಯೂ ನಾಮ ರೂಪ ಎರಡರಿಂದಲೂ ಸರ್ವಮಂಗಳೆ[2]. ಇಂಥಾ ಶಿವ-ಪಾರ್ವತಿಯರ ಸಂಸ್ಮರಣೆಯಿಂದ ಜನರಿಗೆ ಎಲ್ಲ ರೀತಿಯಿಂದಲೂ ಜಯ-ಮಂಗಳಗಳು ಸಿದ್ಧಿಸುವುವು.

ಕಥಾರಂಭ—ಹಿಂದೆ ಒಂದು ಸಲ ನೈಮಿಷಾರಣ್ಯದಲ್ಲಿ ಶೌನಕಾದಿ ಅನೇಕ ಋಷಿಗಳು ಸೇರಿ ಹನ್ನೆರಡು ವರ್ಷ ನಡೆಸಬೇಕಾದ ಮಹಾಯಜ್ಞವನ್ನು ಆರಂಭಿಸಿದರು. ಅದನ್ನು ನೋಡುವುದಕ್ಕೆ ಸುಮಂತ ದೇವಲ ಪೈಲವ ಸುಮತಿ ಭೃಗು ವಾಮದೇವ ಜಾಬಾಲಿ ಶರಭಂಗ ಸುತೀಕ್ಷ್ಣ ಮಾಂಡವ್ಯ ಮುದ್ಗಲ ಧೂಮ್ರ ಕೌಂಡಿನ್ಯ ರೈಭ್ಯ ಗಾಲವ ವಿಧ್ರುವ ಶಾಂತ ಬೋಧಾಯನ ಶುಚಿವ್ರತ ಶೌನಕ ಶತಾನಂದ ಶತಾತಪ ಉದ್ದಾಲಕ ಮಹಾಸೇನ ಕಣಾದ ಗರ್ಗ ವಾಮನ ಮೊದಲಾದ ಮುನಿಶ್ರೇಷ್ಠರು ತಮ್ಮ ತಮ್ಮ ಶಿಷ್ಯಪರಿವಾರ ಸಮೇತರಾಗಿ ಅಲ್ಲಿಗೆ ಬಂದರು. ಅವರನ್ನು ಶೌನಕಾದಿಗಳು ಅರ್ಘ್ಯಪಾದ್ಯಾದಿ ಉಪಚಾರಗಳಿಂದ ಸತ್ಕರಿಸಿದರು. ಹೀಗೆ ಸತ್ಕೃತರಾದ ಆ ಸುಮಂತಾದಿಗಳೂ ಯಜ್ಞದಲ್ಲಿ ಭಾಗವಹಿಸಿದರು.

---

1 ಶಿವ-ಮಂಗಳ. 2 ಸರ್ವ-ಎಲ್ಲ ವಿಧದಿಂದಲೂ, ಮಂಗಳೆ.

ಸೂತರ ಆಗಮನ—ಅಷ್ಟು ಹೊತ್ತಿಗೆ ಅಲ್ಲಿಗೆ ವ್ಯಾಸಮಹರ್ಷಿಗಳ ಶಿಷ್ಯರಾದ ಸೂತರು ಆಗಮಿಸಿದರು. ಜಟಾವಲ್ಕಲಾಲಂಕೃತನೂ ಭಸ್ಮ ಚ್ಛನ್ನನೂ ರುದ್ರಾಕ್ಷ ಮಾಲಾಧಾರಿಯೂ ಆದ ಆ ಮಹರ್ಷಿಯನ್ನು ನೈಮಿಷಾರಣ್ಯವಾಸಿಗಳೆಲ್ಲರೂ ಪರಮ ಭಕ್ತಿ ಪುರಸ್ಸರವಾಗಿ ಪೂಜಿಸಿ, ಅವರಿಗೆ ದಿವ್ಯವಾದ ಬ್ರಹ್ಮಾಸನ ಕೊಟ್ಟು ಸತ್ರವು ಮುಗಿದಬಳಿಕ ತಾವೂ ಅವರ ಹತ್ತಿರ ಕುಳಿತುಕೊಂಡು ಕೈಮುಗಿದು ಅವರನ್ನು ಕುರಿತು ಇಂತೆಂದರು—

ಶೌನಕಾದಿಗಳ ಪ್ರಶ್ನೆ—'ಸ್ವಾಮಿ, ನಾವು ತಮ್ಮ ಬಾಯಿಂದ ಬ್ರಾಹ್ಮ ಪಾದ್ಮ ವಿಷ್ಣು ವರಾಹಾದಿ ಅಷ್ಟಾದಶ ಮಹಾಪುರಾಣಗಳನ್ನು* ಉಪಪುರಾಣ ಇತಿಹಾಸ ಪುರಸ್ಸರವಾಗಿ ಕೇಳಿದೆವು. ಆದರೂ ನಮ್ಮ ಮನಸ್ಸು ಪೂರ್ಣತೃಪ್ತಿಹೊಂದಿಲ್ಲ. ಸತ್ಕಥಾಶ್ರವಣ ಕ್ಷೇತ್ರಯಾತ್ರೆ ದೇವತಾಪೂಜೆ ಸತ್ಸಹವಾಸಾದಿಗಳೇನೋ ಶ್ರೇಯಸ್ಕರಗಳೇ. ಆದರೆ ಇವನ್ನೆಲ್ಲಾ ಒಂದೇ ಜನ್ಮದಲ್ಲಿ ಸಾಧಿಸುವುದು ಯಾವ ಮನುಷ್ಯನಿಗೆ ಸಾಧ್ಯ ? ಆದ್ದರಿಂದ ಒಂದು ಧರ್ಮದಿಂದಲೇ ಈ ಅಖಿಲ ಧರ್ಮಗಳ ಫಲವೂ ಲಭಿಸುವಂಥಾ ಲಘೂಪಾಯ ಯಾವುದಿದೆ ? ಅದನ್ನು ತಿಳಿಸಿ.'

ಸೂತರ ಉತ್ತರ—ಸೂತರು ಚಂದ್ರಶೇಖರನನ್ನು ವಂದಿಸಿ ಹೀಗೆಂದರು— 'ಮಹರ್ಷಿಗಳೇ, ಅವಶ್ಯ ಕೇಳಬೇಕಾದ ಅತುಲವಾದ ಪಂಪಾಮಾಹಾತ್ಮ್ಯ ಹೇಳುತ್ತೇನೆ, ಕೇಳಿರಿ. ಹಿಂದೆ ಒಂದು ಸಮಯದಲ್ಲಿ ಪರಾನುಗ್ರಹ ಕಾಮಿಗಳಾದ ನಾರದರು, ಲೋಕಸಂಚಾರ ಮಾಡುವ ಕಾಲದಲ್ಲಿ ಅಲ್ಲಲ್ಲೇ ನಾನಾವಿಧ ಕಲಿದೋಷ ಗಳನ್ನೂ ಅವುಗಳಿಂದ ಪೀಡಿತರಾದ ಪಾಪಿ-ಪರದೇಶಿಗಳನ್ನೂ ಕಂಡು ಮರುಗಿ ಅವರನ್ನು ಉದ್ಧಾರ ಮಾಡಲು ಕಾತುರರಾಗಿ ತಮ್ಮ ತಂದೆ ಚತುರ್ಮುಖನ ಬಳಿ ಹೋಗಿ ಭಕ್ತಿಯಿಂದ ಪ್ರಣಾಮ ಮಾಡಿ ನಮ್ರತಾಪೂರ್ವಕ ಹೀಗೆ ವಿಜ್ಞಾಪಿಸಿ ಕೊಂಡರು—

ಬ್ರಹ್ಮ-ನಾರದ ಸಂವಾದ—"ಪ್ರಭೋ, ಘೋರಕಲಿಪ್ರಭಾವದಿಂದ ಜನತೆ ಯೆಲ್ಲ ಹಾಳಾಗಿ ಸದಾಚಾರಹೀನರೂ ಮಾತಾಪಿತೃಹಿಂಸಕರೂ ಪರಾನ್ನಾಸಕ್ತರೂ ವರ್ಣಾಶ್ರಮಧರ್ಮಭ್ರಷ್ಟರೂ ಡಾಂಭಿಕರೂ ಗರ್ವಿಷ್ಠರೂ ಪರಹಿಂಸಕರೂ ಆಗಿ ಹೋಗಿದ್ದಾರೆ. ಭೂಸಂಚಾರಮಾಡುವಾಗ ನನ್ನ ಕಣ್ಣಿಗೆ ಎಲ್ಲೆಲ್ಲೂ ಸುಖ ಕಾಣಿಸಲಿಲ್ಲ. ಹೀಗಾದರೆ ಅಲ್ಪಾಯುಗಳೂ ಅಲ್ಪಶಕ್ತರೂ ಆದ ಮಾನವರ ಗತಿಯೇನು? ಆದ್ದರಿಂದ, ಹೇ ಪದ್ಮಜ, ಇಂಥಾ ಘೋರಕಲಿಕಾಲದಲ್ಲೂ ಅವರಿಗೆ ಅನಾಯಾಸವಾಗಿ ಸದ್ಗತಿಯಾಗುವ ಉಪಾಯವನ್ನು ತಿಳಿಸು. ನಿನ್ನನ್ನು ಬಿಟ್ಟರೆ ಇದನ್ನು ಹೇಳುವವರು ಮತ್ತಾರೂ ಇಲ್ಲ" ಎನ್ನಲು ಅದಕ್ಕೆ ಬ್ರಹ್ಮದೇವರು ಹೀಗೆ ಹೇಳಿದರು :—

---

* ಈ ಪುರಾಣಗಳ ಹೆಸರನ್ನು 137ನೇ ಅಧ್ಯಾಯದಲ್ಲಿ ನೋಡಿಕೊಳ್ಳಬಹುದು.

ಗೌರೀಶಂಕರರ ಸಂವಾದ—ನಾರದ ! ಉತ್ತಮವಾದ ಪ್ರಶ್ನೆ ಕೇಳಿದಿ. ಅತಿ ರಹಸ್ಯವಾದ ಸಂಗತಿ ಹೇಳುತ್ತೇನೆ, ಲಾಲಿಸು. ಕಲಿಪ್ರಾಬಲ್ಯದಿಂದ ದುರ್ಮಾರ್ಗಿಗಳಾಗಿ ದುರಾಚಾರದಿಂದ ನರಕ ಭಾಗಿಗಳಾಗುತ್ತಿದ್ದ ಜನರನ್ನು ಕಂಡು ಚಿಂತಾಕುಲಳಾಗಿ ಗೌರಿಯು ಕೈಲಾಸನಗರದಲ್ಲಿ ಶಂಕರನನ್ನು 'ಹೇ ಕರುಣಾಕರ ! ದುಃಖಾರ್ತರಾದ ಈ ಜನರ ಉದ್ಧಾರಕ್ಕಾಗಿ ಭವದುಃಖವನ್ನು ನೀಗಿಸಬಲ್ಲ ಅತಿ ಸೂಕ್ಷ್ಮವಾದ ಯಾವು ದಾದರೂ ಸುಲಭಮಾರ್ಗತೋರಿಸಿ ಕೊಡು. ಅದನ್ನು ಲೋಕದಲ್ಲಿ ಪ್ರಚಾರಮಾಡಿ ಜನರನ್ನು ಜಂಜಾಟದಿಂದ ಪಾರುಮಾಡಬೇಕೆಂದಿದ್ದೇನೆ' ಎಂದು ಪರಮೈಕಾಂತದಲ್ಲಿ ಕೇಳಿದಳು.

ಆಗ ಗೌರೀಶ ಅವಳ ಪ್ರಾರ್ಥನೆಯನ್ನು ಪ್ರಶಂಸಿಸಿ ಅವಳಿಗೆ ಪಂಚಕ್ರೋಶಾಧಿ ಪತಿಯಾದ ವಿರೂಪಾಕ್ಷನ, ಹಾಗೂ ಹೇಮಕೂಟ ತುಂಗಭದ್ರಾ ಮತ್ತು ಸಪ್ತ ಕೋಟಿ ತೀರ್ಥಗಳ ಸತ್ಕಥೆಯನ್ನು ಹೇಳಿ 'ಇದು ಬಹಳ ಪವಿತ್ರ, ಪಾಪಘ್ನ ಮತ್ತು ಕಲಿಕಲ್ಮಶನಾಶಕ. ಶೈವಾನುಷ್ಠಾನಶೀಲನೂ ಶಾಂತನೂ ಸನ್ಮಾರ್ಗನಿರತನೂ ಆದ ನನ್ನ ಭಕ್ತನಿಗೇ ಇದನ್ನು ಹೇಳತಕ್ಕದ್ದು' ಎಂದನು.

ಪಂಪಾಮಾಹಾತ್ಮ್ಯದ ಇತಿವೃತ್ತ—ಇದನ್ನು ಮೊದಲು ಶಿವ ಗೌರಿಗೆ ಹೇಳಿದ. ಅವಳು ಸ್ಕಂದನಿಗೆ ಹೇಳಿದಳು. ಸ್ಕಂದ ಸನತ್ಕುಮಾರರಿಗೂ ಅವರು ಬ್ರಹ್ಮನಿಗೂ, ಬ್ರಹ್ಮ ನಾರದರಿಗೂ ನಾರದರು ವ್ಯಾಸರಿಗೂ ಹೇಳಲು ವ್ಯಾಸರು ಅದನ್ನೇ ಪುರಾಣ ವಾಗಿ ರಚಿಸಿದರು. ಅದನ್ನು ಸೂತರು ಅವರ ಮುಖದಿಂದಲೇ ಕೇಳಿ ಶೌನಕಾದಿಗಳಿಗೆ ಶ್ರವಣಮಾಡಿಸಿದರು. ಹೀಗೆ ಈ ಮಾಹಾತ್ಮ್ಯ ಲೋಕದಲ್ಲಿ ಪ್ರಸಿದ್ಧಿಗೆ ಬಂತು. ಇದರ ಶ್ರವಣ ಪಠನಾದಿಗಳಿಂದ ಜನರಿಗೆ ಸದ್ಗತಿಯಾಗುತ್ತದೆ; ಅವರ ಪಿತೃಗಳೆಲ್ಲ ಶಿವಸಾಯುಜ್ಯ ಹೊಂದುತ್ತಾರೆ.

ಸೂತಯೋಗಿಯ ಸುಧಾಸಾರಸದೃಶ ವಚನದಿಂದ ಹರ್ಷನಿರ್ಭರರಾದ ಶೌನಕಾದಿಗಳು ಮಹಾದೇವನ ಕಥಾಮೃತ ಪಾನಾಸಕ್ತರಾಗಿ ಪುನಃ ಪ್ರಶ್ನೆಮಾಡಿದರು.

ಅಧ್ಯಾಯ 2 ಸಪ್ತರ್ಷಿಗಳ ಕ್ಷೇತ್ರದರ್ಶನ

ಶೌನಕಾದಿಗಳ ಪ್ರಾರ್ಥನೆ— 'ಹೇ ಸೂತ, ಮಹಾನುಭಾವ ! ನಿಮ್ಮ ವಾಕಾ ಮೃತದಿಂದ ನಾವು ಸಂಜೀವಿತರಾದೆವು. ನಮಗೆ ಹಸಿವು ಬಾಯಾರಿಕೆಗಳೂ ಕಾಣಿಸು ವುದಿಲ್ಲ. ಸಾಧೋ, ಇದನ್ನೇ ವಿಸ್ತಾರವಾಗಿ ಹೇಳಿ' ಎಂದು ಶೌನಕಾದಿಗಳು ಪ್ರಾರ್ಥಿಸಲು ಸೂತರು ಕಥಾರಂಭಮಾಡಿದರು—ಹೇ ಶೌನಕಾದಿಗಳೇ, ಸನತ್ಕುಮಾರ ಸ್ಕಂದನನ್ನು ಇದೇ ರೀತಿ ಕೇಳಿದಾಗ ಸ್ಕಂದ ಹೇಳಿದ ಕಥೆಯನ್ನೇ ನಾನು ಹೇಳುತ್ತೇನೆ. ಸಾವಧಾನ ವಾಗಿ ಆಲಿಸಿರಿ.

ಸಪ್ತರ್ಷಿಗಳ ಯಾತ್ರಾರಂಭ— ಹಿಮವತ್ಪರ್ವತದ ತಪ್ಪಲಲ್ಲಿ ಶಾಂತರೂ ವಾಯ್ವಾಹಾರಿಗಳೂ ಭಗವದ್ಧ್ಯಾನತತ್ಪರರೂ ಆದ 1. ಕಶ್ಯಪ, 2. ಅತ್ರಿ, 3. ಭರದ್ವಾಜ, 4. ವಿಶ್ವಾಮಿತ್ರ, 5. ಗೌತಮ, 6. ಜಮದಗ್ನಿ, 7. ವಸಿಷ್ಠ ಈ ಸಪ್ತರ್ಷಿಗಳು ಪತ್ನೀ ಶಿಷ್ಯಪರಿವಾರ ಸಮೇತರಾಗಿ ವಾಸಿಸುತ್ತಾ ತಪಸ್ಸು ಮಾಡಿ, ಕೊಂಡಿದ್ದರು. ಒಂದು ಸಲ ಅವರು ಪಂಪಾಕ್ಷೇತ್ರದ ಮಹಿಮೆ ಕೇಳಿ ಹೀಗೆ ಆಲೋಚಿಸಿದರು—

> ವಿರೂಪಾಕ್ಷಸ್ತು ವಿಶ್ವೇಶಃ ತುಂಗಭದ್ರಾ ತು ಜಾಹ್ನವೀ ।
> ಪಂಪಾ ಕಾಶೀಸಮಾ ದಿವ್ಯಾ ಭುಕ್ತಿ-ಮುಕ್ತಿ-ಪ್ರದಾಯಿನೀ ॥

ವಿರೂಪಾಕ್ಷನೇ ವಿಶ್ವೇಶ್ವರ. ತುಂಗಭದ್ರೆಯೇ ಗಂಗೆ. ಕಾಶೀಸಮಾನವಾದ ಹಂಪೆ* ಭುಕ್ತಿಮುಕ್ತಿ ಎರಡನ್ನೂ ಕೊಡುತ್ತದೆ.

ಹೀಗೆ ಆಲೋಚಿಸಿ ಆ ಸಪ್ತರ್ಷಿಗಳು ಪಂಪಾಕ್ಷೇತ್ರವನ್ನು ಹುಡುಕಿಕೊಂಡು ಹೊರಟು, ಅಲ್ಲಲ್ಲೇ ರಮ್ಯವಾದ ಪಟ್ಟಣ ನದೀ ಬೆಟ್ಟ ಪುಣ್ಯಕ್ಷೇತ್ರ ಎಲ್ಲಾ ದಾಟುತ್ತಾ ದಾಟುತ್ತಾ, ಕಂಡ ಕಂಡ ಋಷಿ ಮುನಿಗಳನ್ನು ಹಂಪೆ ಮಾರ್ಗ ವಿಚಾರಿಸುತ್ತಾ ಬಹುದೂರ ನಡೆದು ಬಂದರು. ಅತಿ ಸಮೀಪಕ್ಕೆ ಬಂದರೂ ಈ ಕ್ಷೇತ್ರ ಅವರಿಗೆ ಗೋಚರವೇ ಆಗಲಿಲ್ಲ. ಇದರಿಂದ ಚಿಂತಾಕುಲರಾಗಿ ಅವರು 'ಇದೇನಾಶ್ಚರ್ಯ ! ಈ ಕ್ಷೇತ್ರ ನಮಗೇಕೆ ಕಾಣಿಸಿಕೊಳ್ಳ ಒಲ್ಲದು ? ನಾವೋ ಮಾರ್ಗಾಯಾಸದಿಂದ ಬಳಲಿ ಹೋಗಿದ್ದೇವೆ. ಇರಲಿ. ವಿರೂಪಾಕ್ಷನನ್ನೇ ಪ್ರಾರ್ಥಿಸೋಣ' ಎಂದು ವಿಚಾರಮಾಡಿ ಸ್ವಾಮಿಯನ್ನು ನಾನಾ ರೀತಿ ಸ್ತೋತ್ರಮಾಡಿದರು.

ಆಗ ಶಿವಪ್ರಸಾದದಿಂದ ಪಂಚಕ್ರೋಶಾತ್ಮಕವಾದ (ಐದು ಹರಿದಾರಿಯಿರುವ) ಹಂಪೆ ಅವರಿಗೆ ದೃಷ್ಟಿಗೋಚರವಾಯಿತು. ಅದನ್ನು ಕಂಡು ಹರ್ಷತುಂದಿಲರಾಗಿ ಅವರು 'ಅಹೋ ನಾವೇ ಧನ್ಯರು, ಕೃತಕೃತ್ಯರು. ಆಹಾ ! ಹಂಪೆ ವೈಭವ ನೋಡುವುದು ಎಂಥಾ ಭಾಗ್ಯ !

> ಪಂಪಾ ಕಾಶೀತಿ ವಿಖ್ಯಾತಾ ದಕ್ಷಿಣಾಖ್ಯಾಽಮೃತಪ್ರದಾ ।

ದಕ್ಷಿಣಕಾಶೀ ಎಂದು ಹೆಸರುವಾಸಿಯಾದ ಹಂಪೆ ಅಮರತ್ವ ಕೊಡುತ್ತದೆ' ಎಂದು ಪರಿಪರಿಯಾಗಿ ಕೊಂಡಾಡಿದರು.

ಪಂಪಾಪತಿಯ ದರ್ಶನ-ಪಟ್ಟಣವೆಲ್ಲಾ ನೋಡಿದ ಬಳಿಕ ಮುಖ್ಯವಾದ ಪಂಪಾಪತಿಯ ಲಿಂಗವನ್ನು ಸಂದರ್ಶಿಸಿದರು. ಅದು ಪಂಚಕ್ರೋಶದಲ್ಲೆಲ್ಲಾ ಹರಡಿ

---

*ಹಂಪೆ ಎಂಬುದು ಪಂಪಾ ಶಬ್ದದ ತದ್ಭವರೂಪ. ಆದ್ದರಿಂದ ಪಂಪಾಕ್ಷೇತ್ರ ಎನ್ನುವುದಕ್ಕೆ ಈ ಪುಸ್ತಕದಲ್ಲಿ ಪ್ರಾಯಃ ಹಂಪೆ ಎಂದೇ ಪ್ರಯೋಗಮಾಡಿದೆ—ವಿ.ಶೀ.

ಕೊಂಡು ಕೋಟಿಸೂರ್ಯರಂತೆ ಪ್ರಕಾಶಿಸುತ್ತ ಕೋಟಿಚಂದ್ರರಂತೆ ತಂಪಾಗಿದ್ದು ಸ್ವರ್ಗ ಮರ್ತ್ಯ ಪಾತಾಳಗಳನ್ನೆಲ್ಲಾ ಏಕಾಕಾರವಾಗಿ ಆವರಿಸಿಕೊಂಡು ಯಕ್ಷಕಿನ್ನರ ಗಂಧರ್ವ ಸಿದ್ಧ ವಿದ್ಯಾಧರರಿಂದೆಲ್ಲಾ ಅರ್ಚಿತವಾಗಿತ್ತು. ಲಿಂಗದರ್ಶನ ಮಾಡಿದ ಬಳಿಕ ಮುಂದೇನು ಮಾಡಬೇಕೆಂದು ಚರ್ಚೆ ಬರಲು ಭರದ್ವಾಜರು—

ಕ್ಷೇತ್ರದರ್ಶನಕಾಲೇ ಯೋಽಶುಚಿರ್ಭವತಿ ಮಾನವಃ ।
ಸ ವೈ ನರಕಮಾಪ್ನೋತಿ ಕ್ಷೇತ್ರಪಾಲಾಃ ಹಸಂತಿ ಹಿ ॥

'ಪುಣ್ಯಕ್ಷೇತ್ರದರ್ಶನಕಾಲದಲ್ಲಿ (ಸ್ನಾನಾದಿಗಳನ್ನು ಮಾಡದೆ ಶುಭ್ರವಾದ ಬಟ್ಟೆಬರೆ ಹಾಕಿಕೊಳ್ಳದೆ) ಅಶುಚಿಯಾಗಿರುವವನು ನರಕಭಾಗಿಯಾಗುತ್ತಾನೆ. ಅವನನ್ನು ಕ್ಷೇತ್ರಪಾಲಕರು ಹಸಿಸುತ್ತಾರೆ ಎಂದು ಜ್ಞಾನಿಗಳು ಹೇಳುತ್ತಿರುವುದರಿಂದ ನಾವು ಸ್ನಾನ ಮಾಡಿ ಆಹ್ನಿಕಗಳನ್ನು ಮುಗಿಸಿ ಫಲ ಪುಷ್ಪಾದಿ ಪೂಜಾಸಾಮಗ್ರಿಗಳೊಡನೆ ನಗರ ಪ್ರವೇಶ ಮಾಡೋಣ' ಎಂದು ಸೂಚಿಸಿದರು. ಎಲ್ಲರೂ ಆ ಮಾತನ್ನು ಅನುಮೋದಿಸಿದರು.

ಅಧ್ಯಾಯ 3 ಕ್ಷೇತ್ರಪಾಲಾಗಮನ

[ಸೂಚನೆ– ಇಲ್ಲಿಂದ ಮುಂದೆ ಅನೇಕ ತೀರ್ಥಗಳ ಮತ್ತು ದೇವತಾದಿಗಳ ವರ್ಣನೆಗಳು ಬರುತ್ತವೆ. ಅವರೆ ಕಾಲಗತಿಯಿಂದ ಎಷ್ಟೋ ಮಾರ್ಪಾಟುಗಳಾಗಿ ಹೋಗಿರುವುದರಿಂದ ಅವುಗಳನ್ನೆಲ್ಲಾ ಗುರುತಿಸುವುದು ಅಸಾಧ್ಯವಾಗಿದೆ. ಗುರುತಿಸಬಹುದಾದ ವಿಷಯಗಳನ್ನು ಆಯಾಯಾ ಅಧ್ಯಾಯದ ಮುಖ ಟಿಪ್ಪಣಿಯಲ್ಲಿ ಕೊಟ್ಟಿದೆ. ಈ ಅಧ್ಯಾಯದಲ್ಲಿ ಬರುವ ಭದ್ರಶಿಲಾ ತೀರ್ಥವಾಗಲಿ ನಂದೀಶ್ವರನಾಗಲಿ ಎಲ್ಲಿದ್ದವೋ ಹೇಳುವುದು ಕಷ್ಟವಾಗಿದೆ.—ವಿ. ಶಿ.]

ಭದ್ರಶಿಲಾತೀರ್ಥ—ಅನಂತರ ಆ ಸಪ್ತರ್ಷಿಗಳು ಹಂಪೆಗೆ ಪೂರ್ವಭಾಗದಲ್ಲಿ ಸಮೀಪದಲ್ಲೇ ಇದ್ದ ಸಕಲ ಪಾಪಗಳನ್ನೂ ತೊಳೆಯಬಲ್ಲ ಪವಿತ್ರವಾದ **ಭದ್ರಶಿಲಾ ತೀರ್ಥಕ್ಕೆ** ಬಂದರು. ಅದಕ್ಕೆ ಪ್ರಣಾಮಮಾಡಿ ಅಲ್ಲಿ ಮಿಂದು ಮುಂದೆ ಹೊರಟು ಅಲ್ಲೇ ಪಶ್ಚಿಮಾಭಿಮುಖನಾಗಿ ನಿಂತಿದ್ದ ಶಿವಾರ್ಚನಾಸಕ್ತನಾದ ನಂದೀಶ್ವರನನ್ನು ಕಂಡರು. ಅವನನ್ನು ಸ್ತುತಿಸಿ ನಮಿಸಿ ಪೂಜಿಸಿ ಮುಂದೇನಿದೆಯೋ ನೋಡಬೇಕೆಂಬ ಕುತೂಹಲದಿಂದ ಹೊರಟು ಪೂರ್ವ ದಿಕ್ಕಿನಲ್ಲೇ ಇದ್ದ ದಿವ್ಯ ರೂಪಿಯಾದ ಇನ್ನೊಂದು ದೇವತೆಯನ್ನು ಕಂಡು ಅದು ಯಾವುದೆಂದು ತಿಳಿಯದೆ ಬಹಳ ಖಿನ್ನರಾದರು.

ಕ್ಷೇತ್ರಪಾಲಾಗಮನ— ಅವರ ಖೇದವನ್ನು ಕಂಡು ಭಕ್ತವತ್ಸಲನಾದ ಫಾಲನೇತ್ರನು ಆ ಕ್ಷೇತ್ರದ ಮಹಿಮೆಯನ್ನು ತಿಳಿಸುವುದಕ್ಕಾಗಿ ತತ್ವಜ್ಞನೂ ಜಟಾವಲ್ಕಲಮಂಡಿತನೂ ಭಸ್ಮಚ್ಛನ್ನನೂ ಶಿವಧ್ಯಾನಪರನೂ ಆದ ಒಬ್ಬ ಕ್ಷೇತ್ರಪಾಲನನ್ನು ಆ ಋಷಿಗಳ ಬಳಿಗೆ ಕಳುಹಿಸಿದನು. ಆ ಕ್ಷೇತ್ರಪಾಲನು ವಿಪ್ರೋತ್ತಮರನ್ನು

ಎದಿರುಗೊಳ್ಳಲು ಅವರು ಸಂತೋಷಭರಿತರಾಗಿ ಅವನನ್ನು ಅರ್ಘ್ಯಪಾದ್ಯಾದಿಗಳಿಂದ ಆದರಿಸಿ ಪ್ರಾಂಜಲಿಬದ್ಧರಾಗಿ "ಭಗವನ್ ಕ್ಷೇತ್ರಪಾಲ, ತೀರ್ಥರಾಜ ಎಂದು ಪ್ರಸಿದ್ಧವಾದ ಈ ಹಂಪೆಯಲ್ಲಿರುವ ತೀರ್ಥಗಳ ಕಥೆಯನ್ನೂ ವಿರೂಪಾಕ್ಷನ ಮಹಿಮೆಯನ್ನೂ ಕೇಳಲು ಉತ್ಸುಕರಾಗಿದ್ದೇವೆ. ನೀನಲ್ಲದೆ ಮತ್ತಾರೂ ಈ ವಿಷಯವನ್ನು ನಮಗೆ ತಿಳಿಸಲಾರರು. ಆದ್ದರಿಂದ ಕೃಪೆಮಾಡಿ ಇದೆಲ್ಲವನ್ನೂ ನಮಗೆ ವಿಸ್ತಾರವಾಗಿ ಹೇಳು" ಎಂದು ಪ್ರಾರ್ಥಿಸಿದರು.

ಸಪ್ತರ್ಷಿಗಳ ಈ ಮಾತು ಕೇಳಿ ಕ್ಷೇತ್ರಪಾಲ ಬಗೆಬಗೆ ವಚನಗಳಿಂದ ತನ್ನ ಸ್ವಾಮಿ ವಿರೂಪಾಕ್ಷನನ್ನು ಸ್ತುತಿಸಿ ಆನಂದಾಶ್ರುಪೂರ್ಣಲೋಚನನಾಗಿ ಚಿತ್ರವಾದ ಪಂಪಾಕಥೆ ಹೇಳತೊಡಗಿದನು.

ಅಧ್ಯಾಯ 4 ಪಂಪಾ ಕಥೆ

[ಪಂಪಾ ವಿರೂಪಾಕ್ಷರ ವಿವಾಹ ಪ್ರಕರಣ ಇಲ್ಲಿಂದ ಆರಂಭವಾಗುತ್ತದೆ. ಇದಕ್ಕೆ ಸಂಬಂಧಿಸಿದ ಪಂಪಾ ಜನನ, ತಪಶ್ಚರಣೆ, ವಿವಾಹ, ಪೂರ್ವವೃತ್ತಾಂತ ಈ ವಿಚಾರಗಳನ್ನು ಮುಂದಿನ ಐದು ಅಧ್ಯಾಯ (4-8) ಗಳಲ್ಲಿ ವರ್ಣಿಸಿದೆ. ವಿ. ತೀ.]

ಪಂಪಾಗೆ ವಿವಾಹ ಪ್ರಯತ್ನ— ಹಿಂದೆ[1] ಚತುರ್ಮುಖಬ್ರಹ್ಮನಿಗೆ ಪರಮ ಸುಂದರಿಯಾದ **ಪಂಪಾ** ಎಂಬ (ಮಾನಸ) ಕನ್ಯೆ ಜನಿಸಿದಳು. ಅವಳು ಪ್ರಾಪ್ತವಯಸ್ಕಳಾದುದನ್ನು ಕಂಡು ಬ್ರಹ್ಮ 'ಇಂಥಾ ಅನುಪಮಸುಂದರಿಯನ್ನು ಯಾರಿಗೆ ಕೊಡಲಿ? ನನ್ನ ಸೃಷ್ಟಿಯಲ್ಲಿ ಇವಳಿಗೆ ಯೋಗ್ಯನಾದ ವರ ಎಲ್ಲಿರುವನು ?' ಎಂದು ಯೋಚಿಸುತ್ತಿದ್ದನು.

ಬ್ರಹ್ಮನ ಈ ಆಲೋಚನೆಯ ಸುಳಿವನ್ನು ತಿಳಿದು, ಒಂದು ದಿನ ಇಂದ್ರಾದಿಗಳು ಬ್ರಹ್ಮನ ಬಳಿಗೆ ಬಂದು ತಾವು ಪಂಪಾನನ್ನು ವರಿಸುವ ಉದ್ದೇಶದಿಂದ ಬಂದಿರುವುದನ್ನು ತಿಳಿಸಿ "ದೇವ ದೇವ, ಇವಳನ್ನು ಯಾರಿಗೆ ಕೊಡಬೇಕೆಂದಿರುವಿ ?" ಎಂದು ಕೇಳಿದರು. ಆಗ ಬ್ರಹ್ಮನು ಪಂಪಾನನ್ನು ತೊಡೆಯ ಮೇಲೆ ಕೂಡಿಸಿಕೊಂಡು "ಹೇ ಸುಶೀಲೆ, ನಿನ್ನನ್ನು ಬಯಸಿ ಈ ದೇವತೆಗಳೂ ರಾಜಾಧಿರಾಜರೂ ಬಂದಿದಾರೆ. ನೀನು ಇವರಲ್ಲಿ ಯಾರನ್ನು ವರಿಸುವಿ ?" ಎಂದು ಕೇಳಿದನು.

ಆಗ ಪಂಪಾ "ಜನ್ಮ ಮೃತ್ಯು ಜರಾಹೀನನೂ ಷಡ್ವಿಕಾರರಹಿತನೂ ಆದ ಸರ್ವಲೋಕಾಧಿಪತಿಗೇ ನನ್ನನ್ನು ವಿವಾಹಮಾಡಿಕೊಡು" ಎಂದಳು. ಆ ಮಾತನ್ನು ಕೇಳಿ ಸಂತೋಷಪಟ್ಟು ಬ್ರಹ್ಮನು 'ಮಧುರೆ ! ಎಂಥಾ ಉಚಿತವಾದ ಮಾತಾಡಿದಿ ! ಅದಕ್ಕೇ ನಿನಗೆ ಪಂಪಾ ಎಂದು ಹೆಸರಿಟ್ಟೆ. ಪಂ ಅಮೃತನಾಮ. ಎರಡನೆಯ ಪ ಕಾರ ಸ್ವರ್ಣ (ಬಂಗಾರ) ವಾಚಕ; ಮತ್ತು ಆ ದೀನವಾಚಕ, 'ಪಾತೀತಿ ಪಃ' ಎಂಬ ವ್ಯುತ್ಪತ್ತಿ

1. ಚಾಕ್ಷುಷಮನ್ವಂತರದಲ್ಲಿ (ಅಧ್ಯಾಯ 8-1 ನೋಡಿ)

ಯಿಂದ ಪ ಎಂದರೆ ಪಾಲಕ; ಹೀಗೆ ಪಾ (ಪ+ಅ) ಎಂದರೆ ದೀನಪಾಲಕ ಎಂದರ್ಥ. ನೀನು ಸಂಪತ್ತನ್ನೂ (ಸ್ವರ್ಣ), ಮುಕ್ತಿಯನ್ನೂ (ಅಮೃತ) ಕೊಡುವವಳಾದ್ದರಿಂದಲೂ, ದೀನಪಾಲಕಳಾದ್ದರಿಂದಲೂ ನಿನಗೆ ಪಂಪಾ ಎಂಬ ಹೆಸರು ಅನ್ವರ್ಥವಾಗಿದೆ. ಇಂಥಾ ನಿನಗೆ ಅನುರೂಪನಾದ ವರ ಶರ್ವನಲ್ಲದೆ ಬೇರೆ ಯಾರೂ ಇಲ್ಲ. ಅವನನ್ನು ಆರಾಧಿಸಿ ಒಲಿಸಿಕೋ' ಎಂದು ಹೇಳಿದನು.

ಪಂಪಾ ತಪಸ್ಸು —ಆ ಮಾತನ್ನು ಕೇಳಿ ಪಂಪಾ 'ಆ ಶಂಕರ ಎಲ್ಲಿರುವನು ? ಅವನನ್ನು ಒಲಿಸಿಕೊಳ್ಳುವ ಬಗೆ ಹೇಗೆ?' ಎಂದು ಕೇಳಿದಳು. ಆಗ ಬ್ರಹ್ಮನು ಯೋಚಿಸಿ 'ಭೂತಲದಲ್ಲಿರುವ ಹೇಮಕೂಟಕ್ಕೆ ಉತ್ತರದಲ್ಲಿ ಅರ್ಧಕ್ರೋಶ ದೂರದಲ್ಲಿ ವಿಪ್ರಕೂಟವೆಂಬ ಬೆಟ್ಟವಿದೆ. ಅದರ ತೀರದಲ್ಲಿ ಕಮಲ–ಕಲ್ಹಾರಾದಿಗಳಿಂದ ವಿರಾಜಿತವಾದ ಸರಸ್ಸಿದೆ. ಆ ಸರಸ್ಸಿನಲ್ಲಿ ಸ್ನಾನ ಮಾಡಿ ವಿಪ್ರಕೂಟದ ಗುಹೆಯಲ್ಲಿ ಶಂಭುವನ್ನು ಕುರಿತು ತಪಸ್ಸು ಮಾಡಿದರೆ ಅವನು ಒಲಿಯುವನು' ಎಂದು ತಿಳಿಸಿದನು.

ಅದರಂತೆ ಪಂಪಾ ತಪಸ್ಸಿಗೆ ಹೊರಡಲು ಇಂದ್ರಾದಿ ದೇವತೆಗಳು ಹಿಂತಿರುಗಿದರು. ಪಂಪಾ ವಿಪ್ರಕೂಟಕ್ಕೆ ಹೋಗಿ ಸರಸ್ಸಿನಲ್ಲಿ ಜಳಕ ಮಾಡಿ ತಪಸ್ಸಿಗೆ ಆರಂಭಿಸಿದಳು. ಕೆಲವು ಕಾಲ ಫಲಾಹಾರ, ಕೆಲವು ಕಾಲ ಪರ್ಣಾಹಾರ ಮಾಡಿ ಕಡೆಗೆ ರೇಚಕ ಪೂರಕ ಕುಂಭಕಗಳಿಂದ ವಾಯು ನಿಗ್ರಹ ಮಾಡಿ ಕುಳಿತಿರಲು ನೂರು ವರ್ಷ ಕಳೆದು ಹೋದವು. ಅವಳ ಮೈಮೇಲೆಲ್ಲಾ ಹುತ್ತ ಬೆಳೆಯಿತು. ಅವಳ ತಪೋಜ್ವಾಲೆ ಲೋಕವನ್ನೆಲ್ಲಾ ಆವರಿಸಿತು.

ದೇವತೆಗಳು ಬ್ರಹ್ಮನನ್ನು ಪ್ರಾರ್ಥಿಸಿಕೊಳ್ಳುವುದು— ಆ ತಪೋಜ್ವಾಲೆಯಿಂದ ದಗ್ಧರಾದ ಇಂದ್ರಾದಿ ದೇವತೆಗಳು ಬೃಹಸ್ಪತಿಯನ್ನು ಮೊರೆಹೊಕ್ಕರು. ಬೃಹಸ್ಪತಿ ಅವರನ್ನು ಕರೆದುಕೊಂಡು ಬ್ರಹ್ಮನ ಬಳಿಗೆ ಹೋಗಿ ತಪೋಜ್ವಾಲೆಯಿಂದ ಲೋಕಗಳನ್ನು ರಕ್ಷಿಸುವಂತೆ ಪ್ರಾರ್ಥಿಸಿಕೊಂಡರು. ಬ್ರಹ್ಮ 'ನನ್ನ ಮಗಳು ರುದ್ರನನ್ನು ಕುರಿತು ತಪಸ್ಸು ಮಾಡುತ್ತಿದ್ದಾಳೆ. ಅದರಿಂದಲೇ ಹೀಗಾಗಿದೆ. ನಾವೆಲ್ಲರೂ ಕೈಲಾಸಕ್ಕೆ ಹೋಗಿ ಫಾಲಾಕ್ಷನನ್ನು ಪ್ರಾರ್ಥಿಸೋಣ. ಅವನ ಪ್ರಸಾದದಿಂದ ಎಲ್ಲ ವ್ಯಸನವೂ ದೂರವಾಗುತ್ತದೆ' ಎಂದು ಹೇಳಿ ಅವರೆಲ್ಲರೊಡನೆ ಕೈಲಾಸಕ್ಕೆ ಬಂದನು.

ಅಧ್ಯಾಯ 5 ಪಂಪಾಗೆ ಈಶ್ವರನ ವರ

ಕೈಲಾಸ ದರ್ಶನ— ಆ ಕೈಲಾಸ ಮಹಡಿ ಮನೆಗಳಿಂದಲೂ ಪ್ರಾಕಾರ–ಗೋಪುರಗಳಿಂದಲೂ ದಿವ್ಯೋದ್ಯಾನಗಳಿಂದಲೂ ವಿರಾಜಿಸುತ್ತಿತ್ತು. ಕಮಲೋತ್ಪಲಾದಿ ಪುಷ್ಪಗಳುಳ್ಳ ಅನೇಕ ಸರಸ್ಸುಗಳು ಕಂಗೊಳಿಸುತ್ತಿದ್ದವು. ಸುತ್ತುಮುತ್ತಲೂ ಪಕ್ಷಿಗಳು ಕಲಕಲಧ್ವನಿ ಮಾಡುತ್ತಿದ್ದವು. ಭ್ರಮರಗಳು ಗಂಭೀರಸ್ವನ ಮಾಡುತ್ತಾ ಹಾರಾ

ಪುತ್ತಿದ್ದುವು. ಎಲ್ಲೆಲ್ಲೂ ಗಂಧರ್ವರು ಅಪ್ಸರೆಯರು ಮುನಿಗಳು ಸಂಭ್ರಮದಿಂದ ಅಡ್ಡಾಡುತ್ತಿದ್ದರು. ಇದನ್ನೆಲ್ಲಾ ನೋಡುತ್ತಾ ಬ್ರಹ್ಮಾದಿ ದೇವತೆಗಳು ಮುಂದೆ ಸಾಗಿ ದಿವ್ಯ ಸಿಂಹಾಸನ ಮಂಡಿತನಾದ, ಪಾರ್ಷದರಿಂದಲೂ ಪ್ರಮಥಗಣಗಳಿಂದಲೂ ಸೇವಿತನಾದ, ಪಾರ್ವತೀ ಸ್ಕಂದ ಗಣಾಧಿಪರಿಂದ ಪರಿವೃತನಾದ ಶ್ರೀಕಂಠನನ್ನು ದರ್ಶನ ಮಾಡಿದರು.

ಈಶ್ವರನ ಅಭಯದಾನ:—ಅನಂತರ ಎಲ್ಲರೂ ಭಕ್ತಿಯಿಂದ ಸ್ತುತಿಸಲು ಧೂರ್ಜಟಿ ಪ್ರಸನ್ನನಾಗಿ 'ದೇವತೆಗಳೇ ! ಹೆದರಬೇಡಿ. ನಾನು ಭಕ್ತಾಭೀಷ್ಟವನ್ನು ಸಲ್ಲಿಸುವುದಕ್ಕಾಗಿಯೇ ಶರೀರ ಧಾರಣಮಾಡಿದ್ದೇನೆ. ನನ್ನ ಭಕ್ತರಿಗೆ ದುಃಖವಾದರೆ ನನಗೂ ದುಃಖ. ನಿಮ್ಮ ದುಃಖಕ್ಕೆ ಕಾರಣ ನನಗೆ ಗೊತ್ತು. ಶೀಘ್ರದಲ್ಲೇ ನಾನು ಹೇಮಕೂಟದಲ್ಲಿ ವಿರೂಪಾಕ್ಷನಾಗಿ ಅವತರಿಸಿ ಬ್ರಹ್ಮನ ಮಗಳಾದ ಪಂಪಾ ಇಷ್ಟಾರ್ಥ ಪೂರೈಸಿ ನಿಮ್ಮ ಸಂಕಟ ದೂರ ಮಾಡುತ್ತೇನೆ. ನೀವೂ ನಿಮ್ಮ ನಿಮ್ಮ ಅಂಶಕಲೆಗಳನ್ನು ಸೃಷ್ಟಿಸಿರಿ' ಎಂದು ಅಭಯವಿತ್ತನು.

ಪಂಪಾಗೆ ವರಪ್ರದಾನ— ಬ್ರಹ್ಮಾದಿಗಳು ಆ ಮಾತನ್ನು ಮನ್ನಿಸಿ ತಮ್ಮ ತಮ್ಮ ನಿವಾಸಗಳಿಗೆ ಹೋಗಲು ಇತ್ತಲಾಗಿ ಚಂದ್ರಮೌಳಿಯು ಪಂಪಾಗೆ ಪ್ರತ್ಯಕ್ಷನಾದ. ಅವನನ್ನು ಪಂಪಾ ಭಕ್ತಿಯಿಂದ ನಾನಾ ಪರಿಯಾಗಿ ಸ್ತುತಿಸಿ 'ಹೇ ಜಗದೀಶ! ಕೈಲಾಸ ನಿವಾಸ! ನೀನೇ ನನಗೆ ಪತಿಯಾಗು' ಎಂದು ವರ ಬೇಡಿದಳು.

ಅದಕ್ಕೆ ಗಿರೀಶ ಸಮ್ಮತಿಸಿ 'ವಿರೂಪಾಕ್ಷನೆಂಬ ಹೆಸರಿನಿಂದ ಹೇಮಕೂಟಾಧಿಪತಿಯಾಗಿ ಅವತರಿಸಿ ನಿನ್ನ ಇಷ್ಟಾರ್ಥ ನೆರವೇರಿಸುವೆನು. ಅದುವರೆಗೂ ತಪಸ್ಸು ಮಾಡುತ್ತಾ ಕಾಲ ನಿರೀಕ್ಷಣೆ ಮಾಡುತ್ತಿರು' ಎಂದು ವರ ನೀಡಿ ರಜತಗಿರಿಗೆ ಹೊರಟು ಹೋದನು.

ಅಧ್ಯಾಯ 6 ಖೇಟಕನಿಗೆ ಶಾಪ

ಗುಹ್ಯಕನ ವಂಚನೆ— ಶಿವನ ಅಪ್ಪಣೆಯಂತೆ ಪಂಪಾ ಅಲ್ಲೇ ತಪಸ್ಸು ಮಾಡುತ್ತಾ ವಿರೂಪಾಕ್ಷನನ್ನೇ ಎದುರು ನೋಡುತ್ತಿದ್ದಳು. ಹೀಗಿರಲು ಖೇಟಕನೆಂಬ ಒಬ್ಬ ಗುಹ್ಯಕ ಸರ್ವಾಲಂಕಾರ ಭೂಷಿತಳೂ ಸರ್ವಾವಯವಲಾವಣ್ಯೋಪೇತಳೂ ಆದ ಆ ಶುಭಾಂಗಿಯ ರೂಪಯೌವನಾದಿಗಳಿಗೆ ಮೋಹಿಸಿ ಮನ್ಮಥಾವಿಷ್ಟನಾಗಿ ಪಂಪಾಳನ್ನು ವಂಚಿಸಿ ಸ್ವಾಧೀನ ಮಾಡಿಕೊಳ್ಳಬೇಕೆಂಬ ದುರುದ್ದೇಶದಿಂದ ಶೂಲ ಕಪಾಲ ಜಟೆ ಗಜಚರ್ಮಗಳನ್ನು ಧರಿಸಿ ಶಿವನಂತೆ ವೇಷ ಹಾಕಿಕೊಂಡು ಪಿಪ್ರಕೂಟವನ್ನು ಸೇರಿ ನೇರವಾಗಿ ಪಂಪಾ ಬಳಿಗೆ ಬಂದನು.

ಪಂಪಾ ರೋಷಾವೇಶ — ಅವನನ್ನು ಕಾಣುತ್ತಲೇ ಪಂಪಾ ಗುಹೆಯೊಳಗೆ ಹೋದಳು. ಆ ನೀಚನು ಅವಳನ್ನು ಹಿಂಬಾಲಿಸುತ್ತಾ 'ವರಾರೋಹೇ! ನನ್ನನ್ನು ಕಂಡು ಹೀಗೇಕೆ ನಾಚಿಕೊಳ್ಳುವಿ? ನಿನ್ನ ಇಷ್ಟಾರ್ಥಪೂರ್ತಿಗಾಗಿ ಇಲ್ಲಿಗೇ ಬಂದಿರುವ ನನ್ನನ್ನು ವರಿಸಿ ಸುಖಿಯಾಗು' ಎಂದು ಬೊಗಳಿದನು. ಪಂಪಾಗೆ ಹೇಗೋ ಸಂದೇಹ ವುಂಟಾಗಿ ಆ ನಿರ್ಲಜ್ಜನು ಶಂಕರನಲ್ಲವೆಂದು ಮನಸಾ ನಿರ್ಧರಿಸಿಕೊಂಡು ರೋಷಾವೇಶದಿಂದ ಕಣ್ಣು ಕೆಂಪಗೆ ಮಾಡಿಕೊಂಡು 'ನೀಚ, ದುರಾತ್ಮ! ಶಿವವೇಷ ಧಾರಿಯಾದ ನೀನು ಯಾರು? ನಿಜ ಹೇಳು. ಇಲ್ಲದಿದ್ದರೆ ನಿನ್ನನ್ನು ಸುಟ್ಟು ಭಸ್ಮ ಮಾಡಿ ಬಿಡುತ್ತೇನೆ.* ಆರ್ತನಾಗಿ ಯಾವನಾದರೂ ಬೆಂಕಿ ಹುಲಿ ಸರ್ಪ ವಿಷ ಸ್ತ್ರೀ ಈ ವಸ್ತುಗಳನ್ನು ಮಾಡುತ್ತಾನೇನೋ, ಮೂರ್ಖ' ಎಂದು ಝಬರಿಸಿದಳು.

ಗುಹ್ಯಕ ಶರಣಾದುದು — ಅವಳ ಆ ರೋಷಾವೇಶದ ಮಾತನ್ನು ಕೇಳಿ ಗುಹ್ಯಕ ಗಡಗಡ ನಡುಗುತ್ತ ಶಿವವೇಷ ಬಿಟ್ಟು ಸಾಷ್ಟಾಂಗನಮಸ್ಕಾರ ಮಾಡಿ ಗದ್ಗದ ಕಂಠದಿಂದ ಪಾಹಿ ಪಾಹಿ ಎನ್ನುತ್ತಾ

ಮಾತರ್ಮಯೋಽಸ್ತು ಕೃತವಾಂಸ್ತ್ವಯಿ1 ದುಸ್ತರಾಗಃ2
ಕ್ಷಂತವ್ಯಮದ್ಯ3 ಕೃಪಯಾ ಶಿವಯಾ4 ತ್ವಯಾ ತತ್ !

ತಾಯಿ! ನಿನ್ನಲ್ಲಿ ನಾನು ದುಸ್ತರವಾದ ಪಾಪ (ಅಪರಾಧ) ಮಾಡಿದ್ದೇನೆ. ಈಗ ಕೃಪೆಯಿಂದ ಅದನ್ನು ಮಂಗಳರೂಪಿಯಾದ ನೀನು ಕ್ಷಮಿಸು. ನಾನು ಪೇಟಕನೆಂಬ ಗಂಧರ್ವ (ಗುಹ್ಯಕ) ನಿನ್ನ ರೂಪಕ್ಕೆ ಮೋಹಿಸಿ ಈ ದುಷ್ಕೃತ್ಯ ಮಾಡಿದೆ. ಕ್ಷಮಿಸು ಎಂದು ಬೇಡಿಕೊಂಡನು.

ಗಂಧರ್ವನಿಗೆ ಶಾಪ — ಅವನ ಮಾತನ್ನು ಕೇಳಿ ಕೋಪದಿಂದ ಕೆಂಪಾದ ತುಟಿಗಳು ಅದುರುತ್ತಿರಲು 'ದುರಾತ್ಮ! ಪರಸ್ತ್ರೀಮೋಹಕ್ಕೆ ಬಿದ್ದು ಮಾಡಿಕೊಂಡ ಅಪರಾಧದಿಂದ ನೀನು ಅಸುರಯೋನಿಯಲ್ಲಿ ಹುಟ್ಟಿ ದೇವಬ್ರಾಹ್ಮಣ ಹಿಂಸಕನಾಗಿ ಹಸಿವುನೀರಡಿಕೆಗಳಿಂದ ಬಳಲಿ ನರಳುತ್ತಾ ಪಿಶಾಚಪರಿವಾರ ಸಮೇತನಾಗಿ ಕಾಡು ಕಾಡು ಅಲೆದಾಡು' ಎಂದು ಘೋರವಾದ ಶಾಪ ಕೊಟ್ಟಳು. ಅದನ್ನು ಕೇಳಿ ದೊಡನೆಯೇ ಗುಹ್ಯಕ ಮೂರ್ಛಿತನಾಗಿ ಬಿದ್ದುಬಿಟ್ಟ. ಸ್ವಲ್ಪ ಹೊತ್ತಿನ ಮೇಲೆ ಪುನಃ ಚೇತರಿಸಿಕೊಂಡೆದ್ದು ಪಂಪಾನ್ನು ವಿಶಾಪಕೊಡುವುದಕ್ಕಾಗಿ ಅಂಗಲಾಚಿ ಬೇಡಿ ಕೊಂಡನು. ಆಗ ಪಂಪಾ 'ಹತ್ತುಸಾವಿರ ವರ್ಷ ಅಪಸ್ಮಾರ ಎಂಬ ಹೆಸರಿನಿಂದ

---

*ಕಃ ಸ್ಪೃಶೇದಗ್ನಿಮಾರ್ತಃ ಸನ್ ವ್ಯಾಘ್ರಂ ಸರ್ಪಂ ವಿಷಂ ಸ್ತ್ರಿಯಮ್ ? ||

1ತ್ವಯಿ–ನಿನ್ನಲ್ಲಿ 2ಆಗಃ–ಪಾಪವನ್ನು 3ಅದ್ಯ–ಈಗ 4ಶಿವಾ–ಮಂಗಳೆ

ಅಸುರೀಭಾವದಿಂದ ಇದ್ದು ದಕ್ಷಿಣಾಮೂರ್ತಿಯಿಂದ ಹತನಾಗಿ* ಎರಡನೇ ಜನ್ಮದಲ್ಲಿ ಮನ್ಮಥನೆಂಬ ವಿಷ್ಣು ಪುತ್ರನಾಗಿ ಹುಟ್ಟಿ ಮುಕ್ಕಣ್ಣನ ಮೂರನೇ ಕಣ್ಣಿನಿಂದ ದಗ್ಧನಾದನು. ಅನಂತರ ಮೂರನೇ ಜನ್ಮದಲ್ಲಿ ಶುಕ್ಲ (ಅಥವಾ ಜೊಕ್ಕ) ಎಂದು ಹುಟ್ಟಿ ಪುನಃ ಹರನಿಂದಲೇ ದಗ್ಧನಾಗಿ ಕೊನೆಗೆ ಶಿವ ಪದವಿಯನ್ನೈದಿ ಸುಖಿಯಾಗುವಿ' ಎಂದು ಉಪದೇಶಕೊಡಲು ಅದರಂತೆಯೇ ಆ ವೇಟಕನು ರಾಕ್ಷಸ ಯೋನಿಯನ್ನೈದಿದನು. ಇಂತು 6ನೇ ಅಧ್ಯಾಯಂ.

ಅಧ್ಯಾಯ 7 ಪಂಪಾ-ವಿರೂಪಾಕ್ಷವಿವಾಹ

[ಪಂಪಾ ತಪಸ್ಸುಮಾಡಿದ ಸರಸ್ಸಿಗೇ ಪಂಪಾಸರೋವರವೆಂದು ಹೆಸರು. ಅದರ ಪಕ್ಕದಲ್ಲೇ ಮಾನಸಸರೋವರವೂ ಇದೆ. ಇವೆರಡರ ಹಿನ್ನೆಲೆಯಲ್ಲಿರುವುದೇ ವಿಪ್ರಕೂಟ. ಇವೆಲ್ಲವೂ ಆನೆಗೊಂದಿಗೆ 1½ ಮೈಲಿದೂರದಲ್ಲಿ ವಾಯುವ್ಯದ ಕಡೆ ಇರುವುವು. ಅಲ್ಲಿ ರಾಮಾಯಣದ ಶಬರೀಗುಹೆಯೂ ಇದೆ.

ಪಂಪಾ-ವಿರೂಪಾಕ್ಷರ ವಿವಾಹ ನಿಶ್ಚಿತಾರ್ಥವು ಮಾರ್ಗಶೀರ್ಷ ಬಹುಳ ಬಿದಿಗೆ ದಿನ ನಡೆಯಿತು. ಅದರ ಜ್ಞಾಪಕಾರ್ಥವಾಗಿ ಈಗಲೂ ಪ್ರತಿ ವರ್ಷ ಆ ದಿನ ಹಂಪೆಯಲ್ಲಿ 'ಫಲಪೂಜೆ' ಎಂಬ ಉತ್ಸವ ಬಹಳ ಸಂಭ್ರಮದಿಂದ ನಡೆಯುತ್ತದೆ. ಸಾವಿರಾರು ಜನರು ನೆರೆಯುತ್ತಾರೆ.

ಹಾಗೆಯೇ ಅವರ ವಿವಾಹವು ಚೈತ್ರ ಶುಕ್ಲ ತ್ರಯೋದಶೀ ನಡೆಯಿತು. ಆದ್ದರಿಂದ ಈಗಲೂ ಪ್ರತಿ ವರ್ಷ ಜಾತ್ರೆ ಸಮಯದಲ್ಲಿ ಚೈತ್ರ ಶುದ್ಧ ತ್ರಯೋದಶೀ ದಿನವೇ ಕಲ್ಯಾಣೋತ್ಸವ ವೈಭವದಿಂದ ಜರುಗುತ್ತದೆ. ಶಿವ ಭಕ್ತರೆಲ್ಲರೂ ಈ ಉತ್ಸವದಲ್ಲಿ ಭಾಗವಹಿಸತಕ್ಕದ್ದು—ವಿ. ಶೀ.]

ಪಂಪಾ ತಪಸ್ಸಮಾಪ್ತಿ — ಹೀಗೆ ತಪಸ್ಸಿಗೆ ವಿಘ್ನವುಂಟಾಗಬಹುದೆಂದು ಯೋಚಿಸಿ ಪಂಪಾ ಆ ಸರಸ್ಸನ್ನು (ಪಂಪಾಸರೋವರವನ್ನು) ಬಿಟ್ಟು ಅದಕ್ಕೆ ಉತ್ತರ ಭಾಗದಲ್ಲಿರುವ ಮಾನಸಸರೋವರದ ಹಿಂಭಾಗದಲ್ಲಿದ್ದ ಒಂದು ಏಕಾಂತವಾದ ಗುಹೆಯನ್ನು ಸೇರಿ ಕಠೋರ ತಪಸ್ಸುಮಾಡಲಾರಂಭಿಸಿದಳು. ಸಮಾಧಿಸ್ಥಿತಿಯಲ್ಲಿದ್ದಾಗ ಸ್ಮರಹರನು ಅವಳ ಮಾನಸರಂಗದಲ್ಲಿ ಒಡಮೂಡಿದನು. ಅವನನ್ನು ಕಂಡು ಪಂಪಾ ಭಕ್ತಿಪರವಶಳಾಗಿ ಸ್ತುತಿಸಿದಳು.

ವಿರೂಪಾಕ್ಷ ಪ್ರಾದುರ್ಭವಿಸಿದ್ದು — ಶಿವನು ತಾನು ಪಂಪಾಗೆ ಕೊಟ್ಟ ವಚನ ನೆನೆಸಿಕೊಂಡು ಸುಮುಹೂರ್ತದಲ್ಲಿ ಹೇಮಕೂಟದ ಮೇಲೆ ಆವಿರ್ಭವಿಸಿದನು. ಆಗ ದೇವದುಂದುಭಿಗಳು ಮೊಳಗಿದವು. ಆಕಾಶದಿಂದ ಪುಷ್ಪವೃಷ್ಟಿ ಸುರಿಯಿತು. ಬ್ರಹ್ಮಾದಿಗಳೆಲ್ಲರೂ ವಿಪ್ರಕೂಟಕ್ಕೆ ಬಂದು ಪಂಪಾಗೆ ವಿರೂಪಾಕ್ಷ ಆವಿರ್ಭವಿಸಿದ ಸಮಾಚಾರ ತಿಳಿಸಿ 'ವಿವಾಹದ ಸುಮುಹೂರ್ತಪ್ರಾಪ್ತವಾಗಿದೆ. ಬೇಗ ಬಾ' ಎಂದು

---

*ಅಪಸ್ಮಾರನ ಕಥೆ 83-86 ಅಧ್ಯಾಯಗಳಲ್ಲಿ ಉಕ್ತವಾಗಿದೆ.

ಕರೆದರು. ಒಡನೆಯೇ ಪಂಪಾ ಅನುಪಮಸೌಂದರ್ಯಳಾಗಿ ಆ ದೇವಾನುದೇವತೆಗಳೊಡನೆ ಹೇಮಕೂಟಕ್ಕೆ ಬಂದು ವಿರೂಪಾಕ್ಷನ ಬಳಿ ಸಾರ್ದು ಲಜ್ಜೆಯಿಂದ ನಮ್ರಮುಖಿಯಾಗಿ ಅವನ ಎದುರಿಗೆ ನಿಂತುಕೊಂಡಳು.

ಪಂಪಾ ವಿರೂಪಾಕ್ಷರ ಪಾಣಿಗ್ರಹಣ ಘಟ್ಟ

ವಿವಾಹಕ್ಕೆ ಅನುಕೂಲವಾದ ಸುಮುಹೂರ್ತಕಾಲವು ಬಂದೊದಗಲು ಬ್ರಹ್ಮಾದಿ ದೇವತೆಗಳೂ ಮುನಿಗಳೂ ಮುನಿಪತ್ನಿಯರೂ ಸೇರಿ ವೇದ ಘೋಷದೊಡನೆ ಪಂಪಾ ವಿರೂಪಾಕ್ಷ ಇಬ್ಬರಿಗೂ ಲಾಜಾಕುಸುಮಾಕ್ಷತೆಗಳನ್ನು ಹಾಕಿ ಹರಸಿದರು. ಬ್ರಹ್ಮ ಸರಸ್ವತಿಯರು ನಾರಾಯಣನ ನಪ್ತ್ರಿ (ಪ್ರಪೌತ್ರಿ)ಯೂ ವಿಷ್ಣುವಿನ ಪೌತ್ರಿಯೂ (ಮೊಮ್ಮಗಳೂ) ಬ್ರಹ್ಮನ ಮಗಳೂ ಆದ ಸತ್ಯಗೋತ್ರೋದ್ಭವೆ ಪಂಪಾಳನ್ನು ಸದಾಶಿವನ ನಪ್ತೃವೂ (ಮರಿಮೊಮ್ಮಗನೂ) ರುದ್ರನ ಪೌತ್ರನೂ ಮಹೇಶ್ವರನ ಪುತ್ರನೂ ಆದ ಸದ್ಯೋಜಾತ ಗೋತ್ರೋ[1]ತ್ಪನ್ನ ಹೇಮಕೂಟಾಧಿವಾಸಿ ವಿರೂಪಾಕ್ಷನಿಗೆ ಕೊಟ್ಟು ಪಾಣಿಗ್ರಹಣ ಮಾಡಿಸುವೆವು ಎಂದು ವಿಧಿಪೂರ್ವಕವಾಗಿ ಮೂರಾವರ್ತಿ ಗೋತ್ರಪ್ರವರೋಚ್ಚಾರ ಮಾಡಿ ಧಾರೆಯೆರೆದು ಕೊಟ್ಟರು. ವಿರೂಪಾಕ್ಷಕನ್ಯೆಯ ಕಂಠದಲ್ಲಿ ಮಂಗಳಸೂತ್ರ ಕಟ್ಟುತ್ತಿದ್ದಾಗ ಗೀತವಾದ್ಯಗಳು ಭೋರ್ಗರೆದವು. ಗಂಧರ್ವರು ಗಾನಮಾಡಿದರು. ಅಪ್ಸರೆಯರು ನರ್ತನಮಾಡಿದರು. ವಿವಾಹ ಮಹೋತ್ಸವ ಸಂಭ್ರಮವಾಗಿ ಜರುಗಿದ ನಂತರ ಎಲ್ಲರಿಗೂ ಭೋಜನಾದ್ಯುಪಚಾರಗಳು ವೈಭವದಿಂದ ನಡೆದುವು.

ವಿವಾಹದ ಸಂಭ್ರಮಗಳೆಲ್ಲ ಮುಗಿದ ಬಳಿಕ ಆ ಉತ್ಸವಕ್ಕೆ ಬಂದಿದ್ದವರೆಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ವಿರೂಪಾಕ್ಷ ಪಂಪಾ ಸಹಿತನಾಗಿ ಅಲ್ಲೇ ನೆಲಸಿದನು.

ಪಂಪಾಕ್ಷೇತ್ರ ಹೆಸರು ಮತ್ತು ಮಹಿಮೆ — ಒಂದು ದಿನ ಪಂಪಾ ತನ್ನ ಪತಿಯನ್ನು 'ದೇವ, ನಿನ್ನ ಪ್ರಾಪ್ತಿಗಾಗಿ ನಾನು ಈ ಕ್ಷೇತ್ರದಲ್ಲಿ ಬಹುಕಾಲ ತಪಸ್ಸು ಮಾಡಿದೆನಷ್ಟೆ ಅದರ ನೆನಪಿಗಾಗಿ ಈ ಕ್ಷೇತ್ರಕ್ಕೆ ನನ್ನ ಹೆಸರೇ ಬರಲಿ' ಎಂದು ಪ್ರಾರ್ಥಿಸಿಕೊಂಡದ್ದಕ್ಕಾಗಿ ರುದ್ರನ ಅಪ್ಪಣೆಯಿಂದ ಇದಕ್ಕೆ ಪಂಪಾಕ್ಷೇತ್ರವೆಂದೇ (ತದ್ಭವರೂಪ ಹಂಪೆ ಅಥವಾ ಹಂಪಿ) ಹೆಸರಾಯಿತು. ಅವಳು ತಪಸ್ಸು ಮಾಡಿದ ಸರೋವರಕ್ಕೆ ಪಂಪಾಸರೋವರವೆಂದು ಹೆಸರು ಬಂತು.

ಈ ಕ್ಷೇತ್ರದಲ್ಲಿ ಸಕಲ ದೇವತೆಗಳೂ ಸದಾ ವಾಸವಾಗಿರುತ್ತಾರೆ. ಇಲ್ಲಿ ಯಕ್ಷರೂ ನಾಗರೂ ವೃಕ್ಷರೂಪದಿಂದಿದ್ದಾರೆ. ಕಿನ್ನರರೇ ಕೋಕಿಲಾದಿಗಳು. ಮೃಗಸಮೂಹಗಳೇ ಗಂಧರ್ವರು. ಬ್ರಹ್ಮಾದಿಗಳು ತೀರ್ಥರೂಪದಿಂದಿದ್ದಾರೆ. ಸಿದ್ಧರು ಪಾಷಾಣ (ಕಲ್ಲಿನ)

1ಕೆಲವು ಕಡೆ 'ಆನಂದಗೋತ್ರೋತ್ಪನ್ನ' ಎಂದೂ ಪಾಠವಿದೆ.

ರೂಪದಿಂದದ್ವಾರಿ ಕಾಮಧೇನ್ವಾದಿಗಳೇ ದ್ರುಮ (ದೊಡ್ಡ ದೊಡ್ಡ ಮರ)ಗಳು. ಋಷಿಗಳೇ ಕಪಿಗಳು. ಪ್ರಮಥಗಣಗಳೇ ಹುಲ್ಲು ಪೊದೆ ಬಳ್ಳಿ ಜಲಚರಗಳು.* ಹೀಗೆ ದಕ್ಷಿಣಕಾಶೀ ಎನಿಸಿದ ಈ ಕ್ಷೇತ್ರ ಸರ್ವಪಾಪವಿನಾಶಕ. ಇದರಲ್ಲಿ ಒಂದು ದಿನ ವಾಸಮಾಡಿದರೂ ಸಕಲಪಾಪಗಳು ನಾಶವಾಗಿ ಶಂಭುವನ್ನು ಸೇರಲು ದಾರಿಯಾಗುತ್ತದೆ. ಇಂತು 7ನೇ ಅಧ್ಯಾಯ.

ಅಧ್ಯಾಯ 8 (i) ಪಂಪಾ ಪೂರ್ವವೃತ್ತಾಂತ

ವಿವಾಹಕಥೆ ಕೇಳಿದ ಸಪ್ತರ್ಷಿಗಳು ಆಕೆಯ ಪೂರ್ವವೃತ್ತಾಂತವನ್ನು ತಿಳಿಯಲಿಚ್ಛಿಸಿದರು. ಅದನ್ನು ಕ್ಷೇತ್ರಪಾಲ ಹೀಗೆ ವಿವರಿಸಿದನು—

ಪೂರ್ವದಲ್ಲಿ ಪ್ರಲಯಕಾಲದಲ್ಲಿ ವಿಷ್ಣು ವಟಪತ್ರದ ಮೇಲೆ ಮಲಗಿಕೊಂಡು ನಿದ್ರೆಮಾಡಿದನು. ಅವನ ಕರ್ಣಮಲದಿಂದ ಹುಟ್ಟಿದ ಗದಾಯುಧಧಾರಿಗಳಾದ ಮಧು-ಕೈಟಭರೆಂಬ ಇಬ್ಬರು ದೈತ್ಯವೀರರು ಬ್ರಹ್ಮನನ್ನು ಕೊಲ್ಲಲು ಉದ್ಯುಕ್ತರಾದರು. ಆಗ ಬ್ರಹ್ಮ ಯೋಗನಿದ್ರೆಯನ್ನು ಸ್ತುತಿಸಿ ವಿಷ್ಣುವನ್ನು ಎಬ್ಬಿಸುವಂತೆ ಪ್ರಾರ್ಥಿಸಿ ಆಕೆ ತನ್ನ ಮಗಳಾಗಬೇಕೆಂದೂ ಕೇಳಿಕೊಂಡ. ಆ ದೇವಿ 'ಚಾಕ್ಷುಷಮನ್ವಂತರದಲ್ಲಿ ನಿನ್ನ ಮಗಳಾಗುತ್ತೇನೆ' ಎಂದು ವರಕೊಟ್ಟು ಅದೃಶ್ಯಳಾದಳು. ಅತ್ತಲಾಗಿ ವಿಷ್ಣು ನಿದ್ರೆಯಿಂದೆದ್ದು ಮಧು ಕೈಟಭರನ್ನು ಸಂಹರಿಸಿದ. ದೇವಿ ತಾನು ಕೊಟ್ಟಿದ್ದ ವರದಂತೆ ಬ್ರಹ್ಮನ ಮಾನಸ ಪುತ್ರಿಯಾಗಿ ಜನಿಸಿದಳು. ಅವಳೇ ಪಂಪಾ.

(ii) ಹರಮಿತ್ರನ ಕಥೆ

ಪಂಪಾಕ್ಷೇತ್ರ—ಪಂಚಕ್ರೋಶಾತ್ಮಕವಾದ ಈ ಪಂಪಾಕ್ಷೇತ್ರದಲ್ಲಿ 1. ಮತಂಗ, 2. ಮಾಲ್ಯವಾನ್(ಅಥವಾ ಮಾಲ್ಯವಂತ), 3. ಋಷ್ಯಮೂಕ, 4. ಕಿಷ್ಕಿಂಧಾದ್ರಿ ಮತ್ತು

---

*ಪುರಂದರದಾಸರು ರಚಿಸಿರುವ ತುಂಗಭದ್ರಾನದಿಯ ಸ್ತೋತ್ರದ ಕೆಲವಂಶವನ್ನು ಈ ಸಂದರ್ಭದಲ್ಲಿ ಉದಹರಿಸಬಹುದು.

ತುಂಗೇ ಶುಭದೇ ಸುತರಂಗೆ !...
ಧರೆಗೆ ದಕ್ಷಿಣ ವಾರಣಾಸಿ ನೀನೆನಿಸಿದೆ ।
ಶಿಲೆಯೆಲ್ಲ ಶಿವಮಯವು
ಜಲವೆಲ್ಲ ಹರಿಮಯವು ।
ಮಳಲು ಮೃತ್ತಿಕೆಯೆಲ್ಲ ಮುನಿಮಯವು ।
ಬೆಳೆದಿದ್ದ ದರ್ಭೆಗಳು ಬ್ರಹ್ಮಮಯ ನೀನಿದ್ದ ।
ಸ್ಥಳದಿ ಜಡಜೀವ ಸರ್ವಂ ವಿಷ್ಣುಮಯವು ॥

ಇತ್ಯಾದಿ.



ಹಂಪೆ ಗೋಪುರಗಳು

(ಪುಟ 202–3, 246 ನೋಡಿ)



ಕೋದಂಡರಾಮನ ಗುಡಿ
(ಪುಟ 111, 247 ನೋಡಿ)

5. ಹೇಮಕೂಟವೆಂಬ ಐದು ಪುಣ್ಯತಮವಾದ ಬೆಟ್ಟಗಳೂ ನಾಲ್ಕುದ್ವಾರಗಳೂ ನಾಲ್ಕು ಉಪದ್ವಾರಗಳೂ, ಮೂರೂವರೆ ಕೋಟಿ ತೀರ್ಥಗಳಿಗೆ ಆಶ್ರಯವಾದ ತುಂಗಭದ್ರೆಯೂ ಪರಿಶೋಭಿಸುತ್ತಿವೆ. ಈ ಕ್ಷೇತ್ರಾಧಿಪತಿಯಾದ ಶಂಭುವಿಗೆ 1. ವಿರೂಪಾಕ್ಷ, 2. ಕಿನ್ನರೇಶ, 3. ಜಾಂಬವತೇಶ್ವರ, 4. ಸೋಮನಾಥ, 5. ಮಾಣಿಭದ್ರ ಎಂಬ ಪಂಚಮುಖಗಳು. ಇದರಲ್ಲಿ ಕಿನ್ನರೇಶನು ಪೂರ್ವ ಭಾಗದಲ್ಲಿದ್ದಾನೆ. ಅಲ್ಲೇ ಸಮೀಪದಲ್ಲೇ **ಗಂಧರ್ವಪರ್ವತವು** ಈಗಲೂ ಇದೆ. ಈ ಪ್ರದೇಶದಲ್ಲಿರುವ ಪುಣ್ಯತೀರ್ಥಗಳಲ್ಲಿ **ಕಲ್ಯಾಣತೀರ್ಥ** ಅತಿಮುಖ್ಯ. ಇದರ ಸ್ನಾನದಿಂದ ಸದ್ಗತಿಯಾಗುತ್ತದೆ. ತತ್ರಾಪಿ ಆಕಾಮಾವ್ಯೆ*ಸ್ನಾನ ಬಹುದುರ್ಲಭ. ಇದರ ಮಹಿಮೆ ಹರಮಿತ್ರನ ಕಥೆಯಿಂದ ಪ್ರಕಟವಾಗುತ್ತದೆ.

ಹರಮಿತ್ರ ಕಥಾರಂಭ — ಹಿಂದೆ ರಾಥಂತರ ಕಲ್ಪದ ಕೃತಯುಗದಲ್ಲಿ ಬ್ರಹ್ಮಪುತ್ರನಾದ **ಶಿವನೆಂಬ** ಬ್ರಾಹ್ಮಣ **ಗುಣವತಿಯೆಂಬ** ತನ್ನ ಪತ್ನಿಯೊಡನೆ ಇದ್ದ. ಅವರಿಗೆ **ಮಿತ್ರನೆಂಬ** ವಂಶವೃದ್ಧಿಕರನಾದ ಮಗ ಹುಟ್ಟಿದ. ಆ ಮಿತ್ರ ಉಪನೀತನಾದ ಬಳಿಕ ಗಂಧರ್ವಪರ್ವತಕ್ಕೆ ಹೋಗಿ ಕಲ್ಯಾಣತೀರ್ಥದಲ್ಲಿ ಸ್ನಾನಮಾಡಿ ನಿಶ್ಚಲ ತಪಸ್ಸುಮಾಡಿದ. ಸದಾಶಿವ ಪ್ರತ್ಯಕ್ಷನಾಗಲು ಭಕ್ತಿಭರದಿಂದ ಮಿತ್ರ

ದೇವ ಮಹೇಶ್ವರ ಸೇವಕ ಪೂರುಷಕಾಮಿತದಾಯಕ ದೇವ ನಮೋ ।
1ಮಾಮಕ-2ಮಾನಸ-ತಾಮಸ-ನಾಶನ 3ಸಾಮಜ 4ದಾನವಭೀಮ ನಮಃ ॥

* * * *

ಸಂಪ್ರತಿ1 ಮಯ್ಯ2ನುಕಂಪಾ3 ತವ4 ಯದಿ3 ಪಂಪಾನಾಥ ನಿಲಂಪ5 ವಿಭೋ ।
ಸಂಸೃತಿಭೀತೇ6ರವ7 ಮಾಂ8 ಶಂಕರ ಕಿಂಕರಸಿಕರ9ಮುಖಂಕರ ಭೋ ॥

ಎಂದು ಸ್ತೋತ್ರಮಾಡಿದ.

ವರಪ್ರಾಪ್ತಿ — ಸ್ತೋತ್ರಕ್ಕೆ ಮೆಚ್ಚಿ ಶಿತಿಕಂಠನು ಅವನಿಗೆ 'ಸರ್ವೇಶನಾದ ನನಗೆ ನೀನು ಮಿತ್ರನಾಗಿದ್ದೀಯೆ. ಆದ್ದರಿಂದ ನಿನಗೆ ಹರಮಿತ್ರನೆಂದೇ ಹೆಸರು ಪ್ರಸಿದ್ಧಿಯಾಗಲಿ. ನೀನು ಗೃಹಸ್ಥನಾಗಿ ನನ್ನನ್ನಾರಾಧಿಸಿ ಇಹ ಪರಗಳಲ್ಲಿ ಸೌಖ್ಯ ಪಡೆಯುವಿ' ಎಂದು ವರ ಅನುಗ್ರಹಿಸಿದ. ಹರಮಿತ್ರ ಮನೆಗೆ ಹೋಗಿ ಮಾತಾಪಿತೃ

---

*ಆಷಾಢ ಕಾರ್ತಿಕ ಮಾಘ ವೈಶಾಖ ಮಾಸಗಳ ಹುಣ್ಣಿಮೆ ದಿನಗಳಲ್ಲಿ ಸ್ನಾನ

1ನನ್ನ 2ಮನಸ್ಸಿನ 3ಸಾಮೋತ್ಪನ್ನನೇ, ಸಾಮಗಾನದಿಂದ ಹುಟ್ಟಿದವನೇ 4ದೈತ್ಯರಿಗೆ ಭಯಂಕರನೇ !

1ಈಗ 2ಮಯಿ–ನನ್ನಲ್ಲಿ 3ಅನುಕಂಪಾ–ದಯೆಯು, ಯದಿ–ಇದ್ದರೆ 4ನಿನಗೆ 5ಲಂಪಟವಿಲ್ಲದವನೇ ! ನಿರ್ಲಿಪ್ತನೇ 6ಸಂಸಾರಭೀತಿಯಿಂದ 7ಅವ-ಕಾಪಾಡು 8ನನ್ನನ್ನು 6ಭಕ್ತಸಮೂಹಕ್ಕೆ, ಸೇವಕವರ್ಗಕ್ಕೆ

ನಿಗೆ ಈ ಸಮಾಚಾರ ತಿಳಿಸಿ ಅವರ ಸೇವಾಸಕ್ತನಾಗಿ ನಿತ್ಯವೂ ಶಿವಾರಾಧನೆ ಮಾಡುತ್ತಿದ್ದನು. ಇಂತು 8ನೇ ಅಧ್ಯಾಯ.

ಅಧ್ಯಾಯ 9 ಹರಮಿತ್ರ-ವಿಮಲಾಸಂವಾದ

ಹರಮಿತ್ರನಿಗೆ ವಿವಾಹ — ಪತ್ನಿ ಅನೂಲವಾಗಿದ್ದರೆ ಗೃಹಸ್ಥಾಶ್ರಮಕ್ಕಿಂತ ಉತ್ತಮ ಯಾವುದೂ ಇಲ್ಲ. ಅನುಕೂಲದಾಂಪತ್ಯ ತ್ರಿ[1]ವರ್ಗೋದಯಕ್ಕೆ ಕಾರಣವಾಗುತ್ತದೆ. ಅದಕ್ಕೆ ಪ್ರತಿಯಾಗಿ ಹೆಂಡತಿ ಪ್ರತಿಕೂಲಳಾದರೆ ಆ ಯಾತನೆಯ ಮುಂದೆ ನರಕ ಏನೂ ಅಲ್ಲ, ಅಂಥಾ ನಾರಿಯರು ಜಿಗಣೆಗಳೇ ಸರಿ. ಅಥವಾ ಜಿಗಣೆಗಿಂತಲೂ ಅತ್ತತ್ತ, ಏಕೆಂದರೆ ಜಿಗಣೆಗಳು ರಕ್ತ ಮಾತ್ರ ಹೀರುತ್ತವೆ; ಹೆಂಗಸರು ವಿವಾಹಿತರಾಗಿದ್ದರೂ ಚಿತ್ತ ವಿತ್ತ ಬಲ ಸುಖ ಎಲ್ಲಾ ಹೀರುತ್ತಾರೆ.

> ಗೃಹಾಶ್ರಮಾತ್ಪರಂ ನಾಸ್ತಿ ಪತ್ನೀ ಯದಿ ವಶಂಗತಾ ।
> ಅನುಕೂಲಂ ಹಿ ದಾಂಪತ್ಯಂ ತ್ರಿವರ್ಗೋದಯ ಹೇತವೇ ॥೧॥
>
> ಪ್ರತಿಕೂಲಂ 2ಕಳತ್ರಂ ಚೇತ್ ನರಕೇನ ಹಿ ಕಿಂ ತತಃ ?
> 3ಜಲೂಕಯೋಽಪಮೀಯಂತೇ ಪ್ರಮದಾ ಲಘು ಬುದ್ಧಯಃ ॥೨॥
>
> ಪ್ರಮದಾನಾಂ ಜಲೂಕಾನಾಂ ವಿಚಾರೇ ಮಹದಂತರಮ್ ।
> ಜಲೂಕಾಃ ಕೇವಲಂ ರಕ್ತಂ ಗೃಹ್ಣಂತಿ ಪುನರಂಗನಾಃ ।
> ಗೃಹ್ಣಂತಿ ಸರ್ವಮಪ್ಯೂಥಾರ್ಶ್ಚಿತ್ತಂ ವಿತ್ತಂ ಬಲಂ ಸುಖಮ್ ॥೩॥

ಎಂದು ತಿಳಿದು ಹರಮಿತ್ರ ಮನೆಗೆ ಬಂದ ಬಳಿಕ ತಂದೆತಾಯಿಗಳ ಅಪ್ಪಣೆ ಪ್ರಕಾರ ವಿಮಲಾ ಎಂಬ ಋಷಿಕನ್ಯೆಯನ್ನು ಪರಿಗ್ರಹಿಸಿದನು.

ಶಿವಪೂಜಾವಿಧಾನ — ಹರಮಿತ್ರ ತನ್ನ ಪತ್ನಿಗೆ ಶಿವಾರ್ಚನೆಮಾಡುವಂತೆ ಉಪದೇಶಿಸಲು ವಿಮಲಾ 'ಶಿವಪೂಜಾವಿಧಾನ ಹೇಗೆ? ತಿಳಿಸಿಕೊಡಿ' ಎಂದು ಕೇಳಿದಳು. ಅದಕ್ಕೆ ಹರಮಿತ್ರ 'ಶಿವಾರ್ಚನೆ ಮಾಡುವವನು ಮೊಟ್ಟ ಮೊದಲು ಸ್ನಾನಮಾಡಿ ಶುಚಿಯಾದ ವಸ್ತ್ರಧರಿಸಿ ನಿತ್ಯಕರ್ಮಗಳನ್ನು ಮುಗಿಸಿ ಪೂಜೋಪಕರಣಗಳನ್ನೆಲ್ಲಾ ಸಿದ್ಧಗೊಳಿಸಿಕೊಂಡು ಕ್ರಮವಾಗಿ ಆಸನಶುದ್ಧಿ ಆತ್ಮಶುದ್ಧಿ ಭೂತಶುದ್ಧಿ ಮಾಡಿಕೊಂಡು ಕ್ರಮ ಪ್ರಕಾರ ಪೂಜೆಯನ್ನು ಪರಮೇಶ್ವರನಿಗೆ ಅರ್ಪಿಸಿ, ಬಳಿಕ ಅಂಗಭೂತರಾದ ಗಿರಿಜೆ ಗಣೇಶ ವೃಷ ಚಂಡಿಕೇಶ್ವರಾದಿಗಳಿಗೂ ಪೂಜೆಮಾಡಿ ಪ್ರಾರ್ಥಿಸಿಕೊಳ್ಳಬೇಕು. ಅನಂತರ ಅತಿಥಿ ಅಭ್ಯಾಗತರನ್ನು ಆದರಿಸಿ ಭೋಜನ ತಾಂಬೂಲ ದಕ್ಷಿಣೆಗಳಿಂದ ಸತ್ಕಾರಮಾಡಬೇಕು.*

---

1 ತ್ರಿವರ್ಗ–ಧರ್ಮ, ಅರ್ಥ ಕಾಮ

2 ಹೆಂಡತಿ 3 ಜಲೂಕಾ–ಜಿಗಣೆ

* ಈ ವಿಧಾನವೆಲ್ಲಾ ಮೂಲದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ.—ವಿ. ತೀ.

ಪೂಜಾಫಲ — ಈ ವಿಧವಾದ ಶಿವಪೂಜೆ ಸರ್ವಾಭೀಷ್ಟಪ್ರದ, ಸರ್ವ ದಾರಿದ್ರ್ಯ ನಾಶಕ, ಸರ್ವಪಾಪಕ್ಷಯಕರ.

ಬಹುನಾತ್ರ ಕಿಮುಕ್ತೇನ ಶ್ಲೋಕಾರ್ಧೇನ ಬ್ರವೀಮ್ಯಹಮ್ ॥
ಬ್ರಹ್ಮಹತ್ಯಾಶತಂ ವಾಪಿ ಶಿವಪೂಜಾ ವಿನಾಶಯೇತ್ ॥

ಹೆಚ್ಚೇಕೆ ? ಶಿವಪೂಜೆ ನೂರಾರು ಬ್ರಹ್ಮಹತ್ಯಾದೋಷವನ್ನೂ ನಾಶ ಮಾಡೀತು ಎಂದು ಅರ್ಧಶ್ಲೋಕದಲ್ಲೇ ಹೇಳಬಹುದು. ಇಂತು 9ನೇ ಅಧ್ಯಾಯ.

ಅಧ್ಯಾಯ 10 ಶಿವಪೂಜಾಮಹಿಮೆ

ಶುಚಿವ್ರತ-ಧರ್ಮ-ಪುತ್ರರು — ಆಗ ವಿಮಲೆ 'ಹಿಂದೆ ಯಾರಾದರೂ ಈ ರೀತಿ ಆರಾಧಿಸಿದ್ದರೇ? ಅವರಿಂದ ಅವರಿಗೇನು ಫಲವಾಯಿತು ? ಎಂದು ಕೇಳಲು ಹರಮಿತ್ರ ಶಿವಪೂಜಾಮಹಿಮೆ ತಿಳಿಸುವುದಕ್ಕೆ ಶುಚಿವ್ರತ ಧರ್ಮ ಗುಪ್ತರ ಕಥೆ ಹೇಳಿದ.

ಶರ್ಮದಾ ಎಂಬ ಒಬ್ಬ ಬ್ರಾಹ್ಮಣಸ್ತ್ರೀ ದಾರಿದ್ರ್ಯದಿಂದ ಕೃಶಳಾಗಿ ಇಬ್ಬರು ಮಕ್ಕಳೊಡನೆ ಶಾಂಡಿಲ್ಯರನ್ನು ನೋಡಿ ಹೊಕ್ಕು ಭಗವನ್, ಇವನು ದ್ವಿಜಪುತ್ರನಾದ ಶುಚಿವ್ರತ. ಇವನು ರಾಜಪುತ್ರನಾದ ಧರ್ಮಪುತ್ರ.* ದಾರಿದ್ರ್ಯದಿಂದ ದಗ್ಧರಾದ ನಮ್ಮನ್ನು ಏನಾದರೂ ಮಾಡಿ ಉದ್ಧರಿಸಬೇಕು' ಎಂದು ಬೇಡಿಕೊಂಡಳು. ಶಾಂಡಿಲ್ಯ ಅವರೆಲ್ಲರಿಗೂ ಮಂತ್ರೋಪದೇಶ ಮಾಡಿ ಈಶ್ವರನನ್ನು ಅರ್ಚಿಸ ಹೇಳಿದರು.

ಶುಚಿವ್ರತನಿಗೆ ಭಾಗ್ಯಲಾಭ — ಅವರಂತೆ ಎಲ್ಲರೂ ನಾಲ್ಕು ತಿಂಗಳು ಅರ್ಚನೆ ಜರುಗಿಸಿದರು. ಅಷ್ಟರಲ್ಲಿ ಶುಚಿವ್ರತನಿಗೆ ದುಡ್ಡಿನ ಕಲಶ ಸಿಕ್ಕಿತು. ಅದನ್ನು ಇಬ್ಬರೂ ಹಂಚಿಕೊಳ್ಳಲಿ ಎಂದು ತಾಯಿ ಅಭಿಪ್ರಾಯಪಟ್ಟಳು. ಆದರೆ ಧರ್ಮಪುತ್ರನೇ ಅದಕ್ಕೊಪ್ಪದೆ 'ಅವನ ಸುಕೃತದಿಂದ ಲಬ್ಧವಾದ ಐಶ್ವರ್ಯ ಅವನೇ ಅನುಭವಿಸಲಿ. ದೇವರು ನನಗೂ ಅನುಗ್ರಹಿಸುವನು' ಎಂದು ಹೇಳಿ ತನ್ನ ಪೂಜೆ ನಿಲ್ಲಿಸದೆ ವರ್ಷದ ವರೆಗೂ ಮುಂದರಿಸಿದ.

ಗಂಧರ್ವಪುತ್ರಿಯ ಭೇಟಿ — ಹೀಗಿರಲು ವಸಂತಕಾಲದಲ್ಲಿ ಒಂದು ದಿನ ಇಬ್ಬರು ಕುಮಾರರೂ ವಿಹಾರಾರ್ಥ ವನಾಂತರಕ್ಕೆ ಹೋಗಿದ್ದರು. ಒಂದು ಕಡೆ ಸ್ವಲ್ಪ ದೂರದಲ್ಲಿ ಅನೇಕ ಗಂಧರ್ವಕನ್ಯೆಯರು ವಿಹಾರಮಾಡುತ್ತಿದ್ದುದನ್ನು ಕಂಡು ಶುಚಿವ್ರತ ದೂರ ಸರಿದ. ಆದರೆ ರಾಜಕುಮಾರ ಕುತೂಹಲದಿಂದ ಮುನ್ನುಗ್ಗಿ ಹೋದ.

---

*ಅಧ್ಯಾಯದ ಉತ್ತರ ಭಾಗದಲ್ಲಿ ಇವನಿಗೇ ಧರ್ಮಗುಪ್ತ ಎಂಬ ಹೆಸರು ಪ್ರಯೋಗಿಸಲ್ಪಟ್ಟಿದೆ.

ಅವನನ್ನು ಕಂಡು ಆ ಕನ್ಯೆಯರಲ್ಲೊಬ್ಬಳು ತನ್ನ ಸಖಿಯರನ್ನೆಲ್ಲಾ ಉಪಾಯದಿಂದ ವನಾಂತರಕ್ಕೆ ಕಳುಹಿಸಿ ಆ ರಾಜಕುಮಾರನನ್ನು ಕುಶಲ ಪ್ರಶ್ನೆಮಾಡಿದಳು.

ಅದಕ್ಕೆ ಅವನು ತಾನು ವಿದರ್ಭರಾಜನ ಮಗನೆಂದೂ ಶತ್ರುಕಾಟದಿಂದ ಮಾತಾಪಿತೃಗಳನ್ನು ನೀಗಿಕೊಂಡು ನಿರ್ಭಾಗ್ಯಸ್ಥಿತಿಯಲ್ಲಿರುವುದನ್ನೂ ತಿಳಿಸಿ ಅವಳ ಪರಿಚಯ ಕೇಳಿದನು. ಆ ಕನ್ಯೆ 'ನಾನು **ವಿದ್ರವಕ**ನೆಂಬ ಗಂಧರ್ವಪತಿಯ ಮಗಳು ಅಂಶುಮತಿ' ಎಂದು ಪರಿಚಯ ಹೇಳಿ ಅವನಿಗೆ ಒಂದು ಮುತ್ತಿನ ಹಾರ ಕೊಟ್ಟು 'ನಾಡಿದ್ದು ಇಲ್ಲಿಗೆ ಬಾ. ಒಂದು ಕೌತುಕ ತೋರಿಸುವೆನು' ಎಂದು ಹೇಳಿ ಹೊರಟು ಹೋದಳು.

ಧರ್ಮಪುತ್ರನಿಗೆ ರಾಜ್ಯಲಾಭ — ಧರ್ಮಪುತ್ರ ಇದನ್ನೆಲ್ಲಾ ತನ್ನ (ಸಾಕು) ತಾಯಿಗೆ ತಿಳಿಸಿ ಸಂಕೇತ ಪ್ರಕಾರ ಆ ಸ್ಥಳಕ್ಕೆ ಹೋಗಿ ನೋಡಲು ಅಲ್ಲಿಗೆ ಗಂಧರ್ವಪತಿಯೇ ಪುತ್ರಿಯೊಡನೆ ಬಂದಿದ್ದನು. ಅವನು ರಾಜಕುಮಾರನನ್ನು ಆದರಿಸಿ 'ರಾಜಪುತ್ರ, ನಾನು ನಿನ್ನೆ ಕೈಲಾಸಕ್ಕೆ ಹೋಗಿದ್ದಾಗ ಮಹೇಶ ನಿನ್ನ ಕಥೆ ಹೇಳಿ ನಿನಗೆ ಸಹಾಯ ಮಾಡುವಂತೆ ಹೇಳಿದ. ನನ್ನ ಮಗಳೂ ಅನುರೋಧ ಮಾಡುತ್ತಿದ್ದಾಳೆ. ಆದ್ದರಿಂದ ಇವಳ ಪಾಣಿಗ್ರಹಣಮಾಡಿ ಹತ್ತು ಸಾವಿರ ವರ್ಷ ಭೋಗಪಟ್ಟು ಇವಳೊಡನೆ ಶಿವಲೋಕ ಸೇರುವಿ' ಎಂದು ಹೇಳಿ ಅಲ್ಲೇ ತನ್ನ ಮಗಳನ್ನು ಅವನಿಗೆ ವಿವಾಹಮಾಡಿಕೊಟ್ಟಿದ್ದಲ್ಲದೆ ಕಳೆದು ಹೋಗಿದ್ದ ರಾಜ್ಯವನ್ನು ಗೆಲ್ಲುವುದಕ್ಕೆ ಚತುರಂಗ ಬಲವನ್ನೂ ಬಿಲ್ಲು ಬತ್ತಳಿಕೆಗಳನ್ನೂ ಕೊಟ್ಟು ತನ್ನ ಮನೆಗೆ ಹೋದ.

ಅದರಿಂದ ಧರ್ಮಗುಪ್ತ ಶತ್ರುಗಳಿಂದ ರಾಜ್ಯವನ್ನು ಗೆದ್ದು ರತ್ನಸಿಂಹಾಸನದಲ್ಲಿ ಅಭಿಷಿಕ್ತನಾಗಿ ನಿಷ್ಕಂಟಕವಾಗಿ ರಾಜ್ಯಭಾರಮಾಡಿದ. ಇದರಂತೆಯೇ ಇನ್ನೂ ಎಷ್ಟೋ ಮಂದಿ ಶಿವಪೂಜೆಯಿಂದ ಸುಖಿಗಳಾಗಿದ್ದಾರೆ. ಈ ಆಖ್ಯಾನವನ್ನು ಓದುವ, ಕೇಳುವ ಜನರಿಗೆ—ಶಿವಪೂಜಾವಸಾನದಲ್ಲಿ ಓದಿ-ಕೇಳಿದರೆ ಮತ್ತು ವಿಶೇಷ—ನೂರು ಜನ್ಮಗಳವರೆಗೂ ದಾರಿದ್ರ್ಯ ಬರುವುದಿಲ್ಲ. ಅವರ ಪಾದಧೂಳಿ ಭುವನವನ್ನು ಪಾವನ ಮಾಡುತ್ತದೆ. ಇಂತು 10ನೇ ಅಧ್ಯಾಯ.

ಅಧ್ಯಾಯ 11 ಕಲ್ಯಾಣತೀರ್ಥ

ಆನೆಯಿಂದ ಅನಾಹುತ — ವಿಮಲಾ ಅದೇ ಪ್ರಕಾರ ಶಿವಾರ್ಚನೆ ಮಾಡಿದ್ದರಿಂದ ಪೂಜಾಫಲವಾಗಿ ಅವಳಿಗೆ ಸಕಲ ಸಿದ್ಧಿಗಳೂ ಪ್ರಾಪ್ತವಾದುವು ಒಂದು ದಿನ ಅವಳು ಕಲ್ಯಾಣತೀರ್ಥಸ್ನಾನಕ್ಕಾಗಿ ಸಖಿಯರೊಡನೆ ಅರುಣೋದಯಕ್ಕೇ ಹೋಗಿದ್ದಳು. ಅಕಸ್ಮಾತ್ತಾಗಿ ಒಂದು ಕಾಡಾನೆ ಸೊಂಡಲೆತ್ತಿಕೊಂಡು ಘೀಂಕಾರ ಮಾಡುತ್ತಾ ಆ ಹೆಂಗಸರು ಇಳಿದಿದ್ದ ಕಡೆಗೇ ಓಡಿ ಬಂತು. ಅವರೆಲ್ಲರೂ ಹೆದರಿ ದಿಕ್ಕಾಪಾಲಾಗಿ ಚದರಿ ಓಡುತ್ತಾ ಹುಲ್ಲು ಬೆಳೆದು ಮುಚ್ಚಿಯಾಗಿದ್ದ ಒಂದು ಬಾವಿಯಲ್ಲಿ

ಬಿದ್ದು ಬಿಟ್ಟರು. ಅವರ ತಾಯಿಯರು ಅವರನ್ನು ಹುಡುಕುತ್ತಾ ಬಂದು ಅವರೆಲ್ಲ ಬಾವಿಯಲ್ಲಿ ಬಿದ್ದಿರುವುದನ್ನು ಕಂಡು ಗಟ್ಟಿಯಾಗಿ ಅಳಲಾರಂಭಿಸಿದರು.

ಆನೆಜನ್ಮ ವಿಮೋಚನೆ — ಸ್ನಾನಕ್ಕಾಗಿ ಬರುತ್ತಿದ್ದ ಹರಮಿತ್ರ ರೋದನ ಧ್ವನಿ ಕೇಳಿ ಅಲ್ಲಿಗೆ ಹೋಗಿ ಅವರಿಗೆ ಸಮಾಧಾನ ಮಾಡಿ ಕಲ್ಯಾಣತೀರ್ಥದಲ್ಲಿಳಿದು ಶಿವಮಂತ್ರ ಜಪಿಸತೊಡಗಿದ. ಆನೆ ಅವನ ಕಡೆಯೇ ನುಗ್ಗಿ ಅವನನ್ನು ಸೊಂಡಲಿಂದ ಸುತ್ತಿ ಮೇಲಕ್ಕೆತ್ತಿ ಹಿಡಿಯಿತು, ಹರಮಿತ್ರ ಸ್ವಲ್ಪವೂ ಹೆದರದೆ ಶಿವಮಂತ್ರ ಜಪಿಸುತ್ತಾ ಕೈಯಿಂದ ಆ ತೀರ್ಥಜಲವನ್ನೆತ್ತಿ ಆನೆ ಕುಂಭಸ್ಥಳದ ಮೇಲೆ ಸಿಡಿಸಿದನು. ಆ ತೀರ್ಥೋದಕದ ಮಹಿಮೆಯಿಂದ ಆನೆ ಪಾಪವೆಲ್ಲ ತೀರಿಹೋಗಿ ಅದಕ್ಕೆ ದಿವ್ಯರೂಪ ಬಂತು, ಅದು ಹರಮಿತ್ರನಿಗೆ ಸಾಷ್ಟಾಂಗ ಎರಗಿ ತನ್ನ ಕಥೆ ಹೇಳಿ ಕೊಂಡಿತು.

ಆನೆಯ ಪೂರ್ವವೃತ್ತಾಂತ — 'ಮಹಾತ್ಮನೇ, ನಿನ್ನ ಪುಣ್ಯದಿಂದ ನನ್ನ ತಿರ್ಯಗ್ಜನ್ಮ ಪರಿಹಾರವಾಯಿತು. ನಾನು ಹಿಂದೆ ನೈಷಧ ಪಟ್ಟಣದಲ್ಲಿದ್ದ ವಿಶ್ವಗುಪ್ತನೆಂಬ ವೈಶ್ಯನ ಮಗನಾದ ಧರ್ಮಗುಪ್ತನಾಗಿದ್ದೆ. ಗೋರಕ್ಷಣೆ ಕೃಷಿ ವ್ಯಾಪಾರ ಮಾಡಿಕೊಂಡು ಸುಖವಾಗಿದ್ದೆ. ಒಬ್ಬ ಕ್ಷಪಣಕನ[1] ವಂಚನೆಗೆ ತುತ್ತಾಗಿ ಹೀನಸ್ಥಿತಿಗೆ ಬಂದು ದಾರಿದ್ರ್ಯದಿಂದಲೂ ಜಿಹ್ವಾಚಾಪಲ್ಯದಿಂದಲೂ ದಾನಮಾಡಿದ್ದ ವಸ್ತುಗಳನ್ನೇ ಮಾರಿಕೊಂಡು ತಿನ್ನುತ್ತಾ ಬಂದೆ. ಜೊತೆಗೆ ಅತಿಸಾರರೋಗವೂ ತಗಲಿತು. ಆದರೆ ಅಂತ್ಯಕಾಲದಲ್ಲಿ ಶಿವಸ್ಮರಣೆಯುಂಟಾದ್ದರಿಂದ ಅದರ ಫಲವಾಗಿ ನಾನು ಒಂದು ಮನ್ವಂತರಕಾಲ* ದೇವೇಂದ್ರನ ಸನ್ನಿಧಿಯಲ್ಲಿದ್ದು ಕೊನೆಗೆ ಆನೆಯಾದೆ. ಇವತ್ತು ನಿನ್ನ ಅನುಗ್ರಹದಿಂದಲೂ ಕಲ್ಯಾಣತೀರ್ಥದ ಪ್ರಭಾವದಿಂದಲೂ ನನಗೆ ಆನೆ ಜನ್ಮ ಹೋಗಿ ಸದ್ಗತಿಯಾಯಿತು ಎಂದು ಹೇಳಿ ಸ್ವರ್ಗಕ್ಕೆ ಹೋಯಿತು.

ಕನ್ಯೆಯರ ವಿಮೋಚನೆ — ಅನಂತರ ಹರಮಿತ್ರ ತಡಮಾಡದೆ ಆ ತೀರ್ಥದ ಉದಕವನ್ನು ಬಾವಿಯಲ್ಲಿ ಬಿದ್ದಿದ್ದ ಕನ್ಯೆಯರ ಮೇಲೆ ಪ್ರೋಕ್ಷಿಸಲು ಅವರೆಲ್ಲರೂ ಎಚ್ಚತ್ತು ನಿರಾಯಾಸವಾಗಿ ಬಾವಿಯಿಂದ ಪಾರಾಗಿ ಬಂದರು, ಅವರ ತಾಯಿಯರ ಆನಂದಕ್ಕೆ ಪಾರವೇ ಇರಲಿಲ್ಲ- ಎಲ್ಲರೂ ಹರಮಿತ್ರನನ್ನು ಹೊಗಳಿ ಅವನು ಹೇಳಿದಂತೆ ಆ ಕಲ್ಯಾಣತೀರ್ಥದಲ್ಲಿ ಸ್ನಾನಮಾಡಿ ಉದ್ಧಾರವಾದರು.

---

1 ಕ್ಷಪಣಕ–ಬೌದ್ಧ ಅಥವಾ ಜೈನ ಸನ್ಯಾಸಿ.

*ಮನುಷ್ಯರ ಒಂದು ವರ್ಷ ದೇವತೆಗಳಿಗೆ ಒಂದು ದಿನ. ನಮ್ಮ 360 ವರ್ಷ ಆದರೆ ದೇವಮಾನದಲ್ಲಿ ಒಂದು ವರ್ಷ. ದೇವಮಾನದ 12 ಸಾವಿರ ವರ್ಷ ಆದರೆ ಒಂದು ಚತುರ್ಯುಗ, ಇದಕ್ಕೆ ಮಹಾಯುಗವೆಂದು ಹೆಸರು. 72 ಮಹಾಯುಗಗಳಾದರೆ ಒಂದು ಮನ್ವಂತರ. ಆದ್ದರಿಂದ ಒಂದು ಮನ್ವಂತರ ಎಂದರೆ 72x12,000x360 (ಮನುಷ್ಯಮಾನದ) ವರ್ಷಗಳು.

ಹರಮಿತ್ರನೂ ಬಹುಕಾಲ ಗೃಹಸ್ಥನಾಗಿದ್ದು ಬಳಿಕ ವಾನಪ್ರಸ್ಥಾಶ್ರಮದಲ್ಲಿ ಕೆಲವು ಕಾಲ ಇದ್ದು ಕಡೆಗೆ ಬಕದಾಲ್ಭ್ಯರ ಅಪ್ಪಣೆಯಿಂದ ಸನ್ಯಾಸಿಯಾಗಿದ್ದು ದೇಹತ್ಯಾಗ ಮಾಡಿ ಶಿವಮಂದಿರಕ್ಕೆ ಹೋದ. ಇಂತು 11ನೇ ಅಧ್ಯಾಯ.

ಅಧ್ಯಾಯ 12 ಬಕದಾಲ್ಭ್ಯತೀರ್ಥ

[1. ಈ ತೀರ್ಥ ಚಕ್ರತೀರ್ಥದ ಅಕ್ಕ ಪಕ್ಕದಲ್ಲೇ ಎಲ್ಲೋ ಇದ್ದಿರಬೇಕು. ಆದರೆ ಶಂಕರನ ಆಜ್ಞೆಯಿಂದ ಈಗ ಅಗೋಚರವಾಗಿದೆ. ಬಕದಾಲ್ಭ್ಯರ ಪೂರ್ವವೃತಾಂತ ಅಧ್ಯಾಯ 90ರಲ್ಲಿ ಬರುವುದು.]

2. ಮೂಲ (ಸ್ಕಾಂದ) ಪುರಾಣ ಗ್ರಂಥದಲ್ಲಿ ಪ್ರಾಯಃ ಪ್ರತಿಯೊಂದು ಅಧ್ಯಾಯವೂ ಸೂತ-ಶೌನಕರ, ಸಪ್ತರ್ಷಿಗಳ ಮತ್ತು ಕ್ಷೇತ್ರಪಾಲಕರ ಪ್ರಶ್ನೋತ್ತರ ರೂಪವಾಗಿದೆ. ಆದರೆ ಈ ಸಂಗ್ರಹದಲ್ಲಿ ಪೀಠಿಕಾರೂಪವಾದ ಅಂಥಾ ಪ್ರಶ್ನೋತ್ತರಗಳನ್ನು ಬಿಟ್ಟು-ಬಿಟ್ಟು ಕೇವಲ ಮುಖ್ಯವಾದ ಕಥಾಭಾಗಗಳನ್ನೂ ಮಹಿಮೆಗಳನ್ನೂ ಮಾತ್ರ ಸಂಗ್ರಹಿಸಲಾಗಿದೆ—ವಿ. ತೀ.]

ಬಕದಾಲ್ಭ್ಯರ ಕಥೆ — ಬಕದಾಲ್ಭ್ಯರು ಮೊದಲು ಹಿಮವತ್ಪರ್ವತದ ತಪ್ಪಲಲ್ಲಿ ಸಾವಿರ ವರ್ಷವೂ ಪೂರ್ವಕ್ಕೆ ಬಂದು ಅಲ್ಲಿ ಸಾವಿರ ವರ್ಷವೂ ತಪಸ್ಸು ಮಾಡಿ ದಕ್ಷಿಣಕ್ಕೆ ಬಂದು ಹೇಮಕೂಟದ ರಮಣೀಯತೆಯಿಂದ ಮುಗ್ಧರಾಗಿ ಅಲ್ಲೂ ಚಕ್ರತೀರ್ಥದ ಹತ್ತಿರ ಒಂದು ಕಡೆ ತಪಸ್ಸಿಗೆ ಕುಳಿತರು. ಮೈಮೇಲೆಲ್ಲಾ ಹುತ್ತ ಬೆಳೆದು ಬಿದಿರಿನ ಮೆಳೆಗಳು ಬೆಳೆದು ಹೋದರೂ ಅವರಿಗೆ ಧ್ಯಾಸವೇ ಇರಲಿಲ್ಲ. ಇಂಥಾ ಉಗ್ರತಪಸ್ಸು ಮಾಡಿದ್ದರಿಂದ ಕಾಲಾಂತರದಲ್ಲಿ ಅವರ ತಪೋಜ್ವಾಲೆಯಿಂದ ಲೋಕವೆಲ್ಲಾ ತಳಮಳಿಸಿ ಹೋಯಿತು. ಮಹೇಶ್ವರ ಪ್ರತ್ಯಕ್ಷ ಬಂದು ಗಂಗೋದಕವನ್ನು ಆ ಋಷಿಯ ಮೇಲೆ ಪ್ರೋಕ್ಷಿಸಲು ಹುತ್ತವೆಲ್ಲ ಕರಗಿಹೋಗಿ ಅದರಿಂದ ಬಕದಾಲ್ಭ್ಯರು ದಿವ್ಯದೇಹಧಾರಿಗಳಾಗಿ ಬಂದರು. ಈಶ್ವರ ಅವರಿಗೆ ಪೂರ್ಣಾಯಸ್ಸು ಅನುಗ್ರಹಿಸಿದ್ದಲ್ಲದೆ ಅವರು ಸ್ನಾನಮಾಡಿದ ಬಕದಾಲ್ಭ್ಯತೀರ್ಥದಲ್ಲಿ ಸ್ನಾನಮಾಡುವವರಿಗೂ ಪೂರ್ಣಾಯಸ್ಸು ಆಗಲೆಂದೂ ಆ ಋಷಿ ತಪಸ್ಸಿಗೆ ಕುಳಿತಿದ್ದಾಗ ಬಕಗಳು ಅವರ ಮೈಯನ್ನೆಲ್ಲಾ ತಿಂದುಹಾಕಿದ್ದರಿಂದ ಅವರಿಗೆ ಬಕದಾಲ್ಭ್ಯ*ರೆಂದು ಹೆಸರು ಬರಲೆಂದೂ ವರಕೊಟ್ಟು ಅಂತರ್ಧಾನನಾದ.

ಮೃಕಂಡನಿಗೆ ಆಯುರ್ದಾನ — ಬಕದಾಲ್ಭ್ಯತೀರ್ಥದಲ್ಲಿ ಸ್ನಾನ ಮಾಡಿದರೆ ದೀರ್ಘಾಯುಷ್ಯ ಆಗುವುದೆಂಬ ಸುದ್ದಿ ಲೋಕದಲ್ಲೆಲ್ಲಾ ಹರಡಲು ಅದರಲ್ಲಿ ಸ್ನಾನಮಾಡಿ ಅಸಂಖ್ಯ ಜನರು ಚಿರಂಜೀವಿಗಳಾದರು. ಯಮಲೋಕ ಬರಿದಾಗುತ್ತಾ ಬಂತು. ಈ ಮಧ್ಯೆ ಇನ್ನೊಂದು ಘಟನೆ ನಡೆಯಿತು. **ವಿಭಾಂಡಕ**

---

*ಬಕ–ಬಕಪಕ್ಷಿಗಳಿಂದ, ದಾಲ್ಭ್ಯ (ಇದರ ನಿರುಕ್ತಿ ಸಂದಿಗ್ಧವಾಗಿದೆ. ಪ್ರಾಯಶಃ ದಲ್–ಸೀಳು +, ಬಿದ್-ಭೇದಿಸು ಎಂಬ ಧಾತುಗಳ ಮೇಲೆ ಯ ಪ್ರತ್ಯಯ ಇರಬಹುದು)– ಛೇದಿಸಲ್ಪಟ್ಟ.

ಋಷಿಯ ಮಗ ಮೃಕಂಡನಿಗೆ ಆಯುಸ್ಸು ತೀರಿದ್ದರಿಂದ ಅವನನ್ನು ಒಯ್ಯುವುದಕ್ಕೆ ಯಮದೂತರು ಬಂದರು. ವಿಭಾಂಡಕರು ಬಕದಾಲ್ಭ್ಯರನ್ನು ಮೊರೆಹೊಕ್ಕು ಪುತ್ರಭಿಕ್ಷೆ ಕೊಡಬೇಕೆಂದು ಅಂಗಲಾಚಿ ಬೇಡಿಕೊಂಡರು. ಬಕದಾಲ್ಭ್ಯರು ಯಮದೂತರಿಂದ ಪ್ರೇತನ[1] ಕಳೇಬರ[2] ತೆಗೆದುಕೊಂಡು ತಮ್ಮ ತೀರ್ಥದಲ್ಲಿ ಅದನ್ನು ಅದ್ದಿ ಪ್ರೇತನನ್ನು ಬದುಕಿಸಿದರು. ಯಮದೂತರು ತಮ್ಮ ಪ್ರಭುವಿಗೆ ಈ ವಿಷಯವಾಗಿ ದೂರು ಹೇಳಿದರು.

ತೀರ್ಥ ಅಗೋಚರವಾದುದು — ಯಮನು ಬ್ರಹ್ಮ ವಿಷ್ಣುಗಳ ಮುಂದೆ ದೂರು ಹೇಳಿಕೊಂಡ. ಅವರಿಗೂ ಏನೂ ತೋಚಲಿಲ್ಲ. ಕಡೆಗೆ ಅವರೆಲ್ಲರೂ ಬಕದಾಲ್ಭ್ಯರನ್ನೇ ವಿಚಾರಿಸಿದರು. ಆ ಋಷಿ ಶಂಕರನು ವರಕೊಟ್ಟ ವೃತ್ತಾಂತ ಹೇಳಿ ತನಗೂ ಏನೂ ತೋರದೆ ಹೋಗಲು ಆ ದೇವನನ್ನೇ ಧ್ಯಾನಿಸಿದನು. ಮೃಡ ಪ್ರತ್ಯಕ್ಷನಾಗಿ ಬಂದು ಸಮಾಚಾರವೆಲ್ಲ ಕೇಳಿ (ಮುಂದೆ ಜನರು ಆ ತೀರ್ಥದ ದುರುಪಯೋಗ ಮಾಡಿಕೊಳ್ಳದಂತೆ) ಆ ತೀರ್ಥ ಅಗೋಚರವಾಗಲೆಂದೂ ಜ್ಞಾನಿಗಳು ಮತ್ತು ಶಿವಭಕ್ತರಿಗೆ ಮಾತ್ರ ಕಾಣಿಸಲೆಂದೂ ವರ ಕೊಟ್ಟು ಸಮಸ್ಯೆ ಬಗೆಹರಿಸಿದ. ಅದ್ಯಾಪಿ ಆ ತೀರ್ಥ ಅದೃಶ್ಯವಾಗಿದೆ. ಬಹಳ ಪುಣ್ಯವಂತರಿಗೆ ಮಾತ್ರ ಗೋಚರವಾಗುತ್ತದೆ. ಇಂತು 12ನೇ ಅಧ್ಯಾಯ.

ಅಧ್ಯಾಯ 13 ಋಷ್ಯಶೃಂಗಪರ್ವತ

[1. ಈ ಅಧ್ಯಾಯದಲ್ಲಿ ಋಷ್ಯ'ಶೃಂಗ' ಎಂಬ ಹೆಸರು ಬಂದರೂ ಮಿಕ್ಕ ಅಧ್ಯಾಯಗಳಲ್ಲೆಲ್ಲಾ (ಉದಾ. 8, 82, 99 ಇತ್ಯಾದಿ) ಋಷ್ಯ'ಮೂಕ'ವೆಂಬ ಹೆಸರೇ ಪ್ರಯೋಗಿಸಲ್ಪಟ್ಟಿದೆ.

2. ಈ ಬೆಟ್ಟ ಹಂಪೆಗೆ ಈಶಾನ್ಯ ಮೂಲೆಯಲ್ಲಿ ಚಕ್ರತೀರ್ಥಕ್ಕೆ ಅಭಿಮುಖವಾಗಿದೆ. ವಾಲಿಯಿಂದ ಭೀತನಾದ ಸುಗ್ರೀವ ಈ ಗಿರಿಯಲ್ಲೇ ಇದ್ದದ್ದು.

3. ರಾಮಾಯಣದಲ್ಲಿ ಬರುವ ಋಷ್ಯಶೃಂಗರೇ ಬೇರೆ, ಇವರಲ್ಲ ಎಂಬುದನ್ನೂ ಗಮನಿಸತಕ್ಕದು.—ವಿ.ಶೀ.]

ತಪಶ್ಚರಣೆ — ಹಿಂದೆ ರಾಥಂತರ ಕಲ್ಪದ ಕೃತಯುಗದಲ್ಲಿ ಬ್ರಹ್ಮಸೂನುವಾದ ಕುತ್ಸ ಕರ್ದಮರ ಮಗಳಾದ ಕನ್ಯೆಯನ್ನು ವಿಧಿಪೂರ್ವಕ ಮದುವೆಯಾದ. ಅವರಿಗೆ ವಂಶವರ್ಧಕನಾದ ಸುಕುಮಾರ ಜನಿಸಿದ. ಕುತ್ಸ ಅವನಿಗೆ ಐದನೇ ವರ್ಷದಲ್ಲೇ ಉಪನಯನ ಮಾಡಿ ಗುರುಕುಲಕ್ಕೆ ಕಳುಹಿಸಿದ. ಆ ವಟು ಒಂದು ತಿಂಗಳವರೆಗೆ ಕಲ್ಯಾಣತೀರ್ಥದಲ್ಲಿ ಸ್ನಾನಮಾಡಿ ತ್ರಿಷವಣಸ್ನಾನ ಸಂಧ್ಯಾ ಅಗ್ನಿಕಾರ್ಯಗಳನ್ನು ತಪ್ಪದೆ ಅನುಷ್ಠಾನಮಾಡಿದ್ದರಿಂದ ಅವನ ದೇಹ ಚಿತ್ತ ಎರಡೂ ಶುದ್ಧವಾದುವು. ಬಳಿಕ ಅವನು ಆ ಕಲ್ಯಾಣತೀರ್ಥದ ಪಶ್ಚಿಮ ದಡದಲ್ಲಿ ಕುಳಿತು ಘೋರವಾಗಿ ತಪಸ್ಸು ಮಾಡಲಾರಂಭಿಸಿದನು. ಅಲ್ಲಿಗೆ ನೀರು ಕುಡಿಯುವುದಕ್ಕಾಗಿ ಬರುತ್ತಿದ್ದ

---

1 ಮೃತನ, ಸತ್ತವನ. 2 ದೇಹ

ಜಿಂಕೆಗಳು ತಮ್ಮ ಕೋಂಬನ್ನು ಅವನ ಮೈಗೆ ತಿಕ್ಕಿ ತಿಕ್ಕಿ ಹೋಗುತ್ತಿದ್ದುವು. ಅವನು ಅದನ್ನೂ ಲಕ್ಷಿಸದೆ ಏಕಮನಸ್ಸಿನಿಂದ ತಪಸ್ಸು ಮಾಡಿದ.

ವರಪ್ರದಾನ — ಅವನ ತಪಸ್ಸಿಗೆ ಮೆಚ್ಚಿ ಸದಾಶಿವ ಪ್ರತ್ಯಕ್ಷನಾಗಿ 'ಜಿಂಕೆಗಳು ನಿನ್ನ ಮೈಗೆ ಕೊಂಬು ತಿಕ್ಕುತ್ತಿದ್ದುದರಿಂದ ನಿನಗೆ ಋಷ್ಯಶೃಂಗ[1] ಎಂದು ಹೆಸರಾಗಲಿ. ಮುಂದಿನ ಜನ್ಮದಲ್ಲಿ ಬ್ರಾಹ್ಮಣನಾಗಿ ಜೀವನ್ಮುಕ್ತನಾಗುವಿ' ಎಂದು ವರಕೊಟ್ಟನು. ಬಳಿಕ ಆ ಋಷಿ ಮನೆಗೆ ಹೋಗಿ ಕೆಲವು ಕಾಲ ಗೃಹಸ್ಥಾಶ್ರಮದಲ್ಲಿದ್ದು ಅನಂತರ ಸನ್ಯಾಸಗ್ರಹಣಮಾಡಿ ಈ ಋಷ್ಯಶೃಂಗಗಿರಿಯಲ್ಲೇ ಶಿಷ್ಯರಿಗೆ ವೇದಾಧ್ಯಯನ ಮಾಡಿಸುತ್ತಾ ವಾಸವಾಗಿದ್ದರು. ಅವರ ಹೆಸರೇ ಬೆಟ್ಟಕ್ಕೆ ಬಂದಿದೆ. ಇದರಲ್ಲಿ ಈಗಲೂ ಅನೇಕ ಮಹರ್ಷಿಗಳು ವಾಸವಾಗಿದ್ದಾರೆ. ಇಲ್ಲಿ ಅನೇಕ ತೀರ್ಥಗಳೂ ಇವೆ. **ಇಂತು 13ನೇ ಅಧ್ಯಾಯ.**

ಅಧ್ಯಾಯ 14 ಕೂರ್ಮ ಅನುಗ್ರಹ ತೀರ್ಥಗಳು

[ಅಧ್ಯಾ. 8-13ರ ಕಥಾಭಾಗ ನೋಡಿದರೆ ಕಲ್ಯಾಣತೀರ್ಥ, ಬಕದಾಲ್ಭ್ಯತೀರ್ಥ ಎರಡೂ ಚಕ್ರತೀರ್ಥದ ಅಜು-ಬಾಜಿನಲ್ಲೇ ಇರಬೇಕೆಂದು ಊಹಿಸಬೇಕಾಗುತ್ತದೆ. ಆದ್ದರಿಂದ ಕೂರ್ಮ, ಅನುಗ್ರಹ ಈ ಎರಡು ತೀರ್ಥಗಳೂ ಇಲ್ಲೇ—ಚಕ್ರತೀರ್ಥದ ಸುತ್ತಮುತ್ತಲಲ್ಲಿ ಎಲ್ಲೋ ಇರಬೇಕು.—ವಿ.ತೀ.]

ಕೂರ್ಮತೀರ್ಥ —ಬಕದಾಲ್ಭ್ಯತೀರ್ಥಕ್ಕೆ ದಕ್ಷಿಣದಲ್ಲಿದೆ. ಹಿಂದೆ ಕೂರ್ಮಾವತಾರ ಮಾಡಿದ ವಿಷ್ಣು ಇಲ್ಲೇ ತಪಸ್ಸುಮಾಡಿ ವರಪಡೆದ; ಆದ್ದರಿಂದಲೇ ಇದಕ್ಕೆ ಅವನ ಹೆಸರು ಬಂದಿದೆ. ಇದು ಪಾಪನಾಶಕ, ಪಿತೃತೃಪ್ತಿಜನಕ.

ಅನುಗ್ರಹತೀರ್ಥ — ಕೂರ್ಮತೀರ್ಥಕ್ಕೆ ಸಮೀಪದಲ್ಲಿದೆ. ಈ ತೀರ್ಥದ ಅನುಗ್ರಹದಿಂದ ಅತಿವಕ್ರನಿಗೆ ಸುಂದರರೂಪ ಬಂತು, ಅದರಿಂದ ಇದಕ್ಕೆ ಈ ಹೆಸರು ಪ್ರಸಿದ್ಧವಾಯಿತು. ಇದು ಜ್ಞಾನ-ವಿಜ್ಞಾನ ಸಾಧಕ.

ಅತಿವಕ್ರನ ಕಥೆ — ಕೃತಯುಗದಲ್ಲಿ **ವಿಪ್ರ (ವಿಶ್ವ) ಗುಪ್ತ**ನೆಂಬ ಪರಮಧಾರ್ಮಿಕ ರಾಜನಿದ್ದ. ಅವನ ರಾಣಿ **ರುಚಿಕಾ** ಸಹ ಧರ್ಮತತ್ಪರಳು. ಅವರು ಅನೇಕ ಕೆರೆ ಕಟ್ಟೆಗಳನ್ನು ಕಟ್ಟಿಸಿ ಆ ಪುಣ್ಯದಿಂದ ಅನೇಕ ವರ್ಷ ಸ್ವರ್ಗದಲ್ಲಿ ಸುಖಪಟ್ಟರು. ಆದರೆ ಒಂದು ಸಣ್ಣ ದೋಷದಿಂದ ಆ ರಾಜ ಅತಿದರಿದ್ರವಾದ ಒಂದು ವಿಪ್ರಕುಲದಲ್ಲಿ **ನಾಚಿಕೇತ**ನ ಮಗನಾಗಿ **ಅತಿವಕ್ರ**[2]ನೆಂಬ ಹೆಸರಿಗೆ ಸರಿಯಾಗಿ ಅಷ್ಟಾವಕ್ರರೂಪಿಯಾಗಿ ಹುಟ್ಟಿದ. ಅವನನ್ನು ನೋಡಿ ನಾಚಿಕೇತ ಇವನಿಗೆ ಹೇಗೆ ಮದುವೆಯಾದೀತೆಂದು ಬಹಳ ಪೇಚಾಡುತ್ತಿದ್ದ. ಆದರೆ ದೈವಘಟನೆಯಿಂದ ಅತಿವಕ್ರನಿಗೆ **ಸುರುಚಿ**ಯೆಂಬ ಪರಮ ಸುಂದರಿಯೂ ಸಾಧ್ವೀಮಣಿಯೂ ಆದ ಕನ್ಯೆಯೊಡನೆ ವಿವಾಹವಾಯಿತು.

---

1 ಶೃಂಗ–ಕೊಂಬು, ಕೋಡು. 2 ಅತಿ–ವಿಕಾರವಾದ, ವಕ್ತ್ರ–ಮುಖವುಳ್ಳವ.

ಸುರುಚಿಯ ಪತಿಭಕ್ತಿ — ಸುರುಚಿ ಕಾಂಚೀಪುರದ ಸುತಪಾ ಎಂಬ ಬ್ರಾಹ್ಮಣನ ಮಗಳು. ತಂದೆ ಅವಳನ್ನು ವಿದ್ಯಾಭ್ಯಾಸಕ್ಕಾಗಿ ಒಬ್ಬ ಗುರುವಿನ ಬಳಿಗೆ ಕಳುಹಿಸಲು ಆ ಚತುರ ಬಾಲಕಿ ಬಹು ಬೇಗ ಎಲ್ಲ ವಿದ್ಯೆಗಳಲ್ಲೂ ನಿಪುಣಳಾದಳು, ಆದರೆ ಅವಳ ರೂಪದಿಂದ ಮೋಹಿತನಾದ ಗುರುವೇ ಅವಳ ಪಾಣಿಗ್ರಹಣ ಮಾಡಿಕೊಳ್ಳಬೇಕೆಂದು ಬಯಸಿದನು. ತಂದೆ ಸಮಾನ ಎಂದು ತಿಳಿದು ಗುರುವನ್ನು ಮದುವೆಯಾಗುವುದಕ್ಕೆ ಸುರುಚಿ ಒಡಂಬಡಲಿಲ್ಲ. ಅವನು ಆ ರೋಷದಿಂದ ಛಲಹಿಡಿದು ಅವಳನ್ನು ವಂಚಿಸಿ ಈ ಕುರೂಪಿಗೆ ಗಂಟುಹಾಕಿಸಿದ. ಆದರೂ ಎದೆಗುಂದದೆ ಪತಿಗೆ ಸುಂದರರೂಪ ಬರಲೆಂದು ಸರ್ವಮಂಗಳೆಯನ್ನು ಆರಾಧಿಸಿದಳು. ದೇವಿ ಅವಳಿಗೆ ಸ್ವಪ್ನದಲ್ಲಿ ಬಂದು 'ನಿನ್ನ ಪತಿಯೊಡನೆ ಅನುಗ್ರಹತೀರ್ಥಕ್ಕೆ ಬಾ' ಎಂದು ಕರೆ ಹೇಳಿದಳು.

ಸುಂದರಕಾಯ ಪ್ರಾಪ್ತಿ—ದೇವಿಯ ಆಜ್ಞೆಯಂತೆ ಸುರುಚಿ ಅನುಗ್ರಹ ತೀರ್ಥಕ್ಕೆ ಪತಿಯನ್ನೂ ಕರೆದು ಕೊಂಡು ಹೋದಳು. ಆದರೆ ಅಲ್ಲಿ ಹೇಳಿ ಕೇಳುವವರು ಯಾರೂ ಇಲ್ಲದ್ದನ್ನು ಕಂಡು ವನದೇವತೆಗಳ ಎದೆ ಕರಗುವಂತೆ ದುಃಖದಿಂದ ಪ್ರಲಾಪಿಸಿದಳು. ಗೌರೀ ಅವಳ ಪ್ರಲಾಪಕೇಳಲಾರದೆ ಶೂಲಪಾಣಿಯನ್ನು ಅವರಿಬ್ಬರ ಕಷ್ಟನಿವಾರಣೆಮಾಡಿ ಅನುಗ್ರಹಿಸುವಂತೆ ಕೇಳಿಕೊಂಡಳು. ಶಂಭು 'ಅತಿವಕ್ತ್ರ ಹಿಂದೆ ರಾಜನಾಗಿ ಧರ್ಮಕಾರ್ಯಗಳನ್ನೇನೋ ಮಾಡಿದ. ಆದರೆ ಒಂದು ಸಲವಾದರೂ ಶಿವಾಲಯಕ್ಕೆ ಬರಲಿಲ್ಲ. ಒಂದು ದಿನವಾದರೂ ನನ್ನ ದರ್ಶನ ಪ್ರಸಾದ ತೆಗೆದು ಕೊಳ್ಳಲಿಲ್ಲ. ಆ ದೋಷದಿಂದ ಕುರೂಪಿಯಾಗಿದ್ದಾನೆ. ಜನ್ಮಾಂತರದಲ್ಲಿ ಒಳ್ಳೆಯ ಮನಸ್ಸಿನಿಂದ ಕನ್ಯಾದಾನ ಮಾಡಿದ್ದರಿಂದ ಸ್ಫುರದ್ರೂಪಿಯಾದ ಭಾರ್ಯೆ ದೊರೆತಿದಾಳೆ ಎಂದು ನುಡಿದು ಉಮೆಯೊಡನೆ ಅನುಗ್ರಹತೀರ್ಥದ ಬಳಿಗೆ ಬಂದು ಆ ದೀನ ದಂಪತಿಗಳಿಗೆ ದರ್ಶನ ಕೊಟ್ಟು, ಅವರಿಗೆ ಆ ತೀರ್ಥದಲ್ಲಿ ಸ್ನಾನ ಮಾಡುವಂತೆ ಹೇಳಿ ಅದೃಶ್ಯನಾದ. ತೀರ್ಥಸ್ನಾನದಿಂದ ಅತಿವಕ್ತ್ರನಿಗೆ ದಿವ್ಯದೇಹಬಂತು. ಅವನೂ ಸುರುಚಿಯೂ ಹಂಪೆಗೆ ಹೋಗಿ ವಿರೂಪಾಕ್ಷನನ್ನು ಸೇವಿಸಿ ಸದ್ಗತಿ ಪಡೆದರು, ಇಂತು 14ನೇ ಅಧ್ಯಾಯ.

ಅಧ್ಯಾಯ 15 ಕ್ರತುತೀರ್ಥ

[ಕ್ರತುತೀರ್ಥ ಗಂಧರ್ವಪರ್ವತದಲ್ಲಿದೆಯೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದರೆ ಗಂಧರ್ವ ಪರ್ವತ ಯಾವುದೋ ತಿಳಿಯದಾಗಿದೆ. ಅಚ್ಯುತರಾಯನ ಗುಹೆಗೆ ಪೂರ್ವದ ಕಡೆ ಮತಂಗಪರ್ವತಕ್ಕೆ ಸುಮಾರು ಈಶಾನ್ಯ ದಿಕ್ಕಿನಲ್ಲಿ 'ಗಂಧಮಾದನಪರ್ವತ' ಎಂಬ ಗುಡ್ಡವಿದೆ ಇದೇ ಗಂಧರ್ವ ಪರ್ವತ ಇರಬೇಕು. ಹೆಸರಿನಲ್ಲಿ ಪರಿಪಾಟಾಗುವುದೇನೂ ಅತಿಶಯವಲ್ಲ. ಮಲಾಪಹಾರಿಣಿ, ಮನ್ಮಥತೀರ್ಥ (ಅಧ್ಯಾಯ 70, 94ಗಳ ಮುಖಟಿಪ್ಪಣಿ) ಎಂಬ, ಹೆಸರುಗಳನ್ನು ಹೋಲಿಸಿ.

ಈ ಊಹೆ ಸಾಧುವಾಗಿದ್ದರೆ ಕ್ರತು ತೀರ್ಥವೂ ಅದರ ಬಳಿಯಲ್ಲೇ ಎಲ್ಲೋ ಇರಬೇಕು.—ವಿ. ತೀ.]

ಪುಂಡರೀಕನ ಹಾವಳಿ — ಪೂರ್ವಕಾಲದಲ್ಲಿ ರಾಥಂತರಕಲ್ಪದಲ್ಲಿ ಮಾಯಾವಿಯೂ ದೇವತಾಗಣವಂಚಕನೂ ಕ್ರೂರನೂ ಆದ **ಪುಂಡರೀಕ**ನೆಂಬ ಮಹಾಸುರನಿದ್ದ. ಅವನು ದೇವಮಾನದಲ್ಲಿ ನೂರುವರ್ಷ ವಿಷ್ಣುವನ್ನು ತಪಸ್ಸುಮಾಡಿ ದೇವದಾನವ-ಯಕ್ಷ-ಭೂತಾದಿಗಳಿಂದ ಅವಧ್ಯತ್ವ ವರಪಡೆದು ದೇವತೆಗಳನ್ನೂ ಮುನಿಗಳನ್ನೂ ಹಿಂಸಿಸಲಾರಂಭಿಸಿದ. ಅವನಿಂದ ಪೀಡಿತರಾದ ಇಂದ್ರಾದಿಗಳು ಬ್ರಹ್ಮನನ್ನು ಮುಂದೆ ಮಾಡಿಕೊಂಡು ವಿಷ್ಣುವನ್ನು ಮೊರೆಹೊಕ್ಕರು. ಆಗ ವಿಷ್ಣು 'ಈ ಕೆಲಸ ಹರನಿಂದಲೇ ಸಾಧ್ಯ' ಎಂದು ಹೇಳಿ ಅವರನ್ನು ಕೈಲಾಸ ನಿಲಯಕ್ಕೆ ಕಳುಹಿಸಿಕೊಟ್ಟ. ಭಕ್ತರಕ್ಷಕನಾದ ತ್ರಿಪುರ ಹರನು ಅವರಿಗೆ ಅಭಯಕೊಟ್ಟು 'ನೀವೆಲ್ಲ ವಿರೂಪಾಕ್ಷಕ್ಷೇತ್ರದಲ್ಲಿರುವ ಗಂಧರ್ವಪರ್ವತದ ಬಳಿ ಕ್ರತು ಆರಂಭಮಾಡಿ. ಆ ಸಂದರ್ಭದಲ್ಲಿ ನಾನು ಆ ದೈತ್ಯನ ವಧೆಮಾಡುವೆನೆಂ'ದು ನುಡಿದನು.

ಕ್ರತು ತೀರ್ಥೋತ್ಪತ್ತಿ — ಅದರಂತೆ ದೇವತೆಗಳೆಲ್ಲ ಕ್ರತು ಆರಂಭಿಸಿದರು. ಹೋಮಕ್ಕೆ ಆರಂಭವಾಗುವುದೇ ತಡ ಪುಂಡರೀಕ ಹೋಮಾಗ್ನಿಯಲ್ಲಿ ಮಲಮೂತ್ರಾದಿಗಳನ್ನು ಸುರಿಸುವುದಕ್ಕೆ ಹವಣಿಸುತ್ತಿದ್ದ. ಅಷ್ಟರಲ್ಲೇ ವಿರೂಪಾಕ್ಷ ಪ್ರತ್ಯಕ್ಷನಾಗಿ ಆವಿರ್ಭವಿಸಿ ಪುಂಡರೀಕನನ್ನು ಸಂಹರಿಸಿ ಆ ಅಗ್ನಿಯಲ್ಲೇ ಅಂತರ್ಧಾನನಾದ. ಕ್ರತು ಸಾಂಗವಾಗಿ ನೆರವೇರಿತು. ಕಡೆಯಲ್ಲಿ ಆ ವಿರೂಪಾಕ್ಷನ ವರದಿಂದ ಕ್ರತು ಮಾಡಿದ ಸ್ಥಳ ನೀರಿನಿಂದ ತುಂಬಿಕೊಂಡು ಕ್ರತು ತೀರ್ಥವೆನಿಸಿತು. ಇದರಲ್ಲಿ ಸ್ನಾನಮಾಡುವವನು ಉತ್ತಮಗತಿ ಐದುತ್ತಾನೆ. ಈ ಆಖ್ಯಾನ ಶ್ರದ್ಧೆಯಿಂದ ಪಠಿಸುವವರೂ ಸರ್ವ ಕ್ರತು ಫಲ ಹೊಂದಿ ವಿಷ್ಣುಲೋಕ ಸೇರುತ್ತಾರೆ. **ಇಂತು 15ನೇ ಅಧ್ಯಾಯ.**

ಅಧ್ಯಾಯ 16 ಕಿನ್ನರೇಶ

[ಇಲ್ಲಿಂದ ಮುಂದೆ 4 ಅಧ್ಯಾಯಗಳಲ್ಲಿ ಕಿನ್ನರೇಶನ ವೃತ್ತಾಂತ ಹೇಳಿದೆ. ಹಿಂದೆ ಅಧ್ಯಾಯ 8 (ii)ರಲ್ಲಿ ಟಿಪ್ಪಣಿಯಲ್ಲಿ ಹೇಳಿದಂತೆ ಕಿನ್ನರೇಶನ ಗುಡಿ ಬಿಕ್ಕಸಾಗರದ ಬಳಿಯಿದೆ.—ವಿ. ತೀ.]

ಕಿನ್ನರೇಶನ ದರ್ಶನ — ಕ್ರತು ತೀರ್ಥ ನೋಡಿಕೊಂಡು ಸಪ್ತರ್ಷಿಗಳು ಅರ್ಧಕ್ರೋಶ ವಿಸ್ತಾರವುಳ್ಳ ಪೂರ್ವದ್ವಾರದ ಬಳಿಗೆ ಬಂದು ನಾನಾ ಮರಗಿಡಗಳಿಂದಲೂ ಗುಡಿಗೋಪುರಗಳಿಂಲೂ ತಳಿರು ತೋರಣಗಳಿಂದಲೂ ಅಲಂಕೃತವಾಗಿದ್ದ ಶಿವಭಕ್ತರಿಂದಲೂ ಗಣಗಳಿಂದಲೂ ಗಿಜಿ-ಗಿಜಿ ಎನ್ನುತ್ತಿದ್ದ ಕಿನ್ನರೇಶನ ಗುಡಿಯನ್ನು ಕಂಡರು. ಗರ್ಭಾಲಯ ಪ್ರವೇಶಮಾಡಿ **ಮಾತಂಗೀ** ಸಹಿತ ದಿವ್ಯ ಸಿಂಹಾಸನ ಮಂಡಿತನಾದ ಕಿನ್ನರೇಶನನ್ನೂ, ಬಲಗಡೆ **ಪ್ರಸನ್ನಮೂರ್ತಿ** ಎಂಬ ಗಣಪನನ್ನೂ **ಘುರ್ಘುರ** ಎಂಬ ಭೈರವನನ್ನೂ **ಅಸಿತಾಂಗ**ನೆಂಬ ಕ್ಷೇತ್ರಪಾಲನನ್ನೂ ಮುಂದುಗಡೆ

ನಂದೀ ಚಂಡಿಕೇಶ ಭೃಂಗಿರಿಟರನ್ನೂ ಕಂಡು ಸಾಷ್ಟಾಂಗ ನಮಸ್ಕಾರಮಾಡಿ ರುದ್ರ ಘೋಷದೊಡನೆ ವಿಧಿಪೂರ್ವಕ ಷೋಡಶೋಪಚಾರ ಪೂಜೆ*ಮಾಡಿದರು.

ಪೂಜೆ ಮುಗಿದ ಬಳಿಕ ಕ್ಷೇತ್ರಪಾಲ ಅವರಿಗೆ ಕಿನ್ನರೇಶನ ಕಥೆ ಹೇಳಿದ.

ಗಂಧರ್ವರಿಗೆ ಇಂದ್ರಶಾಪ -- ಪೂರ್ವದಲ್ಲಿ ಒಂದು ದಿನ ದೇವೇಂದ್ರನು ತನ್ನ ಸುಧರ್ಮಾ ಎಂಬ ದೇವಸಭೆಯಲ್ಲಿ ದೇವತೆಗಳಿಂದಲೂ ಮಹರ್ಷಿಗಳಿಂದಲೂ ಪರಿವೃತನಾಗಿ ಸಿಂಹಾಸನಾರೂಢನಾಗಿದ್ದಾಗ ಘೃತಾಚೀ, ಮೇನಕಾ, ರಂಭಾ, ಊರ್ವಶೀ, ತಿಲೋತ್ತಮಾ, ಸುಕೇಶೀ, ಮಂಜುಘೋಷಾದಿ ವೇಶ್ಯೆಯರು ಗಾನಮಾಡಲು ಎಲ್ಲರೂ ಆ ಗಾನವನ್ನು ಪ್ರಶಂಸಿಸಿದರು. ಅದನ್ನು ಸಹಿಸಲಾರದೆ ಗಂಧರ್ವರು ಗರ್ವದಿಂದ ಇಂದ್ರನ ಅಪ್ಪಣೆಯಿಲ್ಲದೆ ಸಭಾಧರ್ಮಕ್ಕೆ ವಿರುದ್ಧವಾಗಿ ಹಾಡಲಾರಂಭಿಸಿದರು. ಇಂದ್ರನು ಇವರ ಗಾನಕ್ಕೆ ಮೆಚ್ಚಿಗೆ ಕೊಡದಿರಲು ಅವರು ಕೋಪಿಸಿಕೊಂಡು ಆಗ್ರಹದಿಂದ ಇಂದ್ರನನ್ನೇ ಆಕ್ಷೇಪಿಸಿದರು. ಇಂದ್ರನಿಗೆ ರೇಗಿತು. ಅವನು ಗಂಧರ್ವರಿಗೆ 'ನಿಮಗೆ ಬಹಳ ಗರ್ವಬಂದಿದೆ. ಭೂಲೋಕದಲ್ಲಿ ಮನುಷ್ಯರಾಗಿ ಹುಟ್ಟಿ ಬಹಳ ಕಾಲ ದುಃಖಕ್ಕೊಳಗಾಗಿರಿ' ಎಂದು ಶಾಪ ಕೊಟ್ಟುಬಿಟ್ಟ.

ನಾರದರ ಉಪದೇಶ — ಗಂಧರ್ವರು ಇಂದ್ರಶಾಪದಿಂದ ಮನುಷ್ಯರಾಗಿ ಹುಟ್ಟಿ ನಾನಾದುಃಖಗಳಿಗೆ ಈಡಾಗಿ ಉದ್ಧಾರಕರನ್ನು ಕಾಣದೆ ಕಾಡು ಕಾಡು ಸುತ್ತುತ್ತಿದ್ದಾಗ ಅವರಿಗೆ ಅಕಸ್ಮಾತ್ ನಾರದರ ದರ್ಶನವಾಯಿತು. ಅದೇ ಶುಭ ಸೂಚನೆಯೆಂದು ತಿಳಿದು ಅವರೆಲ್ಲರೂ ನಾರದರನ್ನು ಮೊರೆಹೊಕ್ಕು ತಮ್ಮ ಕತೆ ಹೇಳಿಕೊಂಡು ಉದ್ಧಾರಮಾಡುವಂತೆ ಬೇಡಿಕೊಂಡರು. ಅದಕ್ಕೆ ನಾರದರು

'ಕ್ಷೇತ್ರಾಣಾಮುತ್ತಮಾ ಪಂಪಾ ದೇವಾನಾಂ ಚ ಮಹೇಶ್ವರಃ ।

ಕ್ಷೇತ್ರಗಳಲ್ಲೆಲ್ಲಾ ಹಂಪೆ ಉತ್ತಮ; ದೇವತೆಗಳಲ್ಲೆಲ್ಲಾ ವಿರೂಪಾಕ್ಷ. ಆದ್ದರಿಂದ ಹಂಪೆಗೆ ಹೋಗಿ ಆ ತ್ರಿನೇತ್ರನನ್ನು ಆರಾಧಿಸಿ. ಅದರಿಂದ ನಿಮ್ಮ ಶಾಪ ನಿವೃತ್ತಿಯಾಗುವುದು' ಎಂದು ಬೋಧಿಸಿ ಸತ್ಯಲೋಕಕ್ಕೆ ತೆರಳಿದರು.

---

*ಷೋಡಶ (16) ಉಪಚಾರಗಳು ಯಾವುವೆಂದರೆ— 1. ಧ್ಯಾನ, 2. ಆವಾಹನ, 3. ಆಸನ, 4. ಪಾದ್ಯ, 5. ಅರ್ಘ್ಯ, 6. ಆಚಮನ, 7. ಅಭಿಷೇಕ, 8. ವಸ್ತ್ರ, 9, ಯಜ್ಞೋಪವೀತ, 10. ಗಂಧ, 11. ಪುಷ್ಪ, 12. ಧೂಪ, 13. ದೀಪ, 14. ನೈವೇದ್ಯ, 15. (ತಾಂಬೂಲ) ನೀರಾಜನ ಅಥವಾ ಮಂಗಳಾರತಿ, 16. ಪ್ರದಕ್ಷಿಣ ನಮಸ್ಕಾರ ಅಥವಾ

"ಆಸನಂ ಸ್ವಾಗತಂ ಪಾದ್ಯ-ಮರ್ಘ್ಯ, ಮಾಚಮನೀಯಕಮ್ ।
ಮಧುಪರ್ಕಾ, ಚಮ, ಸ್ನಾನಂ ವಸನಾ, ಭರಣಾನಿ ಚ ।
ಗಂಧ ಪುಷ್ಪೇ ಧೂಪ, ದಿಪಾ ನೈವೇದ್ಯಂ ವಂದನಂ ತಥಾ ॥"

ಎಂಬ ಹದಿನಾರು. ವಸನ-ವಸ್ತ್ರ'

ಈಶ್ವರಾರಾಧನೆ — ನಾರದರ ಉಪದೇಶ ಕೇಳಿ ಗಂಧರ್ವರು ವಿರೂಪಾಕ್ಷನ ದರ್ಶನಕ್ಕಾಗಿ ಹೋಗುತ್ತಿರಲು ಅಲ್ಲಿದ್ದ ಭೈರವ ಅವರನ್ನಡ್ಡಗಟ್ಟಿ 'ನೀವು ಪಾಪಕೃತರು, ವಿರೂಪಾಕ್ಷನ ದರ್ಶನಕ್ಕೆ ಅನರ್ಹರು' ಎಂದು ತಡೆದನು. ವಜ್ರಾಘಾತಸದೃಶವಾದ ಆ ಮಾತು ಕೇಳಿ ಅವರು ಕಲ್ಯಾಣ ತೀರ್ಥಕ್ಕೆ ಬಂದು ಅದರಲ್ಲಿ ಸ್ನಾನಮಾಡಿದರು. ಅಷ್ಟರಿಂದಲೇ ಅವರ ಪಾಪವೆಲ್ಲ ತೊಳೆದು ಹೋಗಿ ಮನಸ್ಸು ನಿರ್ಮಲವಾಯಿತು. ಆ ಆನಂದಭರದಿಂದ ಅವರು ಸದಾಶಿವನನ್ನು ನಾದಪ್ರಿಯನೆಂದು ಭಜನೆಮಾಡಿದರು.

> ನಾದಪ್ರಿಯೋಽಸಿ ಭೂತೇಶ ನಾದಾತ್ಮನ್ ನಾದಸಂಭವ ।
> ನಾದೋಪಜೀವಿನಾಂ ಸದ್ಯಃ ಕೃಪಾಂ ನಃ ಕರ್ತುಮರ್ಹಸಿ[1] ॥

ಗಂಧರ್ವರ ಶಾಪನಿವೃತ್ತಿ — ಅವರ ಮಧುರವಾದ ಗಾನಕ್ಕೆ ಮೆಚ್ಚಿ ಧೂರ್ಜಟಿ ಪ್ರತ್ಯಕ್ಷನಾಗಿ ಅವರಿಗೆ 'ಇನ್ನು ಮುಂದೆ ನೀವು ನನ್ನ ಬಳಿಯಲ್ಲೇ ಕಿನ್ನರರೆಂಬ ಹೆಸರಿನಿಂದ ಗಾನಮಾಡಿಕೊಂಡಿರಿ. ನಿಮ್ಮ ನೆನಪಿಗಾಗಿ ನಾನು ಕಿನ್ನರೇಶ ಎಂಬ ಹೆಸರಿನಿಂದ ಮಾತಂಗಿಯೊಡನೆ ಈ ಪೂರ್ವದ್ವಾರದಲ್ಲೇ ನೆಲೆಸುತ್ತೇನೆ. ನನ್ನ ಬಳಿ ಬಂದು ಸುಸ್ವರದಿಂದ ಗಾನಮಾಡುವವರಿಗೆ ಸಕಲಾಭೀಷ್ಟಗಳನ್ನೂ ಸಲ್ಲಿಸುತ್ತೇನೆ' ಎಂದು ವರಕೊಟ್ಟನು. ಅದರಂತೆ ಶಾಪಮುಕ್ತರಾದ ಗಂಧರ್ವರು ಕಿನ್ನರೇಶನ ಸೇವೆಯಲ್ಲಿ ಆಸಕ್ತರಾದರು. ಈ ಕಥೆಯನ್ನು ಆದರದಿಂದ ಶ್ರವಣ ಮಾಡುವವರಿಗೆ ಸದ್ಗತಿಯಾಗುತ್ತದೆ. **ಇಂತು 16ನೇ ಅಧ್ಯಾಯ.**

ಅಧ್ಯಾಯ 17 ಮಾತಂಗೀವೃತ್ತಾಂತ

[ಮತಂಗಋಷಿಗಳ ವರ ಪುತ್ರಿಯೇ ಮಾತಂಗೀ. ಮತಂಗರ ಪೂರ್ವಜನ್ಮವೃತ್ತಾಂತ ಮುಂದೆ 78ನೇ ಅಧ್ಯಾಯದಲ್ಲಿ ಬರುವುದು.—ವಿ. ತೀ.]

ಮತಂಗಋಷಿ — ವಿಖ್ಯಾತರಾದ ಮತಂಗಋಷಿ ಪಂಪಾಕ್ಷೇತ್ರದಲ್ಲಿ ವಾಸಮಾಡುತ್ತಾ ತಪೋನಿಷ್ಠರಾಗಿ ಒಂದು ತಿಂಗಳು ಜಲಾಹಾರ, ಎರಡು ತಿಂಗಳು ವಾಯ್ವಾಹಾರ, ಕಡೆಗೆ ಒಂದು ವರ್ಷ ನಿರಾಹಾರ ಈ ಕ್ರಮದಿಂದ ಉಗ್ರವಾದ ತಪಸ್ಸು ಮಾಡಲು ಈಶ್ವರ ಪ್ರತ್ಯಕ್ಷನಾಗಿ ವರ ಬೇಡುವಂತೆ ಹೇಳಿದನು. ಮತಂಗರು ವಂಶೋದ್ಧಾರಕನಾದ ಪುತ್ರನನ್ನು ಬೇಡಲು ಶ್ರೀಕಂಠನು ನಿನಗೆ ಹುಟ್ಟುವ ಪುತ್ರ ಅಲ್ಪಾಯುವೂ ಮೂಢಮತಿಯೂ ಆಗುವನೆನ್ನಲು ಮತಂಗರು 'ಹಾಗಾದರೆ ಪಾರ್ವತೀ ಅಂಶಸಂಭೂತಳಾದ ಪುತ್ರಿಯೇ ಹುಟ್ಟಲಿ. ನೀನೇ ನನ್ನ ಅಳಿಯನಾಗಿ ಅವಳನ್ನು ಪರಿಗ್ರಹಿಸಿ ನನಗೆ ಅನುಗ್ರಹಿಸು' ಎಂದು ಕೇಳಿಕೊಳ್ಳಲು ಶರ್ವನು ಹಾಗೇ ಆಗಲೆಂದು ಒಪ್ಪಿ ಅಂತರ್ಧಾನನಾದ.

---

1 ಸದ್ಯಃ–ಈಕ್ಷಣ. ನಃ-ನಮಗೆ. ನಾದೋಪಜೀವಿಗಳಾದ ನಮ್ಮ ಮೇಲೆ ಕೃಪೆ ಮಾಡು ಎಂದು ಭಾವ.

ಮಾತಂಗಿಯ ವರಣ — ವರಪ್ರಸಾದದಂತೆ ಮತಂಗರಿಗೆ ಸರ್ವಲಕ್ಷಣ ಸಂಪನ್ನಳಾದ ಮಾತಂಗೀ ಎಂಬ ಕನ್ಯೆ ಹುಟ್ಟಿ ದಿನೇ ದಿನೇ ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿ ಹೊಂದುತ್ತಾ ನವಯೌವನದಲ್ಲಿ ಕಾಲಿಟ್ಟಳು. ಒಂದು ದಿನ ಅವಳು ವಿಹಾರಾರ್ಥ ಹೊರಗೆ ಹೋಗಿದ್ದಾಗ ಅಲ್ಲಿ ಇಲ್ಲಿ ಅಡ್ಡಾಡುತ್ತಾ ಒಂದು ಕಡೆ ಕುಳಿತು ವೀಣೆಯನ್ನು ಬಾರಿಸುತ್ತಾ ದಿವ್ಯವಾಗಿ ಗಾನಮಾಡಲಾರಂಭಿಸಿದಳು. ಹತ್ತಿರದಲ್ಲೇ ಇದ್ದ ಕಿನ್ನರೇಶ ಆ ಗಾನಕ್ಕೆ ಮುಗ್ಧನಾಗಿ ಮತಂಗರ ಬಳಿಗೆ ಹೋಗಿ ಆ ಕನ್ಯಾ ಮಣಿಯನ್ನು ವರಿಸಿ ಪಾಣಿಗ್ರಹಣಮಾಡಿಕೊಳ್ಳಬೇಕೆಂದು ನಿಶ್ಚಯಿಸಿ ಬ್ರಾಹ್ಮಣವೇಷ ದಿಂದ ಮತಂಗರ ಮನೆಗೆ ಅತಿಥಿಯಾಗಿ ಹೋದನು.

ಮತಂಗರು ಆ ಅತಿಥಿಯನ್ನು ಸತ್ಕರಿಸಿ ಭೋಜನಕ್ಕೆ ಕೂಡಿಸಿದರು. ಇಪ್ಪತ್ತು ವರುಷದ ನವತಾರುಣ್ಯದಲ್ಲಿದ್ದ ಅತಿಥಿ ಆಪ್ರೋಶನ ತೆಗೆದುಕೊಳ್ಳುವಾಗ 'ನಿನ್ನ ಮಗಳನ್ನು ನನಗೆ ವಿವಾಹಮಾಡಿಕೊಟ್ಟರೆ ನಾನು ಊಟಕ್ಕೆ ಕೂಡುತ್ತೇನೆ' ಎಂದ. ಮತಂಗರಿಗೆ ದುಗುಡ ಬಿತ್ತು; ಮಗಳನ್ನು ಶಿವನಿಗೆ ಕೊಡಬೇಕೇ! ಇವನಿಗೆ ಕೊಡಬೇಕೆ? ಕೊನೆಗೆ ಮಗಳನ್ನೇ ವಿಚಾರಿಸಿದರು. ಮಾತಂಗೀ ಒಂದೇ ಮನಸ್ಸಿನಿಂದ 'ಸಾಕ್ಷಾತ್ ಶಿವನೇ ಅತಿಥಿರೂಪದಿಂದ ಬರುತ್ತಾನೆಂಬುದು ನಿನಗೆ ತಿಳಿಯದೆ? ನನ್ನನ್ನು ಆ ಅತಿಥಿಗೇ ಕೊಡುವಂತೆ ವಾಗ್ದಾನ ಮಾಡು. ತಪ್ಪೇನಿದೆ?' ಎಂದು ಹೇಳಿದಳು. ಅತಿಥಿ ಋಷಿಯ ವಚನ ತೆಗೆದುಕೊಂಡು ಊಟಮಾಡಿ ಒಂದು ತಿಂಗಳ ಅವಧಿ ಕೇಳಿ ಹೊರಟು ಹೋದ. ಇತ್ತಲಾಗಿ ಋಷಿಗಳು ವಿವಾಹಕ್ಕೆ ಸಿದ್ಧತೆಗಳನ್ನೆಲ್ಲಾ ಮಾಡಿಕೊಳ್ಳಲಾರಂಭಿಸಿದರು. ಇಂತು 17ನೇ ಅಧ್ಯಾಯು.

ಅಧ್ಯಾಯ 18 ಮಾತಂಗೀ ವಿವಾಹ

ವಿವಾಹ ಸಿದ್ಧತೆ — ಮತಂಗರು ಮನೆಗೆ ಸುಣ್ಣಹಚ್ಚಿಸಿ ತೋರಣಗಳನ್ನೂ ಮಂಟಪಗಳನ್ನೂ ಕಟ್ಟಿಸಿದರು. ಸಿದ್ಧತೆಯೆಲ್ಲ ಆಯಿತು. ವಿವಾಹ ಲಗ್ನದ ದಿನವೂ ಬಂತು. ಆದರೆ ವರನೇ ಬರಲಿಲ್ಲ ಮತಂಗರು ವ್ಯಾಕುಲರಾಗಿ ಪರಮೇಶ್ವರನನ್ನು ಬಗೆ ಬಗೆಯಾಗಿ ಬೇಡಿಕೊಂಡರು. ಅವರು ತಲ್ಲಣಿಸುತ್ತಿರುವುದನ್ನು ಕಂಡು ಪಶುಪತಿ ಅವರಿಗೆ ಸಮಾಧಾನ ಮಾಡುವುದಕ್ಕೆ ನಂದಿಯನ್ನು ಕಳುಹಿಸಿದ. ನಂದಿಯ ಭರವಸೆ ಯಿಂದ ಮತಂಗರಿಗೆ ಸ್ವಲ್ಪ ಸಮಾಧಾನವಾಯಿತು.

ಮತಂಗೀ–ಕಿನ್ನರೇಶ ವಿವಾಹ ಘಟ್ಟ

ಲಗ್ನಮುಹೂರ್ತಕ್ಕೆ ಸರಿಯಾಗಿ ಕಿನ್ನರೇಶ ಬ್ರಹ್ಮವಿಷ್ಣ್ವಾದಿ ದೇವತೆಗಳೊಡನೆ ವಿವಾಹ ಮಂಟಪದಲ್ಲಿ ಆವಿರ್ಭವಿಸಿದನು. ಒಡನೆಯೇ ದೇವದುಂದುಭಿಗಳು ಮೊಳಗಿದುವು. ಆದರೆ ಕಿನ್ನರೇಶನನ್ನು ಕಂಡು ಮತಂಗರಿಗೆ ಏನು ಮಾಡುವುದಕ್ಕೂ ದಿಕ್ಕು ತೋರದಂತಾಯಿತು. ತಾವು ಮಾತು ಕೊಟ್ಟಿದ್ದ ಬ್ರಾಹ್ಮಣ ಬಂದರೆ ಏನು ಮಾಡಬೇಕೆಂದು ಪೇಚಾಡುತ್ತಿದ್ದ ತಂದೆಯನ್ನು ನೋಡಿ ಮತಂಗಿ 'ಅಪ್ಪಾ, ಪೇಚಾಡಲು

ಕಾರಣವಿಲ್ಲ. ಆ ಅತಿಥಿಯೇ ಈ ಕಿನ್ನರೇಶ. ಇವನಿಗೇ ನನ್ನನ್ನು ಕೊಟ್ಟು ನಿಶ್ಚಿಂತೆಯಿಂದ ವಿವಾಹ ಮಾಡಿಕೊಡು' ಎಂದು ಧೈರ್ಯ ಹೇಳಿದಳು.

ಆಗ ಮತಂಗರು ಸಂಶಯವನ್ನು ತೊರೆದು ಕಿನ್ನರೇಶನನ್ನು ಆಸನದಲ್ಲಿ ಕೂಡಿಸಿ ಮಧುಪರ್ಕಾದಿ ಉಪಚಾರ ಮಾಡಿ

ಚಿದ್ಗೋತ್ರಜಾಂ ಮತಂಗಸ್ಯ ಪುತ್ರೀಮೇತಾಂ ಸುಲಕ್ಷಣಾಮ್ ।
ವರಾಯಾಽಮೃತಗೋತ್ರಾಯ ಕಿನ್ನರೇಶಾಯ ಶಂಭವೇ ।
ದಿಶಾಮಿ ಕನ್ಯಾದಾನೇನ ವಿರೂಪಾಕ್ಷಃ ಸ ತುಷ್ಯತಾಮ್ ॥

ಎಂದು ಹೇಳಿ ಸಾಲಂಕೃತ ಕನ್ಯಾದಾನ ಮಾಡಿಕೊಟ್ಟರು.

ಸಂಶಯ ಪರಿಹಾರ:—ವಿವಾಹ ಮುಹೂರ್ತ ಕಳೆದೊಡನೆಯೇ ಕಿನ್ನರೇಶ ವಿವಾಹ ಮಂಟಪದಿಂದ ಅದೃಶ್ಯನಾಗಿ ಬಿಟ್ಟ. ಅವನ ಸ್ಥಳದಲ್ಲಿ ಅಂದು ಅತಿಥಿಯಾಗಿ ಬಂದಿದ್ದ ಬ್ರಾಹ್ಮಣ ಯುವಕ ಕಾಣಿಸಿಕೊಂಡ. ಎಲ್ಲರೂ ಕಕ್ಕಾಬಿಕ್ಕಿಯಾದರು. ಯಾರಿಗೂ ಇದರ ಅರ್ಥವೇ ಆಗಲಿಲ್ಲ. ಆಗ 'ಈ ಬ್ರಾಹ್ಮಣನೇ ಶಿವ. ಶಿವನಿಗೂ ಬ್ರಾಹ್ಮಣನಿಗೂ ಐಕ್ಯ ತಿಳಿಯಿರಿ. ಬ್ರಾಹ್ಮಣರು ತೃಪ್ತರಾದರೆ ಶಿವ ತೃಪ್ತನಾಗುವನೆಂಬ ಪ್ರಮೇಯವನ್ನು ಎಲ್ಲರಿಗೂ ತಿಳಿಸುವುದಕ್ಕಾಗಿಯೇ ಪರಮೇಶ್ವರ ಹೀಗೆ ಮಾಡಿದ್ದಾನೆ' ಎಂದು ಅಶರೀರವಾಣಿಯಾಯಿತು. ಎಲ್ಲರ ಸಂಶಯವೂ ನಿವಾರಣೆಯಾದ ಬಳಿಕ ಕಿನ್ನರೇಶ ಕಾಣಿಸಿಕೊಂಡು· ವಿವಾಹವನ್ನು ಸಂಭ್ರಮದಿಂದ ಮುಗಿಸಿ ಎಲ್ಲರನ್ನೂ ಬೀಳ್ಕೊಟ್ಟು ತಾನೂ ಮಾತಂಗೀ ಸಹಿತ ತನ್ನ ಮನೆಗೆ ಬಿಜಯಮಾಡಿದ.

ಈ ಕಲ್ಯಾಣದ ಕಥೆ ಪರಮ ಮಂಗಳಕರ. ಇದನ್ನು ಓದುವ ಬರೆಯುವ, ಕೇಳುವವರಿಗೆಲ್ಲ ಶಂಕರ ಪರಮಪದವಿ ಕೊಡುತ್ತಾನೆ.

ಅಧ್ಯಾಯ 19 ಸಿದ್ಧೇಶ್ವರತೀರ್ಥ

[ಮುಂದಿನ ಎರಡು ಅಧ್ಯಾಯಗಳಲ್ಲಿ ಆಗ್ನೇಯದ್ವಾರ ವರ್ಣನೆಯಿದೆ; ಈ ವರ್ಣನೆ ಪು.೩೬ ೧೧೨ನೇ ಅಧ್ಯಾಯದಲ್ಲಿ ಬರುತ್ತದೆ. ಈಗ ಈ ಮೂರ್ತಿಗಳನ್ನಾಗಲಿ ತೀರ್ಥವನ್ನಾಗಲಿ ಗುರುತಿಸುವುದು ಕಷ್ಟವಾಗಿದೆ—ವಿ. ತೀ.]

ಆಗ್ನೇಯ ದ್ವಾರ—ಸಪ್ತರ್ಷಿಗಳು ಕಿನ್ನರೇಶ-ಮಾತಂಗಿಯರ ದರ್ಶನ ಮಾಡಿಕೊಂಡು ಆಗ್ನೇಯದಲ್ಲಿರುವ ಸಿದ್ಧೇಶ್ವರ ತೀರ್ಥಕ್ಕೆ ಬಂದರು. ಅಲ್ಲಿ ಬಿಲ್ವಾರಣ್ಯವೂ, ಸಿದ್ಧೇಶ್ವರನೂ, ರುರು ಎಂಬ ಭೈರವನೂ, ವಿನಾಯಕನೆಂಬ ವಿಘ್ನೇಶನೂ ಇರುವರು. ಮಾಹಾಮಾಯಿಯೇ ಇಲ್ಲಿಯ ಅಧಿದೇವತೆ.

ಬಿಲ್ವಾರಣ್ಯ—ಹಿಂದೆ ಅನೇಕ ಮಹರ್ಷಿಗಳು ಈ ಅರಣ್ಯದಲ್ಲಿ ತಪಶ್ಚರಣೆ ಮಾಡಿ ಸಿದ್ಧೇಶ್ವರನೆಂಬ ಪರಮೇಶ್ವರನ ಅನುಗ್ರಹದಿಂದ ತಪಸ್ಸಿದ್ಧಿ ಪಡೆದರು.

ಇಲ್ಲಿರುವ ಸಿದ್ಧೇಶ್ವರ ತೀರ್ಥ ಸರ್ವಪಾಪಹರ, ಮುಕ್ತಿಪ್ರದ–ಇದರ ಕಥಾಶ್ರವಣ ದಿಂದಲೇ ಮಾನವರು ಪಾಪಮುಕ್ತರಾಗುತ್ತಾರೆ.

ಸಿದ್ಧೇಶ್ವರ ತೀರ್ಥ ಮಹಿಮೆ—ಜೂಜಿನಲ್ಲಿ ರಾಜ್ಯವನ್ನು ಸೋತು ಗೋಳಾಡುತ್ತಿದ್ದ ಧರ್ಮರಾಜನಿಗೆ ಶ್ರೀಕೃಷ್ಣ ಈ ತೀರ್ಥದ ಮಹಿಮೆ ವರ್ಣಿಸುತ್ತಾ 'ಇದರಲ್ಲಿ ಸ್ನಾನ ಮಾಡಿದ ಮಾತ್ರಕ್ಕೆ ಸಕಲಪಾಪಗಳೂ ಸರ್ವ ವಿಘ್ನಗಳೂ ಪರಿಹಾರವಾಗುತ್ತವೆ. ಶತ್ರುಗಳು ನಿರ್ಮೂಲರಾಗುತ್ತಾರೆ. **ನಲಕೂಬರ**ನೆಂಬ ಕುಬೇರನ ಪುತ್ರನಿಗೆ ಈ ನದಿಯ ಸ್ನಾನದಿಂದ ರಂಭೆ ದೊರಕಿದಳು; ಕುಬೇರನಿಗೆ ನವ ನಿಧಿಗಳು ದೊರಕಿದುವು ಎಂದು ಹೇಳಿ ಇದರಲ್ಲಿ ಸ್ನಾನಮಾಡುವಂತೆ ಬೋಧಿಸಿದನು. ಅದರಂತೆ ಧರ್ಮಪುತ್ರನು ಇದರಲ್ಲಿ ಒಂದು ತಿಂಗಳು ಸ್ನಾನ ಮಾಡುವಂತೆ ಬ್ರಾಹ್ಮಣರಿಗೆ ಗೋಭೂಮಿ ತಿಲಹಿರಣ್ಯದಾನಮಾಡಿ ಸಿದ್ಧೇಶ್ವರನನ್ನು ಆರಾಧಿಸಿದ್ದರಿಂದ ಅವನಿಗೆ ರಾಜ್ಯ ಪ್ರಾಪ್ತಿಯಾಯಿತಲ್ಲದೆ ಸಕಲ ರಾಜರನ್ನೂ ಗೆದ್ದು ರಾಜಸೂಯವನ್ನೂ ಮಾಡುವ ಸಾಮರ್ಥ್ಯ ಬಂತು. ಈ ತೀರ್ಥದ ಮಹಿಮೆ ಕೇಳುವುದರಿಂದ ದುಃಸ್ವಪ್ನ ನಾಶವಾಗುತ್ತದೆ. ಸರ್ವಾಭೀಷ್ಟಸಿದ್ಧಿ ದೊರಕುವುದಲ್ಲದೆ ಐಹಿಕ ಪಾರತ್ರಿಕ ಸೌಖ್ಯವೂ ಲಭಿಸುವುದು.

ಅಧ್ಯಾಯ 20 ವರಾಹಪ್ಲುತತೀರ್ಥ

[ವರಾಹಪ್ಲುತ ತೀರ್ಥ ಸಿದ್ಧೇಶ್ವರ ತೀರ್ಥಕ್ಕೆ ಪಶ್ಚಿಮದಲ್ಲಿದೆ. ವರಾಹ = ಹಂದಿ, ಪ್ಲುತ= ಹಾರುವಿಕೆ, ಒಂದು ಹಂದಿ ಈ ನೀರಿನಲ್ಲಿ ಹಾರಿದಾಗ ಅದರ ಮೃಗಜನ್ಮ ಪರಿಹಾರವಾದ್ದರಿಂದ ಈ ಹೆಸರು ಬಂದಿದೆ. ಇದರಂತೆಯೇ ಮುಂದೆ ಹರಿಣ ಪ್ಲುತ ಮತ್ತು ವ್ಯಾಘ್ರ ಪ್ಲುತ ತೀರ್ಥಗಳ ಕಥೆಗಳೂ ಬರುತ್ತವೆ; ಅಧ್ಯಾಯ 41,83-6—ವಿ. ಶೀ.]

ವಾರುಣಿಯೂ ವರಾಹವೂ—ಹಿಂದೆ ತೀರ್ಥಾಟನೆಯಲ್ಲಿ ಬಹಳ ಆಸಕ್ತಿಯುಳ್ಳ ವಾರುಣಿ ಎಂಬ ಬ್ರಾಹ್ಮಣ ಪ್ರಯಾಗ ಕೇದಾರ ಜಾಹ್ನವೀ ಬ್ರಹ್ಮವೈವರ್ತ ಕುಶಸ್ಥಲಿ ಪುಷ್ಕರ ಬದರಿ ನಾರಾಯಣಾಶ್ರಮ ಮೊದಲಾದ ಪುಣ್ಯ ಕ್ಷೇತ್ರಗಳನ್ನೂ ನದೀ ಸರಸ್ಸುಗಳನ್ನೂ ದರ್ಶನಮಾಡಿಕೊಂಡು ಕಡೆಗೆ ಪಂಪಾಕ್ಷೇತ್ರದಲ್ಲಿದ್ದ ಒಂದು ರಮ್ಯವಾದ ತೀರ್ಥವನ್ನು ಕಂಡು ಅದರ ಬಳಿಯಲ್ಲೇ ತಪಶ್ಚರಣೆ ಮಾಡಲಾರಂಭಿಸಿದನು.

ಒಂದು ದಿನ ವಾರುಣಿ ನಡು ನೀರಿನಲ್ಲಿ ನಿಂತು ತಪಸ್ಸು ಮಾಡುತ್ತಿದ್ದಾಗ ಒಂದು ಕಾಡು ಹಂದಿ ನೀರು ಕುಡಿಯುವುದಕ್ಕೆಂದು ಅಲ್ಲಿಗೆ ಬಂತು. ಅಲ್ಲೇ ಒಂದು ಮರದ ಪೊದೆಯಲ್ಲಿ ಅವಿತುಕೊಂಡಿದ್ದ ಒಬ್ಬ ವ್ಯಾಧ ಆ ಹಂದಿಯನ್ನು ಬಾಣದಿಂದ ಹೊಡೆದ. ಹಂದಿ ದಿಕ್ಕು ತೋರದೆ ವಾರುಣಿಯ ಮೇಲೆ ಎಗರಿತು. ವಾರುಣಿ ಭಯದಿಂದ 'ವಿರೂಪಾಕ್ಷ! ಶಂಭೋ' ಎಂದು ಗಟ್ಟಿಯಾಗಿ ಕೂಗಿಕೊಂಡು ನೀರಲ್ಲಿ ಮುಳುಗಿದ.

ವರಾಹ ಜನ್ಮ ನಿವೃತ್ತಿ—ಬಾಣದ ಏಟಿನಿಂದ ಪ್ರಾಣ ಬಿಡುವ ಸಮಯದಲ್ಲಿ ಆ ಹಂದಿಗೆ ತೀರ್ಥೋದಕ ಸ್ಪರ್ಶವಾದುದಲ್ಲದೆ ವಿರೂಪಾಕ್ಷನ ನಾಮ ಕಿವಿಯ ಮೇಲೆ ಬಿತ್ತು. ಆ ಪುಣ್ಯದಿಂದ ಆ ವರಾಹಕ್ಕೆ ಹಂದಿಯ ಜನ್ಮ ನಿವೃತ್ತಿಯಾಗಿ ದಿವ್ಯವಾದ ಗಂಧರ್ವರೂಪ ಬಂತು. ಆ ಗಂಧರ್ವ ವಾರುಣಿಯನ್ನು ಭಕ್ತಿಯಿಂದ ವಂದಿಸಿ ಮಹಾತ್ಮನೇ ನೀನು ಉಚ್ಚರಿಸಿದ ಆ ನಾಲ್ಕಕ್ಷರಗಳ (ವಿರೂಪಾಕ್ಷ) ಮಹಿಮೆಯಿಂದ ಈ ದಿವ್ಯ ರೂಪಬಂತು. ಈ ನಾಲ್ಕಕ್ಷರವನ್ನು ಅವಸಾನ ಕಾಲದಲ್ಲಿ ಮೋಹ ದಿಂದಲೋ ಶೋಕದಿಂದಲೋ ಭಯದಿಂದಲೋ ಭಕ್ತಿಯಿಂದಲೋ ಹೇಗಾದರೂ ಸರಿ ಹೇಳುವ ಅಥವಾ ಕೇಳುವವರಿಗೆ ಯಮದರ್ಶನವಾಗುವುದಿಲ್ಲ" ಎಂದು ಹೇಳಿ ತನ್ನ ಪೂರ್ವವೃತ್ತಾಂತವನ್ನೂ ತಿಳಿಸಿದನು.

ವರಾಹದ ಪೂರ್ವವೃತ್ತಾಂತ—"ನಾನು ಹಿಂದೆ ಅವಂತೀ ದೇಶದ ರಾಜ ನಾದ ದೀರ್ಘಬಾಹುವಾಗಿದ್ದೆ. ಸಕಲ ವಿದ್ಯಾಪ್ರವೀಣನಾದ ನಾನು ವಿದ್ಯಾಮದ ದಿಂದ ದೊಡ್ಡ ದೊಡ್ಡ ವಿದ್ವಾಂಸರನ್ನೆಲ್ಲಾ ಸಭೆಗೆ ಕರೆಸಿ ಕರೆಸಿ ಅವಮಾನ ಮಾಡಿ ಕಳುಹಿಸುತ್ತಿದೆ. ಹೀಗೇಯೇ ಒಬ್ಬ ಬ್ರಾಹ್ಮಣನನ್ನು ಅವಮಾನ ಮಾಡುವ ಉದ್ದೇಶದಿಂದಲೇ ವಾದಕ್ಕೆ ಕರೆದೆ. ಅವನು ನನಗೆ ಎಷ್ಟೋ ಬುದ್ಧಿ ಹೇಳಿದ. ನಾನು ನನ್ನ ಚಾಳಿ ಬಿಡದೆ ಹೋಗಲು ಅವನು ನನಗೆ "ವರಾಹನಾಗಿ ಹಸಿವು ಬಾಯಾರಿಕೆ ಗಳಿಂದ ನರಳುತ್ತಾ ಕಾಡು ಕಾಡು ಸುತ್ತುತ್ತಿರು" ಎಂದು ಶಾಪಕೊಟ್ಟ. ಆ ಶಾಪದಿಂದ ಬಂದಿದ್ದ ವರಾಹ ಜನ್ಮ ನಿನ್ನಿಂದ ಬಿಡುಗಡೆಯಾಯಿತು" ಎಂದು ಹೇಳಿ ವಾರುಣಿಯ ಅಪ್ಪಣೆ ಪಡೆದು ಹೊರಟು ಹೋದನು.

ವ್ಯಾಧನ ಜನ್ಮೋದ್ಧಾರ—ಮರದ ಮರೆಯಲ್ಲೇ ನಿಂತು ಇದನ್ನೆಲ್ಲಾ ನೋಡುತ್ತಿದ್ದ ವ್ಯಾಧನ ಮನಸ್ಸು ಕರಗಿಹೋಯಿತು. ಅವನೂ ಬಂದು ವಾರುಣಿ ಯನ್ನು, ಕೈಹಿಡಿದು ಉದ್ಧಾರ ಮಾಡಬೇಕೆಂದು ಕೇಳಿಕೊಂಡ. ವಾರುಣಿ. ಅವನಿಗೆ ವಿರೂಪಾಕ್ಷನಾಮ ಮಂತ್ರ ಉಪದೇಶಿಸಿ • ಅದನ್ನೇ ಜಪಿಸುವಂತೆ ಬೋಧಿಸಿದ. ಆ ಮಂತ್ರಜಪದಿಂದ ವ್ಯಾಧನಿಗೆ ವಿರೂಪಾಕ್ಷ ಪ್ರತ್ಯಕ್ಷನಾಗಿ ಮುಕ್ತಿ ಅನುಗ್ರಹಿಸಿದನು.

ಹೀಗೆ ಈ ವರಾಹಪ್ಲುತ ತೀರ್ಥದ ಮಹಿಮೆ ಹೆಚ್ಚಿನದು. ಗಂಡಸು ಹೆಂಗಸು ಮೃಗ ಯಾರಿಗೆ ಈ ತೀರ್ಥ ದರ್ಶನವಾದರೂ ಅವರ ಪಾಪಗಳು ಸದ್ಯ ನಾಶವಾಗು ತ್ತವೆ. ಇದರಲ್ಲಿ ಒಂದು ಸಾರಿ ಸ್ನಾನಮಾಡಿದರೂ ಮುಕ್ತಿ ದೊರಕುತ್ತದೆ. ಭಕ್ತಿ ಯಿಂದ ಈ ಕಥಾಶ್ರವಣ ಮಾಡುವವನು ಪಾಪ ನಿರ್ಮುಕ್ತನಾಗುತ್ತಾನೆ.

ಅಧ್ಯಾಯ 21 ಕಾಂಚನ ತೀರ್ಥ

[ಇಲ್ಲಿಂದ ಮುಂದೆ 16 ಅಧ್ಯಾಯಗಳಲ್ಲಿ (21-36) ದಕ್ಷಿಣ ದಿಕ್ಕಿನಲ್ಲಿರುವ ತೀರ್ಥಗಳ ಮತ್ತು ದೇವತೆಯ ವರ್ಣನೆ ಬರುತ್ತದೆ. ಕಾಂಚನಮಾಲಿನೀ ಎಂಬ ವೇಶ್ಯೆಯ ಹೆಸರೇ ಈ ತೀರ್ಥಕ್ಕೆ ಬಂದಿದೆಯೆಂಬುದು ಮುಂದಿನ ಎರಡು ಅಧ್ಯಾಯಗಳಿಂದ ತಿಳಿದು ಬರುತ್ತದೆ.ವಿ. ತೀ]

ಕಾಂಚನಮಾಲಿನಿಯೂ ರಾಕ್ಷಸನೂ–ಕಾಂಚನಮಾಲಿನಿ ಎಂಬ ದೇವ ಕನ್ಯೆ ಪ್ರತಿನಿತ್ಯ ಕಾಂಚನ ತೀರ್ಥಕ್ಕೆ ಬಂದು ಸ್ನಾನಮಾಡಿಕೊಂಡು ಹೋಗುತ್ತಿದ್ದಳು. ಒಂದು ದಿನ ಸ್ನಾನಮಾಡಿ ಕೊಂಡು ಹಿಂದಿರುಗುತ್ತಿದ್ದ ಅವಳನ್ನು ಪರ್ವತಾಗ್ರದಲ್ಲಿ ನಿಂತುಕೊಂಡಿದ್ದ ಒಬ್ಬ ವೃದ್ಧರಾಕ್ಷಸನು ಗಗನಕ್ಕೆ ಎಳೆದುಕೊಂಡು ಹೋದನು. ಆ ಸಂದರ್ಭದಲ್ಲಿ ಅವಳ ಕೂದಲಿನಲ್ಲಿದ್ದ ನೀರಿನ ಒಂದು ಹನಿ ರಾಕ್ಷಸನ ಮೈ ಮೇಲೆ ಬಿಡಿಯಿತು. ಅಷ್ಟಕ್ಕೇ ಆ ರಾಕ್ಷಸನ ಕ್ರೂರತನವೆಲ್ಲ ಇಳಿದು ಹೋಯಿತು. ಅವನು ನಮ್ರತೆಯಿಂದ 'ನಿನ್ನ ಕೇಶವೂ ವಸ್ತ್ರವೂ ಏಕೆ ಒದ್ದೆಯಾಗಿವೆ? ಎಲ್ಲಿಗೆ ಹೋಗಿದ್ದಿ? ಈ ನೀರಿನ ಒಂದು ಹನಿ ಬಿದ್ದದ್ದಕ್ಕೆ ನನಗೆ ಎಷ್ಟೋ ಶಾಂತಿಯಾಯಿತು. ಇದೇನಾಶ್ಚರ್ಯ ?' ಎಂದು ಕೇಳಿದನು.

ಅದಕ್ಕೆ ಅವಳು 'ನಾನು ಕಾಂಚನ ತೀರ್ಥದಲ್ಲಿ ಸ್ನಾನಮಾಡಿಕೊಂಡು ಬಂದಿದ್ದೇನೆ. ಆ ತೀರ್ಥದ ಮಹಿಮೆಯಿಂದಲೇ ನನಗೆ ಸದ್ಗತಿಯಾಯಿತು' ಎಂದು ತನ್ನ ಪೂರ್ವ ಕಥೆ ಹೇಳಲಾರಂಭಿಸಿದಳು.

ವಿಲಾಸಿನಿ ಅಮರಳಾದುದು— ಪೂರ್ವ ಜನ್ಮದಲ್ಲಿ ನಾನು ಕಳಿಂಗರಾಜನ ವಿಲಾಸಿನಿ [ವೇಶ್ಯೆ]ಯಾಗಿದ್ದೆ. ರೂಪ-ಯೌವನಗಳ ಮದದಿಂದ ಆ ನಗರದಲ್ಲಿದ್ದ ಯುವಕರನ್ನೆಲ್ಲಾ ವಶಮಾಡಿಕೊಂಡು ಯಥೇಚ್ಛ ದುಡ್ಡುಗಳಿಸಿದೆ. ವೃದ್ಧಾಪ್ಯ ಬಂದಾಗ ನನಗೆ ಪೇಚಾಟವಾಯಿತು. 'ಅಯ್ಯೋ ದಾನ-ಧರ್ಮ ಮಾಡಲಿಲ್ಲ. ಈಶ್ವರನನ್ನು ಒಂದು ಗಳಿಗೆಯಾದರೂ ಭಜಿಸಲಿಲ್ಲ. ನನಗೆ ಮುಂದೇನು ಗತಿ? ಎಂದಾಲೋಚಿಸಿಕೊಂಡು ರಾಜಪುರೋಹಿತನನ್ನು ಮೊರೆಹೊಕ್ಕೆ. ಆತ ನನಗೆ ಕಾಂಚನ ತೀರ್ಥದ ಮಹಿಮೆ ವರ್ಣಿಸಿ ಅದರಲ್ಲಿ ಸ್ನಾನ ಮಾಡುವಂತೆ ಬುದ್ಧಿವಾದ ಹೇಳಿದ.

ಆಗ ನಾನು ಚಿರಸಂಚಿತವಾದ ಆಸ್ತಿ ಪಾಸ್ತಿಗಳನ್ನೆಲ್ಲಾ ವಿಪ್ರರಿಗೆ ಕೊಟ್ಟು ತ್ಯಜಿಸಿ ಬಿಟ್ಟು ಈ ತೀರ್ಥಕ್ಕೆ ಬಂದು ಒಂದು ತಿಂಗಳು ಇದರಲ್ಲಿ ಸ್ನಾನಮಾಡಿದೆ. ಮೊದಲು ಮೂರು ದಿನಗಳಲ್ಲೇ ನನ್ನ ಪಾಪವೆಲ್ಲ ತೊಳೆದು ಹೋಯಿತು. ಮಿಕ್ಕ ೨೭ ದಿನ ಸ್ನಾನದ ಪುಣ್ಯದಿಂದ ನಾನು ಅಮರತ್ವ ಹೊಂದಿ ಈಗ ಪಾರ್ವತಿಯ ಬಳಿ ಇದ್ದೇನೆ' ಎಂದಳು.

ರಾಕ್ಷಸನಿಗೆ ಪಶ್ಚಾತ್ತಾಪ—ಈ ಕಥೆ ಕೇಳಿ ರಾಕ್ಷಸನಿಗೆ ತನ್ನ ಕ್ರೂರಕೃತ್ಯಕ್ಕಾಗಿ ಪಶ್ಚಾತ್ತಾಪ ಹುಟ್ಟಿತು. ಕಾಂಚನಮಾಲಿನಿ ಅವನಿಗೆ ಅಭಯಕೊಟ್ಟು 'ನಿನ್ನ ಪಾಪಗಳೆಲ್ಲಾ ಕ್ಷಣದಲ್ಲೇ ನಾಶವಾಗುವಂತೆ ಮಾಡುತ್ತೇನೆ' ಎಂದು ಹೇಳಿ ಸಮಾಧಾನ ಮಾಡಿದಳು.

ಅಧ್ಯಾಯ 22 ರಾಕ್ಷಸನಿಗೆ ಮುಕ್ತಿ

ಸ್ನಾನಫಲದ ದಾನ—ಹಾಗೆ ಹೇಳಿ ಕಾಂಚನಮಾಲಿನಿ ಒದ್ದೆ ಬಟ್ಟೆಯಿಂದ

ಸ್ವಲ್ಪ ನೀರು ಹಿಂಡಿಕೊಂಡು ಕಾಂಚನ ತೀರ್ಥ ಸ್ನಾನದ ಫಲದಲ್ಲಿ ಒಂದು ದಿನದ ಪುಣ್ಯ ಆ ರಾಕ್ಷಸನಿಗೆ ದಾನವಾಗಿ ಧಾರೆಯೆರದು ಕೊಟ್ಟಳು. ಒಡನೆಯೇ ಆ ಪುಣ್ಯದಿಂದ ರಾಕ್ಷಸನ ಜರ್ಜರಿತವಾದ ದೇಹ ತೊಲಗಿ ಹೋಗಿ ದಿವ್ಯವಾದ ತೇಜೋಮಯ ದೇಹ ಬಂತು. ಆ ರಾಕ್ಷಸ ಕೃತಜ್ಞತೆಯಿಂದ ಕಾಂಚನಮಾಲಿನಿಯನ್ನು ಅಭಿನಂದಿಸಿ ಅವಳನ್ನು ತನಗೆ ಏನಾದರೂ ಧರ್ಮೋಪದೇಶ ಮಾಡುವಂತೆ ಕೇಳಿಕೊಂಡನು.

ರಾಕ್ಷಸನಿಗೆ ಧರ್ಮೋಪದೇಶ—ಅದಕ್ಕೆ ಕಾಂಚನಮಾಲಿನಿ

ಧರ್ಮಂ ಭಜಸ್ವ ಸತತಂ, ತ್ಯಜ ಭೂತಹಿಂಸಾಂ,
ಸೇವಸ್ವ ಸಾಧುಪುರುಷಾನ್, ತ್ಯಜ ಕಾಮಶತ್ರೂನ್ ।
ಅನ್ಯಸ್ಯ ದೋಷಗಣಕೀರ್ತನಮಾಶು1 ಮುಕ್ತ್ವಾ2
ಸತ್ಯಂ, ವದಾರ್ಜಯ ಹರಂ, ಜಹಿ3 ಸಾಹಸಾನಿ ॥

ಎಂದು ಉಪದೇಶಿಸಿದಳು. ರಾಕ್ಷಸ ಅವಳಿಗೆ ಧನ್ಯವಾದ ಅರ್ಪಿಸಿ ಸ್ವರ್ಗಕ್ಕೆ ಹೋದ. ಇತ್ತಲಾಗಿ ಕೈಲಾಸದ ಕಡೆಗೆ ಹೊರಟ ಕಾಂಚನಮಾಲಿನಿಯನ್ನು ಅವಳ ಸಖಿಯರು 'ಈ ರಾಕ್ಷಸನ ಭಯದಿಂದ ಇಲ್ಲಿ ಅಡ್ಡಾಡುವುದಕ್ಕೆ ದೇವತೆಗಳೇ ಹೆದರುತ್ತಿದ್ದರು. ಸದ್ಯ ನಿನ್ನ ಪುಣ್ಯದಿಂದ ಆ ಭಯ ತಪ್ಪಿತು' ಎಂದು ಹೊಗಳಿದರು. ಅವಳು ತಾನು ಮಾಡಿದ ಸತ್ಕಾರ್ಯಕ್ಕಾಗಿ ಸಂತೋಷಪಡುತ್ತಾ ಅವರೊಡನೆ ಕೈಲಾಸದ ಕಡೆಗೆ ನಡೆದಳು.

ರಾಕ್ಷಸ ಮತ್ತು ಕನ್ಯೆಯರ ಈ ಸಂವಾದನ ಪಠನ ಮಾಡುವವರಿಗೆ ರಾಕ್ಷಸಾದಿಗಳಿಂದ ಬಾಧೆಯುಂಟಾಗುವುದಿಲ್ಲ.

ಅಧ್ಯಾಯ 23 ಮಾಂಡವ್ಯರ ಕಥೆ

ಮಾಂಡವ್ಯಾಶ್ರಮ—ಈ ಆಶ್ರಮ ಕಾಂಚನ ತೀರ್ಥದ ಮುಂದುಗಡೆಯೇ ಇದೆ. ಹತ್ತಿರದಲ್ಲೇ ಮಾಧವಿ ತೀರ್ಥವೂ ಇದೆ. ಈ ತೀರ್ಥಕ್ಕೆ ಸಂಬಂಧಿಸಿದ ಮಾಂಡವ್ಯರ ಚರಿತ ಪರಮ ಶುಭಕರ. ಇದರ ಶ್ರವಣ ಕೀರ್ತನ ಸ್ಮರಣದಿಂದ ಸಕಲ ಪಾಪಗಳೂ ಬಿಡುಗಡೆಯಾಗುತ್ತವೆ.

ದುರ್ಮೇಧಾ ಮತ್ತು ಮಾಧವೀ-ಹಿಂದೆ ರಾಥಂತರ ಕಲ್ಪದಲ್ಲಿ ವಸುದೇವನೆಂಬ ರಾಜ ಅವಂತಿಯಲ್ಲಿ ಆಳುತ್ತಿದ್ದ. ಧರ್ಮಾತ್ಮನಾದ ಆ ರಾಜನಿಗೆ ದುರದೃಷ್ಟವಶಾತ್ ಹೆಸರಿಗೆ ತಕ್ಕಂತೆ ದುಷ್ಟನಾದ ದುರ್ಮೇಧಾ4 ಎಂಬ ಪುತ್ರ ಹುಟ್ಟಿದ. ಆದರೆ ಅವನ ವಿವಾಹ ಪರಮಸಾಧ್ವೀಮಣಿಯಾದ ಮಾಧವಿ ಎಂಬ ನಿಷಧರಾಜನ ಮಗಳೊಡನೆ ಆಯಿತು. ಮದುವೆಯಾದರೂ ದುರ್ಮೇಧಾ ಪರದಾರಾಸಕ್ತನೂ

---

1 ಆಶು= ಶೀಘ್ರವಾಗಿ 2 ಬಿಟ್ಟು 3 ಕೊಲ್ಲು, ತ್ಯಜಿಸು.
4 ದುರ್= ದುಷ್ಟ. ಮೇಧಾ= ಬುದ್ಧಿಯುಳ್ಳವನು.

ವೇಶ್ಯಾಲೋಲುಪನೂ ಆಗಿದ್ದ. ಹೀಗೆಯೇ ಆ ಊರಿನ ಪಿಂಗಳಾ ಎಂಬ ವೇಶ್ಯೆಯ ಮೋಹಕ್ಕೆ ಸಿಕ್ಕಿ ದಿನಾ ಎಂಟೆಂಟು ಸುವರ್ಣ ಕೊಟ್ಟು ಅವಳನ್ನು ಒಲಿಸಿಕೊಂಡ. ಕಡೆಗೆ ತನ್ನ ಪತ್ನಿ ಮಾಧವಿಯ ಆಭರಣಗಳನ್ನೆಲ್ಲಾ ಅವಳ ಪಾಲು ಮಾಡಿದ; ಹಾಗೇ ಕೆಲವು ದಿನ ತಳ್ಳಿತು. ಆ ಮೇಲೆ ಪಿಂಗಳೆಗೆ ದುಡ್ಡು ಕೊಡುವುದಕ್ಕಾಗಿ ಬೇರೆ ದಾರಿ ಯಿಲ್ಲದೆ ರಾಜನ ಬೊಕ್ಕಸಕ್ಕೇ ಕೈಹಾಕಬೇಕಾಗಿ ಬಂತು. ರಾಜಭಟರು ಅವನನ್ನು ಹಿಡಿದು ರಾಜಾಜ್ಞೆಯಂತೆ ಅವನ ಕೈ ಕಾಲು ಕತ್ತರಿಸಿ ಅವನನ್ನು ಊರ ಹೊರಗೆ ಹಾಕಿ ಬಿಟ್ಟರು.

ಮಾಧವಿಯ ಪತಿಪರಾಯಣತೆ—ಮಾಧವಿ ಗಂಡನನ್ನು ಹುಡುಕಿಕೊಂಡು ಹೊರಟು ಅವನ ದುರವಸ್ಥೆಯನ್ನು ಕಂಡಳು. ಅವನನ್ನು ಆ ಅವಸ್ಥೆಯಲ್ಲೇ ಅಂತಃ ಪುರಕ್ಕೆ ಕರೆದುಕೊಂಡು ಹೋಗಿ ಉಪಚಾರ ಮಾಡಲಾರಂಭಿಸಿದಳು. ಸ್ವಲ್ಪ ಗುಣ ವಾದೊಡನೆ ದುರ್ಮೇಧಾ 'ನನ್ನನ್ನು ಪಿಂಗಳೆ ಮನೆಗೆ ಕರೆದುಕೊಂಡು ಹೋಗು ಎಂದು ಮಾಧವೀಯನ್ನು ಒತ್ತಾಯಪಡಿಸಲಾರಂಭಿಸಿದ.

ಪಿಂಗಳೆಯ ಮನಸ್ಸು ಒಲಿಸಿಕೊಳ್ಳುವುದಕ್ಕಾಗಿ ಮಾಧವಿ ಪ್ರತಿನಿತ್ಯ ಹೊತ್ತು ಹುಟ್ಟುವುದಕ್ಕೆ ಮುಂಚಿತವಾಗಿ ಹೋಗಿ ಅವಳ ಮನೆ ಮುಂದೆ ಗುಡಿಸಿ ಸಾರಿಸಿ ಬರು ತ್ತಿದ್ದಳು. ಸ್ವಲ್ಪ ದಿನಗಳಲ್ಲಿಯೇ ಪಿಂಗಳೆಯ ದೃಷ್ಟಿ ಮಾಧವಿ ಮೇಲೆ ಬಿತ್ತು. ಅವಳು ಆ ಸತೀ ಮಣಿಯನ್ನು ಕರೆಸಿ ಅವಳಿಗೇನಾಗಬೇಕೆಂದು ಕೇಳಿದಳು. ಆಗ ಮಾಧವಿ ದುರ್ಮೇಧನ ಬಯಕೆಯನ್ನು ತಿಳಿಸಿ ಅದನ್ನು ಪೂರೈಸಬೇಕೆಂದು ಕೋರಿ ಕೊಂಡಳು. ಅವಳು ಅದಕ್ಕೊಡಂಬಡಲು ಮಾಧವೀ ಪ್ರತಿದಿನ ರಾತ್ರಿ ದುರ್ಮೇಧ ನನ್ನು ಹೆಗಲ ಮೇಲೆ ಹೊತ್ತುಕೊಂಡು ಪಿಂಗಳೆ ಮನೆಗೆ ಹೋಗಿ ಬೆಳಗಾಗುವ ಹೊತ್ತಿಗೆ ಪುನಃ ಅವನನ್ನು ಹೊತ್ತುಕೊಂಡು ಹಿಂದಿರುಗಿ ತನ್ನ ಮನೆಗೆ ಬರುತ್ತಿದ್ದಳು.

ಮಾಂಡವ್ಯರ ಶಾಪ—ಒಂದು ದಿನ ಕೆಲವು ಕಳ್ಳರು ರಾಜನ ಮನೆಯಲ್ಲಿ ಕಳ್ಳತನ ಮಾಡಿದಾಗ ರಾಜಭಟರು ಬೆನ್ನಟ್ಟಿಬರಲು ಅವರು ಕಳ್ಳತನ ಮಾಡಿದ ವಸ್ತು ಗಳನ್ನೆಲ್ಲಾ ಮಾಂಡವ್ಯರ ಆಶ್ರಮದಲ್ಲೇ ಬಿಟ್ಟು ಓಡಿ ಹೋದರು. ರಾಜಭಟರು ಆ ಋಷಿಯನ್ನೇ ಕಳ್ಳನೆಂದು ಭಾವಿಸಿ ಅವರನ್ನೇ ಬಂಧಿಸಿ ರಾಜನ ಬಳಿಗೆ ಒಯ್ದರು. ರಾಜ ಕೋಪದಿಂದ ರೇಗಿ ವಿಚಾರ ಮಾಡದೆ ಅವರನ್ನು ಶೂಲಕ್ಕೇರಿಸಿಬಿಟ್ಟ.

ಅದೇ ದಿನ ರಾತ್ರಿ ಗಾಢಾಂಧಕಾರದಲ್ಲಿ ದುರ್ಮೇಧನನ್ನು ಹೊತ್ತುಕೊಂಡು ಪಿಂಗಳೆ ಮನೆಗೆ ಅವಸರ ಅವಸರವಾಗಿ ಹೋಗುತ್ತಿದ್ದಳು. ಆಗ ದಾರಿಯಲ್ಲೇ ಪಕ್ಕ ದಲ್ಲಿ ಶೂಲಕ್ಕೇರಿಸಲ್ಪಟ್ಟಿದ್ದ ಮಾಂಡವ್ಯರಿಗೆ ದುರ್ಮೇಧನ ಕಾಲು ಆಕಸ್ಮಾತ್ತಾಗಿ ಬಡಿಯಿತು. ಆ ಋಷಿ ರೋಷಾವಿಷ್ಟರಾಗಿ 'ನನಗೆ ಕಾಲು ತಗಲಿಸಿದವರು ನಾಳೆ ಸೂರ್ಯೋದಯವಾದ ಕೂಡಲೇ ಸತ್ತು ಹೋಗಲಿ' ಎಂದು ಶಾಪ ಕೊಟ್ಟರು.

ಕಥೋಪಸಂಹಾರ--ಅದನ್ನು ಕೇಳಿ ಮಾಧವಿ 'ನನ್ನ ಪಾತಿವ್ರತ್ಯ ಮಹಿಮೆಯಿಂದ ಸೂರ್ಯನೇ ಉದಯಿಸದಂತಾಗಲಿ' ಎಂದು ಪ್ರಾರ್ಥನೆಮಾಡಿ ಪತಿಯೊಡನೆ ಮನೆಗೆ ಹೋಗಿ ಕೂತುಬಿಟ್ಟಳು. ಸೂರ್ಯನು ಉದಯಿಸದಿರಲು ಲೋಕವೇ ತಳಮಳಿಸಿ ಹೋಯಿತು. ಆಗ ವಿಷ್ಣು-ಬ್ರಹ್ಮಾದಿಗಳು ಬಂದು ಮಾಧವಿಗೆ ಕಾಂಚನ ತೀರ್ಥದಲ್ಲಿ ಸ್ನಾನಮಾಡಿ ಅಲ್ಲೇ ಇರುವ ಜಾಂಬವತೇಶ್ವರನನ್ನು ಸೇವಿಸಿದರೆ ಅವಳ ಇಷ್ಟಾರ್ಥವೆಲ್ಲ ಕೈಗೂಡುವುದೆಂದು ತಿಳಿಸಿದರು. ಆದರಂತೆ ಮಾಧವಿ ದುರ್ಮೇಧ ಮಾಂಡವ್ಯ ಎಲ್ಲರೂ ಆ ತೀರ್ಥಕ್ಕೆ ಹೋಗಿ ಸ್ನಾನ ಮಾಡಿದರು.

ಆಗ ದುರ್ಮೇಧನಿಗೆ ದಿವ್ಯ ದೇಹ ಬಂತು; ಮಾಂಡವ್ಯರ ಶೂಲ ಬಂಧನ ತಪ್ಪಿತು. ಮಾಧವಿ ಬೇಡಿಕೊಳ್ಳಲು ಸೂರ್ಯನು ಉದಯಿಸಿದ. ಎಲ್ಲರಿಗೂ ಆನಂದವಾಯಿತು. ಮಾಧವಿ ಪತಿಯೊಡನೆ ಇಹಲೋಕ ಸೌಖ್ಯವನ್ನನುಭವಿಸಿ ಕೊನೆಗೆ ಪರಲೋಕ ಸೇರಿದಳು. ಮಾಂಡವ್ಯರು ಆಶ್ರಮ ಮಾಡಿಕೊಂಡು ಈಗಲೂ ಅಲ್ಲೇ ಒಂದು ಗುಹೆಯಲ್ಲಿ ವಾಸವಾಗಿದ್ದಾರೆ. ಮಾಘ-ಕೃಷ್ಣ-ಅಷ್ಟಮೀ ಸೋಮವಾರ ಕಾಂಚನ ತೀರ್ಥದಲ್ಲಿ ಸ್ನಾನವಮಾಡಿ ಜಾಂಬವತೇಶ್ವರ-ಮಾಂಡವ್ಯರ ದರ್ಶನ ಮಾಡುವವನು ಪೂತಾತ್ಮನಾಗಿ ಮುಕ್ತಿಹೊಂದುತ್ತಾನೆ. ಅದ್ಭುತವಾದ ಈ ಮಾಧವಿ ಚರಿತವನ್ನು ಪಠಿಸುವವರಿಗೆ ಅಖಿಲ ಲೋಕಸಂಪತ್ತು ಲಭಿಸುತ್ತದೆ.

ಅಧ್ಯಾಯ 24 ಶತರ್ಚಾಶ್ರಮ

ಧೇನುಕಾಂತನ ದೌರಾತ್ಮ್ಯ--ಮಾಂಡವ್ಯಾಶ್ರಮದ ಹತ್ತಿರದಲ್ಲೇ ಶತರ್ಚಾಶ್ರಮವೂ ಶತರ್ಚತೀರ್ಥವೂ ಇವೆ.

(ಇದಕ್ಕೆ ಸಂಬಂಧಿಸಿದ ಕಥೆ ಮುಂದಿನ ನಾಲ್ಕು ಅಧ್ಯಾಯಗಳ (24-27)ವರೆಗೂ ಸಾಗಿದೆ.)

ಪುರಾತನ ಕಾಲದಲ್ಲಿ ಅಂಗದೇಶದಲ್ಲಿ **ಕುಶಕೇತು** ಎಂಬ ಧರ್ಮಾತ್ಮ ರಾಜ್ಯವಾಳುತ್ತಿದ್ದ. ಅವನಿಗೆ ಅತಿ ಕೋಪಿಷ್ಠನಾದ **ಧೇನುಕಾಂತ**ನೆಂಬ ಮಗನಿದ್ದ. ಒಂದು ದಿನ ಧೇನುಕಾಂತ ಬೇಟೆಯಾಡಲು ಹೋಗಿ ದಣಿದು ನೀರು ಹುಡುಕಿಕೊಂಡು ಸುತ್ತಾಡುತ್ತಾ **ಶತರ್ಚನ** ಋಷಿಗಳ ಆಶ್ರಮಕ್ಕೆ ಬಂದ. ಸಮಾಧಿಸ್ಥರಾಗಿದ್ದ ಆ ಋಷಿಗಳು ಇವನಿಗೆ ಸತ್ಕಾರ ಮಾಡಲಿಲ್ಲ ಎಂಬ ಸಿಟ್ಟಿನಿಂದ ಇವನು ಆಶ್ರಮದಲ್ಲಿದ್ದ ಆ ಋಷಿಯ ಶಿಷ್ಯರನ್ನೇ ಮೃಗಗಳಂತೆ ಬೇಟೆಯಾಡಿ ಅನೇಕರನ್ನು ಕೊಂದು ಆಶ್ರಮವನ್ನೆಲ್ಲಾ ಲೂಟಿಮಾಡಿಸಿಬಿಟ್ಟ. ಈ ವಾರ್ತೆ ಕೇಳಿ ಅವನ ತಂದೆ ಬ್ರಹ್ಮಘಾತಕಿಯಾದ ಆ ದುರಾತ್ಮನನ್ನು ದೇಶದಿಂದ ಹೊರಗಟ್ಟಿಸಿಬಿಟ್ಟನು. ಧೇನುಕಾಂತ ದೇಶಭ್ರಷ್ಟನಾಗಿ ಬ್ರಹ್ಮಹತ್ಯಾದೋಷ ಪೀಡಿತನಾಗಿ ೮೮ ವರ್ಷ ಕಾಡುಮೇಡು ಸುತ್ತುತ್ತಾ ಬಹು ಕಷ್ಟದಿಂದ ಕಳೆದ.

ತ್ರೇತನ ಕಥೆ—ಹೀಗೆ ಅಲೆದಾಡುತ್ತಿರುವಾಗ ಒಂದು ದಿನ ಧೇನುಕನಿಗೆ ಅವನಂತೆ ಹಸಿವು ಬಾಯಾರಿಕೆಗಳಿಂದ ಬಳಲಿ ಒದ್ದಾಡುತ್ತಿದ್ದ ತ್ರೇತನೆಂಬ ಋಷಿಕುಮಾರ ಸಿಕ್ಕಿದನು. ಆ ತ್ರೇತ **ಶಂಸಕನ** ಮಗ; ಬಹಳ ಕರ್ಮಠನಾಗಿದ್ದ, ಆದರೂ ಆ ಗರ್ವದಿಂದ ಮನೆಗೆ ಅತಿಥಿಯಾಗಿ ಬಂದಿದ್ದ **ಆಶ್ವಲಾಯನ**ರಿಗೆ ಅವಮಾನ ಮಾಡಿದ್ದರಿಂದ ಅವರ ಶಾಪದಿಂದ ಹೀಗೆ ಹಸಿವು ತೃಷೆಗಳಿಂದ ಗೋಳಾಡಬೇಕಾಗಿ ಬಂತು. ದೈನ್ಯದಿಂದ ಅವರನ್ನೇ ಬೇಡಿಕೊಳ್ಳಲು ಆಶ್ವಲಾಯನರು ಅವನಿಗೆ ಪಂಪಾಕ್ಷೇತ್ರದಲ್ಲಿರುವ ಶತರ್ಚನ ಋಷಿಗಳನ್ನು ಮೊರೆಹೋಗುವಂತೆ ತಿಳಿಸಿದ್ದರು. ಆದ್ದರಿಂದ ತ್ರೇತ ಅವರನ್ನೇ ಹುಡುಕಿಕೊಂಡು ಹೊರಟಿದ್ದ.

ತ್ರೇತನ ಕಥೆ ಕೇಳಿದ ಧೇನುಕಾಂತ ತನ್ನ ದೌರಾತ್ಮ್ಯದ ಕಥೆಯನ್ನೂ ಹೇಳಿಕೊಂಡು ಪೇಚಾಡಿದ. ಸಮಾನ ದುಃಖಿಗಳಾದ ಇಬ್ಬರೂ ಸೇರಿ ಆ ಶತರ್ಚನರ ಆಶ್ರಮಕ್ಕೆ ಹೋಗಿ ಅವರನ್ನು ಕಂಡು ದೀರ್ಘವಾಗಿ ದಂಡಪ್ರಣಾಮ ಮಾಡಿದರು.

ಅಧ್ಯಾಯ 25 ವಿಮಲಾತೀರ್ಥ

ಋಷಿಗಳ ಅನುಗ್ರಹ—ಆದರೆ ಸಮಾಧಿನಿಷ್ಠರಾಗಿದ್ದ ಋಷಿಗಳಿಗೆ ಇದೇನೂ ತಿಳಿಯಲೇ ಇಲ್ಲ, ಅವರು ಮೌನವಾಗೇ ಇದ್ದರು. ಈ ಭಕ್ತರೂ ಹಾಗೇ ಅಲ್ಲೇ ಕುಳಿತುಬಿಟ್ಟರು. ಹತ್ತು ವರ್ಷಗಳಾದ ಬಳಿಕ ಸಮಾಧಿಯಿಂದ ವಿಮುಖರಾದ ಶತರ್ಚನರು ಅವರಿಬ್ಬರನ್ನೂ ನೋಡಿ ಮರುಕಪಟ್ಟು ಅವರಿಬ್ಬರಿಗೂ ಅಲ್ಲೇ ಹತ್ತಿರದಲ್ಲಿದ್ದ **ವಿಮಲಾ ತೀರ್ಥ**ದಲ್ಲಿ ಸ್ನಾನಮಾಡುವಂತೆ ಹೇಳಿದರು. ಅದರಂತೆ ಅವರಿಬ್ಬರೂ ಆ ತೀರ್ಥದಲ್ಲಿ ಸ್ನಾನಮಾಡುತ್ತಿದ್ದು ಕೆಲವು ದಿನಗಳಲ್ಲೇ ಇಬ್ಬರೂ ಒಂದೇ ದಿನ ದೇಹತ್ಯಾಗ ಮಾಡಿದರು.

ಒಡನೆಯೇ ಪಾಪಿಗಳಾದ ಅವರಿಬ್ಬರನ್ನೂ ಎಳೆದುಕೊಂಡು ಹೋಗುವುದಕ್ಕೆಂದು ಒಂದು ಕಡೆಯಿಂದ ಯಮದೂತರು ಬಂದರು. ಇನ್ನೊಂದು ಕಡೆಯಿಂದ ಶಿವದೂತರು ಕೈಲಾಸಕ್ಕೆ ಕರೆದುಕೊಂಡು ಹೋಗುವುದಕ್ಕೆ ಬಂದರು. ಎರಡು ದೂತಪಂಗಡಕ್ಕೂ ವಾಗ್ವಾದವಾಗಿ ದೂರು ಯಮನವರೆಗೂ ಮುಟ್ಟಿತು. ಆ ಮೃತ್ಯುದೇವ ಕ್ರೋಧಾರುಣಲೋಚನನಾಗಿ ಶಿವದೂತರ ಮೇಲೆ ಸಿಡಿಲಿನಂತೆ ಎಗರಿಕೊಂಡು ಬಂದ. ಶಿವದೂತರ ಮುಂದೆ ಅವನಾಟ ಏನೂ ಸಾಗಲಿಲ್ಲ.

ಯಮ-ಶತರ್ಚನ ಸಂವಾದ—ಆಗ ಪ್ರೇತರಾಜ ನ್ಯಾಯಕ್ಕಾಗಿ ಶತರ್ಚನರ ಬಳಿಗೇ ಹೋದ. ಆ ಋಷಿ ಇವನ ದೂರು ಕೇಳಿ ಯಮನಿಗೆ ನಿಧಾನವಾಗಿ ಈ ರೀತಿ ಸಮಾಧಾನ ಹೇಳಿದರು— ಅಪ್ಪಾ ಯಮರಾಜ, ಪಂಪಾಕ್ಷೇತ್ರದ ಮಹಿಮೆಯನ್ನು ಏನೆಂದು ತಿಳಿದಿದ್ದೀಯೆ? ಇದನ್ನು ಸಂಪೂರ್ಣವಾಗಿ ವರ್ಣಿಸುವುದು ಯಾರಿಗೂ ಅಸದಳ. ಈ ಕ್ಷೇತ್ರದ ಆವರಣದಲ್ಲಿ ಮರಣವಾದ ಮಾತ್ರದಿಂದಲೇ

ಸರ್ವಪಾಪಗಳೂ ನಾಶವಾಗುತ್ತವೆ. ಹೀಗಿರುವಾಗ, ಇದರ ಜೊತೆಗೆ ಇವರಿಬ್ಬರೂ ವಿಮಲಾತೀರ್ಥ ಸ್ನಾನದಿಂದ ಬೇರೆ ಪೂತರಾಗಿದ್ದಾರೆ. ಅಂದ ಬಳಿಕ ಇವರಿಬ್ಬರೂ ಹೇಗೆ ನರಕ ಭಾಗಿಗಳಾಗುತ್ತಾರೆ? ವಿಮಲಾತೀರ್ಥದ ಮಹಿಮೆಯನ್ನು ತಿಳಿಸುವುದ ಕ್ಕಾಗಿ ಮಾಲಿನೀ ವೃತ್ತಾಂತ ಹೇಳುತ್ತೇನೆ ಕೇಳು.

ಮಾಲಿನಿಯ ವೃತ್ತಾಂತ—ಪೂರ್ವ ಕಾಲದಲ್ಲಿ ಮಾಲಿನೀ ಎಂಬ ಬ್ರಾಹ್ಮಣಿ ಯಿದ್ದಳು. ಅವಳಿಗೆ ದೈವಾತ್ ಚಂಡಾಲಸಂಗವಾದ್ದರಿಂದ ಅವಳು ಪತಿತಳಾಗಿ ಚಂಡಾಲನ ಮನೆ ಸೇರಿ ಅನೇಕ ಗೋಹತ್ಯೆ ಮಾಡಿದಳು. ಈ ದೋಷದಿಂದ ಅವಳಿಗೆ ಕುಷ್ಠರೋಗವೇ ಅಲ್ಲದೆ ಇತರ ನಾನಾ ವ್ಯಾಧಿಗಳೂ ಅಂಟಿಕೊಂಡವು. ಆದ್ದರಿಂದ ಅವಳ ಗಂಡ ಮಕ್ಕಳೇ ಅವಳನ್ನು ಹೊರಗಟ್ಟಿಬಿಟ್ಟರು. ಅವಳು ಅಲ್ಲಿ ಇಲ್ಲಿ ಭಿಕ್ಷೆ ಬೇಡಿಕೊಂಡು ತಿನ್ನುತ್ತಾ ಪಂಪಾಯಾತ್ರಿಕರ ಜೊತೆ ಸೇರಿ ಹಂಪೆಗೆ ಬಂದು ನೆಲೆಸಿ ಕಡೆಗೆ ಅಲ್ಲೇ ಮಣ್ಣಾದಳು.

ಎರಡನೆಯ ಜನ್ಮ—ಈ ಪುಣ್ಯಕ್ಷೇತ್ರದಲ್ಲಿ ಮೃತಿ ಹೊಂದಿದ ಸುಕೃತದಿಂದ ಅವಳು ಎರಡನೇ ಜನ್ಮದಲ್ಲೂ ಬ್ರಾಹ್ಮಣಕುಲದಲ್ಲಿ ಬಹು ರೂಪವತಿಯಾಗಿ ಹುಟ್ಟಿ ದಳು. ಆದರೇನು? ಹಿಂದಿನ ಜನ್ಮದ ಕರ್ಮಶೇಷದಿಂದ ಎಂಟನೇ ವಯಸ್ಸಿನಲ್ಲೇ ವಿಧವೆಯಾದಳು. ಆದರೂ ತನ್ನ ವಯಸ್ಸನ್ನೆಲ್ಲಾ ಹಂಪೆಯಲ್ಲೇ ಶಿವಧ್ಯಾನಾಸಕ್ತ ಳಾಗಿ ಕಳೆದಳು. ಕಡೆಗೂ* ಅವಸಾನ ಕಾಲದಲ್ಲಿ ಅವಳಿಗೆ 'ಅಯ್ಯೋ ಇಡೀ ಜನ್ಮ ದಲ್ಲಿ ಒಂದು ದಿನವಾದರೂ ಭೋಗಪಡುವ ಭಾಗ್ಯ ನನ್ನ ಪಾಲಿಗೆ ಇಲ್ಲದೇ ಹೋಯಿತೇ!' ಎಂಬ ದುರ್ವ್ಯಸನ ತಲೆದೋರಿ ಆ ಚಿಂತೆಯಲ್ಲೇ ಕೊರಗಿ ಸತ್ತಳು.

ಮೂರನೆಯ ಜನ್ಮ—ಈ ಅಂತ್ಯಕಾಲದ ವ್ಯಸನದ ಫಲವಾಗಿ ಅವಳು ಮೂರನೇ ಜನ್ಮದಲ್ಲಿ ವೇಶ್ಯಾಕುಲದಲ್ಲಿ ಜನ್ಮತಾಳಿದಳು. ಆದರೆ ಎರಡನೆ ಜನ್ಮದಲ್ಲಿ ಮಾಡಿದ ಶಿವಾರಾಧನೆಯ ಪ್ರಭಾವದಿಂದ ಪೂರ್ವ ಜನ್ಮ ಸ್ಮರಣೆಯುಂಟಾಗಿ ಕುಲವೃತ್ತಿ ಬಿಟ್ಟು ಹಂಪೆಗೆ ಬಂದು ತುಂಗಭದ್ರಾತೀರದಲ್ಲಿ ಕುಟೀರ ಮಾಡಿಕೊಂಡು ಶಿವಧ್ಯಾನ ಪರಾಯಣಳಾದಳು. ಅವಳಿಗೆ ತಪಸ್ಸು ಸಿದ್ಧಿಸಿ ಅಣಿಮಾದಿಸಿದ್ಧಿಗಳು ಲಬ್ಧವಾದುವು. ಆ ಸಿದ್ಧಿಯ ಬಲದಿಂದ ಅಲ್ಲಿಗೆ ಬಂದ ಯಾತ್ರಿಕರಿಗೆಲ್ಲಾ ಅವರವರು ಕೇಳಿದ ಅಭೀಷ್ಟ ಗಳನ್ನು ಸಿದ್ಧಿ ಮಾಡಿಸಿಕೊಡುತ್ತಾ ಹೋದಳು. ಇದರಿಂದ ಅವಳ ಕೀರ್ತಿ ಎಲ್ಲೆಲ್ಲೂ ಹರಡಿತು.

ಅಧ್ಯಾಯ 26 ಶಂಡಿಲನವೃತ್ತಾಂತ

ಶಂಡಿಲನ ಕುಚೋದ್ಯ—ವೇಶ್ಯೆಯಾದ ಮಾಲಿನಿಯ ಸುತ್ತಲೂ ಜನಗಳು ಸದಾ ಕಿಕ್ಕಿರಿದು ಸೇರಿರುತ್ತಿದ್ದುದನ್ನು ಕಂಡು ಶಂಡಿಲನೆಂಬ ಬ್ರಾಹ್ಮಣ ಅವಳನ್ನು ಕೀಳಾಗಿ ಅಪಹಾಸ್ಯ ಮಾಡಿದ. ಈ ಸುದ್ದಿ ಕೇಳಿ ಮಾಲಿನಿ ಅವನ ಬಳಿಗೆ ಹೋಗಿ– 'ಪ್ರಾಣಿ

* ಅವಳ ಪೂರ್ವಜನ್ಮದ ಪಾಪದ ಸಂಸ್ಕಾರ ತನ್ನ ಪ್ರಭಾವ ಬೀರದೆ ಬಿಡಲಿಲ್ಲ.

ಗಳು ತಮ್ಮ ತಮ್ಮ ಕರ್ಮ ಅನುಭವಿಸಲೇಬೇಕು. ಬ್ರಾಹ್ಮಣ ಶೂದ್ರ ಆಗಬಹುದು, ಶೂದ್ರ ಬ್ರಾಹ್ಮಣನಾಗಬಹುದು. ಕರ್ಮದ ಗತಿಯನ್ನು ಯಾರು ಬಲ್ಲರು? ಬ್ರಾಹ್ಮಣನೂ ಪಂಡಿತನೂ ಆಗಿದ್ದೀಯೆಂದು ಗರ್ವ ಪಡಬೇಡ ಎಂದು ಎಚ್ಚರಿಸಿದಳು. ಶಂಡಿಲ ಅದನ್ನು ಕಿವಿಗೇ ಹಾಕಿಕೊಳ್ಳಲಿಲ್ಲ.

ಪುತ್ರಾರ್ಥಿ ಚಂಡಾಲ—ಒಂದು ದಿನ ಆ ಊರಿನ ಭೂರಿ ಎಂಬ ಒಬ್ಬ ಚಂಡಾಲನು ಯೋಗಿನಿಯೆಂದು ಹೆಸರುಗೊಂಡಿದ್ದ ಮಾಲಿನಿಗೆ ಅಡ್ಡಬಿದ್ದು ವಂಶ ವರ್ಧನಾದ ಒಬ್ಬ ಮಗನನ್ನು ಕರುಣಿಸಬೇಕೆಂದು ಬೇಡಿಕೊಂಡ. ಅದಕ್ಕೆ ಯೋಗಿನಿ 'ಉತ್ತಮವಾದ ಒಂದು ಜೊತೆ ಚರ್ಮದ ಪಾದುಕೆ ಮಾಡಿ ಅದನ್ನು ವೈಶಾಖ ಮಾಸದಲ್ಲಿ ಶಂಡಿಲನಿಗೆ ದಾನಮಾಡು. ನಿನ್ನ ಅಭೀಷ್ಟ ಸಿದ್ಧಿಸುತ್ತದೆ' ಎಂದು ಹೇಳಿದಳು. ಅದರಂತೆ ಅವನು ಎರಡು ಸೊಗಸಾದ ಪಾದುಕೆಗಳನ್ನು ಮಾಡಿ ವೈಶಾಖ ಮಾಸದಲ್ಲಿ ಒಂದು ದಿನ ಶಂಡಿಲನ ಮನೆ ಹತ್ತಿರ ಅವೆರಡನ್ನೂ ಬಿಟ್ಟು ಬಂದನು. ಅಕಸ್ಮಾತ್ ದೊರಕಿದ ಆ ಪಾದುಕೆಗಳನ್ನು ಕಂಡು ಶಂಡಿಲ ಬಹಳ ಹಿಗ್ಗಿದ. ಕ್ರಮೇಣ ಅವನಿಗೆ ಅವುಗಳ ಮೇಲೆ ಮಹಾಭಿಮಾನವುಂಟಾಗಿ ಸದಾ ಅದೇ ಧ್ಯಾನವಾಯಿತು.

ಶಂಡಿಲನಿಗೆ ಚಂಡಾಲ ಜನ್ಮ—ಪಾದುಕೆಯ ಅಭಿಮಾನದಿಂದ ಪ್ರಾಣ ಬಿಟ್ಟ ಶಂಡಿಲನು ಚಂಡಾಲನ ಪತ್ನಿಗರ್ಭ ಪ್ರವೇಶಮಾಡಬೇಕಾಯಿತು. ತನ್ನ ದುಷ್ಕರ್ಮಕ್ಕಾಗಿ ಅವನು ಗರ್ಭದಲ್ಲೇ ಕೈ ಕೈ ಹಿಚಿಕಿಗೊಂಡ. ಚಂಡಾಲ ಸ್ತ್ರೀಯ ಸ್ತನ್ಯಪಾನ ಮಾಡಬೇಕಲ್ಲ ಎಂಬ ಭಯದಿಂದ ಎಷ್ಟು ದಿನಗಳಾದರೂ ಗರ್ಭದಿಂದ ಹೊರಕ್ಕೇ ಬರಲಿಲ್ಲ. ಅದರಿಂದ ಭೂರಿಯ ಹೆಂಡತಿಗೆ ಅವರ್ಣನೀಯವಾದ ಪ್ರಸವ ವೇದನೆಯಾಯಿತು. ದಿಕ್ಕು ತೋರದೆ ಭೂರಿ ಹೋಗಿ ಯೋಗಿನಿಯನ್ನೇ ಅಂಗ ಲಾಚಿ ಬೇಡಿ ಕರೆದುಕೊಂಡು ಬಂದ. ಯೋಗಿನಿ ಗರ್ಭಸ್ಥನಾದ ಶಂಡಿಲನನ್ನು ಸಂಭೋದಿಸಿ 'ಕೆಟ್ಟ ಬ್ರಾಹ್ಮಣ! ಈಗಲಾದರೂ ಬುದ್ಧಿ ಬಂತೆ? ನೋಡು; ಇದೆಲ್ಲ ಕುಚೋದ್ಯದ ಪರಿಣಾಮ. ಪ್ರಾರಬ್ಧ ಕರ್ಮ ಅನುಭವಿಸದೆ ತೀರುವ ಹಾಗಿಲ್ಲ. ಹೆದರ ಬೇಡ, ಹೊರಕ್ಕೆ ಬಾ. ನಿನಗೆ ಹಸುವಿನ ಹಾಲೇ ಕೊಡುವಂತೆ ಹೇಳುತ್ತೇನೆ' ಎಂದು ಸಂಕೇತಮಾಡಿ ಕರೆದಳು. ಸುಖ ಪ್ರಸವವಾಯಿತು. ಯೋಗಿನಿ ಆ ತಾಯಿ ತಂದೆಗಳಿಗೆ 'ಈ ಮಗುವಿಗೆ ಹಸುವಿನ ಹಾಲೇ ಕುಡಿಸಬೇಕು. ತಾಯಿಯ ಸ್ತನ್ಯ ಪಾನ ಮಾಡಿಸಿದ ಕೂಡಲೇ ಇದು ಸತ್ತು ಹೋಗುತ್ತದೆ, ಎಚ್ಚರಿಕೆ' ಎಂದು ಕಟ್ಟಪ್ಪಣೆ ಮಾಡಿ ಹೋದಳು. ಆ ಮಗುವಿಗೆ ನಿತ್ಯಯೋಗಿ ಎಂದು ನಾಮಕರಣವಾಯಿತು.

ಅಧ್ಯಾಯ 27 ತೀರ್ಥಸ್ನಾನದ ಮಹಿಮೆ

ನಿತ್ಯಯೋಗಿಯ ಜಾಗರಣೆ—ಒಂದು ದಿನ ಆ ಊರಿನ ಚಿತ್ರಸೇನ ರಾಜ ಭೂರಿಗೆ ರಾತ್ರಿ ಕಾವಲಿಗೆ ಹೇಳಿ ಕಳುಹಿಸಿದ. ಭೂರಿ ಗ್ರಾಮಾಂತರಕ್ಕೆ ಹೋಗಿದ್ದ ರಿಂದ ಅವನಿಗೆ ಬದಲು ನಿತ್ಯಯೋಗಿಯೇ ಕಾವಲಿಗೆ ಹೋದ. ಅವನು ಕಾವಲು ಕಾಯುವಾಗ ಅಡ್ಡಾಡುತ್ತಾ ಮೊದಲನೆಯ ಜಾವದಲ್ಲಿ 'ಮಾಯಾ ಮೋಹಿತರಾದ ಜನರು ನಾನು ನನ್ನದು ಎಂದು ಹೆಮ್ಮೆಪಡುತ್ತಾರೆ. ವಿಚಾರ ಮಾಡಿದರೆ ಎಲ್ಲವೂ ತಪ್ಪು. ಎಚ್ಚರವಾಗಿರಿ, ಎಚ್ಚರವಾಗಿರಿ' ಎಂದೂ, ಎರಡನೇ ಜಾವದಲ್ಲಿ 'ತಂದೆ ತಾಯಿ ಸಹೋದರ ಮನೆ-ಮಠ ಯಾವುದೂ ಶಾಶ್ವತವಲ್ಲ. ಎಚ್ಚರವಾಗಿರಿ. ಎಚ್ಚರವಾಗಿರಿ' ಎಂದೂ, ಮೂರನೇ ಜಾವದಲ್ಲಿ 'ಜಗತ್ತೆಲ್ಲ ಅಜ್ಞಾನವೆಂಬ ತಮಸ್ಸಿನಿಂದ ಆವೃತ ವಾಗಿದೆ, ಜ್ಞಾನಸೂರ್ಯ ಉದಯಿಸುವವರೆಗೂ ಎಚ್ಚರವಾಗಿರಿ, ಎಚ್ಚರವಾಗಿರಿ' ಎಂದು ಕೂಗುತ್ತಾ ಜನರನ್ನು ಎಚ್ಚರಿಸುತ್ತಿದ್ದ.

ಮಾಲಿನೀ ಕಥೋಪಸಂಹಾರ—ಆ ಮಾತು ಕೇಳಿ ರಾಜನಿಗೆ ಪರಮಾ ಶ್ಚರ್ಯವಾಯಿತು. ಬೆಳಗಾಗುತ್ತಲೇ ನಿತ್ಯಯೋಗಿಯನ್ನು ಕರೆಸಿ "ನೀನಾರು?" ಎಂದು ಕೇಳಿದ. ಅವನು 'ಯೋಗಿನಿಯನ್ನು ಕರೆಸಿದರೆ ಎಲ್ಲಾ ವಿಚಾರ ಗೊತ್ತಾಗು ತ್ತದೆ' ಎಂದ. ಯೋಗಿನಿ ಬಂದು ಎಲ್ಲಾ ವಿಚಾರವನ್ನೂ ತಿಳಿಸಲು ರಾಜ ಸಂತೋಷ ಪಟ್ಟು ತನಗೂ ಧರ್ಮೋಪದೇಶ ಮಾಡಬೇಕೆಂದು ಅವಳನ್ನು ಕೇಳಿಕೊಂಡ. ಆಗ ಆ ಯೋಗಿನಿಯು ಚಿತ್ರಸೇನ, ಭೂರಿ, ಅವನ ಪತ್ನಿ, ನಿತ್ಯಯೋಗಿ ಎಲ್ಲರನ್ನೂ ವಿಮಲ ತೀರ್ಥದಲ್ಲಿ ಸ್ನಾನಮಾಡಿಸಿ ಧರ್ಮೋಪದೇಶಕ್ಕೆ ನನ್ನ (ಶತರ್ಚನರ) ಬಳಿಗೆ ಕರೆದುಕೊಂಡು ಬಂದಳು. ನಾನು ವಿಮಲ ತೀರ್ಥಸ್ನಾನದಿಂದ ಪಾಪನಿರ್ಮುಕ್ತ ರಾಗಿದ್ದ ಅವರಿಗೆಲ್ಲಾ ಜಾಂಬವತೀಶ್ವರನನ್ನು ಆರಾಧಿಸುವಂತೆ ಹೇಳಿದೆ. ಅದರಿಂದ ಅವರಿಗೆಲ್ಲಾ ಶಿವಲೋಕಪ್ರಾಪ್ತಿಯಾಯಿತು.

ಹೇ ಧರ್ಮರಾಜ! ಹೀಗೆಯೇ ಇವರಿಬ್ಬರೂ (ಧೇನುಕಾಂತ, ತ್ರೀಶ) ತೀರ್ಥ ಸ್ನಾನದಿಂದ ಪೂತರಾಗಿದ್ದಾರೆ. ಆದ್ದರಿಂದ ಇವರಿಗೆ ಕೈಲಾಸಕ್ಕೆ ಹೋಗುವುದಕ್ಕೆ ಯಾವ ಅಡ್ಡಿಯೂ ಇಲ್ಲ ಎಂದು ವಿಶದಪಡಿಸಿದರು. ಇದನ್ನು ಕೇಳಿ ಅಂತಕ ತನ್ನ ಲೋಕಕ್ಕೆ ಹಿಂದಿರುಗಿದ.

ಈ ಆಖ್ಯಾನವನ್ನು ಓದುವ ಮತ್ತು ಹೇಳುವ ಜನರು ಮುಕ್ತರಾಗುತ್ತಾರೆ.

ಅಧ್ಯಾಯ 28 ಜಾಂಬವಂತನ ವೃತ್ತಾಂತ

[ಜಾಂಬವತೀಶ್ವರ (ಅಥವಾ ಜಂಬೂನಾಥ) ಹೊಸಪೇಟೆಯಲ್ಲಿ ಬಳ್ಳಾರಿ ರೋಡಿನ ಪಕ್ಕದಲ್ಲಿ ಒಂದು ಗುಡ್ಡದ ಮೇಲಿದ್ದಾನೆ. ಮುಂದಿನ ೯ ಅಧ್ಯಾಯಗಳು ತತ್ಸಂಬಂಧಿ ಕಥೆಯೇ. ಪ್ರಸಿದ್ಧನಾದ ಜಾಂಬುವಂತನೆಂಬ ಕರಡಿಗೆ ವರಕೊಟ್ಟು ಅವನಿಂದ ಉಪಾಸ್ಯನಾಗಿರುವುದರಿಂದ ಈ ಹೆಸರು ಬಂದಿದೆ. 28-29 ಈ ಎರಡಧ್ಯಾಯಗಳಲ್ಲಿ ಜಾಂಬವಂತನ ವೃತ್ತಾಂತ ವರ್ಣಿತ ವಾಗಿದೆ—ವಿ.ತೀ.]

ಜನ್ಮವೃತ್ತಾಂತ—ರಾವಣನ ಹಾವಳಿಯ ಸಮಾಚಾರ ಕೇಳಿ ಚಿಂತಾಕುಲನಾದ ಬ್ರಹ್ಮ ಆಕಳಿಸಿದಾಗ ಅವನ ಮೂಗಿನಿಂದ ಕರಡಿರೂಪವೊಂದು ಹೊರಗೆ ಬಂತು. ಆ ಕರಡಿ ಬ್ರಹ್ಮನಿಗೆ ಪ್ರಣಾಮಮಾಡಿ 'ಅಪ್ಪಾ, ನನಗೆ ಏನಪ್ಪಣೆ ಮಾಡುವಿ?' ಎಂದು ಕೇಳಿತು. ಹೀಗೆ ಬ್ರಹ್ಮ ಆಕಳಿಸಿದಾಗ ಅವನ ಮೂಗಿನಿಂದ ಹುಟ್ಟಿದ್ದರಿಂದ ಈ ಕರಡಿಗೆ ಜಾಂಬವಾನ್[1] ಎಂದು ಹೆಸರಾಯಿತು.

ಜಾಂಬವಂತನಿಗೆ ಬ್ರಹ್ಮ 'ನಿನ್ನನ್ನು ರಾವಣವಧೆಯಲ್ಲಿ ರಾಮ ಸಹಾಯಾರ್ಥ ಸೃಷ್ಟಿಸಿದ್ದೇನೆ. ಅಲ್ಲಿಯವರೆಗೆ ಪಂಪಾಕ್ಷೇತ್ರಕ್ಕೆ ಹೋಗಿ ತಪಸ್ಸು ಮಾಡುತ್ತಿರು' ಎಂದು ಆದೇಶಮಾಡಿದ. ಅದರಂತೆ ಜಾಂಬವಂತ ಹಂಪೆಯ ದಕ್ಷಿಣದ ಕಡೆ ಇದ್ದ ಜಂಬೂವನ (ನೇರಳೆ ತೋಟ)ದಲ್ಲಿ ವಾಸಮಾಡಿಕೊಂಡು ಜಂಬೂಫಲಗಳನ್ನೇ ತಿಂದು[2] ಪ್ರತಿನಿತ್ಯ ಪಂಚಕ್ರೋಶಾತ್ಮಕವಾದ ಇಡೀ ಹಂಪೆ ಕ್ಷೇತ್ರವನ್ನು ಪ್ರದಕ್ಷಿಣೆ ಹಾಕುತ್ತಾ ಹತ್ತು ಸಾವಿರ ವರ್ಷ ತಪಸ್ಸು ಮಾಡಿದ.

ವರಪ್ರಾಪ್ತಿ—ಅವನ ತಪಸ್ಸಿಗೆ ಮೆಚ್ಚಿ ಶೂಲಿಯು ಅವನಿಗೆ 'ಕೃತಯುಗದಲ್ಲಿ ವಿಷ್ಣು ತ್ರಿವಿಕ್ರಮನಾದಾಗ ನೀನು ಅವನಿಗೆ ಪ್ರದಕ್ಷಿಣೆ ಮಾಡಲು ಪ್ರಯತ್ನ ಮಾಡು; ಆದರಿಂದ ನಿನಗೆ ಯಶಸ್ಸು ಬರುತ್ತದೆ. ತ್ರೇತಾಯುಗದಲ್ಲಿ ರಾಮನಿಗೆ ರಾವಣ ಸಂಹಾರ ಕಾರ್ಯದಲ್ಲಿ ನೆರವಾಗು. ದ್ವಾಪರದಲ್ಲಿ ಕೃಷ್ಣನಿಗೆ ಮಣಿಯ ಕಾರಣದಿಂದ ಬಂಧುವಾಗುವಿ[3]. ಕಲಿಯುಗದಲ್ಲಿ ಮಹಾಕಾಯನಾಗಿ ನನ್ನ ಬಳಿಯಿದ್ದು ಕೀರ್ತಿವಂತನಾಗುವಿ' ಎಂದು ವರ ಕೊಟ್ಟು ಜಾಂಬವಂತನ ಪ್ರಾರ್ಥನೆಯಂತೆ ಆ ಪ್ರದೇಶಕ್ಕೂ ಅವನ ಹೆಸರೇ ಬರುವಂತೆ ಅನುಗ್ರಹಿಸಿದ.

ಅಧ್ಯಾಯ 29 ರಾಕ್ಷಸನಾಗಿದ್ದ ಶಿವಸೇವಕ

ರಾಕ್ಷಸನ ಭೇಟಿ—ಒಂದು ದಿನ ಜಾಂಬವಂತ ವನದಲ್ಲಿ ಸಂಚರಿಸುತ್ತಿದ್ದಾಗ ಹೆಂಗಸಿನ ದೀನವಾದ ರೋದನ ಧ್ವನಿ ಕೇಳಿಸಿತು. ಕುತೂಹಲದಿಂದ ಧ್ವನಿ ಬರುತ್ತಿದ್ದ ಕಡೆಗೆ ಹೋಗಿ ನೋಡಲು ಒಬ್ಬ ರಾಕ್ಷಸ ಬ್ರಾಹ್ಮಣ ಕನ್ಯೆಯನ್ನು ಕಾಮೋಪಭೋಗಕ್ಕಾಗಿ ಬಲಾತ್ಕಾರಮಾಡುತ್ತಿದ್ದುದನ್ನೂ ಅವಳು ಅವನನ್ನು ತಿರಸ್ಕರಿಸುತ್ತಿದ್ದುದನ್ನೂ ಕಂಡ. ರಾಕ್ಷಸನ ಈ ಹೀನ ಕಾರ್ಯ ಕಂಡು ಜಾಂಬವಂತನಿಗೆ ರೋಷ

---

1. ಜಂಭಾ= ಆಕಳಿಕೆ, ವತ್(ವಾನ್)= ಉಳ್ಳದ್ದು 'ಜಂಭಾ' ಶಬ್ದವು ನಿರುಕ್ತಿಯ ನಿಯಮಗಳಂತೆ ಸ್ವಲ್ಪ ವ್ಯತ್ಯಾಸವಾಗಿ ಜಾಂಬ ಎಂದಾಗಿದೆ. ಜಾಂಬವಂತ ಎಂಬುದು ಕನ್ನಡ (ತದ್ಭವ) ರೂಪ.

2 ಜಂಬೂವನದಲ್ಲಿದ್ದುದೂ, ಜಂಬೂಫಲಗಳನ್ನು ತಿನ್ನುತ್ತಿದ್ದುದೂ ಸಹ ಜಾಂಬವಾನ್ ಎಂದು ಹೆಸರು ಬರಲು ಕಾರಣವಾಗಿರಬಹುದು.

3 ಈ ಕಥೆ ಭಾಗವತ ದಶಮಸ್ಕಂಧ ಉತ್ತರಾರ್ಧದಲ್ಲಿ ಸ್ಯಮಂತಕೋಪಾಖ್ಯಾನ ಎಂದು ಪ್ರಸಿದ್ಧವಾಗಿದೆ.

ಯುಕ್ತಿ ಬಂತು. ಅವನು ರಾಕ್ಷಸನನ್ನು ಚೆನ್ನಾಗಿ ಬಡಿದ. ರಾಕ್ಷಸ ಖಡ್ಗ ಹಿಡಿದು ಯುದ್ಧಕ್ಕೆ ನಿಲ್ಲಲು ಜಾಂಬವಂತ ಅವನನ್ನು ಮುಷ್ಟಿ ಪ್ರಹಾರದಿಂದ ಅಪ್ಪಳಿಸಿದೊಡನೆ ಆ ರಾಕ್ಷಸ ಸತ್ತುಬಿದ್ದ.

ರಾಕ್ಷಸನ ಪೂರ್ವವೃತ್ತಾಂತ—ರಾಕ್ಷಸನ ಪ್ರಾಣ ಹೋದ ಕೂಡಲೇ ಅವನ ದೇಹದಿಂದ ಒಬ್ಬ ಶಿವವೇಷಧಾರಿ ಹೊರಗೆ ಬಂದು ಜಾಂಬವಂತನಿಗೆ ನಮಸ್ಕಾರ ಮಾಡಿ, "ಹೇ ಮಹಾನುಭಾವ, ನನ್ನನ್ನು ಶಾಪದಿಂದ ಮುಕ್ತಮಾಡಿ ಉದ್ಧಾರ ಮಾಡಿದಿ. ಹಿಂದೆ ನಾನು ಒಂದು ಶಿವಾಲಯದಲ್ಲಿ ಕೋಶಾಧ್ಯಕ್ಷನಾಗಿದ್ದೆ. ಕುಟುಂಬ ಭರಣಕ್ಕಾಗಿ ದೇವಸ್ವಾಪಹಾರ ಮಾಡುತ್ತಿದ್ದ ನನ್ನನ್ನು ಧರ್ಮಕರ್ತ ರಾಕ್ಷಸನಾಗುವಂತೆ ಶಪಿಸಿದ. ಅವನನ್ನು ದೈನ್ಯದಿಂದ ಬೇಡಿಕೊಂಡಾಗ 'ನೀನು ಬ್ರಾಹ್ಮಣ ಕನ್ಯೆಯನ್ನು ಪೀಡಿಸುವಾಗ ಜಾಂಬವಂತನಿಂದ ಉದ್ಧಾರವಾಗುವಿ' ಎಂದು ವಿಶಾಪ ಕೊಟ್ಟಿದ್ದ. ಅದರಂತೆ ನಾನು ಇಂದು ಕೃತಾರ್ಥನಾದೆ" ಎಂದು ಹೇಳಿ ಪುನಃ ಪ್ರಣಾಮ ಮಾಡಿ ಹೊರಟು ಹೋದ. ಹೀಗೆ ರಾಕ್ಷಸ ಕೃತ್ಯ ಮಾಡುವವರಿಗೂ ಕೂಡ ಈ ಕ್ಷೇತ್ರ ಮಹಿಮೆಯಿಂದ ಸದ್ಗತಿಯಾಗುವಾಗ ಭಕ್ತರಿಗೆ ಸದ್ಗತಿಯಾಗುವುದರಲ್ಲಿ ಆಶ್ಚರ್ಯವೇನಿದೆ?

ಅಧ್ಯಾಯ 30 ಭದ್ರಾದೇವಿ

[ಇಲ್ಲಿಂದ 7 ಅಧ್ಯಾಯಗಳಲ್ಲಿ ಭದ್ರಾದೇವಿಯ ಕಥೆಯೂ ಜಾಂಬವತೀಶ್ವರನೊಡನೆ ಅವಳ ವಿವಾಹವೂ ಉಕ್ತವಾಗಿದೆ—ವಿ. ಶಿ.]

ಕನ್ನಿಕೆಯ ವೃತ್ತಾಂತ—ರಾಕ್ಷಸನನ್ನು ಕೊಂದು ಆಪತ್ತಿನಿಂದ ತನ್ನನ್ನು ಪಾರುಮಾಡಿದ್ದಕ್ಕೆ ಆ ಕನ್ನಿಕೆ ಜಾಂಬವಂತನಿಗೆ ಬಹಳ ಕೃತಜ್ಞತೆ ತೋರಿಸಿ ತನ್ನ ಪೂರ್ವ ಕಥೆ ಹೇಳಿಕೊಂಡಳು. 'ನಾನು ಭದ್ರಾ ಎಂಬ ಪಾರ್ವತಿಯ ಸೇವಕಿ. ಒಂದು ಸಲ ಮೃಡಾಣಿ ನನ್ನನ್ನು ಬಟ್ಟೆ ತರುವುದಕ್ಕೆ ಹೇಳಿ ಕಳುಹಿಸಿದಳು. ನಾನು ದಾರಿಯಲ್ಲಿ ಸಂಗೀತ ಧ್ವನಿ ಕೇಳಿ ತಲ್ಲೀನಳಾಗಿ ಹೇಳುಕಳುಹಿಸಿದ್ದ ಕೆಲಸವನ್ನೇ ಮರೆತು ಅಲ್ಲೇ ನಿಂತುಬಿಟ್ಟೆ. ಅದಕ್ಕೋಸ್ಕರ ಪಾರ್ವತೀ ನನ್ನನ್ನು ರಾಕ್ಷಸನ ಕೈಗೆ ಸಿಕ್ಕಿ ಗೋಳಾಡುವಂತೆ ಶಾಪಕೊಟ್ಟಳು. ಎಷ್ಟು ಬೇಡಿಕೊಂಡರೂ ವಿಶಾಪಕೊಡಲಿಲ್ಲ. ನನಗೂ ರೇಗಿತು. ಅವಳನ್ನು ಪ್ರತಿ ಸ್ಪರ್ಧಿಸಿ ವಿನಾಕಿಯನ್ನು ನಾನು ಒಲಿಸಿಕೊಂಡು ಅವನ ಅರ್ಧಾಂಗಿಯಾಗುವೆನೆಂದು ಹಠ ತೊಟ್ಟು, ಗೌರಿಯ ಶಾಪದಂತೆ ಮನುಷ್ಯ ಯೋನಿಯಲ್ಲಿ ಸೌರಾಷ್ಟ್ರ ದೇಶದ ಮುದ್ಗಲನೆಂಬ ಬ್ರಾಹ್ಮಣನ ಮಗಳಾಗಿ ವಿಷ್ಣು ಪ್ರಸಾದದಿಂದ ಜನಿಸಿದೆ.

ಣ

'ಒಂದು ದಿನ ಸಖೀಜನರೊಡನೆ ವನ ವಿಹಾರಕ್ಕಾಗಿ ಹೊರಟು ಸಂಚರಿಸುತ್ತಿರುವಾಗ ಈ ರಾಕ್ಷಸನ ಕೈಗೆ ಸಿಕ್ಕಿ ಬಿದ್ದೆ. ನಿನ್ನ ದಯದಿಂದ ಆ ಸಂಕಟ ಪಾರಾಯಿತು. ಮುಂದೇನು ಮಾಡಬೇಕೋ ತಿಳಿಯದಂತಾಗಿದೆ' ಎಂದು ಆ ಕನ್ಯೆ ಹೇಳಲು ಜಾಂಬವಂತ ಅವಳಿಗೆ ಧೈರ್ಯ ಕೊಟ್ಟು ಕಾಂಚನ ತೀರ್ಥದ ಬಳಿ ತಪಸ್ಸು ಮಾಡುವಂತೆ ಸೂಚಿಸಿದ. ಅವಳು ಅದರಂತೆ ಅಲ್ಲೇ ತಪಸ್ಸು ಮಾಡಲಾರಂಭಿಸಿದಳು.

ಅಧ್ಯಾಯ 31 ಭದ್ರೆಯ ತಪಸ್ಸು

ತಪಸ್ಸಿಗೆ ವಿಘ್ನಾರಂಭ—ಭದ್ರಾ ಪರ್ಣಾಹಾರ ಮಾಡುತ್ತಾ ಮೌನವ್ರತ ಧರಿಸಿ ತಪಸ್ಸಿಗೆ ಆರಂಭಿಸಿದಳು. ಕ್ಷಿಪ್ರದಲ್ಲಿ ಅವಳ ತಪೋಜ್ವಾಲೆಯಿಂದ ಲೋಕ ವೆಲ್ಲಾ ತಳಮಳಿಸಿತು. ಸೂರ್ಯನ ತಾಪವೇ ಅಡಗಿಹೋಯಿತು. ಮೇಘಗಳು ಮಳೆ ಸುರಿಸದಂತಾದುವು. ಅಗ್ನಿಯ ಜ್ವಾಲೆಯೂ ಮಂದವಾಗಿಬಿಟ್ಟಿತು. ಅದನ್ನು ಕಂಡು ದೇವೇಂದ್ರ ಚಿಂತಾಕುಲನಾಗಿ ಭದ್ರೆಯ ತಪೋಭಂಗ ಮಾಡುವುದಕ್ಕಾಗಿ ರಂಭಾದಿ ಅಪ್ಸರ ಸ್ತ್ರೀಯರನ್ನು ಕಳುಹಿಸಿಕೊಟ್ಟ.

ಅಪ್ಸರೆಯರ ಪರಾಜಯ—ದೇವೇಂದ್ರ ಪ್ರೇಷಿತರಾದ ಆ ಸ್ತ್ರೀಯರ ಭದ್ರಾ ಮುಂದೆ ಬಂದು ನಾನಾ ಹಾವಗಳನ್ನು ತೋರಿಸುತ್ತಾ ಅವಳ ಮನಸ್ಸು ಚಂಚಲ ಪಡಿಸಲು ಯತ್ನಿಸಿದರು. ಆದರೆ ಭದ್ರಾ ಅವರ ದುರುದ್ದೇಶವನ್ನು ತಿಳಿದು ಕೊಂಡು ಕಣ್ಣೇ ಬಿಡಲಿಲ್ಲ. ಆಗ ಅವರೆಲ್ಲರೂ ಸೋತು ಇಂದ್ರನ ಬಳಿಗೆ ಹೋಗಿ ತಮ್ಮ ಪರಾಜಯದ ಸುದ್ದಿ ಮುಟ್ಟಿಸಿದರು. ಇಂದ್ರ ದಿಕ್ಕು ತೋರದೆ ಬೃಹಸ್ಪತಿಯ ಬಳಿಗೆ ಹೊರಟ.

ಅಧ್ಯಾಯ 32 ತಪಸ್ಸಿಗೆ ವಿಘ್ನ

ಇಂದ್ರಾದಿಗಳಿಗೆ ಅಭಯವಚನ—ಬೃಹಸ್ಪತಿ ಇಂದ್ರಾದಿಗಳನ್ನು ಕರೆದು ಕೊಂಡು ಪಾರ್ವತೀ ಪರಮೇಶ್ವರರ ಬಳಿಗೆ ಹೋಗಿ ಭದ್ರೆಯ ತಪಸ್ಸಿನಿಂದಾಗಿರುವ ಹಾನಿಗಳನ್ನೆಲ್ಲಾ ವರ್ಣಿಸಿದ. ಗೌರೀಶ ಅವರಿಗೆ 'ಶಕ್ರಾದಿಗಳೆ, ಹೆದರಬೇಡಿ, ಹಂಪೆಯಲ್ಲಿ ಜಾಂಬವತೇಶ್ವರನೆಂಬ ರೂಪದಿಂದ ಅವಳನ್ನು ವರಿಸಿ ಲೋಕ ಕಂಟಕ ನಿವಾರಿಸುವೆನು' ಎಂದು ಅಭಯ ವಚನ ಕೊಟ್ಟ. ಅದರಿಂದ ತುಷ್ಟರಾಗಿ ದೇವತೆಗಳು ತಮ್ಮ ಮನೆಗಳಿಗೆ ಹೊರಟರು.

ಪಾರ್ವತಿಯ ಆಗ್ರಹ—ಹರನು ದೇವತೆಗಳಿಗೆ ಹೇಳಿದ ಮಾತನ್ನು ಕೇಳಿ ಉಮಾ ಕೋಪಿಸಿಕೊಂಡು 'ಮಾನುಷಳಾದ ಆ ಭದ್ರೆಯನ್ನು ನೀನು ಹೇಗೆ ವರಿಸುವಿ? ದೇವೋತ್ತಮನಾದ ನಿನಗೆ ಆ ಕೀಳುದಾಸಿ ಹೇಗೆ ಪತ್ನಿಯಾಗುವಳು? ಇದು ಹೇಗೆ ಕೂಡುತ್ತದೆ? ಎಂದು ಆಗ್ರಹಮಾಡಿದಳು. ಆಗ ತ್ರಿಯಂಬಕ ಅವಳನ್ನು ಸಮಾಧಾನಮಾಡುತ್ತಾ 'ದೇವಿ,

> ಪುಂಸ್ತ್ವೇ ಸ್ತ್ರೀತ್ವೇ ವಿಶೇಷೋ ವಾ ಜಾತಿ-ನಾಮಾ, ಶ್ರಮಾದಯಃ ।
> ನ ಕಾರಣಂ ಮತ್ಪೂಜನೇ ಭಕ್ತಿರೇವ ಹಿ ಕಾರಣಮ್ ॥

ಗಂಡಸು ಹೆಂಗಸು ಜಾತಿ ಹೆಸರು ಯಾವ ಭೇದವನ್ನೂ ನಾನು ಎಣಿಸುವುದಿಲ್ಲ. ನನ್ನನ್ನು ಹೊಂದುವುದಕ್ಕೆ ಭಕ್ತಿಯೇ ಕಾರಣ. ಅದೂ ಅಲ್ಲದೆ,

> ಪ್ರಾಣಾನ್ ದಾಸ್ಯೇ ಸದಾ ದೇವಿ ಭಕ್ತೇಭ್ಯಃ ಕಿಮಿಹೋಚ್ಯತೇ ।
> ತ್ಯಕ್ಷ್ಯೇ ಕೈಲಾಸನಿಲಯಂ ಭಕ್ತಾರ್ಥಂ ಬಹುಕಾಮದಮ್ ॥
> ತ್ಯಕ್ಷ್ಯೇ ತ್ವಾಂ ಸ್ವಪ್ರಿಯಾಂ ಮುಖ್ಯಾಂ ನಾಸತ್ಯಂ ಮಮ ಭಾಷಿತಮ್ ।
> ಭಕ್ತಾ ಏವ ಬಹಿಃಪ್ರಾಣಾಃ ಪ್ರಾಯೋ ಮೇ ಸರ್ವಮಂಗಳೇ ॥

'ದೇವಿ, ನಾನು ಭಕ್ತರಿಗಾಗಿ ಪ್ರಾಣವನ್ನಾದರೂ ಅರ್ಪಿಸೇನು, ಕೈಲಾಸವನ್ನೂ ತ್ಯಜಿಸೇನು. ಅಷ್ಟೇಕೆ, ನನಗೆ ಪರಮ ಪ್ರಿಯಳಾದ ನಿನ್ನನ್ನು ಕೂಡ ಭಕ್ತರಿಗಾಗಿ ಬಿಟ್ಟೇನು. ಭಕ್ತರೇ ನನಗೆ ಬಹಿಃ ಪ್ರಾಣಗಳು ಇದು ಸುಳ್ಳಲ್ಲ. ಆದ್ದರಿಂದ ಭದ್ರೆಯನ್ನು ವಿವಾಹ ಮಾಡಿಕೊಳ್ಳುವುದು ಖಂಡಿತ' ಎಂದು ಸ್ಪಷ್ಟವಾಗಿ ಹೇಳಿದನು.

ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ—ಶಿವನ ಮಾತು ಆಗ್ರಹಪೂರಿತಳಾದ ದೇವಿಗೆ ರುಚಿಸಲಿಲ್ಲ. ಅವಳು ಆ ದುರಾಗ್ರಹದಿಂದ ಭದ್ರೆಯ ತಪಸ್ಸನ್ನೇ ಕೆಡಿಸಿ ಕಾರ್ಯಸಾಧಿಸಬೇಕೆಂದು ನಿಶ್ಚಯಿಸಿಕೊಂಡು ಒಬ್ಬ ದೇವದೂತನನ್ನು ಕರೆದು 'ನಾನು ಮಾಯೆಯಿಂದ ಭದ್ರೆಯನ್ನು ಆವರಿಸಿಬಿಡುತ್ತೇನೆ, ನೀನು ಅವಳನ್ನು ಎತ್ತಿಕೊಂಡು ಹೋಗಿ ವಿಂಧ್ಯಾಚಲದಲ್ಲಿ ಬಿಟ್ಟುಬಿಡು' ಎಂದು ಆಜ್ಞೆಮಾಡಿದಳು.

ಅಧ್ಯಾಯ 33 ವಿಂಧ್ಯಾದ್ರಿ ವಾಸ

ಸ್ಥಾನಪಲ್ಲಟ—ಗೌರಿಯ ಆಜ್ಞೆಯಂತೆ ದೇವದೂತ ಭದ್ರಾ ಬಳಿಗೆ ಬಂದು ಅವಳನ್ನು ಎತ್ತಿಕೊಂಡು ಹೋಗಬೇಕೆಂದು ನೋಡಿದ. ಆದರೆ ಅವಳ ತಪೋಜ್ವಾಲೆಯಿಂದ ಬೆಂದು ಹೋಗಿ ಮೂರ್ಛೆ ತಪ್ಪಿ ಬಿದ್ದುಬಿಟ್ಟ. ಬಹಳ ಹೊತ್ತಾದ ಮೇಲೆ ಚೇತರಿಸಿಕೊಂಡು, ಎದ್ದು ಪಾರ್ವತಿಯನ್ನು ಮನಸಾ ಧ್ಯಾನಿಸಿದ. ಭವಾನಿ ದೂತನ ಪರಾಭವಕ್ಕಾಗಿ ವ್ಯಥೆ ಪಟ್ಟು ಭದ್ರಾ ದೇವಿಯನ್ನು ಮಾಯೆಯಿಂದ ಆವರಿಸಿಬಿಟ್ಟಳು. ಆಗ ಶಿವದೂತ ಅವಳನ್ನು ನಿರಾಯಾಸವಾಗಿ ಎತ್ತಿಕೊಂಡು ಹೋಗಿ ವಿಂಧ್ಯಾಚಲದಲ್ಲಿ ಬಿಟ್ಟು ಅವಳ ಸುತ್ತಲೂ ಗಸ್ತು ಹೊಡೆಯುತ್ತಿದ್ದ. ಎಚ್ಚರಿಕೆ ಬಂದ ಮೇಲೆ ಭದ್ರಾ ನೋಡುತ್ತಾಳೆ–ಹೊಸ ಸ್ಥಳ, ಹೊಸ ಪರಿಸರಗಳು. 'ನಾನು ಎಲ್ಲಿದ್ದೇನೆ? ಇಲ್ಲಿಗೆ ನನ್ನನ್ನು ಯಾರು ಕರೆತಂದರು?' ಎಂದು ಚಿಂತಿಸುತ್ತಾ ಅದೆಲ್ಲ ಪಾರ್ವತಿಯ ಮಾಯಾಪ್ರಭಾವವೇ ಇರಬೇಕೆಂದು ಮನಸಾ ನಿರ್ಣಯಿಸಿಕೊಂಡಳು.

ದೂತನಿಗೆ ಭದ್ರಾಶಾಪ—ಅಷ್ಟು ಹೊತ್ತಿಗೆ ಸರಿಯಾಗಿ ದೂತ ಕಣ್ಣಿಗೆ ಬಿದ್ದ. ಭದ್ರಾ ಅವನನ್ನು ಗದರಿಸಿ ನಿಜವಾದ ಸಂಗತಿ ಹೇಳುವಂತೆ ಕೇಳಿದಳು. ದೂತ ಎಲ್ಲ ಸಂಗತಿಯನ್ನೂ ಮರೆಮಾಚದೆ ಹೇಳಿದ. ಅದನ್ನು ಕೇಳಿ ಭದ್ರಾ ಕಿಡಿಕಿಡಿಯಾಗಿ 'ಕಾರ್ಯಾಕಾರ್ಯ ವಿವೇಕ ಹೀನ! ನೀನು ಕಪ್ಪೆಯಾಗಿ ಹುಟ್ಟು. ನಿರ್ದಯನಾದ ನೀನು ಚಿರಕಾಲ ಕಲ್ಲಾಗಿ ಬಿದ್ದಿರು' ಎಂದು ಶಪಿಸಿದಳು. ಅವನು ಪುನಃ ದೈನ್ಯದಿಂದ ಬೇಡಿಕೊಳ್ಳಲು 'ಏಳು ಕಲ್ಪ ಕಲ್ಲಾಗಿದ್ದು ಶಿವನ ಪಾದಸ್ಪರ್ಶದಿಂದ ನಿಜರೂಪತಾಳಿ ಸುಖಿಯಾಗು' ಎಂದು ಪ್ರತಿಶಾಪ ಕರುಣಿಸಿದಳು. ಮತ್ತು ಹಿಡಿದ ಕಾರ್ಯ ಬಿಡದೆ ಆ ವಿಂಧ್ಯಾದ್ರಿಯಲ್ಲೇ ತಪಸ್ಸಿಗೆ ಆರಂಭಿಸಿದಳು.

ಅಧ್ಯಾಯ 34 ಪುನಃ ಯಥಾಸ್ಥಾನ

ಶಂಕರನ ಅನುಗ್ರಹ—ಭದ್ರಾಳ ತಪಸ್ಸಿಗೆ ಮೆಚ್ಚಿ ಶಂಕರ ಪ್ರತ್ಯಕ್ಷನಾದ. ಭದ್ರಾ ಅವನನ್ನು ತನಗೆ ಪತಿಯಾಗುವಂತೆ ಯಾಚಿಸಿಕೊಂಡಳು. ಶಂಕರ ಅದಕ್ಕೊಪ್ಪಿ

'ನಾನು ನಿನ್ನನ್ನು ವರಿಸಿದರೆ ಪಾರ್ವತಿಗೆ ಸಿಟ್ಟುಬರುತ್ತದೆ. ಅದಕ್ಕೋಸ್ಕರ ತಪಸ್ಸು ಮಾಡಿ ಅವಳನ್ನು ಮೊದಲು ಒಲಿಸಿಕೊ' ಎಂದು ಉಪಾಯ ಹೇಳಿಕೊಟ್ಟ. ಶಿವ ಹೇಳುವುದೇ ತಡ ಭದ್ರಾ ಪಾರ್ವತಿಯನ್ನು ಕುರಿತು ತಪಸ್ಸು ಮಾಡಹತ್ತಿದಳು. ಪಾರ್ವತಿಯೂ ಅವಳಿಗೆ ಮೆಚ್ಚಿ ಪ್ರತ್ಯಕ್ಷಳಾದಳು. ಆಗ ಭದ್ರಾ ಆ ಲೋಕಜನನಿಯನ್ನು 'ದೇವಿ, ಅಂದು ನಿನ್ನ ಸನ್ನಿಧಿಯಲ್ಲೇ ಮಾಡಿದ ಪ್ರತಿಜ್ಞೆ ನೆರವೇರಿಸಿಕೊಟ್ಟು ಸದಾಶಿವ ನನ್ನ ಪತಿಯಾಗುವಂತೆ ಕರುಣಿಸು' ಎಂದು ಕೇಳಿಕೊಂಡಳು.

ಗೌರಿಯ ಅನುಗ್ರಹ—ಆಗ ಪಾರ್ವತಿ ತಾನೇ ಶಂಕರನಿಗೆ ಭದ್ರೆಯನ್ನು ವರಿಸುವಂತೆ ಪ್ರಾರ್ಥಿಸಿಕೊಂಡಳು. ಶೂಲೀ ಹಾಸ್ಯಕ್ಕಾಗಿ 'ನಾನು ದೇವಾಧಿದೇವ. ಆ ಮನುಷ್ಯಳನ್ನು ಹೇಗೆ ವರಿಸಲಿ? ಎಂದ. ಅದಕ್ಕೆ ಕಾತ್ಯಾಯಿನಿ 'ಇಲ್ಲ, ಈಗ ಅವಳು ತಪಸ್ಸಿನಿಂದ ಪರಿಶುದ್ಧಳಾಗಿದ್ದಾಳೆ. ಆದ್ದರಿಂದ ಪರಿಗ್ರಹಕ್ಕೆ ಯೋಗ್ಯಳಾಗಿದ್ದಾಳೆ' ಎಂದು ಶಿಫಾರಸು ಹೇಳಿದಳು. ಅದಕ್ಕೆ ಹರನು 'ಹಾಗಾದರೆ ಅವಪುತ್ರ ಕಾಂಚನ ತೀರ್ಥದಲ್ಲಿ ಸ್ನಾನಮಾಡಿಸು' ಎನ್ನಲು ಅದರಂತೆ ಭವಾನಿ ಭದ್ರೆಬಳಿಗೆ ಪುನಃ ಹಂಪೆಗೆ ಕರತಂದು ಆ ತೀರ್ಥದಲ್ಲಿ ಸ್ನಾನಮಾಡಿಸಿ ಪರಿಶುದ್ಧಳಾದ ೬ ಬ್ರಹ್ಮಸ್ವಾಂಶವನ್ನು ಕೊಟ್ಟು ದಕ್ಷಿಣ ದಿಕ್ಕಿನಲ್ಲಿಟ್ಟಳು. ರೋಹಿತ

ಅಧ್ಯಾಯ 35 ದೇವದೂತನ ಶಾಪ ವಿಮೋಚನ ಅನರ್ಘ

ಶಿವ ಪಾರ್ವತಿಯರ ಆಗಮನ—ಬಳಿಕ ಪಾರ್ವತಿ 'ಭದ್ರೆ ನಿನಾಗುವುದು ಕಾಯುತ್ತಿದ್ದಾಳೆ. ಇನ್ನು ತಡಮಾಡ ಬೇಡ' ಎಂದು ಅವಸರಿಸಿ ಶಂಕರನೊಡನೆ ಯೋಚಿಸಿ ಇದ್ದ ಸ್ಥಳಕ್ಕೆ ಬಂದಳು. ಭದ್ರೆಯ ಶಾಪದಿಂದ ಶಿಲೆಯಾಗಿದ್ದ ದೇವದೂತ ಉದ್ಧಾರಮಾಡುವುದಕ್ಕಾಗಿ ಕಪಾಲಿಯು ತನ್ನ ಕಾಲನ್ನು ಆ ಶಿಲೆಗೆ ಸ್ಪರ್ಶ ಮಾಡಿ ಒಡನೆಯೇ ಶಿವದೂತ ಶಾಪಮುಕ್ತನಾಗಿ ನಿಜರೂಪ ತಾಳಿ ಅವ್ಯಾಜ ಕರುಣಾಮೂರ್ತಿಯಾದ ತ್ರಿಣೇತ್ರನನ್ನು ನಾನಾ ಪ್ರಕಾರವಾಗಿ ಸ್ತುತಿಸಿ 'ಸ್ವಾಮಿ, ನಾನು ಶ್ರೀಪಾದಗಳೊಡನೆ ಭೃಂಗಿಯೆಂಬ ಹೆಸರಿನಿಂದ ನಿನ್ನ ಬಳಿಯಲ್ಲೇ ಇರುವಂತೆ ಕರುಣಿಸು' ಎಂದು ವರ ಕೇಳಿದನು. ಪರಮೇಶ್ವರ ಹಾಗೇ ಆಗಲೆಂದು ಹೇಳಿದ ಕಾರಣ ಆ ದೂತ ಶಿವನ ಮೃದಂಗಾದಿಗಳನ್ನು ಧರಿಸುವ ಭೃಂಗಿಯಾಗಿ ಅವನ ಬಳಿಯಲ್ಲೇ ಸೇವೆ ಮಾಡಿಕೊಂಡಿದ್ದಾನೆ.

ಅಧ್ಯಾಯ 36 ಭದ್ರಾ-ಜಾಂಬವತೇಶ್ವರರ ವಿವಾಹ

ದೇವತೆಗಳ ಆಗಮನ—ಈ ಸಮಾಚಾರ ತಿಳಿದು ದೇವತೆಗಳೂ ಗಂಧರ್ವ-ಸಿದ್ಧ ಮಹರ್ಷಿಗಳೂ ಜಾಂಬವತೇಶ್ವರನ ಕ್ಷೇತ್ರಕ್ಕೆ ವಿವಾಹೋತ್ಸವ ನೋಡುವುದಕ್ಕಾಗಿ ಆಗಮಿಸಿದರು. ಬ್ರಹ್ಮಾದಿಗಳೂ ಸಹ ಚತುರಂಗ ಬಲ ಸಮೇತರಾಗಿ ಬಂದು ನೆರೆದರು. ಭೇರಿ ಮೃಂದಗ ಪಣವ ಢಕ್ಕಾ ಗೋಮುಖ [ತುತೂರಿ] ಝುರ್ಝುರಾದಿ ವಾದ್ಯಗಳ ಧ್ವನಿ ದಿಕ್ತಟಗಳನ್ನೆಲ್ಲಾ ಆವರಿಸಿದುವು. ಬಂದ ಅತಿಥಿ ಅಭ್ಯಾಗತರನ್ನೆಲ್ಲಾ ಆ ದಿಕ್ಕಿನ ಭೈರವರೂ ಕ್ಷೇತ್ರಪಾಲರೂ ಆದರಿಸಿ ಸತ್ಕರಿಸಿದರು.

ವಿವಾಹದ ಸಿದ್ಧತೆಯೆಲ್ಲ ಮುಗಿದರೂ ಶಂಕರ ರಾಕ್ಷಸ ಸ್ಪೃಷ್ಟಳಾದ ಭದ್ರೆಯನ್ನು ಹೇಗೆ ಸ್ವೀಕರಿಸುವುದು ಎಂದು ಸ್ವಲ್ಪ ಅನುಮಾನಿಸುತ್ತಿದ್ದ. ಆ ದೋಷ ನಿವಾರಣೆಗಾಗಿ ಪಾರ್ವತಿ ಭದ್ರೆಗೆ ಕಾಂಚನ ತೀರ್ಥದಲ್ಲಿ ವಿಧಿ ಪ್ರಕಾರ ಸ್ನಾನಮಾಡಿಸಿದಳು. ತೀರ್ಥಸ್ನಾನ ಮಾಡಿ ಎದ್ದಕೂಡಲೇ ಭದ್ರಾ ಪುಟಕ್ಕಿಟ್ಟ ಚಿನ್ನದಂತೆ ಪರಿಶೋಭಿಸಿದಳು. ಇದನ್ನು ಕಂಡು ಎಲ್ಲರೂ ಪರಮಾಶ್ಚರ್ಯಭರಿತರಾದರು.

* ವಿವಾಹ ಘಟ್ಟ *

ಪಾರ್ವತೀ ಭದ್ರೆಯನ್ನು ಜಾಂಬವತೇಶ್ವರನ ಮುಂದೆ ನಿಲ್ಲಿಸಿ 'ದೇವ, ಈಕೆ ನನ್ನ ಆಗ್ರಹದಿಂದ ಮಹತ್ಕಷ್ಟಗಳಿಗೆ ಈಡಾಗಿದ್ದಾಳೆ. ತಪಃಪೂತಳಾದ ಇವಳನ್ನು ವಿಧಿಪೂರ್ವಕ ಸ್ವೀಕರಿಸು' ಎಂದಳು. ಅನಂತರ ದೇವಸ್ತ್ರೀಯರೂ ಪಾರ್ವತಿಯೂ
ರಿ ವಧೂವರರಿಗೆ ಸುಗಂಧಾಢ್ಯವಾದ ಅಭ್ಯಂಗಮಾಡಿಸಿ ದಿವ್ಯ ವಸ್ತ್ರ ವಿಭೂಷಣ
ಸ್ನೇವ ಅಲಂಕರಿಸಿ ರತ್ನಮಯ ಪೀಠದಲ್ಲಿ ಕೂಡಿಸಿದರು. ಗೀತ ವಾದ್ಯಗಳ ಮಂಗಳ
ಗಳೊಡನೆ ಮಂಗಳಾಷ್ಟಕಗಳನ್ನು ಪಠಿಸುತ್ತಾ ಲಾಜಾಕ್ಷತೆಗಳನ್ನು ಎಲ್ಲರೂ
ಧ್ವನಿತ್ತಿರಲು ಜಾಂಬವತೇಶ್ವರ ಭದ್ರಾದೇವಿಯ ಪಾಣಿಗ್ರಹಣ ಮಾಡಿ ಆವಳ
ಸುರಳ್ಳಿ ಮಂಗಳ ಸೂತ್ರಬಂಧನ ಮಾಡಿದನು. ಆ ಸಮಯದಲ್ಲಿ ದೇವದುಂದುಭಿ
ಕಂಠದ್ನೊಳಗಿದುವು. ಆಕಾಶದಿಂದ ಪುಷ್ಪವೃಷ್ಟಿಯಾಯಿತು.
ಗಳು ಮೆರಿಗೂ ಊಟೋಪಚಾರಗಳಾದುವು. ವಿವಾಹ ಸಂಭ್ರಮ ಮುಗಿಯಿತು.
ಎಸ್ಮ್ರ ತಮ್ಮ ಮನೆಗಳಿಗೆ ಹಿಂದಿರುಗಿದರು. ಜಾಂಬವತೇಶ್ವರ ಭದ್ರೆಯೊ
ಎಲ್ಲರೊ ನೆಲೆಸಿದ.
ಡನೆ ಶುಭಪ್ರದವಾದ ಈ ದಿವ್ಯ ಕಲ್ಯಾಣೋತ್ಸವದ ಕಥೆ ಓದುವ ಕೇಳುವ ಜನರೇ
ಮ, ಧರ್ಮಿಷ್ಠರು; ಅವರ ಜನ್ಮ ಸಾರ್ಥಕ. ಅವರು ಇಹದಲ್ಲಿ ಸಕಲ ಸುಖ
ಗನ್ನನುಭವಿಸಿ ಪರಮಪದ ಹೊಂದುತ್ತಾರೆ.

ಅಧ್ಯಾಯ 37 ಶಂಕರ ತೀರ್ಥ (i)

[37-38 ಈ ಎರಡು ಅಧ್ಯಾಯಗಳಲ್ಲೂ ನೈಋತ್ಯ ಉಪದ್ವಾರದ ವರ್ಣನೆಯೂ ಅದಕ್ಕೆ ಸಂಬಂಧಿಸಿದ ಶಂಕರತೀರ್ಥದ ವೃತ್ತಾಂತವೂ ಇದೆ. ಹೆಚ್ಚಿನ ವರ್ಣನೆಗೆ 112ನೇ ಅಧ್ಯಾಯ ನೋಡಿ.]

ನೈಋತ್ಯ ಉಪದ್ವಾರ—ಈ ಕ್ಷೇತ್ರಕ್ಕೆ **ಕ್ರೋಧನೆಂಬುವನು** ಕ್ಷೇತ್ರಪಾಲ. ಇಲ್ಲಿ **ಶೂರ** ಎಂಬ ಹೆಸರುಳ್ಳ ವಿಘ್ನೇಶ ಇದ್ದಾನೆ. **ಕಾಳಿ** ಎಂಬ ಶಕ್ತಿ ಕಲ್ಯಾಣಪ್ರದಳಾಗಿರುವಳು. ಈ ದಿಕ್ಕಿನಲ್ಲಿರುವ **ಶಂಕರತೀರ್ಥ** ಬಹಳ ಪ್ರಸಿದ್ಧವಾದುದು. ಇದರಲ್ಲಿ ಸ್ನಾನ ಮಾಡಿದರೆ ಎಂಥೆಂಥಾ ಪಾಪಗಳೂ ಸಹ ನಾಶವಾಗುತ್ತವೆ. ಈ ಅಗ್ನಿಪನಿಗೂ ಗಂಧರ್ವಕನ್ಯೆಯರಿಗೂ ಪ್ರಾಪ್ತವಾಗಿದ್ದ ಪಿಶಾಚ ಜನ್ಮ ಈ ತೀರ್ಥ ಸ್ನಾನದಿಂದಲೇ ನಿವೃತ್ತವಾಯಿತು.

ಗಾನವಿಶಾರದರಾದ ಕನ್ಯೆಯರು—**ಭದ್ರಸೇನ**ನೆಂಬ ಗಂಧರ್ವ ಗಾನವಿದ್ಯೆಯಲ್ಲಿ ವಿಶಾರದನಾಗಿದ್ದ. ಅವನಿಗೆ ನೂರು ಕನ್ಯೆಯರೂ ಹತ್ತು ಜನ ಪುತ್ರರೂ ಅನೇಕ ಮೊಮ್ಮಕ್ಕಳೂ (ಪೌತ್ರ-ಪೌತ್ರಿಯರೂ) ಇದ್ದರು. ಅವರೆಲ್ಲರೂ ಗಾನವಿದ್ಯಾನಿಪುಣರಾಗಿದ್ದರೂ ಸುಶೀಲಾ, ಸುಸ್ವರಾ, ಸುತಾರಾ, ಚಂದ್ರಿಕಾ ಎಂಬ ೪-೫ ಕನ್ಯೆಯರು ಎಲ್ಲರನ್ನೂ ಮೀರಿಸುವಂತಿದ್ದರು. ಇವರು ಏಕೋದರರಾಗಿಲ್ಲದಿದ್ದರೂ ಬಹಳ ಹೊಂದಿಕೊಂಡು ಆಟ ಪಾಟಗಳಲ್ಲೆಲ್ಲಾ ಜೊತೆ ಜೊತೆಯಾಗೇ ಇರುತ್ತಿದ್ದರು.

ಒಂದು ದಿನ ಅವರೈದು ಮಂದಿಯೂ ಗೌರೀಪೂಜೆಗೆ ಹೂವು ತರುವುದಕ್ಕಾಗಿ ಹೊರಟು ಅಡ್ಡಾಡುತ್ತಾ ಅಡ್ಡಾಡುತ್ತಾ ಅಚ್ಛೋದ ಸರೋವರದ ಬಳಿಗೆ ಬಂದು ಸ್ನಾನಮಾಡಿ ಗೌರೀಪೂಜೆ ಮಾಡಿ ಹಾಡು ಹೇಳಿಕೊಳ್ಳುತ್ತಾ ವೈಮನಸ್ಯ ಕೂತು ಬಿಟ್ಟರು.

ಅಗ್ನಿಪನ ದರ್ಶನ—ಆ ಸಮಯದಲ್ಲಿ **ವೇದನಿಧಿ**ಯೆಂಬ ಋಷಿಯ ಪುತ್ರನಾದ **ಅಗ್ನಿಪ**ನೆಂಬ ಋಷಿಕುಮಾರ ಸ್ನಾನಕ್ಕಾಗಿ ಆ ಅಚ್ಛೋದ ಕೊಳದ ಬಳಿಗೆ ಬಂದ. ಬ್ರಹ್ಮತೇಜಸ್ಸೇ ಮೂರ್ತಿಮತ್ತಾಗಿ ಬಂತೋ ಎನ್ನುವಂತಿದ್ದ ಆ ಬ್ರಹ್ಮಚಾರಿಯ ದಿವ್ಯ ಸುಂದರ ವಿಗ್ರಹದಿಂದ ಆ ಪಂಚಕನ್ಯೆಯರೂ ಒಂದೇ ಸಲ ಮೋಹಿತರಾದರು. ಆದರೆ ಅಗ್ನಿಪ ಮಾತ್ರ 'ಈ ಕನ್ಯೆಯರ ದೃಷ್ಟಿಗೆ ಬೀಳುವುದೇ ಅನರ್ಥ ಕಾರಣ. ಇವರು ಸಮೀಪಕ್ಕೆ ಬರುವುದಕ್ಕೆ ಮುಂಚಿತವಾಗಿಯೇ ಮರೆಯಾಗುವುದು ಉತ್ತಮ. ವನಿತೆಯರ ಮೋಹಕ್ಕೆ ವಶರಾಗದವರು ಯಾರು?' ಎಂದು ಆಲೋಚಿಸಿ ಆ ಕನ್ಯೆಯರು ನೋಡನೋಡುತ್ತಿದ್ದ ಹಾಗೆಯೇ ಕಣ್ಮರೆಯಾಗಿಬಿಟ್ಟ.

ಅಧ್ಯಾಯ 38 ಶಂಕರ ತೀರ್ಥ (ii)

ಕನ್ಯೆಯರ ವಿರಹತಾಪ....ಅಗ್ನಿಪ ಕಣ್ಮರೆಯಾದ್ದರಿಂದ ಗಂಧರ್ವ ಕನ್ಯೆಯರಿಗೆ ಬಹಳ ನಿರಾಶೆಯಾಯಿತು. ಅವರು ಮನಸ್ಸು ಚಿಕ್ಕದುಮಾಡಿಕೊಂಡು ಮನೆಗೆ ಬರಲಾರದೆ ಬಂದು, ಜ್ವರ ಬಂದಿದೆ ಎಂಬ ನೆಪ ಹೇಳಿ ಊಟೋಪಚಾರಗಳನ್ನು ಸಹ ಮಾಡದೆ ಮಲಗಿಕೊಂಡು ಮದನಾರ್ತರಾಗಿ ವಿರಹವೇದನೆಯಿಂದ ನಿದ್ರೆ ಬಾರದೆ ರಾತ್ರಿಯನ್ನು ಹಾಗೂ ಹೀಗೂ ಬಹು ಕಷ್ಟದಿಂದ ಕಳೆದರು. ಬೆಳಗಾಗುವುದೇ ತಡ, ಗೌರೀ ಪೂಜೆಯ ನೆಪ ಮಾಡಿಕೊಂಡು ಪುನಃ ಅಚ್ಛೋದಸರಸ್ಸಿಗೆ ಬಂದು ಅಗ್ನಿಪನನ್ನು ಕಾದು ಕುಳಿತರು.

ಶಾಪ ಪ್ರತಿಶಾಪ—ಪ್ರತಿ ನಿತ್ಯದಂತೆ ಅಗ್ನಿಪ ಅಲ್ಲಿಗೆ ಸ್ನಾನಕ್ಕೆ ಬಂದ. ಅದನ್ನೇ ಹೊಂಚುಹಾಕಿಕೊಂಡು ಕೂತಿದ್ದ ಆ ಐವರೂ ಅವನನ್ನು ಮುತ್ತಿಕೊಂಡು ತೆಕ್ಕೆಬಿದ್ದರು ; ಇಬ್ಬರು ಅವನ ಭುಜಗಳನ್ನು ಹಿಡಿದುಕೊಂಡರು, ಒಬ್ಬಳು ಅವನನ್ನು ಆಲಿಂಗನ ಮಾಡಿಕೊಂಡಳು. ಮತ್ತೊಬ್ಬಳು ಚುಂಬನ ಮಾಡಿದಳು. ಇಷ್ಟಾದರೂ ಅಗ್ನಿಪ ನಿರ್ವಿಕಾರನಾಗಿದ್ದು ಧೈರ್ಯದಿಂದ ಹಾಗೆ ಬಲತ್ಕಾರ ಮಾಡು

ವುದು ಧರ್ಮವಲ್ಲವೆಂದು ಅವರಿಗೆ ಪರಿಪರಿಯಿಂದ ಉಪದೇಶಿಸಿದನು. ಆದರೆ ಅವರು ಎಳ್ಳಷ್ಟೂ ಜಗ್ಗಲಿಲ್ಲ. ಆಗ ಅಗ್ನಿಪ ಪ್ರಳಯಾಗ್ನಿಯಂತೆ ಕೆರಳಿ ಕರಾಳ ಮುಖ ಮಾಡಿಕೊಂಡು 'ನನ್ನನ್ನು ಪಿಶಾಚಿಗಳಂತೆ ಅಪ್ಪಿಕೊಂಡಿರುವ ನೀವು ಪಿಶಾಚಿಗಳೇ ಆಗಿ' ಎಂದು ಶಪಿಸಿದನು. ಅದಕ್ಕೆ ಪ್ರತಿಯಾಗಿ ಆ ಕನ್ಯೆಯರೂ ಕೂಡ ಅಗ್ನಿಪನಿಗೆ 'ನಿನ್ನಲ್ಲಿ ಅನುರಕ್ತರಾದ ನಮ್ಮನ್ನು ನಿರಾಕರಿಸಿ ದ್ರೋಹ ಮಾಡಿದ ನೀನೂ ಸಹ ಪಿಶಾಚಿಯಾಗು' ಎಂದು ಶಾಪಕೊಟ್ಟರು. ಹೀಗೆ ಒಟ್ಟಿನಲ್ಲಿ ಅವರಾರು ಮಂದಿಯೂ ಪಿಶಾಚಿಗಳಾದರು.

ಶಾಪನಿವೃತ್ತಿ—ಒಂದು ದಿನ **ರೋಮಶ** ಮಹರ್ಷಿ ಆ ಮಾರ್ಗವಾಗಿ ಹಾದು ಹೋಗುತ್ತಿದ್ದರು. ಈ ಪಿಶಾಚಗಳೆಲ್ಲವೂ ಅವರ ಮೇಲೆ ನುಗ್ಗಿದುವು. ಆದರೆ ಮಹರ್ಷಿಯ ತಪೋಜ್ವಾಲೆಯಿಂದ ನಿರುದ್ಧರಾಗಿ ಸ್ತಂಭಿತರಾದರು. ಅಷ್ಟು ಹೊತ್ತಿಗೆ ಸರಿಯಾಗಿ ಅಗ್ನಿಪನ ತಂದೆ ವೇದನಿಧಿಯೂ ಅಲ್ಲಿಗೆ ಬಂದು ಅವರಾರು ಮಂದಿಯ ವೃತ್ತಾಂತವನ್ನೂ ಹೇಳಿ ತನ್ನ ಮಗನನ್ನು ಉದ್ಧರಿಸುವಂತೆ ಕೇಳಿ ಕೊಂಡರು. ಆಗ ರೋಮಶ ಅವರೆಲ್ಲರನ್ನೂ ಶಂಕರ ತೀರ್ಥದ ಬಳಿಗೆ ಕರೆದುಕೊಂಡು ಹೋಗಿ ಅದರಲ್ಲಿ ಸ್ನಾನ ಮಾಡಿಸಿದರು. ಆ ಸ್ನಾನದಿಂದ ಎಲ್ಲರಿಗೂ ಪಿಶಾಚ ಜನ್ಮ ನಿವೃತ್ತಿಯಾಯಿತು.

ಬಳಿಕ ರೋಮಶರು ಅಪ್ಪಣೆ ಮಾಡಿದ್ದರಿಂದ ಅಗ್ನಿಪ ತನ್ನಲ್ಲಿ ಅನುರಕ್ತರಾಗಿದ್ದ ಆ ಐದು ಗಂಧರ್ವ ಕನ್ಯೆಯರನ್ನೂ ಉದ್ವಾಹವಾದನು. ಹೀಗೆ ಗಂಧರ್ವ ಕನ್ಯೆಯ ರಿಗೆ ಸುಖವುಂಟಾದ್ದರಿಂದ ಈ ತೀರ್ಥಕ್ಕೆ 'ಶಂಕರ' (ಶಂ=ಸುಖವನ್ನು, ಕರ= ಮಾಡುವಂಥಾದ್ದು) ಎಂಬ ಹೆಸರು ಬಂತು. ಈ ಕಥಾಶ್ರವಣ ಮಾಡುವವರು ಸಕಲ ಪಾಪಗಳಿಂದ ನಿರ್ಮುಕ್ತರಾಗುತ್ತಾರೆ.

ಅಧ್ಯಾಯ 39 ಅಗಸ್ತ್ಯತೀರ್ಥ

[ಇಲ್ಲಿಂದ 46ನೇ ಅಧ್ಯಾಯದ ಕಡೆವರೆಗೂ (ಅಧ್ಯಾ. 39-46) ಎಂಟು ಅಧ್ಯಾಯಗಳಲ್ಲಿ ಪಶ್ಚಿಮ ದಿಕ್ಕಿನ ತೀರ್ಥಗಳ ವರ್ಣನೆ ಇದೆ. ಪಶ್ಚಿಮ ದ್ವಾರ ಮತ್ತು ವಾಯವ್ಯ ಉಪದ್ವಾರ ಗಳ ವರ್ಣನೆ 110, 113ನೇ ಅಧ್ಯಾಯಗಳಲ್ಲಿ ಬರುವುದು—ವಿ.ಶೀ.]

ಪಶ್ಚಿಮದ್ವಾರ ವರ್ಣನೆ—ಶಂಕರ ತೀರ್ಥ ನೋಡಿದ ಬಳಿಕ ಆ ಸಪ್ತರ್ಷಿ ಗಳು ವಿರೂಪಾಕ್ಷನ ಸದ್ಯೋಜಾತರೂಪವಾದ* ಪಶ್ಚಿಮ ದಿಙ್ಮುಖವಾದ ಸೋಮೇಶ್ವರನನ್ನು ನೋಡಲು ಹೊರಟರು. ಈ ಕ್ಷೇತ್ರದಲ್ಲಿ **ಸೋಮಗಿರಿಯೂ ದುರ್ಮದ** ನೆಂಬ ಭೈರವನೂ **ವರದ** ಎಂಬ ಅಭಿಧಾನವುಳ್ಳ ವಿಘ್ನೇಶನೂ **ಶುಭಗಾ** ಎಂಬ ದುರ್ಗೆಯೂ ಸೋಮತೀರ್ಥ ಅಗಸ್ತ್ಯತೀರ್ಥಾದಿ ತೀರ್ಥಗಳೂ ಇವೆ. ಈ ಕ್ಷೇತ್ರ ದರ್ಶನ ಕೋಟಿ ಜನ್ಮಾರ್ಜಿತ ಪುಣ್ಯದಿಂದ ಲಭಿಸುತ್ತದೆ.

---

* ಸದ್ಯಃ= ಆ ಕ್ಷಣ, ಇದ್ದಕ್ಕಿದ್ದ ಹಾಗೆ. ಜಾತ = ಹುಟ್ಟಿದ (ಜನ್ ಧಾತು) ; ಸದ್ಯಃ+ಜಾತ= ಸದ್ಯೋಜಾತ. ಆದ್ದರಿಂದ ಈ ಪದಕ್ಕೆ-ತಂದೆ ತಾಯಿಗಳ ಸಂಸರ್ಗದಿಂದ ಹುಟ್ಟದೆ, ಆವಿರ್ಭವಿಸಿದ ಎಂದು ಅರ್ಥ.

(ಅಗಸ್ತ್ಯ ತೀರ್ಥದ ಕಥೆ)ದುಸ್ಸಹವಾಸದ ಪ್ರಭಾವ—ದ್ರಾವಿಡ ದೇಶದಲ್ಲಿ ಧರ್ಮಜ್ಞನೂ ಸತ್ಯಸಂಧನೂ ಪ್ರಿಯವಾದಿಯೂ ಆಗಿದ್ದ **ಚಿತ್ರಸೇನನೆಂಬ** ರಾಜ ಇದ್ದ. ಅವನು ಒಂದು ಸಲ ಕುತೂಹಲದಿಂದ ಹೊರಟು ಜಟಾಧಾರಿಗಳಾದ ಶೈವರ ಗುಡಿಗೆ ಹೋದ. ಆ ಪಾಷಂಡಿಗಳು ರಾಜನಿಗೆ ಶೈವಧರ್ಮ ಪ್ರಭಾವವನ್ನು ವರ್ಣಿಸಿ 'ವರ್ಣಾಶ್ರಮ ಧರ್ಮಗಳೆಲ್ಲ ಶುದ್ಧ ತಪ್ಪು. ಶಿವದೀಕ್ಷೆಯೇ ಸರ್ವೋತ್ತಮ ಧರ್ಮ. ಜಟೆ ಧರಿಸುವವನೇ ನಿಜವಾದ ಭಕ್ತ. ಅಂಥವನು ವಿಷ್ಣು ದರ್ಶನ ಮಾತ್ರದಿಂದ ಶಿವದ್ರೋಹಿಯಾಗುತ್ತಾನೆ. ಬ್ರಾಹ್ಮಣರಿಗೆ ಕಿಂಚಿದ್ವಸ್ತು ದಾನಮಾಡುವವನು ನರಾಧಮ. ವೈಷ್ಣವರನ್ನು ನಾಶಮಾಡುವುದೇ ಶೈವರ ಧರ್ಮ' ಎಂದು ದುರ್ಬೋಧನೆ ಮಾಡಿ ಅವನ ಮನಸ್ಸೇ ಬದಲಾಯಿಸಿ ಬಿಟ್ಟರು.

ಅವರ ದುರ್ಬೋಧನೆಗೆ ಮರುಳಾಗಿ ಆ ರಾಜ ವೈಷ್ಣವರನ್ನು ಹಿಂಸಿಸುವುದಕ್ಕಾರಂಭಿಸಿ ಕ್ರಮೇಣ ವಿಷ್ಣುನಾಮ ಸ್ಮರಣೆ ಮಾಡುವವರನ್ನೆಲ್ಲಾ ಕೊಲ್ಲಿಸುತ್ತಾ ಬಂದ. ಅದರಿಂದ ಧರ್ಮವೇ ಚ್ಯುತ್ತವಾಗಿ ಮಳೆ ಬೆಳೆಗಳಿಲ್ಲದಂತಾಗಿ ಜನರೆಲ್ಲ ಅಧರ್ಮನಿರತರಾದರು. ಬ್ರಾಹ್ಮಣರಿಗೆ ಮರ ಏರಿ ತಲೆ ತಪ್ಪಿಸಿಕೊಳ್ಳುವ ಹೊತ್ತು ಬಂತು. ಹೀಗೆ ಅನ್ಯಾಯದ ಕಾರಭಾರು ನಡೆಸಿ ಆ ಚಿತ್ರಸೇನ ಕಾಲಗತಿಯನ್ನೈದಿ ರೌರವಾದಿ ನರಕಗಳನ್ನೆಲ್ಲಾ ಅನುಭವಿಸಿ ಇನ್ನೂ ಉಳಿದ ದುಷ್ಕರ್ಮದ ಉಪಭೋಗಕ್ಕಾಗಿ ಪಿಶಾಚನಾಗಿ ಹುಟ್ಟಿ ಕ್ಷುತ್ಪಿಪಾಸಾರ್ದಿತನಾಗಿ ವನ ವನ ಸುತ್ತುತ್ತಿದ್ದ.

ಪಿಶಾಚ ಜನ್ಮನಿವೃತ್ತಿ—ಒಂದು ಸಲ ಆ ಪಿಶಾಚ ಅಗಸ್ತ್ಯ ತೀರ್ಥದ ಬಳಿಗೆ ಬಂದು, ಅಲ್ಲೇ ನೆಲೆಸಿ ಅಲ್ಲಿಗೆ ಸ್ನಾನಕ್ಕೆ ಬಂದ ಯಾತ್ರಿಕರನ್ನೆಲ್ಲಾ ಹೆದರಿಸುತ್ತಿತ್ತು, ಒಂದು ಸಲ ಅಲ್ಲಿಗೆ ಅಗಸ್ತ್ಯರೇ ಸ್ನಾನಕ್ಕಾಗಿ ಬರಲು ಆ ರಾಜ ಪಿಶಾಚ ಆ ಮುನಿಗಳನ್ನು ಮೊರೆಹೊಕ್ಕು ತನ್ನನ್ನು ಉದ್ಧರಿಸಬೇಕೆಂದು ಬೇಡಿಕೊಂಡಿತು. ಅಗಸ್ತ್ಯರು ಅವನಿಗೆ ಆ ತೀರ್ಥದಲ್ಲಿ ಸ್ನಾನಮಾಡುವಂತೆ ಬೋಧಿಸಿ 'ಈ ತೀರ್ಥದಲ್ಲಿ ಸ್ನಾನ ಮಾಡುವುದರಿಂದ ಗೋಹತ್ಯ ಬ್ರಹ್ಮಹತ್ಯಾದಿ ಪಾಪಗಳೂ ನಾಶವಾಗುವುವು. ನಿನ್ನದೇನು ಅತಿಶಯ?' ಎಂದು ತಿಳಿಸಿದರು. ಅದರಂತೆ ಸ್ನಾನ ಮಾಡಿದಾಗ ಚಿತ್ರಸೇನನಿಗೆ ಪಿಶಾಚ ಜನ್ಮ ನಿವೃತ್ತಿಯಾದುದಲ್ಲದೆ ಗಂಧರ್ವ ರೂಪವೂ ಬಂತು. ಅವನು ಅಗಸ್ತ್ಯರಿಗೆ ವಂದಿಸಿ ದೇವಲೋಕಕ್ಕೆ ಪ್ರಯಾಣ ಮಾಡಿದ. ಅವತ್ತಿನಿಂದ ಈ ತೀರ್ಥಕ್ಕೆ ಅಗಸ್ತ್ಯ ತೀರ್ಥವೆಂದು ಹೆಸರು ಬಂತು. ಈ ಮಹಿಮೆ ಶ್ರವಣ ಮಾಡುವವನು ಮುಕ್ತಿಹೊಂದುತ್ತಾನೆ.

ಅಧ್ಯಾಯ 40 ಸೋಮ ತೀರ್ಥ

ಚಂದ್ರನೂ ದಕ್ಷಕನ್ಯೆಯರೂ—ಸಪ್ತರ್ಷಿಗಳು ಅಗಸ್ತ್ಯ ತೀರ್ಥ ಸ್ನಾನ ಮಾಡಿಕೊಂಡು ಸೋಮಗಿರಿಯಲ್ಲಿರುವ ಸೋಮತೀರ್ಥಕ್ಕೆ ಬಂದರು. ಇದರ ಕಥೆಯೇನೆಂದರೆ—

ದಕ್ಷನ ಇಪ್ಪತ್ತೇಳು ಕನ್ಯೆಯರೂ* ಸುಂದರನಾದ ಚಂದ್ರನನ್ನೇ ಲಗ್ನವಾದರು. ಆದರೆ ಚಂದ್ರನಿಗೆ ರೋಹಿಣಿಯ ಮೇಲೆ ಅಧಿಕ ಪ್ರೇಮ ಬೆಳೆದದ್ದರಿಂದ ಮಿಕ್ಕವರನ್ನು ಮಾತು ಸಹ ಆಡಿಸುತ್ತಿರಲಿಲ್ಲ. ಈ ವ್ಯಸನದಿಂದ ಖಿನ್ನರಾಗಿ ಆ ಕನ್ಯೆಯರು ತಮ್ಮ ತಂದೆಯ ಹತ್ತಿರ ಹೋಗಿ ದೂರು ಹೇಳಿಕೊಂಡರು. ದಕ್ಷ ಚಂದ್ರನನ್ನು ಕರೆಸಿ ಅವನ ಪಕ್ಷಪಾತದ ವರ್ತನೆಗಾಗಿ ಅವನನ್ನು ಹೀಯಾಳಿಸಿ ಅವನು ಕ್ಷೀಣನಾಗಿ ಹೋಗುವಂತೆ ಶಾಪಕೊಟ್ಟನು.

ಅದನ್ನು ಕೇಳಿ ಚಂದ್ರ ಮೂರ್ಛೆ ಹೋಗಿ ಬಿದ್ದುಬಿಟ್ಟ. ದಕ್ಷ ಪುತ್ರಿಯರೂ ಸಹ ಆ ಶಾಪದಿಂದ ಖಿನ್ನಮಾನಸರಾಗಿ ತಂದೆಯನ್ನು ಬೇಡಿಕೊಂಡರು. ಆಗ ಕೃಪಾನ್ವಿತನಾದ ದಕ್ಷನು ಪುತ್ರಿಯರ ಕ್ಷೇಮ ಬಯಸಿ ಚಂದ್ರನಿಗೆ ಸೋಮಾದ್ರಿಯಲ್ಲಿ ವಿರೂಪಾಕ್ಷನನ್ನು ಕುರಿತು ತಪಸ್ಸು ಮಾಡುವಂತೆ ಆದೇಶಮಾಡಿದನು.

ಚಂದ್ರನ ಶಾಪನಿವೃತ್ತಿ—ಅದರಂತೆ ಹಿಮಾಂಶು ಸೋಮಾದ್ರಿಗೆ ಬಂದು ಸೋಮತೀರ್ಥದಲ್ಲಿ ಸ್ನಾನಮಾಡಿ ತಪಶ್ಚರಣೆ ಮಾಡಲು ರಾಜಶೇಖರ ಪ್ರತ್ಯಕ್ಷನಾಗಿ, 'ದಕ್ಷ ಕೊಟ್ಟ ಶಾಪವನ್ನು ನೀನು ಅನುಭವಿಸಲೇಬೇಕು. ಆದರೆ ಮಾಸದಲ್ಲಿ ಹದಿನೈದೇ ದಿನ ಕ್ಷೀಣವಾಗುವಂತೆಯೂ, ಪುನಃ ಹದಿನೈದು ದಿನ ವೃದ್ಧಿಹೊಂದುವಂತೆಯೂ ಅನುಗ್ರಹಿಸಿದ್ದೇನೆ. ಅಲ್ಲದೆ ನಿನ್ನನ್ನು ನನ್ನ ತಲೆಯಲ್ಲೇ ಅಲಂಕಾರವಾಗಿ ಧರಿಸಿಕೊಳ್ಳುವೆನು. ಇದರಿಂದಲೂ ನಿನಗೆ ಕೀರ್ತಿಯುಂಟಾಗುವುದು' ಎಂದು ವರಕೊಟ್ಟು ಇಂದುವನ್ನು ಶೀರ್ಷದಲ್ಲಿ ಧರಿಸಿಕೊಂಡುಬಿಟ್ಟ. ಅದನ್ನು ಕಂಡು ಇಂದ್ರಾದಿ ದೇವತೆಗಳೆಲ್ಲರೂ ವಿಸ್ಮಿತರಾಗಿ ಚಂದ್ರನನ್ನೂ ಚಂದ್ರಮೌಳಿಯನ್ನೂ ಹೊಗಳಿದರು. ಸೋಮ ತಪಸ್ಸು ಮಾಡಿದ ಗಿರಿಗೆ ಸೋಮಗಿರಿಯೆಂದೂ, ಸ್ನಾನ ಮಾಡಿದ ತೀರ್ಥಕ್ಕೆ ಸೋಮತೀರ್ಥವೆಂದೂ, ಅವನಿಗೆ ಅನುಗ್ರಹ ಮಾಡಿದ ದೇವನಿಗೆ ಸೋಮೇಶ್ವರನೆಂದೂ ಹೆಸರುಂಟಾಯಿತು. ಸೋಮೇಶ್ವರನ ಈ ಕಥಾಶ್ರವಣ ಮಾಡುವವರು ಶಿವಪದವನ್ನು ಸೇರುತ್ತಾರೆ.

ಅಧ್ಯಾಯ 41 ವ್ಯಾಘ್ರಪ್ಲುತ ತೀರ್ಥ

ವ್ಯಾಘ್ರಪ್ಲುತ ತೀರ್ಥವೆಂದು ಪ್ರಸಿದ್ಧವಾದ ದೇವತೀರ್ಥ ಸೋಮತೀರ್ಥಕ್ಕೆ ಪೂರ್ವದಲ್ಲಿದೆ. ಈ ತೀರ್ಥದ ಪ್ರಭಾವದಿಂದ ಒಬ್ಬ ವಿದ್ಯಾಧರನ ಹುಲಿಮುಖ ನಿವೃತ್ತವಾದ್ದರಿಂದ ಇದಕ್ಕೆ ಈ ಹೆಸರು (ವ್ಯಾಘ್ರ=ಹುಲಿ, ಪ್ಲುತ= ಹಾರಿ ಹೋದ) ಪ್ರಸಿದ್ಧಿಗೆ ಬಂತು.

ವಿದ್ಯಾಧರನ ದೌರ್ಭಾಗ್ಯ—ಒಬ್ಬ ವಿದ್ಯಾಧರನಿಗೆ ಸುಕೃತದ ಫಲವಾಗಿ ಸ್ವರ್ಗವೂ ದೊರಕಿತು, ದೇವತ್ವವೂ ಲಭಿಸಿತು. ಆದರೆ ಕಿಂಚಿತ್ ಪ್ರಾರಬ್ಧ ಕರ್ಮ

* ಅವರೇ ಅಶ್ವಿನಿ ಭರಣೀ ಕೃತ್ತಿಕಾ ಮೊದಲಾದ ನಕ್ಷತ್ರಗಳು ಎಂದು ಹೇಳುವ ಅವಶ್ಯಕತೆಯೇ ಇಲ್ಲ.

ಶಾಪದಿಂದ ಅವನಿಗೆ ಹುಲಿಮುಖ ಬಂದು ಬಿಟ್ಟಿತು. ಅದಕ್ಕಾಗಿ ಅವನು ಬಹಳ ಪೇಚಾಡುತ್ತಿದ್ದನು. ಅವನ ಪತ್ನಿಯಂತೂ ಈ ಅನಿಷ್ಟ ವಿಕಾರ ಹೇಗೆ ದೂರವಾದೀತೆಂದು ಬಹಳ ಪರಿತಪಿಸುತ್ತಿದ್ದಳು.

ಭೃಗುಋುಷಿಗಳ ಸೂಚನೆ—ಒಂದು ದಿನ ಆ ದಂಪತಿಗಳು ಭೃಗುಮುನಿಯನ್ನು ಮೊರೆಹೊಕ್ಕು ಆ ಅನಿಷ್ಟವು ನಿವಾರಣೆಯಾಗುವುದಕ್ಕೆ ಏನಾದರೂ ಉಪಾಯ ಹೇಳುವಂತೆ ಪ್ರಾರ್ಥಿಸಿಕೊಂಡರು. ಭೃಗು ಯೋಗ ದೃಷ್ಟಿಯಿಂದ ಆ ಅನಿಷ್ಟಕ್ಕೆ ಕಾರಣವನ್ನು ನಿವಾರಣೋಪಾಯವನ್ನೂ ತಿಳಿದುಕೊಂಡು 'ವಿದ್ಯಾಧರ ಶ್ರೇಷ್ಠ! ಕರ್ಮಫಲ ವಿಚಿತ್ರವಾದುದು. ಕರ್ಮಗತಿ ಬಲ್ಲವರಾರಿದ್ದಾರೆ?

ಮಕ್ಷಿಕಾ 1 ಪಾದಮಾತ್ರಂ ತು ಯಥಾ ಹಿ ವಿಷಮಾರ್ತಿದ 2 ಮ್ ।
ಕ್ರಿಯಾ ತು ವಿಹಿತಾ 3 ಽಲ್ಪಾಪಿ ವಿಪಾಕೇ ದಾರುಣಾ 4 ಭವೇತ್ ॥

ವಿಷ ನೊಣದ ಕಾಲಿನಷ್ಟೇ ಇದ್ದರೂ ಹೇಗೆ ದುಃಖಪ್ರದವಾಗುತ್ತದೋ ಹಾಗೆಯೇ ಕರ್ಮ ಮಾಡುವಾಗ ಅತ್ಯಲ್ಪವಾಗಿದ್ದರೂ ಪಕ್ವವಾದರೆ ದಾರುಣವಾಗತ್ತದೆ.

ತಥೈವ 5 ಪಾತಕಂ ಕರ್ಮ ಕ್ರಿಯಾಕಾಲೇಽಲ್ಪಮೇವ ತತ್ ।
ತದ್ಭೋಗಸಮಯೇ ಕರ್ತುರ್ವಿಪಾಕೇ ಮೇರುತಾಂ ವ್ರಜೇತ್ 1 ॥

ಹಾಗೆಯೇ ಪಾತಕವು ಮಾಡುವಾಗ ಬಹಳ ಅಲ್ಪವಾಗಿದ್ದರೂ ಅದೇ ಅನುಭವಿಸುವ ಸಮಯದಲ್ಲಿ ಮೇರು ಪರ್ವತದಂತೆ ಆಗುತ್ತದೆ. ನೀನು ಹಿಂದೆ ಒಂದು ಏಕಾದಶೀ ದಿನ ಅಖಂಡ ದೀಪದ ತೈಲವನ್ನು ಮುಖಕ್ಕೆ ಹಚ್ಚಿಕೊಂಡು ಅಭ್ಯಂಗ ಮಾಡಿಕೊಂಡಿದ್ದಿ. ಆ ಪಾಪದಿಂದ ನಿನಗೆ ಈ ವಿಕಾರ ಮುಖ ಬಂದಿದೆ. ಸೋಮಕುಂಡದ ಪೂರ್ವದಲ್ಲಿರುವ ದೇವ ತೀರ್ಥದಲ್ಲಿ ಸೋಮವಾರ ಶಿವಯೋಗದಲ್ಲಿ ವಿಧಿ ಪೂರ್ವಕ ಸ್ನಾನಮಾಡಿದರೆ ನಿನ್ನ ಈ ವೈರೂಪ್ಯ ನಾಶವಾಗುತ್ತದೆ' ಎಂದು ಹೇಳಿದರು. ಅದೇ ಪ್ರಕಾರ ಸ್ನಾನಮಾಡಿದ ಕ್ಷಣದಲ್ಲೇ ಅವನ ವ್ಯಾಘ್ರಮುಖ ಹೋಗಿ ದೇವವದನ ವುಂಟಾಯಿತು. ಅವನು ಭಾರ್ಯಾಸಮೇತನಾಗಿ ಸೋಮೇಶ್ವರನನ್ನು ಪೂಜಿಸಿ ವಿಧ್ಯಾಧರರಿಂದ ಪರಿವೃತನಾಗಿ ಸ್ವರ್ಗಕ್ಕೆ ತೆರಳಿದನು.

ಅಧ್ಯಾಯ 42 ಚರ್ಚಾ ತೀರ್ಥ

ಸಪ್ತರ್ಷಿಗಳು ಅಲ್ಲಿಂದ ಮುಂದೆ ಚರ್ಚಾ ತೀರ್ಥದ ಬಳಿಗೆ ಬಂದರು. ಹಿಂದೆ ಒಂದು ಸಲ ಅನೇಕ ಮಹರ್ಷಿಗಳು ಈ ಸ್ಥಳದಲ್ಲಿ ತತ್ವ ಚರ್ಚೆಮಾಡಿದ್ದರಿಂದ ಈ ಹೆಸರು ಬರಲು ಕಾರಣವಾಯಿತು.

---

1 ನೊಣ 2 ಆರ್ತಿ= ದುಃಖ, ಗೋಳಾಟ 3 ಮಾಡಲ್ಪಟ್ಟ, ಆಚರಿಸಿದ. 4 ಭಯಂಕರ 5 ಹಾಗೆಯೇ, ಅದೇ ರೀತಿ.

1 ಹೊಂದಿತು (ವ್ರಜ್, ಧಾತುವಿಗೆಹೋಗು ಎಂಬರ್ಥ)

ತತ್ವದ ಚರ್ಚೆ—ಹಿಂದೆ ತತ್ವ ಜಿಜ್ಞಾಸುಗಳಾದ ಅನೇಕ ಮಹರ್ಷಿಗಳು ಈ ಸ್ಥಳದಲ್ಲಿ ಸಮ್ಮಿಲಿತರಾಗಿ ವೇದಾಂತಾರ್ಥವನ್ನು ಚರ್ಚೆ ಮಾಡಲಾರಂಭಿಸಿದರು. ಚರ್ಚೆಯೇನೊ ಬಹಳ ನಡೆಯಿತು. ಆದರೆ ಯಾವುದೂ ನಿರ್ಣಯವಾಗಲಿಲ್ಲ. ಆಗ ಆ ಮಹರ್ಷಿಗಳೆಲ್ಲರೂ ಪರಮೇಶ್ವರನನ್ನು ಸ್ತೋತ್ರ ಮಾಡಿದರು. ಆ ಸ್ತೋತ್ರದಿಂದ ಭಗವಾನ್ ಮಹಾದೇವ ಪ್ರಸನ್ನನಾಗಿ ಅವರಿಗೆ ಅಲ್ಲಿರುವ ತೀರ್ಥದಲ್ಲಿ ಸ್ನಾನ ಮಾಡುವಂತೆ ಹೇಳಿ, ಸ್ನಾನದಿಂದ ಪರಿಶುದ್ಧರಾದ ಆ ಮಹರ್ಷಿಗಳಿಗೆ ಪರಬ್ರಹ್ಮಸ್ವರೂಪವಾಗಿ ತತ್ವೋಪದೇಶಮಾಡಿದನು.

ಈ ತೀರ್ಥದಲ್ಲಿ ಸ್ನಾನಮಾಡುವವರಿಗೆ ಜ್ಞಾನಾಭಿವೃದ್ಧಿಯಾಗುತ್ತದೆ; ಶ್ರಾವಣ ಸೋಮವಾರ ಮಾಡಿದರೆ ತತ್ರಾಪಿ ವಿಶೇಷ.

ಅಧ್ಯಾಯ 43 ನಾಭಿಮತಿ ತೀರ್ಥ

[ಈ ಹೆಸರು ಹೇಗೆ ಬಂದಿತೆಂಬುದನ್ನು ಪುರಾಣದಲ್ಲಿ ಕಂಠೋಕ್ತವಾಗಿ ಹೇಳಿಲ್ಲ. ಮೃಗನಾಭಿ ಎಂದರೆ ಕಸ್ತೂರಿ ಮೃಗ; ಅದು 'ಮತೀ' ಉಳ್ಳದ್ದು ಎಂಬ ಅರ್ಥದಿಂದ ಈ ಹೆಸರು ಬಂದಿರಬೇಕು. ಶಂಕರನೆಂಬ ಕುಮಾರ ಶಾಪದಿಂದ ಕಸ್ತೂರೀ ಮೃಗಗಳಾಗಿದ್ದ ದೇವತೆಗಳನ್ನು ಈ ತೀರ್ಥದ ಪ್ರಭಾವದಿಂದ ಉದ್ಧಾರ ಮಾಡಿದ ಕಥೆ ಎರಡು ಅಧ್ಯಾಯಗಳಲ್ಲಿ ವಿವರಿಸಲ್ಪಟ್ಟಿದೆ. —ವಿ. ತೀ.]

ಸುವ್ರತನ ಕಥೆ—ತುಂಗಭದ್ರಾ ನದಿಯ ದಡದ ಮೇಲೆ ಹಂಪೆಗೆ ಸಮೀಪದಲ್ಲೇ ರುದ್ರಪಾದವೆಂಬ ಪಟ್ಟಣವಿತ್ತು. ಅದರಲ್ಲಿ [1]ಸುವ್ರತನೆಂಬ ಪಂಡಿತನಿದ್ದ. ಅವನು ಧನಾರ್ಜನಾಕಾಂಕ್ಷೆಯಿಂದ ಧರ್ಮಶಾಸ್ತ್ರ ಪುರಾಣ ಗಜಾಶ್ವಾದಿ ಶಾಸ್ತ್ರಗಳನ್ನೆಲ್ಲಾ ಓದಿಕೊಂಡು ಅತ್ಯಂತ ಹೇಯವಾದ ಕಾರ್ಯಗಳನ್ನು ಮಾಡುವುದಕ್ಕೂ ಹೇಸದೆ ಪ್ರಪಂಚದಲ್ಲಿ ದುರ್ದಾನಗಳೆಂದು ಪ್ರಸಿದ್ಧವಾದ ಎಲ್ಲಾ ವಿಧಗಳಿಂದಲೂ; ಕನ್ಯಾ ವಿಕ್ರಯ ತಿಲ ಸೈಂಧವ ತೈಲಾಜ್ಯಾದಿಗಳ ಮಾರಾಟ ಗೋವುಗಳ ಕ್ರಯ ವಿಕ್ರಯ ಇತ್ಯಾದಿ ನಿಷಿದ್ಧ ಕೃತ್ಯಗಳಿಂದಲೂ ಹೇರಳವಾಗಿ ಧನ ಸಂಪಾದನೆ ಮಾಡಿದ.

ಪಶ್ಚಾತ್ತಾಪ—ಕಾಲಗತಿಯಿಂದ ಅವನಿಗೆ ಜರೆ ಬಂದು ಅಡರಿತು, ಕಣ್ಣು ಕಾಣದಂತಾಯಿತು, ಕಿವಿ ಕೇಳದಂತಾಯಿತು, ಸಾಲದ್ದಕ್ಕೆ ದುಷ್ಕರ್ಮದ ಫಲವಾಗಿ ನಾನಾ ವ್ಯಾಧಿಗಳು ಬೇರೆ ಗಂಟು ಬಿದ್ದುವು. ಇದೆಲ್ಲರಿಂದ ಶಿಥಿಲಗಾತ್ರನಾದ ಸುವ್ರತ ಬಂಧುಗಳಿಂದಲೂ ತಿರಸ್ಕೃತನಾಗಿ ಎಲ್ಲರಿಂದಲೂ ಛೀ ಛೀ ಥೂ ಥೂ ಅನ್ನಿಸಿಕೊಳ್ಳುತ್ತಾ ಅಸಹನೀಯವಾದ ಹಿಂಸೆಗೆ ಗುರಿಯಾದಾಗ ಅವನಿಗೆ ವಿವೇಕೋದಯವಾಯಿತು. ಅವನು ತನ್ನೊಳಗೆ ತಾನೇ 'ಅಯ್ಯೋ, ಎಂಥಾ ಅವಿವೇಕಿಯಾದೆ ನಾನು! ನನ್ನ ಜೀವನವನ್ನೆಲ್ಲಾ ವೃಥಾ ಧನಾರ್ಜನೆಯಲ್ಲೇ ಕಳೆದು ಬಿಟ್ಟೆನಲ್ಲಾ ಇಡೀ ಜನ್ಮದಲ್ಲಿ ಒಂದಾದರೂ ಪುಣ್ಯ ಕೆಲಸ ಮಾಡಲಿಲ್ಲ, ಯಮನು ಕೇಳಿದರೆ ಏನು

---

1 ಸು = ಒಳ್ಳೆಯ, ವ್ರತ = ನಿಯಮವುಳ್ಳವನು. ಹೆಸರು ಹೀಗಿದ್ದರೂ ಅವನು ಮಾತ್ರ ದುರ್ವ್ರತನೇ.

ಅಗ್ನಿ ಸಡಗರದಿಂದ ತನ್ನ ಜ್ವಾಲೆಗಳನ್ನು ಸುತ್ತಲೂ ಕೆದರಿಕೊಂಡು ಠೀವಿಯಿಂದ ಕುತ್ತಿಗೆ ಸೊಟ್ಟಮಾಡಿಕೊಂಡು ತಿರಸ್ಕಾರವಾಣಿಯಿಂದ 'ಛೀ ನಿನ್ನ! ಇಷ್ಟೇ ಏನು ನಿನ್ನ ಜ್ಞಾನ! ಕಲ್ಪಕಲ್ಪಾಂತದುರ್ದಾಂತನಾದ ಮಹಾನಲನೆಂದು ವಿಶ್ವವಿಖ್ಯಾತನಾದ ನನ್ನನ್ನೂ ಕಂಡು ಕೇಳರಿಯೆಯಾ? ಹವನ-ಹೋಮ ಯಜ್ಞಯಜನ ಕಾರ್ಯಗಳಲ್ಲೆಲ್ಲಾ ಕೊಡುವ ಹವಿರ್ಭಾಗಗಳನ್ನು ಆಯಾಯಾ ದೇವತೆಗಳಿಗೆ ತೆಗೆದುಕೊಂಡು ಹೋಗಿ ಕೊಡುವ ದೇವತೆಗಳ ಮುಖವೇ ನಾನೆಂಬುದು ನಿನಗೆ ಗೊತ್ತೆ ಇಲ್ಲವೆ? ಆಶ್ಚರ್ಯ. ನಾನು ಜಗತ್ತಿನ ಒಳಹೊರಗೆಲ್ಲಾ ವ್ಯಾಪ್ತನಾಗಿದ್ದೇನೆ. ಪ್ರಳಯದಲ್ಲಿ ಜಗತ್ತನ್ನೆಲ್ಲಾ ಸುಟ್ಟು ದಹಿಸುವವನು ನಾನೇ! ನಾನಿಲ್ಲದೆ ಸೃಷ್ಟಿ ಸ್ಥಿತಿ ಲಯಗಳಾವುವೂ ನಡೆಯಲಾರವು. ನಾನು ಅನಾದಿ ಅನಂತ. ಈಗ ಆಕಸ್ಮಾತ್ತಾಗಿ ಮಧ್ಯದಲ್ಲಿ ಬಂದಿರುವ ನೀನಾರು? ಅದನ್ನು ಮೊದಲು ತಿಳಿಸು' ಎಂದು ಗರ್ಜಿಸಿದನು.

ಅಗ್ನಿಯ ಗರ್ವಭಂಗ—ಅದಕ್ಕೆ ಯಕ್ಷ ಸ್ವಲ್ಪ ನಕ್ಕು ಅಗ್ನಿಯ ಮುಂದೆ ಒಂದು ಎಸಳು ಹುಲ್ಲಿನ ಚೂರು ಹಾಕಿ 'ಓಹೋ! ಹಾಗೇನು? ಎಲ್ಲಿ ಇದನ್ನು ಸುಡು ನೋಡೋಣ' ಎಂದು ಹೇಳಿದ. ಅಗ್ನಿ ಮತ್ತಷ್ಟು ತಿರಸ್ಕಾರ ವ್ಯಕ್ತಪಡಿಸುತ್ತಾ 'ಅಯ್ಯೋ ನಿನ್ನ ಕೀಳುತನವೇ! ಬ್ರಹ್ಮಾಂಡ ಕೋಟಿಗಳನ್ನೇ ಸುಟ್ಟು ದಹಿಸುವ ನನ್ನ ಮುಂದೆ ಈ ಹುಲ್ಲೆಸಳು ಈಡಾದೀತೇ! ಕ್ಷುದ್ರ ಜನರಿಗೆ ಆ ಕೀಳು ಬುದ್ಧಿ ಹೇಗೆ ಹೋದೀತು? ಇರಲಿ, ಮೊದಲು ಇದನ್ನು ಸುಟ್ಟು ಆಮೇಲೆ ನಿನ್ನನ್ನೂ ಕಬಳಿಸಿದರೆ ನನ್ನ ಶಕ್ತಿ ಆಗ ತಾನೇ ತಿಳಿಯುತ್ತದೆ' ಎಂದು ಹೇಳುತ್ತಾ ಉದಾಸೀನತೆಯಿಂದ ಯಾವುದೋ ಒಂದು ಉರಿಜ್ವಾಲೆಯ ತುದಿಯಿಂದ ದಹಿಸಲೆತ್ನಿಸಿದನು. ಆದರೆ ಏನೂ ಪ್ರಯೋಜನವಾಗಲಿಲ್ಲ. ಅಗ್ನಿಗೆ ರೇಗಿತು. ತನ್ನ ಸಪ್ತ ಜ್ವಾಲೆಗಳನ್ನೂ ತೀಕ್ಷ್ಣವಾಗಿ ಅಡರಿಸಿಕೊಂಡು ಉತ್ಸಾಹಭರಿತನಾಗಿ ಬಲವೆಲ್ಲಾ ಪ್ರಯೋಗಿಸಿದರೂ ಹುಲ್ಲೆಸಳು ಜುಮ್ಮೆನ್ನಲಿಲ್ಲ. ಅದಿರಲಿ, ಆ ಹುಲ್ಲೆಸಳೇ ಅಗ್ನಿಯ ತೇಜಸ್ಸನ್ನೆಲ್ಲಾ ನುಂಗಿಬಿಟ್ಟಿತು. ಅಗ್ನಿ ನಿಸ್ತೇಜನಾಗಿ ನಿರ್ವಿಣ್ಣನಾಗಿಬಿಟ್ಟ. ಅವನ ಆ ದೀನ ಸ್ಥಿತಿ ಕಂಡು ಯಕ್ಷ ಗಹಗಹಿಸಿ ನಕ್ಕುಬಿಟ್ಟ. ಅಗ್ನಿ ನಿಸ್ತೇಜನಾಗಿ ಸಪ್ಪೆ ಮುಖಹಾಕಿಕೊಂಡು ತಲೆ ಎತ್ತದೆ ದೇವತೆಗಳ ಬಳಿಗೆ ಹಿಂತಿರುಗಿ ಹೋಗಿ ದೈನ್ಯತೆಯಿಂದ ತನ್ನ ಪರಾಭವದ ಸಮಾಚಾರವನ್ನು ಅವರಿಗೆಲ್ಲಾ ಹೇಳಿದನು.

ಅಧ್ಯಾಯ 49 ದೇವತೆಗಳ ಗರ್ವಭಂಗ

ವಾಯುವಿನ ಬಡಾಯಿ—ಅಗ್ನಿ ಹೇಳಿದ್ದು ಕೇಳಿ ಇಂದ್ರನೂ ಕೂಡ ಸ್ವಲ್ಪ ಶಿಥಿಲ ಮನಸ್ಕನಾದ. ಅಷ್ಟರಲ್ಲೇ ವಾಯು ಎದ್ದು 'ನಾನು ಹೋಗಿ ಆ ಯಕ್ಷನನ್ನು ಅಟ್ಟಿ ಬರುತ್ತೇನೆ' ಎಂದು ಕೊಚ್ಚಿಕೊಂಡು ವೇಗದಿಂದ ಯಕ್ಷನ ಬಳಿಗೆ ನಡೆದ. ಯಕ್ಷ

ಅವನನ್ನು 'ನೀನಾರಪ್ಪ?' ಎಂದು ವಿಚಾರಿಸಲು, ವಾಯು ತುಚ್ಛಭಾವನೆ ಪ್ರಕಟಿಸುತ್ತಾ ಹೀಗೆ ಹೇಳಿದ–'ಅರೇ, ಏನಿದು? ನಾನು ಯಾರೆಂಬುದೇ ಗೊತ್ತಿಲ್ಲವೆ? ಲೋಕದಲ್ಲೆಲ್ಲಾ ಬಲಾಧಿಕನಾದ ವಾಯುವೇ ನಾನು. ನಿನ್ನನ್ನು ಮೊದಲುಮಾಡಿಕೊಂಡು ಸಕಲ ಚರಾಚರ ಪ್ರಾಣಿಗಳ ಶ್ವಾಸೋಚ್ಛ್ವಾಸಗಳಿಗೆಲ್ಲಾ ನಾನೇ ಪ್ರೇರಕ. ವೇಗದಲ್ಲಿ ಪ್ರಭಾವದಲ್ಲಿ ಸತ್ವದಲ್ಲಿ ಬಲದಲ್ಲಿ ನನ್ನ ಸಮಾನ ದೇವಾಸುರರ ಮಧ್ಯೆ ಯಾರೂ ಇಲ್ಲ. ಯುಗ ವಿಪ್ಲವದಲ್ಲಿ ನಾನು ಸಪ್ತ ಸಮುದ್ರಗಳನ್ನೂ ಅಲ್ಲೋಲ ಕಲ್ಲೋಲ ಮಾಡಿಬಿಡುವೆನು. ಗಗನ ಚುಂಬಿಗಳಾದ ಭಾರಿ ಭಾರಿ ಮರಗಳನ್ನೂ ಸಹ ನಾನು ಉರುಳಿಸಿ ಬಿಡಬಲ್ಲೆ. ದೊಡ್ಡ ದೊಡ್ಡ ಕುಲಾಚಲಗಳನ್ನೂ ನಡುಗಿಸಿ ಬಿಡುತ್ತೇನೆ. ಅಗ್ನಿ ನನ್ನ ಸಹಾಯದಿಂದಲೇ ಉರಿಯುತ್ತಾನೆ. ಇನ್ನು ನನ್ನ ಸುದ್ದಿ ಏನು? ನೀನಾರು? ಏಕೆ ಬಂದಿದ್ದೀಯೆ? ಇದನ್ನೆಲ್ಲಾ ತಿಳಿದುಕೊಳ್ಳಬೇಕೆಂದು ನಾನು ದೇವ ಪ್ರೇಷಿತನಾಗಿ ಬಂದಿದ್ದೇನೆ, ಎಲ್ಲಾ ವಿವರವಾಗಿ ಹೇಳು'

ವಾಯು ಗರ್ವಭಂಗ—ಆಗ ಯಕ್ಷ 'ನನ್ನ ವಿಚಾರ ಇರಲಿ. ಇಷ್ಟೆಲ್ಲಾ ಕೊಚ್ಚಿಕೊಳ್ಳುತ್ತೀಯಲ್ಲಾ, ನಿನ್ನ ಕೈಲಿ ಈ ಹುಲ್ಲಾದರೂ ಅಲ್ಲಾಡಿಸುವುದಕ್ಕಾಗುತ್ತದೆಯೆ?' ಎಂದು ಹೇಳುತ್ತಾ ಹುಲ್ಲನ್ನು ಅವನ ಕಡೆ ಜರುಗಿಸಿದ. ಕೂಡಲೇ ವಾಯು ಬಲವೆಲ್ಲಾ ಪ್ರಯೋಗಿಸಿ ಎಷ್ಟೆಷ್ಟು ತಿಣಕಾಡಿದರೂ ತೃಣದ ತುಟ್ಟತುದಿ ಕೂಡ ಅಲ್ಲಾಡಲಿಲ್ಲ. ವಾಯು ಸೋತು ಲಜ್ಜಿತನಾಗಿ ಕೆಳಮುಖ ಹಾಕಿಕೊಂಡು ಮರುಮಾತಾಡದೆ ಹಿಂದಿರುಗಿದ.

ಇತರರ ಪಾಡು—ವಾಯುವೂ ಸೋತು ಬಂದುದನ್ನು ನೋಡಿ ಎಲ್ಲರನ್ನೂ ಕರೆದುಕೊಂಡು ಕೇಶವನೇ ಅಲ್ಲಿಗೆ ಬಂದನು. ಯಕ್ಷ ಪಕ್ಕಕ್ಕೆ ತೃಣ ಸರಿಸಿ ತಾನು ಉದಾಸೀನ ಭಾವದಿಂದ ಕುಳಿತುಕೊಂಡ. ಅನಲಾನಿಲರಿಗೆ ಮುಖಭಂಗ ಮಾಡಿದ ಆ ತೃಣವನ್ನು ಕಿತ್ತೊಗೆಯಬೇಕೆಂದು ದೇವತೆಗಳೆಲ್ಲರೂ ನಾನು ಮುಂದು, ತಾನು ಮುಂದು ಎಂದು ಮೇಲಾಡುತ್ತಾ ಬಂದು ಸಮ್ಮಿಳಿತರಾಗಿ ತಮ್ಮ ತಮ್ಮ ಆಯುಧಗಳಿಂದ ಹೊಡೆದಾಡಿದರೂ ಆ ಹುಲ್ಲೆಸಳನ್ನು ಕಿತ್ತೊಗೆಯುವುದಿರಲಿ, ಅಲ್ಲಾಡಿಸುವುದಕ್ಕೂ ಕೂಡ ಸಾಧ್ಯವಾಗಲಿಲ್ಲ. ದೇವತೆಗಳ ಗರ್ವವೆಲ್ಲ ಅಡಗಿಹೋಯಿತು. ಹೀಗೆ ಅವರಿಗೆ ಬುದ್ಧಿಗಲಿಸಿ ತೇಜಸ್ಸು ತೃಣ ಎರಡೂ ಅವರೆಲ್ಲ ನೋಡುತ್ತಿದ್ದ ಹಾಗೆ ಕಣ್ಣೆದುರಿಗೆ ಅದೃಶ್ಯವಾದುವು.

ಶಕ್ತಿಯ ಉಪದೇಶ—ಈ ಆಶ್ಚರ್ಯ ಕಂಡು ದೇವತೆಗಳು 'ಅಯ್ಯೋ, ನಮ್ಮೆಲ್ಲರ ತೇಜೋಭಂಗ ಮಾಡಿದ ಈ ತೇಜಸ್ಸು ಯಾವುದೆಂಬುದೇ ತಿಳಿಯದೆ ಹೋಯಿತಲ್ಲಾ!' ಎಂದು ಪೇಚಾಡುತ್ತಿರಲು ತಟಿತ್ಕೋಟಿನಿಭ ಪ್ರಭೆಯುಳ್ಳ ಒಂದು

ಶಕ್ತಿ ದಶದಿಕ್ಕುಗಳನ್ನೂ ತನ್ನ ಪ್ರಭೆಯಿಂದಲೇ ಮುಚ್ಚುತ್ತಾ ಉದಯಿಸಿತು. ಅದಕ್ಕೆ ದೇವತೆಗಳೆಲ್ಲರೂ ಮಣಿದು 'ದೇವಿ, ನೀನು ಯಾರು ? ಹಿಂದೆ ಕಾಣಿಸಿದ ತೇಜಸ್ಸಾವುದು ? ನಮಗೆ ತಿಳಿಸಿ ಅನುಗ್ರಹ ಮಾಡು' ಎಂದು ಪ್ರಾರ್ಥಿಸಿದರು.

ಅದಕ್ಕೆ ಉತ್ತರವಾಗಿ ಶಕ್ತಿಯು 'ಹಿಂದೆ ನಿಮಗೆ ಕಾಣಿಸಿದ್ದು ಯಾವುದೋ ಶಕ್ತಿಯಲ್ಲ, ಅದು ಹೇಮಕೂಟಾಧಿಪತಿಯಾದ ಸಾಕ್ಷಾತ್ ವಿರೂಪಾಕ್ಷ. ಬೃಹಸ್ಪತಿಯ ಹಿತವಾಕ್ಯ ಕೇಳದೆ ಗರ್ವಾಂಧರಾಗಿದ್ದ ನಿಮಗೆ ಬುದ್ಧಿ ಕಲಿಸುವುದಕ್ಕಾಗಿ ಹೀಗೆ ಮಾಡ ಬೇಕಾಯಿತು. ನಾನು ಅವನ ಪರಶಕ್ತಿ. ನನ್ನ ಹೆಸರು ಹೇಮವತೀ. ನಿಮ್ಮ ರಕ್ಷಣಾರ್ಥ ಇಲ್ಲಿಗೆ ಬಂದಿದ್ದೇನೆ. ಇಲ್ಲೇ ಹತ್ತಿರದಲ್ಲಿರುವ ಮಾಣಿಭದ್ರೇಶ್ವರನನು ಆರಾಧಿಸಿ ಅವರ ಬಳಿ ಇರುವ ದಿವ್ಯ ಸರಸ್ಸಿನಲ್ಲಿ ಸ್ನಾನ ಮಾಡಿದರೆ ನಿಮ್ಮ ಅಜ್ಞಾನ ಮತ್ತು ಅಹಂಕಾರ ರೂಪವಾದ ಪಶುಪಾಶ ನಿವೃತ್ತಿಯಾಗುತ್ತದೆ' ಎಂದು ತಿಳಿಸಿ ಅದೃಶ್ಯಳಾದಳು.

ಅದರಂತೆ ದೇವತೆಗಳೆಲ್ಲಾ ಪಾಪನಾಶನ ತೀರ್ಥದಲ್ಲಿ ಸ್ನಾನಮಾಡಿ ಮಾಣಿ ಭದ್ರನನ್ನು ಆರಾಧಿಸಿ ಅಜ್ಞಾನನೆಂಬ ಪಶು–ಪಾಶದಿಂದ ಮುಕ್ತರಾದರು. ಅಂದಿ ನಿಂದ ಈ ತೀರ್ಥಕ್ಕೆ ಪಾಪನಾಶನ[1] ತೀರ್ಥನೆಂಬ ಹೆಸರೂ ಪ್ರಸಿದ್ಧವಾಯಿತು. ಈ ಕಥೆ ಕೇಳುವವರೂ ಪಠನಮಾಡುವವರೂ ಇಹದಲ್ಲಿ ಸಕಲಭೋಗಗಳನ್ನು ಪಡೆದು ಪರದಲ್ಲಿ ಶಿವಪದ ಸೇರುತ್ತಾರೆ.

ಅಧ್ಯಾಯ 50 ಪ್ರಸನ್ನ ತೀರ್ಥ

ಶತ್ರುಂಜಯನ ಕಥೆ—ಪ್ರಸನ್ನ ತೀರ್ಥ ಪಾಪ [ಅಥವಾ ಪಾಶ]ನಾಶನ ತೀರ್ಥಕ್ಕೆ ದಕ್ಷಿಣದಲ್ಲಿದೆ. ಹಿಂದೆ ಶತ್ರುಂಜಯ ವಂಗ ದೇಶಕ್ಕೆ ರಾಜನಾಗಿದ್ದ ; ಅವನ ಮಂತ್ರಿಯ ಹೆಸರು ಸುಮತಿ. ಒಂದು ದಿನ ಅವರಿಬ್ಬರೂ ಬೇಟೆಯಾಡು ವುದಕ್ಕೆ ಹೋಗಿದ್ದಾಗ ಅಲ್ಲಿ ಇಲ್ಲಿ ಅಡ್ಡಾಡುತ್ತಾ ಮಾಣಿಭದ್ರೇಶ್ವರನ ಬಳಿ ಬಂದು ದಿವ್ಯ ಸರಸ್ಸು ಕಂಡರು. ಅದರಿಂದ ಓಂಕಾರ ಧ್ವನಿ ಬರುತ್ತಿದ್ದುದರಿಂದ ಕುತೂಹಲಾ ವಿಷ್ಟರಾಗಿ ಹುಡುಕಾಡುತ್ತಿರಲು ಮಧ್ಯಸರಸ್ಸಿನಿಂದ ದಂಡಕಾಷಾಯ ಸಹಿತನಾದ ಒಬ್ಬ ಋಷಿ ಎದ್ದನು.

ಇನ್ನೊಬ್ಬ ಮುನಿಯ ದರ್ಶನ—ರಾಜ ಆ ಋಷಿಗೆ ದಂಡಪ್ರಣಾಮ ಮಾಡಿ 'ತಮ್ಮ ದರ್ಶನದಿಂದ ನಾವು ಕೃತಾರ್ಥರಾದೆವು. ತಾವು ಯಾರು ? ಇಲ್ಲಿಗೆ ಬಂದಿರುವ ಉದ್ದೇಶವೇನು? ಅನುಗ್ರಹಮಾಡಿ ತಿಳಿಸಬೇಕೆಂದು ಪ್ರಾರ್ಥಿಸಿದನು. ಅದಕ್ಕೆ ಆ ಋಷಿ 'ನಾನು ನೈಮಿಶನೆಂಬ ಮುನಿ. ಇಲ್ಲಿಗೆ ಮಾಣಿಭದ್ರೇಶ್ವರನ ದರ್ಶನ ಮಾಡಿಕೊಂಡು ತಪಸ್ಸು ಮಾಡುವುದಕ್ಕಾಗಿ ಬಂದಿದ್ದೇನೆ. ಇಲ್ಲೇ ಸಮೀಪದಲ್ಲಿರುವ

---

1 ಪಾಶ= ಹಗ್ಗ, ಅಜ್ಞಾನ ಅಥವಾ ಅಹಂಕಾರ ರೂಪವಾದ ಬಂಧನ ಎಂದರ್ಥ ; ಅದನ್ನು ನಾಶ ಪಡಿಸುವ.

ವಿಶ್ವನಾಥನೆಂಬ ಮಹರ್ಷಿಯ ದರ್ಶನ ಮಾಡಿ ಕೃತಾರ್ಥರಾಗಿ' ಎಂದು ಹೇಳಿ ಅವರಿಬ್ಬರಿಗೂ ಧ್ಯಾನಾರೂಢನಾಗಿದ್ದ ಆ ಮುನಿಯನ್ನು ತೋರಿಸಿ ತಪಸ್ಸಿಗೆ ಹೊರಟು ಹೋದ.

ವಿಶ್ವನಾಥ ವಶನಾದ ಬಗೆ—ಮಂತ್ರಿ ರಾಜ ಇಬ್ಬರೂ ಆ ವಿಶ್ವನಾಥನನ್ನು ಒಲಿಸಿಕೊಳ್ಳಲು ಏನೇನೋ ಯತ್ನ ಮಾಡಿದರು. ಆದರೆ ಆ ಋಷಿ ಸಮಾಧ್ಯವಸ್ಥೆಯಿಂದ ಬಹಿರ್ಮುಖರಾಗಲೇ ಇಲ್ಲ. ಅದರಿಂದ ಇಬ್ಬರೂ ನಿರುಪಾಯರಾಗಿ ಹಿಂದಿರುಗಬೇಕಾಯಿತು. ಮಂತ್ರಿ ನಂದಿನೀ ಎಂಬ ವೇಶ್ಯೆಯನ್ನು ಕರೆಸಿ ಅವಳಿಗೆ ಏನಾದರೂ ಉಪಾಯ ಮಾಡಿ ವಿಶ್ವನಾಥನನ್ನು ಒಲಿಸಿಕೊಂಡು ಊರಿಗೆ ಕರೆದುಕೊಂಡು ಬರಶಕ್ಯದ್ದೆಂದೂ ಹಾಗೆ ಮಾಡಿದರೆ ಉತ್ತಮವಾದ ಗ್ರಾಮಗಳನ್ನು ಬಳುವಳಿಯಾಗಿ ಕೊಡುವುದಾಗಿಯೂ ಹೇಳಿಕಳುಹಿಸಿದನು.

ನಂದಿನಿ ತಿಂಗಳುಗಟ್ಟಲೆ ಆ ಋಷಿಯ ಬಳಿಯಲ್ಲೇ ಇದ್ದು ಏನೇನು ಉಪಾಯ ಮಾಡಿದರೂ ಋಷಿಯ ಸಮಾಧಿ ಮುಗಿಯಲಿಲ್ಲ. ಅವಳು ಬಹಳ ನಿರುತ್ಸಾಹಳಾದಳು. ಆದರೂ ಸ್ವಲ್ಪ ಧೈರ್ಯ ತಾಳಿ ಹೊಸ ಹೊಸ ಪ್ರಯೋಗ ಮಾಡಲಾರಂಭಿಸಿದಳು. ಪ್ರತಿನಿತ್ಯ ಅವನ ಮೈಗೆ ಚಂದನಾದಿ ಲೇಪಗಳನ್ನು ಬಳಿಯ ಹತ್ತಿದಳು. ರುಚಿ ರುಚಿಯಾದ ತಿಂಡಿಗಳನ್ನು ಮಾಡಿ ಅವನ ಬಾಯಿಗೆ ಸವರುತ್ತಾ ಬಂದಳು. ಹೀಗೆ ಮಾಡುತ್ತಾ ಆರು ತಿಂಗಳು ಕಳೆದುಹೋದ ಬಳಿಕ ಒಂದು ದಿನ ವಿಶ್ವನಾಥ ಬಾಯಿಬಿಟ್ಟು ತಿಂಡಿಯ ರುಚಿ ನೋಡಿದ. ನಂದಿನಿಗೆ ಅಷ್ಟೇ ಬೇಕಾಗಿತ್ತು. ಹಾಗೆಯೇ ತಿಂಡಿಕೊಡುತ್ತಾ ಕೊಡುತ್ತಾ ಭಾವ ಭಂಗಿಗಳನ್ನು ತೋರಿಸಿ ವಿಶ್ವನಾಥನ ಮನಸ್ಸು ಆಕರ್ಷಿಸಿ ಅವನನ್ನು ತನ್ನ ವಶಮಾಡಿಕೊಂಡು ಕ್ರಮೇಣ ಅವನೊಡನೆ ವಿಹಾರ ಮಾಡಲಾರಂಭಿಸಿದಳು. ಕಾಲಕ್ರಮದಲ್ಲಿ ಅವನಿಂದ ಗರ್ಭಧಾರಣಮಾಡಿ ಅವಳಿ ಮಕ್ಕಳನ್ನು ಹೆತ್ತಳು. ಹೀಗೆ ಆ ಋಷಿ ನಂದಿನಿಗೆ ಸಂಪೂರ್ಣವಾಗಿ ವಶನಾಗಿ ಬಿಟ್ಟ.

ಇಷ್ಟಾರ್ಥ ಲಾಭ—ಆಗ ನಂದಿನಿ ಆ ಮುನಿಯನ್ನೂ ತನ್ನ ಅವಳಿ ಮಕ್ಕಳನ್ನೂ ಕರೆದುಕೊಂಡು ರಾಜಧಾನಿಗೆ ಬಂದು ರಾಜ ಮಂತ್ರಿಗಳಿಗೆ ಈ ಸಮಾಚಾರ ಹೇಳಿ ಕಳುಹಿಸಿದಳು. ಶತ್ರುಂಜಯ ಒಡನೆಯೇ ಅಲ್ಲಿಗೆ ಬಂದು ವಿಶ್ವನಾಥನನ್ನು ಕಂಡು ನಮಸ್ಕರಿಸಿ ಅವನನ್ನು ಮೋಕ್ಷೋಪಾಯ ಮಾರ್ಗ ಹೇಳಿಕೊಡುವಂತೆ ಪ್ರಾರ್ಥಿಸಿಕೊಂಡ. ಆಗ ವಿಶ್ವನಾಥ ರಾಜನಿಗೆ 'ನಾನು ತಪಸ್ಸು ಮಾಡುತ್ತಿದ್ದ ಸ್ಥಳದಲ್ಲಿ ಪ್ರಸನ್ನ ತೀರ್ಥವಿದೆ. ಅದರಲ್ಲಿ ಪ್ರತಿ ನಿತ್ಯ ಸ್ನಾನ ಮಾಡಿ ಮಹಾದೇವನನ್ನು ಅರ್ಚಿಸಿದರೆ ಮುಕ್ತಿಯಾಗುತ್ತದೆ, ಎಂದು ತಿಳಿಸಿದನು. ಅದರಂತೆ ಶತ್ರುಂಜಯ ದಕ್ಷಿಣ ಕಾಶೀ ಎನಿಸಿದ ಪಂಪಾಕ್ಷೇತ್ರಕ್ಕೆ ಹೋಗಿ ಪ್ರಸನ್ನ ತೀರ್ಥದಲ್ಲಿ ಸ್ನಾನಮಾಡಿ ಮಾಣಿಭದ್ರೇಶ್ವರನನ್ನು ಆರಾಧಿಸಿ ಮುಕ್ತಿಪಡೆದನು.

ಹೀಗೆ ಈ ತೀರ್ಥದಲ್ಲಿ ಸ್ನಾನಮಾಡಿದರೆ ಮಹೇಶ ಪ್ರಸನ್ನನಾಗುವುದರಿಂದ ಈ ತೀರ್ಥವನ್ನು ಜ್ಞಾನಿಗಳು ಪ್ರಸನ್ನ ತೀರ್ಥವೆಂದು ಕರೆಯುವರು. ಪ್ರಾತಃಕಾಲ ದಲ್ಲಿ ಇದರ ನಾಮಸ್ಮರಣೆ ಮಾಡುವವರೂ ಪರಮಪದ ಪಡೆಯುವರು. ಈ ಕಥೆ ಕೂಡ ಉತ್ತಮವಾದುದೂ, ಪವಿತ್ರವೂ, ಪಾಪಹಾರಕವೂ ಭುಕ್ತಿ ಮುಕ್ತಿ ಫಲ ಪ್ರದವೂ ಆಗಿದೆ.

ಅಧ್ಯಾಯ 51 ಋಷಭತೀರ್ಥ

ದುರ್ವಾಸರ ಉಪದೇಶ—(ಋಷಭತೀರ್ಥ ಪ್ರಸನ್ನ ತೀರ್ಥಕ್ಕೆ ಸಮೀಪದಲ್ಲಿದೆ.) ಸೌರಾಷ್ಟ್ರ ದೇಶದಲ್ಲಿ ಸರಲ ಎಂಬ ರಾಜ ಇದ್ದ. ಅವನ ರಾಣಿಯ ಹೆಸರು ಮಾನಿನೀ. ಇಬ್ಬರೂ ಧರ್ಮಜ್ಞರೂ ಶಿವಪೂಜಾನಿರತರೂ ಆಗಿದ್ದು ಪರಸ್ಪರವಾಗಿ ದ್ದರು. ಒಂದು ದಿನ ಅಕಸ್ಮಾತ್ತಾಗಿ ದುರ್ವಾಸರು ಅವರ ಮನೆಗೆ ಬರಲು ಅವರನ್ನು ರಾಜ ರಾಣಿಯರಿಬ್ಬರೂ ಮಹಾಭಕ್ತಿಯಿಂದ ಅತಿಥಿಸತ್ಕಾರದೊಡನೆ ಪೂಜಿಸಿದರು. ಅದರಿಂದ ದುರ್ವಾಸರು ಪ್ರಸನ್ನರಾಗಿ ರಾಜನನ್ನು ಸಂಬೋಧಿಸಿ 'ರಾಜ! ನಾನು ನಿನಗೆ ಉಪದೇಶಮಾಡುವುದಕ್ಕಾಗಿ ಬಂದಿದ್ದೇನೆ. ನನ್ನ ಮಾತು ಪಾಲಿಸು.

> ಅಸಾರೇ ಖಲು ಸಂಸಾರೇ ಸಾರಂ ಶಂಕರಸೇವನಮ್ ।
> [1] ದಾರಾಗಾರಾದಿಕಂ ಸರ್ವಂ ನಶ್ವರಂ ದುಃಖಕಾರಣಮ್ ॥
> ಭೋಕ್ತುಮಿಚ್ಛತಿ[2]ಯೋ[3] ಮೂಢಃ ಕ್ರಿಮಿವದ್ದುಃಖಮೇಷ್ಯತಿ[4] ॥

ಅಸಾರವಾದ ಈ ಸಂಸಾರದಲ್ಲಿ ಶಂಕರನ ಸೇವೆಯೊಂದೇ ಸಾರವಾದದ್ದು. ಗೃಹಿಣೀ ಗೃಹಾದಿಗಳೆಲ್ಲವೂ ನಶ್ವರ, ದುಃಖಕ್ಕೆ ಕಾರಣ. ಅದನ್ನೇ ಭೋಗಪಡಲು ಇಚ್ಛಿಸುವ ಮೂಢನು ಕ್ರಿಮಿಯಂತೆ ದುಃಖಭಾಗಿಯಾಗುತ್ತಾನೆ. ಆದ್ದರಿಂದ ರಾಜ್ಯ ಭೋಗಾದಿಗಳನ್ನು ಮಲಭಾಂಡದಂತೆ ತ್ಯಜಿಸಿ ಶಂಕರ ಪದವಿಯನ್ನೈದು' ಎಂದು ಉಪದೇಶಮಾಡಿ, 'ರಾಣಿಗೆ ಅಮ್ಮಾ, ನೀನೂ ಕೂಡ ವಿಷಯಾಭಿಲಾಷೆಗಳನ್ನು ವರ್ಜಿಸಿ ನಾನು ಹೇಳುವ ಮಾರ್ಗದಿಂದ ಶಿವಪೂಜೆ ಮಾಡು. ಅದರಿಂದ ನಿನಗೆ ಸಕಲ ಸಿದ್ಧಿಗಳೂ ಉಂಟಾಗುತ್ತವೆ, ಸಂಶಯವಿಲ್ಲ' ಎಂದು ಹೇಳಿದರು.

ಮಾನಿನಿಯ ಶಿವಭಕ್ತಿ—ಕೆಲವು ಕಾಲಾನಂತರ ರಾಜ ದುರ್ವಾಸರ ಉಪ ದೇಶ ಮರೆತು ಭೋಗಲೋಲುಪನಾದ. ಆದರೆ ರಾಣಿ ಮಾತ್ರ ದುರ್ವಾಸರ ಮಾತು ತಪ್ಪಿಸದಂತೆ ಸದಾ ಶಿವಧ್ಯಾನಾಸಕ್ತಳಾಗಿರುತ್ತಿದ್ದಳು. ಅವಳಿಗೆ ಐದು ಜನ ಗಂಡು ಮಕ್ಕಳಾದರು. ಮೊದಲನೆಯವನಿಗೆ ದೇವೇಂದ್ರನೆಂದೂ ಎರಡನೆ

---

1 ದಾರ= ಹೆಂಡತಿ, ಅಗಾರ= ಮನೆ, ಆದಿಕಂ= ಮೊದಲಾದುದು.

2. ಭೋಕ್ತುಂ ಇಚ್ಛತಿ= ಭೋಗಪಡಲು ಇಚ್ಛಿಸುತ್ತಾನೋ 3. ಯಃ= ಯಾವ, 4 ಕ್ರಿಮಿಯಂತೆ ದುಃಖ ಹೊಂದುತ್ತಾನೆ.

ಹುವನಿಗೆ ಮಹೇಂದ್ರನೆಂದೂ ಅವಳೇ ಹೆಸರಿಟ್ಟಳು. ಮೊದಲ ನಾಲ್ಕು ಮಕ್ಕಳಿಗೂ ಉಪದೇಶಮಾಡಿ ಅವರೆಲ್ಲರನ್ನೂ ಬ್ರಹ್ಮ ವಿದ್ಯಾಭ್ಯಾಸಕ್ಕಾಗಿ ಮಾಣಿಭದ್ರೇಶ್ವರನ ಸಮೀಪದಲ್ಲಿ ವಾಸಮಾಡಿಕೊಂಡಿದ್ದ ಋಷಭಮುನಿಗಳ ಬಳಿಗೆ ಕಳುಹಿಸಿಕೊಟ್ಟು ಬಿಟ್ಟಳು.

ಐದನೇ ಮಗನ ಕಥೆ--ಹೀಗೆ ನಾಲ್ಕು ಮಕ್ಕಳೂ ತನ್ನ ಕೈಗೆ ಬರದೆ ಹೋಗಲು ರಾಜ ವ್ಯಥೆಪಟ್ಟು, ಐದನೆಯ ಮಗ ಹುಟ್ಟಿದೊಡನೆಯೇ ಅವನನ್ನು ತನ್ನ ವಶಕ್ಕೆ ತೆಗೆದುಕೊಂಡು ಅವನಿಗೆ ಅಲರ್ಕ ಎಂದು ಹೆಸರಿಟ್ಟು, ತಾನೇ ಬೆಳೆಸತೊಡಗಿದನು. ಚಿಕ್ಕಂದಿನಿಂದಲೇ ಅವನಿಗೆ ರಾಜಯೋಗ್ಯವಾದ ನೀತಿ ಧರ್ಮಗಳನ್ನು ಧನುರ್ವಿದ್ಯೆಯನ್ನೂ ಹೇಳಿಸಿದನು. ಪ್ರಾಪ್ತವಯಸ್ಕನಾದ ಬಳಿಕ ಅವನಿಗೇ ರಾಜ್ಯವನ್ನೊಪ್ಪಿಸಿ ಕಾಲಾಧೀನನಾದನು. ಅಲರ್ಕ ಸಮಸ್ತ ಪೈತೃಕಕರ್ಮಗಳನ್ನೂ ಯಥಾವಿಧಿ ಆಚರಿಸಿ ವೈಭವದಿಂದ ರಾಜ್ಯಭಾರ ಮಾಡಿದನು. ತಂದೆ ಸತ್ತು ಹತ್ತು ವರ್ಷಗಳಾದರೂ ಅಲರ್ಕನಿಗೆ ವೈರಾಗ್ಯ ಬುದ್ಧಿ ಹುಟ್ಟುವ ಕುರುಹು ಕೂಡ ಕಂಡುಬರಲಿಲ್ಲ. ಇವನ್ನು ಕಂಡು ಮಾನಿನಿ ಚಿಂತಾಗ್ರಸ್ತಳಾಗಿ ಆ ಕನಿಷ್ಠಪುತ್ರನ ಉದ್ಧಾರಕ್ಕೆ ಏನು ಉಪಾಯವೆಂದು ಆಲೋಚಿಸಿ ಒಂದು ಪತ್ರದಲ್ಲಿ ಅಲರ್ಕನಿಗೆ ಹೇಳಬೇಕಾದ ಬುದ್ಧಿವಾದ ಬರೆದು ಅದನ್ನೊಂದು ಲಕೋಟೆಯಲ್ಲಿಟ್ಟು ಅರಗಿನಿಂದ ಭದ್ರಪಡಿಸಿ ಆ ಕಡೆಯ ಮಗನ ಕೈಗೇ ಕೊಟ್ಟು 'ಅಪ್ಪಾ, ಅಲರ್ಕ, ನಿನ್ನ ಕಷ್ಟಕಾಲದಲ್ಲಿ ಈ ಲಕ್ಕೋಟೆ ಒಡೆದು ಇದರಲ್ಲಿರುವುದನ್ನು ಓದಿಕೊಂಡು ನಿನಗೆ ಸೂಕ್ತ ತೋರಿದಂತೆ ನಡೆದುಕೋ' ಎಂದು ಹೇಳಿದಳು. ಮಾತೃ ಭಕ್ತನಾದ ಅಲರ್ಕ ಆ ಪತ್ರವನ್ನು ಗೋಪ್ಯವಾಗಿಟ್ಟುಕೊಂಡಿದ್ದನು. ಅವಸಾನ ಕಾಲ ಪ್ರಾಪ್ತವಾಗಲು ಮಾನಿನಿ ವಿಧಿವಶಳಾಗಿ ಯೋಗಿಗಳಿಗೂ ದುರ್ಲಭವಾದ ಸದ್ಗತಿ ಹೊಂದಿದಳು.

ಅಲರ್ಕ ರಾಜ್ಯ ಭ್ರಷ್ಟನಾದುದು—ರಾಜ್ಯಾಸಕ್ತನಾಗಿ ಮೈಮರೆತಿದ್ದ ಅಲರ್ಕನಿಗೆ ವೈರಾಗ್ಯ ಬುದ್ಧಿ ಹುಟ್ಟಿಸುವುದಕ್ಕಾಗಿ, ಋಷಭ ಋಷಿಗಳ ಹತ್ತಿರ ವಿದ್ಯಾಭ್ಯಾಸಕ್ಕಾಗಿ ಹೋಗಿದ್ದ ಅವನ ನಾಲ್ವರು ಅಣ್ಣಂದಿರೂ ಸೇರಿ ವಂಗದೇಶದ ಜಯಸೇನ ರಾಜನೊಡನೆ ಸಮಾಲೋಚನೆ ಮಾಡಿ ತಮ ತಮಗೆ ಬರಬೇಕಾದ ರಾಜ್ಯದ ಭಾಗಗಳನ್ನು ಕೊಡಿಸಿಕೊಡಬೇಕೆಂದೂ ಅದಕ್ಕೆ ತಕ್ಕ ಪ್ರತಿಫಲ ಕೊಡುವುದಾಗಿಯೂ ಕರಾರು ಮಾಡಿಕೊಂಡರು. ಅದರಂತೆ ಜಯಸೇನ ಸೌರಾಷ್ಟ್ರದ ಮೇಲೆ ದಂಡೆತ್ತಿ ಬಂದು ರಾಜಧಾನಿಯನ್ನು ಮುತ್ತಿ ಅಲರ್ಕನನ್ನು ಸೋಲಿಸಿ ರಾಜ್ಯವನ್ನು ಸ್ವಾಧೀನಮಾಡಿಕೊಂಡು ತಾನೇ ಗದ್ದಿಯನ್ನೇರಿದ. ಅಲರ್ಕ ರಾಜ್ಯಭ್ರಷ್ಟನಾಗಿ ನಾನಾವಿಧ ಕಷ್ಟಕ್ಕೆ ಈಡಾದನು.

ತಾಯಿಯ ಬುದ್ಧಿವಾದ—ಕಷ್ಟಕ್ಕೆ ಸಿಲುಕಿ ದಿಕ್ಕುತೋರದಂತಾದಾಗ

ಅಲರ್ಕನಿಗೆ ಮಾನಿನಿ ಕೊಟ್ಟಿದ್ದ ಪತ್ರದ ನೆನೆಪು ಬಂತು. ಲಕೋಟಿ ಒಡೆದು ಪತ್ರ ನೋಡಿದಾಗ ಅದರಲ್ಲಿ ಈ ಶ್ಲೋಕ ಬರೆದಿತ್ತು :

ವ್ಯಸನೇಷ್ವಪಿ ಸರ್ವೇಷು ಸತ್ಸಂಗಃ 1ಶೇವಧಿರ್ನೃಣಾಮ್ ।
ಸತ್ಸಂಗೇನೈವ ಸರ್ವೇಷಾಂ ವ್ಯಸನಂ ನಾಶಮೇಷ್ಯತಿ 2 ॥

ಶ್ಲೋಕಾರ್ಥ—ಸರ್ವ ವ್ಯಸನಗಳಲ್ಲೂ ಸತ್ಸಂಗವೇ ಮನುಷ್ಯರಿಗೆ ದೊಡ್ಡ ನಿಧಿ. ಸರ್ವರಿಗೂ ಸತ್ಸಹವಾಸದಿಂದಲೇ ವ್ಯಸನ ದೂರವಾಗುತ್ತದೆ.

ಈ ಶ್ಲೋಕದ ಭಾವವನ್ನು ಊಹಿಸಿಕೊಂಡು ಅಲರ್ಕ ಸತ್ಸಂಗ ಹುಡುಕುತ್ತಾ ಹೊರಟ. ಕಡೆಗೆ 'ಹಂಪೆ ದಕ್ಷಿಣ ಕಾಶೀ ಎಂದು ಪ್ರಸಿದ್ಧವಾಗಿರುವುದರಿಂದ ಅಲ್ಲಿ ಸಮದರ್ಶಿಗಳಾದ ಸಾಧು ಸಜ್ಜನರು ಸದಾ ಇದ್ದೇ ಇರುವರು. ಅಲ್ಲಿಗಾದರೂ ಹೋಗೋಣ' ಎಂದು ಯೋಚಿಸಿಕೊಂಡು ಮಾಣಿಭದ್ರ ಬೆಟ್ಟದ ಬಳಿಗೆ ಬರುವ ಹೊತ್ತಿಗೆ ಸುದೈವದಿಂದ ಅಲ್ಲಿ ಋಷಭರ ಸಂದರ್ಶನ ಲಾಭವೇ ದೊರೆಯಿತು. ಅವರ ಸದುಪದೇಶಾಮೃತದಿಂದ ಅಲರ್ಕನ ದುಃಖ ಪರಿಹಾರವಾಯಿತು. ಅವರ ಸೂಚನೆಯಂತೆ ನಾಲ್ಕು ಮಂದಿ ಅಣ್ಣಂದಿರಿಗೂ ಅವರವರ ಪಾಲು ರಾಜ್ಯವನ್ನು ಕೊಡಲೊಪ್ಪಿದನು. ಇದನ್ನು ಕೇಳಿ ಜಯಸೇನ ತನ್ನ ಆಗ್ರಹಕ್ಕಾಗಿ ವ್ಯಸನ ಪಟ್ಟುಕೊಂಡು ಅವರ ರಾಜ್ಯವನ್ನು ಅವರಿಗೇ ಬಿಟ್ಟುಕೊಟ್ಟ. ಹೀಗೆ ಎಲ್ಲರೂ ವಿರಕ್ತರಾಗಿ ಋಷಭರ ಉಪದೇಶ ಪಡೆದು ಅಲ್ಲಿದ್ದ ತೀರ್ಥದಲ್ಲಿ ಸ್ನಾನ ಮಾಡಿ ಮುಕ್ತರಾದರು. ಇದೇ ಋಷಭ ತೀರ್ಥದ ಇತಿಹಾಸ. ಪುಣ್ಯತಮವಾದ ಈ ಆಖ್ಯಾನ ಶ್ರವಣ ಮಾಡುವವನು ಬಂಧನದಿಂದ ಮುಕ್ತನಾಗುತ್ತಾನೆ.

ಅಧ್ಯಾಯ 52 ರತ್ನತೀರ್ಥ

[೪೬ ನೇ ಅಧ್ಯಾಯದ ಮುಖ ಟಿಪ್ಪಣಿ ನೋಡಿ]

ಋಷಭತೀರ್ಥದಲ್ಲಿ ಸ್ನಾನಮಾಡಿ ಅಲ್ಲಿಂದ ಆ ಸಪ್ತರ್ಷಿಗಳು ಅದಕ್ಕೆ ಸಮೀಪದಲ್ಲಿದ್ದ ರತ್ನತೀರ್ಥದ ಬಳಿಗೆ ಬಂದರು. ಅದರ ಆಖ್ಯಾನವನ್ನು ಕ್ಷೇತ್ರಪಾಲನು ಹೀಗೆ ವಿವರಿಸಿದನು :—

ಕುಬೇರನಿಗೆ ಈಶ್ವರಾನುಗ್ರಹ—ಪೂರ್ವದಲ್ಲಿ ವಿಶ್ರವಸ್ಸಿನ ಮಗನಾದ ಕುಬೇರ ವಿರೂಪಾಕ್ಷನನ್ನು ಕುರಿತು ತಪಸ್ಸು ಮಾಡಿದ. ಅದಕ್ಕೆ ಮೆಚ್ಚಿ ಕರುಣಾಕರನಾದ ಶಂಕರ ಕುಬೇರನಿಗೆ ನವನಿಧಿಗಳನ್ನೂ ಸರ್ವವಸ್ತುಗಳಿಂದ ಸಮೃದ್ಧವಾದ

---

1 ಶೇವಧಿ = ನಿಧಿ, ಭಂಡಾರ. 2 ಏಷ್ಯತಿ = ಹೊಂದುತ್ತದೆ.

ಅಲಕಾಪುರಿಯನ್ನೂ ಕೊಟ್ಟು 'ಇನ್ನು ಮುಂದೆ ನೀನು ನನ್ನ ಸಖನಾಗಿ ನನ್ನ ಸಮೀಪದಲ್ಲೇ[2] ಇದ್ದುಕೊಂಡಿರು' ಎಂದು ಹೇಳಿ ಅದೃಶ್ಯನಾದನು. ಅಂದಿನಿಂದ ಕುಬೇರ ಆ ಪುರಿಯಲ್ಲೇ ವಸತಿಮಾಡಿದನು.

ಗಂಧರ್ವಿಯ ಸಹವಾಸ—ಒಂದು ದಿನ ಆ ಕುಬೇರ ಅಡ್ಡಾಡುತ್ತಿರುವಾಗ ಗಾನಲೋಲಳೂ ಅತಿಸೂಕ್ಷ್ಮಾಂಗಿಯೂ ಆದ ಒಬ್ಬ ವಿಲಾಸಿನಿಯನ್ನು ಕಂಡನು. ಆ ಬಿಂಬೋಷ್ಠಿಯನ್ನು ಕಂಡು ಕುಬೇರನಿಗೆ ಮನ್ಮಥಾವೇಶವಾಯಿತು. ಆಗ ಅವನು ಆಕೆಯನ್ನು "ಹೇ ಕಮಲಪತ್ರಾಕ್ಷಿ! ನೀನು ಯಾರು? ಇಲ್ಲಿಗೇಕೆ ಬಂದಿದ್ದೀಯೆ? ನಿನ್ನನ್ನು ನೋಡಿ ನಾನು ಮೋಹಿತನಾಗಿದ್ದೇನೆ" ಎಂದು ಮಾತಾಡಿಸಿದನು. ಅದಕ್ಕೆ ಆಕೆ "ನನ್ನ ಸುದ್ದಿ ತಿಳಿದುಕೊಂಡು ನಿನಗೇನಾಗಬೇಕಾಗಿದೆ? ಸುಮ್ಮನೆ ಹೋಗು. ಇಲ್ಲದಿದ್ದರೆ ನಿನಗೆ ಯಶೋಹಾನಿಯಾದೀತು. ನನ್ನ ಪತಿಯಾದ ಕಾಲಕಂಟಕ ಯಾವನೋ ಒಬ್ಬ ರಾಕ್ಷಸನನ್ನು ಬೆನ್ನಟ್ಟಿ ಹೋಗಿದ್ದಾನೆ, ನಾನು ಆ ನನ್ನ ಪತಿಯನ್ನು ಹುಡುಕಿಕೊಂಡು ಹೊರಟಿದ್ದೇನೆ" ಎಂದು ಹೇಳುತ್ತಿದ್ದರೂ ಕಾಮಾತುರನಾದ ಕುಬೇರ ಅವಳ ಮಾತನ್ನೇ ಲೆಕ್ಕಿಸದೆ "ನಿನ್ನ ಪತಿ ನಿನ್ನ ಮೇಲೆ ಕೋಪಿಸಿಕೊಂಡೇ ಹೋದನೋ ಅಥವಾ ರಾಕ್ಷಸನೇ ಅವನನ್ನು ಕೊಂದುಹಾಕಿದನೋ? ಹೇಗೆ ಹೇಳುವುದಕ್ಕಾಗುತ್ತದೆ? ಆದ್ದರಿಂದ, ಹೇ ಸುಮುಖಿ, ಅವನ ಚಿಂತೆ ಬಿಟ್ಟು ನವ ನಿಧಿಗಳಿಗೆ ಅಧಿಪತಿಯಾದ ನನ್ನನ್ನೇ ವರಿಸಿ ಸುಖಿಯಾಗು" ಎಂದು ಹೇಳುತ್ತಾ ಬಲಾತ್ಕಾರದಿಂದ ಅವಳೊಡನೆ ಭೋಗಮಾಡಿ ಅವಳನ್ನು ತನ್ನ ನಗರಿಗೂ ಕರೆದುಕೊಂಡು ಹೋದನು.

ಕುಬೇರನಿಗೆ ಪದಚ್ಯುತಿ—ಅತ್ತಲಾಗಿ ಕಾಲಕಂಟಕ ಆ ರಾಕ್ಷಸನನ್ನು ಕೊಂದು ಹಿಂದಿರುಗಿ ಬರಲು ತನ್ನ ಪತ್ನಿಯನ್ನು ಕಾಣದೆ ಅಲ್ಲಿ ಇಲ್ಲಿ ಅರಸುತ್ತಾ ಕುಬೇರನ ನಗರದ ಕಡೆಗೆ ಹೊರಟನು. ಅಲ್ಲಿ ಧನದನ ಅಂತಃಪುರದಲ್ಲಿ ತನ್ನ ಪತ್ನಿಯಿದ್ದುದನ್ನು ಕಂಡು ಕಾಲಕಂಟಕ ಕ್ರುದ್ಧನಾಗಿ ಕುಬೇರನೊಡನೆ ಯುದ್ಧಕ್ಕೆ ನಿಂತು ಅವನನ್ನು ಸೋಲಿಸಿ ತನ್ನ ಪತ್ನಿಯನ್ನು ಬಿಡಿಸಿಕೊಂಡಿದ್ದಲ್ಲದೆ ರಾಜರಾಜನ ಅಲಕಾಪುರಿಯನ್ನೂ ನವನಿಧಿಗಳನ್ನೂ ಕಿತ್ತುಕೊಂಡನು. ಅನಂತರ ಪತಿತಳಾದ ತನ್ನ ಪತ್ನಿಯನ್ನೂ ನಿಂದಿಸಿ "ಛೀ ಪುಂಶ್ಚಲಿ! ನೀನು ಮಾಡಿರುವ ಅಪರಾಧಕ್ಕಾಗಿ ನೀನು ವೇಶ್ಯೆಯಾಗಿ ಹುಟ್ಟು. ಆದರೂ ಸಹ ನಿಶ್ಚಲ ಮನಸ್ಸಿನಿಂದ ಮಾಣಿಭದ್ರೇಶ್ವರನ

---

1. ಆದ್ದರಿಂದಲೇ ಕುಬೇರನಿಗೆ 'ತ್ರ್ಯಂಬಕಸಖ' ಎಂಬ ಹೆಸರು ಬಂದಿದೆ. 'ಕುಬೇರಸ್ತ್ರ್ಯಂಬಕಸಖಃ' —ಅಮರ.

2. ಕುಬೇರ ಉತ್ತರ ದಿಕ್ಕಿಗೆ ಪಾಲಕ; ಈಶ್ವರ ಈಶಾನ್ಯ ದಿಕ್ಕಿಗೆ ಪಾಲಕ. ಹೀಗೆ ಕುಬೇರ ಶಿವನಿಗೆ ಸಮೀಪವಲ್ಲೇ ಇರುವನು.

ಬಳಿಕ ತಪಸ್ಸು ಮಾಡುತ್ತಿದ್ದರೆ ಹತ್ತು ಸಾವಿರ ವರ್ಷಗಳಾದ ಬಳಿಕ ನನ್ನನ್ನು ಸೇರುವಿ" ಎಂದು ಶಪಿಸಿದನು. ಆ ಶಾಪದಂತೆಯೇ ಆ ಗಂಧರ್ವಿ ಗಣಿಕೆಯಾಗಿ ಹುಟ್ಟಿ ಮಾಣಿಭದ್ರೇಶ್ವರನನ್ನು ನಿರಂತರವಾಗಿ ಸೇವಿಸಿ ಅವನ ಪ್ರಸಾದದಿಂದ ತನ್ನ ಪತಿಯನ್ನು ಸೇರಿ ಸುಖಿಯಾದಳು.

ಕುಬೇರನಿಗೆ ಸ್ವಪದಪ್ರಾಪ್ತಿ—ಪದಚ್ಯುತನಾದ ಧನಾಧಿಪ ಪಿಶಾಚಗ್ರಸ್ತನಾದಂತೆ ಹುಚ್ಚು ಹುಚ್ಚಾಗಿ ಅಲೆಯುತ್ತಾ ದಿಕ್ಕು ತೋರದೆ ಅಲ್ಲಿ ಇಲ್ಲಿ ಸುತ್ತುತ್ತಾ ಮಾಣಿಭದ್ರೇಶ್ವರನ ಬಳಿಗೆ ಬಂದು ಅಲ್ಲಿ ಒಂದು ಗುಹೆಯಲ್ಲಿ ಕುಳಿತು ಸಮೀಪದಲ್ಲೇ ಇಪ್ಪ ರತ್ನತೀರ್ಥವೆಂಬ ಸರಸ್ಸಿನಲ್ಲಿ ನಿತ್ಯವೂ ಸ್ನಾನಮಾಡುತ್ತಾ ತೀವ್ರವಾಗಿ ತಪಶ್ಚರಣೆ ಮಾಡಿದನು. ಹತ್ತು ಸಾವಿರ ವರ್ಷಗಳು ಕಳೆದ ಬಳಿಕ ಕಪಾಲಿಯು ಪ್ರತ್ಯಕ್ಷನಾಗಿ ಯಕ್ಷೇಶ್ವರನಿಗೆ ವರ ದಯಪಾಲಿಸಿದನು. ಅದರಿಂದ ಕುಬೇರ ಶತ್ರುವನ್ನು ಜಯಿಸಿ ಪುನಃ ತನ್ನ ರಾಜ್ಯವನ್ನೂ ನವನಿಧಿಗಳನ್ನೂ ಪಡೆದನು.

ಹೀಗೆ ಕುಬೇರನಿಗೆ ನವನಿಧಿಗಳನ್ನು ಕೊಡಿಸಲು ಕಾರಣವಾದ್ದರಿಂದ ಈ ತೀರ್ಥಕ್ಕೆ ರತ್ನನಿಧಿತೀರ್ಥವೆಂದು ಹೆಸರಾಯಿತು. ಕಾರ್ತಿಕ ಸೋಮವಾರ ಈ ತೀರ್ಥದಲ್ಲಿ ಸ್ನಾನ ಮಾಡಿದವನು ಧನಿಕನಾಗಿ ಸುಖವಾಗಿ ಬಾಳಿ ಸರ್ವಸಿದ್ಧಿಗಳನ್ನೂ ಪಡೆಯುತ್ತಾನೆ. ಈ ಉತ್ತಮಾಖ್ಯಾನವನ್ನು ಹೇಳಿ ಕೇಳುವವನೂ ಶಿವಸಾಯುಜ್ಯ ಹೊಂದುವನು.

ಅಧ್ಯಾಯ 53 ಮುಕ್ತಿ ತೀರ್ಥ

ಕಣ್ವರೂ ಕೀಟಗಳೂ—ಅಲ್ಲಿಂದ ಮುಂದೆ ಸಪ್ತರ್ಷಿಗಳು ಮುಕ್ತಿತೀರ್ಥಕ್ಕೆ ಬಂದರು. ಅದರ ಆಖ್ಯಾನ ಏನೆಂದರೆ :—

ಹಿಂದೆ ಒಂದಾನೊಂದು ಸಮಯದಲ್ಲಿ ಕಣ್ವರು ತಪಸ್ಸಿದ್ಧಿಗಾಗಿ ಪಂಪಾ ಕ್ಷೇತ್ರದಲ್ಲಿ ವಾಸಮಾಡಿಕೊಂಡಿದ್ದರು. ಒಂದು ದಿನ ಅವರು ಒಂದು ಮರದ ಮೇಲೆ ಓಡಾಡುತ್ತಿದ್ದ ಕೀಟಗಳು ಹಸಿವಿನಿಂದ ಬಳಲಿ ಒದ್ದಾಡುತ್ತಿದ್ದರೂ ಒಂದನ್ನೊಂದು ಕಚ್ಚಾಡಿ ಕಾದು ಮಡಿಯುತ್ತಾ ಪುನಃ ಹುಟ್ಟುತ್ತಾ ಗೋಳಾಡುತ್ತಿದ್ದುದನ್ನು ಕಂಡು ಅವುಗಳ ಆ ಅಸಹಾಯಸ್ಥಿತಿಗಾಗಿ ಮರುಗಿ ಮರುಕಗೊಂಡು ಅವಕ್ಕೇಕೆ ಆ ದೆಸೆ ಬಂತೆಂದೂ ಅದು ನಿವಾರಣೆಯಾಗುವ ಬಗೆ ಹೇಗೆಂದೂ ಯೋಚಿಸುತ್ತಾ ನಿಂತಿದ್ದರು.

ಅಷ್ಟರಲ್ಲೇ ಅಲ್ಲಿಗೆ ಶಾತಾತಪರೆಂಬ ಮಹರ್ಷಿ ಬರಲು, ಕಣ್ವರು ಅವರನ್ನು ಈ ವಿಷಯವಾಗಿ ಪ್ರಶ್ನಿಸಿದರು. ಅದಕ್ಕೆ ಆ ಮಹರ್ಷಿ ಕಣ್ವರಿಗೆ ಕೀಟಗಳ ಪೂರ್ವ ಜನ್ಮದ ಕಥೆಯನ್ನು ವರ್ಣಿಸುತ್ತಾ ಹೀಗೆ ಹೇಳಿದರು.

ಕೀಟಗಳ ಪೂರ್ವಜನ್ಮದ ಕಥೆ—'ಪ್ರಾಣಿಗಳ ಕರ್ಮವೈಷಮ್ಯ ವಿಚಿತ್ರವಾದುದು. ಹಿಂದೆ ಈ ಕೀಟಗಳು ನೀರ್ಗತಿಕ ವೈಶ್ಯರಾಗಿದ್ದರು. ವ್ಯಾಪಾರ ಸಾಹುಕಾರಗಳೆಲ್ಲ ನಿಂತುಹೋಗಲು ಅವರು ಭಾಗೀರಥೀತೀರದಲ್ಲಿ ಅಂಗಡಿಯಿಟ್ಟುಕೊಂಡು ಹಣ್ಣು ಹಂಪಲು ಅನ್ನಾದಿಗಳನ್ನು ಮಾರಿ ಕ್ರಮವಾಗಿ ಬಹಳ ದ್ರವ್ಯ ಸಂಪಾದಿಸಿದರು. ಆದರೆ ದುರದೃಷ್ಟದಿಂದ ಒಂದು ಸಲ ಕಳ್ಳರು ನುಗ್ಗಿ ಅವರ ದ್ರವ್ಯವನ್ನೆಲ್ಲಾ ಅಪಹರಿಸಿಕೊಂಡು ಹೋದರು. ವೈಶ್ಯರು ಆ ಕಳ್ಳರ ಬೆನ್ನಟ್ಟಿ ಹೋಗಲು ಕಳ್ಳರು ಭಯಪಟ್ಟು ದಿಕ್ಕು ತೋರದೆ ದುಡ್ಡನ್ನು ಎಲ್ಲಿದ್ದರಲ್ಲಿ ಎಸೆದು ಗುಹೆಗಳಲ್ಲಿ ಅಡಗಿಕೊಂಡರು.

"ದೈವವಶದಿಂದ ಪೈಠೀನಸಿಯೆಂಬುವರ ಶಿಷ್ಯರು ಅದೇ ವೇಳೆಗೆ ಸರಿಯಾಗಿ ಕುಶಾಹರಣಕ್ಕಾಗಿ ಆ ಸ್ಥಳಕ್ಕೆ ಬಂದರು. ಅವರು ಅಲ್ಲಲ್ಲೇ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಧನವನ್ನು ಕಂಡು ವಿಸ್ಮಿತರಾಗಿ ಆಶ್ಚರ್ಯಪಡುತ್ತಾ ಅಲ್ಲೇ ನಿಂತಿದ್ದರು. ದೂರದಿಂದ ಹಿಂಬಾಲಿಸಿಕೊಂಡು ಬರುತ್ತಿದ್ದ ವೈಶ್ಯರು ನಿಜಾಂಶವನ್ನು ತಿಳಿಯಲಾರದೆ ಆ ಶಿಷ್ಯವರ್ಗದವರನ್ನೇ ಕಳ್ಳರೆಂದು ಭಾವಿಸಿ ಅವರನ್ನು ಹೊಡೆದು ಬಡಿದು ವಿಚಿತ್ರ ಹಿಂಸೆ ಪಡಿಸಿ ತೋಬಾ ತೋಬಾ ಎನ್ನಿಸಿ ಬಿಟ್ಟರು. ಆ ಶಿಷ್ಯರು ನರಳುತ್ತಾ ಹಾಗೂ ಹೀಗೂ ಪ್ರಾಣಸಹಿತ ತಮ್ಮ ಗುರುಗಳ ಬಳಿಗೆ ಹೋಗಿ ಎಲ್ಲವನ್ನೂ ನಿವೇದಿಸಿಕೊಂಡರು. ಹೀಗೆ ಅನ್ಯಾಯವಾಗಿ ಆ ಶಿಷ್ಯರಿಗೆ ಚಿತ್ರ ಹಿಂಸೆಮಾಡಿದ ಮಹತ್ಪಾಪದ ಪರಿಣಾಮವಾಗಿಯೇ ಆ ವೈಶ್ಯರು ಕೀಟಗಳಾಗಿ ಹೀಗೆ ದುಃಖಕ್ಕೊಳಗಾಗಿದ್ದಾರೆ. ಆದರೂ ಸಹ ಇವರು ಇಲ್ಲಿರುವ ಮುಕ್ತತೀರ್ಥದಲ್ಲಿ ಸ್ನಾನ ಮಾಡಿದರೆ ಇವರಿಗೆ ದುಃಖ ವಿಮೋಚನೆಯಾಗುತ್ತದೆ" ಹೀಗೆ ಹೇಳಿ ಶಾತಾತಪರು ತಪೋವನಕ್ಕೆ ತೆರಳಿದರು.

ಕೀಟ ಜನ್ಮನಿವೃತ್ತಿ—ಅದನ್ನು ಕೇಳಿ ದಯಾಳುಗಳಾದ ಕಣ್ವರು ಕೀಟಗಳಿಗೆ ಮುಕ್ತತೀರ್ಥದಲ್ಲಿ ಸ್ನಾನಮಾಡುವ ಯೋಗವೇ ದೊರೆಯಲಾರದೆಂದರಿತು, ಆ ತೀರ್ಥದ ಪವಿತ್ರೋದಕವನ್ನು ತಂದು ಆ ಕೀಟಗಳ ಮೇಲೆ ಪ್ರೋಕ್ಷಿಸಿದರು. ತಾವನ್ಮಾತ್ರದಿಂದ ಅವುಗಳ ದುಷ್ಕರ್ಮವೆಲ್ಲ ಸವೆದು ಹೋಗಿ ಅವಕ್ಕೆಲ್ಲಾ ದಿವ್ಯರೂಪ ಬಂತು. ಅವರು ಕೃತಜ್ಞತೆಯಿಂದ ಕಣ್ವರನ್ನು ಶಿರಸಾ ವಂದಿಸಿ ಅವರ ಅಪ್ಪಣೆ ಪಡೆದು ಸ್ವರ್ಗಲೋಕಕ್ಕೆ ಪ್ರಯಾಣ ಮಾಡಿದರು. ಹೀಗೆ ಕೀಟಗಳನ್ನು ಆ ಹೀನ ಜನ್ಮದಿಂದ ಮುಕ್ತ ಮಾಡಿಸಿದ್ದರಿಂದ ಈ ತೀರ್ಥಕ್ಕೆ ಮುಕ್ತಿ ತೀರ್ಥವೆಂದು ಹೆಸರಾಯಿತು.

ಇದರಲ್ಲಿ ವೈಶಾಖ ಪೂರ್ಣಿಮಾ ದಿನ ಸ್ನಾನಮಾಡುವುದು ಬಹಳ ವಿಶೇಷ. ಪವಿತ್ರವೂ ಪಾಪಹಾರಕವೂ ಆದ ಈ ಆಖ್ಯಾನವನ್ನು ಭಕ್ತಿಯಿಂದ ಶ್ರವಣ ಮಾಡುವವನು ಸರ್ವಪಾತಕಗಳಿಂದ ಮುಕ್ತನಾಗುತ್ತಾನೆ.

ಈ ಮಾತನ್ನು ಕೇಳಿ ಶಿವೆಯು ಗರ್ವವನ್ನು ಬಿಟ್ಟು ಭಕ್ತಿ ಸಮನ್ವಿತಳಾಗಿ "ದೇವ, ನಾನು ಹಾಸ್ಯಕ್ಕಾಗಿ ಹೀಗೆ ಹೇಳಿದೆ, ಅಷ್ಟೆ, ನನ್ನ ಸಾಹಸವನ್ನು ಕ್ಷಮಿಸು. ನಾನು ನಿನ್ನಿಂದಲೇ ಪ್ರೇರಿತಳು, ನಿನ್ನಿಂದಲೇ ರಕ್ಷಿತಳು. ನಾನು ನಿನಗೆ ದಾಸಿ" ಎಂದು ಎಷ್ಟೆಷ್ಟು ಬೇಡಿಕೊಂಡರೂ ಲೆಕ್ಕಿಸದೆ, ಸರ್ವಗುಣಾಕರನಾದ ಆ ಕಪರ್ದಿ ದೇವಿಯ ದುರ್ಮದವನ್ನು ಶಾಂತಿಮಾಡಬೇಕೆಂದು ಆ ಸತೀಮಣಿಯನ್ನು ಬಿಟ್ಟು ಪಂಪಾಕ್ಷೇತ್ರಕ್ಕೆ ಬಂದು ಬಿಟ್ಟ.

ದೇವನ ತಪಶ್ಚರಣೆ–ಆ ಕ್ಷೇತ್ರದ ಉತ್ತರಭಾಗದಲ್ಲಿ ಒಂದು ರಮ್ಯಪ್ರದೇಶವನ್ನು ನೋಡಿಕೊಂಡು*ದಿವ್ಯ ಜಪಮಾಲಾವಿರಾಜಿತನಾಗಿ ಭಸ್ಮಚ್ಛನ್ನನೂ,ರುದ್ರಾಕ್ಷಾಭರಣ ಯುತನೂ ಆಗಿ ತಪಸ್ಸಿಗೆ ಕುಳಿತನು.ಈ ಪರಮಾಶ್ಚರ್ಯವನ್ನು ಕಂಡು ಇಂದ್ರಾದಿ ದೇವ ತೆಗಳೂ ಸಹ "ಇದೇನಿದು? ತಾನೇ ಪರವಸ್ತುವಾಗಿರುವಾಗ ಈ ದೇವ ಮತ್ತಾರನ್ನು ಕುರಿತು ತಪಸ್ಸುಮಾಡುವನು?" ಎಂದು ವಿಸ್ಮಿತರಾದರು. ಮತ್ತು "ಈ ಪರದೇವತೆ ತಪಸ್ಸಿಗೆ ಕುಳಿತ ಈ ಕ್ಷೇತ್ರ ಎಂಥಾ ಪವಿತ್ರ ಸ್ಥಳ! ಇಲ್ಲೇ ಅನೇಕ ವಿಮಲವಾದ ಶುಭತೀರ್ಥಗಳು ಸನ್ನಿಹಿತವಾಗಿವೆ" ಎಂದು ತಿಳಿದು ಬ್ರಹ್ಮಾದಿಗಳೂ ಸಹ ಆ ಸ್ಥಳಕ್ಕೆ ಬಂದು ಬಂದು ತಪೋನಿಷ್ಠನಾದ ಶಂಕರನನ್ನು ಅತಿಶಯವಾಗಿ ಸ್ತುತಿಸಿದರು.

ದೇವತೆಗಳಿಗೆ ಗಿರಿಜೆಯ ಅಭಯ—ಹೀಗೆ ದೇವತೆಗಳು ಎಷ್ಟೆಷ್ಟು ಸ್ತುತಿ ಸಿದರೂ ವಿರೂಪಾಕ್ಷ ಕಣ್ಣೇ ತೆರೆಯಲಿಲ್ಲ. ಅದನ್ನು ಕಂಡು ಖಿನ್ನರಾದ ಆ ನಿರ್ಜರರು ಜಗಜ್ಜನನಿಯಾದ ಶೈಲಜೆಯ ಬಳಿಗೆ ಹೋಗಿ ಮೊರೆಯಿಟ್ಟುಕೊಂಡರು. ಭಕ್ತವತ್ಸಲೆ ಯಾದ ದೇವಿಯು ಅವರಿಗೆ ಅಭಯಕೊಟ್ಟು "ತ್ರಿದಶರೇ! ಹೆದರಬೇಡಿ. ನನ್ನ ಪ್ರತಿಜ್ಞೆ ಯನ್ನೂ ಸಾಧಿಸಿಕೊಂಡು ನಿಮ್ಮನ್ನೂ ರಕ್ಷಿಸುವೆನು. ಯೋಚಿಸಲು ಕಾರಣವಿಲ್ಲ" ಎಂದು ಹೇಳಿದಳು. ಆ ವಚನದಿಂದ ಹೃಷ್ಟರಾದ ದಿವೌಕಸರು ತಮ್ಮ ತಮ್ಮ ಬೀಡುಗಳಿಗೆ ತೆರಳಿದರು. ಇತ್ತಲಾಗಿ ಭದ್ರಾಣಿಯು ಈಶ್ವರನ ತಪಸ್ಸು ಕೊನೆಗಾಣಿ ಸುವುದಕ್ಕೆ ಏನು ಉಪಾಯವೆಂದು ಯೋಚಿಸತೊಡಗಿದಳು.

ತಪೋಭಂಗಕ್ಕೆ ಯತ್ನ–ಬಹಳ ಯೋಚಿಸಿ ಕಡೆಗೆ ದಿವ್ಯ ಸುಂದರ ವಿಗ್ರಹಗಳುಳ್ಳ ಶ್ಯಾಮಾಂಗಿಯರಾದ ಕೆಲವುಮಂದಿ ಅಪ್ಸರೆಯರನ್ನು ಸೃಷ್ಟಿಸಿ ಅವರಿಗೆ "ನೀವೆಲ್ಲರೂ ನನ್ನ ಸ್ವಾಮಿ ತಪಸ್ಸುಮಾಡುತ್ತಿರುವಲ್ಲಿಗೆ ಹೋಗಿ ಹಾವಭಾವವಿಲಾಸಗಳಿಂದ ಏನಾದರೂ ಉಪಾಯದಿಂದ ಅವನ ತಪಸ್ಸಿಗೆ ವಿಘ್ನವಾಗುವಂತೆ ಮಾಡಿಬನ್ನಿ. ನಾನು ನಿಮ್ಮ ಹಿಂದೆಯೇ ಇದ್ದು ನಿಮ್ಮನ್ನು ಸಲಹುತ್ತೇನೆ" ಎಂದು ಹೇಳಿ ಅವರನ್ನೆಲ್ಲಾ ಈಶಾನನ ಬಳಿಗೆ ಅಟ್ಟಿದಳು. ಸಂಚಾರ ಕುಶಲರಾದ ಅವರು ತಪೋವನಕ್ಕೆ ಹೋಗಿ ಅಲ್ಲೇ

---

* ಈಗ ಮಾಣಿಭದ್ರೇಶ್ವರ ಇರುವ ಸ್ಥಳವೇ ಇಂಥಾ ಪ್ರದೇಶ. ಸುತ್ತಲೂ ಬೆಟ್ಟಗಳು ಕಣಿವೆಗಳು, ಮಧ್ಯದಲ್ಲಿ ಎತ್ತರವಾದ ಒಂದು ಗುಡ್ಡದ ಮೇಲಿರುವ ಈ ಪ್ರದೇಶ ಅತ್ಯಂತ ರಮ ಣೀಯ ಪ್ರಶಸ್ತವಾಗಿದೆ.

ಆಡ್ತಾಡುತ್ತಾ, ಮೆಲ್ಲ ಮೆಲ್ಲಗೆ ಹಾಡುತ್ತಾ, ವೀಣೆ ಬಾರಿಸುತ್ತಾ, ಕ್ರಮವಾಗಿ ನರ್ತನ ಗಾನಮಾಡಲಾರಂಭಿಸಿ ಪರಮೇಶನನ್ನು ಕಾಮತೃಪ್ತಿಮಾಡುವಂತೆ ಪ್ರಾರ್ಥಿಸ ತೊಡಗಿದರು.

ಅವರು ತನ್ನ ತಪೋವಿಘ್ನಮಾಡುವುದಕ್ಕಾಗಿಯೇ ಬಂದಿರುವರೆಂದು ತಿಳಿದು ಕ್ರುದ್ಧನಾದ ಧೂರ್ಜಟಿ "ದುಶ್ಶೀಲರೇ, ನೀವು ಪಿಶಾಚರೂಪವನ್ನು ತಾಳಿ ದುಃಖಾರ್ತ ರಾಗಿ ನಿರ್ಜನವಾದ ಸ್ಮಶಾನ ಭೂಮಿಗಳಲ್ಲಿ ಸಂಚರಿಸುತ್ತಿರಿ" ಎಂದು ಶಪಿಸಿ ಬಿಟ್ಟನು. ಶಾಪಗ್ರಸ್ತರಾದ ಆ ಅಪ್ಸರೆಯರು ದೇವಿಯನ್ನು ಮೊರೆಹೊಕ್ಕು 'ತಾಯಿ, ನಮಗೆ ಮುಂದೇನು ಗತಿ?' ಎಂದು ಹೇಳಿಕೊಂಡು ಗೋಳಾಡಲು ಜಗದಂಬೆಯು "ಹೆದರಬೇಡಿ. ನೀವು ನನ್ನ ಅಂಶದಿಂದ ಮಾರಿಕಾ, ಸ್ಫೋಟಿಕಾ, ದುರ್ಗಾ, ಶಣದಾ, ಭೈರವೀ ಇತ್ಯಾದಿ ಹೆಸರುಗಳಿಂದ ದೇವದಾನವರಿಂದಲೂ ಮುನಿಪುಂಗವ ರಿಂದಲೂ ಪೂಜಿತರಾಗಿ ಇಲ್ಲೇ ಆಡ್ತಾಡುತ್ತಿರಿ" ಎಂದು ಅಭಯಕೊಟ್ಟು ಸಮಾ ಧಾನ ಮಾಡಿದಳು.

ಭವಾನಿ ಮೋಹನೀ ರೂಪ ತಾಳಿದ್ದು—ಅನಂತರ ನಿತ್ಯಯೌವನವ ತಿಯೂ ಚಾರ್ವಂಗಿಯೂ ಸರ್ವಲೋಕಮೋಹಕಳೂ ಆದ ಭವಾನಿ ತ್ರಿಲೋಚನನನ್ನು ಮೋಹಗೊಳಿಸುವುದಕ್ಕಾಗಿ ಮೋಹಿನೀರೂಪ ಧರಿಸಿ ಮುನಿಸಂಘವಿರಾಜಿತವೂ ನಾನಾ ದ್ರುಮಲತಾಮಂಡಿತವೂ ಮೃಗಪಕ್ಷಿಸಂಕುಲಾರವಮನೋಹರವೂ ಷಡೃತುಸೌಭಾಗ್ಯ ಸಮೃದ್ಧವೂ ಆಗಿದ್ದ ಆ ತಪೋವನಕ್ಕೆ ಬಂದಳು. ಅವಳು ನೀಲಲೋಹಿತನ ದೃಕ್ಪಥ ದಲ್ಲಿ ಬೀಳುವುದಕ್ಕಾಗಿ ಅಲ್ಲೇ ಸುಳಿದಾಡುತ್ತಾ, ಭಾವಭಂಗಿಗಳನ್ನು ತೋರುತ್ತಾ ನಾನಾ ವಿಲಾಸಗಳನ್ನು ಪ್ರದರ್ಶಿಸುತ್ತಿರಲು ಆ ದೇವಿಯ ಮಾಯಾ ಪ್ರಭಾವದಿಂದ ದಿಗಂತರಗಳೆಲ್ಲವೂ ಪರಿಭ್ರಾಂತವಾದುವು. ಮುನಿಗಳೂ ದೇವದಾನವರೂ ಮೋಹಿತ ರಾಗಿ ಭ್ರಾಂತರಾದರು. ಅಮರರು ದಿಕ್ಕು ತೋರದೆ ಬೃಹಸ್ಪತಿಯನ್ನು ಮೊರೆ ಹೊಕ್ಕರು. ಆ ಗೀಷ್ಪತಿಯೂ ಕೂಡ ಕಿಂಕರ್ತವ್ಯವಿಮೂಢನಾಗಿ ಅವರೆಲ್ಲರೊಡನೆ ಶತಾ ನಂದನ ಬಳಿಗೆ ಸಾರಿದನು. ಆಗ ವಿಧಿಯು ಅವರಿಗೆ ಭವ-ಭವಾನಿಯರ ಕಲಹದ ವೃತ್ತಾಂತವನ್ನು ತಿಳಿಸಿ ತಚ್ಛಾಂತ್ಯರ್ಥವಾಗಿ ದೇವಿಯನ್ನು ಪ್ರಾರ್ಥಿಸುವುದಕ್ಕೆಂದು ತಾನೇ ಇಂದ್ರಾದಿಗಳೊಡನೆ ಮೃಡಾಣಿಯ ಬಳಿಗೆ ಬಂದನು.

ಅಧ್ಯಾಯ 55 ಮಾಣಿಭದ್ರನ ತಪಸ್ಸು

ದೇವಿಯ ಅಭಯ ಪ್ರದಾನ—ಬ್ರಹ್ಮಾದಿಗಳು ಮಾಯೆಯನ್ನು ಉಪ ಸಂಹರಿಸುವಂತೆ ಪ್ರಾರ್ಥಿಸಿಕೊಳ್ಳಲು ಆ ಮೋಹಿನಿಯು ಅವರಿಗೆ ಅಭಯವಿತ್ತಳು. ಅದೇ ಸಮಯದಲ್ಲಿ ದೇವತಾ ಸ್ತ್ರೀಯರನೇಕರು ಮೋಹಿನೀರೂಪಧಾರಿಯಾದ ದೇವಿಯಿಂದ ತಮ ತಮಗೆ ಬೇಕಾದ ವರಗಳನ್ನು ಬೇಡಿಕೊಂಡರು.

ಸರಸ್ವತಿ ತನ್ನ ಪತಿಗೆ ಸೃಷ್ಟಿಕೃತ್ವ ಶಕ್ತಿಯನ್ನೂ ತನಗೆ ಸೌಮಾಂಗಲ್ಯವನ್ನೂ ಕೇಳಿಕೊಂಡಳು. ಇಂದ್ರಾಣಿ[1] ತನ್ನ ಪತಿಗೆ ಭೋಗವನ್ನು ಆರೋಗ್ಯವನ್ನೂ ತ್ರೈಲೋಕ್ಯ ಸಾಮ್ರಾಜ್ಯವನ್ನೂ, ಸ್ವಾಹಾ[2] ಪತಿವ್ರತಾಧರ್ಮವನ್ನೂ, ಶ್ಯಾಮಲಾ[3] ತನ್ನ ಪತಿಗೆ ಸರ್ವಜಂತುಗಳ ನಿಯಂತೃತ್ವವನ್ನೂ, ಅರುಂಧತಿ ಸತೀತ್ವವನ್ನೂ, ಅಪ್ಸರೆಯರು ಯಶಃಸೌಂದರ್ಯಗಾಂಧರ್ವವಿದ್ಯಾದಿಗಳನ್ನೂ ಕೇಳಿಕೊಂಡರು. ಇದರಂತೆಯೇ ಇತರ ದೇವಸ್ತ್ರೀಯರೂ ಬೇಕ ಬೇಕಾದ ಇಷ್ಟಾರ್ಥಗಳನ್ನು ಕೇಳಿ ಪಡೆದುಕೊಂಡರು.

ಭವನು ಮೋಹಕ್ಕೊಳಗಾದುದು—ಬ್ರಹ್ಮಾದಿಗಳ ಮೊರೆಯನ್ನು ಕೇಳಿ ಮೋಹಿನಿಯು ಸರ್ವಮಂಗಳೆಯೆಂದು ನಾಮಧಾರಣೆ ಮಾಡಿದಳು. ಆಗ ದೇವತೆಗಳು ಸಂತುಷ್ಟರಾಗಿ ತಮ್ಮ ತಮ್ಮ ಲೋಕಗಳಿಗೆ ತೆರಳಿದರು. ಬಳಿಕ ಸರ್ವಮಂಗಳೆ ಭವನ ಸುತ್ತಮುತ್ತಲೂ ಸುಳಿದಾಡುತ್ತಾ ಮಧುರಗಾನ ಮಾಡುತ್ತಾ ನಾನಾ ಹಾವ ಭಾವವಿಲಾಸಗಳನ್ನು ತೋರಲಾರಂಭಿಸಿದಳು. ಅವಳ ಮಧುರಗಾನರಸಸೇಚನ ಮಾತ್ರದಿಂದ ಅಲ್ಲಿದ್ದ ವೃಕ್ಷಗಳು ಚಿಗುರಿಬಿಟ್ಟುವು. ವನದೇವತೆಗಳೂ ಕೂಡ ಮೋಹಿತರಾಗಿ ಹೋದರು. ಇದೇ ಸಮಯವೆಂದು ಮನ್ಮಥನು ಶಿವನ ಮೇಲಿನ ಪೂರ್ವ ದ್ವೇಷ ಸ್ಮರಣೆಮಾಡಿಕೊಂಡು ಅದರ ಮುಯ್ಯಿ ತೀರಿಸಿಕೊಳ್ಳುವುದಕ್ಕಾಗಿ ದೇವಿಯ ಸಹಾಯವನ್ನವಲಂಬಿಸಿ ರಾಜಶೇಖರನ ಮೇಲೆ ಪಂಚಬಾಣ ಪ್ರಯೋಗ ಮಾಡಿದನು.

ಇವೆಲ್ಲದರ ಪರಿಣಾಮವಾಗಿ ಕಪರ್ದಿಯು ತಪಸ್ಸನ್ನು ವಿರಮಿಸಿ ಕಣ್ಣು ತೆಗೆದು ನೋಡಿದನು. ಆಗ ಸರ್ವಮಂಗಳೆಯು ನಿಜಕಟಾಕ್ಷತೀಕ್ಷ್ಣಸಾಯಕಗಳಿಂದ ತನ್ನ ಲಕ್ಷ್ಯವಾದ ಶಂಕರನನ್ನು ಭೇದಿಸಬೇಕೆಂದು ಮನಸ್ಸುಮಾಡಿ ಸ್ವಮಾಯೆಯಿಂದ ಅವನನ್ನು ಆವರಿಸಿ ಮನೋಹರವಾಗಿ ಹಾಡಿದಳು. ತದ್ಗಾನಾಮೃತಪಾನದಿಂದ ಸಂತುಷ್ಟಾಂತರಂಗನಾದ ಶ್ರೀಕಂಠನು 'ಯಾರಿದು ?' ಎಂಬ ಕುತೂಹಲದಿಂದ ದೃಷ್ಟಿಸಿ ನೋಡಿ ಜಗನ್ಮೋಹನರೂಪಾಢ್ಯಳೂ ಜಗದಾನಂದದಾಯಿನಿಯೂ ಆದ ಆ ದಿವ್ಯ ಸುಂದರಿಯನ್ನು ಕಂಡನು. ಒಡನೆಯೇ ಅವನಿಗೆ ಸತೀವಿರಹಜನ್ಯವಾದ ದುಃಖ ಸ್ಮರಣೆಯಾಗಿ ಮನೋವಿಕಾರವಾಯಿತು. ಸ್ಮರತಾಪಾರ್ದಿತನಾದ ಸ್ಮರಹರ (ಶಿವನು) ಸರ್ವಮಂಗಳೆಯನ್ನು ದೈನ್ಯದಿಂದ ಯಾಚಿಸುತ್ತಾ ಅವಳ ಸಮೀಪಕ್ಕೆ ಬಂದನು.

ಸರ್ವಮಂಗಳೆಯಾದರೋ ಅರ್ಧ ಲಜ್ಜೆಯಿಂದಲೂ ಅರ್ಧ ಗರ್ವದಿಂದಲೂ ಹರನನ್ನು ವಂಚಿಸಿ ಕೈಗೆ ಸಿಕ್ಕುವವಳಂತೆ ತೋರಿಸಿ ಮತ್ತೆ ತಪ್ಪಿಸಿಕೊಳ್ಳುತ್ತಾ ಅವನನ್ನು ಮಾಯಾಜಾಲಕ್ಕೆ ಸಿಲುಕಿಸಿ ಬಹುದೂರ ಎಳೆದುಕೊಂಡು ಹೋಗಿ ಇದ್ದಕ್ಕಿದ್ದ ಹಾಗೆಯೇ ಅದೃಶ್ಯಳಾಗಿಬಿಟ್ಟಳು.

ವಿರಹತಾಪ—ದೇವದೇವನಾದ ಶಂಕರ ಆ ದಟ್ಟವಾದ ಕಾಡಿನಲ್ಲಿ ಎಷ್ಟು ದೂರ ಹುಡುಕಾಡಿದರೂ ದೇವಿ ಕಾಣಿಸಲಿಲ್ಲ. ದಣಿವಿನಿಂದಲೂ ಅಂತಸ್ತಾಪದಿಂದಲೂ

---

1. ಇಂದ್ರನ ಪತ್ನಿಯಾದ ಶಚೀ, 2. ಅಗ್ನಿಯ ಪತ್ನಿ, 3. ಯಮನ ಪತ್ನಿ.

ದಂಡಾಗಿ ಹುಚ್ಚನಂತೆ ಮೃಗಗಳನ್ನೂ, ಪಕ್ಷಿಗಳನ್ನೂ, ಗಿಡಮರಗಳನ್ನೂ, 'ದೇವಿ ಎಲ್ಲಿ ಹೋದಳೆಂದು' ಕೇಳುತ್ತಾ ವಿರಹಜ್ವಾಲೆಯಿಂದ ಕಂಗೆಟ್ಟ.

ನಿರ್ದಗ್ಧ್ವಾ ನಿಖಿಲಾಮಟವೀಮಪಿ ಗಿರೀನುತ್ಪಾಟ್ಯಯಾವ್ಯರ್ಣವಾನ್
ಪಾಸ್ಯಾಮ್ಯಾಶು ಪಿನಾಕಮುಕ್ತವಿಶಿಖೈಃ ಸಂಛಾದಯಾಮ್ಯಂಬರಮ್
ಛಿತ್ವಾ ಬ್ರಹ್ಮಕಟಾಹಮಂಬರಮಣಿಂ ಸುಪ್ರೋಥಯಾಮ್ಯಾಶು ತಾಂ
ತತ್ರತ್ಯಾಂ ಮೃಗಯಾಮಿ ಚಿತ್ತರಮಣೀಮಿತ್ಯೂಚಿವಾನ್ ಶಂಕರಃ ॥

"ಇಡೀ ಕಾಡನ್ನೇ ಸುಟ್ಟುಬಿಟ್ಟು ಗಿರಿಗಳನ್ನೇ ಕಿತ್ತೊಗೆಯುವೆನು, ಈ ಕ್ಷಣ ದಲ್ಲೇ ಸಮುದ್ರಗಳನ್ನೆಲ್ಲಾ ಕುಡಿದುಹಾಕುವೆನು. ಪಿನಾಕವೆಂಬ ನನ್ನ ಧನುಸ್ಸಿನಿಂದ ಬಾಣದ ಮಳೆ ಸುರಿಸಿ ಅಂಬರವನ್ನೆಲ್ಲಾ ಮುಚ್ಚಿಬಿಡುವೆನು. ಅಂತೂ ನನ್ನ ಚಿತ್ತ ರಮಣಿ ಎಲ್ಲಿದ್ದರೂ ಹುಡುಕುವೆ"ನೆಂದು ಶಂಕರ ಆರ್ಭಟಿಸಿದನು.

ಅವನ ಆರ್ಭಟವನ್ನು ಕೇಳಿ ಋಷಿಗಳು ಹಾಹಾಕಾರಮಾಡಲಾರಂಭಿಸಿದರು. ವೃಕ್ಷಗಳು ಹತ್ತಿಕೊಂಡು ಉರಿದು ಹೋದವು. ಆಕಾಶದಿಂದ ನಕ್ಷತ್ರಗಳು ಉದುರಿ ಬಿದ್ದವು. ದಿಗ್ದೇವತೆಗಳೂ ಕೂಡ ದುಃಖಭರಿತರಾದರು. ಹೀಗೆ ಲೋಕಾನು ಲೋಕವೇ ಸಂಭ್ರಾಂತವಾಗಲು ಬ್ರಹ್ಮಾದಿ ದೇವತೆಗಳು ಪಾಹಿ ಪಾಹಿ ಎಂದು ವಿಷ್ಣು ವನ್ನು ಮೊರೆಹೊಕ್ಕರು. ಆಗ ವಿಷ್ಣು ಅವರೊಡನೆ ಶಿವನ ಬಳಿಗೆ ಬಂದು ಅವನನ್ನು ಪರಿಪರಿಯಾಗಿ ಸ್ತುತಿಸಿ ಪ್ರಸನ್ನೀಕರಿಸಿಕೊಂಡು ಅವನನ್ನು ಕೋಪವನ್ನು ಅಡಗಿಸು ವಂತೆ ಕೇಳಿಕೊಂಡನು. ಅವರೆಲ್ಲರ ಕೋರಿಕೆಯನ್ನು ಮನ್ನಿಸಿ ದಯಾಮಯನಾದ ಕಪಾಲಧಾರಿ ಅವರಿಗೆ ಅಭಯಕೊಟ್ಟು ಶಾಂತರೂಪ ಧರಿಸಿ ಪುನಃ ತಪಸ್ಸಿಗೆ ಕುಳಿತನು.

ಅಧ್ಯಾಯ 56 ಮೃಗದ ದೌತ್ಯ

ಮಾಯಾಮೃಗ ದರ್ಶನ—ಈ ರೀತಿ ತ್ರಿಶೂಲಿಯು ಶಾಂತ ಚಿತ್ತದಿಂದ ತಪಸ್ಸಿಗೆ ಕುಳಿತಿರಲು ಅಲ್ಲಿಗೆ ಒಂದು ವಿಚಿತ್ರವಾದ ಹರಿಣ ಎಲ್ಲಿಂದಲೋ ಹಾರಾಡಿ ಕೊಳ್ಳುತ್ತಾ ಬಂದು ಅಲ್ಲೇ ಸುಳಿದಾಡಲಾರಂಭಿಸಿತು. ಅದರ ಮೈ ಬಣ್ಣ ತಪ್ತ ಕಾಂಚನದಂತಿತ್ತು. ತೀಕ್ಷ್ಣವಾದ ಶೃಂಗಗಳು ಮನೋಹರವಾಗಿ ವಿರಾಜಿಸುತ್ತಿದ್ದುವು. ಕಂಠ ಪದ್ಮನಾಲದಂತೆಯೂ ಖುರ (ಗೊರಸು) ವಜ್ರಸಾರದಂತೆ (ಮಿಂಚಿನಂತೆ)ಯೂ ಇದ್ದುವು. ಚೆಲುವಾದ ಮುಖದೊಡನೆ ಶೋಭಿಸುತ್ತ ಆ ಮೃಗವು ತನ್ನ ಕಟಾಕ್ಷ ವೀಕ್ಷಣದಿಂದಲೇ ವನದೇವತೆಗಳನ್ನೂ ಮೋಹಿಸುವಂತಿತ್ತು. ಅದರ ದರ್ಶನ ಮಾತ್ರದಿಂದಲೇ ತಪೋನಿಷ್ಠನಾಗಿದ್ದ ನೀಲಕಂಠನ ಮನಸ್ಸೂ ಕೂಡ ಆಕೃಷ್ಟವಾಗಿ ಹೋಯಿತು. ಅವನು ಅದರ ಬಳಿಗೆ ಹೋಗಿ ಅದನ್ನು ಹಿಡಿದುಕೊಂಡು ಮುದ್ದಿಸಿ ತೊಡೆಯಲ್ಲೇ ಕರೆತಂದು ತನ್ನ ಬಳಿಯಲ್ಲೇ ಇಟ್ಟುಕೊಂಡುಬಿಟ್ಟನು. ಆ ಮೃಗದ ಲೀಲಾವಿಲಾಸಗಳನ್ನು ಕಂಡು ಕಂಡು ಪ್ರಭು ವಿನೋದ ಪಡುತ್ತಿದ್ದನು.

ಸೂತರು ಈ ರೀತಿ ಕಥಾಂತರವನ್ನು ಆರಂಭಿಸಲು ಅದನ್ನು ಕೇಳುತ್ತಿದ್ದ ಶೌನಕಾದಿಗಳು ಸೂತರನ್ನು ಕುರಿತು ಇಂತೆಂದರು—'ಸೂತರೇ, ಆ ಮೃಗ ಯಾವುದು? ಎಲ್ಲಿಂದ ಬಂತು? ಏಕೆ ಬಂತು? ಅದೂ ಅಲ್ಲದೆ ಶಿವನನ್ನು ಮೋಹಗೊಳಿಸಿ ಹೊರಟು ಹೋದ ದೇವಿ ಮುಂದೇನು ಮಾಡಿದಳು? ದಯವಿಟ್ಟು ಇದನ್ನೆಲ್ಲಾ ತಿಳಿಸಬೇಕು.' ಆಗ ಸೂತರು ಅವರ ಪ್ರಶ್ನೆಗಳಿಗೆ ಉತ್ತರ ರೂಪವಾದ ಮುಂದಿನ ಕಥಾಭಾಗವನ್ನು ಹೀಗೆ ವರ್ಣಿಸಿದರು.

ದೇವಿಯ ಪಶ್ಚಾತ್ತಾಪ—ಮೋಹಿನೀರೂಪಧಾರಿ ಸರ್ವಮಂಗಳೆ ತನ್ನ ಪತಿಯನ್ನು ವಂಚಿಸಿ ಕೈಲಾಸಕ್ಕೇನೋ ಆ ಕ್ಷಣದಲ್ಲೇ ತೆರಳಿಬಿಟ್ಟಳು. ಆದರೆ ಸ್ವಲ್ಪ ಹೊತ್ತಾದ ಬಳಿಕ ಆಲೋಚನೆ ಮಾಡಿಕೊಂಡು 'ಅಯ್ಯೋ, ನಾನೆಂಥಾ ಕೆಲಸ ಮಾಡಿಕೊಂಡೆ! ಕಾಮಾತುರನಾದ ಪ್ರಾಣವಲ್ಲಭನನ್ನು ವಂಚಿಸಿ ಹೊರಟು ಬಂದೆನಲ್ಲಾ; ಮತ್ತೆ ಅವನನ್ನು ಸೇರುವ ಬಗೆ ಹೇಗೆ? ಅವನಿಗೆ ಮುಖ ಹೇಗೆ ತೋರಿಸಲಿ?' ಎಂದು ಪಶ್ಚಾತ್ತಾಪಪಡುತ್ತಾ ಚಿಂತಾತುರಳಾದಳು.

ಕುಶಿಕ ಮತ್ತು ಸತಿ—ಇದೇ ಕಾಲದಲ್ಲಿ ದಿವ್ಯ ಭೋಗಸಮನ್ವಿತವಾದ ಮಧುರಾ ನಗರದಲ್ಲಿ ಮಹಾನಿಪುಣನೂ ನೀತಿ ಮಾರ್ಗವಿಚಾರದನೂ ಪಂಚಯಜ್ಞಪರನೂ, ಸತ್ಯಧುರಂಧರನೂ, ಆದ ಕುಶಿಕನೆಂಬ ಬ್ರಾಹ್ಮಣೋತ್ತಮ ವಾಸವಾಗಿದ್ದ. ಆತನ ಪತ್ನಿಯಾದ ಸತಿ ಸತೀಮಣಿಯೇ ಆಗಿದ್ದಳು. ಅವರಿಗೆ ಬಹುಕಾಲವಾದರೂ ಸಂತಾನಭಾಗ್ಯಪ್ರಾಪ್ತಿಯೇ ಆಗಿರಲಿಲ್ಲ. 'ಅಪುತ್ರಸ್ಯ ಗತಿರ್ನಾಸ್ತಿ' ಎಂದು ಹಿರಿಯರು ಹೇಳುವುದನ್ನರಿತ ಆ ಕುಶಿಕ ಪುತ್ರ ಸಂತಾನಲಾಭಕ್ಕಾಗಿ ರಾಜರಾಜೇಶ್ವರಿಯನ್ನು ಕುರಿತು ತಪಸ್ಸು ಮಾಡಿದ. ದೇವಿ ಪ್ರಸನ್ನಳಾಗಿ ವರಕೊಡುತ್ತಾ 'ನಿನಗೆ ಪುತ್ರನಾಗಲಾರ. ಆದರೆ ಅದಕ್ಕೆ ಬದಲಾಗಿ ನನ್ನ ಅಂಶೋದ್ಭವಳಾದ ಮಗಳು ಹುಟ್ಟುವಳು. ಅವಳಿಂದಲೇ ನಿನಗೆ ಸದ್ಗತಿಯಾಗುತ್ತದೆ' ಎಂದಳು.

ಅದರಂತೆ ಕಾಲಕ್ರಮದಲ್ಲಿ ಆ ದಂಪತಿಗಳಿಗೆ ಸುಕುಮಾರಿಯಾದ ಒಂದು ಶಿಶುರತ್ನ ಜನಿಸಿತು. ಅದಕ್ಕೆ ಸರ್ವಾವಯವಗಳಲ್ಲೂ ಮಂಗಳಲಕ್ಷಣಗಳಿದ್ದುದನ್ನು ಕಂಡು ಆ ಕನ್ಯೆಗೆ ಸರ್ವಮಂಗಳೆ ಎಂದೇ ನಾಮಕರಣಮಾಡಿದರು. ಆ ಕನ್ಯೆ ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತಾ ಅಷ್ಟವರ್ಷವಯಸ್ಕಳಾದಳು.

ಮೃಗಶಾವಕ ದೊರೆತದ್ದು—ಒಂದು ದಿನ ಸರ್ವಮಂಗಳೆ ತನ್ನ ಸಖಿಯರೊಡನೆ ವನವಿಹಾರಕ್ಕಾಗಿ ಹೋದಳು. ಅಲ್ಲಿ ಇಲ್ಲಿ ಅಡ್ಡಾಡುತ್ತಾ ಒಂದು ಸರೋವರದ ಬಳಿಗೆ ಬರಲು ಅದರಲ್ಲಿ ನೀರು ಕುಡಿಯುತ್ತಿದ್ದ ಜಿಂಕೆಗಳು ಆ ಹುಡುಗಿಯನ್ನು ಕಂಡು ಪಲಾಯನಮಾಡಿದುವು. ಒಂದು ಮರಿ ಮಾತ್ರ ಓಡಲಾರದೆ ಹಿಂದೆಯೇ ಉಳಿದುಕೊಂಡಿತು. ಸರ್ವಮಂಗಳೆ ಸುಂದರವಾಗಿದ್ದ ಆ ಮೃಗಶಾವಕವನ್ನು ಹಿಡಿದು ಕೊಂಡು ಮನೆಗೆ ತಂದು ಮುದ್ದಿನಿಂದ ಸಾಕತೊಡಗಿದಳು.

ಸಂಧಾನಕ್ಕಾಗಿ ದೂತಪ್ರೇಷಣ—ಮಗಳು ಪ್ರಾಪ್ತವಯಸ್ಕಳಾದುದನ್ನು ಮನವರಿತು ಕುಶಿಕ ವರಾನ್ವೇಷಣಕ್ಕಾಗಿ ಹೊರಟ. ಈ ಸುದ್ದಿಯನ್ನು ಕೇಳಿ ಸರ್ವಮಂಗಳೆ ತನ್ನೊಳಗೆ ತಾನು 'ಅಯ್ಯೋ ಏನು ಮಾಡಲಿ ? ನನಗೆ ಗಿರೀಶನಲ್ಲದೆ ಬೇರೆ ಯಾರೂ ಪತಿಯಾಗಲಾರರು. ಇದನ್ನರಿಯದೆ ನಮ್ಮ ತಂದೆ ಯಾವನೋ ಪ್ರಾಕೃತ ಪುರುಷನನ್ನು ಹುಡುಕಿಕೊಂಡು ಹೊರಟನಲ್ಲ. ಏನು ಉಪಾಯ ಮಾಡಲಿ?' ಎಂದಾಲೋಚಿಸಿ ಜಿಂಕೆಯನ್ನು ಕರೆದು 'ಮಹಾಪುಣ್ಯ, ನೀನೇ ನನಗೆ ಪ್ರಾಣದಾತ. ನಿನ್ನನ್ನು ಬಿಟ್ಟರೆ ನನ್ನ ಕಾರ್ಯ ಸಾಧಿಸಿಕೊಡುವವರು ಮತ್ತಾರೂ ಇಲ್ಲ. ಆದ್ದರಿಂದ ನೀನು ನನಗಾಗಿ ಪಂಪಾಕ್ಷೇತ್ರಕ್ಕೆ ಹೋಗಿ ಅಲ್ಲಿ ತಪೋನಿಷ್ಠನಾದ ನನ್ನ ಪ್ರಾಣೇಶ್ವರನನ್ನು ಕಂಡು ಒಲಿಸಿ ಅವನಲ್ಲಿ ನನ್ನ ಪರ ಮಧ್ಯಸ್ಥಿಕೆ ಮಾಡಿಕೊಂಡು ಬಾ. ಇಲ್ಲದಿದ್ದರೆ ಇದೋ ನಿನ್ನೆದುರಿಗೇ ಪ್ರಾಣತ್ಯಾಗ ಮಾಡಿಬಿಡುತ್ತೇನೆ' ಎಂದು ಹೇಳಿ ಅದನ್ನು ಮಾಣಿಭದ್ರನ ಬಳಿಗೆ ಕಳುಹಿಸಿದಳು. ಆ ಜಿಂಕೆಯೇ ಒಂದೆ ಹೇಳಿದಂತೆ ಶ್ರೀಕಂಠನ ಬಳಿಗೆ ಬಂದು ಅವನ ಪ್ರೀತಿಯನ್ನು ಒಂದು ಗಳಿಗೆಯೊಳಗಾಗಿ ಸಂಪಾದಿಸಿ ಬಿಟ್ಟಿತು.

ಸಂಧಾನ ಸಿದ್ಧಿ—ಹೀಗೆಯೇ ಆ ಮೃಗಶಾವಕ ಸಮಯ ಕಾಯುತ್ತಾ ಅಡ್ಡಾಡಿಕೊಂಡಿರಲು ಒಂದು ದಿನ ಮಾಣಿಭದ್ರಸ್ವಾಮಿ ಕಾಮತಪ್ತನಾಗಿ ತನ್ನ ವಿರಹ ವೇದನೆಯನ್ನು ಆಪ್ತನಂತಿದ್ದ ಆ ಮೃಗಪೋತನ ಮುಂದೆ ಉಸುರಿದನು. ತನ್ನ ದೌತ್ಯಕ್ಕೆ ಸರಿಯಾದ ವೇಳೆ ಸಿಕ್ಕಿತೆಂದು ತಿಳಿದು ಅದು ಸರ್ವಮಂಗಳೆಯ ವಿಚಾರವನ್ನೆಲ್ಲಾ ಅವನಿಗೆ ಅರುಹಿ 'ಮೊದಲು ನೀನೇ ಬಂದು ಅವಳನ್ನು ಕಂಡರೆ ಅವಳು ವಿವಾಹ ನಿಶ್ಚಯ ಮಾಡುವುದಕ್ಕೆ ಬೇರೆ ಯಾರನ್ನಾದರೂ ಕಳುಹಿಸುವಳು' ಎಂದು ಸೂಚನೆ ಕೊಟ್ಟಿತು. ಅದಕ್ಕೊಪ್ಪಿ ದೇವನು 'ಆಗಲಿ, ನಿನ್ನ ಮಾತಿನಂತೆ ಅವಳನ್ನೇ ವರಿಸುತ್ತೇನೆ. ನೀನು ಹೋಗಿ ಈ ವಿಷಯವನ್ನು ಅವಳಿಗೆ ಮೊದಲೇ ತಿಳುಹಿಸಿರು. ನಾನೂ ಒಬ್ಬನನ್ನು ಮಾತುಕತೆ ನಡೆಸುವುದಕ್ಕೆ ಕಳುಹಿಸಿಕೊಡುವೆನು' ಎಂದನು. ಹೀಗೆ ಆ ಮೃಗಪೋತ ಕೃತಕಾರ್ಯನಾಗಿ ತ್ವರೆಯಿಂದ ಮಧುರಾ ಕಡೆಗೆ ತೆರಳಿತು.

ಅಧ್ಯಾಯ 57 ವಿವಾಹ ಸನ್ನಾಹ

ಕುಬೇರನ ಮಧ್ಯಸ್ಥಿಕೆ—ಇತ್ತ ಜಿಂಕೆಯೂ ಮಧುರೆಗೆ ಬಂದು ಸಂತೋಷ ವೃತ್ತಾಂತವನ್ನು ಮುಟ್ಟಿಸಿತು. ಅತ್ತ ರಾಜಶೇಖರ ಕುಬೇರನನ್ನು ಬರಮಾಡಿಕೊಂಡು ಅವನನ್ನೇ ಕುಶಿಕನ ಬಳಿಗೆ ಮಾತುಕತೆ ನಡೆಸುವುದಕ್ಕಾಗಿ ಕಳುಹಿಸಿಕೊಟ್ಟನು. ಕುಶಿಕ ಧನಾಧಿಪನನ್ನು ಆದರದಿಂದ ಸತ್ಕರಿಸಿ ಅವನು ಬಂದಿರುವ ಉದ್ದೇಶವನ್ನು ಅರಿತು ದೈನ್ಯದಿಂದ 'ದೀನ ಬ್ರಾಹ್ಮಣನಾದ ನನ್ನ ಮಗಳನ್ನು ಆ ಸರ್ವಲೋಕೇಶ್ವರ ಹೇಗೆ ಕೈಹಿಡಿಯುವನು ?' ಎಂದು ಶಂಕೆ ಪಟ್ಟನು.

ಅದಕ್ಕೆ ಸಮಾಧಾನ ಹೇಳುತ್ತಾ ರಾಜರಾಜನು 'ಅಯ್ಯೋ ಬ್ರಾಹ್ಮಣ! ಏನೆಂದು ಹೇಳಲಿ. ಪ್ರಾಣಿಗಳಲ್ಲಿ ವಿಪ್ರನೇ ಶ್ರೇಷ್ಠ. ಅವರೇ ಯಜ್ಞಾದಿಗಳಿಂದ ಭೂಮಿಯನ್ನು ವಾಸ್ತವವಾಗಿ ಪಾಲಿಸತಕ್ಕವರು. ಆ ವಿಪ್ರವರ್ಗಕ್ಕೆ ವಿಶ್ವೇಶ್ವರನೇ ಕುಲದೇವತೆ. ಮತ್ತು ಮಂತ್ರಮೂರ್ತಿಯಾದ ಆ ವಿಶ್ವನಾಥನಿಗೆ ವಿಪ್ರನೇ ಕುಲದೇವತೆ. ಆದ್ದರಿಂದ ಶಂಕರನಿಗೂ ವಿಪ್ರನಿಗೂ ಭೇದ ಎಣಿಸಬಾರದು. ಇಂಥಾ ವಿಪ್ರೋತ್ತಮನಾದ ನಿನ್ನ ಮಗಳು ಸಾಕ್ಷಾತ್ ಜಗಜ್ಜನನಿಯೇ ಹೊರತು ಸಾಮಾನ್ಯಳಲ್ಲ. ಇದರಲ್ಲಿ ಸಂದೇಹಪಡಬೇಡ' ಎಂದು ತಿಳಿಸಿದನು.

ಅದನ್ನು ಕೇಳಿ ಹೃಷ್ಟನಾದ ಕುಶಿಕ ಬ್ರಾಹ್ಮಣರನ್ನು ಕರೆಸಿ ಅವರ ಸಮ್ಮುಖದಲ್ಲೇ ಲಗ್ನಪತ್ರಿಕೆ ಬರೆದು ಕೊಟ್ಟು 'ಹೇ ಪೌಲಸ್ತ್ಯ! ಮುಂದಿನ ಸನ್ನಾಹ ನಡೆಸುವ ಭಾರ ನಿನ್ನದು' ಎಂದು ಎಲ್ಲವನ್ನೂ ಕುಬೇರನಿಗೇ ವಹಿಸಿಬಿಟ್ಟನು. ಯಕ್ಷೇಶ ಲಗ್ನಪತ್ರಿಕೆಯೊಡನೆ ತಡಮಾಡದೆ ತನ್ನ ಸಖನ ಬಳಿಗೆ ಬಂದನು.

ವಿವಾಹಕ್ಕೆ ದೇವತೆಗಳ ಆಗಮನ—ಲಗ್ನಪತ್ರಿಕೆಯನ್ನು ನೋಡಿ ನೀಲಕಂಠ ಸಂತುಷ್ಟನಾಗಿ ಕುಬೇರನನ್ನು ಶ್ಲಾಘಿಸಿ ನಂದಿಯ ಮುಖಾಂತರ ಬ್ರಹ್ಮಾದಿಗಳೆಲ್ಲರಿಗೂ ಆಹ್ವಾನ ಪತ್ರಿಕೆಗಳನ್ನು ಕಳುಹಿಸುವಂತೆ ಆಜ್ಞಾಪಿಸಿದನು. ಅದರಂತೆ ಎಲ್ಲರಿಗೂ ಲಗ್ನಪತ್ರಿಕೆಗಳು ಮುಟ್ಟಲು ಬ್ರಹ್ಮ ವಿಷ್ಣು ಮೊದಲಾಗಿ ಸಕಲದೇವತೆಗಳೂ ರುದ್ರನ ಬಳಿ ಬಂದು ನೆರೆದರು.

ಅನಂತರ ಆ ಸ್ವಾಮಿ ವಿಷ್ಣುವಿನ ಸೂಚನೆಯಂತೆ ಬ್ರಹ್ಮನನ್ನು ಮಧುರಾಕ್ಕೆ ಕಳುಹಿಸಿ ಕುಶಿಕನಿಗೆ ಸಹಾಯಮಾಡುವಂತೆಯೂ ವಿಶ್ವಕರ್ಮಾದಿಗಳ ಸಹಾಯದಿಂದ ನಗರವನ್ನು ಅಲಂಕರಿಸಿ ವಿವಾಹಮಂಡಪವನ್ನೂ ಅತಿಥಿ ಅಭ್ಯಾಗತರಿಗೆ ಬಿಡಾರವನ್ನು ಸಜ್ಜುಗೊಳಿಸುವಂತೆ ಅಪ್ಪಣೆಮಾಡಿದನು.

ನಗರಾಲಂಕಾರ—ಅದರಂತೆ ವಿಧಾತ ಕುಶಿಕನ ಬಳಿಗೆ ಹೋಗಿ ಗಂಗಾಧರನ ಅಪ್ಪಣೆ ತಿಳಿಸಿದನು. ಅದಕ್ಕೆ ಕುಶಿಕ ದೈನ್ಯದಿಂದ, ಎಲ್ಲವೂ ತಮ್ಮದೇ. ನಾನೇ ನಿಮ್ಮ ಅಧೀನನಾಗಿದ್ದೇನೆ. ತಾವು ಏನು ಮಾಡುವುದಕ್ಕೂ ಸ್ವತಂತ್ರರಿದ್ದೀರಿ. ಯಾವ ಅಡ್ಡಿಯೂ ಇಲ್ಲ' ಎಂದು ವಿಜ್ಞಾಪಿಸಿಕೊಳ್ಳಲು ಪಿತಾಮಹ ವಿಶ್ವಕರ್ಮನ ಸಹಾಯದಿಂದ ವರ ಇಳಿದುಕೊಳ್ಳುವ ಸೌಧವನ್ನು ಮೊದಲು ಕಟ್ಟಿಸಿ ಅನಂತರ ಕ್ರಮವಾಗಿ ದೇವತೆಗಳಿಗೂ ಮುನಿಗಳಿಗೂ ಬ್ರಾಹ್ಮಣಾದಿಗಳಿಗೂ ತಕ್ಕಂತೆ ಬೇರೆ ಬೇರೆ ಬಿಡಾರಗಳನ್ನು ಕಟ್ಟಿಸಿದನು. ಬಳಿಕ ನಾನಾ ರತ್ನಾಢ್ಯವಾದ ರತ್ನಭಿತ್ತಿಗಳಿಂದ ಪರಿಶೋಭಿಸುವ ದಿವ್ಯವಾದ ಕಲ್ಯಾಣ ಮಂಟಪವನ್ನು ರಚಿಸಿ ಊರನ್ನೆಲ್ಲಾ ತೋರಣ ಪತಾಕಾದಿಗಳಿಂದ ಅಲಂಕರಿಸಿ ದೇವಾಲಯಗಳಿಗೆಲ್ಲಾ ಸುಣ್ಣ ಹಚ್ಚಿಸಿ ತಂಡುಲಾಜ್ಯ ಗುಡಾದಿ ಸಕಲ ಸಿದ್ಧತೆಗಳನ್ನೂ ಅಳವಡಿಸಿಟ್ಟ.

ದಿಬ್ಬಣಕ್ಕೆ ಸಿದ್ಧತೆ—ಸನ್ನಾಹಗಳೆಲ್ಲವೂ ಸಿದ್ಧವಾಗಲು ಕುಶಿಕ ತಮ್ಮ ಕುಲ ಪುರೋಹಿತರಾದ ಗಾರ್ಗ್ಯರನ್ನು ಕರೆಯಿಸಿ ಪೂಜೆಮಾಡಿ ವರನನ್ನು ಆಹ್ವಾನಿಸುವುದಕ್ಕೆಂದು ಆಹ್ವಾನ ಪತ್ರಿಕೆಯೊಡನೆ ಕಳುಹಿಸಿಕೊಟ್ಟ. ಗಾರ್ಗ್ಯರು ಆ ಪತ್ರಿಕೆಯನ್ನು ವರನ ಕೈಗೊಪ್ಪಿಸಿದರು. ಅವನು ಅದನ್ನು ಓದುವುದಕ್ಕೆಂದು ವಿಷ್ಣುವಿನ ಕೈಗೆ ಕೊಟ್ಟ. ವಿಷ್ಣು ಓದಲು ಅದರ ಒಕ್ಕಣಿಕೆ ಹೀಗಿತ್ತು :—

ದೇವದೇವ ಜಗದ್ವಂದ್ಯ ದಯಾಕರ ಮಹೇಶ್ವರ ।
ದೀನಾರ್ತತ್ರಾಣಪಾರೀಣ ಬಿರುದ್ವೈಕಪ್ರಕಾಶಕ ॥ ೧ ॥

ತವ ಭಕ್ತೇನ ಕುಶಿಕ ನಾಮ್ನಾ ಸಾಷ್ಟಾಂಗಪೂರ್ವಕಮ್ ।
ಸಂಪ್ರಾರ್ಥ್ಯತೇ ನಮಸ್ಕೃತ್ಯ ಮಧುರಾನಿಲಯೇನ ಚ ॥ ೨ ॥

ಪ್ರೀತ್ಯರ್ಥಂ ತವ ದೇವೇಶ ಶಾಸನಾರ್ಥಂ ಕುಲಸ್ಯ ಮೇ ।
ಸುತಾಂ ಮಮ ಹಿತಾಯಾಶು ತುಭ್ಯಂ ದಾಸ್ಯಾಮಿ ಶಂಕರ ॥ ೩ ॥

ಕನ್ಯಾದಾನವಿಧಾನೇನ ಸ್ವೀಕುರುಷ್ವಾಶು ತಾಂ ವಿಭೋ ।
ಮಾಮುದ್ಧರ ದಯಾಸಿಂಧೋ ದೀನಬಂಧೋ ಮಹೇಶ್ವರ ॥ ೪ ॥

ಮಾಘಶುಕ್ಲದ್ವಿತೀಯಾಯಾಂ ಸುಮುಹೂರ್ತಃ ಪ್ರತಿಷ್ಠಿತಃ ।
ಸಬಾಂಧವಃ ಸಗಣಸ್ತೂರ್ಣಂ[1] ಆಯಾಹಿ ಮಧುರಾಂ ಪ್ರತಿ * ॥ ೫ ॥

ಅದನ್ನು ಕೇಳಿ ಚಂದ್ರಮೌಳಿ ಸಂತೋಷಪಟ್ಟು ಎಲ್ಲರಿಗೂ ಹೊರಡಲು ಸಿದ್ಧವಾಗುವಂತೆ ಹೇಳಿದ. ಅದನ್ನು ಕೇಳಿ ಬೃಹಸ್ಪತಿ ಮೊದಲು ವರನಿಗೆ ಮಂಗಲಸ್ನಾನವಾಗಬೇಕೆಂದು ಸೂಚಿಸಿದನು. ಅದರಂತೆ ಲಕ್ಷ್ಮಿಯೂ ಶಚಿಯೂ ವರನನ್ನು ಸುವರ್ಣಪೀಠದಲ್ಲಿ ಕೂಡಿಸಿ ಎಣ್ಣೆ ಶಾಸ್ತ್ರಮಾಡಿ ಅಭ್ಯಂಗ ಮಾಡಿಸಿ ಪುಣ್ಯಾಹ ವಿಧಿಯನ್ನು ನಡೆಸಿದರು. ಸರ್ವರಿಗೂ ಊಟೋಪಚಾರಗಳಾದುವು. ಆ ದಿನ ಅಲ್ಲೇ ಇದ್ದು ಮರುದಿನ ದಿಬ್ಬಣ ಹೊರಡಬೇಕೆಂದು ನಿಶ್ಚಯವಾಯಿತು.

ಅಧ್ಯಾಯ 58 ವಿವಾಹ ವರ್ಣನೆ

ದಿಬ್ಬಣ (ವರಯಾತ್ರೆ)—ಮರುದಿನ ಬೆಳಗ್ಗೆ ಎದ್ದು ಅಮೃತಸರೋವರದಲ್ಲಿ ಸ್ನಾನಮಾಡಿ ವರನಾದ ಮಹಾದೇವ ದೇವತೆಗಳೊಡನೆಯೂ ಮಹರ್ಷಿಗಳೊಡನೆಯೂ

1 ತೂರ್ಣಂ = ಶೀಘ್ರವಾಗಿ

* ಮಧುರಾವಾಸಿ ಕುಶಿಕ ಸಾಷ್ಟಾಂಗ ಪೂರ್ವಕ ಪ್ರಾರ್ಥಿಸಿಕೊಳ್ಳುವುದೇನೆಂದರೆ-ನನ್ನ ಮಗಳನ್ನು ನಿನಗೆ ಕೊಡುತ್ತೇನೆ. ಕನ್ಯಾದಾನ ವಿಧಾನದಿಂದ ಆಕೆಯನ್ನು ಪರಿಗ್ರಹಿಸಿ ನನ್ನನ್ನು ಉದ್ಧಾರಮಾಡು. ಮಾಘ ಶುಕ್ಲ ಬಿದಿಗೆ ಮುಹೂರ್ತ ಏರ್ಪಾಟಾಗಿದೆ. ಆ ವೇಳೆಗೆ ಸರಿಯಾಗಿ ಬಂಧು ಪರಿವಾರ ಸಮೇತನಾಗಿ ಮಧುರಾಕ್ಕೆ ಬರುವುದು—ಎಂದು ತಾತ್ಪರ್ಯ.

ಮಧುರಾಕ್ಕೆ ಹೊರಟನು* ನಗರೋಪಕಂಠ (ಸೀಮಾ)ಕ್ಕೆ ಬರುವುದಕ್ಕೆ ಮುಂಚೆಯೇ ಒಬ್ಬ ದೂತನ ಮುಖಾಂತರ ದಿಬ್ಬಣ ಬರುತ್ತಿರುವ ಸುದ್ದಿ ತಿಳಿಸಲಾಯಿತು. ಆಗ ಕುಶಿಕ ಚತುರ್ಮುಖನ ಅಪ್ಪಣೆಯಂತೆ ಪತ್ನೀಸಹಿತ ಬಂಧು ಮಿತ್ರಾದಿಗಳು ಬ್ರಾಹ್ಮಣ ಸುವಾಸಿನಿಯರೊಡಗೂಡಿ ಪಂಚವಾದ್ಯ ಸಹಿತ ಹೊರಟು ವರನನ್ನು ಪುರೋಪವನದಲ್ಲಿ ಎದುರುಗೊಂಡು ಮಹಾವೈಭವದಿಂದ ಊರೊಳಗೆ ಕರೆದುಕೊಂಡು ಬಂದ. ಕಿಕ್ಕಿರಿದು ನೆರೆದಿದ್ದ ಪುರಜನರು ಮಹಡಿಗಳ ಮೇಲಿಂದಲೂ ಜಗಲಿಗಳ ಮೇಲಿಂದಲೂ ಕಿಟಕಿಗಳ ಸಂದುಗಳಿಂದಲೂ ವರನನ್ನು ದಿಟ್ಟಿಸಿ ನೋಡುತ್ತಿರಲು ತ್ರಿಪುರಾಂತಕನು ಮದುವಣಿಗನಿಗಾಗಿ ನಿರ್ಮಿತವಾದ ಸೌಧ ಪ್ರವೇಶಮಾಡಿದ. ದೇವತೆಗಳೂ ಮಹರ್ಷಿಗಳೂ ಅತಿಥಿ ಅಭ್ಯಾಗತರೂ ತಮಗಾಗಿ ಸಜ್ಜುಗೊಳಿಸಿದ್ದ ಶಿಬಿರಗಳಲ್ಲಿ ನೆಲೆಸಿದರು. ಸಕಲರಿಗೂ ಊಟೋಪಚಾರಗಳು ಸಾಂಗವಾಗಿ ನೆರವೇರಿದವು.

ವಿವಾಹಕ್ಕೆ ಮುಂಚಿನ ಕಾರ್ಯಗಳು—ಮರುದಿನ ವಧೂ-ವರರಿಗೆ ಬೇರೆ ಬೇರೆಯಾಗಿ ಎಣ್ಣೆ ಶಾಸ್ತ್ರ ಅಭ್ಯಂಗವನ್ನು ಮಾಡಿಸಿ ಅವರನ್ನು ರತ್ನಾಲಂಕಾರ ವಸ್ತ್ರಾದಿಗಳಿಂದ ಅಲಂಕರಿಸಿದರು. ಇನ್ನೊಂದು ಕಡೆ ಕುಶಿಕ-ಸತಿಯರೂ ಅಭ್ಯಂಗ ಮಾಡಿಕೊಂಡು ವಸ್ತ್ರಾಭರಣಗಳಿಂದ ಅಲಂಕೃತರಾಗಿ ಕನ್ಯಾದಾನಮಾಡಿಕೊಡುವುದಕ್ಕೆ ಸಿದ್ಧರಾದರು. ಅನಂತರ ಮದವಣಿಗ ಮಹಾವೈಭವದೊಡನೆ ಲಗ್ನಮಂಟಪಕ್ಕೆ ಬಿಜಯಂಗೈಯಲು ಬ್ರಾಹ್ಮಣಾದಿಗಳು ಆಶೀರ್ವದಿಸಿ ಲಾಜಾಕ್ಷತೆಗಳನ್ನು ಸುರಿಸಿದರು. ಇಷ್ಟು ಹೊತ್ತಿಗೆ ಲಗ್ನ ಮುಹೂರ್ತ ಪ್ರಾಪ್ತವಾಗಲು ಬೃಹಸ್ಪತಿ ವಧುವಿನ ಮಾತಾಪಿತೃಗಳನ್ನು ಅಣಿಯಾಗುವಂತೆ ತ್ವರೆ ಪಡಿಸಿದನು.

ಮಾಣಿಭದ್ರ-ಸರ್ವಮಂಗಳಾ ವಿವಾಹ ಘಟ್ಟ

ಬಳಿಕ ಕುಶಿಕ-ಸತಿಯರು ಬ್ರಹ್ಮನನ್ನು ಮುಂದೆ ಮಾಡಿಕೊಂಡು ವರನ ಬಳಿಗೆ ಬಂದು ಪಾದ ಪ್ರಕ್ಷಾಲನ ಮಾಡಿ ಮಧುಪರ್ಕ ಕೊಟ್ಟರು. ಸುಮುಹೂರ್ತದಲ್ಲಿ ವಧೂವರರು ಸಮ್ಮುಖವಾಗಿ ನಿಲ್ಲಲು ಬ್ರಾಹ್ಮಣರೂ ಮಹರ್ಷಿಗಳೂ ಅಂತಃಪಟ ಹಿಡಿದು ಮಂಗಲಾಷ್ಟಕ ಪಠಿಸಿದರು. ತದನಂತರ ಗಾರ್ಗ್ಯ ಕನ್ಯಾಗೋತ್ರ ಪ್ರವರೋಚ್ಚಾರ ಮಾಡಲು ಬೃಹಸ್ಪತಿ ವರನ ಗೋತ್ರಪ್ರವರ ಹೇಳಿದನು. ಕುಶಿಕ "ಪ್ರದಾಸ್ಯಾಮಿ" ಎಂದು ಮೂರು ಸಲ ಉಚ್ಚರಿಸಿ ಕನ್ಯೆಯನ್ನು ಧಾರೆಯೆರೆದು ಕೊಟ್ಟ. ಮಂಗಳ ವಾದ್ಯಗಳು ಭೋರ್ಗರೆಯುತ್ತಿರಲು ಮಾಣಿಭದ್ರದೇವಿಯ ಕಂಠದಲ್ಲಿ ಜಗಜ್ಜೀವನ ಹೇತುವಾದ ಮಾಂಗಲ್ಯಸೂತ್ರವನ್ನು ಕಟ್ಟಿದನು. ಆಮೇಲೆ ಕಂಕಣ ಬಂಧನದ ಶಾಸ್ತ್ರವಾಯಿತು. ಲಾಜಾ ಹೋಮಾದಿ ಸಕಲ ವಿವಾಹ ವಿಧಿಗಳೂ ಮುಗಿದ ಬಳಿಕ ಕುಶಿಕ ಎಲ್ಲರಿಗೂ ಷಡ್ರಸೋಪೇತವಾದ ಮೃಷ್ಟಾನ್ನ ಭೋಜನ ಮಾಡಿಸಿದನು. ಬಂದಿದ್ದ ಅತಿಥಿ ಅಭ್ಯಾಗತರಿಗೆಲ್ಲಾ ಯಥೋಚಿತ ಉಡುಗೊರೆ ದಕ್ಷಿಣೆ ತಾಂಬೂಲಾದಿ

---

* ಮೂಲದಲ್ಲಿ ವಿವಾಹ ವರ್ಣನೆ ಬಹು ವಿಸ್ತಾರವಾಗಿ ಹೇಳಿದೆ. ಇಲ್ಲಿ ಸಂಕ್ಷೇಪಮಾಡಿ ಮುಖ್ಯಾಂಶಗಳನ್ನು ಮಾತ್ರ ಹೇಳಿದ್ದೇವೆ—ವಿ. ತೀ.

ಗಳನ್ನು ಕೊಟ್ಟು ಸಂತೃಪ್ತಿಸಿದನು. ಹೀಗೆ ನಾಲ್ಕು ದಿನಗಳವರೆಗೆ ವಿವಾಹ ಮಹೋತ್ಸವ ವೈಭವದಿಂದ ಜರುಗಿತು.

ವಿವಾಹಾನಂತರ—ವಿವಾಹ ಮಹೋತ್ಸವದ ಕಾರ್ಯಗಳೆಲ್ಲ ಸಮಾಪ್ತವಾದ ಬಳಿಕ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಮಾಣಿಭದ್ರ ನವವಧೂ ಸಮೇತನಾಗಿ ಪಂಪಾಕ್ಷೇತ್ರದಲ್ಲಿ (ಮಾಣಿಭದ್ರ ಪ್ರದೇಶದಲ್ಲಿ) ನೆಲಸಿದನು.

ಒಂದು ದಿನ ಸರ್ವಮಂಗಳೆ ತನ್ನ ಪತಿಯೊಡನೆ ಆ ಜಿಂಕೆ ಮಾಡಿದ ಉಪಕಾರ ವನ್ನು ತಿಳಿಂತು ಹೇಳಿ ಅದಕ್ಕೆ ಯಾವ ರೀತಿಯಿಂದಲಾದರೂ ಪ್ರತ್ಯುಪಕಾರ ಮಾಡು ವಂತೆ ವಿಜ್ಞಾಪಿಸಿಕೊಂಡಳು. ಅದಕ್ಕೆ ಸ್ವಾಮಿಯೂ ಸಹ ಹೂಗುಟ್ಟಿ 'ಹೌದು, ನಿಜ. ಅದು ನನಗೂ ಸಹ ಮಹೋಪಕಾರ ಮಾಡಿತು' ಎಂದು ಹೊಗಳಿ ಆ ಜಿಂಕೆಯನ್ನೇ ಒಂದು ಆಯುಧದಂತೆ ತನ್ನ ಕೈಯಲ್ಲಿ ಧರಿಸಿ ಬಿಟ್ಟನು.

ಈ ವಿವಾಹೋಪಾಖ್ಯಾನವನ್ನು ಪಠಿಸುವವರೂ ಶ್ರವಣ ಮಾಡುವವರೂ ಸುಖಿಗಳಾಗಿ ಮೋಕ್ಷವನ್ನೈದುತ್ತಾರೆ.

ಅಧ್ಯಾಯ 59 ಕಕುಂಭ ತೀರ್ಥ

[ಈ ತೀರ್ಥವೂ ಸಹ ಅಮೃತ ತೀರ್ಥದ ಬಳಿಯಲ್ಲೇ ಎಲ್ಲೋ ಇರಬೇಕು, ಆದರೆ ಇಂಥಹದೇ ಎಂದು ನಿರ್ಧರಿಸುವುದಕ್ಕೆ ಸರಿಯಾದ ಪ್ರಮಾಣಗಳು ದೊರೆತಿಲ್ಲ.—ವಿ. ತಿ.]

ವಾನರರ ಕಲಹ—ಹಿಂದೆ ಕೃತಯುಗದಲ್ಲಿ ಕಕುಭ ಕಾಲಜಂಘರೆಂಬ ಇಬ್ಬರು ಬಲಿಷ್ಠ ವಾನರರಿಗೆ ಒಬ್ಬ ವಾನರಿಯ ವಿಷಯದಲ್ಲಿ ಗುದ್ದಾಟ ಪ್ರಾರಂಭ ವಾಯಿತು. ಹೊಡೆದಾಡುತ್ತಾ ಹೊಡೆದಾಡುತ್ತಾ ಆ ಇಬ್ಬರೂ ಸುತ್ತು ಮುತ್ತಲಿನ ಕಾಡು ಮೇಡುಗಳಲ್ಲೆಲ್ಲಾ ಸುತ್ತಾಡಿ ಹೊಡೆದಾಟಕ್ಕಾಗಿ ಅಲ್ಲಿ ಬೆಳೆದಿದ್ದ ಗಿಡಗೆಂಟೆ ಗಳನ್ನೆಲ್ಲಾ ನಾಶ ಮಾಡಿ ಬಿಟ್ಟರು. ಹೀಗೆಯೇ ಯುದ್ಧ ಮಾಡಿಕೊಂಡು ಹತ್ತಿರ ದಲ್ಲೇ ಇದ್ದ ವಾಮದೇವರ್ಷಿಯ ಆಶ್ರಮದೊಳಗೆ ನುಗ್ಗಿ ಹೋದರು. ಅಲ್ಲಿ ಭೋಜನ ಮಾಡುತ್ತಾ ಕುಳಿತಿದ್ದ ಬ್ರಾಹ್ಮಣರೆಲ್ಲಾ ಇವರ ಗುದ್ದಾಟ-ಹೊಡೆದಾಟಗಳಿಗೆ ಅಂಜಿ ದಿಕ್ಕಾಪಾಲಾಗಿ ಪಲಾಯನ ಮಾಡಿದರು. ಕಡೆಗೆ ಪ್ರಬಲನಾದ ಕಕುಭ ಕಾಲ ಜಂಘ ನನ್ನು ಹೊಡೆದು ಅಪ್ಪಳಿಸಲು ಕಾಲ ಜಂಘ ಶಿಥಿಲಾಂಗನಾಗಿ ವಾಮದೇವನನ್ನು ಮೊರೆಹೊಕ್ಕ. ಅವರು ಮಧ್ಯಸ್ಥಿಕೆ ಮಾಡುವುದಕ್ಕೆ ಹೋಗಲು ದೃಪ್ತನಾದ ಕಕುಭ ಅವರ ಮಾತನ್ನೂ ಲಕ್ಷಿಸದೆ ಅವರ ಆಶ್ರಮವನ್ನೆಲ್ಲಾ ಲೂಟಿ ಮಾಡಿ ಬಿಟ್ಟ. ಕ್ರುದ್ಧ ರಾದ ಆ ಮುನಿ ಅವನಿಗೆ ಕುರುಡಾಗುವಂತೆ ಶಾಪ ಕೊಟ್ಟರು.

ಕಕುಭನ ಶಾಪ ಮೋಚನೆ—ಅದರಂತೆ ಕುರುಡನಾಗಿ ಕಣ್ಣು ಕಾಣದೆ ರಕ್ಷ ಕರೂ ಇಲ್ಲದೆ ಕಕುಭ ಗೋಳಾಡ ಹತ್ತಿದ. ಒಂದು ದಿನ ಗಾಲವರು ಅವನ ಗೋಳಾಟ ಕೇಳಲಾರದೆ ಸಮೀಪದಲ್ಲಿದ್ದ ಒಂದು ತೀರ್ಥದಿಂದ ನೀರನ್ನು ತಂದು ಅವನ ಮೇಲೆ ಪ್ರೋಕ್ಷಿಸಿದರು. ತಾವನ್ಮಾತ್ರದಿಂದ ಕಕುಭನಿಗೆ ದಿವ್ಯ ನೇತ್ರಗಳು ಬಂದುವು. ಅದನ್ನು

ಕಂಡು ಆ ವಾನರ ಗಾಲವರಿಗೆ ಶರಣಾಗಿ ತನ್ನನ್ನು ವಾನರ ಜನ್ಮದಿಂದಲೇ ಪಾರು ಮಾಡಬೇಕೆಂದು ಬೇಡಿಕೊಂಡ. ಆಗ ಅವರು ಆ ತೀರ್ಥವನ್ನೇ ತೋರಿಸಿ 'ಇದ ರಲ್ಲೇ ದೇಹ ತ್ಯಾಗ ಮಾಡಿದರೆ ನಿನಗೆ ಸದ್ಗತಿಯಾಗುತ್ತದೆ' ಎಂದರು. ಅದರಂತೆ ಅದರಲ್ಲೇ ದೇಹ ತ್ಯಾಗ ಮಾಡಿ ಕಕುಭ ಉತ್ತಮ ಪದವಿ ಪಡೆದ. ಅಂದಿನಿಂದ ಇದಕ್ಕೆ ಕಕುಭ ತೀರ್ಥ ವೆಂದು ಹೆಸರಾಯಿತು.

ವೈಶಾಖ ಮಾಸದಲ್ಲಿ ಉಷಃಕಾಲದಲ್ಲಿ ಈ ತೀರ್ಥದಲ್ಲಿ ಮಜ್ಜನ ಮಾಡಿ ಪಂಚಾಕ್ಷರೀ ಜಪ ಮಾಡುವವನಿಗೆ ಅನಂತ ಸುಖ ಪ್ರಾಪ್ತವಾಗುತ್ತದೆ. ಕೇವಲ ಈ ತೀರ್ಥದ ದರ್ಶನ ಮಾಡಿದರೂ ಸಕಲ ಪಾಪಗಳು ನಾಶ ಹೊಂದುತ್ತವೆ.

ಅಧ್ಯಾಯ 60 ನಾಗ ತೀರ್ಥ

ಸವತಿಯರ ಜಗಳ—ಕದ್ರೂ ವಿನತೆ ಇಬ್ಬರೂ ಬ್ರಹ್ಮನ ಮಾನಸ ಪುತ್ರ ರಾದ ಕಶ್ಯಪರ ಪತ್ನಿಯರು. ಕದ್ರೂ ಹೊಟ್ಟೆಯಲ್ಲಿ ಅನೇಕ ಸರ್ಪಗಳು ಹುಟ್ಟಿದುವು. ಅದನ್ನು ಕಂಡು ಅಸಹ್ಯ ಪಟ್ಟುಕೊಂಡು ಕದ್ರೂ ಕುಟಿಲ ಬುದ್ಧಿಯಿಂದ ಸವತಿ ಮಾತ್ಸರ್ಯಕ್ಕೆ ಅನುಗುಣವಾಗಿ 'ನನ್ನ ಪತಿಗೆ ನನ್ನ ಮೇಲೆ ಮೊದಲೇ ಪ್ರೇಮ ಕಡಿಮೆ. ಈಗಂತೂ ಹೇಳುವುದೇನಿದೆ? ನನ್ನ ಸವತಿಯನ್ನು ಏನಾದರೂ ಮಾಡಿ ಕಷ್ಟಕ್ಕೀಡು ಮಾಡಬೇಕು. ಇಲ್ಲದಿದ್ದರೆ ನನಗೆ ಶಾಂತಿಯಿಲ್ಲ' ಎಂದು ಆಲೋಚಿಸಿಕೊಂಡು ಸಮಯ ಕಾಯುತ್ತಿದ್ದಳು.

ಒಂದು ದಿನ ಕದ್ರೂ ವಿನತೆಯೊಡನೆ ಮಾತಿಗೆ ಮಾತು ಬೆಳಸಿ 'ಉಚ್ಚೈಃ ಶ್ರವಸ್ಸಿನ ಬಾಲ ಹೇಗಿದೆ?' ಎಂದು ಪ್ರಶ್ನಿಸಿದಳು. ವಿನತೆ ಸಹಜವಾಗಿ 'ಬೆಳ್ಳಗಿದೆ' ಎಂದು ಹೇಳಲು ಕದ್ರೂ ಪಂದ್ಯ ಕಟ್ಟಿ ಪ್ರತಿಸ್ಪರ್ಧಿಸುತ್ತಾ 'ಇಲ್ಲ ಕಪ್ಪಗಿದೆ' ಎಂದು ವಾದಿಸಿದಳು. ವಿನತೆ ರೇಗಿ 'ಉಚ್ಚೈಃ ಶ್ರವಸ್ಸಿನ ಬಾಲ ಕಪ್ಪಗಿರೋಣ ಎಂದರೇನು? ಎಂದಿಗೂ ಸಾಧ್ಯವಿಲ್ಲ. ಒಂದು ವೇಳೆ ಕಪ್ಪಗಿದ್ದರೆ ನಾನು ನಿನ್ನ ದಾಸಿಯಾಗಿ ದುಡಿ ಯುತ್ತೇನೆ' ಎಂದು ಪಂಥ ಕಟ್ಟಿದಳು. ಇಬ್ಬರೂ ಪರೀಕ್ಷಿಸುವುದಕ್ಕೆ ಕಾಲ ನಿರ್ಣಯ ಮಾಡಿಕೊಂಡರು.

ಕದ್ರೂ ವಂಚನೆ—ಕದ್ರೂ ತನ್ನ ಮಾತನ್ನು ಸಾಧಿಸುವುದಕ್ಕೆ ಮಕ್ಕಳ ಸಹಾಯ ಕೋರಿದಳು. ವಾಸುಕಿ ಮೊದಲಾದ ಕೆಲವು ಸರ್ಪಗಳು ತಾಯಿಯನ್ನೇ ಜರಿದು 'ಅಸತ್ಯ ಎಂದಿಗೂ ಸತ್ಯವಾಗಲಾರದು. ಸುಳ್ಳು ಹೇಳುವುದು ಶುದ್ಧ ತಪ್ಪು' ಎಂದು ಹಳಿದರು. ಕದ್ರೂ ಕುಪಿತಳಾಗಿ ಅವರಿಗೆ 'ನೀವು ಪಕ್ಷಿಗಳಿಗೆ ಆಹಾರವಾಗಿರಿ' ಎಂದು ಶಾಪ ಕೊಟ್ಟಳು. ಆ ಶಾಪಕ್ಕೆ ಹೆದರಿ ಕೆಲವು ನಾಗಗಳು ತಾಯಿಯ ಮಾತನ್ನು ಕೇಳಿ ಇಂದ್ರನ ಕುದುರೆಯ ಬಾಲದಲ್ಲಿ ಹೋಗಿ ಸೇರಿ ಕೊಂಡವು. ಕದ್ರೂ ದೂರ ದಿಂದಲೇ ಅದನ್ನು ವಿನತೆಗೆ ತೋರಿಸಿ ಅವಳನ್ನು ವಂಚನೆಯಿಂದ ಒಪ್ಪಿಸಿಬಿಟ್ಟಳು.

ವಿನತೆಯ ದಾಸ್ಯ ಬಂಧನ—ತನ್ನ ಮಾತಿನಂತೆ ವಿನತೆ ದಾಸಿಯಾಗಿ ಹಗಲೂ ರಾತ್ರಿಯೂ ಕದ್ರೂ ಮನೆಯಲ್ಲಿ ದುಡಿಯಲಾರಂಭಿಸಿದಳು. ಎಷ್ಟು ದುಡಿದರೂ ಕದ್ರೂ ಆಕ್ಷೇಪಣೆ ಮಾಡದೆ ಬಿಡುತ್ತಿರಲಿಲ್ಲ. ಗರ್ಭವತಿಯಾದರೂ ವಿನತೆಗೆ ಚಾಕರಿ ತಪ್ಪಲಿಲ್ಲ. ಹೀಗೆಯೇ ನೂರು ವರ್ಷ ಕಳೆದುವು. ಕಡೆಗೆ ಅವಳ ಗರ್ಭದಿಂದ ಮೂರು ಮೊಟ್ಟೆಗಳು ಹೊರಟವು. ವಿನತೆ ಅವುಗಳನ್ನು ಬೆಟ್ಟದ ಗುಹೆಯಲ್ಲಿ ಬಚ್ಚಿಟ್ಟು ರಕ್ಷಿಸುತ್ತಿದ್ದಳು. ಆದರೆ ಎಷ್ಟು ದಿನಗಳಾದರೂ ಮೊಟ್ಟೆಗಳು ಒಡೆಯಲೇ ಇಲ್ಲ. ಒಂದು ದಿನ ಕುತೂಹಲದಿಂದ ಒಂದು ಮೊಟ್ಟೆಗೆ ಕಲ್ಲು ಹೊಡೆಯಲು ಅದು ಛಟಾರನೆ ಒಡೆದು ಹೋಯಿತು. ಎರಡನೆಯ ಮೊಟ್ಟೆಗೆ ಕಲ್ಲು ಹೊಡೆಯಲು ಅದರಿಂದ ಕುಂಟನಾದ ಅರುಣ ಹುಟ್ಟಿದ. ಇದನ್ನು ಕಂಡು ವಿನತೆ ಬಹಳ ಪೇಚಾಡಿಕೊಂಡಳು. ಮೂರನೆಯ ಮೊಟ್ಟೆಯನ್ನು ಜೋಪಾನ ಮಾಡಿ ರಕ್ಷಿಸಲು ಅದರಿಂದ ಕಾಲಕ್ರಮದಲ್ಲಿ ಗರುಡ ಉದ್ಭವಿಸಿದ.

ದಾಸ್ಯಮೋಚನೆ—ತನ್ನ ತಾಯಿ ನಿಷ್ಕಾರಣವಾಗಿ ಕಷ್ಟಪಡುತ್ತಿದ್ದುದನ್ನು ಕಂಡು ಅದಕ್ಕೆ ನಿವಾರಣೋಪಾಯವೇನೆಂದು ತನ್ನ ಮಲತಾಯಿಯನ್ನು ಕೇಳಿದನು. ಅದಕ್ಕೆ ಕದ್ರೂ 'ನೀನು ನನಗೆ ಅಮೃತ ತಂದು ಕೊಟ್ಟರೆ ನಿನ್ನ ತಾಯಿಯ ಬಂಧನ ಬಿಡಿಸುತ್ತೇನೆ' ಎಂದಳು. ಅದರಂತೆ ವೈನತೇಯ [ಗರುಡ] ಅಮೃತ ತಂದುಕೊಟ್ಟು ತಾಯಿಯ ದುಃಖನಿವಾರಣೆ ಮಾಡಿದನು. ಆದರೆ ಆ ದುಃಖಕ್ಕೆಲ್ಲಾ ನಾಗಗಳೇ ಮುಖ್ಯಕಾರಣವೆಂಬುದನ್ನು ಅರಿತು ರೋಷದಿಂದ ಕೆಲವು ನಾಗಗಳನ್ನು ಹಿಡಿದು ಕೊಂದುಹಾಕಿದನು, ಕೆಲವನ್ನು ಆಕಾಶದಲ್ಲಿ ಗಿರಗಿರನೆ ಸುತ್ತಿಸಿ ನಾಶಪಡಿಸಿದನು. ಮತ್ತೆ ಕೆಲವನ್ನು ನೆಲಕ್ಕೆ ಬಡಿಚಿ ಧ್ವಂಸಮಾಡಿದನು. ಇದನ್ನು ಕಂಡು ಉಳಿದ ನಾಗಗಳು ದಿಕ್ಕುಗೆಟ್ಟು ಪಲಾಯನ ಮಾಡುತ್ತಾ ಪಾತಾಳದವರೆಗೂ ಓಡಿ ಅಲ್ಲಿದ್ದ ಕಪಿಲ ಮಹರ್ಷಿಯನ್ನು ಮೊರೆಹೊಕ್ಕವು.

ನಾಗಗಳ ತಪಸ್ಸಿಗೆ ವಿಘ್ನ—ಕಪಿಲರು ಕನಿಕರಪಟ್ಟು ಆ ನಾಗಗಳಿಗೆ ಪರಮೇಶ್ವರನನ್ನು ಕುರಿತು ತಪಸ್ಸು ಮಾಡುವಂತೆ ಹೇಳಲು ಅದರಂತೆ ಅವು ಗರುಡನ ಕಣ್ಣಿಗೆ ಬೀಳದಂತೆ ಒಂದು ತೀರ್ಥದಲ್ಲಿ ಅಡಗಿಕೊಂಡು ತಪಸ್ಸಿಗೆ ಆರಂಭಿಸಿದವು. ಅವರ ತಪಸ್ಸಿಗೆ ವಿಘ್ನ ಮಾಡುವುದಕ್ಕಾಗಿ ದೇವೇಂದ್ರನು ಕೆಲವರು ಅಪ್ಸರೆಯರನ್ನು ಅವುಗಳ ಬಳಿಗೆ ಕಳುಹಿದನು. ಅವರು ಬಂದು ನಾಗಗಳ ತಪೋಭಂಗ ಮಾಡಲು ಯತ್ನಿಸಲು ಅವು ಅವರಿಗೆ 'ಕಪಿಗಳಾಗಿ' ಎಂದು ಶಾಪಕೊಟ್ಟವು. ಅದಕ್ಕೆ ಪ್ರತಿಯಾಗಿ ಅಪ್ಸರೆಯರೂ ನಾಗಗಳಿಗೆ 'ನೀವು ಸದಾ ವಕ್ರಗಾಮಿಗಳಾಗಿ ಸ್ವಸಂತಾನ ಭಕ್ಷಕರಾಗಿರಿ. ಸಾಲದ್ದಕ್ಕೆ ಎಲ್ಲರಿಗೂ ಶತ್ರುಗಳಾಗಿ ಎಲ್ಲರಿಂದಲೂ ವಧ್ಯರಾಗಿ ಕ್ಷೀಣ ಸಂತಾನರಾಗಿ' ಎಂದು ಶಾಪ ಕೊಟ್ಟು ತಾವು ಚಕ್ರತೀರ್ಥದ ಬಳಿಗೆ ಹೋಗಿ ಸದಾಶಿವನ ತಪಸ್ಸು ಮಾಡಿ ತಮ್ಮ ಶಾಪನಿವೃತ್ತಿಯನ್ನು ಕೇಳಿಕೊಂಡರು. ಆಗ ಸಾಂಬಶಿವ ಅವರಿಗೆ

'ರಾಮಾವತಾರಕಾಲದಲ್ಲಿ ದೇವತೆಗಳು ವಾನರರಾಗಿ ಹುಟ್ಟುವರು. ನೀವು ಅವರನ್ನು ಹಡೆದು ಶಾಪಮುಕ್ತರಾಗುವಿರಿ' ಎಂದು ಅಭಯ ಕೊಟ್ಟ.

ನಾಗಗಳಿಗೆ ವರಪ್ರಾಪ್ತಿ—ಅತ್ತಲಾಗಿ ನಾಗಗಳಿಗೂ ಹರ ಪ್ರತ್ಯಕ್ಷನಾಗಲು ಅವು ತಮ್ಮನ್ನು ಗರುಡನ ಭಯದಿಂದ ಪಾರುಮಾಡುವಂತೆ ಕೇಳಿಕೊಂಡವು. ಆಗ ಸ್ಮರಹರನು ಅವರ ಪೈಕಿ ವಾಸುಕಿ ಮೊದಲಾದವರಿಗೆ 'ನೀವು ಕಷ್ಟಕಾಲದಲ್ಲೂ ಧರ್ಮತ್ಯಾಗಮಾಡಲಿಲ್ಲ. ಅಲ್ಲದೆ ನಿರಂತರವಾಗಿ ನನ್ನಲ್ಲಿ ಭಕ್ತಿ ಮಾಡಿದ್ದೀರಿ. ಆದ್ದರಿಂದ ೧. ವಾಸುಕಿ, ೨. ತಕ್ಷಕ, ೩. ಶಂಖ, ೪. ಕರ್ಕೋಟಕ, ೫. ಗುಲಿಕ, ೬. ಪಿಶಾಪತ್ರ, ೭. ಮಹಾಶೂಕ, ೮. ರಾವಕ, ೯. ಪದ್ಮ, ೧೦. ಮಹಾಪದ್ಮ. ಈ ಹತ್ತು ನಾಗಗಳನ್ನು ನಾನು ಆಭರಣವಾಗಿ ಧರಿಸಿಕೊಳ್ಳುವೆನು. ನನ್ನ ಧ್ಯಾನ ಮಾಡಿದರೆ ಮಿಕ್ಕ ನಾಗಗಳಿಗೂ ಗರುಡನ ಭಯ ತಪ್ಪುತ್ತದೆ' ಎಂದು ಹೇಳಿ ದಶನಾಗಗಳನ್ನು ತನ್ನ ಭೂಷಣರೂಪವಾಗಿ ಧರಿಸಿಕೊಂಡನು. [ಆದ್ದರಿಂದಲೇ ಅವನಿಗೆ **ನಾಗಭೂಷಣ**ನೆಂಬ ಹೆಸರು ಬಂತು.]

ಆ ನಾಗಗಳು ತಪಸ್ಸು ಮಾಡಿದ ತೀರ್ಥವೇ **ನಾಗತೀರ್ಥ**. ಇದು ವಿಷಮೋಹಹರ ಮತ್ತು ಸದ್ಯಃ ಕೈವಲ್ಯಪ್ರದ (ಎಂದರೆ ಆ ಕ್ಷಣದಲ್ಲೇ ಮೋಕ್ಷವನ್ನು ಕೊಡುವಂಥಾದ್ದು.)

ಅಧ್ಯಾಯ 61 ಮಾಲ್ಯವಂತಗಿರಿ

[ಮಾಲ್ಯವಂತಗಿರಿ ಕಮಲಾಪುರದಿಂದ ಸುಮಾರು ೨ಮೈಲಿ ದೂರದಲ್ಲಿ ಕಂಪ್ಲಿದಾರಿಯಲ್ಲಿದೆ. ಇದಕ್ಕೆ ಕೆಲವರು ಪಟಿಕ್‌ಶಿಲಾ ಎಂದೂ ಕರೆಯುತ್ತಾರೆ. ಹಿಂದಿಯಲ್ಲಿ ಫಾಟಕ್ ಎಂದರೆ ಬಾಗಿಲು ; ಇದು ಕಿಷ್ಕಿಂಧಾನಗರಿಗೆ ಬಾಗಿಲಾಗಿದ್ದಿರಬಹುದು, ಆದಕ್ಕೇ ಈ ಗಿರಿಗೆ ಈ ಹೆಸರು ಬಂದಿರುವ ಹಾಗೆ ತೋರುತ್ತದೆ. ಈ ಗಿರಿಯ ಮೇಲೆ ಒಂದು ರಾಮಮಂದಿರವೂ ರಾಮತೀರ್ಥ ಲಕ್ಷ್ಮಣ ತೀರ್ಥಗಳೂ ಇವೆ. ಮಂದಿರದಲ್ಲಿ ಆಸೀನರಾದ (ಕುಳಿತಿರುವ) ರಾಮಲಕ್ಷ್ಮಣ ಸೀತಾ ಮತ್ತು ಆಂಜನೇಯರ ಭವ್ಯವಾದ ಮೂರ್ತಿಗಳಿವೆ. ನಾಲ್ಕು ಮೂರ್ತಿಗಳನ್ನೂ ಒಂದೇ ಶಿಲೆಯಲ್ಲೇ ಕೊರೆದಿರುವುದು ಮತ್ತೂ ವಿಶೇಷ. ರಾಮನವಮೀ ದಿನ ಇಲ್ಲಿ ರಥೋತ್ಸವ ನಡೆಯುತ್ತದೆ. ರಾಮಲಕ್ಷ್ಮಣರು ಇಲ್ಲೇ ಚಾತುರ್ಮಾಸಕ್ಕೆ ಕುಳಿತಿದ್ದರೆಂಬುದು ಮುಂದಿನ ಕಥಾಭಾಗದಿಂದಲೇ ವ್ಯಕ್ತವಾಗುತ್ತದೆ. ರಾಮತೀರ್ಥದ ವಿಷಯ ಪುನಃ 74ನೇ ಅಧ್ಯಾಯದಲ್ಲಿ ಬರುತ್ತದೆ—ವಿ-ತೀ.]

ಮಾಲ್ಯವದ್ಗಿರಿ—ಸಪ್ತರ್ಷಿಗಳು ನಾಗತೀರ್ಥ ಸಂದರ್ಶನ ಮಾಡಿಕೊಂಡು ಅಲ್ಲಿಂದ ಮಾಲ್ಯವದ್ಗಿರಿಗೆ[1] ಬಂದರು. ಅಲ್ಲಿಗೆ ಬರುತ್ತಿದ್ದ ಹಾಗೆಯೇ ಆ ಗಿರಿಯ

---

1 ಮಾಲ್ಯವತ್ =ಗಿರಿ = ಮಾಲ್ಯವದ್ಗಿರಿ ಮಾಲ್ಯವಾನ್ ಎಂಬುದು ಮಾಲ್ಯವತ್ ಶಬ್ದದ (ಸಂಸ್ಕೃತದಲ್ಲಿ) ಪ್ರಥಮೈಕವಚನ ರೂಪ. ಮಾಲ್ಯವಂತ ಎಂಬುದು ಇದರ ತದ್ಭವರೂಪ. (ಹನುಮಾನ್-ಹನುಮಂತ, ಬಲವಾನ್-ಬಲವಂತ ಎಂಬಂತೆ.)

ವೈಭವದಿಂದ ನೈಯುಬ್ಬಿ ಸಾತ್ವಿಕವಾದ ಭಕ್ತಿಭಾವ ಉದ್ರೇಕಗೊಂಡಿತು. ರ್ಯಪಟ್ಟು ಆ ತಪೋವರರು ಅಂಥಾ ಗಿರಿಯ ಮಹಿಮೆಯನ್ನು ಕೇಳಲಿಚ್ಛಿಸಿದರು. ಕ್ಷೇತ್ರಪಾಲ ಅವರ ವೃತ್ತಾಂತ ಹೇಳಲುಪಕ್ರಮಿಸಿದ.

ಹೂವಾಡಿಗನ ಶಿವಭಕ್ತಿ—ಕೇರಳ ದೇಶದಲ್ಲಿ ಮಹೀಪಾಲ ಜಯಸಿಂಹನ ಮಾಲ್ಯವಂತನೆಂಬ ಒಬ್ಬ ಹೂವಾಡಿಗ[1] ಇದ್ದನು. ಅವನು ನಿತ್ಯವೂ ರಾಜ ಶಿವಪೂಜೆಗೆ ಬೇಕಾಗುವಷ್ಟು ಹೂ ಮಾಲೆಗಳನ್ನು ಕಟ್ಟಿ ಕೊಡುತ್ತಿದ್ದ. ಒಂದು ದುರ್ದೈವದಿಂದ ಒಂದು ಮಾಲೆಯಲ್ಲಿ ಕೂದಲು ಕಂಡು ಬರಲು ರಾಜದೂತರು ತಪ್ಪನ್ನು ಮಾಲ್ಯವಂತನ ಮೇಲೆಯೇ ಹೊರಿಸಿ 'ಇದು ಹೆಂಗಸರು ಮುಡಿದು ಂಡ ನಿರ್ಮಾಲ್ಯವೇ ಇರಬಹುದೆಂ'ದು ಆರೋಪಿಸಿಬಿಟ್ಟರು. ರಾಜ ಕೆಂಡ ಕೆಂಡ ಗಿ ಯಾವ ವಿಚಾರವೂ ಮಾಡದೆ ಆ ಮಾಲಾಕಾರನನ್ನು ದೇಶದಿಂದಲೇ ಹೊರ ಬಿಟ್ಟ.

ಹೀಗೆ ನಿಷ್ಕಾರಣವಾಗಿ ದೇಶ ಭ್ರಷ್ಟನಾದ ಮಾಲ್ಯವಂತ ದೇಶಾಟನೆ ಯುತ್ತಾ ಈ (ಮಾಲ್ಯವಂತನೆಂಬ) ಗಿರಿಗೆ ಬಂದು ತನ್ನ ಕಸಬು ಬಿಡದೆ ಅಲ್ಲಿದ್ದ ಭಕ್ತರಿಗೆಲ್ಲಾ ಅರ್ಚನೆಗೆ ಅನುಕೂಲವಾಗುವಂತೆ ಬಿಲ್ವಪತ್ರೆಗಳ ಮತ್ತು ಹೂವು ಮಾಲೆಗಳನ್ನು ಕಟ್ಟಿಕೊಡುತ್ತಾ,

ಸಾಧುಸಂತೋಷ ಏವಾತ್ರ ಶಿವಾನುಗ್ರಹಕಾರಣಮ್ ॥

ಸಾಧುಗಳನ್ನು ಸಂತೋಷಪಡಿಸುವುದೇ ಶಿವಾನುಗ್ರಹಕ್ಕೆ ಕಾರಣ ಎಂದು ನಿಶ್ಚ ಸಿಕೊಂಡು ಸಾಧುಸೇವಾರತನಾದ. ಹೀಗೆ ಸ್ವಲ್ಪ ಕಾಲ ಗತಿಸಲು ಅವನ ಸೇವೆ ಂದ ತುಷ್ಟಮಾನಸರಾದ ಋಷಿಗಳು ಅವನಿಗೆ ಪಂಚಾಕ್ಷರೀ ಮಂತ್ರವನ್ನು ಉಪ ಶಮಾಡಿದರು. ಮಾಲ್ಯವಂತ ಕೆಲವು ಕಾಲ ಫಲಾಹಾರಿಯಾಗಿ ಆ ಮೇಲೆ ನ್ನಹಾರ-ಜಲಾಹಾರ ಮಾಡಿಕೊಂಡು ಕಡೆಗೆ ನಿರಾಹಾರಿಯಾಗಿ ಊರ್ಧ್ವಬಾಹುವೂ ರಾಲಂಬನೂ ಸ್ಥಾಣುವಿನಂತೆ ನಿಶ್ಚಲನೂ ಆಗಿ ಆ ಮಂತ್ರವನ್ನು ನಿಷ್ಠೆಯಿಂದ ರು ವರ್ಷಕಾಲ ಜಪಿಸಿದ. ಕಡೆಗೆ ತ್ರ್ಯಂಬಕ ಮೆಚ್ಚಿ ಪ್ರತ್ಯಕ್ಷನಾಗಿ ಅವನು ತಪಸ್ಸು ಾಡಿದ ಆ ಬೆಟ್ಟ ಅವನ ಹೆಸರಿನಿಂದಲೇ ಪ್ರಸಿದ್ಧವಾಗುವಂತೆ ಅನುಗ್ರಹಿಸಿದ.

ರಾಮ ಲಕ್ಷ್ಮಣರ ಪ್ರವಾಸ— ತ್ರೇತಾಯುಗದಲ್ಲಿ, ಸೀತಾನ್ವೇಷಣ ಾಡುತ್ತಾ ಬಂದ ರಾಮಲಕ್ಷ್ಮಣರು ಸುಗ್ರೀವನಿಗೆ ರಾಜ್ಯ ಕೊಡಿಸಿದ ಬಳಿಕ ವರ್ಷಾ ಲವನ್ನು (ಚಾತುರ್ಮಾಸ್ಯವನ್ನು) ಈ ಗಿರಿಯಲ್ಲೇ ಕಳೆದರು. ಒಂದು ದಿನ ರಾಮ ತವೇದನೆ ಸಹಿಸಲಾರದೆ ದುಃಖಾರ್ತನಾಗಿ 'ಲಕ್ಷ್ಮಣಾ, ನನಗಾಗಿ ನೀನೇಕೆ ದುಃಖ ಗಾಗುವಿ ? ನೀನು ಅಯೋಧ್ಯೆಗೆ ಹಿಂತಿರುಗಿ ಭರತಾದಿಗಳೊಡನೆ ಸುಖವಾಗಿರು.

1 ಮಾಲ್ಯವಾನ್ ಎಂದರೆ ಮಾಲಾಕಾರ, ಮಾಲೆಕಟ್ಟಿಕೊಡುವವನು ಎಂದೇ ಅರ್ಥ.

ನನ್ನಿಂದ ಈ ವಿರಹವ್ಯಥೆ ಸಹಿಸುವುದು ಸಾಧ್ಯವಿಲ್ಲ; ನಾನು ಇಲ್ಲೇ ಪ್ರಾಣ ಮಾಡಿಬಿಡುತ್ತೇನೆ' ಎಂದು ಹೇಳಿ ಒಂದು ಗುಹೆಯೊಳಗೆ* ಹೋಗಿ ಕುಳಿತುಕೊ ಬಿಟ್ಟ. ರಾಮನ ಈ ಮಾತು ಕೇಳಿ ಲಕ್ಷ್ಮಣನೂ ವಜ್ರಾಹತವಾದ ಮತ್ತೆ ಮೂರ್ಛಿತನಾಗಿ ಬಿದ್ದು ಪುನಃ ಚೇತರಿಸಿಕೊಂಡು ದುಃಖಮಗ್ನನಾಗಿ ಯೋಚಿಸು ತಲೆ ತಗ್ಗಿಸಿಕೊಂಡು ಗುಹಾದ್ವಾರದಲ್ಲೇ ಕುಳಿತುಕೊಂಡ.

ರಾಮಲಕ್ಷ್ಮಣರ ದುಃಖನಿವಾರಣೆ—ಆಗ ಅಲ್ಲೇ ಇದ್ದ ಮಾಲ್ಯ ಲಕ್ಷ್ಮಣನಿಗೆ ಧೈರ್ಯ ಹೇಳಿ ಅವನಿಗೆ ವಿರೂಪಾಕ್ಷ ಮಂತ್ರ ಉಪದೇಶಿಸಿ ಅದ ಜಪಿಸುವಂತೆ ಹೇಳಿ ಅಲ್ಲಿಂದ ರಾಮನ ಬಳಿಗೆ ಹೋಗಿ ಅವನಿಗೂ ಸಮಾ ಹೇಳುತ್ತಾ, 'ರಾಮ ರಾಮ ಮಹಾಬಾಹೋ, ನೀನು ಪರಮೇಶ್ವರ, ಸೀತೆ ಪರಶಕ್ತಿ, ನಿಮ್ಮಿಬ್ಬರಿಗೂ ಎಂದೆಂದಿಗೂ ವಿಯೋಗವಿಲ್ಲದಿದ್ದರೂ ಮನುಷ್ಯ ನಟಿಸುತ್ತಿದ್ದೀರೆಂಬುದು ನನಗೆ ಚೆನ್ನಾಗಿ ಗೊತ್ತು. ಆದರೂ ಲೌಕಿಕಾಚಾರವ ಸರಿಸಿ ಒಂದು ಮಾತು ಹೇಳುತ್ತೇನೆ. ನೀನು ಈ [ರಾಮ] ತೀರ್ಥದಲ್ಲಿ ಸ್ನಾನಮಾ ವಿರೂಪಾಕ್ಷನನ್ನು ಧ್ಯಾನಿಸು. ಆದರಿಂದ ನೀನು ಸೀತೆಯನ್ನೂ ಪಡೆದು ಅಯೋ ನಗರಿಯನ್ನೂ ಸೇರಿ ಸುಖಿಯಾಗುವಿ' ಎಂದು ಬೋಧಿಸಿದ.

ಅವನ ಬೋಧನೆಯಂತೆ ಆಚರಿಸಲು ವಿರೂಪಾಕ್ಷ ಪ್ರತ್ಯಕ್ಷನಾಗಿ ರಾಮ ರಾವಣಾದಿಗಳನ್ನು ಜಯಿಸಿ ಸುಖಿಯಾಗುವಂತೆ ವರಕೊಟ್ಟ. ಅತ್ತಲಾಗಿ ಲಕ್ಷ್ಮ ಜಪಕ್ಕೂ ಪ್ರಸನ್ನನಾಗಿ ರಾಮ ಪಂಚಾಯತನ ರೂಪದಿಂದ ಆವಿರ್ಭವಿಸಿ ನಿತ್ತು; ಅಂದರೆ ಶಿವ ರಾಮನಾಗಿಯೂ, ಪಾರ್ವತಿ ಸೀತೆಯಾಗಿಯೂ, ಲಕ್ಷ್ಮಣನಾಗಿಯೂ, ಗಣಾಧಿಪನೇ ಭರತನಾಗಿಯೂ, ವೀರಭದ್ರ ಶತ್ರುಘ್ನನಾಗಿ ಮಾಲ್ಯವಂತವೇ ಅಯೋಧ್ಯೆಯಾಗಿಯೂ ಕಾಣಿಸಿಕೊಂಡುವು. ಇದರಿಂದ ಲಕ್ಷ್ಮಣರಿಬ್ಬರೂ ದುಃಖ ತೊರೆದರು.

ರಾಮ ಸ್ನಾನಮಾಡಿದ ತೀರ್ಥವೇ ರಾಮತೀರ್ಥವಾಯಿತು. ಲಕ್ಷ್ಮಣ ಮಾಡಿದ್ದೇ ಲಕ್ಷ್ಮಣತೀರ್ಥವೆನಿಸಿತು. ಇವುಗಳಲ್ಲಿ ಸ್ನಾನಮಾಡಿದ ನರ ಕೈ ಮುಂದಿರಕ್ಕೆ ಹೋಗುತ್ತಾನೆ. ಹಾಗೆಯೇ ಈ ಮಾಲ್ಯವದ್ಗಿರಿಯ ಆಖ್ಯಾನ ಶ್ರ ಮಾಡುವ ಸಜ್ಜನರೂ ಪರಮಸುಖವನ್ನು ಪಡೆಯುವರು.

ಅಧ್ಯಾಯ 62 ಬ್ರಹ್ಮಶಿಲಾದಿ ತೀರ್ಥಗಳು

[ಈ ಐದು ತೀರ್ಥಗಳೂ ಮಾಲ್ಯವಂತದ ಸುತ್ತಮುತ್ತಲೂ ಇರಬೇಕೆಂದು ಗ್ರಂಥದ ವರ್ಣನೆಯಿಂದ ತಿಳಿದುಬರುತ್ತದೆ. ಆದರೆ ಈ ತೀರ್ಥಗಳು ಎಲ್ಲೆಲ್ಲಿ ಅಡಗಿಕೊಂಡಿವೆ ಹೇಳುವವರೇ ಇಲ್ಲವಾಗಿದೆ.]

* ಈ ಗುಹೆಯನ್ನು ಮಾಲ್ಯವಂತದಲ್ಲಿ ಈಗಲೂ ತೋರಿಸುತ್ತಾರೆ.

ಬ್ರಹ್ಮಶಿಲಾತೀರ್ಥ—ಒಂದು ದಿನ ಪರಮೇಷ್ಠಿ ಧ್ಯಾನಾಸಕ್ತನಾಗಿ ಕುಳಿತಿರು ಗ ಆವನ ಮುಖದಿಂದ ಒಬ್ಬ ದಿವ್ಯ ಸುಂದರಿ ಆವಿರ್ಭವಿಸಿದಳು. ಅವಳನ್ನು ಡು ಮೋಹಿತನಾದ ಹಿರಣ್ಯಗರ್ಭ ಅವಳೊಡನೆ ರಮಿಸಿದ. ಆದರೆ ಆಮೇಲೆ ನಗೆ ತನ್ನ ಮುಖದಿಂದ ಆವಿರ್ಭವಿಸಿದ ಅವಳು ತನಗೆ ಪುತ್ರೀ ಸದೃಶಳಾದ್ದರಿಂದ ಳೊಡನೆ ರಮಿಸಿದ್ದು ತಪ್ಪಾಯಿತೆಂದೂ, ಅದರಿಂದ ತನಗೆ ಅಪಕೀರ್ತಿಯುಂಟಾ ತಲ್ಲಾ ಎಂದೂ ಚಿಂತೆ ಹತ್ತಲು ಆ ಕೊರಗಿನಿಂದ ಸೃಷ್ಟಿಕಾರ್ಯವನ್ನೇ ಬಿಟ್ಟು ಟ್ಟನು.

ಅದನ್ನು ಕಂಡು ವಿಷ್ಣು ಬ್ರಹ್ಮನ ಕೊರಗನ್ನು ದೂರಮಾಡುವುದಕ್ಕಾಗಿ ಅವನಿಗೆ ಹಾದೇವನನ್ನು ಕುರಿತು ತಪಸ್ಸು ಮಾಡುವಂತೆ ಸೂಚಿಸಿದನು. ಅದರಂತೆ ಚತು ನನ ಒಂದು ಸರಸ್ಸಿನಲ್ಲಿ ಸ್ನಾನಮಾಡಿ ಅದರ ತೀರದಲ್ಲೇ ಇದ್ದ ಒಂದು ಶಿಲೆಯ ಲೆ ಕುಳಿತು ತಪಶ್ಚರಣೆ ನಡೆಸಿದ. ಅವನ ತಪಸ್ಸಿಗೆ ಮೆಚ್ಚಿ ಸ್ಮರಾರಿ ಪ್ರತ್ಯಕ್ಷ ಗಿ ಶತಾನಂದನಿಗೆ 'ಆಕೆ ನಿನ್ನ ಮುಖದಿಂದ ಹುಟ್ಟಿದರೂ ನಿನ್ನ ಶಕ್ತಿಯೇ ಆದ ಣಿ [ಸರಸ್ವತಿ] ನನ್ನ ಸಂಕಲ್ಪದಿಂದ ಅವಳು ಹಾಗೆ ಉದ್ಭವಿಸಿದಳು. ಆದ್ದರಿಂದ ಂದ ಏನು ಅಪರಾಧವೂ ಆಗಿಲ್ಲ'ವೆಂದು ಹೇಳಿ ಅವನ ಸಂದೇಹ ನಿವಾರಿಸಿದ. ಈ ರದ ತೀರದಲ್ಲೇ ಬ್ರಹ್ಮ ಕುಳಿತು ತಪಸ್ಸುಮಾಡಿದ ಶಿಲೆ ಇರುವುದರಿಂದ ಈ ಕ್ಕೆ ಬ್ರಹ್ಮಶಿಲಾ ತೀರ್ಥವೆಂದು ಹೆಸರು ಬಂತು. ಇದರಲ್ಲಿ ಸ್ನಾನ ಮಾಡು ನು ಸದ್ಗತಿ ಹೊಂದುತ್ತಾನೆ.

ಪಿತೃತೀರ್ಥ--ಸಪ್ತರ್ಷಿಗಳು ಅಲ್ಲಿಂದ ಮುಂದೆ ಸರ್ವಪಾಪಹರವೂ ಆರೋಗ್ಯ ವೂ ಆದ ಪಿತೃತೀರ್ಥದ ಬಳಿಗೆ ಬಂದರು ಈ ತೀರ್ಥವನ್ನು ಗೌರೀಶ ಪಿತೃಗಳ ಮುಕ್ತಿ ಗಾಗಿ ರಚಿಸಿದ. ಹಿಂದೆ ಅನೇಕರು ಭೂಸುರರು ಪಿತೃದೇವತೆಗಳಿಗೆ ಈ ತೀರ್ಥ ತರ್ಪಣಕೊಟ್ಟಿದ್ದರಿಂದ ಅವರೆಲ್ಲರೂ ಮುಕ್ತರಾದರು. ಶೌನಕಾದಿ ಮುನಿಗಳೂ ಇದರಲ್ಲಿ ಸ್ನಾನಮಾಡಿ ಜ್ಞಾನಸತ್ರ ನಡೆಸಿ ವೇದಶಾಸ್ತ್ರ ಪುರಾಣಗಳ ರಹಸ್ಯಾರ್ಥ ರಿತುಕೊಂಡರು. ಅಲ್ಲದೆ ಕ್ಷೇತ್ರಪಾಲನೂ ಸಹ ಈ ತೀರ್ಥದಲ್ಲಿ ಸ್ನಾನಮಾಡಿ ಪಸ್ಸು ಮಾಡಿದ್ದರಿಂದಲೇ ಕ್ಷೇತ್ರಪಾಲನಾದ.

ವಾಸುಕಿ ತೀರ್ಥ—ಇದು ಮಾಲ್ಯವಂತಕ್ಕೆ ಪಶ್ಚಿಮ ಭಾಗದಲ್ಲಿದೆ. ವಾಸುಕಿ ಂಬ ನಾಗರಾಜ ಈ ತೀರ್ಥದಲ್ಲಿ ಸ್ನಾನಮಾಡಿ ಗಂಗಾಧರನನ್ನು ಒಲಿಸಿಕೊಂಡದ್ದ ದ ಇದಕ್ಕೆ ಅವನ ಹೆಸರೇ ಪ್ರಸಿದ್ಧಿಗೆ ಬಂತು. ಈ ತೀರ್ಥದಲ್ಲಿ ಸ್ನಾನ ಮಾಡು ರಿಗೆ ತೀವ್ರವಾದ ಸರ್ಪದೋಷವೂ ನಿವೃತ್ತಿಯಾಗುತ್ತದೆ.

ನಲಶಿಲಾತೀರ್ಥ—ಶನಿಯ ಪ್ರಭಾವದಿಂದ ನಲ-ದಮಯಂತಿಯರಿಗೆ ಹವಾಯಿತಷ್ಟೆ. ವಿರಹ ದುಃಖದಿಂದ ಆರ್ತನಾದ ನಲ ಈ ತೀರ್ಥದ ಬಳಿಯಲ್ಲಿ ಳಿತು ಶಿವನ ತಪಸ್ಸು ಮಾಡಿ ಶನಿಬಾಧೆಯಿಂದ ಮುಕ್ತನಾಗಿ ದಮಯಂತಿಯನ್ನು

ಪಡೆದು ಪುನಃ ಕೋಸಲಾಧಿಪನಾದ. ಹೀಗೆ ಈ ತೀರ್ಥಸ್ನಾನದಿಂದ ಮನುಷ್ಯ ಬಾಧೆಯಿಂದ ಮುಕ್ತನಾಗುತ್ತಾನೆ.

ಗುಂಜಾಸಂಗಮ—ಇದು ನಲತಿಲಾತೀರ್ಥದ ಮುಂದೆ ನದೀ ದಡದ ಇದೆ. ಚಾಮುಂಡಿಯು ಚಂಡಾಸುರನನ್ನು ಸಂಹಾರ ಮಾಡಲು ಆ ದ್ವೇಷವ ತೀರಿಸಿಕೊಳ್ಳುವುದಕ್ಕಾಗಿ ಅವನ ಮಗ ಶಲಭಾಸುರ ಬ್ರಹ್ಮನನ್ನು ತಪಸ್ಸಿನ ಒಲಿಸಿಕೊಂಡು ಪುರುಷರಿಂದ ಅವಧ್ಯತ್ವ ಪಡೆದು ಅಸಂಖ್ಯ ಶಲಭ (ಮಿಡಿತೆ ಗಳಾಗಿ ರಮ್ಯವಾದ ಆಶ್ರಮಗಳನ್ನೂ ವನೋಪವನಗಳನ್ನೂ ಹಾಳು ಮಾಡಿದ್ದ ಸರ್ಪ ವ್ಯಾಘ್ರ ವರಾಹಾದಿರೂಪಗಳಿಂದಲೂ ಜನಗಳನ್ನು ಬಾಧಿಸತೊಡಗಿದ.

ಆಗ ಬ್ರಹ್ಮಾದಿಗಳಿಂದ ಪ್ರಾರ್ಥಿತಳಾದ ದೇವಿ ಗುಲಗಂಜಿಯಂತೆ ಮುಖಿಯೂ ದೀಪ್ತಜ್ವಲನಾಕ್ಷಿಯೂ[1] ಧನುರ್ಧಾರಿಯೂ ಆಗಿ ಅವತರಿಸಿ ಸಮಾಸೀ ತನಾದ ಶಲಭನನ್ನು ನಿಶಿತಾಸ್ತ್ರಗಳಿಂದ ಸಂಹಾರ ಮಾಡಿ ಲೋಕವನ್ನುದ್ಧರಿಸಿದ ಅದ್ಯಾಪಿ ಆ ದೇವಿ ಗುಲಗಂಜಿಯಂತೆ ರಕ್ತಮುಖಿಯಾಗಿ ಈ ಸಂಗಮದ ಬಳಿ ಇರುವುದರಿಂದ ಆ ಸಂಗಮಕ್ಕೆ ಗುಂಜಾಸಂಗಮವೆಂದು ಹೆಸರಾಗಿದೆ.

ಅಧ್ಯಾಯ 63 ಖರ್ಜೂರೀ ಮತ್ತು ಅಮರೀ ಸಂಗಮಗ

ಖರ್ಜೂರೀಸಂಗಮ—ಪೂರ್ವದಲ್ಲಿ ಲೋಕಕಂಟಕನಾಗಿದ್ದ ಮಹಿಷಾ ವನ್ನು ಸಂಹರಿಸುವುದಕ್ಕಾಗಿ ಒಂದು ಹೊಸ ವಿಚಿತ್ರ ಶಕ್ತಿ ಸೃಷ್ಟಿಮಾಡಬೇ ಬಂತು. ಸಕಲ ದೇವತೆಗಳ ಶಕ್ತಿಯೂ ಅವರವರ ಬಾಯಿಯ ಮುಖಾಂತರ ಹೊ ಹೊರಗೆ ಬಂದು ಒಂದಾಗಿ ಸೇರಿತು. ಈ ಸಂಮಿಲಿತ ಶಕ್ತಿಯಿಂದ ಸಾಕ್ಷಾಲ್ಲಕ್ಷ್ಮಿ ಸಹಸ್ರಾಯುಧಧಾರಿಯಾಗಿ ಆವಿರ್ಭವಿಸಿದಳು. ಅವಳಿಗೆ ಮಧುಪಾನ ಮಾಡಿಸು ಕ್ಕಾಗಿ ದೇವತೆಗಳು ತಮ್ಮ ತಪಶ್ಶಕ್ತಿಯ ಬಲದಿಂದ ತುಂಗಭದ್ರಾ ತೀರದಲ್ಲಿ ನದಿ ನೀರಿನಲ್ಲಿ ಖರ್ಜೂರವನ್ನು ಬೆರಸಿ, ಮಧು ಮಾಡಿ, ಉತ್ಸಾಹ ವೃದ್ಧಿಗಾಗಿ ದೇ ಕುಡಿಸಿದರು. ಆಗ ಆ ದೇವಿ ದುರ್ಮದನಾದ ಮಹಿಷನನ್ನು ಸಂಹರಿಸಿ ಲೋಗ ಅಭಯ ಕೊಟ್ಟಳು. ಖರ್ಜೂರವನ್ನು ನದಿಯ ನೀರಿನಲ್ಲಿ ಬೆರೆಸಿದ ಸ್ಥ ಖರ್ಜೂರೀಸಂಗಮವೆಂದು ಹೆಸರು ಬಂತು.

ಅಮರೀಸಂಗಮ—ಇದು ಖರ್ಜೂರೀ ಸಂಗಮದಿಂದ ಇನ್ನೂ ಮುಂ ಇದೆ. ಇದರಲ್ಲಿ ಸ್ನಾನ ಮಾಡಿ ಪಂಚಾಕ್ಷರೀ ಜಪಿಸಿದರೆ ಸಕಲ ಪಾಪಗಳೂ ವಾಗುವುವು. ಇದರ ಆಖ್ಯಾನವೇನೆಂದರೆ—

1 ದೀಪ್ತ = ಉರಿಯುತ್ತಿರುವ. ಜ್ವಲನ = ಬೆಂಕಿಯಂತೆ, ಅಕ್ಷಿ = ಕಣ್ಣುಳ್ಳವಳು

ಗೋದಾವರೀ ತೀರದಲ್ಲಿದ್ದ ನಿರ್ಮಲಾಪುರದಲ್ಲಿ ಕುಮಾರನೆಂಬ ಮೂರ್ಖನಾದ ಬ್ರಾಹ್ಮಣ ಇದ್ದ. ಅವನು ಧನಲೋಭದಿಂದ ವ್ಯಾಪಾರಮಾಡುತ್ತಿದ್ದುದೂ ಅಲ್ಲದೆ ಸ್ವಜಾತೀಯವರನ್ನೆಲ್ಲಾ ನಿಂದಿಸುತ್ತಲೂ ಇದ್ದ. ಇದಕ್ಕೆ ಪ್ರತಿಯಾಗಿ ಅವನ ಪತ್ನಿ ಅಮರೀ ಬಹಳ ಸುಶೀಲೆ, ತುಂಬಾ ದಾನ-ಧರ್ಮಪರಾಯಣೆ. ಕುಮಾರ ಅವಳ ಈ ಸದ್ಗುಣಗಳನ್ನು ಸೈರಿಸಲಾರದೆ ಅವಳನ್ನು ಬೈಯುತ್ತಾ ಹೊಡೆಯುತ್ತಾ ಇದ್ದ.

ಕುಮಾರನಿಗೆ ದುರ್ಗತಿ—ಒಂದು ದಿನ ಕುಮಾರ ಎಲ್ಲಿಗೋ ಹೋಗಿದ್ದಾಗ ಮಧ್ಯಾಹ್ನದ ವೇಳೆಗೆ ಸರಿಯಾಗಿ ಅಕಸ್ಮಾತ್ ಗಾಲವರು ಅಮರೀ ಮನೆಗೆ ಅತಿಥಿಗಳಾಗಿ ಬಂದರು. ಅಮರೀ ಅವರನ್ನು ಸತ್ಕರಿಸಿ ತನ್ನ ಗಂಡ ಬರುವಷ್ಟರಲ್ಲೇ ಆ ಮಹರ್ಷಿಗಳಿಗೆ ಸತ್ಕಾರ ಮಾಡಿ ಕಳುಹಿಸಿಬಿಡಬೇಕೆಂದು ಆಲೋಚಿಸಿ, ಬೇಗ ಬೇಗ ಅಡಿಗೆಯನ್ನೂ ಮಾಡಿ ಊಟಕ್ಕೂ ಸರಸರ ಬಡಿಸುತ್ತಿದ್ದಳು. ಆದರೆ ದುರ್ದೈವದಿಂದ ಆ ಹೊತ್ತಿಗೆ ಸರಿಯಾಗಿ ಕುಮಾರ ಬಂದು ಬಿಟ್ಟ. ತನ್ನ ಪತ್ನಿಯ ಅತಿಪ್ರಸಂಗಿತನಕ್ಕಾಗಿ ಕಿಡಿ ಕಿಡಿಯಾಗಿ ಅತಿಥಿಗಳಾದ ಗಾಲವರನ್ನೂ ಕೂಡ ದೂಷಿಸುತ್ತಾ ಅಮರಿಯನ್ನು ಹೊಡೆದು ಹಗ್ಗದಿಂದ ಕಟ್ಟಿ ದೊಣ್ಣೆಯಿಂದಲೂ ಬಡಿದನು. ನೋವಿನಿಂದಲೂ ಅಮರಿ ಒದ್ದಾಡುವುದನ್ನು ಕಣ್ಣಿಂದ ನೋಡಲಾರದೆ ಗಾಲವರು ಊಟ ಬಿಟ್ಟೆದ್ದು ಕುಮಾರನನ್ನು ಕಠೋರವಾಗಿ ಶಪಿಸಿದ್ದರಿಂದ ಅವನಿಗೆ ಶೂಲವ್ಯಾಧಿ ಬಂದು ಅದರಿಂದ ನರಳಿ ನರಳಿ ಕಡೆಗೆ ಮರಣ ಹೊಂದಿದ.

ಅಮರಿಗೆ ಸದ್ಗತಿಯಾದುದು—ಹೀಗೆ ವಿಧವೆಯಾದ ಅಮರಿ ತನ್ನ ದೌರ್ಭಾಗ್ಯಕ್ಕಾಗಿ ವ್ಯಥೆಪಟ್ಟು ಆಸ್ತಿಪಾಸ್ತಿ ಎಲ್ಲಾ ದಾನ ಮಾಡಿ ಕ್ಷೇತ್ರಯಾತ್ರೆ ಮಾಡುತ್ತಾ ಪಂಪಾಕ್ಷೇತ್ರಕ್ಕೆ ಬಂದು ತುಂಗಭದ್ರಾ ತೀರದಲ್ಲೇ ಒಂದು ಕಡೆ ಈ ತೀರ್ಥದಲ್ಲಿ ಸ್ನಾನಾನುಷ್ಠಾನ ಮಾಡುತ್ತಾ ಇದ್ದು ಇಲ್ಲೇ ದೇಹ ತ್ಯಾಗ ಮಾಡಿದಳು. ಪುಣ್ಯದಿಂದ ಅವಳಿಗೆ ಸತ್ಯಲೋಕಪ್ರಾಪ್ತಿಯಾಯಿತು. ಅಲ್ಲಿ ಚತುರ್ಯುಗ ಸಹಸ್ರ ಪರ್ಯಂತ ಸುಖವಾಗಿದ್ದು ತಿಲೋತ್ತಮೆ ಎಂಬ ಅಪ್ಸರಸ್ತ್ರೀಯಾದಳು.

ಒಂದು ಸಲ ಇಂದ್ರ ಅವಳನ್ನು ಲೋಕಕಂಟಕರಾಗಿದ್ದ ಸುಂದೋಪಸುಂದರನ್ನು ವಂಚಿಸುವುದಕ್ಕಾಗಿ ಕಳುಹಿಸಿಕೊಟ್ಟನು. ಅವಳನ್ನು ಕೈ ಹಿಡಿಯುವ ಮೇಲಾಟದಿಂದ ಇಬ್ಬರೂ ಹೊಡೆದಾಡಿ ಮಡಿದರು. ಅನಂತರ ಪರಮೇಷ್ಠಿ ಅವಳಿಗೆ ಸೂರ್ಯರಥದಲ್ಲಿ ಒಂದು ಸ್ಥಾನ ತೋರಿಸಿ ಅಲ್ಲೇ ಇರುವಂತೆ ಹೇಳಿದನು. ಈ ತೀರ್ಥದ ಮಹಿಮೆಯಿಂದ ಅಮರಿ ಸದ್ಗತಿ ಪಡೆದಳಾದ್ದರಿಂದ ಈ ತೀರ್ಥಕ್ಕೆ ಅವಳ ಹೆಸರೇ ಬಂತು. ಈ ತೀರ್ಥ ದರ್ಶನ ಮಾತ್ರದಿಂದ ಪಾಪಹರವಾದುದು.

ಅಧ್ಯಾಯ 64 ಮನು ತೀರ್ಥ

ಮನುತೀರ್ಥ—ಇದಕ್ಕೆ ಮಾನವತೀರ್ಥವೆಂತಲೂ ಹೆಸರುಂಟು. ಹಿಂದೆ ಮಹಾಭಾಗನಾದ ಮನು ಈ ತೀರ್ಥದಲ್ಲಿ ಸ್ನಾನಮಾಡಿ ವಿರೂಪಾಕ್ಷನ ತಪಸ್ಸುಮಾಡಿ ಸರ್ವಲೋಕಮಾನ್ಯನಾದ. ಆದರಿಂದ ಇದು ಅವನ ಹೆಸರಿನ ಮೇಲೇ ಪ್ರಸಿದ್ಧಿ ಪಡೆಯಿತು. ಇದರ ಸ್ನಾನದಿಂದ ಸಕಲ ಪಾಪಗಳೂ ನಾಶವಾಗುತ್ತವೆ. ಇದಕ್ಕೆ ಸಂಬಂಧಿಸಿದ ಒಂದು ಆಖ್ಯಾನವೂ ಇದೆ.

ಶ್ರೀಕುಂಡಲ – ವಿಕುಂಡಲರು—ಕೃತಯುಗದಲ್ಲಿ ಮಂಡನಪುರದಲ್ಲಿ **ಹೇಮಕುಂಡಲ**ನೆಂಬ ವೈಶ್ಯನಿದ್ದ. ಸತ್ಯಪರನೂ ಸದಾಚಾರಶೀಲನೂ ದ್ವಿಜಾರ್ಚಕನೂ ಆಗಿದ್ದ. ಅವನು ಹೇರಳವಾಗಿ ಧನಗಳಿಸಿ ತನ್ನ ಸಂಪಾದನೆಯಲ್ಲಿ ಷಷ್ಠಾಂಶವನ್ನು ಧರ್ಮಕಾರ್ಯಗಳಿಗೆ ಮೀಸಲಾಗಿಟ್ಟು ಅದರಿಂದ ಅನೇಕ ಕೆರೆಕಟ್ಟೆ ಭಾವಿ ಛತ್ರಾದಿಗಳನ್ನು ಕಟ್ಟಿಸಿದ. ಆದರೆ ಅವನ ಮರಣಾನಂತರ ಅವನ ಮಕ್ಕಳಾದ **ಶ್ರೀಕುಂಡಲ ವಿಕುಂಡಲ** ಇಬ್ಬರೂ ಐಶ್ವರ್ಯಮತ್ತರಾಗಿ ದುರ್ಮಾರ್ಗಕ್ಕೆ ಬಿದ್ದು ವೇಶ್ಯಾರತರಾಗಿ ಸಂಪತ್ತನ್ನೆಲ್ಲಾ ಹಾಳುಮಾಡಿ ಹೊಟ್ಟೆಗೇ ಗತಿಯಿಲ್ಲದಂತಾಗಿ ಚೌರ್ಯವೃತ್ತಿಯನ್ನವಲಂಬಿಸಿ ರಾಜಭಟರ ಕಾಟದಿಂದ ಕಾಡು ಸೇರಿದರು.

ಒಂದು ದಿನ ಶ್ರೀಕುಂಡಲ ಕಾಡು ಮೃಗಗಳ ಕೈಗೆ ಸಿಕ್ಕಿ ಹತನಾದ. ಅದೇ ದಿನ ವಿಕುಂಡಲನೂ ಸರ್ಪದಷ್ಟನಾಗಿ ಸತ್ತ. ಯಮದೂತರು ಇಬ್ಬರನ್ನೂ ಪಾಶಗಳಿಂದ ಬಂಧಿಸಿ ಯಮನ ಬಳಿಗೆ ಕರೆದೊಯ್ದರು. ಯಮರಾಜ ಅವರಿಬ್ಬರ ಪಾಪಪುಣ್ಯಗಳ ವಿಮರ್ಶೆಮಾಡಿ ಶ್ರೀಕುಂಡಲನಿಗೆ ನರಕವನ್ನೂ ವಿಕುಂಡಲನಿಗೆ ಸ್ವರ್ಗವನ್ನೂ ವಿಧಿಸಿದ.

ಮನುತೀರ್ಥ ಸ್ನಾನದ ಮಹಿಮೆ—ಯಮನ ಪಕ್ಷಪಾತದಿಂದ ಆಶ್ಚರ್ಯಾನ್ವಿತನಾದ ವಿಕುಂಡಲ ಆ ಸೂರ್ಯಪುತ್ರನನ್ನು ಮಾತನಾಡುವುದಕ್ಕೆ ಅನುಮತಿ ಕೇಳಿಕೊಂಡು 'ನಾವಿಬ್ಬರೂ ಜೊತೆ ಜೊತೆಯಲ್ಲೇ ಪಾಪ ಕಾರ್ಯಗಳನ್ನು ಮಾಡಿದವರು. ಈಗ ನನಗೆ ಮಾತ್ರ ಸದ್ಗತಿಯಾಗಲು ನಾನೇನು ಅಂಥಾ ಪುಣ್ಯ ಕೆಲಸ ಮಾಡಿದೆ?' ಎಂದು ಕೇಳಿದ.

ಅದಕ್ಕೆ ವೈವಸ್ವತ 'ನೀನು ಹೇಳಿದಂತೆ ಇಬ್ಬರೂ ದುಷ್ಕಾರ್ಯನಿರತರಾಗಿದ್ದರೂ ಒಂದು ದಿನ ನೀನು ಕಳ್ಳತನಕ್ಕಾಗಿ ಪೇಟೆಗೆ ಹೋಗಿದ್ದಾಗ ಅಲ್ಲಿ ನಿನ್ನ ಪರಮಮಿತ್ರನ ಮಗ ಸುಮಿತ್ರನೆಂಬ ಸದ್ಬ್ರಾಹ್ಮಣನ ಸಹವಾಸ ದೊರೆಯಿತು. ಅವನ ಬಲಾತ್ಕಾರದಿಂದ ನೀನು ಪಾವನವಾದ ಸದ್ಯಃ ಪಾಪಹಾರಕವಾದ ಮನು ತೀರ್ಥದಲ್ಲಿ ಸ್ನಾನಮಾಡಿದಿ. ಆ ಪುಣ್ಯದಿಂದಲೇ ಇಂದು ನಿನಗೆ ನರಕ ತಪ್ಪಿ ಸ್ವರ್ಗ

ಪ್ರಾಪ್ತಿಯಾಗಿದೆ. ಬಾಲ್ಯಾರಭ್ಯ ಪಾಪಿಯಾದ ನಿನ್ನ ಅಣ್ಣ ಈ ಪುಣ್ಯ ವಿಶೇಷ ಇಲ್ಲದೆ ನರಕಕ್ಕೆ ಗುರಿಯಾದ' ಎಂದು ತಿಳಿಸಿದ.

ಅದನ್ನು ಕೇಳಿ ವಿಕುಂಡಲ–'ಹೇ ಕೃತಾಂತ! ನಮ್ಮಣ್ಣನಿಗೆ ನರಕವಾದರೆ ನನಗೆ ಸ್ವರ್ಗದಲ್ಲೇನು ಸುಖ ಇರುತ್ತದೆ? ಆದ್ದರಿಂದ ಅವನಿಗೂ ಸದ್ಗತಿಯಾಗ ಬೇಕಾದರೆ ಏನು ಮಾಡಬೇಕು ತಿಳಿಸು' ಎಂದು ಪ್ರಾರ್ಥಿಸಿಕೊಂಡ. ಅದಕ್ಕೆ ಪಿತೃಪತಿ 'ಅಣ್ಣ ತಮ್ಮ ಎಂಬ ಬಾಂಧವ್ಯಗಳೆಲ್ಲಾ ದೇಹಸಂಬಂಧ ಇರುವವರೆಗೆ ಮಾತ್ರ. ಆ ಬಳಿಕ ಅವರವರ ಕರ್ಮಗಳೇ ಅವರವರಿಗೆ ಬಂಧು. ಆದರೂ ನೀನು ಕೇಳಿಕೊಂಡಿದ್ದರಿಂದ ತಿಳಿಸಬೇಕಾಗಿದೆ. ನಿನ್ನ ಸ್ನಾನದ ಫಲದಲ್ಲಿ ಅರ್ಧವನ್ನು ನಿಮ್ಮಣ್ಣನಿಗೆ ದಾನಮಾಡು. ಅದರಿಂದ ಅವನಿಗೂ ಸದ್ಗತಿಯಾಗುತ್ತದೆ' ಎಂದು ಸೂಚಿಸಿದ.

ವಿಕುಂಡಲ ಅದರಂತೆಯೇ ಸ್ನಾನದ ಅರ್ಧಫಲ ತನ್ನಣ್ಣನಿಗೆ ದಾನಮಾಡಿದ. ಅದರಿಂದ ಇಬ್ಬರಿಗೂ ಸ್ವರ್ಗಪ್ರಾಪ್ತಿಯಾಯಿತು. ಹೀಗೆ ಮಾನವ ತೀರ್ಥದ ಸ್ನಾನ ಪಾಪನಾಶಕ. ಈ ಕಥೆ ಕೇಳಿ ಸಂತೋಷಿಸಿ ಸಪ್ತರ್ಷಿಗಳು ಆ ತೀರ್ಥದಲ್ಲಿ ಸ್ನಾನ ಮಾಡಿ ಮುಂದಕ್ಕೆ ನಡೆದರು.

ಅಧ್ಯಾಯ 65 ವ್ಯಾಧಾರಣ್ಯ, ಶಬರೀ ತೀರ್ಥ

[65, 66, 67 ಈ ಮೂರು ಅಧ್ಯಾಯಗಳಲ್ಲಿ ಬರುವ ಸ್ಥಳಗಳೆಲ್ಲ ಪಂಪಾ ಸರೋವರದ ಸುತ್ತಮುತ್ತಲಲ್ಲೇ ಎಲ್ಲೋ ಇರಬೇಕೆಂದು ನನ್ನ ಅನುಮಾನ. ಶಬರೀ ಗುಹೆ ಎಂಬುದು ಅದ್ಯಾಪಿ ಪಂಪಾಸರೋವರದ ಹಿಂಭಾಗದಲ್ಲೇ ಇದೆ. ಆದರೆ ಶಬರೀತೀರ್ಥವೆಂದು ಯಾವುದಕ್ಕೆ ಪ್ರಸಿದ್ಧಿಯಿತ್ತೋ ಹೇಳುವುದು ಕಷ್ಟವಾಗಿದೆ. 65ನೇ ಅಧ್ಯಾಯದ ವ್ಯಾಧಾರಣ್ಯವೂ 66ನೇ ಅಧ್ಯಾಯದ ಆಮ್ರಕೂಟೇಶ್ವರವೂ ಈಗ ಮಧುವನ ಇರುವ ಸ್ಥಳ ಇದ್ದಲ್ಲೇ ಇದ್ದಿರಬಹುದು—ಸಿ. ತೀ]

ವ್ಯಾಧಾರಣ್ಯ[1]—ಹಿಂದೆ ಸ್ಥಾಣುಪುರ[2]ದಲ್ಲಿ ಕಪಾಲನೆಂಬ ಒಬ್ಬ ವ್ಯಾಧನಿದ್ದ. ಅವನು ಬೇಟೆಯಿಂದಲೇ ತನ್ನ ಕುಟುಂಬವನ್ನೂ ಹತ್ತು ಮಕ್ಕಳನ್ನೂ ಸಾಕುತ್ತಿದ್ದ. ಒಂದು ದಿನ ಸಂಜೆಯಾಗಿ ಕತ್ತಲಾಗುತ್ತಾ ಬಂದರೂ ಯಾವ ಬೇಟೆಯೂ ಸಿಕ್ಕಲಿಲ್ಲ. 'ಹೆಂಡತಿ ಮಕ್ಕಳಿಗೆ ಏನು ಹೇಳುವುದು?' ಎಂದು ಚಿಂತಿಸುತ್ತಾ ವ್ಯಾಕುಲನಾಗಿ ಹಸಿವಿನಿಂದ ಬಳಲಿದ್ದರೂ 'ಬರಿಗೈಯಲ್ಲಿ ಮನೆಗೆ ಹೋಗುವುದಕ್ಕಿಂತ ಇಲ್ಲೇ ಪ್ರಾಣ ಬಿಡುವುದೇ ಲೇಸೆಂ'ದು ನಿಶ್ಚಯಿಸಿಕೊಂಡು ಅಲ್ಲೇ ಇದ್ದುಬಿಟ್ಟ. ಅವನ ದುರದೃಷ್ಟಕ್ಕೆ ಆ ರಾತ್ರಿ ಬಿರುಗಾಳಿ ಎದ್ದು ಮಳೆಯೂ ಬಲವಾಗಿ ಹೊಯ್ಯಿತು. ಒಂದು ಕಡೆ

---

1 ವ್ಯಾಧ = ಬೇಟೆಗಾರನ, ಅರಣ್ಯ = ಕಾಡು.

2 ಸ್ಥಾಣು = ರುದ್ರನ, ಪುರ = ಊರು.

ಹಸಿವು, ಇನ್ನೊಂದು ಕಡೆ ಚಿಂತೆ, ಸಾಲದ್ದಕ್ಕೆ ಛಳಿ ಮಳೆ ; ಹೀಗಾಗಿ ಅವನಿಗೆ ತಡೆ ದುಕೊಳ್ಳುವುದಕ್ಕಾಗದೆ ಮೂರ್ಛೆ ಬಂದು ಪ್ರಜ್ಞೆ ತಪ್ಪಿಹೋಯಿತು.

ಕಪೋತಗಳ ಉಪಕಾರಬುದ್ಧಿ—ಅವನ ಆ ಶೋಚನೀಯ ಪರಿಸ್ಥಿತಿಯನ್ನು ಕಂಡು ಮರುಗಿ ಮರದ ಮೇಲೆ ಕುಳಿತಿದ್ದ ಕಪೋತ ದಂಪತಿಗಳು ಅವನಿಗೆ ಕಾಸಿ ಕೊಳ್ಳುವುದಕ್ಕೆ ಬೆಂಕಿಮಾಡಿಕೊಟ್ಟುವು. ಅದರ ಕಾವಿನಿಂದ ವ್ಯಾಧನಿಗೆ ಸ್ವಲ್ಪ ಜೀವ ಬಂತು. ಬಳಿಕ ಅವನ ಕ್ಷುತ್ಪರಿಹಾರಕ್ಕಾಗಿ ಏನೂ ಮಾಡಲಾಗದೆ ಕಪೋತ ಗಳು ತಮ್ಮನ್ನೇ ಕೊಂದು ತಿನ್ನುವಂತೆ ವ್ಯಾಧನಿಗೆ ಹೇಳಿದವು. ತನಗೆ ಪರಮೋಪಕಾರ ಮಾಡಿದ ಆ ನಿರಪರಾಧಿ ಕಪೋತಗಳನ್ನು ಕೈಯಾರ ಕೊಂದು ತಿನ್ನುವುದಕ್ಕೆ ವ್ಯಾಧನ ಮನಸ್ಸು ಒಪ್ಪಲಿಲ್ಲ.

ಆ ಗಂಡು ಕಪೋತ 'ಹಾಗಾದರೆ ನಾನು ಮೊದಲು ಬೆಂಕಿಯಲ್ಲಿ ಬಿದ್ದು ಪ್ರಾಣ ತ್ಯಾಗ ಮಾಡಿಕೊಳ್ಳುತ್ತೇನೆ. ಅನಂತರ ನನ್ನ ಪತ್ನಿ ಅಗ್ನಿಪ್ರವೇಶ ಮಾಡುವಳು. ನಮ್ಮಿಬ್ಬರ ಮಾಂಸವನ್ನೂ ತಿಂದು ಪ್ರಾಣಧಾರಣ ಮಾಡಿಕೋ' ಎಂದು ಹೇಳಿತು. ಒಡನೆಯೇ ಕಪೋತಿ ಅದನ್ನು ಆಕ್ಷೇಪಿಸುತ್ತಾ 'ಎಲ್ಲಾದರೂ ಉಂಟೆ! ನೀನು ಮೊದಲು ಅಗ್ನಿಪ್ರವೇಶ ಮಾಡಿದರೆ ನನಗೆ ವೈಧವ್ಯ ಬರುತ್ತದೆ. ಹೆಂಗಸಿಗೆ ಅದಕ್ಕೂ ಹೆಚ್ಚಿನ ದೌರ್ಭಾಗ್ಯವೇನಿದೆ ? ಆದ್ದರಿಂದ ನಾನೇ ಮೊದಲು ಬೆಂಕಿಗೆ ಬೀಳುತ್ತೇನೆ' ಎಂದಿತು. ಕಪೋತ ಅದಕ್ಕೊಪ್ಪದೆ ಸಾಧ್ಯವಿಲ್ಲ. ನಿನ್ನೊಬ್ಬಳ ಮಾಂಸದಿಂದಲೇ ವ್ಯಾಧನಿಗೆ ಹೊಟ್ಟೆ ತುಂಬಿಬಿಟ್ಟರೆ ನನ್ನ ದೇಹ ವ್ಯರ್ಥವಾಗಿ ಹೋಗುವುದಲ್ಲಾ' ಎಂದು ಅಸಮಾಧಾನ ತೋರಿಸಿತು.

ಕಪೋತ ದಂಪತಿಗಳ ಸಂಭಾಷಣೆ ಕೇಳಿ ವ್ಯಾಧನ ಮನಸ್ಸು ಕರಗಿಹೋಯಿತು. ಅವನು 'ಕಪೋತಗಳೇ, ಇಬ್ಬರೂ ಸಾಯಬೇಡಿ. ಇದುವರೆಗೆ ಇಷ್ಟು ಪಾಪ ಮಾಡಿದ್ದೇ ಸಾಕು. ಈಗಾಗಲೇ ನಾನು ನರಕಭಾಗಿಯಾಗಿದ್ದೇನೆ. ಇನ್ನೂ ಪ್ರಾಣಿ ಹಿಂಸೆ ಮಾಡಿ ಪಾಪಕ್ಕೆ ಗುರಿಯಾಗಲಾರೆ. ನಿಮ್ಮನ್ನು ಮೊರೆ ಹೊಕ್ಕಿದ್ದೇನೆ. ನನ್ನನ್ನು ಹೇಗಾದರೂ ಮಾಡಿ ಉದ್ಧರಿಸಿರಿ' ಎಂದು ಬೇಡಿಕೊಂಡ. ಅದಕ್ಕೆ ಕಪೋತಗಳು ಅವನಿಗೆ ಧೈರ್ಯಕೊಡುತ್ತಾ 'ಚಿಂತಿಸಬೇಡ. ಈ ಅರಣ್ಯದ ಮಹಿಮೆಯಿಂದಲೇ ನೀನು ಪೂತನಾಗಿದ್ದೀಯೆ. ಏಕೆಂದರೆ ಪಾಪಿಗಳಲ್ಲಿ ಅಗ್ರಗಣ್ಯನಾದವನೂ ಕೂಡ ಈ ವನದಲ್ಲಿ ಒಂದು ರಾತ್ರಿ ವಾಸಮಾಡುವುದರಿಂದಲೇ ಪೂತನಾಗಿ ತಪ್ಪದೆ ಧರ್ಮಿಷ್ಠ ನಾಗುತ್ತಾನೆ. ಪೂರ್ವ ಪುಣ್ಯದಿಂದಲೇ ನಿನಗೆ ಈ ಅರಣ್ಯವಾಸಲಭ್ಯವಾಗಿದೆ. ಇಲ್ಲೇ ಹತ್ತಿರದಲ್ಲೇ ಶಬರೀ ತೀರ್ಥವಿದೆ, ಅದರಲ್ಲೂ ಸ್ನಾನಮಾಡಿ ಕೃತಾರ್ಥನಾಗು' ಎಂದು ಹೇಳಿ ಶಬರೀ ತೀರ್ಥದ ವೃತ್ತಾಂತವನ್ನೂ ಅವನಿಗೆ ತಿಳಿಸಿದುವು.

ಶಬರೀ ತೀರ್ಥ—ಶಬರಿ ಒಬ್ಬ ವ್ಯಾಧ ಸ್ತ್ರೀಯಾದರೂ ಬಹಳ ಧರ್ಮಚಾರಿಣಿಯಾಗಿದ್ದಳು. ಇವಳು ತ್ರೇತಾಯುಗದಲ್ಲಿ ಮುನಿಗಳ ಆಶ್ರಮಗಳಿಗೆ ಹೋಗಿ ಅಲ್ಲಿ ಸಮ್ಮಾರ್ಜನ ಕೆಲಸಗಳನ್ನು* ಮಾಡಿಕೊಡುತ್ತಿದ್ದಳು. ಅದರಿಂದ ಪ್ರಸನ್ನರಾಗಿ ಆ ಮುನಿಗಳು ಅವಳಿಗೆ ರಾಮನಾಮ ಜಪಮಾಡುವಂತೆ ಹೇಳಿ ಅದರಿಂದ ರಾಮದರ್ಶನವಾಗುವುದೆಂದು ತಿಳಿಸಿದರು. ಅವರ ಮಾತಿನ ಮೇಲೆ ಶಬರಿ ಅಲ್ಲೇ ಇದ್ದ ಒಂದು ತೀರ್ಥದಲ್ಲಿ ಸ್ನಾನ ಮಾಡಿ ಮಿತಾಹಾರಿಯಾಗಿ ರಾಮನಾಮ ಜಪಿಸುತ್ತಿದ್ದಳು. ಆ ಪುಣ್ಯದಿಂದ ಅವಳಿಗೆ ರಾಮಲಕ್ಷ್ಮಣರ ದರ್ಶನವೂ ಅವರನ್ನು ಸೇವಿಸುವ ಭಾಗ್ಯವೂ ದೊರಕಿದವು. ಕಡೆಗೆ ಅವರ ಎದುರಿನಲ್ಲೇ ತಪೋಗ್ನಿಪ್ರವೇಶಮಾಡಿ ರಾಮಸಾಯುಜ್ಯ ಪಡೆದಳು. ಅವಳು ಸ್ನಾನ ಮಾಡುತ್ತಿದ್ದ ತೀರ್ಥವೇ ಶಬರೀ ತೀರ್ಥವೆನಿಸಿಕೊಂಡಿದೆ.

ವ್ಯಾಧ ಕಥೋಪಸಂಹಾರ—ಕಪೋತಗಳು ಹೀಗೆ ಶಬರೀ ವೃತ್ತಾಂತವನ್ನು ಹೇಳಿ ಆ ತೀರ್ಥದಲ್ಲಿ ಸ್ನಾನಮಾಡಿ ವಿರೂಪಾಕ್ಷನ ನಾಮಸ್ಮರಣೆ ಮಾಡಿ ಮುಕ್ತನಾಗತಕ್ಕದ್ದೆಂದು ವ್ಯಾಧನಿಗೆ ತಿಳಿಯಹೇಳಿದುವು. ಹಾಗೆಯೇ ಆಚರಿಸಿ ವ್ಯಾಧ ಶುದ್ಧನಾಗಿ ಮುಕ್ತನಾದ. ಹೀಗೆ ಈ ವ್ಯಾಧಾರಣ್ಯದಲ್ಲಿ ಒಂದು ರಾತ್ರಿ ವಾಸಮಾಡಿದರೇ ಸಾಕು, ಸಕಲಪಾಪಗಳೂ ವಿನಾಶವಾಗುವುವು ಎಂದು ಕ್ಷೇತ್ರಪಾಲ ಹೇಳಿದ್ದನ್ನು ಕೇಳಿ ಸಪ್ತರ್ಷಿಗಳು ಆ ರಾತ್ರಿ ಅಲ್ಲೇ ತಂಗಿ ಶಬರೀ ತೀರ್ಥದಲ್ಲಿ ಮಜ್ಜನಮಾಡಿಕೊಂಡು ಕಿಷ್ಕಿಂಧಾಂತರ್ಗತವಾದ ಆಮ್ರಕೂಟ ಕ್ಷೇತ್ರಕ್ಕೆ ತೆರಳಿದರು.

ಅಧ್ಯಾಯ 66 ಆಮ್ರಕೂಟೇಶ್ವರ

[ಆಮ್ರ ಎಂದರೆ ಮಾವಿನ ಗಿಡ. ಕೂಟ ಎಂದರೆ ಕೂಡುವಿಕೆ, ಗುಂಪು ಎಂದರ್ಥವಾಗುತ್ತದೆ. ಹೀಗೆ ಆಮ್ರಕೂಟ ಎಂಬುದಕ್ಕೆ ಆಪಾತತಃ ಮಾವಿನ ತೋಪು ಎಂದು ಅರ್ಥವಾಗುತ್ತದೆ. ಸುತ್ತಮುತ್ತಲೂ ನೋಡಿದರೆ ಮಧುವನ ಬಿಟ್ಟರೆ ಇನ್ನೆಲ್ಲಿಯೂ ಮಾವಿನ ತೋಪು ಕಾಣಿಸುವುದಿಲ್ಲ. ಆದ್ದರಿಂದ ಈ ಆಮ್ರಕೂಟೇಶ್ವರ ಮಧುವನದ ಬಳಿಯಲ್ಲೇ ಎಲ್ಲೋ ಇದ್ದಿರಬೇಕೆನ್ನಿಸುತ್ತದೆ. ಮಧುವನ ಪಂಪಾಸರೋವರಕ್ಕೆ ಉತ್ತರದಲ್ಲಿ ತುಂಗಭದ್ರಾ ನದಿಯ ಉತ್ತರತೀರದಲ್ಲಿದೆ. ಆದರೆ ಸದ್ಯಕ್ಕೆ ಅಲ್ಲೆಲ್ಲೂ ದೇವಸ್ಥಾನವಾಗಲಿ ಲಿಂಗವಾಗಲಿ ಇದ್ದಂತೆ ಕುರುಹುಗಳೇನೂ ಕಾಣುವುದಿಲ್ಲ— ಸಂಪಾ].

ಅಂಧನಾದ ಶಮನಿಧಿ—ಕಾತ್ಯಾಯನ ಕುಲೋದ್ಭವನಾದ ಶಮನಿಧಿ ಎಂಬ ಬ್ರಾಹ್ಮಣ ಕುರುಡನಾಗಿಯೇ ಹುಟ್ಟಿದ. ಸಾಲದ್ದಕ್ಕೆ ಬಾಲ್ಯದಲ್ಲೇ ಮಾತಾಪಿತೃಗಳ ವಿಯೋಗವೂ ಸಂಭವಿಸಿತು. ಹೀಗೆ ಅನಾಥನೂ ಅಂಧನೂ ಆದ ಅವನಿಗೆ ಅವನ ಬಂಧುಗಳೆಲ್ಲ ಸೇರಿ ಹೇಗೋ ಅಂತೂ ಇಂತೂ ಉಪನಯನ ಸಂಸ್ಕಾರ ಮಾಡಿ

* ಎಂದರೆ ಕಸ ಗುಡಿಸುವುದು ಸಾರಿಸುವುದು, ಪಾತ್ರೆ ತೊಳೆಯುವುದು ಇತ್ಯಾದಿ.

ದರು. ಶಮನಿಧಿ ಶಿವಭಕ್ತನಾಗಿ ಒಂದು ಲಿಂಗವನ್ನಿಟ್ಟು ಕೊಂಡು ಅದನ್ನೇ ಆರಾಧಿಸುತ್ತಿದ್ದ; ಲಿಂಗಾರ್ಚನೆ ಮಾಡದೆ ಭೋಜನವನ್ನೂ ಮಾಡುತ್ತಿರಲಿಲ್ಲ. ಸದಾ ಪಂಚಾಕ್ಷರೀ ಜಪ ಮಾಡುತ್ತಿದ್ದ.

ಒಂದು ದುರ್ಘಟನೆ—ಒಂದು ದಿನ ಶ್ರಾವಣ ಮಾಸದಲ್ಲಿ ತುಂಗಭದ್ರಾ ನದಿಗೆ ಸ್ನಾನ ಮಾಡುವುದಕ್ಕೆ ಹೋಗಿದ್ದಾಗ ಶಮನಿಧಿ ಕಾಲುಜಾರಿ ಬಿದ್ದು ನೀರಿನಲ್ಲಿ ತೇಲಿಕೊಂಡು ಪಂಪಾಸರೋವರದವರೆಗೆ ಕೊಚ್ಚಿ ಬಂದ. ಅಲ್ಲಿ ದಡದಲ್ಲಿದ್ದ ಒಂದು ಮರದ ಕೊಂಬೆ ಕೈಗೆ ಸಿಕ್ಕಲು ಅದರ ಆಸರೆಯ ಮೇಲೆ ನದೀಪ್ರವಾಹದಿಂದ ಪಾರಾದನು. ಅಲ್ಲಿಂದ ಅವನು ಕಣ್ಣು ಕಾಣದೆ ಕುಂಟುತ್ತಾ ಎಡವುತ್ತಾ ಶಿವಧ್ಯಾನ ಮಾಡುತ್ತಾ ಹೋಗುತ್ತಿದ್ದುದನ್ನು ಕೆಲವು ಋಷಿ ಬಾಲಕರು ಕಂಡರು. ಅವರು ಕನಿಕರದಿಂದ ಅವನ ವೃತ್ತಾಂತವನ್ನೆಲ್ಲಾ ವಿಚಾರಿಸಿದರು. ಶಮನಿಧಿ ತನ್ನ ಕತೆಯೆಲ್ಲಾ ಹೇಳಿಕೊಂಡು ಗೋಳಾಡುತ್ತಾ 'ನಾನು ಪೂಜಿಸುತ್ತಿದ್ದ ಲಿಂಗವೇ ಕಳೆದು ಹೋಯಿತು. ಅದನ್ನು ಪೂಜಿಸದೆ ನಾನು ಊಟಮಾಡುವ ಹಾಗೇ ಇಲ್ಲ. ಅಯ್ಯೋ, ಏನು ಮಾಡಲಿ' ಎಂದು ಪ್ರಲಾಪಿಸಿದನು.

ಋಷಿಕುಮಾರರ ಉಪಾಯ—ಋಷಿಕುಮಾರರು ಅದಕ್ಕೆ ಏನು ಉಪಾಯವೆಂದು ವಿಚಾರ ಮಾಡ ಹತ್ತಿದರು. ಆಗ ಅವರಲ್ಲೇ ಪೈಲನೆಂಬ ಒಬ್ಬ ಬಾಲಕ 'ಹೇಗಿದ್ದರೂ ಇವನಿಗೆ ಕಣ್ಣು ಕಾಣಿಸುವುದಿಲ್ಲ. ಆದ್ದರಿಂದ ಅವನಿಗೆ ಒಂದು ಮಾವಿನಕಾಯಿ ಕೊಟ್ಟು ಅದೇ ಲಿಂಗವೆಂದು ಸಾಧಿಸೋಣ. ಇದರಲ್ಲಿ ಯಾವ ದೋಷವೂ ಇಲ್ಲ. ಏಕೆಂದರೆ ಲಿಂಗ ಸರ್ವಗತವಾಗಿದೆ. ಇಡೀ ಜಗತ್ತೇ ಲಿಂಗಾತ್ಮಕ. ಅಲ್ಲದೆ ಅಷ್ಟಮೂರ್ತ್ಯಾತ್ಮಕನಾದ ಶಿವ ಮಾವಿನಕಾಯಲ್ಲಿ ಇಲ್ಲವೇ? ನಾವು ಹೀಗೆ ಸಾಧಿಸಿದರೆ ಆ ಬಡ ಬ್ರಾಹ್ಮಣ ಇದನ್ನು ಪೂಜಿಸಿ ಊಟ ಮಾಡಿ ಬದುಕಿಕೊಳ್ಳುತ್ತಾನೆ. ಪ್ರಾಣ ಹೋಗುವ ಕಾಲದಲ್ಲಿ ಸುಳ್ಳು ಹೇಳಿದರೂ ಬಾಧಕವಿಲ್ಲ.

ಪ್ರಾಣಾತ್ಯಯೇಽನೃತೇಽಪ್ಯುಕ್ತೇ ಪಾತಕಂ ನ ಹಿ ವಿದ್ಯತೇ ॥

ಎಂಬ ಅಭಿಪ್ರಾಯ ವ್ಯಕ್ತಪಡಿಸಿದನು. ಎಲ್ಲರೂ ಅದಕ್ಕೊಪ್ಪಿ ಅದರಂತೆಯೇ ಶಮನಿಧಿಗೆ ಒಂದು ಮಾವಿನಕಾಯಿ ಕೊಟ್ಟು ಅದನ್ನೇ ಪೂಜಿಸಿ ಆಹಾರ ಸ್ವೀಕರಿಸುವಂತೆ ಹೇಳಿದರು.

ಆಮ್ರಕೋಟೇಶ್ವರನ ಸ್ಥಾಪನೆ—ಶಮನಿಧಿ ಅವರು ಕೊಟ್ಟ ಮಾವಿನಕಾಯಿಯನ್ನು ಎಡಗೈಯಲ್ಲಿ ಹಿಡಿದುಕೊಂಡು ಪೂಜಿಸುತ್ತಿದ್ದಾಗ ಅದು ಅಕಸ್ಮಾತ್ತಾಗಿ ಕೈಜಾರಿ ಕೆಳಗೆ ಬಿತ್ತು. ಕಣ್ಣು ಕಾಣದ ಬ್ರಾಹ್ಮಣ ಅದಕ್ಕಾಗಿ ಕೈಯಾಡಿಸಿ ಹುಡುಕಿದಾಗ ಅದು ಕೈಗೆ ಅಂದಿತೇ ಹೊರತು ಎತ್ತುವುದಕ್ಕೆ ಬರಲೇ ಇಲ್ಲ. ಬಲವೆಲ್ಲ ಬಿಟ್ಟು ಜಗ್ಗಿದರೂ ಜುಮ್ಮೆನ್ನಲಿಲ್ಲ. ಏಕೆಂದರೆ ಭೂಮಿಯ ಮೇಲೆ ಬಿದ್ದೊಡನೆಯೇ ಆ ಚೂತ

ಫಲ ಲಿಂಗವಾಗಿ ನೆಲದಲ್ಲಿ ಪ್ರತಿಷ್ಠಿತವಾಗಿಬಿಟ್ಟಿತು. ಅದೇ ಆಮ್ರಕೂಟೇಶ್ವರ. ಇದನ್ನರಿಯದೆ ಶಮನಿಧಿ ಗೋಳಾಡಿ ಗೋಳಾಡಿ ಕೊನೆಗೆ ಪ್ರಾಯೋಪವೇಶಕ್ಕಾರಂಭಿಸಿದನು.

ಪ್ರಾಯೋಪವೇಶಕ್ಕಾರಂಭಿಸಿ ಒಂದು ತಿಂಗಳು ಕಳೆದು ಹೋದರೂ ಶಮನಿಧಿ ಹಠಬಿಡಲಿಲ್ಲ. ಅವನ ಕಷ್ಟ ನೋಡಲಾರದೆ ಆರ್ಯೆಯು (ಪಾರ್ವತಿ) ಅವನ ಕಷ್ಟ ನಿವಾರಣೆಮಾಡುವಂತೆ ದೇವನನ್ನು ಕೇಳಿಕೊಳ್ಳಲು ಸ್ವಾಮಿಯು ಆ ಮಾವಿನ ಫಲದ ಲಿಂಗದಲ್ಲೇ ಆವಿರ್ಭವಿಸಿ ಭಕ್ತನಾದ ಶಮನಿಧಿಗೆ ದರ್ಶನವಿತ್ತನು. ಈಶ್ವರಾನುಗ್ರಹದಿಂದ ಕುರುಡನಿಗೆ ಕಣ್ಣುಗಳೂ ಬಂದುವು. ಅವನ ಸಂತೋಷ ಕೇಳಬೇಕೇ? ಆನಂದಪರವಶನಾಗಿ ನೃತ್ಯಮಾಡಿ, ಸ್ತೋತ್ರಮಾಡಿದ. ಪರಮೇಶ್ವರ ಪ್ರಸನ್ನನಾಗಿ 'ನಿನ್ನ ಜ್ಞಾಪಕಾರ್ಥವಾಗಿ ನನಗೆ ಆಮ್ರಕೋಟೇಶ್ವರನೆಂದೇ ಹೆಸರಾಗಲಿ' ಎಂದು ವರಕೊಟ್ಟು ಅನುಗ್ರಹಿಸಿದನು. ಬಳಿಕ ಶಮನಿಧಿ ಆ ಲಿಂಗವನ್ನೇ ಪೂಜಿಸುತ್ತಾ ಕಾಲ ಕಳೆಯುತ್ತಿದ್ದ.

ಮುನಿಗಳಿಗೆ ತಪಸ್ಸಿದ್ಧಿ—ಒಂದು ಸಲ ಅನೇಕ ಮಹರ್ಷಿಗಳು ಎಷ್ಟೆಷ್ಟೂ ತಪಸ್ಸಿದ್ಧಿ ಪಡೆಯಲಾರದೆ ಸಂಚಾರ ಮಾಡುತ್ತಾ ಆಮ್ರಕೂಟೇಶ್ವರನ ಬಳಿಗೆ ಬಂದರು. ಈ ಲಿಂಗದರ್ಶನದಿಂದ ಏನೋ ಅವರ್ಣನೀಯವಾದ ಸಂತೋಷವಾದುದನ್ನು ಕಂಡು ಅವರೆಲ್ಲರೂ ಅತಿ ರುದ್ರ ಮಹಾರುದ್ರ ಲಘುರುದ್ರಾದಿ* ಕ್ರಮದಿಂದ ಕಾಲತ್ರಯದಲ್ಲೂ ಆರಾಧಿಸಿದರು. ಅಷ್ಟರಲ್ಲೇ ದುರ್ಮುಖನೆಂಬ ಅಸುರ ವ್ಯಾಘ್ರರೂಪದಿಂದ ಬಂದು ಅವರ ಆರಾಧನೆಗೆ ಅಡಚಣೆ ಮಾಡಿದ. ಆಗ ಆಮ್ರಕೂಟೇಶ್ವರ ಪ್ರತ್ಯಕ್ಷನಾಗಿ ಶೂಲದಿಂದ ಅಸುರನ ಶಿರಚ್ಛೇದ ಮಾಡಿ ಅವರಿಗೆ ಅಭಯಕೊಟ್ಟು ತಪಸ್ಸಿದ್ಧಿಯನ್ನೂ ಕರುಣಿಸಿದ. ಈ ಆಮ್ರಕೂಟ ಕ್ಷೇತ್ರ ಇಂಥಾ ಮಹಿಮೋಪೇತವಾದುದು.

ಅಧ್ಯಾಯ 67 ರಂಗನಾಥನ ಪ್ರಾದುರ್ಭಾವ

[ಆನೆಗುಂದಿಯೇ ಪುರಾಣೋಕ್ತವಾದ ಕಿಷ್ಕಿಂಧೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಏಕೆಂದರೆ ನಾವು ಅಲ್ಲಲ್ಲೇ ತೋರಿಸಿರುವಂತೆ ಸುತ್ತಮುತ್ತಿನ ಸ್ಥಳಗಳ ವರ್ಣನೆಯಿಂದ ಇದು ನಿರ್ವಿವಾದವಾಗಿ ಸಿದ್ಧವಾಗುತ್ತದೆ; ಪಂಪಾಸರೋವರ ಅಂಜನಾದ್ರಿ ತಾರಾಪರ್ವತ ಕಪಿಲಾಶ್ರಮ ಇತ್ಯಾದಿ ಸ್ಥಳಗಳ ಮುಖಟಿಪ್ಪಣಿ ಓದಿ ನೋಡಿ.

ಆನೆಗುಂದಿಗೆ ರಂಗನಾಥನೇ ನಗರ ದೇವತೆ ಎನ್ನಬಹುದು. ಈ ಊರಲ್ಲಿರುವ ದೇವಾಲಯಗಳಲ್ಲೆಲ್ಲಾ ಇದೇ ಪ್ರಾಮುಖ್ಯತೆಯುಳ್ಳದ್ದು. ಆದರೆ ಈ ಮೂರ್ತಿ ರಂಗನಾಥನೆಂದೂ

---

* ರುದ್ರಾಧ್ಯಾಯ ೧೧ ವರ್ಗ ಇದೆ. ಇವನ್ನು ೧೧ ಸಲ ಸಂಪೂರ್ಣವಾಗಿ ಪಠಿಸಿದರೆ ಲಘು ರುದ್ರ ಆಗುತ್ತದೆ. ೧೧ ಲಘುರುದ್ರಗಳಿಗೆ ಒಂದು ಮಹಾರುದ್ರ. ೧೧ ಮಹಾರುದ್ರಗಳಾದರೆ ಒಂದು ಅತಿರುದ್ರ.

ಗವಿರಂಗನಾಥನೆಂದೂ ಎರಡು ಹೆಸರಿನಿಂದ ಎರಡು ಸ್ಥಳಗಳಲ್ಲಿ ಪೂಜಿಸಲ್ಪಡುತ್ತಿದೆ. ರಂಗನಾಥನ ದೇವಾಲಯ ಊರಿಗೆ ವಾಯುವ್ಯಮೂಲೆಯಲ್ಲಿ ಬಸ್ ನಿಲ್ದಾಣಕ್ಕೆ ಎದುರಿಗಿದೆ. ಇಲ್ಲಿರುವ ಮೂರ್ತಿ ಮೊದಲು ಊರ ಹೊರಗೆ ಬೆಟ್ಟದ ಮೇಲೆ ಒಂದು ಗುಹೆಯ ಒಳಗಿತ್ತೆಂದೂ, ಹಿಂದೆ ಪಾಳೆಯ ರಾಜರಿಗೆ ಸ್ವಪ್ನವಾಗಿ ಅವರು ಆ ಮೂರ್ತಿಯನ್ನು ಊರಿಗೆ ತಂದು ಪ್ರತಿಷ್ಠೆಮಾಡಿದ ರೆಂದೂ ಪ್ರತೀತಿಯಿದೆ. ಪ್ರತೀತಿ ಮಾತ್ರವಲ್ಲ; ಪ್ರತಿವರ್ಷ ನಡೆಯುವ ರಥೋತ್ಸವ (ಜಾತ್ರೆ) ಅದ್ಯಾಪಿ ಈ ಗುಡ್ಡದ ಮೇಲೆಯೇ ನಡೆಯುತ್ತಿವೆ; ಅನೂಚಾನವಾಗಿ ನಡೆದು ಬಂದಿರುವ ಪ್ರಾಚೀನ ಸಂಪ್ರದಾಯ ರೂಪವಾದ ಈ ರೂಢಿಯೇ ಇದಕ್ಕೆ ಪ್ರಮಾಣವಾಗಿವೆ. ಗುಡ್ಡದ ದೇವರಿಗೇ **ಗವಿರಂಗನಾಥ** ನೆಂದು ಹೆಸರು.

ಗವಿರಂಗನಾಥನ ಗುಡಿ ಊರಿಂದ ಸುಮಾರು ಮುಕ್ಕಾಲು ಮೈಲಿ ದೂರದಲ್ಲಿ ಪಂಪಾ ಸರೋವರಕ್ಕೆ ಹೋಗುವ ದಾರಿಯಲ್ಲಿ ವಾಲಿಭಂಡಾರಕ್ಕೆ ಹತ್ತಿರ ಒಂದು ಗುಡ್ಡದ ಮೇಲ್ಭಾಗ ದಲ್ಲಿದೆ. ಅಲ್ಲಿರುವ ಒಂದು ಗುಹೆಯಲ್ಲಿ ಸುಮಾರು ೩೦–೩೫ ಅಡಿ ಒಳಕ್ಕೆ ತೂರಿಕೊಂಡು ಹೋದರೆ ರಂಗನಾಥನಿದ್ದ ಮೂಲಸ್ಥಳ ಕಾಣಿಸುತ್ತದೆ; ಬಹಳ ದುರ್ಗಮವಾದ ಸ್ಥಳ. ಆದರೆ ಇಲ್ಲಿ ರಂಗನಾಥನ ಮೂರ್ತಿಯೇ ಇಲ್ಲ; ಕೇವಲ ಶ್ರೀದೇವಿ ಭೂದೇವಿಯರ ವಿಗ್ರಹಗಳು ಮಾತ್ರ ಇವೆ.

ಇನ್ನೊಂದು ವಿಶೇಷ ಏನೆಂದರೆ ಸ್ಕಾಂದ ಪುರಾಣದ ಪ್ರಕಾರ ರಂಗನಾಥ ಶಿವನ ಮೂರ್ತಿ. ಆದರೆ ಈಗಿರುವುದು ವಿಷ್ಣು ಮೂರ್ತಿ; ಇದರ ಪೂಜೆ ಮಾಡುವ ಅರ್ಚಕರು ವೈಖಾನಸರು. ಯುಗ ಯುಗಾಂತರಗಳಲ್ಲಿ ಏನೇನು ಮಾರ್ಪಾಟುಗಳಾಗಿವೆಯೋ ಹೇಳುವುದು ಕಷ್ಟ—ವಿ. ಶಿ.]

ಕಿಷ್ಕಿಂಧಾ ನಿರ್ಮಾಣ—ಸಪ್ತರ್ಷಿಗಳು ಆಮ್ರಕೂಟೇಶ್ವರನ ದರ್ಶನ ಮಾಡಿಕೊಂಡು ಮುಂದೆ ಬರಲು ಅವರಿಗೆ ದಿವ್ಯವಾದ ಪ್ರಾಕಾರಗೋಪುರಸ್ಫಾರಪರಿಖಾಗಳಿಂದ* ಅಲಂಕೃತವಾದ ಕೌತುಕಾಸ್ಪದವಾದ ಕಿಷ್ಕಿಂಧಾ ನಗರವೂ ಅದರ ಮಧ್ಯೆ ಎಲ್ಲಕ್ಕಿಂತಲೂ ಎತ್ತರವಾಗಿ ಪರಿಶೋಭಿಸುತ್ತಿದ್ದ ರಂಗನಾಥ ದೇವಾಲಯದ ಗೋಪುರವೂ ಕಣ್ಣಿಗೆ ಗೋಚರವಾದುವು. ಕ್ಷೇತ್ರಪಾಲ ಅವರೆಡರ ಇತಿಹಾಸವನ್ನೂ ಈ ರೀತಿ ವರ್ಣಿಸಿದ.

ಹಿಂದೆ ಅಹಲ್ಯೆಯ[1] ಮಕ್ಕಳಾದ ವಾಲಿ ಸುಗ್ರೀವರು ತೀರ್ಥದ[2] ಮಹಿಮೆಯಿಂದ ವಾನರರಾಗಿ ಹುಟ್ಟಿ ಹಸಿವು ಬಾಯಾರಿಕೆಗಳಿಂದ ಬಳಲಿ ಬಳಲಿ ತಾಯಿಯ ಮಾತಿನ ಪ್ರಕಾರ ಕಾಡು ಕಾಡು ಅಲೆಯುತ್ತಿದ್ದರು. ಒಂದು ದಿನ ಅವರು ಸುರತಾಪಸರಾದ ನಾರದರನ್ನು ಕಂಡು 'ನಮ್ಮನ್ನು ಕಾಪಾಡಿ' ಎಂದು ಹೇಳಿಕೊಂಡು ದಂಡವತ್ ಪ್ರಣಾಮ ಮಾಡಿದರು. ನಾರದರು 'ನೀವು ತೀರ್ಥದ ಮಹಿಮೆಯಿಂದ ಹುಟ್ಟಿರುವ

---

* ಪ್ರಾಕಾರ =ಕೋಟೆ, ಸ್ಫಾರ = ಬುರುಜುಗಳು. ಪರಿಖಾ= ಕಂದಕ.

1 ಇವಳು ಗೌತಮರ ಪತ್ನಿ ಅಹಲ್ಯೆ ಇರಲಾರಳು; ನಾಗಗಳ ಶಾಪದಿಂದ ಕಪಿತ್ವ ಹೊಂದಿದ ಒಬ್ಬ ಅಪ್ಸರೆ ಇರಬೇಕು. 60ನೇ ಅಧ್ಯಾಯ ನೋಡಿ. 2 ಯಾವ ತೀರ್ಥವೋ ಹೆಸರು ಗೊತ್ತಿಲ್ಲ.



ಗವಿರಂಗನಾಥ, ಸುಖದುಃಖಾರೋಹಣ ಪರ್ವತ (ಪುಟ 81–2)



ಕಪಿಲಾಶ್ರಮ, ಕಪಿಲತೀರ್ಥ (ಪುಟ 94–5)

ಶಕ್ರ-ಸೂರ್ಯರ ಮಕ್ಕಳೆಂದು ಹೇಳಿ ಅವರಿಗೆ ಷಿರೂಪಾಕ್ಷ ಮಂತ್ರೋಪದೇಶ ಮಾಡಿ ಅದನ್ನು ಜಪಿಸಿದರೆ ಶಿವಪ್ರಸಾದದಿಂದ ಸುಖಿನಾಗುವುದೆಂದು ತಿಳಿಸಿ ಹೊರಟು ಹೋದರು.

ಅತ್ತಲಾಗಿ ವಾಲಿಸುಗ್ರೀವರು ಕಠೋರ ತಪಸ್ಸುಮಾಡಿ ಉಮಾಧವನನ್ನು ಪ್ರತ್ಯಕ್ಷೀಕರಿಸಿಕೊಂಡರು. ಅವನು ಅವರಿಗೆ ವರವನ್ನು ಅನುಗ್ರಹಿಸಿ ಅವರಿಗಾಗಿ ದಿವ್ಯವಾದ ಒಂದು ನಗರ ಕಟ್ಟಿ ಕೊಡುವಂತೆ ವಿಶ್ವಕರ್ಮನಿಗೆ ಆಜ್ಞಾಪಿಸಿ ಹೋದ. ವಿಶ್ವಕರ್ಮ ಈ ಕಿಷ್ಕಿಂಧಾ ನಗರವನ್ನು ರಚಿಸಿ ವಾಲಿಯನ್ನು ಸಿಂಹಾಸನದ ಮೇಲೆ ಕೂಡಿಸಿ ಪಟ್ಟಗಟ್ಟಿ ಹಿಂದಿರುಗಿದ. ಸುಗ್ರೀವ ಯುವರಾಜನಾಗಿ ಹನುಮಂತ ನಲ ನೀಲಾದಿ ಕಪಿವರ್ಯರೊಡನೆ ಅಣ್ಣನಿಗೆ ಒಪ್ಪಿಗೆಯಾಗಿದ್ದ.

ದುಂದುಭಿಯೊಡನೆ ಯುದ್ಧ—ಹೀಗಿರಲು ಒಂದು ಸಲ **ದುಂದುಭಿ** ಎಂಬ ದೈತ್ಯನು ವಾಲಿಯೊಡನೆ ಯುದ್ಧಮಾಡಬೇಕೆಂದು ಬಯಸಿ ಕಿಷ್ಕಿಂಧೆಯ ಬಳಿಗೆ ಬಂದು ಗರ್ಜಿಸಿದ. ಇಬ್ಬರಿಗೂ ಭಯಂಕರವಾದ ಯುದ್ಧಾರಂಭವಾಯಿತು; ಇಬ್ಬರೂ ಮುಷ್ಟಿಗಳಿಂದಲೂ ನಖದಂತಗಳಿಂದಲೂ ಬೆಟ್ಟ ಗುಡ್ಡಗಳಿಂದಲೂ ಹೊಡೆದಾಡಿದರು. ಕಡೆಗೆ ವಾಲಿಯ ಹೊಡೆತ ಸೈರಿಸಲಾರದೆ ದುಂದುಭಿ ಒಂದು ಗುಹೆಯೊಳಗೆ* ನುಗ್ಗಿ ಅಡಗಿಕೊಂಡನು. ಅದನ್ನು ಕಂಡು ವಾಲಿ ಸುಗ್ರೀವನನ್ನು ಗುಹೆ ದ್ವಾರದಲ್ಲಿ ನಿಲ್ಲಿಸಿ ತಾನು ಆ ದೈತ್ಯನನ್ನು ಅಟ್ಟಿಸಿಕೊಂಡು ಗುಹೆಯೊಳಕ್ಕೇ ನುಗ್ಗಿ ಹೋದನು. ಒಂದು ತಿಂಗಳಾದರೂ ಯಾವ ಸಮಾಚಾರವೂ ತಿಳಿಯಲಿಲ್ಲ. ಒಂದು ದಿನ ಇದ್ದಕ್ಕಿದ್ದಹಾಗೆ ಗುಹೆಯೊಳಗಿಂದ ರಕ್ತ ಪ್ರವಾಹ ಹರಿದು ಬಂತು.

ಸಹೋದರರ ಕಲಹ—ಅದನ್ನು ಕಂಡು ವಾಲಿಯೇ ರಾಕ್ಷಸನಿಂದ ಹತನಾಗಿರಬೇಕೆಂದು ಭಾವಿಸಿಕೊಂಡು ಮುಂದೆ ಆ ರಾಕ್ಷಸ ಹೊರಗೆ ಬಾರದಂತೆ ಒಂದು ಭಾರಿ ಬಂಡೆಯನ್ನು ಆ ಗುಹೆಯ ಬಾಗಲಿಗೆ ಅನಿಸಿಟ್ಟು ಸುಗ್ರೀವ ಕಿಷ್ಕಿಂಧೆಗೆ ಹಿಂದಿರುಗಿದ; ಮಂತ್ರಿಗಳು ಅವನಿಗೇ ಪಟ್ಟಗಟ್ಟಿದರು. ಅಷ್ಟರಲ್ಲಿ ವಾಲಿ ದುಂದುಭಿಯನ್ನು ಕೊಂದು ಗುಹಾದ್ವಾರಕ್ಕೆ ಬಂದು ಮುಚ್ಚಿದ ಬಂಡೆಯನ್ನು ಕಿತ್ತೆಸೆದು ಕಿಷ್ಕಿಂಧೆಗೆ ಬಂದು ಸುಗ್ರೀವ ರಾಜನಾಗಿರುವುದನ್ನು ನೋಡಿದನು.

ಸುಗ್ರೀವನ ಭ್ರಾತೃದ್ರೋಹ ಕಂಡು ವಾಲಿಗೆ ಕೋಪ ಉಕ್ಕೇರಿತು. ಅವನು ಕ್ಷಣಮಾತ್ರದಲ್ಲಿ ಸುಗ್ರೀವನನ್ನು ನಗರದಿಂದ ಹೊರಕ್ಕೆ ಹೊರಡಿಸಿಬಿಟ್ಟ. ಆಗ ಸುಗ್ರೀವ ಋಶ್ಯಮೂಕ ಸೇರಿ ಅಣ್ಣನ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ ಸಮಯ ಹೊಂಚು ಹಾಕುತ್ತಿದ್ದ. ಹಾಗೆಯೇ ರಾಮನ ಸಹಾಯದಿಂದ ವಾಲಿಯನ್ನು ಕೊಂದು ತಾನೇ ಕಪಿರಾಜನಾದುದೂ ರಾಮನಿಗೆ ಸಹಾಯ ಮಾಡಿ ಅವನೊಡನೆ ಅಯೋಧ್ಯೆಗೆ ಪಟ್ಟಾಭಿಷೇಕಕ್ಕೆ ಹೋದುದು ಪ್ರಸಿದ್ಧವಾದ ಸಂಗತಿಯಷ್ಟೆ.

---

* ಈ ಗುಹೆಯು ಆನೆಗುಂದಿಗೆ ಸ್ವಲ್ಪ ದೂರದಲ್ಲಿದೆಯಂತೆ.

ಪಟ್ಟಾಭಿಷೇಕ ಮುಗಿಸಿಕೊಂಡು ಹಿಂದಿರುಗುವಾಗ ಸುಗ್ರೀವ ರಾಮನನ್ನು 'ನಾನು ಅಸಹಾಯನಾಗಿ ಹೇಗೆ ರಾಜ್ಯಭಾರ ಮಾಡಲಿ ? ದಂಡಕಾರಣ್ಯದಲ್ಲಿ ಅನೇಕ ದುಷ್ಟರಾಕ್ಷಸರಿದ್ದಾರೆ. ಈತಿ ಬಾಧೆಗಳ[1] ತೊಂದರೆ ಬೇರೆ. ಇವುಗಳೆಲ್ಲಾ ಇರುವಾಗ ನನಗೆ ಸುಖ ಹೇಗೆ ಲಭಿಸುತ್ತದೆ ?' ಎಂದು ಕೇಳಿದ. ಅದಕ್ಕೆ ರಾಮ ಅಭಯ ಕೊಟ್ಟು 'ಹೆದರಬೇಡ, ಪಂಪಾವತಿಯಾದ ವಿರೂಪಾಕ್ಷನನ್ನು ಆರಾಧಿಸು. ಅದ ರಿಂದ ಕ್ಷೇಮವಾಗುತ್ತದೆ' ಎಂದು ಹೇಳಿ ಕಳುಹಿಸಿಕೊಟ್ಟ. ಅದರಂತೆ ಸುಗ್ರೀವ ವಿರೂಪಾಕ್ಷನ ದಯದಿಂದ ಹತ್ತು ಸಾವಿರ ವರ್ಷ ನಿಷ್ಕಂಟಕವಾಗಿ ರಾಜ್ಯಭಾರ ಮಾಡಿದ.

ಮಹೋಗ್ರನ ಯುದ್ಧ—ರಾಮ, ಪರಂಧಾಮಕ್ಕೆ ಹೊರಟು ಹೋದ ಬಳಿಕ ಕುಂಭಕರ್ಣನ ಮಗನಾದ ಮಹೋಗ್ರ[2] ತನ್ನ ತಂದೆಯನ್ನು ಕೊಂದು ಹಾಕಿದ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ಸುಗ್ರೀವನ ಮೇಲೆ[3] ದಂಡೆತ್ತಿ ಬಂದು ಯುದ್ಧಕ್ಕೆ ಆರಂಭಮಾಡಿದ. ಭಯಂಕರ ಯುದ್ಧ ನಡೆಯಿತು. ಒಂದು ಕಡೆ ಜರಾ ಜರ್ಜರಿತಕಾಯನೂ ಇನ್ನೊಂದು ಕಡೆ ರಾಮಚಿಂತಾಶಿಥಿಲೇಂದ್ರಿಯನೂ ಆಗಿ ಸುಗ್ರೀವ ಬೇರೆ ದಿಕ್ಕುಗಾಣದೆ, ರಾಮನ ಮಾತನ್ನು ನೆನೆಸಿಕೊಂಡು, ಅನನ್ಯಭಾವ ದಿಂದ ಶಿವಧ್ಯಾನ ಮಾಡುತ್ತಾ ನಿಂತುಬಿಟ್ಟ. ಆ ಸಮಯವನ್ನೇ ಕಾಯುತ್ತಿದ್ದ ಮಹೋಗ್ರ ಖಡ್ಗಧಾರಿಯಾಗಿ ಸುಗ್ರೀವನನ್ನು ಕೊಲ್ಲಲು ಮುನ್ನುಗ್ಗಿ ಬಂದ.

ರಂಗನಾಥನ ಪ್ರಾದುರ್ಭಾವ—ಇಂತಹ ಉತ್ಕಟ ಪರಿಸ್ಥಿಯನ್ನು ಕಂಡು ಕರುಣಾಕರನಾದ ಶಂಕರ ಧನುರ್ಬಾಣಧಾರಿಯಾಗಿ ರಾಮರೂಪದಿಂದ ಆವಿರ್ಭವಿಸಿ ದೈತ್ಯೇಂದ್ರನಾದ ಮಹೋಗ್ರನನ್ನು ತಡೆಗಟ್ಟಿ ಎದುರಿಸಿ ನಿಂತು 'ರೇ ರೇ ರಾಕ್ಷಸ, ದುರ್ಮತೇ ! ನನ್ನ ಭಕ್ತನನ್ನು ಹಿಂಸಿಸುವೆಯಾ ? ನಿನ್ನನ್ನೇ ಕೊಲ್ಲುವೆನು, ತಡಿ' ಎಂದು ಗರ್ಜಿಸಿದ.

ಅತ್ತಲಾಗಿ ರಾಮರೂಪವನ್ನು ಕಂಡೊಡನೆಯೇ ಮಹೋಗ್ರನಿಗೆ ತನ್ನ ತಂದೆಯ ಮಾತು ನೆನಪಿಗೆ ಬಂತು. ಅವನು ಭಕ್ತಿಭಾವದಿಂದ ರಾಮನನ್ನು ಸ್ತುತಿಸಿ 'ರಾಮ ರಮಾಕಾಂತ. ಈ ಅಸುರ ಜನ್ಮದಿಂದ ನನ್ನನ್ನು ಮುಕ್ತಮಾಡಿ ಉದ್ಧರಿಸು. ನಿನ್ನ ದರ್ಶನವಾಗಲೆಂದೇ ನಾನು ಈ ವಾನರನ ಮೇಲೆ ಯುದ್ಧಕ್ಕೆ ಬಂದೆ'ಎಂದು ಹೇಳುತ್ತಾ ಅವನ ಮೇಲೆ ನಿಶಿತಾಸ್ತ್ರಪ್ರಯೋಗ ಮಾಡಿದ. ರಾಮರೂಪಧಾರಿಯಾದ ಶಿವ ಸ್ವಲ್ಪ

---

1 ಇಲಿ-ಹೆಗ್ಗಣ. ಅತಿವೃಷ್ಟಿ ಅನಾವೃಷ್ಟಿ ಇತ್ಯಾದಿಗಳ ಕಾಟಕ್ಕೆ ಈತಿಬಾಧೆಯೆಂದು ಹೆಸರು

2 ಮಹಾ-ಉಗ್ರ,

3 ವಾಲ್ಮೀಕಿ ರಾಮಾಯಣದಲ್ಲಿ ಮಹೋಗ್ರನ ಹೆಸರೇ ಇಲ್ಲ. ಅದೂ ಅಲ್ಲದೆ ವಾಲ್ಮೀಕಿ ರಾಮಾಯಣದಲ್ಲಿ ಸುಗ್ರೀವ ರಾಮನ ಜೊತೆಯಲ್ಲೇ ಪರಂಧಾಮಕ್ಕೆ ಹೋದಂತೆ ವರ್ಣಿಸಿದೆ.

ಹೊತ್ತು ಅವನೊಡನೆ ಯುದ್ಧ ಮಾಡಿ ಕಡೆಗೆ ಅವನನ್ನು ತೀಕ್ಷ್ಣಬಾಣದಿಂದ ಸಂಹಾರ ಮಾಡಿದ. ಒಡನೆಯೇ ಆ ದೈತ್ಯನ ದೇಹದಿಂದ ಒಂದು ದಿವ್ಯ ತೇಜಸ್ಸು ಹೊರ ಹೊರಟು ರಾಮಪಾದಾರವಿಂದವನ್ನು ಸೇರಿತು.

ಸುಗ್ರೀವನಿಗೆ ಅನುಗ್ರಹ—ಇದನ್ನೆಲ್ಲಾ ಕಂಡು ಸುಗ್ರೀವ ಪರಮಾಶ್ಚರ್ಯ ಭರಿತನಾಗಿ ದಂಡವತ್ಪ್ರಣಾಮ ಮಾಡಿ 'ದೇವ, ಕಾರುಣ್ಯಸಿಂಧುವಾದ ನಿನ್ನಿಂದ ನಾನು ರಕ್ಷಿತನಾದೆ. ನೀನು ಯುದ್ಧ ರಂಗದಲ್ಲಿ ನನಗೆ ಕಾಣಿಸಿಕೊಂಡೆಯಾದ್ದರಿಂದ ನಾನು ನಿನ್ನನ್ನು ರಂಗೇಶ[1]ನೆಂದೇ ಭಜಿಸುತ್ತೇನೆ. ಆದರೆ ನೀನು ರಾಮನೋ ಶಿವನೋ ನನಗೆ ನಿರ್ಣಯವಾಗಿಲ್ಲ. ನಾನು ಶಿವಧ್ಯಾನಮಾಡಿದೆ. ಆದರೆ ರಾಮ ಕಾಣಿಸಿಕೊಂಡಿದ್ದಾನೆ. ಇದರ ನಿಜವಾದ ತತ್ತ್ವವೇನಿರಬಹುದು?' ಎಂದು ಸಂಶಯಗ್ರಸ್ತನಾಗಿಯೇ ಬೇಡಿಕೊಂಡ. ಅವನ ಸಂದೇಹ ನಿವೃತ್ತಿಗಾಗಿ ಶಂಭು ಸುಗ್ರೀವನಿಗೆ 'ವತ್ಸ, ನಾನು ಭಕ್ತರ ಚಿತ್ತಾನುಸಾರ ಕಾಣಿಸಿಕೊಳ್ಳುತ್ತೇನೆ.

ಭಕ್ತಚಿತ್ತಾನುಸಾರೇಣ ವರ್ತೇಽಹಂ ಪ್ರೀತಿಪೂರ್ವಕಂ ॥

ನೀನು ರಾಮನ ಮೇಲಿನ ಪ್ರೀತಿಯಿಂದ ಅವನನ್ನೇ ಧ್ಯಾನಿಸುತ್ತಿದ್ದುದರಿಂದ ಆ ರೂಪದಿಂದಲೇ ಅಭಿವ್ಯಕ್ತನಾದೆ' ಎಂದು ಹೇಳಿದ. ಅದನ್ನು ಕೇಳಿ ಸುಗ್ರೀವ ವೈರಾಗ್ಯ ತಾಳಿ ರಾಜ್ಯವನ್ನು ಅಂಗದನಿಗೊಪ್ಪಿಸಿ ರಂಗೇಶನನ್ನು ಆರಾಧಿಸಿ ಅವನ ಪ್ರಸಾದದಿಂದ ದುರ್ಲಭವಾದ ಕೈವಲ್ಯವನ್ನು ಪಡೆದ.

ಸಪ್ತರ್ಷಿಗಳು ಆ ರಂಗನಾಥನ ದರ್ಶನ ಮಾಡಿಕೊಂಡು ಅದಕ್ಕೆ ಪಶ್ಚಿಮದಲ್ಲಿರುವ ಪುಷ್ಕರತೀರ್ಥಕ್ಕೆ ಬಂದರು.

ಅಧ್ಯಾಯ 68 ಪುಷ್ಕರ ತೀರ್ಥ

[67 ಅಧ್ಯಾಯದ ಕಡೆಯಲ್ಲಿ ಸೂಚಿಸಿರುವುದನ್ನು ನೋಡಿದರೆ ಈ ತೀರ್ಥ ಗವಿ ರಂಗನಾಥನ ಗುಡ್ಡಕ್ಕೆ ಮುಂಭಾಗದಲ್ಲಿ; ಎಲ್ಲೋ ಒಂದು ಕಡೆ ಇರಬೇಕೆಂದು ಗೊತ್ತಾಗುತ್ತದೆ. ಅಲ್ಲಿರುವ 2-3 ಸಣ್ಣ ಸಣ್ಣ ತೀರ್ಥಗಳಲ್ಲಿ ಪುಷ್ಕರ ತೀರ್ಥವೆಂದು ಯಾವುದಕ್ಕೆ ಹೆಸರಿತ್ತೋ ತಿಳಿಯುವ ಹಾಗಿಲ್ಲ—ವೀ. ತೀ.]

ದೇವಲನ ಸಾಹಸ—ಹಿಂದೆ ಶಾಂತಿ ಪಟ್ಟಣದಲ್ಲಿ ದೇವಲನೆಂಬ ಒಬ್ಬ ಕ್ಷತ್ರಿಯ ಕುಮಾರನಿದ್ದ. ಅವನ ಮಾತಾಪಿತೃಗಳು ಶೈಶವದಲ್ಲೇ ತೀರಿಕೊಂಡದ್ದರಿಂದ ಭಾಸ್ಕರ ನೆಂಬ ಒಬ್ಬ ಬ್ರಾಹ್ಮಣ ತನ್ನ ಮಕ್ಕಳ ಜೊತೆಯಲ್ಲೇ ಈ ಅನಾಥ ಬಾಲಕನನ್ನೂ ಸಲಹುತ್ತಿದ್ದ. ಒಂದು ದಿನ ದೇವಲ ತನ್ನ ಮಿತ್ರರೊಡನೆ ಆಡುತ್ತಿದ್ದಾಗ ಒಬ್ಬ ಹುಡುಗ ದೇವಲನನ್ನು ಗೇಲಿಮಾಡುತ್ತಾ 'ರಾಜ್ಯವಾಳಲಿಲ್ಲ, ದಾನ ಕೊಡಲಿಲ್ಲ. ನೀನೆಂಥ ಕ್ಷತ್ರಿಯನೋ? ನಿನ್ನ ಪೌರುಷವೆಲ್ಲ ಆಡುವುದರಲ್ಲೂ ದವ

1 ರಂಗ + ಈಶ; ಯುದ್ಧರಂಗದಲ್ಲಿ ಕಾಣಿಸಿಕೊಂಡ ಈಶ್ವರ ಅಥವಾ ನಾಥ. ಈಶ ಎಂದರೂ ಸ್ವಾಮಿ, ಒಡೆಯ ಎಂದೇ ಅರ್ಥ.

ಕಾಪಾಡುವುದರಲ್ಲೂ ಕೊನೆಗಂಡಿತು. ಅದೋ ನೋಡು. ಆ ಶರಭ ನಮ್ಮ ಮೇಲೆ ಬೀಳುವುದಕ್ಕೆ ಬರುತ್ತಿದೆ. ಎಲ್ಲಿ ನೋಡೋಣ, ಅದನ್ನು ಕೊಂದು ನಮ್ಮನ್ನು ರಕ್ಷಿಸು' ಎಂದನು.

ಆ ಮಾತನ್ನು ಕೇಳಿದ ದೇವಲ ಭಲ್ಲೆ ಹಿಡಿದು ಕಿಚ್ಚಿನಿಂದ ಮೈಮರೆತು ಮುಂದೇನಾಗುವುದೆಂಬುದನ್ನೂ ಸಹ ಲಕ್ಷಿಸದೆ ಶರಭನ ಮೇಲೆ ಬಿದ್ದೇ ಬಿಟ್ಟ. ಬಾಲಕರಿಬ್ಬರೂ ಭಯಪಟ್ಟು ದಿಕ್ಕುಪಾಲಾಗಿ ಪಲಾಯನ ಮಾಡಿದರು. ಅದೇ ಸಮಯದಲ್ಲೇ ಪಾಂಡ್ಯ ದೇಶಾಧಿಪತಿಯಾದ ಸುವೀರ ಬೇಟೆಯಾಡುತ್ತಾ ಅನೇಕ ದುಷ್ಟ ಮೃಗಗಳನ್ನು ಕೊಂದು ಕೊಳ್ಳುತ್ತಾ ಕಾಡಿಂದ ಕಾಡಿಗೆ ಅಲೆಯುತ್ತಾ ಈ ವನಕ್ಕೇ ಬಂದು ಆ ಶಾರ್ದೂಲವನ್ನೇ ಬೆನ್ನಟ್ಟಿ ಬರುತ್ತಿದ್ದ. ಅಷ್ಟರಲ್ಲೇ ಹಿಂದೆ ಹೇಳಿದಂತೆ, ದೇವಲ ಅದರೊಡನೆ ಯುದ್ಧಕ್ಕೆ ನಿಂತು ಹೊಡೆದಾಡಿ ಕಡೆಗೆ ಭಲ್ಲೆಯಿಂದ ಅದರ ಕಂಠವನ್ನೇ ತಿವಿದು ಬಿಟ್ಟ. ಅವನ ಸಾಹಸ ಕಂಡು ಸುವೀರ ಬಹಳ ಮೆಚ್ಚಿಕೊಂಡ.

ದೇವಲನಿಗೆ ಭಾಗ್ಯೋದಯ—ಸುವೀರನಿಗೆ ಮಕ್ಕಳೇ ಇಲ್ಲದೆ ಬಹಳ ಚಿಂತೆಯಾಗಿತ್ತು. ದೇವಲನ ಸಾಹಸಕ್ಕೆ ಮೆಚ್ಚಿ ಅವನ ಪೂರ್ವೋತ್ತರಗಳನ್ನೆಲ್ಲಾ ವಿಚಾರಿಸಿ ಬಹಳ ಸಂತೋಷಪಟ್ಟು ಅವನನ್ನು ತನ್ನೊಡನೆಯೇ ತನ್ನ ದೇಶಕ್ಕೆ ಕರೆದುಕೊಂಡು ಹೋಗಿ ಅವನಿಗೆ ಉಪನಯನಾದಿ ಸಂಸ್ಕಾರಗಳನ್ನು ಮಾಡಿ ಕ್ಷತ್ರಿಯೋಚಿತವಾದ ವಿದ್ಯೆಗಳನ್ನೂ ಕಲಿಸಿದನು. ಸಕಾಲದಲ್ಲಿ ರೂಪವತಿಯಾದ ರಾಜಕನ್ಯೆಯನ್ನು ತಂದು ವಿವಾಹ ಮಾಡಿ ಅವನಿಗೆ ತನ್ನ ರಾಜ್ಯವನ್ನೂ ಒಪ್ಪಿಸಿ ತಾನು ತಪೋವನಕ್ಕೆ ತೆರಳಿದ.

ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿದ ಎಂಬ ಗಾದೆಗೆ ತಕ್ಕಂತೆ ದೇವಲನಿಗೆ ದೈವಯೋಗದಿಂದ ದೊರೆತ ಈ ಭಾಗ್ಯದಿಂದ ಮಹಾ ಹೆಮ್ಮೆ ಬಂದು ಬಿಟ್ಟಿತು. ಅವನು ತಾನು ಮಹಾಧೀರನೆಂದೂ ಭಾಗ್ಯವಂತನೆಂದೂ ಅಟ್ಟಹಾಸದಿಂದ ಮೆರೆಯುತ್ತಾ ದೇವ ಗುರು ಬ್ರಾಹ್ಮಣರಿಗೂ ಸಹ ತಲೆ ಬಾಗುವುದನ್ನೇ ಬಿಟ್ಟು ಬಿಟ್ಟ.

ಅಹಂಕಾರಕ್ಕೆ ತಕ್ಕ ಪ್ರಾಯಶ್ಚಿತ್ತ ಒಂದು ದಿನ ಅವನ ಬಳಿಗೆ ಪ್ರಜ್ಞಾನಿಧಿ ಎಂಬ ಮುನಿಗಳು ಬಂದರೂ ಭಾಗ್ಯಮದೋನ್ಮತ್ತನಾದ ದೇವಲ ಅವರಿಗೆ ಅಭ್ಯುತ್ಥಾನಾದಿಗಳನ್ನು ಮಾಡದೆ ಅಸಡ್ಡೆ ತೋರಿಸಿದ. ಕುಪಿತರಾದ ಮುನಿಗಳು 'ಆನೆಯಾಗಿ ಕಾಡು ಕಾಡು ಸುತ್ತುತ್ತಿರು' ಎಂದು ಅವನಿಗೆ ಶಾಪಕೊಟ್ಟರು. ಶಾಪದಂತೆ ದೇವಲ ರಾಜ್ಯಭ್ರಷ್ಟನಾಗಿ ಆನೆಯಾಗಿ ಕಾಡು ಕಾಡು ಸುತ್ತಲಾರಂಭಿಸಿ ಕಾಲಾಂತರದಲ್ಲಿ ಪಂಪಾಕ್ಷೇತ್ರಕ್ಕೆ ಬಂದು ರಂಗನಾಥನ ಗುಡಿಯ ಹತ್ತಿರಕ್ಕೂ ಬಂದು ಸೇರಿದ.

ಅದೇ ಸಮಯದಲ್ಲಿ ಸನಕಾದಿ ಮುನಿಗಳು ಫಲಪುಷ್ಪಾದಿ ಪೂಜಾಸಾಮಗ್ರಿಗಳನ್ನು ಅಣಿಮಾಡಿಟ್ಟುಕೊಂಡು ಗುಹೆಯ ಒಳಭಾಗದಲ್ಲಿ ಪೂಜೆಮಾಡುತ್ತಾ

ಕುಳಿತಿದ್ದರು. ಚೇಷ್ಟಾಪ್ರಿಯವಾದ ಆನೆಗೆ ಆ ಗುಹೆಯ ಒಳಗೆ ಪ್ರವೇಶಿಸುವುದಕ್ಕೆ ಆಗದಿದ್ದರಿಂದ ಅದು ಸೊಂಡಲನ್ನು ಚಾಚಿ ಪೂಜಾಸಾಮಗ್ರಿಗಳನ್ನೆಲ್ಲಾ ಚೆಲ್ಲಾಪಿಲ್ಲಿ ಮಾಡಿ ಅಲ್ಲೇ ಕಮಂಡಲದಲ್ಲಿದ್ದ ನೀರನ್ನೂ ಉರುಡಿಸಿಬಿಟ್ಟಿತು.' ಆದರೆ ಕಮಂಡಲದ ನೀರು ಆನೆಯ ಸೊಂಡಲಿಗೆ ಸ್ಪರ್ಶವಾದೊಡನೆಯೇ ಅದರ ಪ್ರವೃತ್ತಿಯೇ ಬದಲಾಯಿಸಿಹೋಯಿತು. ಆನೆ ಕೋಪವನ್ನು ಬಿಟ್ಟು ಶಾಂತಿಯನ್ನು ತಾಳಿ ನಮಸ್ಕಾರ ಮಾಡಿ ಹೊರಗಡೆಯೇ ದೈನ್ಯತೆಯಿಂದ ನಿಂತುಕೊಂಡಿತು.

ಶಾಪನಿವೃತ್ತಿ—ಸನಕಾದಿಗಳು ಈ ಆಶ್ಚರ್ಯವನ್ನು ಕಂಡು ಅವೆಲ್ಲಾ ಕಮಂಡಲದಲ್ಲಿದ್ದ ಉದಕದ ಪ್ರಭಾವವೇ ಇರಬೇಕೆಂದು ಊಹಿಸಿ ಆ ನೀರನ್ನೇ ತೆಗೆದುಕೊಂಡು ಗಜದ ಮುಖದ ಮೇಲೆ ಪ್ರೋಕ್ಷಿಸಿದರು. ತಕ್ಷಣ ಆನೆಯು ರೂಪವನ್ನು ತ್ಯಜಿಸಿ ಶಾಪಗ್ರಸ್ತನಾಗಿದ್ದ ದೇವಲ ದಿವ್ಯ ರೂಪ ಧರಿಸಿ ನಿಂತು ಸನಕಾದಿಗಳಿಗೆ ಶಾಪವಿಮೋಚನೆ ಮಾಡಿದ್ದಕ್ಕಾಗಿ ನಮಸ್ಕಾರ ಮಾಡಿ, ಸಿದ್ಧವಾಗಿ ಬಂದ ದಿವ್ಯ ವಿಮಾನವನ್ನೇರಿ ಗಂಧರ್ವಸೇವಿತನಾಗಿ ಸ್ವರ್ಗಕ್ಕೆ ಪ್ರಯಾಣ ಬೆಳೆಸಿದ.

ಹೀಗೆ ಆನೆ ತನ್ನ ಸೊಂಡಲನ್ನು ಚಾಚಿದ್ದರಿಂದ ಈ ತೀರ್ಥಕ್ಕೆ ಪುಷ್ಕರ ತೀರ್ಥ (ಪುಷ್ಕರ = ಸೊಂಡಲು) ಎಂದು ಹೆಸರಾಯಿತು. ಈ ತೀರ್ಥದಲ್ಲಿ ಶ್ರಾವಣ ಮಾಸದಲ್ಲಿ ಸ್ನಾನ ಮಾಡಿದರೆ ಸರ್ವ ಪಾಪಗಳೂ ಕ್ಷಯವಾಗಿ ಅಮೃತತ್ವವುಂಟಾಗುತ್ತದೆ.

ಅಧ್ಯಾಯ 69 ತಾರಾ ಪರ್ವತ

[ತಾರಾಪರ್ವತ ಆನೆಗುಂದಿಗೆ ಈಶಾನ್ಯ ಮೂಲೆಯ ಕಡೆ ಇದೆ. ಇದರ ಎದುರಿನಲ್ಲೇ ತುಂಗಭದ್ರೆ ಎರಡು ಸೀಳಾಗಿ ಒಡೆದು ನಡುವೆ ಇರುವ ಗುಡ್ಡವನ್ನೂ ಗದ್ದೆಯನ್ನೂ (ದ್ವೀಪವನ್ನೂ) ಸುತ್ತಿಕೊಂಡು ಹೋಗಿ ಸ್ವಲ್ಪದೂರದ ಮೇಲೆ ಪುನಃ ಸೇರಿಕೊಂಡಿದೆ. ಆದ್ದರಿಂದ ಈ ಬೆಟ್ಟವನ್ನು ಸುಲಭವಾಗಿ ಗುರುತಿಸಬಹುದು. ಗುರು ಪತ್ನಿಯಾದ ತಾರೆ ಈ ಬೆಟ್ಟದ ಮೇಲೆ ಚಂದ್ರನೊಡನೆ ರಮಿಸಿ, ಅನಂತರ ಇಲ್ಲೇ ತಪಸ್ಸು ಮಾಡಿದ್ದರಿಂದ ಈ ಬೆಟ್ಟಕ್ಕೆ ಅವಳ ಹೆಸರೇ ಬಂದಿದೆಯೆಂಬುದು ಮುಂದಿನ ಕಥಾಭಾಗದಿಂದ ಗೊತ್ತಾಗುತ್ತದೆ—ವಿ. ಶಿ.]

ಪಾಂಸುಲೆಯಾದ ತಾರಾ—ಬೃಹಸ್ಪತಿಯ ಪತ್ನಿಯಾದ ತಾರೆ ಚಂದ್ರನಿಗೆ ಮೋಹಿತಳಾಗಿ ಅವನೊಡನೆ ವ್ಯಭಿಚಾರ ನಡೆಸಿದಳು; ಅವನಿಂದ ಗರ್ಭಧಾರಣೆಮಾಡಿ ಬುಧನನ್ನು ಪ್ರಸವಿಸಿದಳು. ಈ ಸಮಾಚಾರ ಕೇಳಿ ಗುರು ಇಂದ್ರನ ಸಹಾಯದಿಂದ ಚಂದ್ರನೊಡನೆ ಯುದ್ಧಮಾಡಿದ. ಆದರೆ ಚಂದ್ರ ಗುರುವನ್ನು ಜಯಿಸಿ ತಾರೆಯನ್ನೂ ಬುಧನನ್ನೂ ಅಪಹರಿಸಿದ. ತಾರೆಯ ಪಾಂಸುಲಪ್ರವೃತ್ತಿ ಕಂಡು ದೇವತೆಗಳೂ ಅಪ್ಸರೆಯರೂ ತುಚ್ಛವಾಗಿ ನಿಂದಿಸಿದರು. ಕಡೆಗೆ ನಿಂದೆಯನ್ನು ಸಹಿಸಲಾರದೆ

ಆ ಪುಂಶ್ಚಲಿಯು ಬುಧನನ್ನು ಚಂದ್ರನಿಗೊಪ್ಪಿಸಿ ಪಶ್ಚಾತ್ತಾಪ ಪರಿತಪ್ತಳಾಗಿ ಚತುರ್ಮುಖನನ್ನು ಮೊರೆಹೊಕ್ಕು 'ನನ್ನನ್ನು ಪಾಪ ನಿರ್ಮುಕ್ತಳನ್ನಾಗಿ ಮಾಡಿ ಪತಿಯೊಡನೆ ಕೂಡಿಸಿ ಅನುಗ್ರಹಿಸಬೇಕೆ'ಂದು ಬೇಡಿಕೊಂಡಳು.

ತಾರೆಯ ತಪಸ್ಸು—ಆಗ ಪಿತಾಮಹ ಅವಳಿಗೆ ಭಕ್ತಶರಣ್ಯನಾದ ವಿರೂಪಾಕ್ಷನನ್ನು ಕುರಿತು ತಪಸ್ಸು ಮಾಡುವಂತೆ ಸೂಚಿಸಲು ಅದರಂತೆ ತಾರೆ ಈ ಬೆಟ್ಟದ ಮೇಲೆ ನೂರು ವರ್ಷಕಾಲ ನಿರಾಹಾರಿಯಾಗಿ ತಪಸ್ಸು ಮಾಡಿದಳು. ಸದಾಶಿವ ಅವಳ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾಗಲು, ತಾರೆ ಆ ಭಗವಂತನನ್ನು ಸ್ತುತಿಸಿ ತನ್ನ ಅಪರಾಧವನ್ನು ಮನ್ನಿಸಿ ಮಗನಾದ ಬುಧನಿಗೆ ಮಾನ್ಯತೆಯುಂಟಾಗುವಂತೆ ಕರುಣಿಸಬೇಕೆಂದು ಬೇಡಿಕೊಂಡಳು. ಕರುಣಾಳುವಾದ ಈಶಾನ ತಾರೆಗೆ ಕನ್ಯಾತ್ವವನ್ನು ಅನುಗ್ರಹಿಸಿದ್ದಲ್ಲದೆ 'ಬೆಳಗಿನ ಝಾವದಲ್ಲಿ ನಿನ್ನ (ತಾರೆಯ) ಸ್ಮರಣೆ ಮಾಡಿದವರ ಸಕಲ ಪಾಪಗಳೂ ತೊಲಗಲಿ' ಎಂದು ವರವನ್ನೂ ಕೊಟ್ಟು ಬುಧನಿಗೆ ಸಪ್ತಮ ಗ್ರಹವಾಗುವಂತೆಯೂ ಕರುಣಿಸಿದ.

ಅನಂತರ ಬೃಹಸ್ಪತಿ ತಾರೆಯೊಡನೆ ಇಲ್ಲೇ ವಾಸವಾಗಿದ್ದು ಸಾವಿರ ವರ್ಷಪರ್ಯಂತ ತಾರಕೇಶ್ವರನನ್ನು ಆರಾಧಿಸಿದ. ಆದಕಾರಣ ಈ ಗಿರಿಗೆ ತಾರಾಪರ್ವತವೆಂತಲೂ, ತಾರೆ ಸ್ನಾನಮಾಡುತ್ತಿದ್ದ ತೀರ್ಥಕ್ಕೆ ತಾರಾಸರಸ್ಸೆಂದೂ ಅವಳು ಆರಾಧಿಸಿದ ಲಿಂಗಕ್ಕೆ ತಾರಕೇಶ್ವರನೆಂದೂ ಹೆಸರು ಬಂದವು.

ಅಧ್ಯಾಯ 70 ಕಪಿಲ ತೀರ್ಥಾದಿಗಳು

[ತಳವಾರಕಟ್ಟೆಯ ಹತ್ತಿರ ಪೂರ್ವಾಭಿಮುಖವಾಗಿ ಹರಿಯುತ್ತಿರುವ ನದಿ ಸ್ವಲ್ಪ ಮುಂದೆ, ಆನೆಗುಂದಿಯ ಆಗ್ನೇಯ ಮೂಲೆಯ ಹತ್ತಿರ ತಿರುಗಿ ಸ್ವಲ್ಪ ದೂರ ಉತ್ತರಾಭಿಮುಖವಾಗಿ ಹರಿದು ಹೋಗುತ್ತದೆ. ಈ ಮೂಲೆಯಲ್ಲೇ ಪಶ್ಚಿಮ ದಡದ ಕಡೆ ಚಿಂತಾಮಣಿ ಮಠದ ಭವ್ಯವಾದ ಕಟ್ಟಡವೂ ಇನ್ನೊಂದು ಕಡೆ (ನಿಂಬಾಪುರದ ಕಡೆ) ಶಿಥಿಲವಾಗಿ ಕೋಡಿನೀಯ ಸ್ಥಿತಿಯಲ್ಲಿರುವ ಕಪಿಲಾಶ್ರಮವೂ ಇವೆ. ಕಪಿಲಾಶ್ರಮದಲ್ಲಿ ಒಂದೆರಡು ಹಾಳು ಗುಡಿಗಳೂ ಕಲ್ಲಿನ ಗರುಡಗಂಬವೊಂದೂ ಇವೆ. ಇದೇ ಕಪಿಲೇಶ್ವರನ ಗುಡಿಯಿರಬೇಕು.

ಕಪಿಲಾಶ್ರಮದ ಪಕ್ಕದಲ್ಲೇ ತಾಳೆಯ ಮರಗಳ ತೋಪುಗಳಿವೆ ; ಈ ಅಧ್ಯಾಯದಲ್ಲಿ ಬರುವ ಗಾಲವ ಮತ್ತು ಸುತೀಕ್ಷ್ಣಾಶ್ರಮಗಳು ಈ ಪ್ರದೇಶದಲ್ಲೇ ಇದ್ದಿರಬೇಕು. ಉತ್ತರವಾಹಿನಿಯಾದ ತುಂಗಭದ್ರೆಯೇ ಮಲಪ್ರಹಾರಿಣೀ ತೀರ್ಥ. ಇದನ್ನು ಕೆಲವು ಸ್ಥಳೀಯ ಜನರು ತಿಳಿಯದೆ ಮಲಾಪಹಾರಿಣೀ ಎಂದು ತಪ್ಪಾಗಿ ಕರೆಯುತ್ತಾರೆ.

ಅಲ್ಲಿಂದ ಮುಂದೆ ತಾರಾಪರ್ವತಕ್ಕೆ ಮುಂಭಾಗದಲ್ಲಿ-ಹಿಂದಿನ ಅಧ್ಯಾಯದಲ್ಲಿ ತಿಳಿಸಿದಂತೆ ನದಿ ಎರಡು ಸೀಳಾಗಿ ಒಡೆದು ಗುಡ್ಡವನ್ನೂ ಗಡ್ಡೆಯನ್ನೂ ಬಳಸಿಕೊಂಡು ಹೋಗಿದೆ. ಇಲ್ಲಿರುವ ಗುಡ್ಡವೇ ಕಾಲಾದ್ರಿ. ತಾರಾಪರ್ವತದ ಮುಂಭಾಗದ ಸೀಳೇ ಪುಣ್ಯಕೋಟಿ ತೀರ್ಥ ; ಇನ್ನೊಂದು (ಬುಕ್ಕಸಾಗರದ ಕಡೆಯ) ಸೀಳೇ ವಿರಜಾತೀರ್ಥ.

ಕಾಲಾದ್ರಿಯ ಹಿಂಭಾಗದಲ್ಲಿ ಮಾಧ್ವಪಂಥದ ಒಂಬತ್ತು ಯತಿಗಳ ವೃಂದಾವನಗಳಿವೆ; ಅದ್ದರಿಂದ ಈ ಸ್ಥಳಕ್ಕೆ ನವವೃಂದಾವನವೆಂತಲೂ ವೃಂದಾವನ ಗಡ್ಡೆಯೆಂತಲೂ ಹೆಸರು ಪ್ರಸಿದ್ಧವಾಗಿದೆ. ಆದರೆ ಕಾಲಕಂಠೇಶ್ವರನಿದ್ದ ಸಂಬಂಧಕ್ಕೆ ಯಾವ ಕುರುಹುಗಳೂ ಇಲ್ಲ. ಒಂದು ಕಲ್ಲಿನ ಬಸವಣ್ಣ ಮಾತ್ರ ಹೇಗೆ ಬಂತೋ ತಿಳಿಯದು, ಅಲ್ಲಿದೆ —ವಿ. ತೀ.]

ಕಪಿಲ ತೀರ್ಥ—ಕರ್ದಮನಿಂದ ದೇವಹೂತಿಯಲ್ಲಿ ಅವತರಿಸಿದ ವಿಷ್ಣುವಿನ ಅಂಶರಾದ ಕಪಿಲ ಮಹರ್ಷಿಗಳು[1] ಈ ಸ್ಥಳದಲ್ಲೇ ತಪಸ್ಸುಮಾಡಿ ಬ್ರಹ್ಮಜ್ಞಾನ ಪಡೆದು ಲೋಕಕ್ಕೆಲ್ಲಾ ಸಾಂಖ್ಯಜ್ಞಾನವನ್ನು ಬೋಧಿಸಿದರು. ಅವರ ಆಶ್ರಮದ ಹತ್ತಿರವೇ ಕಪಿಲ ತೀರ್ಥವಿದೆ. ಇದರಲ್ಲಿ ಸ್ನಾನಮಾಡಿ ಕಪಿಲೇಶ್ವರನನ್ನು ಅರ್ಚಿಸಿದವನು ಮಾಯಾಪಾಶನಿರ್ಮುಕ್ತನಾಗಿ ಬ್ರಹ್ಮಜ್ಞಾನವನ್ನು ಪಡೆಯುವನು.

ಗಾಲವಾಶ್ರಮ—ಕಪಿಲತೀರ್ಥದಲ್ಲಿ ಸ್ನಾನಮಾಡಿ, ಕಪಿಲೇಶ್ವರನನ್ನು ಪೂಜಿಸಿ ಕಪಿಲ ಮಹರ್ಷಿಗಳ ದರ್ಶನ ತೆಗೆದುಕೊಂಡು ಪಕ್ಕದಲ್ಲೇ ಇದ್ದ ಗಾಲವಾಶ್ರಮಕ್ಕೆ ಹೋಗಿ ಅಲ್ಲಿದ್ದ ಮುನೀಶ್ವರರ ಸಂದರ್ಶನ ಮಾಡಿ ಅವರಿಂದ ಸನ್ಮಾನಿತರಾಗಿ ಸುತೀಕ್ಷ್ಣಾಶ್ರಮಕ್ಕೆ ಬಂದರು.

ಸುತೀಕ್ಷ್ಣಾಶ್ರಮ—ಈ ಆಶ್ರಮ ಸಾಲ-ತಾಲವೃಕ್ಷಗಳಿಂದಲೂ ನಿರ್ಮಲೋದಕದ ಸರಸ್ಸಿನಿಂದಲೂ ವೇದಘೋಷದಿಂದಲೂ ಬಹಳ ಮನೋಹರವಾಗಿತ್ತು.

ಮಲಪ್ರಹಾರಣೀ ತೀರ್ಥ—ಸಪ್ತರ್ಷಿಗಳು ಸುತೀಕ್ಷ್ಣಾಶ್ರಮದಿಂದ ಅದಕ್ಕೆ ಉತ್ತರದಲ್ಲಿದ್ದ ಮಲಪ್ರಹಾರಿಣೀ ತೀರ್ಥಕ್ಕೆ ಬಂದರು. ಅದು (ಹೆಸರಿಗೆ ತಕ್ಕಂತೆ[2]) ಸರ್ವಪಾಪಹರವಾದುದು. ಇದರಲ್ಲಿ ಸ್ನಾನ ಮಾಡಿ ಭಕ್ತಿಯಿಂದ ದಾನಾದಿಗಳನ್ನು ಕೊಟ್ಟು ಆ ದಿನ ಉಪವಾಸ ಮಾಡಿ ಮರುದಿನ ಶ್ರಾದ್ಧಮಾಡಿ ಪಿಂಡ ಹಾಕಿದರೆ ಅವನ ಪಿತೃಗಳು ತೃಪ್ತರಾಗುತ್ತಾರೆ.

ಪುಣ್ಯಕೋಟಿ ತೀರ್ಥ—ಇದು ಸತ್ಯವ್ರತನ ಕ್ಷೇತ್ರ. ಇದು ಶೀಘ್ರದಲ್ಲೇ ಅಮೃತ (ಮೋಕ್ಷ) ಪ್ರದವಾದುದು. ಇಲ್ಲಿ ಒಂದು ರಾತ್ರಿ ವಾಸಮಾಡಿದರೂ ಸಹ ಸದ್ಗತಿಯುಂಟಾಗುತ್ತದೆ. ಇಲ್ಲಿ ಕಿಂಚಿತ್ ಪುಣ್ಯಮಾಡಿದರೂ ಸಹ ಅದೇ ನೂರು ಕೋಟಿಯಷ್ಟಾಗುತ್ತದೆ.

ವಿರಜಾತೀರ್ಥ—ಪುಣ್ಯಕೋಟಿ ತೀರ್ಥಕ್ಕೆ ದಕ್ಷಿಣದಿಗ್ಭಾಗದಲ್ಲಿ ಕಲಿಕಲ್ಮಶ ನಾಶಕವಾದ[3] ಪರಮಾನಂದದಾಯಕವಾದ ವಿರಜಾ ಎಂದು ಪ್ರಖ್ಯಾತವಾದ ತೀರ್ಥವಿದೆ. ಇಲ್ಲಿ ಸ್ನಾನ ದಾನ-ಧರ್ಮಗಳನ್ನು ಮಾಡುವುದರಿಂದ ಮನುಷ್ಯರಿಗೆ ಸದ್ಗತಿಯಾಗುತ್ತದೆ.

---

1 ಭಾಗವತದ ತೃತೀಯ ಸ್ಕಂಧದ ಉತ್ತರ ಭಾಗವೆಲ್ಲಾ ಈ ಕಪಿಲೋಪಾಖ್ಯಾನವೇ ಆಗಿದೆ.

2 ಮಲ = ಕೊಳೆಯನ್ನು, ಪ್ರಹಾರಿಣೀ = ಧ್ವಂಸಮಾಡುವ.

3 ವಿ = ವಿಗತವಾದ, ನಾಶಮಾಡಲ್ಪಟ್ಟ, ರಜ = ಧೂಳು, ಕಲ್ಮಶ, ಪಾಪವುಳ್ಳದ್ದು.

ಕಾಲಾದ್ರಿ ಅಥವಾ ಕಾಲಕೂಟಾದ್ರಿ—ಈ ಬೆಟ್ಟವೂ ಪುಣ್ಯವರ್ಧಕವಾದುದು. ಇದರಲ್ಲಿ ಕಾಲಕಂಠೇಶ್ವರ ಲಿಂಗರೂಪದಿಂದ ಶೋಭಿಸುತ್ತಾನೆ. ಹಿಂದೆ ಅಮೃತಮಥನ ಕಾಲದಲ್ಲಿ ಹುಟ್ಟಿದ ವಿಷವನ್ನು ಕುಡಿದು, ನೀಲಕಂಠ ಆ ವಿಷವನ್ನು ಈ ಬೆಟ್ಟದ ಶಿಖರ ಭಾಗದಲ್ಲಿ ಕುಳಿತು ಜೀರ್ಣಿಸಿಕೊಂಡ, ಆದ್ದರಿಂದಲೇ ಈ ಗುಡ್ಡಕ್ಕೆ ಕಾಲಾದ್ರಿ ಅಥವಾ ಕಾಲಕೂಟಾದ್ರಿ ಎಂದು ಹೆಸರು ಬಂತು.

ಪಾಪಸರಸ್ಸು[1]—ಕಾಲಾದ್ರಿಗೆ ಉತ್ತರದಲ್ಲಿದೆ. ಅದರ ದಕ್ಷಿಣದಲ್ಲಿ ಪಂಪಾಪುರಿ ಇವೆ. ಕಾರ್ತಿಕ ಮಾಸದಲ್ಲಿ ಪಂಪಾಪುರಿಯಲ್ಲಿ ವಾಸಮಾಡಿ ಪಂಪಾಸರಸ್ಸಿನಲ್ಲಿ ಉಷಃಕಾಲದಲ್ಲಿ ಸ್ನಾನಮಾಡಿದರೆ ಬ್ರಹ್ಮಲೋಕಪ್ರಾಪ್ತಿಯಾಗುತ್ತದೆ. ಸರ್ವಕ್ಷೇತ್ರಗಳೂ ಸರ್ವತೀರ್ಥಗಳೂ ಈ ಪಂಪಾನದಿಯಲ್ಲಿ ಅಡಗಿವೆ.

ಅಧ್ಯಾಯ 71 ಕಲಿತಾರಕ ತೀರ್ಥ

ಕಲಿತಾರಕ ತೀರ್ಥ—ಶ್ರೀದರನೆಂಬ ರಾಜ ಈ ತೀರ್ಥಸ್ನಾನದಿಂದ ಕಲಿಯನ್ನು ಗೆದ್ದನಾದುದರಿಂದ ಈ ತೀರ್ಥಕ್ಕೆ ಈ ಹೆಸರುಂಟಾಯಿತು. (ಕಲಿ = ಕಲಿಯನ್ನು, ತಾರಕ = ದಾಟಿಸುವಂಥಾದ್ದು) ಸೂರ್ಯವಂಶ ಸಮುತ್ಪನ್ನನಾದ ಶ್ರೀಧರ ಪಾಂಚಾಲದೇಶಾಧಿಪತಿಯಾಗಿದ್ದ. ಅವನು ಧರ್ಮಾಧರ್ಮವಿಚಕ್ಷಣ, ಸದಾಚಾರರತ ಮತ್ತು ಸತ್ಯವಾದಿ. ಅವನು ಪ್ರಜೆಗಳನ್ನು ಮಕ್ಕಳಂತೆ ಕಾಪಾಡುತ್ತಿದ್ದ. ಇಂಥಾ ಅವನು ಏನಾದರೂ ಮಾಡಿ ಕಲಿಯನ್ನು ಸಾಧುವ್ರತದಿಂದಲೇ ಜಯಿಸಬೇಕೆಂದು ಆಲೋಚಿಸಿದ.

ಕಲಿ ಪ್ರವೇಶ—ಅವನ ಆಶಯವನ್ನು ತಿಳಿದ ಕಲಿ ಏನಾದರೂ ಮಾಡಿ ಅವನನ್ನು ಕೆಡಿಸಲೇ ಬೇಕೆಂದಾಲೋಚಿಸಿ ಅವನು ಪ್ರಮಾದ ಮಾಡುವುದನ್ನೇ ಕಾಯುತ್ತಿದ್ದ. ಹೀಗಿರಲು ಪರೀಕ್ಷಾರ್ಥವಾಗಿ ಕಲಿ ಅನೇಕ ಕ್ರೂರ ಮೃಗಗಳನ್ನು ಸೃಷ್ಟಿಸಲು ಅವು ಹೊಲ ಗದ್ದೆಗಳನ್ನು ಹಾಳುಮಾಡಿ ವಿನಾಶ ಮಾಡಿಬಿಟ್ಟವು. ಈ ಸಮಾಚಾರ ಕೇಳಿ ಆ ಶ್ರೀಧರ ಬೇಟೆಗೆ ಹೊರಟು ಅನೇಕ ಕ್ರೂರಮೃಗಗಳನ್ನು ಹೊಡೆದು ನಾಶ ಮಾಡಿದ. ಬೇಟೆಯಿಂದಲೂ ಬಿಸಿಲಿಂದಲೂ ದಣಿದಿದ್ದ ಶ್ರೀಧರ ನೀರು ಕುಡಿಯುವುದಕ್ಕಾಗಿ ಒಂದು ಸರೋವರದ ಬಳಿಗೆ ಬಂದ.

ಅಲ್ಲಿ ಒಬ್ಬ ಕಿರಾತ ತರುಣಿ ಹಾಡುತ್ತಾ ಕೂತಿದ್ದಳು. ಸಮಯ ಕಾಯುತ್ತಿದ್ದ ಕಲಿ ರಾಜನಲ್ಲಿ ಆವಿಷ್ಟನಾದ. ಆವೇಶ ಬಲದಿಂದ ರಾಜನಿಗೆ ದುಷ್ಕಾಮ ತಲೆದೋರಿತು. ಅವನು ಧರ್ಮ ಬುದ್ಧಿಯನ್ನು ತೊರೆದು ಕಾಮುದಾ ಎಂಬ ಆ ಕಿರಾತ

---

1. 17ನೇ ಅಧ್ಯಾಯದ ಮುಖ ಟಿಪ್ಪಣಿ ನೋಡಿ.



ಪುಣ್ಯಕೋಟಿ - ವಿರಜಾ ತೀರ್ಥಗಳು, ಕಾಲಾದ್ರಿ (ಫ್ರಟ 94–5)



ಮಲಪ್ರಹಾರಿಣೀ ತೀರ್ಥ, ಚಿಂತಾಮಣಿಮಠ

ಕಿಶೋರಿಯೊಡನೆ ಭೋಗಿಸಿ ವ್ಯಭಿಚರಿಸುತ್ತಾ ಹತ್ತು ವರ್ಷ ಅವಳೊಡನೆಯೇ ಇದ್ದು ಬಿಟ್ಟ. ಈ ಮಧ್ಯೆ ಅವನಿಗೆ ಎಂಟು ಮಕ್ಕಳು ಹುಟ್ಟಿದರು. ಅವನೊಬ್ಬನೇ ಬೇಟೆಯಾಡಿಯೇ ಹೊಟ್ಟೆಗೆ ಮಾಡಿಯೇ ಸಾಕಬೇಕಾಗಿ ಬಂತು. ಕಡೆಕಡೆಗೆ ಶಕ್ತಿಮೀರಿ ಕೆಲಸಮಾಡಿದ್ದರಿಂದ ಯಕ್ಷ್ಮರೋಗ ಬಂದು ರಾಜ ಬಹಳ ಕೃಶವಾಗಿ ಹೋದ.

ಅತ್ತಲಾಗಿ ಶ್ರೀಧರನ ಸುಳಿವೇ ಗೊತ್ತಾಗದೆ ಹೋದ್ದರಿಂದ ಮಂತ್ರಿ ಪುರೋಗಮರು ಸಮಾಲೋಚನೆ ಮಾಡಿ ಅವನ ಮಗ ಶೂರಶೇಖರನಿಗೇ ಪಟ್ಟಗಟ್ಟಿದರು.

ಕಲಿನಿವೃತ್ತಿ—ಹೆಂಡತಿಯಿಂದಲೂ ಮಕ್ಕಳಿಂದಲೂ ತಿರಸ್ಕೃತನಾಗಿ ಮನೆಯಿಂದ ಹೊರದೂಡಲ್ಪಟ್ಟ ಶ್ರೀಧರ ತನ್ನ ಜೀವನಕ್ಕಾಗಿ ಬಹಳ ಪೇಚಾಡಿದ.

> ಅಹೋ ದೈವಗತಿಶ್ಚಿತ್ರಾ ಮನೋವಾಚಾಮಗೋಚರಾ ।
> ಸಾಗರಂ ಶೋಷಯೇದಾಶು ಕುರ್ಯಾತ್ ಪರ್ವತಮರ್ಣವಮ್ ॥

'ಅಹೋ, ದೈವಗತಿ ವಿಚಿತ್ರವಾದುದು ಮನೋವಾಕ್ಕುಗಳಿಗೂ ಅಗೋಚರವಾದುದು. ಸಾಗರವನ್ನು ಶೋಷಿಸಿಬಿಡುತ್ತದೆ. ಬೆಟ್ಟವನ್ನೂ ಕರಗಿಸಿ ನೀರುಮಾಡೀತು. ಇದಕ್ಕೆ ನಾನೇ ದೃಷ್ಟಾಂತ. ಸೂರ್ಯವಂಶದಲ್ಲಿ ಹುಟ್ಟಿ ಧರ್ಮಾಧರ್ಮ ವಿಚಕ್ಷಣನಾಗಿದ್ದ ನಾನು ರಾಜ್ಯವನ್ನು ಬಿಟ್ಟು ವ್ಯಾಧಸ್ತ್ರೀಯೊಡನೆ ಸಂಸರ್ಗಮಾಡಿಕೊಂಡು ಮಾಡಬಾರದ ಕೆಲಸಗಳನ್ನೆಲ್ಲಾ ಮಾಡಿದೆನಲ್ಲಾ ! ಕಡೆಗೆ ಅತ್ಯಶಕ್ತನಾಗಿರುವಾಗ ಮನೆ ಬಿಟ್ಟೋಡಿಸಿಬಿಟ್ಟರಲ್ಲಾ ! ಎಲ್ಲಿಗೆ ಹೋಗಲಿ ? ಏನು ಮಾಡಲಿ ?' ಎಂದು ಗೋಳಾಡುತ್ತಾ ಅಕಸ್ಮಾತ್ ಶಾಂಡಿಲ್ಯರ ಆಶ್ರಮದ ಬಳಿಗೆ ಹೋದ. ಆ ಮುನಿಗಳು ಶ್ರೀಧರನಿಗೆ ಈ ತೀರ್ಥ ತೋರಿಸಿ ಇದರಲ್ಲಿ ಸ್ನಾನ ಮಾಡುವಂತೆ ಹೇಳಿದರು. ಹಾಗೆಯೇ ಸ್ನಾನಮಾಡಲು ಆವಿಷ್ಟನಾಗಿದ್ದ ಕಲಿ ಬಿಟ್ಟು ಹೋದ. ಅನಂತರ ಶ್ರೀಧರ ಕ್ಷೇತ್ರಸ್ವಾಮಿಯಾದ ವಿರೂಪಾಕ್ಷನನ್ನಾರಾಧಿಸಿ ಪರಂಧಾಮಕ್ಕೆ ತೆರಳಿದ.

ಅಧ್ಯಾಯ 72 ಸೀತಾ ಸರೋವರ

ಕೃತಯುಗದ ಇತಿಹಾಸ

[ಸೀತಾ ಸರೋವರದ ವರ್ಣನೆ ಎರಡು ಅಧ್ಯಾಯಗಳಲ್ಲಿ ಮಾಡಿದೆ. ಈ ಸೀತಾ ಸರೋವರ ಹಂಪೆಯ ಚಕ್ರತೀರ್ಥಕ್ಕೆ ಪೂರ್ವ ದಿಕ್ಕಿನಲ್ಲಿ ಕೋದಂಡರಾಮನ ಗುಡಿಯಿಂದ ವಿಜಯ ವಿಠಲ ಗುಡಿಗೆ ಹೋಗುವ ದಾರಿಯಲ್ಲಿದೆ. ಈ ಅಧ್ಯಾಯದಲ್ಲಿ ಇದರ ವರ್ಣನೆಯನ್ನು ಅದ್ಭುತವಾಗಿ ಮಾಡಿದ್ದಾರೆ;ಆದರೆ ಈಗಿನ ಸ್ಥಿತಿಯಲ್ಲಿ ಇದುಸ್ನಾನಕ್ಕೂ ಯೋಗ್ಯವಾಗಿ ಕಂಡುಬರುವುದಿಲ್ಲ.

ಅಲ್ಲದೆ ಈ ಸರೋವರವನ್ನು ಜನರು ರೂಢಿಯಲ್ಲಿ ಸೀತಾಸೆರಗು ಎಂದು ಕರೆಯುತ್ತಾರೆ. ಇದಕ್ಕೆ ಕಾರಣವೇನೆಂದರೆ—ರಾವಣ ಸೀತೆಯನ್ನು ವಿಮಾನದಲ್ಲಿ ಹೊತ್ತುಕೊಂಡು ಹೋಗುತ್ತಿದ್ದಾಗ ಆಕೆ ಕೆಲವು ಆಭರಣಗಳನ್ನು ತನ್ನ ಸೀರೆಯ ಸೆರಗಿನಲ್ಲಿ ಕಟ್ಟಿ ಈ ಸ್ಥಳದಲ್ಲಿ ಹಾಕಿದಳು. ಆದ್ದರಿಂದ ಈ ಸ್ಥಳಕ್ಕೆ ಸೀತಾಸೆರಗು ಎಂದು ಹೆಸರು ಬಂತೆಂದು ಹೇಳುತ್ತಾರೆ. ಆದರೆ ಅವರ ಈ ಹೇಳಿಕೆಗೆ ಯಾವ ಆಧಾರ (ಪ್ರಮಾಣ)ವೂ ಇಲ್ಲ.

ಇನ್ನೂ ಕೆಲವು ಮೂಢರು ಈ ಸ್ಥಳದಲ್ಲೇ ಬಂಡೆಯ ಮೇಲಿರುವ ಪಟ್ಟೆಗಳನ್ನು ತೋರಿಸಿ. ಸೀತೆ ತನ್ನ ಸೀರೆಯನ್ನು ಒಣಗಿ ಹಾಕಿದ್ದಳೆಂದೂ ಅದರ ಅಂಚಿನ ಗುರುತು ಪಟ್ಟೆ ಪಟ್ಟೆಯಾಗಿ ಕಲ್ಲಿನ ಮೇಲೆ ಬಿದ್ದಿದೆಯೆಂದೂ ಬುರುಡೆ ಬಿಡುವರು. ಇದಂತೂ ಶುದ್ಧ ಅಪದ್ಧವೆಂಬುದು ವಿಮರ್ಶನ ಶೀಲರಿಗೆ ವ್ಯಕ್ತವಾಗದೆ ಇರದು—ವಿ. ತೀ.]

ಸರೋವರದ ವರ್ಣನೆ—ಮನೋಹರವಾದ ಸೀತಾಸರೋವರ ಪಾತಕಗಳೆಂಬ ಬೆಟ್ಟಕ್ಕೆ ವಜ್ರಾಯುಧಸದೃಶವಾದುದು. ಇದು ಬಂಗಾರದ ಸೋಪಾನಗಳಿಂದ ವಿರಾಜಿಸುತ್ತದೆ. ಪುಷ್ಕರಿಣ್ಯಾದಿ ತೀರ್ಥಗಳೂ ಗಂಗಾದಿ ಪುಣ್ಯನದಿಗಳೂ ತಮ್ಮ ಪಾವಿತ್ರ್ಯತೆಗಾಗಿ ಇದನ್ನು ಉಪಾಸನೆಮಾಡುತ್ತವೆ. ಇದರಲ್ಲಿ ಸ್ನಾನಮಾಡುವುದರಿಂದ ಬ್ರಹ್ಮಹತ್ಯಾದಿ ದೋಷಗಳೂ ದೂರವಾಗುತ್ತವೆ. ದೇವೇಂದ್ರಾದಿ ಅಮರರೂ ಸಹ ಬಂದು ಬೆಳಗಿನ ಝಾವದಲ್ಲಿ ಈ ಸರೋವರದಲ್ಲಿ ಸ್ನಾನಮಾಡುತ್ತಾರೆ. ಇದರಲ್ಲಿ ಸ್ನಾನಮಾಡಿದ್ದರಿಂದಲೇ ಇಂದ್ರನಿಗೆ ಬಂದಿದ್ದ ಬ್ರಹ್ಮಹತ್ಯಾದೋಷ ಪರಿಹಾರವಾಯಿತು. ಆ ಕಥೆಯೇನೆಂದರೆ—

ಕಪಾಲಾಭರಣನ ದಿಗ್ವಿಜಯ—ಕೃತಯುಗದಲ್ಲಿ ಕಪಾಲಾಭರಣನೆಂಬ ರಾಕ್ಷಸ ಶುಚಿನಾಮಕ ಋಷಿಯ ಅನುಗ್ರಹದಿಂದ ಸುರಾಸುರಬಲಾಧಿಕನಾಗಿದ್ದ. ಅವನ ಮಂತ್ರಿ ಭಯಾನಕ ಯಥಾರ್ಥನಾಗಿ ಲೋಕಭಯಂಕರನೇ ಆಗಿದ್ದ; ಶವಭಕ್ಷಕನೇ[1] ಸೇನಾಪತಿ; ಇವನ ಕೈಕೆಳಗೆ ಪರಾರ್ಧಶತ ಸೈನ್ಯವಿತ್ತು. ಇವರೆಲ್ಲ ಮಯನಿರ್ಮಿತವಾದ ವಿಜಯಪುರದಲ್ಲಿ ವಾಸಿಸುತ್ತಿದ್ದರು. ಆ ಕಪಾಲಾಭರಣ ಭೂಲೋಕ ಪಾತಾಳ ಲೋಕಗಳನ್ನು ಗೆದ್ದು ಸ್ವರ್ಗದ ಮೇಲೂ ಧಾಳಿ ನಡೆಸಬೇಕೆಂದು ಹೊರಟ.

ಅವನ ಯುದ್ಧ ಸನ್ನಾಹವನ್ನು ನೋಡಿ ಕ್ರುದ್ಧನಾದ ಪುರುಹೂತ ತಾನೂ ಸೈನ್ಯ ಸಜ್ಜುಗೊಳಿಸಿಕೊಂಡ. ದೇವಾಸುರರಿಗೆ ಭಯಂಕರವಾದ ಯುದ್ಧ ನಡೆಯಿತು. ತನ್ಮಧ್ಯೆ ಇಂದ್ರ-ಕಪಾಲಾಭರಣರಿಗೂ ಭಯಾನಕ-ಕುಬೇರರಿಗೂ ಯಮ-ಶವಭಕ್ಷಕರಿಗೂ ಅಗ್ನಿ-ಕ್ರೂರದೃಷ್ಟಿಗಳಿಗೂ ಘೋರವಾಗಿ ದ್ವಂದ್ವಯುದ್ಧಗಳು ನಡೆದುವು. ಅನಂತರ ಶಸ್ತ್ರಾಸ್ತ್ರಗಳಯುದ್ಧ ಜರಗಿತು. ಒಟ್ಟಿನಲ್ಲಿ ತ್ರಿದಶರು ದೈತೇಯರ ಕೈಗೆ ಸಿಕ್ಕಿ ಸರ್ವವಿಧದಿಂದಲೂ ನುಚ್ಚುನೂರಿಯಾದರು.

ಬೃಹಸ್ಪತಿಯ ಉಪಾಯ—ಶಿಥಿಲಗಾತ್ರರಾದ ಇಂದ್ರಾದಿಗಳು ಗುರುವನ್ನು ಮೊರೆಹೊಕ್ಕು ತಮಗೆ ಜಯಪ್ರಾಪ್ತಿಯಾಗುವಂತೆ ಏನಾದರೂ ಉಪಾಯ ಹೇಳಿಕೊಡುವಂತೆ ಪ್ರಾರ್ಥಿಸಿಕೊಂಡರು. ಅದಕ್ಕೆ ಆಂಗೀರಸ ಅವರಿಗೆ ಕಾಲರುದ್ರಮಂತ್ರವನ್ನು ಉಪದೇಶ ಮಾಡಿ ಅದನ್ನು ಸ್ಮರಣೆ ಮಾಡುತ್ತಾ ಹೋರಾಡುವಂತೆ ಹೇಳಿದ. ಆ ಮಂತ್ರದ ಪ್ರಭಾವದಿಂದ ದೇವತೆಗಳ ಬಲ ಉಕ್ಕೇರಿತು. ಅವರು ದೈತ್ಯವಾಹಿನಿ

---

1 ಶವ = ಹೆಣಗಳನ್ನು, ಭಕ್ಷಕ = ತಿನ್ನುವವನು,

ಯನ್ನು ಲೀಲಾಜಾಲವಾಗಿ ಎದುರಿಸಲು ಸಮರ್ಥರಾದರು. ಒಂದು ಕಡೆ ಧನದ ಭಯಾನಕನ ಶಿರಸ್ಸನ್ನು ಕತ್ತರಿಸಿ ಹಾಕಿದನು. ಇನ್ನೊಂದು ಕಡೆ ಮಹಿಷವಾಹನನಾದ ದಂಡಧರ (ಯಮ) ಕಾಲದಂಡದಿಂದ ಶವಭಕ್ಷಕನನ್ನು ಹೊಡೆದು ತನ್ನ ಪಟ್ಟಣಕ್ಕೆ ಕಳುಹಿಸಿಕೊಟ್ಟ. ಪಾವಕನು ಕ್ರೂರದೃಷ್ಟಿಯ ರುಂಡವನ್ನು ಕಡಿದುರುಳಿಸಿದ. ಮೃತ್ಯುಪ್ರಿಯ ಮಹಾಕಾಯ ಮದಿರಾಕ್ಷ ಅತಿದೂಷಣರನ್ನು ವೈಶ್ವಾನರಾಶ್ವಿ ವರುಣರು ಅಂತಕನ ಬಳಿಗೆ ಕಳುಹಿಸಿದರು.

ದೈತ್ಯ ಸಂಹಾರ — ಹೀಗೆ ಅನಿರೀಕ್ಷಿತವಾಗಿ ಸೈನ್ಯವೆಲ್ಲ ಕ್ಷಯಿಸಿ ಹೋದುದನ್ನು ಕಂಡು ಕಪಾಲಾಭರಣ ಕಿಚ್ಚಾಗಿ ಕ್ರೋಧದಿಂದ ಅತಿಭೈರವಾರಾವ ಮಾಡಿ ಸುರಾನೀಕದ ಮೇಲೆ ನಿಶಿತಾಸ್ತ್ರಪ್ರಯೋಗ ಮಾಡುತ್ತಾ ನುಗ್ಗಿದನು. ಅದನ್ನು ಕಂಡು ಪುರಂದರ ಅವನಿಗೆ 'ನಿಲ್ಲು,ನಿಲ್ಲು, ಎಂದು ಹೇಳುತ್ತಾ ಹತ್ತು ಬಾಣಗಳಿಂದ ಅವನನ್ನು ಹೊಡೆದ. ಅವರಿಬ್ಬರೂ ಬಹಳ ಹೊತ್ತು ಭಯಂಕರವಾದ ಕದನಮಾಡಿದರು. ಕೊನೆಗೆ ಮಘವ ಕಾಲರುದ್ರ ಮಂತ್ರವನ್ನು ಸ್ಮರಿಸಿ ವಜ್ರಾಯುಧದಿಂದ ಅವನನ್ನು ಪ್ರಹರಿಸಿ ಎದೆ ಸೀಳಿ ಕೆಡವಿಬಿಟ್ಟ. ಅವನ ಸಂಹಾರವಾದ್ದರಿಂದ ಜಗತ್ತು ಪ್ರಶಾಂತವಾಯಿತು, ಜನರು ಸಂತೋಷ ನಿರ್ಭರರಾದರು. ಆದರೆ ಅಸುರವಧೋತ್ಪನ್ನವಾದ ಬ್ರಹ್ಮಹತ್ಯೆ ಪಾಕಶಾಸನನನ್ನು ಬೆನ್ನಟ್ಟಿತು.

ಈ ಮಾತನ್ನು ಕೇಳಿ ಶೌನಕಾದಿ ಮಹರ್ಷಿಗಳಿಗೆ ಆ ರಾಕ್ಷಸ ಬ್ರಾಹ್ಮಣನಾಗಿರಲಿಲ್ಲವಾದ್ದರಿಂದ ಬ್ರಹ್ಮಹತ್ಯಾದೋಷ ಹೇಗೆ ಬಂತೆಂದು ಸಂಶಯವುಂಟಾಯಿತು. ಅದನ್ನು ಪರಿಹರಿಸುವುದಕ್ಕಾಗಿ ಸೂತರು ಆ ರಾಕ್ಷಸನ ಪೂರ್ವವೃತ್ತವನ್ನು ತಿಳಿಸಬೇಕಾಯಿತು.

ಕಪಾಲಾಭರಣನ ಜನ್ಮವೃತ್ತಾಂತ—ವಿಂಧ್ಯಪಾದ ವನದಲ್ಲಿ ತ್ರಿವಕ್ತ್ರನೆಂಬ ದೈತ್ಯನಿದ್ದ. ಅವನು ವಾಸವನಿಗೆ ಹೆದರಿ ಒಂದು ವಿವಿಕ್ತವಾದ ಗುಹೆಯಲ್ಲಿ ವಾಸಮಾಡಿಕೊಂಡಿದ್ದ. ಒಂದು ದಿನ ಅವನು ತನಗೆ ಮಕ್ಕಳೇ ಹುಟ್ಟದಿದ್ದುದಕ್ಕಾಗಿ ಪತ್ನಿಯೊಡನೆ ಪೇಚಾಡಿಕೊಂಡ. ಆಗ ಕಾಮರೂಪಿಣಿಯಾದ ಅವನ ಪತ್ನಿ ಸುಶೀಲೆ 'ನನಗೆ ಅಪ್ಪಣೆಕೊಟ್ಟರೆ ಹತ್ತಿರದಲ್ಲೇ ಇರುವ ಶುಚಿಯೆಂಬ ಮುನಿವರನನ್ನು ವಶೀಕರಿಸಿಕೊಂಡು ಅವನಿಂದ ಸಂತಾನ ಭಾಗ್ಯ ಪಡೆಯುವೆನು' ಎಂದಳು. ತ್ರಿವಕ್ತ್ರ ಅವಳಿಗೆ ಹಾಗೆಯೇ ಮಾಡುವಂತೆ ಅನುಮತಿ ಕೊಟ್ಟ.

ಶುಚಿಯನ್ನು ಹೇಗೆ ಒಲಿಸಿಕೊಳ್ಳುವುದೆಂದು ಬಹಳ ಯೋಚಿಸಿ, ಸುಶೀಲೆ ಆ ಮುನಿಗೆ ಕಾಣಿಸುವ ಹಾಗೆ ನೀರಿನಲ್ಲಿ ಬಿದ್ದು ಮುಳುಗಿ ಹೋಗುತ್ತಿರುವಂತೆ ನಟಿಸಿ ಕಿರಿಚಿಕೊಂಡಳು. ಶುಚಿ ಓಡಿಹೋಗಿ ಕೈಹಿಡಿದು ಅವಳನ್ನು ನೀರಿನಿಂದ ಹೊರಕ್ಕೆಳೆದ. ಈ ಸಂದರ್ಭದಲ್ಲಿ ವಿವಸ್ತ್ರಳಾಗಿದ್ದ ಅವಳ ಮನಮೋಹಕ ರೂಪವನ್ನು ಕಣ್ಣಾರೆ

ನೋಡಿದ್ದರಿಂದ ಋಷಿಗೆ ಕಾಮಾವೇಶವಾಯಿತು. ಸುಶೀಲೆಗೂ ಅಷ್ಟೇ ಬೇಕಾಗಿತ್ತು. ಅವಳು ಆ ಮುನಿಯೊಡನೆ ಸ್ವೇಚ್ಛೆಯಾಗಿ ರಮಿಸಿ ಅವನ ಅಮೋಘ ವೀರ್ಯದಿಂದ ಗರ್ಭಧಾರಣೆ ಮಾಡಿದಳು.

ಕಾಲಕ್ರಮದಲ್ಲಿ ಅವಳ ಗರ್ಭದಿಂದ ಅತ್ಯಂತ ಭೀಷಣನಾದ ಸುತನು ಜನಿಸಿದ. ಅವನು ಹುಟ್ಟಿದ ಮಾತ್ರಕ್ಕೇ ಭೂಮಿಯೇ ಕಂಪಿಸಿತು. ಚಿಕ್ಕಂದಿನಲ್ಲೇ ಆ ಮಗು ಅನೇಕ ಮನುಷ್ಯರನ್ನು ಕೊಂದು ಅವರ ಕಪಾಲಗಳನ್ನು ಮಾಲೆಮಾಡಿ ಹಾಕಿಕೊಂಡಿತು ; ಇದರಿಂದ ಅದಕ್ಕೆ ಕಪಾಲಾಭರಣನೆಂಬ ಹೆಸರು ಬಂತು. ಈ ಪ್ರಕಾರ ಈ ರಾಕ್ಷಸ ಶುಚಿಯ ವೀರ್ಯದಿಂದ ಜನಿಸಿದ್ದರಿಂದಲೇ ಅವನನ್ನು ಕೊಂದ ದೇವೇಂದ್ರನಿಗೆ ಬ್ರಹ್ಮಹತ್ಯಾದೋಷ ಅಂಟಿಕೊಂಡಿತು.

ಬ್ರಹ್ಮಹತ್ಯಾ ನಿವಾರಣೆ —ಬ್ರಹ್ಮಹತ್ಯಾ ಪೀಡಿತನಾದ ಶಕ್ರನು ನೂರು ವರ್ಷ ಎಲ್ಲೆಲ್ಲೋ ಸುತ್ತಾಡಿ ಕಡೆಗೆ ಸತ್ಯಲೋಕ ಸೇರಿ ಪಿತಾಮಹನನ್ನು ಮೊರೆಹೊಕ್ಕು ಆ ದೋಷಪರಿಹಾರಮಾಡಿ ಉದ್ಧಾರ ಮಾಡುವಂತೆ ಮೊರೆಯಿಟ್ಟುಕೊಂಡ. ಆದಕ್ಕೆ ಬ್ರಹ್ಮ ಅವನಿಗೆ ಪಂಪಾಕ್ಷೇತ್ರಕ್ಕೆ ಹೋಗಿ ಸೀತಾಸರೋವರದಲ್ಲಿ ಸ್ನಾನಮಾಡುವಂತೆ ಆಜ್ಞಾಪಿಸಿದ. ಅದರಂತೆ ವೃಷನು (ದೇವೇಂದ್ರ) ಹಂಪೆಗೆ ಬಂದು ಈ ಸರೋವರದಲ್ಲಿ ಮಜ್ಜನಮಾಡಿದ್ದರಿಂದ ಅಘದಿಂದ ಮುಕ್ತನಾದ. ಆನಂತರ ವಿರೂಪಾಕ್ಷನನ್ನು ಆರಾಧಿಸಿ ಈಶ್ವರಪ್ರಸಾದ ಸಂಪನ್ನನಾಗಿ ಪುನಃ ಸ್ವರ್ಗಾಧಿಪತ್ಯವನ್ನು ಪಡೆದನು.

ಅಧ್ಯಾಯ 73 ಸೀತಾ ಸರೋವರ

ತ್ರೇತಾಯುಗದ ಕಥೆ

[ಇಲ್ಲಿ ಹೇಳಿರುವ ಕಥೆಯನ್ನೂ ವಾಲ್ಮೀಕಿ ರಾಮಾಯಣದ ಉತ್ತರಕಾಂಡ ಕಥೆಯನ್ನೂ ಹೋಲಿಸಿ ನೋಡಿದರೆ ವಿಮರ್ಶನ ಶೀಲರಿಗೆ ಈ ಅಧ್ಯಾಯದಲ್ಲಿ ಬಹಳ ಸ್ವಾರಸ್ಯವಾದ ಅತಿ ಮಹತ್ವದ ಸಂಗತಿಗಳು ಕಂಡು ಬರುತ್ತವೆ. ತತ್ರಾಪಿ ಅಗಸನ ವ್ಯಕ್ತಿತ್ವ ಮತ್ತು ಸೀತಾ ಜನನ ವೃತ್ತಾಂತಗಳು ವಿಶೇಷತಃ ಗಮನೀಯವಾಗಿವೆ. ಇವದಲ್ಲಿ ಅಗಸನಿಗೆ ಒಂದು ದುರುದ್ದೇಶ (motive) ಇದ್ದಂತೆ ವರ್ಣಿಸಿದೆ—ವಿ. ಶೀ.]

ಪಿಶುನನ ದುರ್ಬುದ್ಧಿ—ಶ್ರೀರಾಮ ಅಯೋಧ್ಯಾಧಿಪತಿಯಾಗಿ ಸೀತೆಯೊಡನೆ ಸುಖವಾಗಿ ರಾಜ್ಯವಾಳುತ್ತಿದ್ದನಷ್ಟೆ. ಅವನ ಪ್ರಜೆಗಳೆಲ್ಲರೂ ಸುಖಸಾಗರದಲ್ಲಿ ಮುಳುಗಿ ಲೋಲಾಡುತ್ತಿದ್ದರೂ ಶೂರ್ಪನಖಿಯ ಮಗನಾದ ಪಿಶುನ[1] ಮಾತ್ರ ತನ್ನ ತಾಯಿಗೆ ರಾಮ ಲಕ್ಷ್ಮಣರು ಮಾಡಿದ ಅವಮಾನದ ಸೇಡು ತೀರಿಸಿಕೊಳ್ಳುವುದಕ್ಕೆ ಸಮಯ ಹೊಂಚು ಹಾಕುತ್ತಿದ್ದ. ಅದಕ್ಕಾಗಿ ಅವನು ಹೆಂಡತಿಯೊಡನೆ ಅಯೋಧ್ಯೆಯಲ್ಲೇ ಬಂದು ನೆಲೆಸಿ ಜನಗಳಿಗೆ ಸಂದೇಹ ಬರದಂತೆ ಅಗಸನ ವೇಷ ಹಾಕಿಕೊಂಡು ಒಗೆದ ಬಟ್ಟೆಗಳನ್ನು ತಂದು ಕೊಡುತ್ತಿದ್ದ.

---

1 ಪಿಶುನ ಎಂದರೆ ಚಾಡಿಕೋರ ಎಂದರ್ಥ.

ಒಂದು ದಿನ ಜನಗಳ ಅಭಿಪ್ರಾಯವನ್ನು ಪರೀಕ್ಷಿಸುವುದಕ್ಕಾಗಿ ರಾಮ ತಾನೇ ವೇಷಾಂತರ ಹಾಕಿಕೊಂಡು ನಗರದಲ್ಲಿ ಸಂಚರಿಸುತ್ತಿದ್ದ. ಅವನ್ನು ಹೇಗೋ ಅರಿತು ಕೊಂಡು ಮಾಯಾವಿಯಾದ ಪಿಶುನ ತನ್ನ ಹೆಂಡತಿಯನ್ನು ದಂಡಿಸಿ 'ದುಷ್ಟೆ, ಸ್ವೇಚ್ಛಾಚಾರಿಣಿಯಾದ ನಿನ್ನನ್ನು ಕೊಂದು ಬಿಡುತ್ತೇನೆ. ಬಿಟ್ಟ ಹೆಂಡತಿಯನ್ನು ಕಟ್ಟಿಕೊಳ್ಳುವುದಕ್ಕೆ ನಾನು ರಾಮನಲ್ಲ' ಎಂದು ಗರ್ಜಿಸಿದ.

ಸೀತಾ ಪರಿತ್ಯಾಗ—ಈ ವಾಕ್ಯವನ್ನು ಕೇಳಿ ರಾಮನಿಗೆ ಸಿಡಿಲು ಬಡಿದಂತಾಯಿತು. 'ನಾನು ಧರ್ಮಕ್ಕೆ ಎಷ್ಟು ಹೆದರಿ ನಡೆದರೂ ಜನರು ಹೀಗೆ ಆಡಿಕೊಳ್ಳುವರಲ್ಲ!' ಎಂದು ಬಹು ದುಃಖವಾಯಿತು. ಆ ದೂರನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಸೀತೆಯನ್ನು ಪರಿತ್ಯಾಗ ಮಾಡಿದನು. ಪರಿತ್ಯಕ್ತಳಾದ ಸೀತೆ ವಾಲ್ಮೀಕಿಯನ್ನು ಮೊರೆಹೊಕ್ಕು ಪತಿಯೊಡನೆ ಕೂಡಿಬರುವಂತೆ ಪ್ರಾರ್ಥಿಸಿಕೊಂಡಳು. ಅದಕ್ಕೆ ಅವರು 'ನಾನು ಹಂಪೆಗೆ ಪ್ರಯಾಣ ಮಾಡುತ್ತಿದ್ದೇನೆ, ನೀನೂ ಅಲ್ಲಿಗೆ ಬಂದು ಯಾವುದಾದರೂ ನಿರ್ಮಲ ಸರಸ್ಸಿನಲ್ಲಿ ಸ್ನಾನಮಾಡಿ ಮಂಗಳಾಂಬಿಯನ್ನು ಆರಾಧಿಸು. ಸಕಲಾಭೀಷ್ಟಗಳೂ ಕೈಗೂಡುವುವು' ಎಂದು ತಿಳಿಸಿದರು.

ಅದರಂತೆ ಮೈಥಿಲಿ ಹಂಪೆಗೆ ಬಂದು ಈ ಸರೋವರದಲ್ಲಿ ಒಂದು ತಿಂಗಳ ಕಾಲ ಸ್ನಾನಮಾಡಿ ನಿರಾಹಾರಿಯಾಗಿ ದಾಕ್ಷಾಯಣಿಯನ್ನು ಆರಾಧಿಸಿದಳು. ಆಗ ಗೌರಿ ಪ್ರತ್ಯಕ್ಷಳಾಗಿ 'ನಿನಗೆ ಇಬ್ಬರು ವೀರಕುಮಾರರು ಹುಟ್ಟುವರು. ಅನಂತರ ನೀನು ನಿಜರೂಪದಿಂದ ನಿನ್ನ ಪತಿಯನ್ನೈದುವೆ. ನಿನ್ನ ಈ ಕಷ್ಟಗಳಿಗೆಲ್ಲಾ ನಾರದನ ಶಾಪವೇ ಕಾರಣ' ಎಂದು ಸಮಾಧಾನ ಮಾಡಿ ಅವಳ ಪೂರ್ವವೃತ್ತಾಂತವನ್ನು ತಿಳಿಸಿ ಅಂತರ್ಧಾನಳಾದಳು.

ಸೀತಾಜನನ ವೃತ್ತಾಂತ—ಒಂದು ದಿನ ಇಂದ್ರಾದ್ಯಮರರು ವಿಷ್ಣು ದರ್ಶನಕ್ಕಾಗಿ ವೈಕುಂಠಲೋಕಕ್ಕೆ ಹೋದರು. ಆದರೆ ದ್ವಾರಪಾಲಕರು ಅವರನ್ನು ದ್ವಾರದಲ್ಲೇ ತಡೆದುಬಿಟ್ಟರು. 'ನಾನಾದರೂ ನಿಶ್ಶಂಕವಾಗಿ ಹೋಗುತ್ತೇನೆ' ಎಂದು ನಾರದರು ಹೊರಟರು. ಆದರೆ ಅವರೂ ನಿರುದ್ಧರಾಗಿ ಲಜ್ಜೆಯಿಂದ ಬಾಗಿಲಲ್ಲೇ ನಿಲ್ಲಬೇಕಾಯಿತು. ಒಳಗೆ ತುಂಬುರರ ಗಾನ ನಡೆಯುತ್ತಿತ್ತು. ಅದನ್ನು ಕೇಳುವುದಕ್ಕಾಗಿ ವಿಷ್ಣು ಲಕ್ಷ್ಮಿಗೆ ಹೇಳಿಕಳುಹಿಸಿದ. ಅವಳು ವಾರಾಹೀ, ನಾರಸಿಂಹೀ, ಭೃಶುಂಡೀ ಮೊದಲಾದ ಮಾತೃಕಾಗಣದೊಡನೆ ಸಭಾ ಪ್ರವೇಶಮಾಡಿದಳು. ಪ್ರವೇಶ ಮಾಡುವಾಗ ಭೃಶುಂಡಿ ಬಾಗಿಲಲ್ಲಿ ನಿಂತಿದ್ದ ನಾರದರನ್ನು ತಳ್ಳಿಸಿದಳು. ಲಕ್ಷ್ಮಿ ಅದನ್ನು ಕಂಡರೂ ಕಾಣದಂತೆ ಇದ್ದುಬಿಟ್ಟಳು.

ನಾರದರ ಶಾಪ – ಅವಳ ಉದಾಸೀನಭಾವವನ್ನು ಕಂಡು ಮೊದಲೇ ಅಪಮಾನಿತರಾಗಿದ್ದ ನಾರದರಿಗೆ ಬಹಳ ಕೋಪಬಂತು. ಅವರು ಲಕ್ಷ್ಮಿಯ ಮೇಲೆ

ಕೋಪಿಸಿಕೊಂಡು 'ತಾಮಸ ಪ್ರವೃತ್ತಿಯನ್ನು ಅವಲಂಬಿಸಿ, ನನಗೆ ಅವಮಾನ ಮಾಡುತ್ತಿದ್ದರೂ ಹಾಗೆಯೇ ನೋಡುತ್ತಿರುವೆಯಾದ್ದರಿಂದ ನೀನು ಭೂಲೋಕದಲ್ಲಿ ರಾಕ್ಷಸ ಕುಲದಲ್ಲಿ ಜನ್ಮತಾಳು' ಎಂದು ಶಾಪಕೊಟ್ಟರು. ಆ ಶಾಪಕ್ಕೆ ಅಂಜಿದ ಲಕ್ಷ್ಮಿ ವಿಶಾಪಕೊಡುವಂತೆ ನಾರದರನ್ನು ಪ್ರಾರ್ಥಿಸಿಕೊಳ್ಳಲು ಆ ದೇವಮುನಿ 'ರಾಕ್ಷಸ ಕುಲದಲ್ಲಿ ಜನಿಸಿದರೂ ವಿಷ್ಣುವಿನ ಅವತಾರವಾದ ರಾಮನನ್ನು ಸೇರುವಿ' ಎಂದು ವಿಶಾಪಕೊಟ್ಟರು.

ಕಥೋಪಸಂಹಾರ—ಇತ್ತಲಾಗಿ ಭೂಲೋಕದಲ್ಲಿ ದೈತ್ಯೇಂದ್ರನಾದ ರಾವಣ ಅನೇಕ ರಾಜಪುತ್ರಿಯರನ್ನು ಕೊಂದು ಅವರ ರಕ್ತವನ್ನು ಕುಡಿಯಬೇಕೆಂದು ಒಂದು ಕನಕಕುಂಭದಲ್ಲಿ ತುಂಬಿಟ್ಟಿದ್ದನು. ಮಹರ್ಷಿಗಳು ಅವರಲ್ಲಿ ದಿವ್ಯ ತೇಜಸ್ಸನ್ನು ಆವಾಹಿಸಿದರು. ರಾವಣನ ಪತ್ನಿ ಮಂಡೋದರಿ ಗಂಡನ ದುರ್ಮಾರ್ಗಕ್ಕೆ ಬೇಸತ್ತು ಆ ಕುಂಭದಲ್ಲಿದ್ದ ರಕ್ತವನ್ನೆಲ್ಲಾ ವಿಷವೆಂದು ಭಾವಿಸಿ ಕುಡಿದುಬಿಟ್ಟಳು. ಅದರಲ್ಲಿ ಆವಾಹಿತವಾಗಿದ್ದ ತೇಜಸ್ಸಿನಿಂದ ಅವಳು ಗರ್ಭವತಿಯಾದಳು ಮತ್ತು ಲೋಕಾಪವಾದಕ್ಕಂಜಿ ಆ ಗರ್ಭವನ್ನು ಕಿತ್ತು ಸಮುದ್ರದಲ್ಲಿ ಎಸೆದುಬಿಟ್ಟಳು. ಅದು ಸಮುದ್ರದಲ್ಲಿ ತೇಲುತ್ತಾ ತೇಲುತ್ತಾ ದಡಕ್ಕೆ ಬಂದು ಕೆಸರಿನಲ್ಲಿ ಹೂತುಹೋಗಿ ಬಹುಕಾಲ ಅಲ್ಲೇ ಇತ್ತು; ಅದರೊಳಗೆ ಉದ್ಭವಿಸಿದ ಕನ್ಯೆ ಗೋಪ್ಯವಾಗಿದ್ದಳು.

ಹೀಗಿರಲು ಜನಕರಾಜ ಯಜ್ಞಕ್ಕಾಗಿ ಭೂಮಿ ಅಗೆಸಿದಾಗ ನೇಗಲಿಗೆ ಸಿಕ್ಕಿಕೊಂಡು ಒಂದು ಕನ್ಯೆ ಹೊರಬಿದ್ದಳು. ಆದ್ದರಿಂದ ಆಕೆಗೆ ಸೀತೆ[1] ಎಂದೇ ಹೆಸರಿಡಲಾಯಿತು. ಆಕೆಯೇ ರಾಮನನ್ನು ಸೇರಿ ದೈತ್ಯ ಸಂಹಾರಕ್ಕೆ ಕಾರಣಳಾದಳು. ಇದೇ ಗಿರಿಜೆ ಸೀತೆಗೆ ವರ್ಣಿಸಿದ ಜನನವೃತ್ತಾಂತ.

ಗೌರಿಯ ಮಾತಿನಂತೆ ಸೀತೆ ವಾಲ್ಮೀಕಿಯ ಆಶ್ರಮಕ್ಕೆ ಹೋಗಿ ಲವಕುಶರನ್ನು ಪ್ರಸವಿಸಿ ಸುಖಿಯಾದಳು. ಈ ರೀತಿ ಸೀತೆ ಸ್ನಾನ ಮಾಡಿದ್ದರಿಂದ ಈ ಸರೋವರ ಅವಳ ಹೆಸರಿಂದಲೇ ಖ್ಯಾತವಾಯಿತು. ಈ ಸರಸ್ಸಿನಲ್ಲಿ ಅಘಮರ್ಷಣ ಸ್ನಾನಮಾಡಿ[2] ಮಹಾದಾನ ಮಾಡುವವರು ಸರ್ವಕಾಮಗಳನ್ನೂ ಮಹಾಸಂಪತ್ತನ್ನೂ ಪಡೆಯುತ್ತಾರೆ. ಈ ಸರೋವರದ ಇತಿಹಾಸವನ್ನು ಓದುವ ಮತ್ತು ಕೇಳುವ ಜನರು ಇಹಲೋಕದಲ್ಲಿ ಸರ್ವಾರ್ಥಗಳನ್ನು ಪಡೆದು ಪರತ್ರವೂ ಸಾಯುಜ್ಯವನ್ನು ಹೊಂದುತ್ತಾರೆ.

---

1 ಸೀತಾ ಎಂದರೆ ನೇಗಿಲು ಎಳೆವಾಗ ಬೀಳುವ ಗುಳಿ (furrow) "ಸೀತಾ ಲಾಂಗಲ ಪದ್ಧತಿಃ" ಅಮರ.

2 ಋಗ್ವೇದಪ್ರೋಕ್ತವಾದ "ಋತಂ-ಚ-ಸತ್ಯಂ—" ಎಂಬ ಸೂಕ್ತವನ್ನು ಹೇಳಿಕೊಂಡು ಮಾಡುವ ಸ್ನಾನ.

ಅಧ್ಯಾಯ 74 ರಾಮ ತೀರ್ಥ

[ರಾಮ ತೀರ್ಥ ಮಾಲ್ಯವಂತ ಗಿರಿಯ ಮೇಲೆ ರಾಮದೇವಾಲಯದ ಪಕ್ಕದಲ್ಲಿದೆ. ಈ ಪ್ರಸ್ತಾಪ ಹಿಂದೆಯೇ 61ನೇ ಅಧ್ಯಾಯದ ಮುಖ ಟಿಪ್ಪಣಿಯಲ್ಲಿ ಬಂದಿದೆ. ಪುರಾಣದಲ್ಲೇನೋ ಈ ತೀರ್ಥವನ್ನು ಅದ್ಭುತವಾಗಿ ವರ್ಣಿಸಿದೆ; ಆದರೆ ಈಗ ಈ ವರ್ಣನೆಗಳ ಯಾವ ಕುರುಹೂ ಕಾಣುವುದಿಲ್ಲ. — ವಿ. ತೀ.]

ತೀರ್ಥ ವರ್ಣನೆ—ರಾಮ ತೀರ್ಥ ಮಾಲ್ಯವಂತ ಗಿರಿಯ ತಪ್ಪಲಲ್ಲಿದೆ. ಇದು ಸರ್ವಪಾತಕ ವಿಧ್ವಂಸಿ, ಕಾಂಕ್ಷಿತಾರ್ಥಪ್ರದಾಯಕ ಮತ್ತು ಸೋಮಶೇಖರ ಪಾದಾಬ್ಜಪ್ರಾಪಕ ಈ ತೀರ್ಥವು ರತ್ನಸೋಪಾನಗಳಿಂದಲೂ ಸುವರ್ಣಜಗಲಿಗಳಿಂದಲೂ ಪರಿಶೋಭಿಸುತ್ತಿದೆ. ರಾಮದೇವನು ಈ ತೀರ್ಥದಲ್ಲಿ ಆವಿರ್ಭವಿಸಿ ಕರನೆಂಬ ಭೂಪತಿಯನ್ನು ರಕ್ಷಿಸಿ ಅವನ ದುಷ್ಟ ಮಂತ್ರಿ ವಿಜಯನನ್ನೂ ಅವನ ಮಗನನ್ನೂ ಸಂಹರಿಸಿದ್ದರಿಂದ ಇದಕ್ಕೆ ಆ ರಾಮನ ಹೆಸರೇ ಬಂತು.

ಕರ-ವಿಜಯರ ಕಥೆ—ಶಿವಪೂಜಾರತನಾದ ಕರನೆಂಬ ರಾಜ ವಿಜಯನೆಂಬ ಮಂತ್ರಿಯೊಡನೆ ಧರ್ಮದಿಂದ ರಾಜ್ಯಪರಿಪಾಲನೆ ಮಾಡುತ್ತಿದ್ದ. ಒಂದು ಸಲ ಶತ್ರುಗಳು ಅವನ ರಾಜ್ಯದ ಮೇಲೆ ದಂಡೆತ್ತಿ ಬಂದರು. ಅವರ ಮಹಾಬಲವನ್ನು ನೋಡಿ ಕರನಿಗೆ 'ಇವರನ್ನು ಹೇಗೆ ಗೆಲ್ಲುವುದು?' ಎಂದು ಚಿಂತೆ ಹತ್ತಿತ್ತು. ವಿಜಯ ರಾಜನಿಗೆ 'ಹೆದರಬೇಡ, ನನಗೆ ವೀರರಾಘವ ಮಂತ್ರ ಗೊತ್ತಿದೆ. ಅದನ್ನು ಜಪಿಸಿ ಶತ್ರುಗಳನ್ನು ಜಯಿಸಬಹುದು' ಎಂದು ಧೈರ್ಯಕೊಟ್ಟಿದ್ದರಿಂದ ಕರ ಸಾಹಸ ತಂದುಕೊಂಡು ಶತ್ರುಗಳನ್ನು ಎದುರಿಸಿದ. ಆದರೆ ಶತ್ರುಗಳು ದುರ್ಬಲನಾಗಿದ್ದ ಕರನನ್ನು ಸುತ್ತುಗಟ್ಟಿಕೊಂಡು ಅವನ ಸಾರಥಿಯನ್ನು ಕೊಂದು, ರಥವನ್ನೂ ಭಗ್ನಮಾಡಿ ಧನುಸ್ಸನ್ನೂ ಛೇದಿಸಿಬಿಟ್ಟರು. ಕರನ ದುರವಸ್ಥೆಯನ್ನು ಕಂಡು ಮಂತ್ರಿಯಾದ ವಿಜಯ ವೀರರಾಘವ ಮಂತ್ರ ಪಠಿಸಿದ ಒಡನೆಯೇ ರಾಮ ಆವಿರ್ಭವಿಸಿ ಕರ-ವಿಜಯರಿಗೆ ಜಯ ಸಂಪಾದಿಸಿಕೊಟ್ಟ.

ವಿಜಯನ ದುಷ್ಟಪ್ರವೃತ್ತಿ—ಬಳಿಕ ರಾಜ ರಾಜ್ಯಸೂತ್ರಗಳನ್ನೆಲ್ಲಾ ವಿಜಯನಿಗೇ ಒಪ್ಪಿಸಿ ತಾನು ಆರಾಮವಾಗಿದ್ದುಬಿಟ್ಟ. ವಿಜಯನಿಗೆ ಅಧಿಕಾರ ಮದದಿಂದ ತಲೆ ತಿರುಗಿತು. ಅವನು ಪ್ರಜೆಗಳನ್ನು ನಾನಾ ಪರಿಯಲ್ಲಿ ಹಿಂಸಿಸಲಾರಂಭಿಸಿದ. ಜೊತೆಗೆ ಅವನ ಮಗ ಶೂರನ ಅಸಭ್ಯವರ್ತನೆಯಂತೂ ವರ್ಣನಾತೀತವಾಯಿತು. ಸ್ತ್ರೀಲಂಪಟನಾದ ಶೂರ ಕುಲಸ್ತ್ರೀಯರನ್ನೂ ಕೆಡಿಸಲಾರಂಭಿಸಿದ.

ಒಂದು ದಿನ ಧರ್ಮಕರ್ತನ ಹೆಂಡತಿಯಾದ ಪ್ರಿಯಂವದೆಯೆಂಬ ಪತಿವ್ರತೆಯೊಬ್ಬಳು ಋತು ಸ್ನಾನ ಮಾಡಿಕೊಂಡು ಮನೆಗೆ ಬರುತ್ತಿದ್ದಳು. ಅವಳನ್ನು

ಕಂಡು ಕಾಮಾರ್ತನಾದ ಶೂರ ಅವಳೊಡನೆ ಅನುಚಿತವಾದ ಸಂಭಾಷಣೆ ಮಾಡುತ್ತಾ
ಅವಳ ಮೇಲೆ ಕೈ ಮಾಡಿದ. ಅದನ್ನು ಸಹಿಸಲಾರದೆ ಅವಳು ಹೊಸಲಿಗೆ ತಲೆ
ಚಚ್ಚಿಕೊಂಡು ಅವನೆದುರಿಗೇ ಪ್ರಾಣ ಬಿಟ್ಟಳು. ಅವಳ ಗಂಡ ಮನೆಗೆ ಬಂದು ಈ
ಅನಾಹುತವನ್ನೆಲ್ಲಾ ನೋಡಿ ಅದಕ್ಕೆಲ್ಲಾ ಕಾರಣಭೂತನಾದ ಶೂರನನ್ನು ವಾಚಾ
ಮಗೋಚರ ದೂಷಿಸಿದ. ಅದಕ್ಕೆ ಪ್ರತಿಯಾಗಿ ಶೂರ ಅವನನ್ನು ಒದ್ದು ಅವನ
ಮನೆಯನ್ನೆಲ್ಲಾ ಪುಂಡ ಪೋಕರಿಗಳಿಂದ ಲೂಟಿ ಮಾಡಿಸಿಬಿಟ್ಟ. ಧರ್ಮಕರ್ತ
ರಾಜನ ಬಳಿಗೆ ಹೋಗಿ ದೂರು ಹೇಳಿಕೊಂಡ.

ಕರ—ವಿಜಯರ ಮನಸ್ತಾಪ—ರಾಜನಾದ ಕರ ವಿಜಯನನ್ನೂ ಶೂರ
ನನ್ನೂ ಕರೆಸಿ ಎಲ್ಲ ಸಮಾಚಾರವನ್ನೂ ವಿಚಾರಿಸಿದ. ಆದರೆ ವಿಜಯ ಮಗನ
ಪರವಾಗಿಯೇ ವಾದಿಸುತ್ತಾ ಮನಸ್ಸಿಗೆ ಬಂದ ಹಾಗೆಲ್ಲಾ ಮಾತಾಡಿದ. ಅದನ್ನು
ಸೈರಿಸಲಾರದೆ ಕರ ಮಂತ್ರಿ ಮಂತ್ರಿಪುತ್ರ ಇಬ್ಬರನ್ನೂ ಊರುಬಿಟ್ಟು ಓಡಿಸಿದ.
ಹೀಗೆ ಅಪಮಾನಿತರಾದ ಅವರಿಬ್ಬರೂ ಕರನ ಮೇಲೆ ಛಲ ತೀರಿಸಿಕೊಳ್ಳಬೇಕೆಂದು
ಸಮಯಕಾಯುತ್ತಿದ್ದರು.

ಒಂದು ದಿನ ಪರ್ವಕಾಲವಾಗಿತ್ತು. ಆದ್ದರಿಂದ ಕರ ಈ (ರಾವ) ತೀರ್ಥದಲ್ಲಿ
ಸ್ನಾನಮಾಡಿಕೊಂಡು ಹೋಗಬೇಕೆಂದು ಒಬ್ಬನೇ ಒಬ್ಬ ದೂತನೊಡನೆ ಬಂದ.
ಅದೇ ಸರಿಯಾದ ಸಮಯನೆಂದು ತಿಳಿದು ವಿಜಯ ಶೂರ ಇಬ್ಬರೂ ಇದ್ದಕ್ಕಿದ್ದ
ಹಾಗೆ ರಾಜನ ಮೇಲೆ ಧಾಳಿ ನಡೆಸಿ ದೂತನನ್ನು ಕೊಂದು ರಾಜನನ್ನೂ ಯಮ
ಸದನಕ್ಕೆ ಕಳುಹಿಸುವುದರಲ್ಲಿದ್ದರು. ಆಗ ನಿರಾಶ್ರಯನಾದ ಕರ ಏಕ ಮನಸ್ಸಿನಿಂದ
ರುದ್ರನನ್ನು ಧ್ಯಾನಮಾಡಿ 'ಶಿವ, ಶಂಭೋ ದಯಾಕರ ! ಅಂದು ಯುದ್ಧಕಾಲದಲ್ಲಿ
ರಾಮರೂಪದಿಂದ ಆವಿರ್ಭವಿಸಿ ಸಲಹಿದಿ. ಇಂದೂ ಹಾಗೆಯೇ ನೀನೇ ಕಾಪಾಡ
ಬೇಕು' ಎಂದು ಭಕ್ತಿಯಿಂದ ಬೇಡಿಕೊಂಡ.

ತತ್‌ಕ್ಷಣವೇ ರಾಮ ಪ್ರತ್ಯಕ್ಷನಾಗಿ ಶತ್ರುಗಳನ್ನು ಸಂಹರಿಸಿ, ಕರನಿಗೆ ವಿಸ್ತಾರ
ವಾಗಿ ತತ್ವೋಪದೇಶ ಮಾಡುತ್ತಾ 'ನಾನು ಬೇರೆ, ಶಿವ ಬೇರೆ ಎಂದು ತಿಳಿಯ
ಬಾರದು.

ಮದ್ಭಕ್ತಃ ಶಂಕರದ್ವೇಷೀ ಮದ್ದ್ವೇಷೀ ಶಂಕರಪ್ರಿಯಃ ।
ತಾವುಭೌ ನರಕಂ ಯಾತೋ ಯಾವಚ್ಚಂದ್ರದಿವಾಕರೌ ॥

ನನ್ನ ಭಕ್ತನಾಗಿ ಶಂಕರನನ್ನು ದ್ವೇಷಿಸುವವನು ಮತ್ತು ನನ್ನನ್ನು ದ್ವೇಷಿಸಿ
ಶಂಕರನಿಗೆ ಭಕ್ತನಾದವನು ಈ ಇಬ್ಬರೂ ಸೂರ್ಯಚಂದ್ರರಿರುವವರೆಗೆ ನರಕ ಭಾಗಿ
ಗಳಾಗುತ್ತಾರೆ. ನೀವು ಯುಕ್ತವಾಗಿ ನಡೆದುಕೊಂಡರೆ ಇಲ್ಲೂ ಸುಖವಾಗಿ ಬಾಳ

ಕಡೆಗೆ ಅಮೃತ ಪದವಿಯನ್ನು ಪಡೆಯುವಿ. ಈ ತೀರ್ಥದಲ್ಲಿ ನಾನು ಅಭಿವ್ಯಕ್ತನಾದ್ದರಿಂದ ಇದು ನನ್ನ ಹೆಸರಿನಿಂದಲೇ ಕರೆಯಲ್ಪಡಲಿ. ಕಾರ್ತಿಕ ಮಾಸದಲ್ಲಿ ಇದರಲ್ಲಿ ಸ್ನಾನಮಾಡುವವನು ಜೀವನ್ಮುಕ್ತನೇ ಸರಿ' ಎಂದು ಹೇಳಿ ಅದೃಶ್ಯನಾದ.

ಅಧ್ಯಾಯ 75 ಕೋಟಿ ತೀರ್ಥ

[ಪೂರ್ವವಾಹಿನಿಯಾದ ತುಂಗಭದ್ರೆ ಚಕ್ರತೀರ್ಥದ ಬಳಿ ಎರಡು ಗುಡ್ಡಗಳ ನಡುವೆ ಉತ್ತರಕ್ಕೆ ತಿರುಗಿ ಹರಿಯುತ್ತದೆ. ಈ ಸ್ಥಳದಲ್ಲಿ ಬಲಗಡೆಯಿರುವ ಗುಡ್ಡವೇ ಋಷ್ಯಮೂಕ. (ಅಧ್ಯಾಯ 13 ನೋಡಿ) ಋಷ್ಯಮೂಕಕ್ಕೆ ಎದುರಾಗಿ ಪೂರ್ವದ ಕಡೆಯಿರುವ ದಿಬ್ಬದಲ್ಲಿ ನದಿಗೆ ಸಮೀಪದಲ್ಲಿರುವ ಭಾರಿ ಭಾರಿ ಬಂಡೆಗಳ ಮೇಲೆ ಒಂದೆರಡು ಕಡೆ ನೂರಾರು ಲಿಂಗಗಳನ್ನು ಕಡೆದಿದ್ದಾರೆ. ಈಗ ಇದಕ್ಕೇ ಕೋಟಿಲಿಂಗವೆಂಬ ಹೆಸರು ಪ್ರಸಿದ್ಧವಾಗಿದೆ. ಈ ಸ್ಥಳಕ್ಕೆ ಹತ್ತುವ ಮಾರ್ಗ ಕಠಿನವಾಗಿದೆ; ಆದರೂ ಕಷ್ಟಪಟ್ಟರೆ ಹತ್ತಬಹುದು. ಇಂದ್ರನು ಸ್ಥಾಪಿಸಿದ ಕೋಟಿ ಲಿಂಗಗಳನ್ನು ಈ ಸ್ಥಳದಲ್ಲೇ ಪೂಜಿಸಿರಬಹುದು. ಇಂದ್ರ ಪೂಜಿಸಿದ್ದು ಮರಳುಲಿಂಗಗಳಾದ್ದರಿಂದ ಅವೆಲ್ಲ ಎಂದೋ ನೀರಿನಲ್ಲಿ ಕೊಚ್ಚಿ ಹೋಗಿರಬೇಕು. ಈ ಸ್ಥಳದಲ್ಲಿರುವುದೇ ಕೋಟಿತೀರ್ಥ. ಇಲ್ಲಿ ದೇವೇಂದ್ರ ಕೋಟಿ ಲಿಂಗಗಳನ್ನು ಪ್ರತಿಷ್ಠಿಸಿ ಅರ್ಚಿಸಿದ್ದರಿಂದ ಈ ತೀರ್ಥಕ್ಕೆ ಕೋಟಿ ತೀರ್ಥವೆಂಬ ಹೆಸರು ಬಂದಿದೆಯೆಂಬುದು ಸ್ಪಷ್ಟವಾಗಿದೆ—ಎ. ತಿ.]

ದುರ್ವಾಸರ ಕೈಲಾಸ ಯಾತ್ರೆ—ಸುರಸೇವಿತವೂ ಅನಂತ ಸುಖಪ್ರದವೂ ಅನೇಕಕೋಟಿ ಪಾಪನಿವಾರಕವೂ ಭವತಾರಕವೂ ಆದ ಈ ತೀರ್ಥದ ಬಳಿಯಲ್ಲಿ ದೇವೇಂದ್ರ ಕೋಟಿಲಿಂಗಗಳನ್ನು ಪ್ರತಿಷ್ಠೆಮಾಡಿ ಪೂಜಿಸಿದ್ದರಿಂದ ಇದಕ್ಕೆ ಕೋಟಿ ತೀರ್ಥವೆಂದು ಪ್ರಸಿದ್ಧಿ ಬಂತು. ಆ ಆಖ್ಯಾನದ ವರ್ಣನೆಯೇನೆಂದರೆ.

ಒಂದು ದಿನ ಮಹಾದೇವ ಕೈಲಾಸದಲ್ಲಿ ಸಭಾ ಮಧ್ಯದಲ್ಲಿ ಕುಳಿತು ವಿರಾಜಿಸುತ್ತಿದ್ದ. ಅದೇ ಸಮಯದಲ್ಲಿ ದುರ್ವಾಸಮುನಿಗಳು ಶಂಭುವಿನ ಸಂದರ್ಶನಾರ್ಥ ಅಲ್ಲಿಗೆ ಬಂದರು. ಬಂದು ಭಕ್ತಿಪರವಶರಾಗಿ ಶಂಕರನನ್ನು ಮನಸಾರೆ ಸ್ತುತಿಸಿದರು. ಆಗ ಗಿರಿಜೆ ದುರ್ವಾಸರ ಭಕ್ತಿಗೆ ಮೆಚ್ಚಿ ಒಂದು ಅನರ್ಘ್ಯವಾದ ಪುಷ್ಪಹಾರವನ್ನು ಅವರಿಗೆ ಕೊಟ್ಟಳು.

ಈ ಹಾರವನ್ನು ವಿಷ್ಣು ಮಹಾದೇವನಿಗೆ ಅರ್ಪಿಸಿದ್ದ. ಸರ್ವಸಿದ್ಧಿಕರವೂ ಸರ್ವಸಂಪತ್ಪ್ರದಾಯಕವೂ ಆನಂದವರ್ಧಕವೂ ಆದ ಆ ಹಾರವನ್ನು ಮಹದೇವ ಪ್ರೀತಿಯಿಂದ ಉಮಾದೇವಿಗೆ ಕೊಟ್ಟಿದ್ದ. ಅದನ್ನೇ ತೆಗೆದು, ದುರ್ವಾಸರ ಭಕ್ತಿಗೆ ಮೆಚ್ಚಿ, ಮೇನಕಾತ್ಮಜೆ ದುರ್ವಾಸರಿಗೆ ಕೊಟ್ಟಳು. ದುರ್ವಾಸರು ಅದನ್ನು ಭಕ್ತಿಯಿಂದ ಸ್ವೀಕರಿಸಿ ತಲೆಗೊತ್ತಿಕೊಂಡು ಆಘ್ರಾಣಿಸಿ ಕೈಲಾಸದಿಂದ ಹೊರಟರು.

ದುರ್ವಾಸರಿಗೆ ದಾರಿಯಲ್ಲಿ ಆ ಹಾರದ ವಿಷಯವಾಗಿ ನಾನಾ ಆಲೋಚನೆಗಳು ತಲೆದೋರಿದುವು. "ವಿರಕ್ತನಾದ ನನಗೆ ಈ ಹಾರದಿಂದ ಯಾವ ಲಾಭವೂ

ಇಲ್ಲ. ವಿಷಯಾರ್ಥಿಗಳಾದ ಯಾರಿಗಾದರೂ ಕೊಟ್ಟರೆ ಅವರಿಗೆ ಇದರಿಂದ ಮಹೋಪಕಾರವಾಗುತ್ತದೆ. ಯಾವ ರೀತಿಯಿಂದಲಾದರೂ ಸಂತೋಷಪಡಿಸಬೇಕು. ಅದೇ ಈಶ್ವರನ ಪೂಜೆ.

> ಯೇನ ಕೇನ ಪ್ರಕಾರೇಣ ಯಸ್ಯ ಕಸ್ಯಾಪಿ ದೇಹಿನಃ ।
> ಸಂತೋಷಂ ಜನಯೇತ್ ಪ್ರಾಜ್ಞಃ ತದೇವೇಶ್ವರಪೂಜನಮ್ ॥

ಎಂದು ಅವರು ಮನಸಾ ನಿರ್ಧರಿಸಿಕೊಂಡರು.

ದುರ್ವಾಸರ ಶಾಪ—ಅಲ್ಲಿಂದ ಮುಂದೆ ಸಂಚರಿಸುತ್ತಾ ಅವರು ಹಾಗೆಯೇ ಅಮರಾವತಿಯ ಕಡೆ ಹೊರಟರು. ಮಾರ್ಗದಲ್ಲಿಯೇ ದೇವೇಂದ್ರನ ಭೆಟ್ಟಿಯಾಯಿತು. ಅವನು ಶಚೀಸಮೇತನಾಗಿ ಐರಾವತವನ್ನೇರಿ ಬರುತ್ತಿದ್ದ. ದುರ್ವಾಸರು ಶಿವಪ್ರಸಾದವಾದ ಆ ಹಾರಕ್ಕೆ ಇವನೇ ಸರಿಯಾದ ಪಾತ್ರನೆಂದಾಲೋಚಿಸಿ ಅದನ್ನು ದೇವರಾಜನ ಕೈಗೆ ಕೊಟ್ಟರು. ಆದರೆ ಮದೋನ್ಮತ್ತನಾದ ಪಾಕಶಾಸನ ಅನಾದರದಿಂದ ಆ ಹಾರವನ್ನು ಐರಾವತದ ತಲೆಯ ಮೇಲೆ ಎಸೆದುಬಿಟ್ಟ.

ಒಡನೆಯೇ ಶಚಿ ಅವನನ್ನು ತಡೆದು ಆಶಂಕಿತಳಾಗಿ 'ಛೇ ಛೇ, ಶಿವನಿರ್ಮಾಲ್ಯಕ್ಕೆ ಯಾರಾದರೂ ಅವಮಾನ ಮಾಡುವರೇ? ಬೇಡ, ಬೇಡ. ಅದರಲ್ಲೂ ಈ ಹಾರ ಮಹಾಫಲಪ್ರದ. ಸರ್ವ ಪ್ರಯತ್ನಗಳಿಂದಲೂ ಇದು ಪೂಜ್ಯವಾದುದು. ಶಿವನಿರ್ಮಾಲ್ಯ ದೂಷಕರು ನರಕಭಾಗಿಗಳಾಗುವವರಲ್ಲದೆ ಅವರ ಕುಲವೇ ಕ್ಷಯಿಸಿ ಹೋಗುವುದು, ಎಂದು ಹೇಳಿದರೂ ಶಚೀಪತಿ ಅಸಡ್ಡೆ ಮಾಡಿದ.

ಆ ಕ್ಷಣ ಐರಾವತ ತನ್ನ ಸಹಜವಾದ ಚೇಷ್ಟೆಗನುಗುಣವಾಗಿ ತಲೆಯ ಮೇಲಿದ್ದ ಹಾರವನ್ನು ಸೊಂಡಿಲಿಂದ ತೆಗೆದುಕೊಂಡು ಕಾಲಿಂದ ತುಳಿದು ಹಾಕಿತು. ಇದನ್ನೆಲ್ಲಾ ಕಣ್ಣಾರೆ ನೋಡುತ್ತಿದ್ದ ದುರ್ವಾಸರು ಕ್ರುದ್ಧರಾಗಿ 'ಎಲಾ ಮದೋದ್ಧತನಾದ ಇಂದ್ರ, ನಿನಗೆ ಇಷ್ಟು ಗರ್ವ ಬಂತೇ! ನೀನು ಸರ್ವ ಸಾಮ್ರಾಜ್ಯ ಭ್ರಷ್ಟನಾಗು' ಎಂದು ಶಾಪಕೊಟ್ಟರು.

ಶಾಪವಾಕ್ಯಗಳನ್ನು ಕೇಳಿದೊಡನೆಯೇ ಇಂದ್ರನ ಗರ್ವವೆಲ್ಲ ಅಡಗಿಹೋಯಿತು. ಕೂಡಲೇ ಐರಾವತದಿಂದಿಳಿದು ದುರ್ವಾಸರ ಕಾಲಿಗೆ ಬಿದ್ದು ಕ್ಷಮಾಪಣೆ ಬೇಡಿಕೊಂಡ. ಶಚಿಯೂ ಇತರ ದೇವತೆಗಳೂ ದುರ್ವಾಸರನ್ನು ಮೊರೆಹೊಕ್ಕು ಕೋಪವನ್ನು ಉಪಸಂಹರಿಸಿ ಶಾಂತರಾಗುವಂತೆ ಬೇಡಿಕೊಳ್ಳಲು ದುರ್ವಾಸರು ಶಾಂತರಾಗಿ 'ಮಹೇಶ್ವರನ ಆರಾಧನೆಯಿಂದ ನಷ್ಟ ಸಾಮ್ರಾಜ್ಯ ಪುನಃ ಪ್ರಾಪ್ತವಾಗುತ್ತದೆ' ಎಂದು ಪ್ರತಿಶಾಪ ಕೊಟ್ಟು ಹೊರಟು ಹೋದರು.

ರಾಜ್ಯಹಾನಿ—ಶಾಪ ವೃತ್ತಾಂತವನ್ನು ಕೇಳಿದ ಬಲೀಂದ್ರ ಕ್ಷಿಪ್ರವಾಗಿ ದೇವರಾಜನ ಮೇಲೆ ದಂಡೆತ್ತಿ ಬಂದು ಅವನನ್ನು ಸುಲಭವಾಗಿ ಸೋಲಿಸಿ ಸರ್ಗವನ್ನು

ಕಿತ್ತುಕೊಂಡು ತಾನೇ ಸ್ವರ್ಗಾಧಿಪತಿಯಾದ. ರಾಜ್ಯಭ್ರಷ್ಟನಾದ ಅಮರಾಧಿಪತಿ ದುಃಖಾಕ್ರಾಂತನಾಗಿ ಘೋರಕಾನನಗಳಲ್ಲೇ ನೂರಾರು ವರ್ಷ ಅಲೆದಾಡುತ್ತಿದ್ದ. ಈ ಸಂಗತಿಯನ್ನು ತಿಳಿದು ದೇವಗುರು ಇಂದ್ರನನ್ನು ಕಂಡು ಅವನಿಗೆ ಧೈರ್ಯ ಹೇಳಿ ಪಂಚಾಕ್ಷರೀ ಉಪದೇಶಿಸಿ ಶಿವಪೂಜಾವಿಧಾನವನ್ನೆಲ್ಲಾ ಚೆನ್ನಾಗಿ ಬೋಧಿಸಿ ಮರಳಿನ ಲಿಂಗಗಳನ್ನು ಸ್ಥಾಪಿಸಿ ಅರ್ಚಿಸುವಂತೆ ಹೇಳಿದನು.

ರಾಜ್ಯಪ್ರಾಪ್ತಿ—ಅದರಂತೆಯೇ ಶುನಾಸೀರ ಈ ತೀರ್ಥದ ಹತ್ತಿರ ನದಿಯ ದಡದ ಮೇಲೆ ಮರಳಿಂದ[1] ಲಕ್ಷ ಲಕ್ಷ ಲಿಂಗಸ್ಥಾಪನೆ ಮಾಡಿ ಪೂಜಿಸುತ್ತಾ ಬಂದ. ಹೀಗೆ ನೂರು ವರ್ಷದಲ್ಲಿ ನೂರು ಲಕ್ಷ (ಅಂದರೆ ಕೋಟಿ) ಲಿಂಗಗಳನ್ನು ಸ್ಥಾಪಿಸಿ ಅರ್ಚಿಸಿದ. ಅವನ ಭಕ್ತಿಗೆ ಮೆಚ್ಚಿ ಶರ್ವ ಪ್ರತ್ಯಕ್ಷನಾಗಿ ಅವನನ್ನು ಶ್ಲಾಘಿಸಿ 'ಸಮುದ್ರ ಮಥನ ಮಾಡಿ ಅಮೃತವನ್ನು ಸಂಪಾದಿಸು. ಅದರಿಂದ ನಿನಗೆ ಸುಖವಾಗುವುದು' ಎಂದು ವರ ಕೊಟ್ಟ. ಅದರಂತೆ ಅಮೃತವನ್ನು ಪಡೆದು ದೇವೇಂದ್ರ ಪುನಃ ಸ್ವರ್ಗಾಧಿಪತಿಯಾದ.

ಅಧ್ಯಾಯ 76 ಚಕ್ರತೀರ್ಥ

[ಹಂಪೆಗೆ ಬಂದು ಯಾರನ್ನು ಕೇಳಿದರೂ ಈ ಚಕ್ರ ತೀರ್ಥವನ್ನು ತೋರಿಸುವರು ಅಥವಾ ಹಿಂದಿನ ಅಧ್ಯಾಯದ ಮುಖ ಟಿಪ್ಪಣಿಯಲ್ಲಿ ಹೇಳಿದಂತೆ ತುಂಗಭದ್ರೆ ಉತ್ತರಕ್ಕೆ ತಿರುಗುವ ಮೂಲೆಯಲ್ಲಿರುವ ವಿಶಾಲವಾದ ಮಡುವೇ ಚಕ್ರತೀರ್ಥ. ಇದನ್ನು ಕನ್ನಡದಲ್ಲಿ 'ತಿರುಗಣಿ ಮಡು' ಎಂದು ಕೆಲವರು ಕರೆಯುತ್ತಾರೆ.

ಬೇಸಿಗೆ ಕಾಲದಲ್ಲಿ ಪ್ರವಾಹವು ಶಾಂತವಾಗಿರುವುದರಿಂದ ನೀರಿನಲ್ಲಿ ಅಲೆಗಳು ಸ್ಪಷ್ಟವಾಗಿ ಕಾಣುವುದಿಲ್ಲ. ಆದರೆ ಪೂರ್ಣ ಪ್ರವಾಹದ ಕಾಲದಲ್ಲಿ ಈ ಇಡೀ ಪ್ರದೇಶದಲ್ಲೆಲ್ಲಾ ನೂರಾರು ಅಲೆಗಳು ಚಕ್ರಾಕಾರವಾಗಿ ತಿರುಗುತ್ತಿರುವುದನ್ನು ನೋಡಿದರೆ ಆಗ ಚಕ್ರತೀರ್ಥ ಎಂಬ ಹೆಸರಿನ ಅನ್ವರ್ಥತೆ ಮನದಟ್ಟಾಗುತ್ತದೆ. ಇದು ಬಿಟ್ಟು ಕೆಲವು ಜನ ಮೂಢರು ನದಿಯ ಹತ್ತಿರ ನಿಲ್ಲಿಸಿ ಎಲ್ಲೋ ಒಂದು ಕಡೆ ಕೈತೋರಿಸಿ ಇದೇ ಚಕ್ರತೀರ್ಥ ಎಂದು ವಂಚಿಸುತ್ತಾರೆ. ಅದು ಶುದ್ಧ ಅಪದ್ಧ. ಈ ವಿಶಾಲವಾದ ಅಪ್ಪು ಸ್ಥಳಕ್ಕೇ ಚಕ್ರತೀರ್ಥವೆಂದು ಹೆಸರೆಂಬುದೂ, ಶಿವದತ್ತವಾದ ಸುದರ್ಶನ ಚಕ್ರವನ್ನು ವಿಷ್ಣು ಈ ಸ್ಥಳದಲ್ಲಿ ಸ್ಥಾಪಿಸಿರುವುದರಿಂದ ಇದಕ್ಕೆ ಈ ಹೆಸರು ಬಂತೆಂಬುದೂ ಮುಂದಿನ ಕಥಾಭಾಗದಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಇದರ ದಡದ ಮೇಲೆ ಕೋದಂಡರಾಮ, ಸೂರ್ಯನಾರಾಯಣ ಮತ್ತು ಯಂತ್ರೋದ್ಧಾರಕ ಪ್ರಾಣ ದೇವರ ಗುಡಿಗಳಿವೆ. ಯಂತ್ರೋದ್ಧಾರಕರನ್ನು ಮಾಧ್ವ ಸಂನ್ಯಾಸಿಗಳಲ್ಲಿ ಪ್ರಖ್ಯಾತರಾದ ಶ್ರೀಮದ್ ವ್ಯಾಸರಾಜಸ್ವಾಮಿಗಳು (ಕೃಷ್ಣದೇವರಾಯರ ಸಮಕಾಲೀನರು) ಪ್ರತಿಷ್ಠೆ ಮಾಡಿದರು. ಕೋದಂಡರಾಮನ ವಿಗ್ರಹವು ಸುಗ್ರೀವ ಪ್ರತಿಷ್ಠಿತವೆಂದು ಹೇಳುವರು. ಆದರೆ ಈ ಪುರಾಣದಲ್ಲಿ ಇದರ ಸುದ್ದಿಯೇ ಇಲ್ಲ; ಅಥವಾ ಕೇವಲ ಬಾಯ್ಮಾತಿನ್ನು ಬಿಟ್ಟರೆ ಬೇರೆ ಯಾವ ಪ್ರಮಾಣವೂ ಇದ್ದಂತೆ ಕಂಡು ಬರುವುದಿಲ್ಲ. ಆದ್ದರಿಂದ ಸುಗ್ರೀವ ಪ್ರತಿಷ್ಠಿತವೆಂಬುದು ಕೇವಲ ಕಾಲ್ಪನಿಕವೆಂದು ತೋರುತ್ತದೆ—ವಿ. ತೀ]

---

1 ಈಗಲೂ ಸಹ ಈ ಸ್ಥಳದಲ್ಲಿ (ಚಕ್ರತೀರ್ಥದ ಪೂರ್ವಕ್ಕೆ) ವಿಶಾಲವಾದ ಮರಳು ದಿಣ್ಣೆ ಯಿದೆ.

ಚಕ್ರತೀರ್ಥ— ಸರ್ವತೀರ್ಥ ಪೂಜಿತವೂ ನಿರ್ವಾಣ[1]ದಾಯಕವೂ ಗೀರ್ವಾಣ ಗುಣ ಸೇವಿತವೂ ಪುಣ್ಯತಮವೂ ಆದ ಚಕ್ರತೀರ್ಥದ ದರ್ಶನದಿಂದಲೇ ರಾಕ್ಷಸರು ನಾಶ ಹೊಂದುತ್ತಾರೆ. ಇದರ ಸ್ಮರಣೆಯಿಂದಲೇ ಕಾಮಿತಾರ್ಥ ಲಭಿಸುತ್ತದೆ. ಛಿನ್ನಪಾಣಿಯಾದ ಸೂರ್ಯ ಈ ತೀರ್ಥಸ್ನಾನದ ಮಹಿಮೆಯಿಂದ ಹಿರಣ್ಯ ಪಾಣಿಯಾದ.

ಮುರನ ಕಾಟ—ಪೂರ್ವದಲ್ಲಿ ಮುರನೆಂಬ ಮಹಾಸುರ ಸರ್ವಲೋಕ ಕಂಟಕನಾಗಿದ್ದ. ಅವನ ಹಾವಳಿ ಸಹಿಸಲಾರದೆ ದೇವತೆಗಳು ಬ್ರಹ್ಮನನ್ನು ಮೊರೆ ಹೊಕ್ಕರು. ಬ್ರಹ್ಮನು ವಿಷ್ಣುವನ್ನು ಶರಣುಹೊಂದಲು ವೈಕುಂಠಪತಿ ದೇವತೆಗಳಿಗೆ "ನೀವೆಲ್ಲ ಮಾಹೇಶ್ವರ ಯಜ್ಞವನ್ನು ಆರಂಭಿಸಿ, ನಾನು ಶಿವನ ತಪಸ್ಸು ಮಾಡಿ ದೈತ್ಯಸಂಹಾರ ಮಾಡುವೆ"ನೆಂದನು.

ಅದರಂತೆ ನಿರ್ಜರರು ಯಜ್ಞಾರಂಭಮಾಡಿದರು. ಆ ಸಮಾಚಾರವನ್ನು ಕೇಳಿದೊಡನೆಯೇ ಮುರ ತನ್ನ ಅನುಯಾಯಿಗಳೊಡನೆ ಬಂದು ಯಜ್ಞ ಶಾಲೆಯಲ್ಲಿ ರಕ್ತ ಮೂತ್ರಗಳನ್ನು ಸುರಿಸಿ ಅಲ್ಲಿದ್ದವರನ್ನೆಲ್ಲ ಹೊಡೆದು ಬಡಿದು, ಬ್ರಾಹ್ಮಣರನ್ನೂ ಋಷಿಗಳನ್ನೂ ಬೆದರಿಸಿ ಯಜ್ಞಕ್ಕೆ ನಾನಾ ರೀತಿಯಿಂದ ವಿಘ್ನಮಾಡಿದನು.

ಸುದರ್ಶನ ಚಕ್ರೋದ್ಭವ—ಅತ್ತಲಾಗಿ ಹರಿಯು ಶಿವಾರ್ಚನೆಗಾಗಿ ಕಮಲ ಪುಷ್ಪಗಳನ್ನು ಆರಿಸಿ ತಂದು ಸಹಸ್ರನಾಮದಿಂದ ಅರ್ಚಿಸಬೇಕೆಂದು ಕುಳಿತ. ಅವನನ್ನು ಪರೀಕ್ಷಿಸುವುದಕ್ಕಾಗಿ ಹರ ಆ ಕಮಲಗಳನ್ನೆಲ್ಲ ಅಪಹರಿಸಿಬಿಟ್ಟ. ಅದನ್ನು ಕಂಡು ಶ್ರೀಹರಿ "ಹೇಗಿದ್ದರೂ ನನಗೆ ಕಮಲಾಕ್ಷ[2]ನೆಂದೇ ಹೆಸರಿದೆ. ಆದ್ದರಿಂದ ನನ್ನ ಕಣ್ಣನ್ನೇ ಕಿತ್ತು ಅರ್ಪಿಸುತ್ತೇನೆ" ಎಂದು ಸಂಕಲ್ಪಮಾಡಿ ಅದರಂತೆ ಕಣ್ಣನ್ನೇ ಕಿತ್ತು ಅರ್ಪಿಸಿದ. ಅದರಿಂದ ಪ್ರಸನ್ನನಾದ ವಿರೂಪಾಕ್ಷ ದೈತ್ಯಾರಿಗೆ ಪ್ರತ್ಯಕ್ಷನಾಗಿ ತನ್ನ ಕಾಲಿಂದ ತುಂಗಭದ್ರಾನದಿಯ ನೀರನ್ನು ಸ್ಪರ್ಶಮಾಡಿದ. ಕೂಡಲೇ ದೈತ್ಯರಿಗೆ ಭಯಂಕರವೂ ದೇವತೆಗಳಿಗೆ ದರ್ಶನೀಯವೂ ಆದ ಸುದರ್ಶನ ಚಕ್ರವು ಒಳಗಿನಿಂದ ಉದ್ಭವಿಸಿತು. (ಸು = ಸಮೀಚೀನವಾದ, ದರ್ಶನ = ದರ್ಶನವುಳ್ಳದ್ದು ಎಂದರೆ ನೋಡುವುದಕ್ಕೆ ಸುಂದರವಾದುದು ಎಂದರ್ಥ.) ವಿರೂಪಾಕ್ಷ ಆ ಚಕ್ರವನ್ನು ತೆಗೆದು ಪದ್ಮನಾಭನಿಗೆ ಕೊಟ್ಟ. ಅವನು ಅದರಿಂದ ಮುರನನ್ನು ಸಂಹರಿಸಿ ತ್ರಿದಶರಿಗೆ ಯಜ್ಞವನ್ನು ಮುಂದುವರಿಸುವಂತೆ ಹೇಳಿ ಅವರ ಸಹಾಯಕ್ಕಾಗಿ ಆ ಚಕ್ರವನ್ನು ಆ ತೀರ್ಥದಲ್ಲೇ ಸ್ಥಾಪಿಸಿದ.

---

1 ನಿರ್ವಾಣ = ಮೋಕ್ಷ.

2 ಕಮಲದಂತೆ ಕಣ್ಣುಳ್ಳವನು.



ಸೀತಾಸರೋವ, ಸುಗ್ರೀವ ಗವಿ (ಪುಟ–101)

ಚಕ್ರತೀರ್ಥ, ಋಷ್ಯಮೂಕ (ಪುಟ–111)

ಸೂರ್ಯನ ತಪಸ್ಸು—ಯಜ್ಞದಲ್ಲಿ ಎಲ್ಲ ದೇವತೆಗಳಿಗೂ ಸಮಭಾಗವಾಗಿ ಹಂಚುತ್ತಿದ್ದ ಹವಿಸ್ಸನ್ನು ಸೂರ್ಯ ತಾನೊಬ್ಬನೇ ಅಪಹರಿಸಿಬಿಡಬೇಕೆಂಬ ದುರ್ಬುದ್ಧಿಯಿಂದ ಕೈಹಾಕಿದ. ಆದರೆ ಸುದರ್ಶನಚಕ್ರ ಅವನ ಕೈಗಳನ್ನೇ ಕತ್ತರಿಸಿಹಾಕಿಬಿಟ್ಟಿತು. ದಿವಾಕರ ಕುಯ್ಯೋ ಮುರ್ರೋ ಎನ್ನುತ್ತ ಬ್ರಹ್ಮನ ಬಳಿಗೆ ಹೋದ. ಚತುರ್ಮುಖ ಮಾರ್ತಂಡನಿಗೆ ಚಕ್ರತೀರ್ಥದಲ್ಲಿ ಸ್ನಾನಮಾಡಿ ವಿರೂಪಾಕ್ಷನನ್ನು ಆರಾಧಿಸುವಂತೆ ಹೇಳಿದ. ಅದರಂತೆಯೇ ಮಾಡಿದ್ದರಿಂದ ಸೂರ್ಯನಿಗೆ ಬಂಗಾರದ ಕೈಗಳು ಬಂದುವು.

ಹೀಗೆಯೇ ಅಹಿರ್ಬುಧ್ನ್ಯನು ಎಲ್ಲೆಲ್ಲಿ ತಪಸ್ಸು ಮಾಡುವುದಕ್ಕೆ ಕುಳಿತರೂ ರಾಕ್ಷಸರು ಕಾಟ ಕೊಡುತ್ತಿದ್ದರು. ಕಡೆಗೆ ಬೇಸತ್ತು ಕಪಿಲ ಮಹರ್ಷಿಗಳನ್ನು ಮೊರೆಹೊಕ್ಕ. ಅವರ ಸಲಹೆಯಂತೆ ಚಕ್ರತೀರ್ಥದ ಬಳಿಗೆ ಬಂದು ತಪಸ್ಸಿಗೆ ಕುಳಿತುಕೊಂಡ. ಅವನಿಗೆ ವಿಘ್ನ ಮಾಡಲು ಬಂದ ರಾಕ್ಷಸರನ್ನು ಚಕ್ರ ನಾಶಮಾಡಿಬಿಟ್ಟಿದ್ದರಿಂದ ಅವನಿಗೆ ತಪಸ್ಸಿದ್ಧಿಯಾಯಿತು. ಆ ಚಕ್ರವು ಈಗಲೂ ಸಹ ಚಕ್ರತೀರ್ಥದ ಒಳಗೇ ಇದೆ. ಹೀಗೆ ಸರ್ವೋತ್ತಮವಾದ ಈ ತೀರ್ಥಕ್ಕೆ ಉಷಃಕಾಲದಲ್ಲಿಯೇ ಬಂದು ಬ್ರಹ್ಮಾದಿಗಳೂ ಸಹ ಸೇವಿಸಿಹೋಗುತ್ತಾರೆ.

ಚಕ್ರತೀರ್ಥದ ಈ ಮಹಿಮೆಯನ್ನು ನಿತ್ಯವೂ ಓದುವ ಮತ್ತು ಕೇಳುವ ಜನರು ಇಹದಲ್ಲಿ ಸರ್ವವೈಭವವನ್ನು ಪಡೆದು ನಂತರ ಶರ್ವಲೋಕದಲ್ಲೂ ಸುಖಿಗಳಾಗುವರು.

ಅಧ್ಯಾಯ 77 ಗೌರೀಮುಖ ತೀರ್ಥ

[ಈ ಹೆಸರಿನಿಂದ ಪ್ರಸಿದ್ಧವಾದ ತೀರ್ಥ ಈಗ ಎಲ್ಲೂ ಇದ್ದಂತೆ ಕಾಣಿಸುವುದಿಲ್ಲ. ಇದರ ವರ್ಣನೆ ಚಕ್ರತೀರ್ಥ ಮತ್ತು ಮತಂಗ ಪರ್ವತಗಳ ವರ್ಣನೆಯ ಮಧ್ಯೆ ಇರುವುದರಿಂದ ಈ ತೀರ್ಥವೂ ಪ್ರಾಯಶಃ ಚಕ್ರತೀರ್ಥದ ಹತ್ತಿರವೇ ಎಲ್ಲೋ ಇರಬೇಕೆಂದು ಊಹಿಸಬಹುದು, ಅಷ್ಟೆ.—ವಿ. ಶೀ.]

ತೀರ್ಥಪ್ರಶಂಸೆ—ಗೌರೀಮುಖತೀರ್ಥ ಪಂಪಾದೇವಿಯ ಪ್ರೀತಿವರ್ಧಕ. ಇದರಲ್ಲಿ ಆಕೆಯೇ ವಾಸಿಸುತ್ತಾಳೆ. ಆದ್ದರಿಂದ ಸುಮಂಗಲಿಯರು ಇದರಲ್ಲಿ ಸ್ನಾನ ಮಾಡಿದರೆ ಅವರಿಗೆ ಸೌಭಾಗ್ಯವೃದ್ಧಿಯಾಗುತ್ತದೆ. ಈ ತೀರ್ಥ ಸಮಸ್ತ ತೀರ್ಥಗಳಲ್ಲೂ ಪರಮೋತ್ತಮವಾದುದು, ಗೌರೀ ಶಂಕರರಿಗೆ ಬಹು ಪ್ರಿಯವಾದುದು ಮತ್ತು ಸರ್ವೇಪ್ಸಾರ್ಥ ಫಲಪ್ರದ ; ಸುವಾಸಿನಿಯರಿಗೆ ವಿಶೇಷಾಕಾರವಾಗಿ ಭುಕ್ತಿ ಮುಕ್ತಿಪ್ರದ. ಹಿಂದೆ ಅನೇಕ ಸ್ತ್ರೀಯರು ಈ ತೀರ್ಥದ ಮಹಿಮೆಯಿಂದ ತಮ್ಮ ಪಾಪಸಂಚಯದಿಂದ ಮುಕ್ತರಾದರು.

ದರಿದ್ರ ಬ್ರಾಹ್ಮಣ—ಪೂರ್ವ ಕಾಲದಲ್ಲಿ **ವೇಲಾ** ಎಂಬ ಅಗ್ರಹಾರದಲ್ಲಿ ವೇದವೇದಾಂಗ ತತ್ವಜ್ಞನೂ ಸದಾಚಾರಪರಾಯಣನೂ ಆದ **ಶರಭ**ನೆಂಬ ಒಬ್ಬ ಬ್ರಾಹ್ಮಣ ಇದ್ದ. ಅವನಿಗೆ ನಾಲ್ವರು ಪುತ್ರರು. ಆ ನಾಲ್ವರಿಗೂ ವಿವಾಹವಾಗಿ ಒಬ್ಬೊಬ್ಬರಿಗೂ ಹತ್ತು ಹತ್ತು ಮಕ್ಕಳು ಹುಟ್ಟಿದರು. ಮೊಮ್ಮಕ್ಕಳೂ ಪ್ರಾಪ್ತವಯಸ್ಕರಾಗಿ ವಿವಾಹಿತರಾದ್ದರಿಂದ ಅನೇಕ ಮರಿ ಮಕ್ಕಳು ಜನಿಸಿ ಶರಭನ ಪರಿವಾರ ಪುತ್ರ ಪೌತ್ರ ಪ್ರಪೌತ್ರರಿಂದ ತುಂಬಿ ಎಲ್ಲೆ ಮೀರಿ ಬೆಳೆದು ಹೋಯಿತು.

ಇಂಥಾ ದುರ್ಧರಕುಟುಂಬ ಭರಣಮಾಡಲಾರದೆ ಶರಭ ಭೃತಕಾರ್ಚನೆ (ಸಂಬಳಕ್ಕಾಗಿ ಪೂಜೆ) ಮಾಡುವುದನ್ನು ಗೊತ್ತುಮಾಡಿಕೊಂಡ. ಕುಟುಂಬದ ಒಬ್ಬೊಬ್ಬನೂ ಒಂದೊಂದು ಪೂಜೆ ಒಪ್ಪಿಕೊಂಡರು. ಕೆಲವರು ಅಭಿಷೇಕ, ಮತ್ತೆ ಕೆಲವರು ಬಿಲ್ವಾರ್ಚನೆ, ಇನ್ನು ಕೆಲವರು ನೈವೇದ್ಯ, ಮತ್ತೆ ಕೆಲವು ಮಂದಿ ದೀಪಾರಾಧನೆ ಹೀಗೆಲ್ಲಾ ಹಂಚಿಕೊಂಡರು. ಇಷ್ಟು ಮುಖವಾಗಿ ದುಡ್ಡು ಬಂದರೂ ಅವರ ದಾರಿದ್ರ್ಯ ಹಿಂಗಲಿಲ್ಲ.

ದೇವಸ್ವಾಪಹಾರ—ದಾರಿದ್ರ್ಯದ ಕಾರ್ಪಣ್ಯದಿಂದ ಅವರು ಕ್ರಮವಾಗಿ ಶಿವಪೂಜೆಯ ಸಲುವಾಗಿ ಬರುತ್ತಿದ್ದ ಪೂಜಾಸಾಮಗ್ರಿಗಳಿಗೇ ಕತ್ತರಿ ಪ್ರಯೋಗ ಮಾಡಹತ್ತಿದರು. ಎಣ್ಣೆ ತುಪ್ಪ ಜೇನುತುಪ್ಪ ಪುಷ್ಪ ಗಂಧ ಪಂಚಾಮೃತದ್ರವ್ಯ ನೈವೇದ್ಯಕ್ಕಿಟ್ಟ ಭಕ್ಷ್ಯಭೋಜ್ಯಗಳು ವಿಧವಿಧವಾದ ಧಾನ್ಯಗಳು ಏನು ಸಿಕ್ಕರೆ ಅದನ್ನೇ ಹಡಪ್ ಮಾಡುತ್ತಿದ್ದರು. ಈ ಪಾಪದಿಂದ ಅವರಿಗೆ ಅಜ್ಞಾನ ಹೆಚ್ಚಾಗಿ ಅವರ ದಾರಿದ್ರ್ಯ ಕಷ್ಟವ್ಯಸನಗಳು ಮತ್ತಷ್ಟು ಉಲ್ಬಣವಾದುವು.

ಕಡೆ ಕಡೆಗೆ ದಾಯಾದಮಾತ್ಸರ್ಯದಿಂದ ಒಬ್ಬರಿಗೊಬ್ಬರು ಹೊಡದಾಡಿಕೊಂಡು ಒಬ್ಬರ ಮೇಲೊಬ್ಬರು ಚಾಡಿ ಹೇಳಿಕೊಂಡು ತಮ್ಮ ಕಳ್ಳತನವನ್ನು ತಾವು ತಾವೇ ಬಯಲುಗೆಡವಿಕೊಂಡರು. ಪರಸ್ಪರ ಶಾಪಕೊಟ್ಟುಕೊಂಡು ತಮ್ಮ ಬುಡಕ್ಕೆ ತಾವೇ ನೀರು ತಿದ್ದಿಕೊಂಡರು. ಎಣ್ಣೆ ಕದ್ದವನಿಗೆ ಕುಷ್ಠರೋಗ ಬಂತು. ಗಂಧ ದ್ರವ್ಯ ಕಳವು ಮಾಡಿದವನಿಗೆ ಭಗಂದರ ರೋಗ ಹತ್ತಿ ಮೈಕೈಯೆಲ್ಲಾ ಕೊಳೆತು ನಾರುತ್ತಾ ದುರ್ನಾತ ಬಡಿಯಹತ್ತಿತು. ನೈವೇದ್ಯಚೌರ್ಯ ಮಾಡಿದವರಿಗೆ ಕ್ಷಯ ರೋಗ ಪ್ರಾಪ್ತವಾಯಿತು. ದೀಪದ ಎಣ್ಣೆ ತುಪ್ಪ ಅಪಹರಿಸಿದವರು ಕಣ್ಣು ಕಳೆದುಕೊಂಡು ಕುರುಡಾಗಿ ಕೂತರು. ಹಣ್ಣುಗಳನ್ನು ಹಡಪ್ ಮಾಡುತ್ತಿದ್ದ ಹೆಂಗಸರು ಬಂಜೆಯರಾಗಿ ನಿತ್ಯರೋಗಿಗಳಾದರು. ಪಂಚಾಮೃತದ್ರವ್ಯಗಳಿಗೆ ಕತ್ತರಿ ಪ್ರಯೋಗ ನಡೆಸುತ್ತಿದ್ದವರು ಕಾಕವಂಧ್ಯರಾದರು.* ತುಪ್ಪಕದ್ದವರು ಸತ್ತ ಮಕ್ಕಳನ್ನೇ

---

* ಬಂಜೆತನ ನಾನಾ ರೀತಿಯಾಗಿರುತ್ತದೆ. ಕಾಕವಂಧ್ಯಾತ್ವ ಎಂಬುದು ಕಾಗೆಗಳಂತೆ ಅನೇಕ ಮಕ್ಕಳು ಹುಟ್ಟಿ ಹುಟ್ಟಿ ಸತ್ತು ಹೋಗುವುದು. ಕದಳೀವಂಧ್ಯಾ ಎಂದರೆ ಒಂದು ಸಂತಾನವಾಗಿ ಸಂತಾನನಿರೋಧವಾಗುವುದು. ನಾಗವಂಧ್ಯಾ ಗರ್ಭಿಣಿಯರಾಗಿ ಗರ್ಭಸ್ರಾವ ಆಗಿ ಹೋಗುವುದು. ಮಹಾವಂಧ್ಯಾ ಎಂದರೆ ಗರ್ಭಧಾರಣೆಯೇ ಆಗದಿರುವುದು.

ಕೆರಲಾರಂಭಿಸಿದರು. ಸದಾರೋಗಗ್ರಸ್ತರಾಗೇ ಇರುತ್ತಿದ್ದರು. ಸುಗಂಧ ಪುಷ್ಪಾಪಹಾರಿಗಳಿಗೆ ಮೈಯ ಅಂಗಾಂಗವೆಲ್ಲಾ ದುರ್ಗಂಧಮಯವಾಯಿತು ; ಹೆಂಗಸರು ವಿಧವೆಯರಾದರು. ಧಾನ್ಯಾಪಹಾರಮಾಡಿದವರು ದೀನರೂ ಜಡೋದರರೂ ಅಂಗವಿಕಾರಿಗಳೂ ಅಂಗ ಹೀನರೂ ಆದರು. ವಸ್ತ್ರಾಪಹರಣ ಮಾಡಿದವರಿಗೆ ವೈಧವ ಅಥವಾ ವಿಧುರತ್ವ ಬಂದಡರಿಕೊಂಡವು.

ಕಷ್ಟದ ಪರಾಕಾಷ್ಠದೆಶೆ—ಇಷ್ಟು ಸಾಲದೆ ಅವರ ಕಳ್ಳತನಗಳು ಜಾಡಿ ಕ್ಷುದ್ರತನದಿಂದ ಬಯಲಿಗೆ ಬಿದ್ದದ್ದರಿಂದ ರಾಜ ಅವರೆಲ್ಲರನ್ನೂ ಅರ್ಚಕವೃತ್ತಿಯಿಂದ ತೆಗೆದುಹಾಕಿ ಶರಭನನ್ನೂ ಅವನ ಪರಿವಾರದವರೆಲ್ಲರನ್ನೂ ಒಟ್ಟಿಗೆ ಊರಿಂದ ಹೊರಕ್ಕೆ ದಬ್ಬಿಸಿಬಿಟ್ಟ. ಆಗಂತೂ ಅವರ ಸ್ಥಿತಿ ಹೇಳತೀರದಂತಾಯಿತು. ವಾಸಕ್ಕೆ ಮನೆ ಮಾರುಗಳಿಲ್ಲ. ಪಾಪ ಕರ್ಮದ ಫಲವಾಗಿ ಮೈಯಾನ ಮೈಯೆಲ್ಲ ನಾನಾ ರೋಗಗಳು, ಒಂದು ಕಡೆ ಪಟ್ಟ ದಾರಿದ್ರ್ಯದ ದಾವಾಗ್ನಿ, ಮತ್ತೊಂದು ಕಡೆ ತಮ್ಮ ತಮ್ಮ ಶಾಪಾಗ್ನಿ, ಒಳಗೆ ದಾರುಣವಾದ ಹಸಿವು ಬಾಯಾರಿಕೆಗಳ ಜಾಠರಾಗ್ನಿ, ಹೊಟ್ಟೆಗೆ ಕೂಳಿಲ್ಲದೆ, ಮೈಗೆ ಬಟ್ಟೆಯಿಲ್ಲದೆ ಕಾಡು ಕಾಡು ಸುತ್ತುತ್ತಿದ್ದ ಅವರಿಗೆ ಸಾಕಪ್ಪಾ ಸಾಕು ಎನ್ನಿಸಿಹೋಯಿತು.

ಮಹತ್ಸೇವೆಯ ಫಲ—ಅವರು ಏನೇ ಚೌರ್ಯಮಾಡಿದ್ದರೂ, ಎಷ್ಟೇ ಅಪರಾಧ ಮಾಡಿದ್ದರೂ ದುಡ್ಡಿಗಾಗಿಯಾದರೂ ಶಿವಾರ್ಚನೆ ಮಾಡಿದ್ದರಷ್ಟೆ! ಆ ಪುಣ್ಯಶೇಷದ ಪ್ರಭಾವದಿಂದ ಅವರಿಗೆ ದೈವಯೋಗಾತ್ ನಾರದರ ದರ್ಶನವಾಯಿತು. ಆ ಮುನಿಶೇಖರರು ಅವರ ಗೋಳಾಟ ಕೇಳಿ ಮರುಗಿ ಅವರಿಗೆ ಹಂಪೆಗೆ ಹೋಗಿ ಶಂಕರಾರಾಧನೆ ಮಾಡುವಂತೆ ಬೋಧಿಸಿದರು. ಅದರಂತೆ ಹಂಪೆಗೆ ಬಂದರೂ ಅವರ ದೈನ್ಯತೆ ತಪ್ಪಲಿಲ್ಲ, ಗೋಳಾಟ ನೀಗಲಿಲ್ಲ. ಏಕೆಂದರೆ ಪುಣ್ಯಕ್ಷೇತ್ರದಲ್ಲಿ ವಾಸಮಾಡಿದ ಮಾತ್ರಕ್ಕೆ ಎಲ್ಲರಿಗೂ ಮುಕ್ತಿಯಾಗುವುದಿಲ್ಲ. ಭಕ್ತಿ ಜ್ಞಾನವುಳ್ಳವರಿಗೇ ಮೋಕ್ಷ ಲಭಿಸುತ್ತದೆ. ಸದಾಚಾರವೂ ಪರಮಾವಶ್ಯಕ. ಭಕ್ತಿ ಜ್ಞಾನ ಸದಾಚಾರ ಈ ಸಾಧನಗಳಿಲ್ಲದೆ ಮೋಕ್ಷ ಎಂದಿಗೂ ಲಭಿಸಲಾರದು. ಜನ್ಮಾರಭ್ಯ ಮರಣಾವಧಿಯಾಗಿ ಗಂಗಾದಿ ಪವಿತ್ರ ತೀರ್ಥಗಳಲ್ಲೇ ಇರುವ ಮೀನು ಆಮೆ ಕಪ್ಪೆಗಳಿಗೆಲ್ಲಾ ಮುಕ್ತಿ ದೊರಕೇ ಬಿಡುವುದೇನು ? ಜ್ಞಾನ ಪೂರ್ವಕ ಮಾಡಿದ ಕರ್ಮಗಳೇ ಮುಕ್ತಿಗೆ ಸಾಧಕವಾಗುವುವು.

ಕ್ಷೇತ್ರವಾಸದಿಂದಲೂ ತೀರ್ಥಸ್ನಾನದಿಂದಲೂ ಮನಃಶುದ್ಧಿ ಆಗುತ್ತದೆ. ಅದರಿಂದ ನಿರ್ಮಲವಾದ ಭಕ್ತಿ ಹುಟ್ಟುತ್ತದೆ. ಭಕ್ತಿಯಿಂದ ಜ್ಞಾನ ಸಂಪಾದನೆಗೆ ಮಾರ್ಗವಾಗುತ್ತದೆ. ಅದರಿಂದ ಮೋಕ್ಷ ದೊರಕುತ್ತದೆ. ಪ್ರಸ್ತುತ ಶರಭನ ಪರಿವಾರದವರಿಗೆ ಜ್ಞಾನಲೇಶವೂ ಇರಲಿಲ್ಲ. ಅದಕ್ಕೇ ಅವರು ದುಃಖಾಂಬುಧಿಯಲ್ಲಿ ಮಗ್ನರಾಗಿದ್ದರು.

ನಿರಾಶೆಯ ಪ್ರಸಂಗ—ಒಂದು ದಿನ ಅನೇಕ ಬ್ರಾಹ್ಮಣ ಸುವಾಸಿನಿಯರು ಹಂಪೆಗೆ ಬಂದು ಗೌರೀಮುಖತೀರ್ಥದ ಬಳಿ ವೈಭವದಿಂದ ನಾನಾವಿಧ ಪೂಜಾಪುರಸ್ಕಾರಗಳನ್ನು ನೆರವೇರಿಸಿದರು. ಅವನ್ನು ಕಂಡು ಮಹದಾಶೆಯಿಂದ ಕರಭನ ಪರಿವಾರದವರು ದಾನ ಉಡುಗೊರೆಗಳಿಗೆ ಅನ್ನಾಹಾರಗಳಿಗೆ ನಾನು ತಾನೆಂದು ಹಾತೊರೆಯುತ್ತಾ ಬಾಯಿಬಿಟ್ಟುಕೊಂಡು ನಿಂತುಕೊಂಡಿದ್ದರೂ, ಅವರ ದುರ್ದೈವವೋ ಏನೋ ಅವರನ್ನು ಯಾರೊಬ್ಬರೂ ಗಮನಿಸಲಿಲ್ಲ. ಒಬ್ಬರಿಗಾಗಲಿ ಒಂದು ಕಾಸೇ ಆಗಲಿ ಕಡೆಗೆ ಅನ್ನದ ಒಂದು ಅಗುಳು ಸಹ ಗಿಟ್ಟಲಿಲ್ಲ. ಆದರಿಂದ ಅವರೆಲ್ಲರೂ ಸಂಪೂರ್ಣ ನಿರಾಶರಾಗಿ ಆ ರಾತ್ರಿಯೇ ಒಟ್ಟಾಗಿ ನದಿ ಪ್ರವೇಶ ಮಾಡಿಬಿಡಬೇಕೆಂದು ನಿಶ್ಚೈಸಿಕೊಂಡು ರಾತ್ರಿಯಾಗುವುದನ್ನೇ ಕಾದುಕೊಂಡಿದ್ದರು.

ಕತ್ತಲೆಯಾದ ಕೂಡಲೆ ಎಲ್ಲರೂ ಗೌರೀಮುಖತೀರ್ಥದ ಬಳಿಗೆ ಬಂದು ಅದಕ್ಕೆ ನಮಸ್ಕಾರಮಾಡಿ 'ಲೋಕಮಾತೆಯಾದ ಗೌರಿಯೇ ನಮಗೆ ಪರಗತಿ, ಶಿವಸ್ವ ಅಪಹರಿಸಿದ್ದರಿಂದಲೇ ನಮಗೆ ಈ ದುರ್ದಶೆ ಬಂತು. ಅದರ ಪ್ರಾಯಶ್ಚಿತ್ತಕ್ಕಾಗಿ ನಾವು ಈ ಪಾಪಿ ದೇಹಗಳನ್ನು ತ್ಯಜಿಸಿ ಆ ಗೌರಿದೇವಿಯನ್ನೇ ಮೊರೆಹೋಗುವೆವು' ಎಂದು ಹೇಳಿ ನೀರಲ್ಲಿ ಧುಮುಕಿದರು.

ಕಷ್ಟ ಪರಿಹಾರ—ತೀರ್ಥಜಲಸ್ಪರ್ಶವಾದ ಕೂಡಲೇ ಅವರೆಲ್ಲರಿಗೂ ದಿವ್ಯದೇಹಗಳುಂಟಾದುವು. ಭಕ್ತಿ ಆವಿರ್ಭವಿಸಿತು. ಎಲ್ಲರೂ ಗೌರಿಯನ್ನು ಭಕ್ತಿಯಿಂದ ಆರಾಧಿಸಿದರು. ಗೌರಿ ಪ್ರತ್ಯಕ್ಷಳಾಗಿ ಅವರಿಗೆ ಇಹ ಪರಗಳಲ್ಲಿ ಸೌಖ್ಯವನ್ನು ಅನುಗ್ರಹಿಸಿದ್ದಲ್ಲದೆ ಅಲ್ಲಿದ್ದ ಹೆಂಗಸರಿಗೆಲ್ಲ ಅಪ್ಸರೆಯರಾಗಿ ತನ್ನ ಬಳಿಯಲ್ಲಿರುವಂತೆಯೂ, ಗಂಡಸರಿಗೆ ಗಾನ ಮಾಡಿಕೊಂಡಿರುವಂತೆಯೂ ವರ ಕೊಟ್ಟು ಅದೃಶ್ಯಳಾದಳು. ಹೀಗೆ ಈ ತೀರ್ಥ ಸರ್ವೇಷ್ಟಫಲಪ್ರದವಾದುದು. ಇದರ ಸ್ನಾನದಿಂದ ಮಾನವನು ಶಿವಪದ ಹೊಂದುತ್ತಾನೆ.

ಅಧ್ಯಾಯ 78 ಮತಂಗಗಿರಿ

[ಮತಂಗಗಿರಿ ಹಂಪೆಯಲ್ಲಿರುವ ಪಂಚಾದ್ರಿಗಳಲ್ಲಿ ಒಂದು ಎಂಬ ವಿಷಯ 8ನೇ ಅಧ್ಯಾಯದಲ್ಲೇ ಬಂದಿದೆ. ಈ ಬೆಟ್ಟ ಹಂಪೆ ವಿರೂಪಾಕ್ಷನ ಗುಡಿಯ ಎದುರಿಗೇ ಇದೆ. ಅದರ ಮೇಲೆ ಮತಂಗೇಶ್ವರನ ಗುಡಿ ಇರುವುದೂ ಸಹ ಸ್ಪಷ್ಟವಾಗಿ ದೂರಕ್ಕೇ ಕಾಣಿಸುತ್ತದೆ. ಮೇಲಕ್ಕೆ ಹತ್ತುವುದಕ್ಕೆ ಮೆಟ್ಟಲುಗಳು ಮುಂಭಾಗದಿಂದಲೂ ಹಿಂಭಾಗದಿಂದಲೂ ಇವೆ. ಇದರ ಮೇಲೆ ಹತ್ತಿನೋಡಿದರೆ ಅತ್ಯಂತ ರಮಣೀಯವಾದ ಪ್ರಾಕೃತಿಕ ದೃಶ್ಯ ಕಾಣಿಸುತ್ತದೆ. ಇಲ್ಲಿ ಕಾಣಿಸುವ ದೃಶ್ಯಕ್ಕಿಂತಲೂ ಹೆಚ್ಚು ರಮಣೀಯವಾದ ದೃಶ್ಯ ಇಡೀ ದಕ್ಷಿಣಭಾರತದಲ್ಲೇ ಮತ್ತೆಲ್ಲೂ ದೊರೆಯಲಾರದೆಂದು ಲಾಂಗ್‌ಹರ್ಸ್ಟ್ ಎಂಬ ಲೇಖಕರು ಅಭಿಪ್ರಾಯಪಟ್ಟಿದ್ದಾರೆ.

ಇವರಲ್ಲಿ ಎಷ್ಟೋ ಗುಹೆಗಳಿವೆ; ಎಷ್ಟೋ ಸಾವಿರಾರು ತೀರ್ಥಗಳೂ ಇವೆಯೆಂಬುದು ಮುಂದಿನ 8 ಅಧ್ಯಾಯಗಳಿಂದ ಗೊತ್ತಾಗುತ್ತದೆ. ಆದರೆ ಯಾವ ಯಾವ ಗುಹೆಗೆ ಏನೇನು ಹೆಸರಿತ್ತೋ, ಯಾವ ಯಾವ ತೀರ್ಥಗಳು ಎಲ್ಲೆಲ್ಲಿದ್ದುವೋ ಗುರುತಿಸುವುದು ಅಸಾಧ್ಯವಾಗಿದೆ. —ವಿ. ತೀ.]

ಸತ್ಯವಸುವಿನ ಕಥೆ—ಕಾಂಚನಪುರದಲ್ಲಿ ವಸುಪ್ರದನೆಂಬ ಬ್ರಾಹ್ಮಣ ನಿದ್ದ. ಸದಾಚಾರರತನೂ ಶಾಂತನೂ ಸರ್ವಧರ್ಮರತನೂ ಆಗಿದ್ದ. ಅವನಿಗೆ ಸುಪ್ರಭಾ ಎಂಬ ಅನುರೂಪಳಾದ ಭಾರ್ಯೆ ಇದ್ದಳು. ಆ ದಂಪತಿಗಳಿಗೆ ಸತ್ಯವಸು ವೆಂಬ ಸತ್ಪುತ್ರ ಜನಿಸಿದ. ಅವನು ಸಕಾಲದಲ್ಲಿ ಉಪನೀತನಾಗಿ ಸರ್ವಶಾಸ್ತ್ರಗಳನ್ನು ಅಭ್ಯಾಸಮಾಡಿ ಪ್ರಾಪ್ತವಯಸ್ಕನಾದ ಬಳಿಕ ದಾರಪರಿಗ್ರಹ ಮಾಡಿ ಆಹಿತಾಗ್ನಿಯಾಗಿ ವೃದ್ಧರಾದ ಮಾತಾಪಿತೃಗಳ ಸೇವೆಯಲ್ಲೇ ನಿರತನಾಗಿದ್ದ.

ಹಂಪೆಯಾತ್ರೆ—ಒಂದು ದಿನ ಅವರ ಮನೆಗೆ ಭಸ್ಮರುದ್ರಾಕ್ಷಮಾಲಾಧಾರಿ ಯಾದ ಒಬ್ಬ ಸಿದ್ಧ ಅತಿಥಿಯಾಗಿ ಬಂದ. ಸತ್ಯವಸು ಅತಿಥಿಪೂಜೆ ಮಾಡಿ, ಅವನ ಯೋಗಕ್ಷೇಮ ವಿಚಾರಿಸಿ, ಯಾತ್ರಾ ಪ್ರಸಂಗ ಬಂದಾಗ ಪ್ರಸ್ತಾಪ ಎತ್ತಿ ತನಗೆ ಹಂಪೆಯ ದರ್ಶನ ಹೇಗಾದೀತೆಂದು ವ್ಯಸನ ಪಟ್ಟುಕೊಂಡ. ಅದನ್ನು ಕೇಳಿ ಆ ಸಿದ್ಧ ಪುರುಷ ಸತ್ಯವಸುವಿನ ಕಾಲಿಗೆ ಒಂದು ಸಿದ್ಧರಸ ಲೇಪಿಸಿದ. ಒಡನೆಯೇ ಸತ್ಯವಸು ಆಕಾಶಮಾರ್ಗದಲ್ಲಿ ಸಂಚರಿಸುತ್ತಾ ಹಂಪೆಗೆ ಬಂದು ಅಲ್ಲಿರುವ ಪರ್ವತಗಳನ್ನೂ ಪುಣ್ಯ ಸ್ಥಲಗಳನ್ನೂ ಗಿಡ ಮರಗಳನ್ನೂ ಕ್ಷಣ ಮಾತ್ರದಲ್ಲಿ ದರ್ಶನಮಾಡಿದನು.

ಅದೇ ಸಮಯದಲ್ಲಿ ಪಂಪಾದೇವಿಯೂ ಸಖೀ ಸಮೇತಳಾಗಿ ವಿಹಾರಕ್ಕಾಗಿ ಹೊರಟಿದ್ದಳು. ಆ ಭಗವತಿ ಸರ್ವಜ್ಞಳಾದ್ದರಿಂದ ಸತ್ಯವಸುವಿನ ಶೀಲವನ್ನು ಬಲ್ಲವಳಾಗಿದ್ದರೂ ಅವನ ಭಕ್ತಿಯನ್ನೂ ಪರೀಕ್ಷಿಸಬೇಕೆಂದು ಎಣಿಸಿ ತನ್ನ ಸಖಿಯರಿಗೆ "ಅಲ್ಲೊಬ್ಬ ಪುರುಷ ಸಂಚರಿಸುವಂತಿದೆ. ನೀವು ಅವನಲ್ಲಿಗೆ ಹೋಗಿ ಅವನ ಭಕ್ತಿ ದಾರ್ಢ್ಯವನ್ನು ಪರೀಕ್ಷಿಸಿ" ಎಂದು ಆಜ್ಞಾಪಿಸಿದಳು. ಆಗ ಅವರು ಅವನ ಬಳಿಗೆ ಹೋಗಿ ಕಾಮವಿಲಾಸಗಳಿಂದ ಅವನನ್ನು ಮೋಹಗೊಳಿಸುವ ಯತ್ನ ಮಾಡಿದರು.

ಆದರೆ ಸತ್ಯವಸು ದೀನತೆಯಿಂದ ಅಡ್ಡಬಿದ್ದು "ತಾಯಿಯರೇ, ನಾನು ಏಕ ಪತ್ನೀವ್ರತಸ್ಥ. ವೃದ್ಧರಾದ ಮಾತಾ ಪಿತೃಗಳ ಸೇವೆಗೆ ಹೋಗಬೇಕು. ಹೊತ್ತಾಗುತ್ತದೆ. ನೀವು ನನಗೆ ತಾಯಿಯರಿಗೆ ಸಮಾನ. ನನ್ನನ್ನೇಕೆ ಹಿಂಸಿಸುವಿರಿ? ಬಿಟ್ಟುಬಿಡಿ" ಎಂದು ಎಷ್ಟು ಕೇಳಿಕೊಂಡರೂ ಬಿಡದೆ ಅವನನ್ನು ಮುತ್ತಿಕೊಂಡು ಬಲಾತ್ಕಾರದಿಂದ ಕೆಲವರು ಆಲಂಗಿಸಿಕೊಂಡರು, ಕೆಲವರು ಧೋತ್ರದ ಅಂಚನ್ನು ಹಿಡಿದು ಕೊಂಡರು, ಕೆಲವರು ಕೈಗಳನ್ನು ಎಳೆದರು, ಕೆಲವರು ಕುತ್ತಿಗೆಯ ಮೇಲೆ ಕೈಹಾಕಿದರು.

ಆದರೂ ಅವರೆಲ್ಲ ಪಾರ್ವತಿಯ ಸಖಿಯರಾದ್ದರಿಂದ ಅವರಿಗೆ ಶಾಪಕೊಡುವುದಕ್ಕೂ ಅಂಜಿ ನಿರುಪಾಯನಾದ ಸತ್ಯವ್ರತ ಏಕಮನಸ್ಸಿನಿಂದ ಜಗತ್ಪಿತೃಗಳಾದ ಪಾರ್ವತೀ ಪರಮೇಶ್ವರರನ್ನು ಧ್ಯಾನಮಾಡುತ್ತಾ "ಈ ಸ್ತ್ರೀಯರಿಂದ ನನ್ನನ್ನು ಬಿಡಿಸಿ ಉದ್ಧಾರ ಮಾಡಿ" ಎಂದು ದೀನತೆಯಿಂದ ಬೇಡಿಕೊಂಡ. ಅವನ ಸತ್ಯನಿಷ್ಠೆಗೆ ಮೆಚ್ಚಿ ಪಾರ್ವತಿ ಪ್ರಸನ್ನಳಾಗಿ "ಮುಂದಿನ ಜನ್ಮದಲ್ಲಿ ನಿನಗೆ ಮುಕ್ತಿಯಾಗುವುದು" ಎಂದಳು. ಅದಕ್ಕೆ ಸತ್ಯವ್ರತ "ಹಾಗಾದರೆ ಆ ಜನ್ಮದಲ್ಲಿ ನೀನು ನನಗೆ ಜನನಿಯಾಗು ಅಥವಾ ನೀನೇ ನನ್ನ ಮಗಳಾಗಿ ಜನಿಸು" ಎಂದು ವರ ಕೇಳಿದನು. ದೇವಿ ಮಗಳಾಗಿ ಜನಿಸುವಂತೆ ವರಕೊಟ್ಟು ಅದೃಶ್ಯಳಾದಳು.

ಎರಡನೆಯ ಜನ್ಮ—ಅನಂತರ ಸತ್ಯವಸು ಶೀಘ್ರವಾಗಿ ತಂದೆ ತಾಯಿಗಳ ಬಳಿಗೆ ಹಿಂದಿರುಗಿ ಹೋಗಿ ತನಗೆ ಸಿದ್ಧನ ಅನುಗ್ರಹಬಲದಿಂದ ಹಂಪೆ ಕ್ಷೇತ್ರದರ್ಶನವಾದುದನ್ನೂ ಪಾರ್ವತಿಯು ವರ ಕೊಟ್ಟ ಸಂಗತಿಯನ್ನೂ ತಿಳಿಸಿದನು. ಅದನ್ನು ಕೇಳಿ ಆನಂದಾಮೃತಭರದಲ್ಲಿ ವೃದ್ಧಮಾತಾಪಿತೃಗಳು ದೇಹತ್ಯಾಗ ಮಾಡಿದರು. ಮತ್ತು ಅಂತ್ಯಕಾಲದಲ್ಲಿ ಉಂಟಾದ ವಿರೂಪಾಕ್ಷನ ಧ್ಯಾನಬಲದಿಂದ ಎರಡನೆಯ ಜನ್ಮದಲ್ಲಿ ಹಂಪೆಯಲ್ಲೇ ಇಬ್ಬರೂ ಹುಟ್ಟಿದರು. ವಸುಪ್ರದ **ಭೃಗು** ಎಂದೂ ಸುಪ್ರಭೆ **ಶರ್ಮದಾ** ಎಂದೂ ನಾಮಧೇಯವುಳ್ಳವರಾದರು. ಸತ್ಯವಸುವೂ ಸಹ ಕಾಲಕ್ರಮದಲ್ಲಿ ತನ್ನ ಕಳೇಬರವನ್ನು ತ್ಯಜಿಸಿ ದ್ವಿತೀಯ ಜನ್ಮದಲ್ಲಿ ಭೃಗುಶರ್ಮದೆಯರ ಮಗನಾಗಿಯೇ ಹುಟ್ಟಿ **ಮತಂಗ**ನೆಂದು ಹೆಸರುಳ್ಳವನಾದನು. ಆ ಮತಂಗ ಸರ್ವ ಶಾಸ್ತ್ರಾರ್ಥತತ್ವಜ್ಞನೂ ಸಕಲಾಗಮವಿಶಾರದನೂ ಆಗಿ ಮಾತಾಪಿತೃಗಳ ಅಪ್ಪಣೆಯಿಂದ ಈ (ಮತಂಗ) ಬೆಟ್ಟದಲ್ಲಿರುವ ಒಂದು ಗುಹೆಯಲ್ಲಿ ಸಾವಿರ ವರ್ಷ ಉಗ್ರ ತಪಸ್ಸು ಮಾಡಿದ. ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ ವಿರೂಪಾಕ್ಷ ಅವನಿಗೆ "ಸರ್ವಮಂಗಳೆ ನಿನಗೆ ಮಗಳಾಗುವಳು" ಎಂದು ವರವನ್ನು ಅನುಗ್ರಹಿಸಿದ.

ಆಮೇಲೆ ಮತಂಗ ಮನೆಗೆ ಬಂದು **ಚಾರುಮತಿ**ಯನ್ನು ವಿವಾಹವಾಗಿ ಧರ್ಮಪರನಾಗಿದ್ದ. ಈ ನವದಂಪತಿಗಳಿಗೆ ಸರ್ವಮಂಗಳೆಯ ಅಂಶಸಂಭೂತಳಾದ **ಮಾತಂಗಿ** ಕನ್ಯೆಯಾಗಿ ಜನಿಸಿದಳು. ಮತಂಗ ಅವಳನ್ನು ಕಿನ್ನರೇಶನಿಗೆ ವಿವಾಹ ಮಾಡಿಕೊಟ್ಟು ಕೃತಾರ್ಥನಾದ. *

ಮತಂಗ ತಪಸ್ಸು ಮಾಡಿದ್ದರಿಂದ ಈ ಪರ್ವತಕ್ಕೆ ಮಾತಂಗಗಿರಿ ಎಂದೇ ಹೆಸರು ರೂಢಿಯಾಯಿತು. ಅವರು ಸ್ನಾನಮಾಡುತ್ತಿದ್ದ ತೀರ್ಥವೇ ಮತಂಗ ತೀರ್ಥ. ಇಲ್ಲಿ ಒಂದುದಿನವಾದರೂ ವಾಸಮಾಡಿ ಮತಂಗತೀರ್ಥದಲ್ಲಿ ಸ್ನಾನ ಮಾಡಿ ಪಂಚಾಕ್ಷರೀ ಜಪಮಾಡುವವನು ಮುಕ್ತನಾಗುವನು.

---

* ಕಿನ್ನರೇಶ—ಮಾತಂಗಿಯರ ವಿವಾಹ ವರ್ಣನೆ 18 ನೇ ಅಧ್ಯಾಯದಲ್ಲೇ ಮುಗಿದಿದೆ.

ಅಧ್ಯಾಯ 79 ಅಗ್ನಿ ತೀರ್ಥ

[ಮುಂದಿನ ಭಾಗವನ್ನು ನೋಡಿದರೆ ಅಗ್ನಿ ತೀರ್ಥ ಮತಂಗಗಿರಿಯಲ್ಲೇ ಇದೆಯೆಂದೂ ಇದರ ಹತ್ತಿರವೇ ಒಂದು ವಟವೃಕ್ಷವಿದೆಯೆಂದೂ ತಿಳಿದು ಬರುತ್ತದೆ. ಆದರೆ ಈಗ ಅವು ಯಾವುವೂ ಕಂಡು ಬರುವುದಿಲ್ಲ.

ಪುನಃ ಇಲ್ಲಿ ಹೇಳಿರುವ ಖಾಂಡವ ದಹನದ ಕಥೆಯನ್ನೂ ಭಾರತದಲ್ಲಿರುವ ಕಥೆಯನ್ನೂ ಹೋಲಿಸಿ ನೋಡಬೇಕಾದ್ದು ಇದರಲ್ಲಿ ಕೃಷ್ಣನ ಹೆಸರಾಗಲಿ ಮಯಾಸುರಾದಿಗಳ ಹೆಸರಾಗಲಿ ಇಲ್ಲ. ಇಂದ್ರಾರ್ಜುನರಿಗೆ ಯುದ್ಧವಾಗುವುದೂ ವಿರೂಪಾಕ್ಷನ ಮಧ್ಯಸ್ಥಿಕೆಯೂ ಹೊಸ ಸಂಗತಿಗಳು —ವಿ. ತೀ.]

ಅಗ್ನಿಗೆ ಅಜೀರ್ಣ—ಮತಂಗ ಗಿರಿಯಲ್ಲೇ ಪಾವನವಾದ ಪಾಪಹಾರಿಗಳಾದ ಸಾವಿರಾರು ತೀರ್ಥಗಳಿವೆ. ಅದರಲ್ಲಿ ಅಗ್ನಿತೀರ್ಥವೂ ಒಂದು. ಹಿಂದೆ ಅಜೀರ್ಣ ರೋಗಗ್ರಸ್ತನಾದ ಅಗ್ನಿ ಈ ತೀರ್ಥದ ಹತ್ತಿರವೇ ತಪಸ್ಸು ಮಾಡಿ ವಿರೂಪಾಕ್ಷನ ಅನುಗ್ರಹದಿಂದ ರೋಗಮುಕ್ತನಾದ.

ಹಿಂದೆ ಸೂರ್ಯವಂಶದ ಮರುತ್ತ ರಾಜ ನೂರು ವರ್ಷ ಕಟಂಕಟಯಾಗಿ ಮಹಾಯಜ್ಞ ನಡೆಸಿದ ನಿತ್ಯವೂ ಆನೆ ಸೊಂಡಲಿನ ಗಾತ್ರ ತುಪ್ಪವನ್ನು ಧಾರಾಕಾರವಾಗಿ ಹೊಯ್ಯುತ್ತಿದ್ದುದರಿಂದಲೂ ಪರ್ವತಾಕಾರವಾದ ಹವಿಸ್ಸು ಹಾಕುತ್ತಿದ್ದುದರಿಂದಲೂ ಕೊನೆ ಕೊನೆಗೆ ಅಗ್ನಿಗೆ ಅಜೀರ್ಣವಾಯಿತು. ಆಗ ಅವನು ಈ ಗಿರಿಗೆ ಬಂದು ಈ ತೀರ್ಥದ ದಡದಲ್ಲಿದ್ದ ಒಂದು ಅಶ್ವತ್ಥವೃಕ್ಷದಲ್ಲಿ ಲೀನನಾಗಿದ್ದು ಈ ತೀರ್ಥದಲ್ಲೇ ಸ್ನಾನಮಾಡಿ ವಿರೂಪಾಕ್ಷನನ್ನು ಕುರಿತು ತಪಸ್ಸಿಗೆ ಆರಂಭಿಸಿದ.

ಅದರಿಂದಾದ ಅನಾನುಕೂಲ—ದೇವತೆಗಳ ಮುಖದಂತಿದ್ದ ಅಗ್ನಿ ಅಜೀರ್ಣವಾಗಿ ಹೊರಟು ಹೋದ್ದರಿಂದ ಇಂದ್ರಾದಿ ನಿರ್ಜರರು ಹವಿಸ್ಸು ತರುವ ವಾಹಕನಿಲ್ಲದೆ ತಲ್ಲಣಿಸಿದರು. ಅತ್ತಲಾಗಿ ಜನಗಳ ಉದರದಲ್ಲಿದ್ದ ಜಾಠರಾಗ್ನಿಯೂ ಮಂದವಾಗಿ ಹೋದ್ದರಿಂದ ಎಲ್ಲೆಲ್ಲೂ ಹಾಹಾಕಾರ ಎದ್ದಿತು. ಇದನ್ನು ಕಂಡು ಸ್ವರ್ಗಾಧಿಪನಾದ ಮಘನ ಬೃಹಸ್ಪತಿಯೊಡನೆ ಸಮಾಲೋಚನೆ ನಡೆಸಿ ವಿರೂಪಾಕ್ಷನನ್ನು ಮೊರೆಹೊಕ್ಕ. ಆಗ ಆ ಸ್ವಾಮಿ ಎಲ್ಲರಿಗೂ ಅಭಯ ನೀಡಿ ತಪಸ್ಸು ಮಾಡುತ್ತಿದ್ದ ಅಗ್ನಿಗೆ ಪ್ರತ್ಯಕ್ಷನಾಗಿ "ಈಗ ಸದ್ಯಕ್ಕೆ ನಿನ್ನ ಅಜೀರ್ಣ ಈ ತೀರ್ಥಸ್ನಾನದಿಂದಲೇ ಶಾಂತಿಯಾಗುತ್ತದೆ. ಮುಂದೆ ದ್ವಾಪರದಲ್ಲಿ ಇಂದ್ರಾಂಶನಾದ ಅರ್ಜುನ ಹುಟ್ಟುವನು. ಅವನನ್ನು ಯಾಚಿಸಿ ಖಾಂಡವವನವನ್ನು ಭುಂಜಿಸಿದರೆ ನಿನ್ನ ರೋಗ ನಿಶ್ಶೇಷವಾಗುವುದು" ಎಂದು ವರ ಕೊಟ್ಟ.

ಖಾಂಡವವನ ದಹನ—ಅದರಂತೆ ಸಮಯ ಕಾಯುತ್ತಿದ್ದು ದ್ವಾಪರದಲ್ಲಿ ಒಂದು ದಿನ ಅಗ್ನಿ ಬ್ರಾಹ್ಮಣ ವೇಷವನ್ನು ಧರಿಸಿ ಅರ್ಜುನನ ಬಳಿಗೆ ಹೋಗಿ ಮೆಲ್ಲನೆ

ಭೋಜನ ಬೇಡಿ ಮಾಡಿನ ವಃಧ್ಯೆ ಸಿಗಿಸಿಕೊಂಡು ಖಾಂಡವವನ ದಹನ ಮಾಡುವುದಕ್ಕೆ ಸಹಾಯ ನೀಡುವಂತೆ ಒಪ್ಪಿಸಿಕೊಂಡ. ಅರ್ಜುನ ಧನುರ್ಧಾರಿಯಾಗಿ ನಿಂತಿರಲು ಅಗ್ನಿ ಖಾಂಡವವನವನ್ನು ದಹಿಸಲಾರಂಭಿಸಿದ.

ತನಗೆ ಪರಮಪ್ರಿಯವಾದ ವನಕ್ಕೆ ಬೆಂಕಿಬಿದ್ದ ಸಮಾಚಾರ ಕೇಳಿ ವಾಸವನು ಆ ಬೆಂಕಿಯನ್ನು ಆರಿಸುವುದಕ್ಕೆ ನವ ಮೇಘಗಳಿಗೂ ಏಕಕಾಲದಲ್ಲಿ ಮಳೆ ಸುರಿಸುವಂತೆ ಆಜ್ಞಾಪಿಸಿದನು. ಆದರೆ ಸವ್ಯಸಾಚಿಯು ಅಭೇದ್ಯವಾದ ಶರಪಂಜರದಿಂದ ಮುಗಿಲನ್ನೇ ಮುಚ್ಚಿಬಿಟ್ಟಿದ್ದರಿಂದ ಒಂದು ಹನಿ ಮಳೆಯೂ ಕೆಳಕ್ಕೆ ಬೀಳದಂತಾಯಿತು. ಜ್ವಲನ ತನ್ನ ಕಾರ್ಯ ನಿಸ್ಸಂಕೋಚವಾಗಿ ಕೈಕೊಂಡ.

ಇಂದ್ರಾರ್ಜುನರ ಯುದ್ಧ—ಕೋಪಾಕ್ರಾಂತನಾದ ಇಂದ್ರ ತಾನೇ ಧನಂಜಯನ ಮೇಲೆ ಯುದ್ಧಕ್ಕೆ ಬಂದ. ಇಂದ್ರಾರ್ಜುನರಿಗೆ ತುಮುಲ ಯುದ್ಧಾರಂಭವಾಯಿತು. ಅದನ್ನು ನೋಡಿ ದೇವತೆಗಳೆಲ್ಲಾಗೂ ಈಶಾನನಿಗೆ ಮೊರೆಯಿಟ್ಟುಕೊಂಡರು. ಆ ದೇವೇಶ ಇಬ್ಬರ ನಡುವೆ ಬಂದು ಇಬ್ಬರನ್ನೂ ಸಮಾಧಾನಮಾಡಿ ಶಚೀಪತಿಗೆ "ಈ ಕೆಲಸವನ್ನೂ ಅರ್ಜುನ ನಿಮ್ಮ ಹಿತಕ್ಕಾಗಿಯೇ ಮಾಡಿದ್ದಾನೆ. ಅಗ್ನಿಯು ಅಜೀರ್ಣರೋಗ ಪರಿಹಾರಕ್ಕಾಗಿಯೇ ಈ ಕೆಲಸ ಕೈಗೊಂಡಿದ್ದಾನೆ. ಅಗ್ನಿಗೆ ಆರೋಗ್ಯವಾದರೆ ನಿಮಗೇ ಒಳ್ಳೆಯದಲ್ಲವೇ?" ಎಂದು ಹೇಳಿ ಒಪ್ಪಿಸಿದ. ಇಂದ್ರಾದಿಗಳೆಲ್ಲರೂ ಪರಮೇಶನನ್ನು ಸ್ತುತಿಸಿದರು.

ಫಲಸ್ತುತಿ—ಹೀಗೆ ಈ ತೀರ್ಥ ಸ್ನಾನದಿಂದ ಅಗ್ನಿಗೆ ಬಂದಿದ್ದ ಅಜೀರ್ಣ ರೋಗ ಪರಿಹಾರವಾಯಿತು. ಆದ್ದರಿಂದಲೇ ಇದಕ್ಕೆ ಅಗ್ನಿತೀರ್ಥವೆಂದು ಪ್ರಸಿದ್ಧಿ ಬಂತು. ಅಲ್ಲದೆ ಈ ಅಶ್ವತ್ಥವೃಕ್ಷವಲ್ಲಿದ್ದು ತಪಸ್ಸು ಮಾಡಿದ್ದರಿಂದ ಈ ದ್ವೀಪಕ್ಕೆ ಅಶ್ವತ್ಥ ದ್ವೀಪವೆಂದು ಹೆಸರಾಯಿತು. ಅಗ್ನಿತೀರ್ಥದಲ್ಲಿ ಸ್ನಾನ ಮಾಡಿ ಅಶ್ವತ್ಥ ವೃಕ್ಷದ ಬಳಿ ತಪಸ್ಸು ಮಾಡುವವನಿಗೆ ಪರಮಪದ ಪ್ರಾಪ್ತವಾಗುತ್ತದೆ. ಅಗ್ನಿ ತೀರ್ಥದ ದರ್ಶನದಿಂದಲೇ ಸಕಲವ್ಯಾಧಿಗಳೂ ನಾಶವಾಗುವುವು. ಈ ಕಥೆಯನ್ನು ನಿತ್ಯವೂ ಪಠಿಸುವ ಮತ್ತು ಶ್ರವಣಮಾಡುವ ಮನುಜ ಸರ್ವಪಾಪನಿರ್ಮುಕ್ತನಾಗಿ ಸದ್ಗತಿ ಹೊಂದುವನು.

ಅಧ್ಯಾಯ 80 ಸಾಂಬ ತೀರ್ಥ

[78ನೇ ಅಧ್ಯಾಯದ ಮುಖಟಿಪ್ಪಣಿಯ 2ನೇ ಪ್ಯಾರಾ ನೋಡಿ.]

ಸಾಂಬನಿಗೆ ಮುನಿಶಾಪ—ಕೃಷ್ಣ ಮತ್ತು ಜಾಂಬವತಿಯರ ಮಗನಾದ ಸಾಂಬ ಒಂದು ದಿನ ವಿಹಾರಾರ್ಥ ಕೆಲವು ಯಾದವ ಬಾಲಕರೊಡನೆ ಪಿಂಡಾರಕ ವನಕ್ಕೆ ಹೋದ. ಕುಚೋದ್ಯ ಪ್ರಿಯರಾದ ಆ ಯಾದವರು ಅಲ್ಲಿದ್ದ ಋಷಿಗಳನ್ನು

ಅಪಹಾಸ್ಯಮಾಡಿ ನಗುವುದಕ್ಕಾಗಿ ಸಾಂಬನಿಗೆ ಹೆಣ್ಣುವೇಷ ಹಾಕಿ "ಈ ಗರ್ಭಿಣಿ ಹೆಣ್ಣು ಹಡೆಯುವಳೋ ?" ಗಂಡು ಹಡೆಯುವಳೋ ? ಎಂದು ಪ್ರಶ್ನೆಮಾಡಿದರು. ಅವರ ದುರ್ಬುದ್ಧಿಯನ್ನರಿತುಕೊಂಡು ಆ ಋಷಿಗಳು ಕೋಪಾವಿಷ್ಟರಾಗಿ "ಎಲವೋ ಉದ್ಧತರಾ ! ಇವನ ಹೊಟ್ಟೆಯಿಂದ ನಿಮ್ಮ ಕುಲಕ್ಕೇ ಮೃತ್ಯುರೂಪವಾದ ಕಬ್ಬಿಣದ ಒನಕೆ ಹುಟ್ಟುತ್ತದೆ" ಎಂದು ಬಾಲಕರಿಗೆ ಹೇಳಿ, ಸಾಂಬನನ್ನು ನೋಡಿ "ಸಾಂಬಾ ! ನೀನು ಕೃಷ್ಣನ ಮಗನೆಂದು ಇಷ್ಟು ಕೊಬ್ಬಿದ್ದೀಯಲ್ಲವೆ ? ನೀನು ಈ ಸ್ತ್ರೀ ವೇಷದಲ್ಲೇ ಕುಷ್ಠರೋಗಿಯಾಗು" ಎಂದು ಅವನಿಗೂ ಶಾಪಕೊಟ್ಟರು. ಸಾಂಬ ಮೂರ್ಛಿತನಾಗಿ ಬಿದ್ದು ಪುನಃ ಚೇತರಿಸಿಕೊಂಡೆದ್ದು ಮುನಿಗಳನ್ನು ಪರಿಪರಿಯಾಗಿ ಬೇಡಿಕೊಂಡ. ದಯಾಮೂರ್ತಿಗಳಾದ ಅವರು ಅವನಿಗೆ ಹಂಪೆಗೆ ಹೋಗಿ ತಪಸ್ಸು ಮಾಡುವಂತೆ ಬೋಧಿಸಿ ಹೋದರು.

ಹಂಪೆಯಲ್ಲಿ ಸಾಂಬ—ಋಷಿಗಳ ಮಾತಿನಂತೆ ಸಾಂಬ ನೇರವಾಗಿ ಹಂಪೆಗೆ ನಡೆದ. ಇಲ್ಲಿಗೆ ಬರುವ ಹೊತ್ತಿಗೆ ಹಸಿವು ಬಾಯಾರಿಕೆಗಳಿಂದ ಅವನ ತಲೆ ತಿರುಗ ಹತ್ತಿತು, ಸ್ವಲ್ಪ ಹೊತ್ತಿನಲ್ಲೇ ಪ್ರಜ್ಞೆತಪ್ಪಿ ಬಿದ್ದ. ಶಿವನೆಂಬ ಒಬ್ಬ ಬ್ರಾಹ್ಮಣ ಅವನನ್ನು ಎಬ್ಬಿಸಿ ಅವನ ಕಥೆ ಕೇಳಿ ಅವನಿಗೆ ಕುಡಿಯುವುದಕ್ಕಾಗಿ ಈ ತೀರ್ಥದಿಂದ ಸ್ವಲ್ಪ ನೀರನ್ನು ತಂದುಕೊಟ್ಟ. ಜಲಪಾನ ಮಾಡಿದ್ದರಿಂದ ಸಾಂಬನಿಗೆ ಶ್ರಮವೆಲ್ಲಾ ಪರಿಹಾರವಾಗಿ ಹೊಸ ಹುರುಪು ಬಂತು. ಅನಂತರ ಶಿವನು ತೋರಿಸಿದ ಆ ತೀರ್ಥದ ದಡದಲ್ಲೇ ಒಂದು ತಿಂಗಳು ಕಾಲ ತಪಸ್ಸು ಮಾಡಿದನು. ವಿರೂಪಾಕ್ಷ ಪ್ರತ್ಯಕ್ಷನಾಗಿ ಸಾಂಬನ ಶಾಪ ಕಳೆದು ಅನುಗ್ರಹಿಸಿದನು. ಸಾಂಬ ತಪಸ್ಸು ಮಾಡಿದ ಈ ತೀರ್ಥಕ್ಕೆ ಅವನ ಹೆಸರೇ ಬಂತು. ಇದು ಪವಿತ್ರವೂ ಪಾಪಹಾರಕವೂ ಆಗಿದೆ.

ಅಧ್ಯಾಯ 81 ಕುಮಾರ ತೀರ್ಥ

[ಮತಂಗಗಿರಿ ಹತ್ತುವ ದಾರಿಯಲ್ಲಿ ಸುಮಾರು ಅರ್ಧಬೆಟ್ಟದ ಮೇಲೆ ಒಂದು ಗುಹೆ ಸಿಗುತ್ತದೆ. ಅದರಲ್ಲಿ ಕುಮಾರಸ್ವಾಮಿ ಇದಾನೆ. ಕುಮಾರ ತೀರ್ಥವು ಇಲ್ಲೇ ಎಲ್ಲೋ ಇದ್ದಿರಬೇಕು. ಈಗ ನಮಗಂತೂ ಯಾವ ತೀರ್ಥವೂ ಕಣ್ಣಿಗೆ ಬೀಳುವುದಿಲ್ಲ—ವೀ. ತೀ.]

ಅಹಂಕಾರಿ ನಾಗನಾಥ—ಪೂರ್ವಕಾಲದಲ್ಲಿ **ಸುನಂದ**ನೆಂಬ ವಿಪ್ರೋತ್ತಮ ಇದ್ದ. ಅವನಿಗೆ **ನಾಗನಾಥ**ನೆಂಬ ಮಗನಿದ್ದ. ನಾಗನಾಥ ಅಲ್ಪಜ್ಞರಿಂದ ಆತ್ಮವಿದ್ಯೆ ಕಲಿತು ತಪ್ಪು ತಿಳುವಳಿಕೆಯುಳ್ಳವನಾದರೂ ತಾನೇ ವಿದ್ಯಾವಂತನೆಂದು ಭಾವಿಸಿ ದುರಹಂಕಾರಿಯಾದ. ತನ್ನ ವೃದ್ಧ ಮಾತಾಪಿತೃಗಳನ್ನೂ ತಿರಸ್ಕರಿಸಿ ತಪಸ್ಸು ಮಾಡುವುದಕ್ಕಾಗಿ ಅರಣ್ಯಕ್ಕೆ ಹೊರಡಲನುವಾದ.

ಅದನ್ನು ಕಂಡು ಅವನ ತಂದೆ "ಅಪ್ಪಾ, ವೃದ್ಧರಾದ ನಮ್ಮನ್ನು ಬಿಟ್ಟು ಕಾಡಿಗೆ ಪ್ರಯಾಣ ಮಾಡಬೇಡ. ಇದು ನಿನಗೆ ಧರ್ಮವಲ್ಲ. ಲೋಕದಲ್ಲಿ ಮಾತಾಪಿತೃಗಳಿಗಿಂತ ದೊಡ್ಡ ದೇವರಿಲ್ಲ. ಸಕಲ ಧರ್ಮಸಾಧನೆಗಳಿಗೂ ಆಧಾರಭೂತವಾದ ಈ ದೇಹವನ್ನು ಕೊಟ್ಟವರೇ ಆ ತಂದೆತಾಯಿಗಳು. ಅವರನ್ನು ತಿರಸ್ಕರಿಸಿ ಅನ್ಯಧರ್ಮವನ್ನು ಬಯಸುವ ಮನುಷ್ಯ ಕೈಯಲ್ಲಿರುವ ಅಮೃತವನ್ನು ಬಿಟ್ಟು ಕಳ್ಳಿಗಿಡದ ಹಾಲು ಬಯಸಿದಂತೆ.

ನೃಣಾಂ ಪಿತೃಸಮಃ ಪೂಜ್ಯೋ ದೇವೋ ಲೋಕೇನ ವಿದ್ಯತೇ ||
ತಾ ತಿರಸ್ಕೃತ್ಯ ಯೋsನ್ಯಸ್ಮೈ ಧರ್ಮಾಯ ಯತತೇ ಪುಮಾನ್ |
ಕರಸ್ಥಮಮೃತಂ ತ್ಯಕ್ತ್ವಾ ಸ್ನುಹೀಕ್ಷೀರಂ ಸ ಯಾಚತೇ ||

ಈ ವಿಷಯದಲ್ಲಿ ಒಂದು ಕಥೆ ಹೇಳುವೆನು, ಕೇಳು.

ಧರ್ಮವ್ಯಾಧನ ಕಥೆ :—ಒಬ್ಬ ಬ್ರಾಹ್ಮಣ ನೂರು ವರ್ಷ ತಪಸ್ಸು ಮಾಡಿ ಕಡೆಗೆ ಒಂದು ದಿನ ಕಣ್ಣು ತೆರೆದು ನೋಡಿದ. ಕಣ್ಣಿನಲ್ಲಿ ಅಡಗಿದ್ದ ತಪೋಜ್ವಾಲೆಯಿಂದ ಮರದ ಮೇಲೆ ಕುಳಿತಿದ್ದ ಕಾಗೆಗಳು ಸುಟ್ಟು ಉದುರಿದುವು. ಇದರಿಂದ ಆ ಬ್ರಾಹ್ಮಣನಿಗೆ ತಾನು ಮಹಾತಪಸ್ವಿಯೆಂಬ ಗರ್ವ ಹುಟ್ಟಿಬಿಡಿತು. ಒಂದು ದಿನ ಭಿಕ್ಷೆಗೆ ಹೋಗಿದ್ದಾಗ ಪತಿಸೇವಾಕಾರ್ಯದಲ್ಲಿ ಆಸಕ್ತಳಾಗಿದ್ದ ಒಬ್ಬ ಸತಿಯು ಅವನಿಗೆ ಭಿಕ್ಷೆ ಹಾಕುವುದಕ್ಕೆ ಸ್ವಲ್ಪ ತಡಮಾಡಿದಳು. ಅದಕ್ಕೆ ಕುಪಿತನಾದ ತಪಸ್ವಿ ಅವಳ ಮುಖವನ್ನು ದುರು–ದುರು ನೋಡಿದ. ಅವನ ಮನೋಗತವನ್ನರಿತುಕೊಂಡ ಆ ಸಾಧ್ವಿ "ನೋಡಿದ ಮಾತ್ರಕ್ಕೇ ಸುಟ್ಟು ಉದುರುವುದಕ್ಕೆ ನಾನೇನು ಕಾಡಿನ ಕಾಗೆಯಲ್ಲ" ಎಂದಳು.

ಈ ಮಾತು ಕೇಳಿ ತಪಸ್ವಿಗೆ ಪರಮಾಶ್ಚರ್ಯವಾಯಿತು. ಆಕೆಗೆ ನಮಸ್ಕಾರ ಮಾಡಿ "ಅಮ್ಮಾ, ನಿನಗೆ ಆ ವೃತ್ತಾಂತ ಹೇಗೆ ತಿಳಿಯಿತು ? ನನಗೆ ಧರ್ಮೋಪದೇಶ ಮಾಡು " ಎಂದು ಬೇಡಿಕೊಂಡ. ಅದಕ್ಕೆ ಆ ಸುದತಿ "ಪಾತಿವ್ರತ್ಯದ ಮಹಿಮೆಯಿಂದ ನನಗೆ ನಿನ್ನ ವಿಷಯ ತಿಳಿಯಿತು. ಕಾಶಿಯಲ್ಲಿರುವ ಧರ್ಮವ್ಯಾಧನನ್ನು ಕಾಣು. ಅವನು ನಿನಗೆ ಧರ್ಮೋಪದೇಶ ಮಾಡುವನು " ಎಂದಳು.

ತಪಸ್ವಿ ಆ ಧರ್ಮವ್ಯಾಧನನ್ನು ಹುಡುಕಿಕೊಂಡು ಕಾಶಿಗೆ ಹೊರಟ. ಅಲ್ಲಿಗೆ ಹೋಗಿ ಹುಡುಕಿ ಹುಡುಕಿ ಅವನ ಮನೆಗೆ ಹೋಗಿ ನೋಡಿದರೆ ವ್ಯಾಧನ ಮನೆಯೆಲ್ಲ ರಕ್ತಮಾಂಸಾಸ್ಥಿಮಯವಾಗಿತ್ತು. ಇಂಥಾ ವ್ಯಾಧನೇ ತಪಸ್ವಿಗೆ ಧರ್ಮೋಪದೇಶ ಮಾಡಿದ. ತಪಸ್ವಿ ಆಶ್ಚರ್ಯದಿಂದ ಧರ್ಮವ್ಯಾಧನನ್ನು "ಅಯ್ಯಾ, ನೀನು ಮಾಡುವುದು ಕಟುಕರ ವೃತ್ತಿ—ನಿನಗೆ ಇಂಥಾ ವಿದ್ಯೆ ಹೇಗೆ ಲಭಿಸಿತು ?" ಎಂದು ಕೇಳಿದ. ಧರ್ಮವ್ಯಾಧ ಅವನಿಗೆ ತನ್ನ ತಂದೆತಾಯಿಗಳನ್ನು ತೋರಿಸಿ "ಅವರ ಸೇವೆಯ ಫಲವೇ ಇದು " ಎಂದು ಹೇಳಿದ. ತಪಸ್ವಿ ಮೂಗಿನ ಮೇಲೆ ಬೆಟ್ಟಿಟ್ಟುಕೊಂಡ.

ನಾಗನಾಥನಿಗೆ ದೀನಾವಸ್ಥೆ :—ತಂದೆ ಹೀಗೆಲ್ಲಾ ಉಪದೇಶ ಮಾಡಿದರೂ ನಾಗನಾಥನಿಗೆ ಮಾತ್ರ ಅದು ಎಳ್ಳಷ್ಟೂ ಹತ್ತಲಿಲ್ಲ. ಅವನು ತಂದೆಯ ಮಾತು ಉಲ್ಲಂಘಿಸಿ ತಪೋವನಕ್ಕೆ ತೆರಳಿ ಹತ್ತು ವರ್ಷ ಕಠೋರ ತಪಸ್ಸು ಮಾಡಿದ. ಒಂದು ದಿನ ಸ್ನಾನಕ್ಕೆ ಹೋಗಿದ್ದಾಗ ದೈವವಶಾತ್ ಒಬ್ಬ ಚೆಲುವೆಯಾದ ಚಂಡಾಲಕನ್ನಿಕೆ ಅವನ ಕಣ್ಣಿಗೆ ಬಿದ್ದಳು. ಅವಳ ರೂಪಕ್ಕೆ ಮೋಹಿತನಾದ ಅವನು ಕಾಮಾತುರನಾಗಿ ಬಲಾತ್ಕಾರದಿಂದ ಅವಳೊಡನೆ ರಮಿಸಿದನು. ಅನಂತರ ಅವಳ ಅಧೀನನಾಗಿ ಬ್ರಹ್ಮ ಸೂತ್ರ ಶಿಖೆಗಳನ್ನು ಬಿಟ್ಟು ತಾನೂ ಚಂಡಾಲವೃತ್ತಿಯನ್ನು ಅವಲಂಬಿಸಿದನು.

ಒಂದು ದಿನ ರಾತ್ರಿ ನಾಗನಾಥನನ್ನು ಸರೀಕ ಚಂಡಾಲರೊಡನೆ ರಾಜನ ಮನೆಗೆ ಕಳ್ಳತನ ಮಾಡುವುದಕ್ಕೆ ಹೋದ. ಅಲ್ಲಿ ರಾಜದೂತರ ಕೈಗೆ ಸಿಕ್ಕಿ ಬೀಳಲು ಅವರು ಇವನನ್ನು ರಾಜನ ಮುಂದೆ ಕರೆದೊಯ್ದು ನಿಲ್ಲಿಸಿದರು. ರಾಜ ಅವರಿಗೆ ಅವನ ಕಾಲುಗಳನ್ನು ಕಡಿದು ಹಾಕಿ ಅವನನ್ನು ದೇಶದಿಂದ ಹೊರಕ್ಕೆ ಅಟ್ಟಿಬಿಡುವಂತೆ ಆಜ್ಞಾಪಿಸಿದ. ರಾಜಭಟರು ಅದರಂತೆ ಅವನ ಕಾಲುಗಳನ್ನು ಕಡಿದು ಹಾಕಿ ಅವನನ್ನು ದೇಶದ ಆಚೆ ಬಿಟ್ಟುಹೋದರು. ಆಗ ನಾಗನಾಥನಿಗೆ ತನ್ನ ಹಿಂದಿನ ವೃತ್ತಾಂತವೆಲ್ಲ ನೆನಪಿಗೆ ಬಂತು. ನೆನೆ-ನೆನೆದುಕೊಂಡು ಗೋಳೋ ಎಂದು ಅತ್ತುಬಿಟ್ಟ.

ಕಷ್ಟನಿವೃತ್ತಿ—ಲೋಮಶನೆಂಬ ಮುನಿ ಅವನ ದುರ್ದೆಶೆಯನ್ನು ಕಂಡು ಮರುಗಿ, ಅವನ ಕಥೆಯೆಲ್ಲಾ ವಿಚಾರಿಸಿ, ಹತ್ತಿರದಲ್ಲಿದ್ದ **ಕುಮಾರ ತೀರ್ಥ**ದ ನೀರನ್ನು ತಂದು ಅವನ ಮೇಲೆ ಪ್ರೋಕ್ಷಿಸಿದರು. ಅದರಿಂದ ಅವನ ಪಾಪಗಳೆಲ್ಲ ನಾಶವಾಗಿ ಅವನಿಗೆ ಎರಡು ಕಾಲುಗಳೂ ಹೊಸದಾಗಿ ಬಂದುವು. ಅನಂತರ ನಾಗನಾಥ ಲೋಮಶರ ಅಪ್ಪಣೆಯಂತೆ ಆ ಕುಮಾರತೀರ್ಥದಲ್ಲೇ ಸ್ನಾನಮಾಡಿ ಆ ಮತಂಗಾದ್ರಿಯ ಮೇಲೇ ನೂರು ವರ್ಷ ತಪಸ್ಸು ಮಾಡಲು ವಿರೂಪಾಕ್ಷ ಪ್ರತ್ಯಕ್ಷನಾಗಿ ಅವನಿಗೆ ಸದ್ಗತಿ ದಯಪಾಲಿಸಿದನು.

ಈ ತೀರ್ಥವನ್ನು ಕುಮಾರಸ್ವಾಮಿಯು ಲೋಕೋಪಕಾರಾರ್ಥವಾಗಿ ನಿರ್ಮಿಸಿದ. ಆದ್ದರಿಂದ ಇದು ಅವನ ಹೆಸರಿಂದಲೇ ಪ್ರಖ್ಯಾತವಾಯಿತು. ಇದರ ಸ್ನಾನದಿಂದ ಎಷ್ಟೋ ಮಂದಿ ಮಿಥ್ಯಾ ಸಂಸಾರದ ಬಂಧನದಿಂದ ಪಾರಾಗಿ ಹೋಗಿದ್ದಾರೆ. ಈ ಕಥಾ ಶ್ರವಣದಿಂದಲೇ ಮುಕ್ತಿಯಾಗುತ್ತದೆ.

ಅಧ್ಯಾಯ 82 ವ್ಯಾಸಾಶ್ರಮ

[ವ್ಯಾಸಾಶ್ರಮ ಋಷ್ಯಮೂಕದಲ್ಲಿದೆಯೆಂದು ಪುರಾಣದಲ್ಲೇ ಉಕ್ತವಾಗಿದೆ. ಋಷ್ಯಮೂಕದಲ್ಲಿ ಇಂದಿಗೂ ಎಷ್ಟೋ ಮುನಿಗಳು ವಾಸಿಸುತ್ತಾರೆಂದು ಹಿಂದೆಯೇ 13ನೇ ಅಧ್ಯಾಯದಲ್ಲಿ (ಕಡೆಯಲ್ಲಿ) ಹೇಳಿದೆಯಷ್ಟೆ. ಆದರೆ ಇದಕ್ಕೂ ಹೆಚ್ಚಿಗೆ ಏನೂ ಹೇಳಲಾರೆವು—ವಿ. ತಿ.]

ವ್ಯಾಸಾಶ್ರಮ ದರ್ಶನ—ಕುಮಾರ ತೀರ್ಥದಿಂದ ಸಪ್ತರ್ಷಿಗಳು ಋಷ್ಯಮೂಕ ಗಿರಿಯಲ್ಲಿದ್ದ ವ್ಯಾಸಾಶ್ರಮಕ್ಕೆ ಬಂದರು. ಅವರು ಕಮನೀಯವಾದ ಆ ಆಶ್ರಮವನ್ನು ಕಂಡು ಬೆರಗಾಗಿ ನಿಂತರು. ಕ್ಷೇತ್ರಪಾಲ ಹೀಗೆಂದು ಹೇಳಲಾರಂಭಿಸಿದ—ಇದೇ ವ್ಯಾಸಾಶ್ರಮ. ನಾರಾಯಣ ತಾನೇ ವ್ಯಾಸರೂಪದಿಂದ ಅವತರಿಸಿ ಅವಿದ್ಯಾ ಸಮುದ್ರದಲ್ಲಿ ಮುಳುಗಿರುವ ಪ್ರಾಣಿಗಳ ಉದ್ಧಾರಕ್ಕಾಗಿ ಹದಿನೆಂಟು ಪುರಾಣಗಳನ್ನು ಬರೆದು ಅದರಲ್ಲಿ ಸರ್ವೋತ್ತಮವಾದ ಪಂಪಾಮಾಹಾತ್ಮ್ಯವನ್ನು ತಮ್ಮ ಶಿಷ್ಯರಾದ ಶಾಲಾದಿಗಳಿಗೆ ಈ ಆಶ್ರಮದಲ್ಲೇ ವಿವರಿದರು.

ವ್ಯಾಸಾಶ್ರಮದಲ್ಲಿ ಜಾಬಾಲಿ—ಒಂದು ದಿನ ವ್ಯಾಸರು ವಿರೂಪಾಕ್ಷನ ಪೂಜೆಗಾಗಿ ಹೋಗಿದ್ದರು. ಇತ್ತಲಾಗಿ ಅವರ ಶಿಷ್ಯರು ಪಂಪಾ ಮಹಾತ್ಮ್ಯ ಪಾರಾಯಣ ಮಾಡುತ್ತಾ ಆಶ್ರಮದಲ್ಲೇ ಕುಳಿತಿದ್ದರು. ಅಲ್ಲಿಗೆ ಅಕಸ್ಮಾತ್ತಾಗಿ **ಜಾಬಾಲಿ** ಶಿಷ್ಯ ಸಮೇತರಾಗಿ ಆಗಮಿಸಿದರು. ಶಾಲಾದಿಗಳು ಬಂದ ಅಥಿತಿಗಳಿಗೆ ಅರ್ಘ್ಯಪಾದ್ಯಾದಿಗಳಿಂದ ಸತ್ಕಾರಮಾಡಿ ಉಪಚರಿಸಿದರು. ಅನಂತರ ಜಾಬಾಲಿ ಕ್ಷೇಮ ಸಮಾಚಾರ ಮಾಡುತ್ತಾ 'ವ್ಯಾಸರೆಲ್ಲಿ? ನೀವು ಪಾರಾಯಣ ಮಾಡುತ್ತಿರುವುದೇನು?' ಎಂದು ಕೇಳಿದರು.

ಶಿಷ್ಯರು ತಮ್ಮ ಗುರುಗಳು ಪಂಪಾಪತಿಯ ದರ್ಶನಕ್ಕೆ ಹೋಗಿದ್ದಾರೆಂದೂ ತಾವು ಪಾರಾಯಣ ಮಾಡುತ್ತಿದ್ದುದು ಪಂಪಾಮಾಹಾತ್ಮ್ಯೆಯೆಂದೂ ಉತ್ತರಕೊಟ್ಟರು. ಜಾಬಾಲಿ "ಅದೇನು ಮಾಹಾತ್ಮ್ಯ? ಹೇಳಿ, ನೋಡೋಣ" ಎಂದರು.

ಶಿಷ್ಯರು ಅದನ್ನು ಪಠಿಸುತ್ತಾ ಹೋದರು.

ಒಂದು ಕಡೆ.

ಯದಾಹ ಸಾಧುರೇಕಾಂತೇ ನ ಸ್ತ್ರೀಭಿಃ ಸಹ ಸಂವಸೇತ್।
ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ॥

ಸಾಧುವು ಏಕಾಂತದಲ್ಲಿ ಸ್ತ್ರೀಯರೊಡನೆ ವಾಸಮಾಡಬಾರದು. ಇಂದ್ರಿಯಗಳ ಶಕ್ತಿ ಬಲವಾದುದು, ಎಂತಹ ವಿದ್ವಾಂಸನನ್ನಾದರೂ ಆಕರ್ಷಿಸಿ ಬಿಡುತ್ತದೆ—ಎಂದಿತ್ತು.

ಅದನ್ನು ಕೇಳಿ ಜಾಬಾಲಿ "ಛೀ! ಛೀ, ಇದು ತಪ್ಪು-ಸಾಧುಗಳು ಸಮಚಿತ್ತರಾಗಿರುತ್ತಾರೆ, ಜಿತೇಂದ್ರಿಯರಾಗಿರುತ್ತಾರೆ. ಅವರ ಮನಸ್ಸು ಹೇಗೆ ಚಂಚಲವಾದೀತು? ಸರ್ವಥಾ ಸಾಧ್ಯವಿಲ್ಲ" ಎಂದು ಗೊಣಗುಟ್ಟಿಕೊಳ್ಳುತ್ತಾ ಎದ್ದು ಹೊರಟುಬಿಟ್ಟರು.

ವಿಚಿತ್ರ ಅನುಭವ—ಸ್ವಲ್ಪ ಹೊತ್ತಿನಲ್ಲೇ ಗಾಳಿಧೂಳು ಎದ್ದು ಮೋಡಕವಿದುಕೊಂಡು ಕಗ್ಗತ್ತಲೆಯಾಯಿತು. ಸಣ್ಣಗೆ ಮಳೆಯೂ ಪ್ರಾರಂಭವಾಯಿತು. ಕತ್ತಲಲ್ಲಿ ಜಾಬಾಲಿಯ ಶಿಷ್ಯರು. ಎಲ್ಲೆಲ್ಲೋ ತಪ್ಪಿಸಿಕೊಂಡರು. ಅವರೊಬ್ಬರೇ ಛಳಿ-ಮಳೆಯಲ್ಲಿ

ಗಡಗಡ ನಡುಗುತ್ತಾ ಕತ್ತಲೆಯಲ್ಲಿ ಬರುತ್ತಿದ್ದರು. ಹತ್ತಿರದಲ್ಲೇ ಒಂದು ಗುಡಿಸಲು ಕಾಣಿಸಿತು. ಜಾಬಾಲಿ ಗುಡಿಸಲೊಳಕ್ಕೆ ಹೋದರು. ಸ್ವಲ್ಪ ಧೈರ್ಯಮಾಡಿಕೊಂಡು ಇನ್ನೂ ಒಳ ನುಗ್ಗಿ ಮಾತನಾಡಿಸಿದರು. ಒಳಗಿಂದ ಒಬ್ಬಳೇ ಒಬ್ಬಳು ಸುಂದರಾಂಗಿ ಹೊರಕ್ಕೆ ಬಂದು ಜಾಬಾಲಿಗೆ ಹೊದ್ದಿಕೆ ಕೊಟ್ಟು ಅವರನ್ನು ಹೊರಗೆ ಮಲಗ ಹೇಳಿ ತಾನು ಒಳಕ್ಕೆ ಹೋಗಿ ಅಗಣಿ ಹಾಕಿಕೊಂಡು ಮಲಗಿಕೊಂಡಳು.

ಇತ್ತಲಾಗಿ ಆ ಸುಂದರಾಂಗಿಯನ್ನು ನೋಡಿದಾರಭ್ಯ ಜಾಬಾಲಿಯ ಮನಸ್ಸು ಸ್ವಲ್ಪ ವಿಕಲ ವಿಕಲವಾಗ ಹತ್ತಿತ್ತು. ಜೊತೆಗೆ ಛಳಿ ಬೇರೆ. ಹೀಗಾಗಿ ಅವರಿಗೆ ಮನೋವಿಕಾರ ಸಹಿಸಲಾರದಂತಾಯಿತು. ಮನ್ಮಥಾವಿಷ್ಟರಾಗಿ ಅವರು ಮನೆಯ ಮೇಲಿನ ಗವಾಕ್ಷಿಯ ಮೇಲೆ ಹತ್ತಿ ಒಳಕ್ಕಿಳಿಯುವ ಪ್ರಯತ್ನ ಮಾಡಿದರು. ಹೇಗೋ ಮಾಡಿ ಕೈಕಾಲುಗಳನ್ನು ಒಳಗೆ ಇಳಿಬಿಟ್ಟರು. ಇಷ್ಟರಲ್ಲಿ ಅವರ ಕುತ್ತಿಗೆ ಬಿದುರಿನ ಅಡ್ಡಪಟ್ಟಿಗೆ ಸಿಕ್ಕಿ ಹಾಕಿಕೊಂಡಿತು. ಅವರ ದೇಹ ಕೆಳಗೆ ಜೋತು ಬಿತ್ತು. ನೋವಿನಿಂದ ಜಾಬಾಲಿ ಕಿರಿಚಿಕೊಳ್ಳಲಾರಂಭಿಸಿದರು.

ಅದನ್ನು ಕಂಡು ಹೆಂಗಸು "ಜಾಬಾಲಿಗಳೇ, ಸಮಚಿತ್ತನೂ ಜಿತೇಂದ್ರಿಯನೂ ವಿದ್ವಾಂಸನೂ ಆದ ನಿನ್ನ ಮನಸ್ಸು ಹೇಗೆ ಚಂಚಲವಾಯಿತು ? ವ್ಯಾಸರು.

ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ ಎಂದು ಹೇಳಿದಾಗ ಅಷ್ಟು ಟೀಕೆಮಾಡಿದಿ ! ಈಗ ಹೇಗಿದೆ ?". ಎಂದು ಹಾಸ್ಯ ಮಾಡಿದಳು. ಜಾಬಾಲಿ ದಮಯ್ಯ ದತ್ತಯ್ಯ ಎಂದರೂ ಕಿವಿಗೆ ಹಾಕಿಕೊಳ್ಳಲಿಲ್ಲ. "ನಾನು ಅಬಲೆ. ನಾನು ನಿನಗೆ ಸಹಾಯ ಮಾಡುವ ಹಾಗಿಲ್ಲ.

ಅವಶ್ಯಮನು ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಮ್ " ಎಂದು ಹೇಳುತ್ತಾ ಆ ಸ್ಥಳವನ್ನೇ ಬಿಟ್ಟು ಹೊರಟುಹೋದಳು.

ಜಾಬಾಲಿ ನೋವನ್ನು ಸಹಿಸಲಾರದೆ ಕಿರಚುತ್ತಾ ಅರಚುತ್ತಾ 'ಪಂಪಾ ಮಹಾತ್ಮ್ಯವನ್ನು ಹಳಿದದ್ದು ತಪ್ಪಾಯಿತು. ನನ್ನ ಅಪರಾಧವನ್ನು ಮನ್ನಿಸಿ ಸಲಹಿರಿ' ಎಂದು ವ್ಯಾಸರಿಗೂ ವಿರೂಪಾಕ್ಷನಿಗೂ ದೇವಿಗೂ ಪರಿಪರಿಯಿಂದ ಬೇಡಿಕೊಂಡರು.

ಕಷ್ಟ ಬಿಡುಗಡೆ—ಹೀಗೆ ಜಾಬಾಲಿಗೆ ತೋಬಾ—ತೋಬಾ ಎನ್ನಿಸಿದ ಬಳಿಕ ವ್ಯಾಸರು ಕಾಣಿಸಿಕೊಂಡರು. ಒಡನೆಯೇ ನೇತಾಡುತ್ತಿದ್ದ ಜಾಬಾಲಿ ಕೆಳಕ್ಕೆ ಬಿದ್ದು ಸ್ಮೃತಿತಪ್ಪಿದರು. ಸ್ವಲ್ಪ ಹೊತ್ತಿನ ಬಳಿಕ ಚೇತರಿಸಿಕೊಂಡು ವ್ಯಾಸರಿಗೆ ಸಾಷ್ಟಾಂಗ ಪ್ರಣಾಮಮಾಡಿ ಕ್ಷಮೆ ಬೇಡಿದರು. ವ್ಯಾಸರು ಅವರಿಗೆ ಅಲ್ಲಿ ಆಶ್ರಮ ಮಾಡಿಕೊಂಡು

ಶಿಷ್ಯರಿಗೆ ಪಂಪಾಮಾಹಾತ್ಮ್ಯವನ್ನು ಬೋಧಿಸುವಂತೆ ಹೇಳಿದ್ದರಿಂದ ಜಾಬಾಲಿ ಮತಂಗಾದ್ರಿಯಲ್ಲೇ ಆಶ್ರಮ ಮಾಡಿಕೊಂಡು ವಾಸಿಸಲಾರಂಭಿಸಿದರು.

ಈ ಪಾವನವಾದ ದಿವ್ಯ ವ್ಯಾಸಾಶ್ರಮದಲ್ಲಿ ಕ್ಷಣ ಮಾತ್ರ ವಾಸಮಾಡಿದರೂ ಸಾಕು, ದಾನಧ್ಯಾನಾದಿಗಳಿಲ್ಲದಿದ್ದರೂ ಮುಕ್ತನಾಗುತ್ತಾನೆ. ಈ ಆಖ್ಯಾನ ಶ್ರವಣ ಮಾಡುವವನು ಸರ್ವೇಪ್ಸಿತ ಭಾಗಿಯಾಗುತ್ತಾನೆ.

ಅಧ್ಯಾಯ 83 ಹರಿಣಪ್ಲುತ ತೀರ್ಥ

[೮೩-೮೬ ಈ ನಾಲ್ಕು ಅಧ್ಯಾಯಗಳಲ್ಲೂ ಈ ಹರಿಣಪ್ಲುತ ತೀರ್ಥಕ್ಕೆ ಸಂಬಂಧಿಸಿ ಕಥೆ ಯನ್ನೇ ಹೇಳಿದೆ. ಹರಿಣ ಎಂದರೆ ಜಿಂಕೆ, ಪ್ಲುತ ಎಂದರೆ ಹಾರೋಣ, ನೆಗರೋಣ. ಶೌನ ಕಾದಿಗಳು ಮಾಡುತ್ತಿದ್ದ ಯಜ್ಞ ಕುಂಡದಲ್ಲಿ ಎರಡು ಜಿಂಕೆಗಳು ಬಂದು ಹಾರುತ್ತವೆಯೆಂಬ ಕಥೆ ಮುಂದೆ ತಿಳಿದು ಬರುತ್ತದೆ. ಅದಕ್ಕೇ ಈ ತೀರ್ಥಕ್ಕೆ ಹೀಗೆ ಹೆಸರುಂಟಾಗಿದೆ.

ಈ ತೀರ್ಥವೂ, ಭಾಂಡೀರಗುಹೆ ವಾತಾಪಿ ಇಲ್ವರ ಗುಹೆಗಳೂ ಗಜಾಸ್ಯ ತೀರ್ಥ ವಿದ್ಯಾ ತೀರ್ಥಗಳೂ ಮತಂಗಾದ್ರಿಯಲ್ಲೇ ಇವೆಯೆಂದು ಪುರಾಣದಲ್ಲಿ ಕಂಠೋಕ್ತವಾಗಿ ಹೇಳಿದೆ. ಅದೂ ಅಲ್ಲದೆ ಇಲ್ಲೊಂದು ವಟವೃಕ್ಷವಿತ್ತೆಂದೂ ಅದರ ಬಳಿಯಲ್ಲೇ ಶೌನಕಾದಿಗಳು ಯಜ್ಞ ಮಾಡಿದ ರೆಂದೂ ಆ ಸ್ಥಳದ ಸಮೀಪದಲ್ಲೇ ದಕ್ಷಿಣಾಮೂರ್ತಿ ತಾಂಡವೇಶ್ವರರು ಇದ್ದಂತೆಯೂ ತಿಳಿದು ಬರುತ್ತದೆ. ಆದರೆ ಈಗ ಅವ್ಯಾವುವೂ ಕಾಣಿಸುವುದಿಲ.—ವಿ. ತೀ.]

ತೀರ್ಥ ಸಂದರ್ಶನ—ಸರ್ವರ್ಷಿಗಳು ವ್ಯಾಸಾಶ್ರಮದಲ್ಲಿ ಒಂದು ರಾತ್ರಿ ತಂಗಿದ್ದು ಮರುದಿನ ಅದಕ್ಕೆ ಸಮೀಪದಲ್ಲೇ ಮತಂಗ ಗಿರಿಯಲ್ಲಿದ್ದ ಅಮಿತ ತೇಜಸ್ಸುಳ್ಳ ಹರಿಣಪ್ಲುತ ತೀರ್ಥಕ್ಕೆ ಬಂದರು. ಈ ತೀರ್ಥದ ಸ್ಮರಣೆಯಿಂದಲೇ ಮನುಷ್ಯನು ಪಾಪ ನಿರ್ಮುಕ್ತನಾಗುತ್ತಾನೆ. ಹಿಂದೆ ಎರಡು ಜಿಂಕೆಗಳು ಇಲ್ಲಿದ್ದ ಯಜ್ಞ ಕುಂಡ ದಲ್ಲಿ ಧುಮುಕಿ ಮುಕ್ತಿ ಹೊಂದಿದುವು. ಆದಕಾರಣ ಈ ದ್ವೀಪಕ್ಕೆ ಮೃಗ ಪ್ಲುತ ದ್ವೀಪವೆಂದೂ ಈ ತೀರ್ಥಕ್ಕೆ **ಮೃಗಪ್ಲುತ** ತೀರ್ಥ ಅಥವಾ **ಹರಿಣಪ್ಲುತ ತೀರ್ಥ** ವೆಂದೂ ಹೆಸರು ಬಂದವು.

ಯುಧಾಜಿತ್ತಿಗೆ ಶಾಪ—ಸೂರ್ಯ ವಂಶೀಕನಾದ **ಯುಧಾಜಿತ್ತು** ಸಪ್ತ ದ್ವೀಪಾತ್ಮಕವಾದ ವಸುಂಧರೆಯನ್ನು ಧರ್ಮದಿಂದಾಳುತ್ತಿದ್ದ. ಸುಶೀಲೆಯೂ ಪತಿ ವ್ರತೆಯೂ ಆದ ಅವನ ರಾಣಿ **ಚಂದ್ರರೇಖೆ** ಸಾಧ್ವಿಯೂ ಪತಿಹಿತಪರಾಯಣೆಯೂ ಆಗಿದ್ದಳು. ಒಂದು ದಿನ ಅವರಿಬ್ಬರೂ **ಸರಯೂ** ನದಿಯಲ್ಲಿ ಸ್ನಾನ ಮಾಡಿ ಎಡಗೈ ಯಲ್ಲಿ ಲಿಂಗವನ್ನಿಟ್ಟುಕೊಂಡು ನದೀ ತೀರದಲ್ಲೇ ಅರ್ಚನೆ ಮಾಡುತ್ತಿದ್ದರು. ಅದೇ ಸಮಯದಲ್ಲಿ ನದಿಗೆ ನೀರು ಕುಡಿಯುವುದಕ್ಕೆ ಬಂದಿದ್ದ ಜಿಂಕೆಗಳು ಮರಳು ದಂಡೆಯ ಮೇಲೆ ಕುಣಿದಾಡುತ್ತಾ ಕಾಮಚೇಷ್ಟೆ ಮಾಡುತ್ತಾ ವಿವರಿಸುತ್ತಿದ್ದುವು. ರಾಜರಾಣಿಯ

ರಿಬ್ಬರ ದೃಷ್ಟಿಯೂ ಅಕಸ್ಮಾತ್ ಅತ್ತಲಾಕಡೆ ಹೋಗಲು ಅವರ ಗಮನವೆಲ್ಲ ಹರಿಣಗಳ ವಿಹಾರದಿಂದ ಆಕೃಷ್ಟವಾಗಿ ಹೋಯಿತು. ಅವರಿಬ್ಬರೂ ಲಿಂಗಾರ್ಚನೆಯನ್ನು ಮರೆತೆ ಬಿಟ್ಟು ಆ ಮೃಗಗಳನ್ನೇ ದಿಟ್ಟಿಸಿ ನೋಡುತ್ತಾ ಸ್ತಬ್ಧರಾಗಿ ಕುಳಿತುಬಿಟ್ಟರು.

ಅಷ್ಟರಲ್ಲೇ ಅಲ್ಲಿಗೆ ದೇವರ್ಷಿ ನಾರದರು ಬಂದರು. ಅದೂ ಸಹ ರಾಜದಂಪತಿಗಳ ಗಮನಕ್ಕೆ ಬರಲಿಲ್ಲ. ಅದನ್ನು ಕಂಡು ನಾರದ ಅವರಿಗೆ ಜಿಂಕೆಗಳಾಗಿ ಹುಟ್ಟುವಂತೆ ಅವರ ಉದ್ಧಾರಕ್ಕಾಗಿಯೇ ಶಾಪಕೊಟ್ಟರು. ಶಾಪೋಕ್ತಿಯನ್ನು ಕೇಳಿ ಎಚ್ಚೆತ್ತು ಅವರಿಬ್ಬರೂ ದೇವರ್ಷಿಗೆ ಅಡ್ಡಬಿದ್ದು ಕ್ಷಮಿಸುವಂತೆ ಬೇಡಿಕೊಂಡರು. ಅದಕ್ಕೆ ನಾರದರು "ಈ ಶಾಪದಿಂದ ನಿಮಗೆ ಒಳ್ಳೆಯದೇ ಆಗುತ್ತದೆ. ಮುಂದೆ ಶೌನಕಾದಿಗಳು ಹಂಪೆಯಲ್ಲಿ ಯಾಗಮಾಡುವರು, ದೇವತೆಗಳೂ ಮಹರ್ಷಿಗಳೂ ಅಲ್ಲಿಗೆ ಬರುವರು. ನೀವೂ ಸಹ ಅಲ್ಲಿಗೆ ಜಿಂಕೆಗಳಾಗಿ ಬನ್ನಿ. ಅಲ್ಲೇ ನಿಮಗೆ ಶಾಪವಿಮೋಚನೆಯಾಗುವುದೆಂ"ದು ಹೇಳಿ ಲೋಕ ಸಂಚಾರಾರ್ಥ ಹೊರಟುಹೋದರು. ಇತ್ತಲಾಗಿ ರಾಜ ದಂಪತಿಗಳು ಶಾಪದಂತೆ ಹರಿಣಗಳಾಗಿ ಹುಟ್ಟಿ ಕಾಡಿನಲ್ಲೇ ಸಂಚರಿಸುತ್ತಿದ್ದರು.

ವ್ಯಾಘ್ರಾಸುರ—ಅದೇ ಸಮಯದಲ್ಲಿ **ವ್ಯಾಘ್ರಾಸುರನ** ಹಾವಳಿಯಿಂದ ಲೋಕ ತಲ್ಲಣಿಸಿ ಹೋಗುತ್ತಿತ್ತು. ಬ್ರಹ್ಮವರದಿಂದ ದೃಪ್ತನಾದ ಆ ಅಸುರ ದಿಕ್ಪಾಲಕರನ್ನೆಲ್ಲಾ ಗೆದ್ದು ಆ ಸ್ಥಾನಗಳಲ್ಲೆಲ್ಲಾ ತನ್ನ ಅನುಯಾಯಿಗಳನ್ನೇ ನಿಯಮಿಸಿ ತಾನು ಸ್ವರ್ಗಾಧಿಪತಿಯಾದ. ಅವನ ಅನುಚರರು ಧರ್ಮಕಾರ್ಯಗಳಿಗೆಲ್ಲಾ ವಿಘ್ನಮಾಡುತ್ತಾ ಲೋಕ ಕಂಟಕರಾಗಿದ್ದರು.

ಒಂದು ದಿನ ನಾರದರು ಅವನ ಬಳಿಗೆ ಹೋಗಿ ಅವನನ್ನು ಹೊಗಳಿ ಉಬ್ಬಿಸಿ "ನೀನು ತ್ರೈಲೋಕ್ಯವನ್ನೆಲ್ಲಾ ಗೆದ್ದಿರುವಿ. ಇಷ್ಟಾದರೂ ಸಣ್ಣ ಹಂಪೆಕ್ಷೇತ್ರವನ್ನು ಗೆಲ್ಲದಿರುವುದು ದೊಡ್ಡ ಕೊರತೆಯಾಗಿದೆ. ಅದನ್ನು ಶೀಘ್ರವಾಗಿ ಜಯಿಸಿ ಕೀರ್ತಿಶಾಲಿಯಾಗು" ಎಂದು ಸೂಚಿಸಿದರು. ನಾರದರು ತನ್ನ ವಿನಾಶಕ್ಕಾಗಿಯೇ ಈ ಸೂಚನೆಯನ್ನಿತ್ತಿದ್ದಾರೆಂಬುದನ್ನು ಅರಿತುಕೊಳ್ಳದೆ ನಾರದರು ಹೇಳಿದ್ದು ಹಿತೋಕ್ತಿಯೆಂದೇ ಭಾವಿಸಿಕೊಂಡು ವ್ಯಾಘ್ರಾಸುರ ಹಂಪೆಯ ದಂಡಯಾತ್ರೆಗಾಗಿ ಸಿದ್ಧರಾಗುವಂತೆ ತನ್ನ ಸೈನಿಕರಿಗೆಲ್ಲ ಆಜ್ಞೆಮಾಡಿದ. ಅದರಂತೆ ಮಂತ್ರಿಯಾದ **ಭಾಂಡೀರಕ** ಹತ್ತುಸಾವಿರ ರಾಕ್ಷಸ ಸೈನ್ಯದೊಡನೆ ದಂಡಯಾತ್ರೆಗೆ ಹೊರಟೇಬಿಟ್ಟ.

ಅಸುರವಧೆಗೆ ಸನ್ನಾಹ—ಅತ್ತಲಾಗಿ ನಾರದರು ಮೈತ್ರಾವರಣಿಯನ್ನೂ ಸಶಿಷ್ಯರಾದ ಅಗಸ್ತ್ಯರನ್ನೂ ಕಂಡು ಅವರಿಗೆ "ಹಂಪೆಯಲ್ಲಿ ಶೌನಕಾದಿಗಳು ಯಜ್ಞ ಮಾಡುವವರಿದ್ದಾರೆ. ಆ ಯಜ್ಞಕ್ಕೆ ತ್ರಿಮೂರ್ತಿಗಳೂ ಸಾಕ್ಷಾತ್ತಾಗಿ ಬರುವರು. ನೀವೆಲ್ಲರೂ ಅಲ್ಲಿಗೆ ಬನ್ನಿ" ಎಂದು ಹೇಳಿ, ನೈಮಿಷಾರಣ್ಯಕ್ಕೆ ಹೋಗಿ ಶೌನಕಾದಿಗಳನ್ನು ಕಂಡು "ನೀವು ಮನೋಹರವಾದ ಹಂಪೆಯಲ್ಲೇ ಯಾಗಮಾಡಿ. ಇತರ ಸ್ಥಳಗಳಲ್ಲಿ

ಮಾಡುವುದಕ್ಕಿಂತ ಇಲ್ಲಿ ಮಾಡಿದರೆ ಕೋಟಿಗುಣ ಹೆಚ್ಚು ಫಲಕಾರಿ. ಹರಿಹರಾದಿ ದೇವತೆಗಳು ಇಲ್ಲಿ ಸದಾ ವಾಸಿಸುತ್ತಾರೆ.

ವಸಂತಿ ದೇವತಾಸ್ತತ್ರ ಸದಾ ಹರಿಹರಾದಯಃ ।
ಕೃತಾದನ್ಯತ್ರ ತತ್ಕ್ಷೇತ್ರೇ ಕೃತಂ ಕೋಟಿಗುಣೋತ್ತರಮ್॥

ಅದರಿಂದ ನಿಮಗೆ ತಪಸ್ಸಿಯಾಗುತ್ತದೆ, ಏನೂ ಸಂಶಯವಿಲ್ಲ" ಎಂದು ಹೇಳಿದರು. ಶೌನಕಾದಿಗಳು ಇದನ್ನು ತಮಗೆ ಮಹಾಲಾಭವೆಂದೆಣಿಸಿ ಹಂಪೆಗೆ ಬಂದು ಮತಂಗಾದ್ರಿಯ ಬಳಿ ಒಂದು ದಿವ್ಯವಾದ ಸ್ಥಳವನ್ನು ಹುಡುಕಿ ಯಜ್ಞಕ್ಕೆ ಸಿದ್ಧತೆಮಾಡಲಾರಂಭಿಸಿದರು.

ಅಲ್ಲಿಂದ ಮುಂದೆ ನಾರದರು ಕ್ಷೀರ ಸಮುದ್ರಕ್ಕೆ ಹೋಗಿ ವಿಷ್ಣುವನ್ನು ಸಂದರ್ಶಿಸಿ ವ್ಯಾಘ್ರಾಸುರನ ವಧಾರ್ಥವಾಗಿ ಪಂಪಾಕ್ಷೇತ್ರದಲ್ಲಿ ನಡೆಯುವ ಯಜ್ಞಕ್ಕೆ ಲಕ್ಷ್ಮೀಸಮೇತನಾಗಿ ಬರುವಂತೆ ಆಹ್ವಾನಿಸಿ ಅವನ ಅಪ್ಪಣೆಯಂತೆ ಕೈಲಾಸಕ್ಕೆ ಬಂದು ಪಾರ್ವತೀ ಪರಮೇಶ್ವರರನ್ನು ಸ್ತುತಿಸಿದರು. ಅವರ ಮುಂದೂ ವ್ಯಾಘ್ರಾಸುರನ ಪ್ರಸ್ತಾಪ ಎತ್ತಿ ಅವನನ್ನು ವಧಿಸುವಂತೆ ಪ್ರಾರ್ಥಿಸಿದರು. ಮಹಾದೇವ ಅದಕ್ಕೆ ಸಮ್ಮತಿಸಲು ನಾರದರು ಆ ದೇವೋತ್ತಮನನ್ನು ವ್ಯಾಘ್ರಾಸುರನ ವಿಷಯದಲ್ಲಿ ಹೀಗೆ ಪ್ರಶ್ನೆಮಾಡಿದರು.

ಅಧ್ಯಾಯ 84 ಶೌನಕಾದಿಗಳ ಯಜ್ಞ

ವ್ಯಾಘ್ರಾಸುರನ ಪೂರ್ವವೃತ್ತಾಂತ—(ನಾರದರ ಪ್ರಶ್ನೆ) "ದೇವ ಚಂದ್ರಚೂಡ ! ಈ ವ್ಯಾಘ್ರಾಸುರ ಯಾರು ? ಇವನ ಪೂರ್ವ ವೃತ್ತವೇನು ?" ಎಂದು ನಾರದರು ಕೇಳಲು ಪರಮೇಶ 'ವ್ಯಾಘ್ರಾಸುರನ ವೃತ್ತಾಂತವನ್ನು ನಾರದರಿಗೆ ತಿಳಿಸಿದ— "ಹಿಂದೆ ನನ್ನ ದ್ವಾರಪಾಲಕರಾದ **ನಂದ ಸುನಂದರು** ಹೊರಗೆ ಹತ್ತಿರದಲ್ಲೇ ನಿಂತಿದ್ದ ನಂದಿಯನ್ನು ಹಾಸ್ಯಮಾಡಿ ತಾವು (ನಂದ ಸುನಂದರು) ನನಗೆ ಬಹಳ ಪ್ರಿಯರೆಂದೂ ನಂದಿ ತಮಗಿಂತ ಬಹಳ ಕೀಳಾದ್ದರಿಂದಲೇ ಹೊರಗೆ ನಿಲ್ಲಿಸಲ್ಪಟ್ಟಿದ್ದಾನೆಂದೂ ಕುಚೇಷ್ಟೆ ಮಾತಾಡಿದರು.

ಅದಕ್ಕೆ ಪ್ರತಿಯಾಗಿ ಅವರಿಗೆ ಚುಚ್ಚುವಂತೆ ನಂದಿ "ನಾನು ಹೊರಗಿದ್ದರೂ ಚಿಂತೆಯಿಲ್ಲ. ಪರಮೇಶ್ವರ ಸದಾ ನನ್ನ ಹೃದಯದಲ್ಲಿದ್ದಾನೆ. ನನಗೆ ಅಷ್ಟೇ ಸಾಕು.

ನ ಸನ್ಮಾನೋ ಬಿಡಾಲಸ್ಯ ಸದಾಂತಃ ಪುರಚಾರಿಣಃ ।
ಬಹಿಃ ಸ್ಥಿತಸ್ಯ ನಾಗಸ್ಯ ಮಂಡನ ಶ್ರೀ ರ್ಮಹೋತ್ಸವೇ ॥

ಸದಾ ಅಂತಃಪುರದಲ್ಲಿ ಓಡಾಡುವ ಅಧಿಕಾರವಿದ್ದರೂ ಬೆಕ್ಕಿಗೆ ಹೊರಗೇ ಇರುವ ಪಟ್ಟದಾನೆಗೆ ಹಾಕುವ ಸಿಂಗಾರಗಳು ಎಂದಿಗಾದರೂ ಸಲ್ಲುವುದೇ ?" ಎಂದು ಉತ್ತರ

ಕೊಟ್ಟ. ಅವನ ಮಾತನ್ನು ಕೇಳುತ್ತಲೇ ದ್ವಾರಪಾಲಕನಿಗೆ ಕಿಚ್ಚು ಕಾಲಿಂದ ನೆತ್ತಿಗೇರಿತು. ಅವರಿಬ್ಬರೂ ಕತ್ತಿಯನ್ನೆತ್ತಿ ನಂದಿಯನ್ನು ಕಡಿಯುವುದಕ್ಕೇ ಹೊರಟರು. ನಂದಿ ಅವರಿಗೆ ರಾಕ್ಷಸರಾಗಿ ಹುಟ್ಟುವಂತೆ ಶಾಪಕೊಟ್ಟ.

"ನಂದಿಯಿಂದ ಶಾಪಗ್ರಸ್ತರಾಗಿ ಅವರಿಬ್ಬರೂ ನನ್ನ ಹತ್ತಿರ ಬಂದು ಮೊರೆಯಿಟ್ಟುಕೊಂಡರು. ನಾನು ಅವರಿಗೆ 'ನಂದಿಯ ಶಾಪ ತಪ್ಪುವ ಹಾಗಿಲ್ಲ, ಅದನ್ನು ಅನುಭವಿಸಿಯೇ ತೀರಬೇಕಾದ್ದು. ಆದರೆ ಯಜ್ಞಶಾಲೆಯಲ್ಲಿ ನಾನೇ ನಿಮ್ಮನ್ನು ಕೊಂದು ನಿಮಗೆ ಪುನಃ ಈ ಪದವಿಯನ್ನೇ ಕರುಣಿಸುವೆನು' ಎಂದು ಹೇಳಿದೆ. ಅದರಂತೆ ಆ ಇಬ್ಬರು ವ್ಯಾಘ್ರಾಸುರ ಗಜಾಸುರರೆಂದು ಸಹೋದರರಾಗಿ ಹುಟ್ಟಿದ್ದಾರೆ. ನಾರದ, ನೀನು ಈಗಾಗಲೇ ಅವರ ವಧೆಗೆ ಎಲ್ಲ ಸನ್ನಾಹಗಳನ್ನೂ ಅಣಿಮಾಡಿಟ್ಟಿದ್ದೀಯೆ. ಅವರನ್ನು ಕ್ಷಿಪ್ರದಲ್ಲೇ ಕೊಲ್ಲುವೆನು. ಹೀಗೆಯೇ ಉಳಿದಿರುವ ಸಣ್ಣ ಪುಟ್ಟ ಕೆಲಸಗಳನ್ನೂ ಮಾಡಿಮುಗಿಸು" ಎಂದು ಹೇಳಿ ಶಂಭು ನಾರದರನ್ನು ಬೀಳ್ಕೊಟ್ಟ.

ಜೋತಾಡುತ್ತಿದ್ದ ಪಿತೃಗಳು—ನಾರದರು ಕೈಲಾಸದಿಂದ ಹಿಂದಿರುಗಿ ವಿಂಧ್ಯಾದ್ರಿಯ ಮಾರ್ಗವಾಗಿ ಹಂಪೆಕಡೆಗೆ ಬರುತ್ತಿದ್ದರು. ಮಧ್ಯೆ ಎಲ್ಲೋ ಒಳಗಡೆಯಿಂದ ಆರ್ತಧ್ವನಿ ಬರುತ್ತಿದ್ದಂತೆ ಕೇಳಿಸಿತು. ಆಶ್ಚರ್ಯದಿಂದ ಸುತ್ತಲೂ ನೋಡಲು ಅಲ್ಲೇ ಒಂದು ಬಾವಿಯಿತ್ತು. ಒಳಗೆ ಇಣಕಿ ನೋಡಲು ಕೆಲವು ಪಿತೃಗಳು ಹುಲ್ಲುಗರಿಕೆಯ ಆಧಾರದ ಮೇಲೆ ನೇತುಬಿದ್ದು ಗೋಳಾಡುತ್ತಿರುವುದು ಕಂಡು ಬಂತು. ದೇವರ್ಷಿ ಅವರನ್ನು ಮಾತಾಡಿಸಿ "ನಿಮ್ಮ ಸ್ಥಿತಿ ಹೀಗೇಕೆ ಆಯಿತು ?" ಎಂದು ಪ್ರಶ್ನಿಸಿದರು. ಪಿತೃಗಳು ನಾರದರನ್ನು ಕುರಿತು "ಮಹಾನುಭಾವರೇ, ತಮ್ಮ ದರ್ಶನದಿಂದಲೇ ನಾವು ಉದ್ಧಾರವಾದೆವು. ನಮ್ಮ ವಂಶದಲ್ಲಿ **ಮನು**ವೆಂಬ ಒಬ್ಬನೇ ಪುತ್ರ ಜನಿಸಿದ್ದಾನೆ. ಅವನೂ ಸಹ ವಿರಕ್ತನಾಗಿ ದಾರಪರಿಗ್ರಹ ಮಾಡದೆ ನಿಸ್ಸಂತಾನನಾಗಿರುವುದರಿಂದ ನಮಗೆ ನಿರಾಧಾರವಾಗಿದೆ. ನಾವು ಈ ಹುಲ್ಲುಗರಿಕೆಯನ್ನವಲಂಬಿಸಿಕೊಂಡು ಕಾಲ ತಳ್ಳುತ್ತಿದ್ದೇವೆ. ಇದೂ ಯಾವಾಗ ಕಡಿದುಹೋಗುವುದೋ ತಿಳಿಯದು. ನೀವಾದರೂ ನಮ್ಮನ್ನು ಉದ್ಧಾರಮಾಡಿ" ಎಂದು ದೈನ್ಯದಿಂದ ಬೇಡಿಕೊಂಡರು.

ಮನುಗೆ ಉಪದೇಶ—ನಾರದರು ಆ ಪಿತೃಗಳಿಗೆ ಧೈರ್ಯಹೇಳಿ ಮುಂದೆ ಪ್ರಯಾಣ ಬೆಳೆಸಿದರು. ನಿಷಧದೇಶಕ್ಕೆ ಬಂದು ಮನುವನ್ನು ಹುಡುಕಿ ಅವನಿಗೆ ಪಿತೃಗಳ ಸಂದೇಶವನ್ನು ತಿಳಿಸಿದರು. ಅದಕ್ಕೆ ಮನು ಒಪ್ಪದೆ "ಸಂಸಾರಕೂಪದಲ್ಲಿ ಬಿದ್ದು ಒದ್ದಾಡುವುದಕ್ಕೆ ನನ್ನ ಮನಸ್ಸು ಒಡಂಬಡುವುದಿಲ್ಲ. ಇದು ಬಕಬಂಧ ಪ್ರಯಾಸದಂತೆಯೇ ಸರಿ. ಬೇರೆಯಾವ ಉಪಾಯವಿದ್ದರೂ ಚಿಂತೆಯಿಲ್ಲ. ಹೇಳಿ, ಅವಶ್ಯ ಮಾಡುವೆನು" ಎಂದನು. ನಾರದರು "ಹಾಗಾದರೆ ನನ್ನ ಜೊತೆಯಲ್ಲಿ ಹಂಪೆಗೆ ಬಾ. ಶೌನಕಾದಿಗಳು ಯಜ್ಞಮಾಡುವರು. ಅದಕ್ಕೆ ತ್ರಿಮೂರ್ತಿಗಳೂ ಸಾಕ್ಷಾತ್ತಾಗಿ ಬರುವರು.

ಇನ್ನೂ ಅನೇಕ ಮಹಾತ್ಮರೂ ಬರುವವರಿದ್ದಾರೆ. ಅದರಿಂದ ನಿನಗೆ ಒಳ್ಳೆಯದಾಗುವುದು" ಎಂದು ಹೇಳಿ ಅವನನ್ನೂ ಕರೆದುಕೊಂಡು ಹಂಪೆ ಕಡೆಗೆ ಹೊರಟರು.

ಯಜ್ಞಾರಂಭ—ಅತ್ತಲಾಗಿ ಹಂಪೆಯಲ್ಲಿ ಶೌನಕಾದಿಗಳು ವೇದಘೋಷಗಳೊಡನೆ ಯಜ್ಞಾರಂಭ ಮಾಡಿದರು. ಹೋಮಧೂಮ ದಿಕ್ತಟಗಳನ್ನೆಲ್ಲಾ ವ್ಯಾಪಿಸಿತು. ಯಜ್ಞಸಮಾರಂಭಕ್ಕೆ ಮೈತ್ರಾವರುಣಿ, ಅಗಸ್ತ್ಯಾದಿ ಬ್ರಹ್ಮರ್ಷಿ-ಮಹರ್ಷಿಗಳೂ ಆಗಮಿಸಿದರು.

ಭಾಂಡೀರ ವಧೆ—ಈ ಸುದ್ದಿಯನ್ನು ಕೇಳಿ ವ್ಯಾಘ್ರಾಸುರ ತನ್ನ ಮಂತ್ರಿ ಭಾಂಡೀರನನ್ನು ಯಜ್ಞವಿಘಾತ ಮಾಡುವುದಕ್ಕಾಗಿ ಕಳುಹಿಸಿದ. ಭಾಂಡೀರ ಮಾತಂಗ ಬೆಟ್ಟಕ್ಕೆ ಬಂದು ಅಲ್ಲಿದ್ದ ಬ್ರಾಹ್ಮಣರನ್ನೂ ಋಷಿಗಳನ್ನೂ ಹೆದರಿಸಿ ಅಟ್ಟಬಿಟ್ಟ. ಸಾಲದ್ದಕ್ಕೆ ಯಜ್ಞಶಾಲೆಯಲ್ಲೆಲ್ಲಾ ರಕ್ತಧೂಳಿಯನ್ನೂ ಶಿಲಾವೃಷ್ಟಿಯನ್ನೂ ಸುರಿಸಿದ. ಅವನ ಧೂರ್ತತನವನ್ನು ಕಂಡು ಸಿಟ್ಟಾಗಿ ಶೌನಕರು ಮಂತ್ರಪೂತವಾದ ಸೃಕ್ಕಿನಿಂದ ಪರ್ವತೋಪಮವಾದ ಅವನ ಶಿರಸ್ಸನ್ನು ಸೀಳಿಬಿಟ್ಟರು. ಅವನು ಕೆಳಗಿದ್ದ ಭಾರೀ ಗುಹೆಯಲ್ಲಿ ಬಿದ್ದುಬಿಟ್ಟ. ಅಂದಿನಿಂದ ಆ ಗುಹೆ **ಭಾಂಡೀರಗುಹೆ**ಯೆಂದು ಪ್ರಸಿದ್ಧವಾಯಿತು. ಸೃಕ್ಕಿನ ಸ್ಪರ್ಶವಾದ್ದರಿಂದಲೂ ಪಾವನವಾಗ ಹಂಪೆಕ್ಷೇತ್ರದಲ್ಲಿ ಮರಣವಾದ್ದರಿಂದಲೂ ಭಾಂಡೀರ ದಿವ್ಯದೇಹ ಧರಿಸಿ ಸ್ವರ್ಗಕ್ಕೆ ಪ್ರಯಾಣಮಾಡಿದ.

ವಾತಾಪಿ-ಇಲ್ವಲರ ವಧೆ—ಭಾಂಡೀರ ಹತನಾದುದನ್ನು ಕೇಳಿ ವ್ಯಾಘ್ರಾಸುರ ಮಾಯಾವಿಗಳಾದ **ವಾತಾಪಿ-ಇಲ್ವಲ**ರನ್ನು ಕಳುಹಿಸಿದ. ಅವರು ಶುಕ್ರನಿಂದ ಸಂಜೀವಿನೀ ವಿದ್ಯೆ ಕಲಿತು ಜನಗಳನ್ನು ವಂಚಿಸಿ ಕೊಂದು ತಿನ್ನುತ್ತಿದ್ದರು. ವಾತಾಪಿ ಭಕ್ಷ್ಯಭೋಜ್ಯಗಳಾಗುತ್ತಿದ್ದ; ಇಲ್ವಲ ಅವುಗಳನ್ನು ಪಕ್ವಮಾಡಿ ಬಂದ ಅತಿಥಿಗಳಿಗೆ ಬಡಿಸಿ ಭೋಜನಮಾಡಿಸುತ್ತಿದ್ದ. ಊಟವಾದ ಮೇಲೆ ಇಲ್ವಲ **'ವಾತಾಪೇ ಭ್ರಾತರೇಹಿ'** [1] ಎಂದು ಕೂಗುತ್ತಿದ್ದ. ಕೂಗಿದ ಕೂಡಲೇ ವಾತಾಪಿ ಹೊಟ್ಟೆ ಭೇದಿಸಿಕೊಂಡು ಬರುತ್ತಿದ್ದ. ಇಬ್ಬರೂ ಆ ಅತಿಥಿಯನ್ನೇ ತಿಂದು ಕಾಲಯಾಪನೆ ಮಾಡುತ್ತಿದ್ದರು.

ಒಂದು ಸಲ ಅವರು ಅಗಸ್ತ್ಯರ ಮೇಲೂ ಇದೇ ಪ್ರಯೋಗ ಮಾಡಿದರು. ಇಲ್ವಲ ಅಣ್ಣನನ್ನು ಕೂಗಿದಾಗ ಅಗಸ್ತ್ಯರು ಹೊಟ್ಟೆ ಸವರಿಕೊಳ್ಳುತ್ತಾ **'ವಾತಾಪೇ ಜೀರ್ಣೋ ಭವ'** [2] ಎಂದು ಹೇಳಿಬಿಟ್ಟರು. ತಾವನ್ಮಾತ್ರದಿಂದ ವಾತಾಪಿ ಅವರ ಕುಕ್ಷಿಯಿಂದಲೇ ಯಮಲೋಕವನ್ನೈದಿದ.

ತನ್ನ ಸಹೋದರ ಗತಾಯುವಾದುದನ್ನು ತಿಳಿದು ಇಲ್ವಲ ಕ್ರೋಧಾರುಣಲೋಚನನಾಗಿ ಖಡ್ಗ ಹಿಡಿದುಕೊಂಡು ಅಗಸ್ತ್ಯರನ್ನು ಕಡಿಯುವುದಕ್ಕೆಂದು ನುಗ್ಗಿ ಬಂದ. ಅಗಸ್ತ್ಯರು ಒಂದು ಕುಶಕ್ಕೆ ಬ್ರಹ್ಮಾಸ್ತ್ರಮಂತ್ರ ಪ್ರಯೋಗಮಾಡಿ ಅವನ ಮೇಲೆ

---

1 ಅಣ್ಣ, ವಾತಾಪಿ ! ಬಾ 2 ವಾತಾಪಿ ! ಜೀರ್ಣವಾಗಿ ಹೋಗು.

ಬಿಟ್ಟರು. ಅದು ನಿಮಿಷಮಾತ್ರದಲ್ಲಿ ಇಲ್ವಲನ ಶಿರಸ್ಸನ್ನು ಕೆಳಕ್ಕುರುಳಿಸಿತು. ಹೀಗೆ ಆ ಇಬ್ಬರು ದೈತ್ಯಾಧಮರನ್ನೂ ಸಂಹರಿಸಿದ್ದಕ್ಕಾಗಿ ದೇವರ್ಷಿ ಬ್ರಾಹ್ಮಣರೆಲ್ಲರೂ ಅಗಸ್ತ್ಯರನ್ನು ಕೊಂಡಾಡಿದರು. ವಾತಾಪಿ ಇಲ್ವಲರು ಇದ್ದ ವಾತಾಪಿ-ಇಲ್ವಲರ ಗುಹೆಗಳನ್ನು ಈಗಲೂ ಕಾಣಬಹುದು.[1]

ಅಧ್ಯಾಯ 85. ವ್ಯಾಘ್ರಾಸುರ-ಗಜಾಸುರರ ವಧೆ

ವ್ಯಾಘ್ರಾಸುರನ ಯುದ್ಧ—ಶೌನಕಾದಿಗಳು ಯಜ್ಞಮಾಡುವ ವೃತ್ತಾಂತ ಕೇಳಿ ದೂರ ದೂರ ದೇಶಗಳಿಂದೆಲ್ಲ ನಾನಾ ರಾಜರೂ ಬ್ರಾಹ್ಮಣಾದಿಗಳೂ ದೇವಾಸು ದೇವತೆಗಳೂ ಬಂದು ನೆರೆದರು. ಇವನ್ನೆಲ್ಲ ಕಂಡು ವ್ಯಾಘ್ರಾಸುರ ಚತುರಂಗ ಬಲ ಸಮೇತನಾಗಿ ಯಜ್ಞಭೂಮಿಗೆ ಬಂದು ಮುತ್ತಿಗೆ ಹಾಕಿದನು. ಅವನ ಸೈನಿಕರು ಸಿಂಹ ಹುಲಿ ಕರಡಿ ಕಾಡುಹಂದಿಗಳಂತೆಲ್ಲಾ ಮುಖಮಾಡಿಕೊಂಡು ಅಲ್ಲಿದ್ದ ಯಜ್ಞಪ್ರೇಕ್ಷಕರನ್ನೆಲ್ಲಾ ಹೆದರಿಸಿ ಹೊಡೆದು ಬಡಿದು ಯಜ್ಞದಲ್ಲೆಲ್ಲಾ ಅಲ್ಲೋಲಕಲ್ಲೋಲ ಮಾಡಿಬಿಟ್ಟರು. ಋತ್ವಿಕ್ಕುಗಳು ಮಾತ್ರ ನಿರ್ಭಯವಾಗಿ ಏಕಾಗ್ರ ಮನಸ್ಸಿನಿಂದ ಹೋಮ ಬಿಡದೆ ಮುಂದುವರಿಸಿ ವಿಧಿಪೂರ್ವಕವಾಗಿ ಪೂರ್ಣಾಹುತಿ ಕೊಟ್ಟೇಬಿಟ್ಟರು.

ಒಡನೆಯೇ ಶಿವಾಜ್ಞೆಯಿಂದ ಅಗ್ನಿಕುಂಡದಿಂದ ಪ್ರಮಥಗಣಗಳು ಉದ್ಭವಿಸಿ ಗರ್ಜಿಸುತ್ತಾ ರಾಕ್ಷಸರೊಡನೆ ಹೋರಾಡಲಾರಂಭಿಸಿದರು. ರಾಕ್ಷಸರು ಗದಾ ಖಡ್ಗ ತೋಮರ ಪ್ರಾಸಪಟ್ಟಸ ಮುದ್ಗರಾದಿ ಶಸ್ತ್ರಗಳಿಂದಲೂ ಅಸ್ತ್ರಗಳಿಂದಲೂ ಪ್ರಮಥರೊಡನೆ ಹೊಡೆದಾಡಹತ್ತಿದರು. ಬಹಳ ಹೊತ್ತಿನವರೆಗೆ ಅವರಿಬ್ಬರಿಗೂ ನೈರೋಮಗಳೇ ಎದ್ದು ನಿಲ್ಲುವಂತಹ ಭಯಂಕರ ಯುದ್ಧ ನಡೆಯಿತು. ಕಡೆಗೆ ಪ್ರಮಥರು ರಾಕ್ಷಸರನ್ನೆಲ್ಲಾ ಸೋಲಿಸಿ ಜಯಘೋಷ ಮಾಡಿದರು.

ಅದನ್ನು ನೋಡಿ ವ್ಯಾಘ್ರ ಭಯಂಕರವಾದ ಕುಲಿಶೋಪಮವಾದ ಗದೆಯನ್ನು ಪ್ರಮಥರ ಮೇಲೆ ಹಾಕಿದನು. ಅದರ ವೇಗಕ್ಕೆ ಅಂಜಿ ಭೂಸುರರೂ ಅಮರರೂ ದಿಕ್ಕೆಟ್ಟು ಪಲಾಯನ ಮಾಡಿದರು. ಕೊನೆಗೆ ಸ್ವಲ್ಪ ಧೈರ್ಯ ತಂದುಕೊಂಡು ಅವರೆಲ್ಲರೂ ಏಕಾಗ್ರ ಮನಸ್ಸಿನಿಂದ ದೀನಸುರದ್ರುಮನಾದ ಪ್ರಮಥಾಧಿಪನನ್ನು ಪ್ರಾರ್ಥಿಸಿಕೊಂಡರು. ಕೂಡಲೆ ಭೋಗಿಭೂಷಣನು ಕಪಾಲಮಾಲಾಭರಣನಾಗಿ ಶೂಲವನ್ನು ಹಸ್ತದಲ್ಲಿ ಹಿಡಿದುಕೊಂಡು ಆವಿರ್ಭವಿಸಿದ. ಅವನನ್ನು ಕಂಡು ದೇವಬ್ರಾಹ್ಮಣರಿಗೆಲ್ಲ ಉತ್ಸಾಹ ಒಡಮೂಡಿತು. ಎಲ್ಲರೂ ರುಂಡಮಾಲಿಯನ್ನು ಸ್ತುತಿಸಿದರು.

ವ್ಯಾಘ್ರಾಸುರ ವಧೆ—ಕಪಾಲಪಾಲಿ ಆವಿರ್ಭವಿಸಿದುದನ್ನು ಕಂಡು ವ್ಯಾಘ್ರಾಸುರನ ಕೋಪ ಮತ್ತಷ್ಟು ಕೆರಳಿತು. ಅವನು ತನ್ನ ಆಯುಧಗಳಿಂದ ದೇವ

1 83ನೇ ಅಧ್ಯಾಯದ ಮುಖ ಟಿಪ್ಪಣಿ ನೋಡಿ.

ಬ್ರಾಹ್ಮಣರನ್ನು ಪ್ರಹಾರ ಮಾಡುತ್ತಾ, ಪ್ರಮಥಗಣಗಳನ್ನು ಬಾಣಗಳಿಂದ ತಡೆಗಟ್ಟಿ ಪುಂಖಾನುಪುಂಖವಾಗಿ ಸುರಿಸುವ ಶರಸಂಚಯದಿಂದ ವ್ಯೋಮವನ್ನೇ ಆಚ್ಛಾದಿಸಿಬಿಟ್ಟ. ಅದನ್ನು ಕಂಡು ತ್ರಿಲೋಚನ ತನ್ನ ಪಿನಾಕದಲ್ಲಿ ಶರಸಂಧಾನ ಮಾಡಿ ದೈತ್ಯನನ್ನು ಬಾಣಗಳಿಂದ ಹೊಡೆದ. ಶರಾಹತನಾದ ದೈತ್ಯ ಮೂರ್ಛಿತನಾಗಿ ಬಿದ್ದೆದ್ದು ಪಿನಾಕಿಯ ಮೇಲೆ ಆಗ್ನೇಯಾಸ್ತ್ರ ಪ್ರಯೋಗ ಮಾಡಿದ. ಗೌರೀಶ ಅದನ್ನು ತತ್ಕ್ಷಣ ವಾರುಣಾಸ್ತ್ರದಿಂದ ಶಾಂತಿಮಾಡಿದ. ಕ್ರುದ್ಧನಾದ ವ್ಯಾಘ್ರ ತುಟಿಕಚ್ಚುತ್ತಾ ಪುರಾರಿಯ ಮೇಲೆ ಮಯಾಸುರದತ್ತವಾದ ತೀಕ್ಷ್ಣಶಕ್ತ್ಯಾಯುಧವನ್ನು ಪ್ರಯೋಗ ಮಾಡಿದ. ಗಂಗಾಧರ ಅದನ್ನೂ ಸಹ ತನ್ನ ಶಕ್ತಿಯಿಂದ ಛೇದಿಸಿಬಿಟ್ಟ. ಹೀಗೆಯೇ ಬಹು ಹೊತ್ತು ಅವರಿಬ್ಬರಿಗೂ ತುಮುಲ ಯುದ್ಧ ನಡೆಯಿತು. ಅಸುರನು ಪ್ರಯೋಗಿಸಿದ ಅಸ್ತ್ರಗಳನ್ನೆಲ್ಲಾ ತ್ರಿಪುರಮಥನನು ಪ್ರತ್ಯಸ್ತ್ರಗಳಿಂದ ಕತ್ತರಿಸಿ ಹಾಕುತ್ತಾ ಬಂದ.

ಕಡೆಗೆ ಆ ದೈತ್ಯ ಶತಭಾರಾಢ್ಯವಾದ[1] ಒಂದು ಗದೆಯನ್ನು ಚಂದ್ರಶೇಖರನ ಮಸ್ತಕದ ಮೇಲೆ ಎಸೆದ. ಕಪರ್ದಿ ತನ್ನ ಖಡ್ಗದಿಂದ ಅದನ್ನು ಲೀಲೆಯಿಂದ ಕತ್ತರಿಸಿ ಹಾಕಿದ. ಹೀಗೆಯೇ ಬಹಳ ಹೊತ್ತು ಅವನೊಡನೆ ಯುದ್ಧಮಾಡಿ ಕಡೆಗೆ ಭೀಮ ವಿಕ್ರಮನಾದ ಭವ ಭಯಂಕರವಾಗಿ ತಾಂಡವ ನೃತ್ಯ ಆಡತೊಡಗಿದನು. ಆಗ ದೇವತೆಗಳು ಆ ನಟರಾಜನಿಗೆ ಪ್ರೋತ್ಸಾಹ ಕೊಡುತ್ತಾ

ಜಯ ಶಂಭೋ ವಿರೂಪಾಕ್ಷ
ಭಕ್ತತ್ರಾಣಪರಾಯಣ[2]
ಜಹಿ ದೈತ್ಯಂ ದುರಾಧರ್ಷಂ[3]
ವಿಲಂಬಂ ಮಾ ಕುರು ಪ್ರಭೋ

ಎಂದು ಕೂಗಿಕೊಂಡರು. ಕ್ರಮೇಣ ಅಸುರನ ಬಲವೂ ಉತ್ಸಾಹವೂ ಕುಗ್ಗಿಹೋದುವು. ಆಗ ಅವನಿಗೆ ಪೂರ್ವಜನ್ಮ ಸ್ಮರಣೆ ಬಂತು. ಅವನೂ ಸಹ ಮಹಾದೇವನನ್ನು ಸಂಸ್ತುತಿಸಿ ತನ್ನನ್ನು ರಾಕ್ಷಸ ಜನ್ಮದಿಂದ ನಿವೃತ್ತಿಮಾಡುವಂತೆ ಬೇಡಿಕೊಳ್ಳುತ್ತಾ ಆವೇಶದಿಂದ ಗರ್ಜಿಸಿ ವಿಶ್ವೇಶ್ವರನನ್ನು ಕತ್ತಿಯಿಂದಹೊಡೆದನು. ಅಷ್ಟರಲ್ಲೇ ಶೂಲಿಯು ಅವನ ಶಿರಸ್ಸನ್ನು ಶೂಲದಿಂದ ಹಾರಿಸಿದನು. ಶಿರಸ್ಸುಹಾರಿಹೋದೊಡನೆ ರಾಕ್ಷಸ ಸುಂಟರಗಾಳಿಯಂತೆ ಗಿರಗಿರನೆ ತಿರುಗಿ ಭೂಮಿಯ ಮೇಲೆ ಬಿದ್ದುಬಿಟ್ಟ. ದೇವತೆಗಳು ಸಂತೋಷದಿಂದ ಆ ಅಸುರಾಂತಕನ ಮೇಲೆ ಪುಷ್ಪವೃಷ್ಟಿ ಗರೆದರು. ಅಪ್ಸರೆಯರು ನರ್ತನಮಾಡಿದರು.

ವ್ಯಾಘ್ರ ಹತನಾದುದನ್ನು ಕಂಡು ಅವನ ಸಖನಾದ **ದುರ್ಮದ** ಅಲ್ಲಿದ್ದವರನ್ನು

---

1 ನೂರುಮಣ ಭಾರವುಳ್ಳ. 2 ಭಕ್ತಸಂರಕ್ಷಣ ನಿರತ. 3. ಜಹಿ = ಕೊಲ್ಲು, ಸಂಹಾರ ಮಾಡು. ದುರಾಧರ್ಷಂ = ಸಹಿಸಲಸಾಧ್ಯನಾದ, ಎದುರಿಸಲಾಗದ. ಮಾ ಕುರು = ಮಾಡ ಬೇಡ. ವಿರೂಪಾಕ್ಷ ನಿನಗೆ ಜಯವಾಗಲಿ. ಅಪ್ರತಿಹತನಾದ ದೈತ್ಯನನ್ನು ಸಂಹಾರಮಾಡು, ತಡಮಾಡಬೇಡ ಎಂದರ್ಥ.

ತನ್ನ ಗದೆಯಿಂದ ಬಡಚಿ ಹಿಂಸಿಸಲಾರಂಭಿಸಿದ. ಅದನ್ನು ಕಂಡು ಕೇಶವ ಅಮೋಘ ತೇಜಸ್ಸುಳ್ಳ ತನ್ನ ಚಕ್ರದಿಂದ ದುರ್ಮದನ ತಲೆಯನ್ನು ಕತ್ತರಿಸಿಹಾಕಿದ.

ಗಜಾಸುರ ವಧೆ—ವ್ಯಾಘ್ರಾಸುರನ ಸೋದರಮಾವನಾದ **ಅಪಸ್ಮಾರ** ಈ ವ್ಯಾಘ್ರಾಸುರನ ವಧೆಯ ದುಃಖವಾರ್ತೆಯನ್ನು ಅವನ ಅನುಜನಾದ ಗಜಾಸುರನಿಗೆ ಹೇಳಿ ಅವನನ್ನೂ ಕೆಣಕಿ ಯುದ್ಧಕ್ಕೆ ಹೊರಡುವಂತೆ ಪ್ರೇರೇಪಿಸಿದ. ಒಡನೆಯೇ ಗಜಾಸುರ ಮಹಾ ಅಟ್ಟಹಾಸದಿಂದ ಸೈನ್ಯ ಸಜ್ಜುಗೊಳಿಸಿಕೊಂಡು ಯುದ್ಧಾಕಾಂಕ್ಷಿಯಾಗಿ ಮತಂಗ ಬೆಟ್ಟಕ್ಕೆ ಬಂದ. ಅವನ ಸೈನಿಕರು ಆನೆಗಳಾಗಿ ಮನುಷ್ಯರನ್ನೇ ತಿನ್ನಲಾರಂಭಿಸಿದರು. ಅದನ್ನು ಕಂಡು ಪ್ರಮಥರು ಸಿಂಹಗಳಾಗಿ ಆ ಆನೆಗಳನ್ನೆ ಮುರಿಸಿದರು. ಅನಂತರ ರಾಕ್ಷಸರು ನಾನಾ ಶಸ್ತ್ರಾಸ್ತ್ರಗಳೊಡನೆ ಪ್ರಮಥರೊಡನೆ ಹೊಡೆದಾಡ ಹತ್ತಿದರು.

ಅಷ್ಟರಲ್ಲೇ ಶೂಲಪಾಣಿ ಗಜಾಸುರನ ತಲೆಯ ಮೇಲೆ ಶೂಲಪ್ರಹಾರ ಮಾಡಿದ ಕೂಡಲೇ ಗಜಾಸುರ ಸಿಂಹರೂಪ ಧಾರಣಮಾಡಿ ಆ ಎಂದು ಬಾಯಿ ತೆರೆದುಕೊಂಡು ಬಂದ. ಕೃತ್ತಿವಾಸನು ಶರಭನಾಗಿ ಅವನನ್ನು ನುಂಗಹೋದ. ಆ ಕೂಡಲೇ ಗಜಾಸುರ ಪುನಃ ಗಜರೂಪ ತಾಳಿ ಗರ್ಜನೆಮಾಡುತ್ತ ಶೂಲಿಯ ಮೇಲೆ ಬಾಣವರ್ಷ ಸುರಿಸಿದ. ವೃಷಧ್ವಜ ಪ್ರತ್ಯಸ್ತ್ರಗಳಿಂದ ಅವನ್ನೆಲ್ಲಾ ನಿವಾರಿಸಿ ಅವನ ಕಾರ್ಮುಕವನ್ನೇ ಛೇದಿಸಿಬಿಟ್ಟ. ಗಜಾಸುರ ಶೂಲವನ್ನು ಹಿಡಿದುಕೊಂಡು ಶರ್ವನ ಮೇಲೆ ನುಗ್ಗಿದ. ಆಗ ಭರ್ಗ ಅವನ ಶೂಲವನ್ನೇ ಕಿತ್ತುಕೊಂಡು ಎಡಗೈಯಿಂದ ಅವನ ಸೊಂಡಿಲನ್ನೇ ತಿರುವುತ್ತಾ ಕಾಲಿಂದ ಎದೆಗೆ ಝಾಡಿಸಿ ಒದ್ದು ಅವನ ತಲೆಯನ್ನೇ ಹಾರಿಸಿ ಬಿಡಬೇಕೆಂದು ಶೂಲವನ್ನೆತ್ತಿದ.

ಅದನ್ನು ಕಂಡು ದೈತ್ಯ ಆನಂದ ನಿರ್ಭರನಾಗಿ ಮಹಾದೇವನನ್ನು ಸ್ತುತಿಸಿ "ದೇವೇಶ, ವಿರೂಪಾಕ್ಷ, ನನ್ನ ಸಂಹಾರಮಾಡಿ ನನ್ನ ಚರ್ಮವನ್ನೇ ಧರಿಸಿಕೊಂಡು ನನಗೆ ಕೀರ್ತಿಕೊಡು. ನನ್ನೀ ರಾಕ್ಷಸ ಜನ್ಮವನ್ನು ಬೇಗನೆ ಕಳೆದು ನಿನ್ನ ಸನ್ನಿಧಿಗೆ ಕರೆದುಕೋ" ಎಂದು ಬೇಡಿಕೊಂಡ. ಅದರಂತೆ ಈಶಾನ ಅವನ ತಲೆಹಾರಿಸಿ ಸಂಹರಿಸಿದೊಡನೆ ಅವನ ದೇಹದಿಂದ ಒಂದು ಚಿದ್‌ಜ್ಯೋತಿ ಹೊರಟು ಶರ್ವನ ಪಾದದಲ್ಲಿ ಐಕ್ಯವಾಗಿ ಅಡಗಿಕೊಂಡಿತು. ಭಕ್ತಪರಾಧೀನನಾದ ಶಂಭು ಭಕ್ತನ ಪ್ರಾರ್ಥನೆಯಂತೆ ಆ ಗಜಾಸುರನ ಚರ್ಮವನ್ನೇ ಅಂಬರವಾಗಿ ಧರಿಸಿದ.

ಗಜಾಸುರನ ಶಿರಸ್ಸು ಬಿದ್ದ ಸ್ಥಳದಲ್ಲೇ ಗಜಾಸ್ಯತೀರ್ಥ ನಿರ್ಮಾಣವಾಯಿತು. ಅದರ ತೀರದಲ್ಲೇ ಶಂಭು ತಾಂಡವೇಶ್ವರ ರೂಪದಿಂದ ನೆಲೆಸಿದ. ಗಜಾಸ್ಯ ತೀರ್ಥದಲ್ಲಿ ಒಂದುಸಾರಿ ಸ್ನಾನಮಾಡಿದರೇ ಸಾಕು ಸದ್ಗತಿಯಾಗುತ್ತದೆ.

ಅಧ್ಯಾಯ 86. ಯಜ್ಞಸಮಾಪ್ತಿ

ಅಪಸ್ಮಾರನ ಕುಟಿಲವಿದ್ಯೆ—ಗಜಾಸುರನೂ ಹತನಾಗಿ ಹೋಗಲು ಅಪಸ್ಮಾರ ನಿರುಪಾಯನಾಗಿ ಈಶ್ವರನನ್ನು ನೇರವಾಗಿ ಎದುರಿಸಲು ಅಂಜಿ ಕುಟಿಲ ಮಾರ್ಗವನ್ನು ಅವಲಂಬಿಸಿ ಸೇಡು ತೀರಿಸಿಕೊಳ್ಳಬೇಕೆಂದು ನಿಶ್ಚೈಸಿಕೊಂಡ. ಹಿಂದೆ ಖೇಟಕನಾಗಿ ಪಂಪಾನನ್ನು ವಂಚಿಸಲು ಹೋಗಿ ಅವಳ ಶಾಪದಿಂದ* ರಾಕ್ಷಸನಾಗಿ ಹುಟ್ಟಿದ ಇವನು ಅಖಂಡ ಸೇವೆಯಿಂದ ಶುಕ್ರಾಚಾರ್ಯರನ್ನೊಲಿಸಿಕೊಂಡು ಅವರಿಂದ ಕಾಮರೂಪಿ ಯಾಗುವ ವರ ಪಡೆದುಕೊಂಡಿದ್ದ. ಆ ಬಲದಿಂದ ಲೋಕ ಮೋಹಕವಾದ ಪುರುಷ ರೂಪ ಧರಿಸಿ ಕುಲಸ್ತ್ರೀಯರನ್ನೂ, ಮೋಹಿನೀ ರೂಪದಿಂದ ಪುರುಷರನ್ನೂ ಮೋಹಗೊ ಳಿಸಿ ಅವರ ಶೀಲ ಸದ್ಧರ್ಮಗಳನ್ನು ಕೆಡಿಸಿ ವ್ರತಭಂಗಗೊಳಿಸುತ್ತಾ ಧರ್ಮಕ್ಕೆ ಚ್ಯುತಿ ತಂದಿಟ್ಟ.

ದಕ್ಷಿಣಾಮೂರ್ತಿ ಅವತಾರ—ಲೋಕದಲ್ಲೆಲ್ಲಾ ಅಧರ್ಮ ಪ್ರಚಾರ ಹೆಚ್ಚಾ ದುದನ್ನು ಕಂಡು ಪರಮೇಷ್ಠಿ ಗೋವಿಂದನ ಬಳಿಗೆ ಹೋದ. ಅಲ್ಲಿಂದ ಅವರಿಬ್ಬರೂ ಕೈಲಾಸಕ್ಕೆ ಬಂದು ಶಂಕರನನ್ನು ಧರ್ಮಸಂಸ್ಥಾಪನೆ ಮಾಡಿ ಲೋಕೋದ್ಧಾರ ಮಾಡು ವಂತೆ ಪ್ರಾರ್ಥಿಸಿದರು. ಅವರ ಪ್ರಾರ್ಥನೆಯನ್ನು ಮನ್ನಿಸಿ ಚಂದ್ರಚೂಡ ದಕ್ಷಿಣಾ ಮೂರ್ತಿಯಾಗಿ ಆವಿರ್ಭವಿಸಿ ಸಜ್ಜನರಿಗೆಲ್ಲಾ ಧರ್ಮಬೋಧೆ ಮಾಡಿ ಜನರನ್ನು ದುರ್ಮಾರ್ಗದಿಂದ ತಪ್ಪಿಸಿ ಉದ್ಧಾರ ಮಾಡಿದ. ಅವನೆದುರಿಗೆ ಅಪಸ್ಮಾರನ ಆಟ ಏನೂ ನಡೆಯಲಿಲ್ಲ. ಒಳಗೊಳಗೇ ಕುದ್ದು ಕುದ್ದು ಕಡೆಗೆ ಅವನು ದಕ್ಷಿಣಾ ಮೂರ್ತಿಯನ್ನೇ ಕೊಂದು ಬಿಡುವೆನೆಂದು ಬಂದ. ಆಗ ದಕ್ಷಿಣಾಮೂರ್ತಿ ಎಡಗಾಲಿನ ಉಗುರಿನಿಂದ ಆ ಮಾಯಾವಿಯನ್ನು ಸೀಳಿ ಹಾಕಿದನು. ಸಾಯುವಾಗ ಆದೈತ್ಯ "ಸ್ವಾಮಿ, ನನ್ನ ಅಪರಾಧವನ್ನು ಕ್ಷಮಿಸಿ ಈ ಆಸುರಭಾವವನ್ನು ತಪ್ಪಿಸು" ಎಂದು ಬೇಡಿಕೊಳ್ಳಲು ದೇವದೇವನು "ಹಾಗೇ ಆಗಲಿ, ಆದರೆ ಕಲಿಯುಗದಲ್ಲಿ ನಿನ್ನ ಅಂಶದಿಂದಲೇ ಅನೇಕ ಮಂದಿ ವೇದದೂಷಕರಾದ ಅಸುರರು ಹುಟ್ಟುವರೆಂ"ದು ಹೇಳಿ ಅವನನ್ನು ವಧೆ ಮಾಡಿ ತಾನು ವಟಮೂಲದಲ್ಲಿ ವಿದ್ಯಾತೀರ್ಥದ ಬಳಿ ನೆಲಸಿದನು. ಆದ್ದರಿಂದ ಈ ಪ್ರದೇಶಕ್ಕೆ ವಟಕ್ಷೇತ್ರವೆಂದೇ ಹೆಸರು ಪ್ರಸಿದ್ಧಿಯಾಯಿತು. ಈ ಕ್ಷೇತ್ರದಲ್ಲಿ ವಾಸ ಮಾಡಿ ವಿದ್ಯಾ ತೀರ್ಥದಲ್ಲಿ ಮಜ್ಜನ ಮಾಡಿ ದಕ್ಷಿಣಾಮೂರ್ತಿಯನ್ನು ಭಜಿಸುವವರು ಶಿವಪದವಿ ಯನ್ನೈದುತ್ತಾರೆ.

ಹರಿಣಪ್ಲುತಿ—ಹೀಗೆ ಸಕಲ ವಿಘ್ನಗಳೂ ನಿವಾರಣೆಯಾಗಲು ಶೌನಕಾದಿ ಗಳು ಯಜ್ಞಶೇಷವನ್ನು ಮುಗಿಸಿ ಯಜ್ಞದ ಸಾಂಗತಾಸಿದ್ಧಿಗಾಗಿ ಗಿರಿಜಾಧವನನ್ನು

---

* ಈ ಕಥೆಗೆ ೬ನೇ ಅಧ್ಯಾಯ ನೋಡಿ.

ಸ್ತುತಿಸಿದರು. ಕಡೆಯ ಹೋಮ ಆರಂಭಿಸುವ ಹೊತ್ತಿಗೆ ಸರಿಯಾಗಿ ಭಯತ್ರಸ್ತವಾದ ಎರಡು ಜಿಂಕೆಗಳು ಎಲ್ಲಿಂದಲೋ ಯಜ್ಞಶಾಲೆಯೊಳಕ್ಕೆ ಓಡಿಬಂದುವು. ಅವುಗಳನ್ನು ನೋಡಿ ತಾಪಸರೆಲ್ಲರೂ ವಿಸ್ಮಯಗೊಳ್ಳುತ್ತಿರುವಷ್ಟರಲ್ಲೇ ಅವರೆಡೂ ಅಲ್ಲಿ ಇಲ್ಲಿ ನೆಗೆದಾಡುತ್ತ ಇದ್ದಕ್ಕಿದ್ದ ಹಾಗೆ ಯಜ್ಞಕುಂಡದಲ್ಲಿ ಹಾರಿಬಿಟ್ಟವು. ಅಗ್ನಿಸ್ಪರ್ಶವಾದೊಡನೆಯೇ ಅವುಗಳ ಮೃಗಜನ್ಮ ನಿವೃತ್ತಿಯಾಯಿತು. ಹಿಂದೆ ಶಾಪಗ್ರಸ್ತರಾಗಿದ್ದ ರಾಜರಾಣಿಯರ ರೂಪ ತಾಳಿದವು. ಋಷಿಗಳು ವಿಸ್ಮಯಾವಿಷ್ಟರಾಗಿ ಅವರ ಉದಂತವೇನೆಂದು ಕೇಳಲು ಅವರು ನಾರದರ ಶಾಪದ ವೃತ್ತವನ್ನೆಲ್ಲ ವಿಸ್ತಾರವಾಗಿ ಹೇಳಿದರು.*

ಮನುವಿನ ಪಿತೃಗಳು—ಅನಂತರ ಶೌನಕಾದಿಗಳು ಪೂರ್ಣಾಹುತಿಕೊಟ್ಟು ಯಜ್ಞಾಂತ್ಯದಲ್ಲಿ ಶಂಕರನ ಸ್ತುತಿ ಮಾಡಿದರು. ಆ ಸಮಯಕ್ಕೆ ಸರಿಯಾಗಿ ನಾರದರು ಮನುವನ್ನು ಕರೆದುಕೊಂಡು ಆ ಯಜ್ಞಶಾಲೆಗೆ ಸಂಪ್ರಾಪ್ತರಾದರು. ಮನುವನ್ನು ವಾಮದೇವನ (ಶಿವನ) ಮುಂದೆ ನಿಲ್ಲಿಸಿ ಆ ಸ್ವಾಮಿಯನ್ನು ಮನುವಿನ ಪಿತೃಗಳಿಗೆ ಮುಕ್ತಿಯನ್ನನುಗ್ರಹಿಸುವ ಹಾಗೆ ಬಿನ್ನವಿಸಿಕೊಂಡರು. ಪ್ರಸನ್ನನಾದ ವಿರೂಪಾಕ್ಷ "ಮನು ಈ ತೀರ್ಥದಲ್ಲಿ ಸ್ನಾನ ಮಾಡಲಿ. ಅದರಿಂದ ಇವನ ಪಿತೃಗಳಿಗೆ ಸದ್ಗತಿಯಾಗುತ್ತದೆ" ಎಂದು ಹೇಳಿದ. ಅದರಂತೆ ಆ ಮಹರ್ಷಿಗಳೆಲ್ಲರ ಸನ್ನಿಧಿಯಲ್ಲಿ ಮನು ಹರಿಣಪ್ಲುತ ತೀರ್ಥದಲ್ಲಿ ಸ್ನಾನಮಾಡಿದ. ಆ ಕೂಡಲೆ ಬಾವಿಯಲ್ಲಿ ಜೋತಾಡುತ್ತಿದ್ದ ಅವನ ಪಿತೃಗಳೆಲ್ಲ ವಿಮಾನಾರೂಢರಾಗಿ ಯಜ್ಞವಾಟಿಕೆಗೆ ಬಂದು "ಪುತ್ರ ! ನಿನ್ನಿಂದ ನಮಗೆ ಸದ್ಗತಿಯಾಯಿತು. ನಿನ್ನ ಋಣ ತೀರಿತು" ಎಂದು ಹೇಳಿ ಶಿವಪದ ಸೇರಿದರು. ಇತರ ಮುನಿಗಳು ಆ ಹರಿಣಪ್ಲುತ ತೀರ್ಥದಲ್ಲೇ ಅವಭೃಥ ಸ್ನಾನ ಮಾಡಿ ಯಜ್ಞವನ್ನು ಸಮಾಪ್ತಿಗೊಳಿಸಿದರು.

ಫಲಸ್ತುತಿ—ಜಿಂಕೆಗಳಾಗಿದ್ದ ರಾಜರಾಣಿಯರು ಹಾರಿ ಶಾಪ ಮುಕ್ತರಾದ ಸ್ಥಳದಲ್ಲಿ ಉಂಟಾದ ತೀರ್ಥವೇ ಹರಿಣಪ್ಲುತ ತೀರ್ಥ ಅಥವಾ ಮೃಗಪ್ಲುತತೀರ್ಥ. § ಈ ಹಂಪೆ ಕ್ಷೇತ್ರವೇ ಅತ್ಯಂತ ಪವಿತ್ರವಾದುದು. ಈ ಕ್ಷೇತ್ರದಲ್ಲಿ ಸಾಧಾರಣವಾಗಿ ಏನು ಪುಣ್ಯಕೆಲಸ ಮಾಡಿದರೂ ಅದು ಇತರ ಕ್ಷೇತ್ರಗಳಿಗಿಂತ ಶತಕೋಟಿಗುಣ ಅಧಿಕ ಫಲಪ್ರದ. ಅದರಲ್ಲೂ ಹರಿಣಪ್ಲುತದ ಮಹಿಮೆ ಹೆಚ್ಚು. ಈ ತೀರ್ಥದಲ್ಲಿ ಒಂದು ಸಾರಿ ಸ್ನಾನ ಮಾಡಿದವನೂ ಮುಕ್ತನೇ ಸರಿ. ಈಶ್ವರನ ದ್ವಾರಪಾಲಕರಾದ ನಂದ ಸುನಂದಾದಿಗಳು ಯಾವ ತೀರ್ಥದಲ್ಲಿ ಸ್ನಾನಮಾಡಿ ಜ್ಞಾನದ ಬೆಳಕನ್ನು ಪಡೆದರೋ ಅದೇ ಪವಿತ್ರವಾದುದು.

ವಿದ್ಯಾತೀರ್ಥ—ಇದೂ ಹತ್ತಿರದಲ್ಲೇ ಇದೆ. ಹರಿಣಗಳ ಈ ಆಖ್ಯಾನವನ್ನು ಭಕ್ತಿಯಿಂದ ಕೇಳುವವರು ಸರ್ವಪಾಪಗಳಿಂದ ಮುಕ್ತರಾಗುತ್ತಾರೆ.

---

* ಈ ವೃತ್ತಾಂತ ೮೩ನೇ ಅಧ್ಯಾಯದಲ್ಲೇ ಹೇಳಿದೆ.

§ ಹರಿಣ ಅಥವಾ ಮೃಗ ಎಂದರೆ ಜಿಂಕೆ. ಪ್ಲುತ ಎಂದರೆ ಹಾರೋಣ, ಧುಮುಕೋಣ.

ಅಧ್ಯಾಯ 87. ದಾಕ್ಷಾಯಣೀ ಜನನ

[ಮುಂದಿನ ಈ ಮೂರು ಅಧ್ಯಾಯಗಳಲ್ಲಿ ದಕ್ಷತೀರ್ಥಕ್ಕೆ ಸಂಬಂಧಿಸಿದ ದಾಕ್ಷಾಯಣೀ ಕಥೆ ಹೇಳಿದೆ. ಹೇಮಕೂಟಕ್ಕೆ ದಕ್ಷಿಣ ಭಾಗದಲ್ಲಿ ಸುಮಾರು ೨—೩ ಫರ್ಲಾಂಗ್ ದೂರದಲ್ಲಿ ಕಾಪುಲಾಪುರದ ದಾರಿಯಲ್ಲಿ ವೀರಭದ್ರನ ಗುಡಿಯಿದೆ. ಇದನ್ನು ರೂಢಿಯಲ್ಲಿ "ಉದ್ದಾನ ವೀರಭದ್ರ" ಎಂದು ಕರೆಯುವ ವಾಡಿಕೆ ಇದೆ. ಅದರ ಪಕ್ಕದಲ್ಲೇ ಚಂಡಿಕೇಶ್ವರನ ಗುಡಿ ಯೊಂದೂ ಇದೆ. ಆದರೆ ಈ ಪುರಾಣದಲ್ಲಿ ಬರುವ ದಕ್ಷತೀರ್ಥ, ವಿಷ್ಣುತೀರ್ಥ ಮೊದಲಾದ ಯಾವ ತೀರ್ಥಗಳೂ ಈಗ ಕಾಣಿಸುವುದಿಲ್ಲ. ಸುತ್ತಲೂ ಗದ್ದೆಗಳೇ ಗದ್ದೆಗಳು—ವಿ. ಶೀ.]

ವೀರಭದ್ರ ಸಂದರ್ಶನ—ಸಪ್ತರ್ಷಿಗಳು ಹರಿಣಪ್ಲುತ ತೀರ್ಥದಲ್ಲಿ ಆಹ್ನಿಕವಿಧಿಗಳನ್ನು ತೀರಿಸಿಕೊಂಡು ಅಲ್ಲಿಂದ **ಶ್ರೀ ವಿಷ್ಣುತೀರ್ಥ**ದ ಬಳಿಗೆ ಬಂದು, ಅದರ ಮುಂದಿರುವ ವೀರಭದ್ರನ ಸಂದರ್ಶನ ಮಾಡಿದರು. ಅಲ್ಲೇ ಚೌಡೇಶ್ವರಿಯೂ ಲಂಬೋದರನೆಂಬ ಗಣೇಶನೂ ಇತರ ಗಣಾಧಿಪತಿಗಳೂ ಇದ್ದರು. ಅದರ ಬಳಿಯಲ್ಲೇ **ದಕ್ಷ ತೀರ್ಥವೇ** ಮೊದಲಾದ ಅನೇಕ ತೀರ್ಥಗಳಿವೆ. ದಕ್ಷತೀರ್ಥ ದರ್ಶನದಿಂದಲೇ ಬ್ರಹ್ಮಹತ್ಯಾದಿ ದೋಷಗಳೂ ನಾಶವಾಗುತ್ತವೆ. ಈ ಸ್ಥಳದಲ್ಲಿ ದಕ್ಷ ರುಂಡವೇ ಕತ್ತರಿಸಿ ಹೋಗಿದ್ದರೂ ಪುನಃ ಮೇಷದ ರುಂಡದೊಡನೆ ಶಿವಧ್ಯಾನ ಮಾಡಿದನು. ಆದ್ದರಿಂದಲೇ ಈ ತೀರ್ಥವು ಅವನ ಹೆಸರಿನ ಮೇಲೆ ಖ್ಯಾತಿ ಪಡೆದಿದೆ.

ಕಾಳಿಕಾದೇವಿಗೆ ಗರ್ವಭಂಗ—ಒಂದು ದಿನ ಕೈಲಾಸದಲ್ಲಿ ಶಿವನಿಗೂ ಕಾಳಿಕಾದೇವಿಗೂ ಜಗಳ ಹತ್ತಿತು. ಕಾಳಿಕಾದೇವಿ ತಾನೇ ಆದಿಶಕ್ತಿಯೆಂದೂ ತಾನಿಲ್ಲವೆ ಈಶ್ವರ ಜಡದಂತೆ ಅಸಹಾಯನೆಂದೂ ಏನೂ ಮಾಡಲಾರನೆಂದೂ ಸೃಷ್ಟ್ಯಾದಿ ಕಾರ್ಯಗಳನ್ನು ನಡೆಸುವವಳು.ತಾನೇ ಎಂದು ಗರ್ವದಿಂದ ಹೇಳಿಕೊಂಡಳು. ಅವಳ ಗರ್ವೋಕ್ತಿಯನ್ನು ಕೇಳಿ ಅವಳ ಅಹಂಕಾರವನ್ನು ಅಡಗಿಸುವುದಕ್ಕಾಗಿ ಮಹೇಶ್ವರ ಆ ಕ್ಷಣದಲ್ಲೇ ಸೃಷ್ಟ್ಯಾದಿ ಕಾರ್ಯಗಳನ್ನು ಮಾಡಿ ತೋರಿಸಿ ಸ್ವಸಾಮರ್ಥ್ಯವನ್ನು ಬೆಳಗಿಸಿದನು. ಅಷ್ಟಕ್ಕೆ ನಿಲ್ಲದೆ ಅವಳಿಗೆ ತನ್ನನ್ನು ಬಿಟ್ಟು ಎಲ್ಲಿಗಾದರೂ ಹೋಗಿಬಿಡಬೇಕೆಂದೂ ಅಪ್ಪಣೆ ಮಾಡಿದ. ಕಾಳಿಕಾದೇವಿ ಬಹಳ ಬೇಡಿಕೊಂಡದ್ದರಿಂದ ಸಮಾಧಾನಪಡಿಸುತ್ತಾ "ನೀನು ದಾಕ್ಷಾಯಣಿಯಾಗಿ ಹುಟ್ಟು. ನಾನು ನಿನ್ನನ್ನು ಪರಿಗ್ರಹಿಸಿ ಅನುಗ್ರಹಿಸುವೆನು" ಎಂದು ಹೇಳಿ ಭರವಸೆ ಕೊಟ್ಟ.

ದಾಕ್ಷಾಯಣಿಯಾಗಿ ಜನನ—ಪರಮೇಶ್ವರನ ಸೂಚನೆಯಂತೆ ಅವತಾರ ಮಾಡುವುದಕ್ಕಾಗಿ ಕಾಳಿಕಾ ಯಮುನಾ ತೀರಕ್ಕೆ ಹೋಗಿ ಒಂದು ಕಮಲನಾಳದಲ್ಲಿ ಕುಳಿತು ತಪೋನುಷ್ಠಾನ ಆರಂಭಿಸಿದಳು. ಒಂದು ದಿನ ಮಾಘಮಾಸದಲ್ಲಿ **ದಕ್ಷ** ಮಾಘಸ್ನಾನಕ್ಕಾಗಿ **ವೇದವಲ್ಲಿ**ಯೊಡನೆ ಯಮುನಾನದಿಗೆ ಬಂದ. ಪೂಜೆಗಾಗಿ ಕಮಲ ಪುಷ್ಪಗಳನ್ನು ಹರಿಯುತ್ತಿದ್ದಾಗ ಒಂದು ಪುಷ್ಪದಲ್ಲಿ ಕಮಲ ಪತ್ರಾಕ್ಷಿಯಾದ ಕನ್ಯಾರತ್ನ ಇರುವುದನ್ನು ಕಂಡು ಪರಮಸಂತೋಷದಿಂದ ಆ ಕನ್ಯಾಶಿಶುವನ್ನು ಮನೆಗೆ ಕರೆತಂದು

ಔರಸಪುತ್ರಿಯಂತೆ ಕಾಪಾಡುತ್ತಾ ಬಂದನು. ದಕ್ಷನಿಗೆ ದೊರಕಿದ್ದರಿಂದ ಆ ಕನ್ಯಾಮಣಿಗೆ **ದಾಕ್ಷಾಯಣೀ** ಎಂದೇ ನಾಮಕರಣ ಮಾಡಲಾಯಿತು.

ಅಧ್ಯಾಯ 88. ದಾಕ್ಷಾಯಣೀ ವಿವಾಹ

ದಾಕ್ಷಾಯಣಿಯ ತಪಸ್ಸು—ಆ ಕನ್ಯೆ ಶುಕ್ಲಪಕ್ಷದ ಚಂದ್ರನಂತೆ ದಿನೇ ದಿನೇ ಬೆಳೆದಳು. ಐದು ವರ್ಷ ವಯಸ್ಸಾದ ಬಳಿಕ ದಾಕ್ಷಾಯಣಿ ತಂದೆಯನ್ನು "ಅಪ್ಪಾ, ನಾನು ಶಂಭುವನ್ನು ಕುರಿತು ತಪಸ್ಸು ಮಾಡಬೇಕು. ನನಗೊಂದು ಏಕಾಂತ ಸ್ಥಳ ತೋರಿಸು" ಎಂದು ಕೇಳಿದಳು. ದಕ್ಷ ಪರಮಪ್ರೀತನಾಗಿ ಆಕೆಗೆ ಒಬ್ಬ ಸಖಿಯನ್ನೂ ಬೇಕಾದ ಸೇವಾ ಸಾಮಗ್ರಿಗಳನ್ನೂ ಕೊಟ್ಟು ಒಂದು ಏಕಾಂತ ಸ್ಥಳ ತೋರಿಸಿ ಅನುಕೂಲ ಮಾಡಿಕೊಟ್ಟ. ದಾಕ್ಷಾಯಣಿ ಅಲ್ಲೇ ಐದಾರು ವರ್ಷ ಬಿಡದೆ ತಪಸ್ಸು ಮಾಡಿದಳು. ಆ ಚಿಕ್ಕ ಬಾಲಕಿಯ ತಪೋನಿಷ್ಠೆಯನ್ನು ಕಂಡು ಬೆರಗಾಗಿ ದಕ್ಷ-ವೇದವಲ್ಲಿಯರು "ಇವಳ ವಯಸ್ಸೇನು ? ತಪಸ್ಸೆಂದರೇನು ? ಆದರೂ ಎಂಥಾ ನಿಷ್ಠೆ ! ಎಂಥಾ ವೈರಾಗ್ಯ ! ಆಹಾ, ಯೋಗಿಗಳಿಗೂ ಅಶಕ್ಯವಾದ ಎಂಥಾ ನಿಶ್ಚಲ ಭಕ್ತಿ ಇವಳದು !" ಎಂದು ಆಶ್ಚರ್ಯಪಟ್ಟುಕೊಂಡರು.

ವರಪ್ರಾಪ್ತಿ—ಅವಳ ತಪಸ್ಸಿಗೆ ಮೆಚ್ಚಿ ಪಶುಪತಿ ವಿಪ್ರವೇಷದಿಂದ ಪ್ರತ್ಯಕ್ಷನಾಗಿ ಬಂದು ಅವಳ ದೃಢಮನಸ್ಸನ್ನು ಪರೀಕ್ಷಿಸಿ ಅವಳಿಗೆ ತನ್ನ ನಿಜರೂಪವನ್ನು ತೋರಿಸಿ ತನ್ನನ್ನು ವರಿಸುವಂತೆ ಹೇಳಿದ.* ದಾಕ್ಷಾಯಣಿ ಪರಮೇಶ್ವರನನ್ನು ಸ್ತುತಿಸಿ ಅವನ ಕ್ಷಮೆ ಬೇಡಿದಳು. ಅನಂತರ ತಪಸ್ಸು ಮುಕ್ತಾಯಗೊಳಿಸಿ ತಂದೆತಾಯಿಗಳನ್ನು ಕಂಡು ತನ್ನನ್ನು ವಿಪ್ರವೇಶದಿಂದ ಬಂದಿದ್ದ ಈಶಾನನಿಗೇ ಕೊಟ್ಟು ವಿವಾಹ ಮಾಡಬೇಕೆಂದು ಪ್ರಾರ್ಥಿಸಿಕೊಂಡಳು. ಅದರಂತೆಯೇ ಅವರು ವಿವಾಹಕ್ಕೆ ಬೇಕಾದ ಸಿದ್ಧತೆಗಳನ್ನೆಲ್ಲಾ ಅಣಿಮಾಡಿದರು.

ದಾಕ್ಷಾಯಣೀ ವಿವಾಹಘಟ್ಟ—ಊರನ್ನೆಲ್ಲಾ ತಳಿರುತೋರಣಗಳಿಂದಲೂ ಧ್ವಜಪತಾಕೆ ಬಾಳೆಕಂಬಗಳಿಂದಲೂ ಧೂಪದೀಪಾವಳಿಗಳಿಂದಲೂ ಅಲಂಕರಿಸಲಾಯಿತು ಸ್ವರ್ಣಮಯವಾದ ಕಲ್ಯಾಣಮಂಟಪವನ್ನು ರಚಿಸಿ ಅದರ ಮಧ್ಯೆ ನವರತ್ನಖಚಿತವಾದ ಅಷ್ಟಕೋನಾಕಾರದ ವೇದಿಕೆಯನ್ನೂ ರಚಿಸಿ ಆಯಿತು. ಎಲ್ಲರಿಗೂ ಲಗ್ನಪತ್ರಿಕೆಗಳೂ ಆಹ್ವಾನಗಳೂ ಹೋದುವು. ಬ್ರಹ್ಮವಿಷ್ಣುಗಳಿಂದ ಹಿಡಿದು ದೇವರ್ಷಿ ಮೊದಲಾದ ಸಮಸ್ತರೂ ಸುಮುಹೂರ್ತಕ್ಕೆ ಆಗಮಿಸಿದರು.

---

* ಈ ಕಥಾಭಾಗವನ್ನು ಮಹಾಕವಿ ಕಾಳಿದಾಸ ಕುಮಾರಸಂಭವದಲ್ಲಿ 5ನೇ ಸರ್ಗದಲ್ಲಿ ಬಹಳ ರಮ್ಯವಾಗಿ ಚಿತ್ರಿಸಿದ್ದಾನೆ.

ಶುಭಲಗ್ನ ಮುಹೂರ್ತ ಪ್ರಾಪ್ತವಾಗಲು ದಕ್ಷ ಪತ್ನೀಸಮೇತನಾಗಿ ತನ್ನ ಮಗಳು ದಾಕ್ಷಾಯಣಿಯನ್ನು ವಿರೂಪಾಕ್ಷನಿಗೆ

ಅಯೋನಿಜಾಮಿಮಾಂ ದೇವ ಪುತ್ರವತ್ ಪಾಲಿತಾಂ ಮಯಾ ॥
ದಾಸ್ಯಾಮಿ ತುಭ್ಯಮೀಶಾನ ಪ್ರೀತೋ ಭವ ಮಹೇಶ್ವರ ॥

"ಹೇ ದೇವ ಈಶಾನ, ಅಯೋನಿಜಳಾದರೂ ಪುತ್ರಿಯಂತೆ ಸಲಹಿರುವ ಇವಳನ್ನು ನಿನಗೆ ಕೊಡುತ್ತೇನೆ, ಪ್ರೀತನಾಗು" ಎಂದು ಸಂಕಲ್ಪಮಾಡಿ ವಿಧಿಪೂರ್ವಕ ಧಾರೆಯೆರೆದು ಕೊಟ್ಟ. ಮಹೇಶ ಅವಳ ಕಂಠದಲ್ಲಿ ಮಂಗಳಸೂತ್ರವನ್ನು ಕಟ್ಟುತ್ತಿದ್ದಾಗ ದೇವ ಗಂಧರ್ವಸಿದ್ಧ ಚಾರಣ ಕಿನ್ನರರೆಲ್ಲರೂ ಪುಷ್ಪವೃಷ್ಟಿ ಸುರಿಸಿದರು. ದೇವದುಂದುಭಿಗಳೂ ವಾದ್ಯಗಳೂ ಮೊಳಗಿದುವು. ಸಕಲರಿಗೂ ಪರಮಾನಂದವಾಯಿತು. ವಿವಾಹ ಸಂಭ್ರಮ ಮುಗಿದ ಬಳಿಕ ಮಹಾದೇವ ಮಾವನಿಂದ ಅರ್ಚಿತನಾಗಿ ದಾಕ್ಷಾಯಣಿಯನ್ನು ಕರೆದುಕೊಂಡು ದಿವ್ಯೋತ್ಸವ ಸಮಾವೃತನಾಗಿ ತನ್ನ ಕೈಲಾಸಮಂದಿರಕ್ಕೆ ತೆರಳಿದನು.

ಈ ಶಿವದಾಕ್ಷಾಯಣೀ ಕಲ್ಯಾಣವೃತ್ತಾಂತ ಪರಮ ಕಲ್ಯಾಣವರ್ಧಕ. ಇದನ್ನು ಸತತ ಪಾರಾಯಣಮಾಡುವವರು ಮುಕ್ತರಾಗಿ ಶಿವಸಾಯುಜ್ಯವನ್ನೈದುವರು.

ಅಧ್ಯಾಯ 89. ದಕ್ಷನಿಗೆ ಶಾಪ

[ದಕ್ಷಯಜ್ಞದ ಕಥೆ ಭಾಗವತ ಚತುರ್ಥಸ್ಕಂಧದ ಆದಿಭಾಗದಲ್ಲೂ ಹೇಳಿದೆ. ಆದರೆ ಈ ಅಧ್ಯಾಯದಲ್ಲಿ ಹೇಳಿರುವ ಕಥೆಯನ್ನೂ ಭಾಗವತದ ಕಥೆಯನ್ನೂ ಹೋಲಿಸಿ ನೋಡಿದರೆ ಅನೇಕ ಸ್ವಾರಸ್ಯವಾದ ವ್ಯತ್ಯಾಸಗಳು ಕಂಡುಬರುತ್ತವೆ. ಭಾಗವತದಲ್ಲಿ ದಕ್ಷನೇ ಯಜ್ಞಾರಂಭ ಮಾಡಿದನೆಂದೂ, ಅವನು ದಾಕ್ಷಾಯಣಿ ಎದುರಿಗೆ ಶಿವ ನಿಂದೆ ಮಾಡಿದ್ದರಿಂದ ಪತಿನಿಂದೆ ಕೇಳಲಾರದೆ ಆ ಸತಿ ಯಜ್ಞಕುಂಡದಲ್ಲಿ ಅಗ್ನಿಪ್ರವೇಶ ಮಾಡಿದಳೆಂದೂ, ಶಿವಾಜ್ಞಪ್ತನಾದ ವೀರಭದ್ರ ಯಜ್ಞ ಧ್ವಂಸ ಮಾಡುವುದಕ್ಕೆ ಬಂದಾಗ ಯಜ್ಞಶಾಲೆಯಲ್ಲೇ ಶಾಪ ಪ್ರತಿಶಾಪಗಳಾದುವೆಂದೂ ವರ್ಣಿಸಿದೆ. ಆದರೆ ಈ ಅಧ್ಯಾಯದಲ್ಲಿ ಏನು ಹೇಳಿದೆಯೋ ಗಮನಿಸಿರಿ.—ವಿ. ಶೀ.]

ಅಳಿಯ-ಮಾವಂದಿರ ಮನಸ್ತಾಪ—ಒಂದು ಸಲ ದಕ್ಷ ತನ್ನ ಮಗಳನ್ನು ನೋಡಿಕೊಂಡು ಬರುವುದಕ್ಕೆ ಕೈಲಾಸಕ್ಕೆ ಹೋದ. ಶಿವ ಸತೀಸಮೇತನಾಗಿ ಸಭಾಮಧ್ಯದಲ್ಲಿ ಕುಳಿತಿದ್ದ. ಅದನ್ನು ಕಂಡು ದಕ್ಷನಿಗೆ ಅಳಿಯನ ವಿಷಯದಲ್ಲಿ ತಿರಸ್ಕಾರ ಬುದ್ಧಿ ಉತ್ಪನ್ನವಾಯಿತು; ಅವನು ಮನಸ್ಸಿನಲ್ಲೇ "ಎಂಥಾ ನಿರ್ಲಜ್ಜ ಇವನು! ಸಭಾಮಧ್ಯದಲ್ಲಿ ಭಾರ್ಯಾಸಹಿತನಾಗಿ ಹೀಗೆಲ್ಲಾದರೂ ಕೂಡುವುದುಂಟೇ? ಛೀ! ಇವನು ಸ್ತ್ರೀಲೋಲುಪ, ಮತ್ತರಲ್ಲಿ ಅಗ್ರಗಣ್ಯ" ಎಂದು ಬೈದುಕೊಂಡ.

ದಕ್ಷನ ದುರ್ಬುದ್ಧಿಯನ್ನು ಹೊರಗೆಡುವುದಕ್ಕಾಗಿ ಮಹಾಶಂಭು ಅವನನ್ನು

ಕಂಡರೂ ಕಾಣದಂತೆ ಇದ್ದುಬಿಟ್ಟ. ಅಳಿಯನ ಈ ಉಪೇಕ್ಷಾ ಬುದ್ಧಿ ಕಂಡು ದಕ್ಷನಿಗೆ ಮತ್ತಷ್ಟು ರೇಗಿತು. ಅವನು ಕೋಪಾಪಮಾನಗಳನ್ನು ಸಹಿಸಲಾರದೆ ಸಭಿಕರ ಕಡೆ ತಿರುಗಿ "ಇವನಿಗೆ ಸ್ವಲ್ಪವಾದರೂ ಮಾನ-ಮರ್ಯಾದೆ ಎನ್ನುವುದಿದೆಯೇ ನೋಡಿ. ಅನ್ಯಾಯವಾಗಿ ದುರ್ವೃತ್ತನೂ ದುರಾಚಾರಿಯೂ ಕಾಮಿನೀಲಂಪಟನೂ ಆದ ಈ ಅಯೋಗ್ಯನಿಗೆ ಚಿನ್ನದಂಥ ನನ್ನ ಮಗಳನ್ನು ಕೊಟ್ಟು ಕೆಟ್ಟೆನಲ್ಲ. ಛಿ, ಛಿ, ಕಪಿಯ ಕೈಗೆ ಮಾಣಿಕ್ಯ ಕೊಟ್ಟಂತಾಯಿತು. ಇವನಿಗೆ ಗೌರವ ಕೊಡುವವರಿಗೇ ಬುದ್ಧಿ ಕಡಿಮೆ. ಇರಲಿ, ಇವನಿಗೆ ತಿರಸ್ಕಾರ ಮಾಡುವುದಕ್ಕಾಗಿ ಅರುದ್ರ ಹೋಮ ಮಾಡುತ್ತೇನೆ" ಎಂದು ಬಾಯಿಗೆ ಬಂದಂತೇ ಲೊಟಲೊಟ ಅನ್ನುತ್ತಾ ಸ್ವಲ್ಪವೂ ವಿಚಾರ ಮಾಡದೆ ಬೈದು ಸಭೆಯಿಂದ ಹೊರಟು ಹೋದ.

ದಕ್ಷನ ದುರ್ಬುದ್ಧಿ—ಅದೇ ಸಮಯದಲ್ಲಿ ವಿಧಾತನು ಶಿವಪ್ರೀತಿಕರವಾದ ಒಂದು ಯಜ್ಞಮಾಡಬೇಕೆಂದು ಹವಣಿಸುತ್ತಿದ್ದ. ಆ ಸುದ್ದಿ ಕೇಳಿ ದಕ್ಷ ವಿಧಿಯ ಬಳಿಗೆ ಹೋಗಿ ಅವನನ್ನು ಕಂಡು ರುದ್ರಯಾಗದ ಪ್ರಸ್ತಾಪವೆತ್ತಿ ಆಕ್ಷೇಪಿಸುತ್ತಾ "ಶಿವನೇ ಸರ್ವೋತ್ತಮನೆಂದು ಶಾಸ್ತ್ರಗಳಲ್ಲಿ ಹೇಳಿರುವುದು ಶುದ್ಧ ತಪ್ಪು. ಅಮಂಗಳಮೂರ್ತಿ ಯಾದ ಅವನಿಗೆ ಗೌರವ ಕೊಡುವುದೇ ಶುಭಕರವಲ್ಲ. ಅವನನ್ನು ಬಿಟ್ಟು ವಿಷ್ಣುವನ್ನೋ ಇಂದ್ರಾದಿಗಳನ್ನೋ ಏಕೆ ಪೂಜಿಸಬಾರದು?" ಎಂದು ವಾದಿಸಿದ. ಚತುರ್ಮುಖ ಸಮಾಧಾನ ಹೇಳುವುದಕ್ಕೆ ಹೊರಟರೆ ಅವನನ್ನು ಎದುರು ವಾದಿಸಿ ಮನಸ್ಸಿಗೆ ಕಿರಿಕಿರಿ ಮಾಡಿಕೊಂಡು ಅಲ್ಲಿ ನಿಲ್ಲಲಾರದೆ ಹೊರಟುಬಿಟ್ಟ.

ಇತ್ತಲಾಗಿ ಭವನ ಅಪ್ಪಣೆಯಂತೆ ಹಿರಣ್ಯಗರ್ಭ ನಂದಿಕೇಶ್ವರನಿಗೆ ಅಗ್ರಪೂಜೆ ಮಾಡಿ ಯಜ್ಞಾರಂಭ ಮಾಡಿದ. ಅದನ್ನು ನೋಡಿದ ದಕ್ಷನ ಕೋಪ ಇನ್ನೂ ಕೆರಳಿ ಕಿಚ್ಚಾಯಿತು. ಅವನು ಎದ್ದು ಪರುಷ ವಾಕ್ಯಗಳನ್ನಾಡುತ್ತಾ ಶಂಕರನನ್ನೂ ನಂದೀಶ್ವರಾದಿ ಅವನ ಭೃತ್ಯರನ್ನೂ ಹೀನಾಮಾನ ಹಿಯ್ಯಾಳಿಸಿದ.

ದುರ್ಬುದ್ಧಿಗೆ ತಕ್ಕ ಪ್ರಾಯಶ್ಚಿತ್ತ—ದಕ್ಷನ ದುರ್ವಾಕ್ಯ ಕೇಳಿ ಕೇಳಿ ನಂದಿಯ ರಕ್ತ ಮಿಳಮಿಳ ಕುದಿಯಿತು. ಕೋಪೋದ್ರೇಕದಿಂದ ಅವನು ದಕ್ಷಿಣ ಬಾಹುವನ್ನೆತ್ತಿ "ಈ ದುರ್ವೃತ್ತನನ್ನು ಈಗಲೇ ಕೊಂದು ಬಿಡುತ್ತಿದ್ದೆ. ಆದರೆ ನಮ್ಮ ಪ್ರಭುವಿಗೆ ಪರಾಧೀನನಾಗಿ ಇವನನ್ನು ಜೀವಮೊರಸೆ ಬಿಟ್ಟಿದ್ದೇನೆ. ಶಿವದ್ವೇಷ ಮಾಡುವ ನೀಚನು ಅಧಃಪತಿತನಾಗಿ ಇಪ್ಪತ್ತೊಂದು ನರಕಗಳಲ್ಲಿ[1] ಬೀಳುವನು. ರೇ ದುರ್ಗತ! ಶಿವ ನಿಂದಕನಾದ ನಿನ್ನ ರುಂಡ ಹಾರಿಹೋಗಲಿ ಮತ್ತು ಅದರ ಸ್ಥಾನವಲ್ಲಿ ನಿನಗೆ ಟಗರಿನ ತಲೆಹುಟ್ಟಿ ಎಲ್ಲರೂ ನಿನ್ನನ್ನು ಹಾಸ್ಯಮಾಡಿ ನಗುವಂತಾಗಲಿ" ಎಂದು ಭಯಂಕರವಾದ ಶಾಪವನ್ನು ಕೊಟ್ಟ. ಎಲ್ಲರೂ ಹಾಹಾಕಾರ ಮಾಡುತ್ತಾ ಎದ್ದು ಸಮಾಧಾನೋಕ್ತಿ

---

1 ನರಕಗಳ ನಾಮಾವಳಿಗೆ 46ನೇ ಅಧ್ಯಾಯ ನೋಡಿ.

ಹೇಳಿ ಇಬ್ಬರನ್ನೂ ಶಾಂತಮಾಡಿದರು. ಪರಮೇಷ್ಠಿ ತನ್ನ ಮಗನ ಭವಿಷ್ಯವನ್ನು ಕುರಿತು ಚಿಂತಾಪರನಾದನು.

[ಹೀಗೆ ದಕ್ಷನ ಕಥೆ ಇಲ್ಲಿ ಏಕಾಏಕಿ ನಿಂತುಹೋಗಿದೆ. ಅಷ್ಟೇ ಅಲ್ಲದೆ ಮುಂದಿನ ಅಧ್ಯಾಯದ ಕಥೆಯೂ ಎಲ್ಲೋ ಮಧ್ಯೆ ಇದ್ದಕ್ಕಿದ್ದ ಹಾಗೆ ಆರಂಭವಾದಂತೆಯೂ ಕಾಣುತ್ತವೆ. ಇದನ್ನು ನೋಡಿದರೆ ಈ ಸ್ಥಳದಲ್ಲಿ ಮಧ್ಯೆ ಸ್ವಲ್ಪಭಾಗ ಗ್ರಂಥ ಲುಪ್ತವಾಗಿರಬೇಕೆನ್ನಿಸು ತ್ತದೆ.—ವಿ. ಶೀ.]

ಅಧ್ಯಾಯ 90. ವೀರಭದ್ರಾದಿಗಳ ವೃತ್ತಾಂತ

ವೀರಭದ್ರ—ಚಂದ್ರಶೇಖರ ಕೈಲಾಸದಲ್ಲಿರಲು ಹಂಪೆ ನಿವಾಸಿಗಳು ಅವನ ಬಳಿಗೆ ಹೋಗಿ ದೈತ್ಯರಿಂದಾಗುತ್ತಿದ್ದ ನಾನಾ ಬಗೆಯ ಹಾವಳಿಗಳನ್ನು ವರ್ಣಿಸಿದರು. ಆಗ ಆ ವಿಭು ವೀರಭದ್ರನನ್ನು ಕರೆಸಿ ಅವನಿಗೆ "ವೀರಭದ್ರ, ನೀನು ಭದ್ರಕಾಳಿಯೊಡನೆ ಹಂಪೆ ಕ್ಷೇತ್ರಕ್ಕೆ ಹೋಗಿ ಅಲ್ಲಿ ವಾಸಮಾಡುವ ನನ್ನ ಭಕ್ತರಿಗೆ ತೊಂದರೆ ಮಾಡುವ ದೈತ್ಯ ಪಿಶಾಚಾದಿಗಳನ್ನು ದಂಡಿಸಿ ಶಾಸನದಲ್ಲಿಡು. ಅದೂ ಅಲ್ಲದೆ ಯಮಬಾಧಾ ನಿವಾರ ಣಾರ್ಥ ದಕ್ಷಿಣದ ಕಡೆಯಲ್ಲೇ ಇದ್ದುಕೊಂಡು ಅಲ್ಲಿಗೆ ಬರುವ ದುಷ್ಟರನ್ನೆಲ್ಲ ದಮನ ಮಾಡು" ಎಂದು ಆಜ್ಞಾಪಿಸಿದ. ಅದರಂತೆ ವೀರಭದ್ರ ಇಲ್ಲಿ ನೆಲೆಸಿದ್ದಾನೆ.

ಇತರ ತೀರ್ಥಗಳು—ಈ ಸ್ಥಳದಲ್ಲಿ ಇನ್ನೂ ದರ್ಶನದಿಂದಲೇ ಮುಕ್ತಿಯನ್ನು ಕೊಡುವಂಥ ಅನೇಕ ತೀರ್ಥಗಳಿವೆ. ಅವುಗಳ ವಿಚಾರವೆಲ್ಲ ಹೇಳುವುದು ಯಾರಿಂದ ಸಾಧ್ಯ? ಇದು ದೇವೀಕುಂಡ; ಇದರಲ್ಲಿ ಸ್ನಾನಮಾಡಿದರೂ, ಅಷ್ಟೇಕೆ, ಜಲಪಾನ ಮಾಡಿದರೂ ಕೂಡ ಜನರು ಉತ್ತಮ ಗತಿ ಪಡೆಯುತ್ತಾರೆ. ಮುಂದೆ, ಈ ಸ್ಥಳದಲ್ಲಿ ಅಷ್ಟಭೈರವರಿದ್ದಾರೆ, ಇವರ ದರ್ಶನದಿಂದಲೇ ಪಾಪಗಳು ನಾಶಹೊಂದುತ್ತವೆ, ರಾಕ್ಷಸರು ಪಲಾಯನ ಮಾಡುತ್ತಾರೆ. ಇದರಿಂದ ಮುಂದೆ **ಸುವೃತ್ತತೀರ್ಥ** ಇದೆ. ಈ ತೀರ್ಥದ ಮಹಿಮೆ ಕೋಹಲನಿಂದ ಪ್ರಕಟವಾಯಿತು.

ವಾರುಣಿ ಮತ್ತು ಕೋಹಲರ ಕಥೆ—ನಿಷಧ ದೇಶದಲ್ಲಿ **ವಾರುಣಿ** ಎಂಬ ನೀತಿಕೋವಿದನಾದ ಬ್ರಾಹ್ಮಣ ಇದ್ದ. ಪ್ರಾರಬ್ಧ ಕರ್ಮವಶದಿಂದ ಅವನಿಗೆ ಕೃಪಣಾ ಗ್ರಣಿಯಾದ **ಕೋಹಲ**ನೆಂಬ ಮಗ ಹುಟ್ಟಿದ. ಆ ಪುಣ್ಯಾತ್ಮ ತಂದೆತಾಯಿಗಳಿಗಾಗಲಿ ಕೈಹಿಡಿದ ಹೆಂಡತಿಗಾಗಲಿ ಹೊಟ್ಟೆತುಂಬ ಹಾಕುವುದಕ್ಕೂ ಕೂಡ ಹಿಂಜರಿಯುತ್ತಿದ್ದ. ಮಗನ ಲೋಭಿತನ ಸಹಿಸಲಾರದೆ ವಾರುಣಿಗೆ ಪ್ರಾಣ ಕಳೆದು ಕೊಳ್ಳುವುದಾದರೂ ಎಷ್ಟೋ ಲೇಸೆನ್ನಿಸಿದ್ದರಿಂದ ಅವನು ಕಾಡಿಗೆ ಓಡಿಹೋದ.

ಕಾಡಿನಲ್ಲಿ ಆ ವಾರುಣಿ **ಉದ್ದಾಲಕ**ರನ್ನು ಕಂಡು ಮಗನ ಗೋಳುಕರೆ ಹೇಳಿ ಹೇಳಿ ಅವನಿಗೆ ಸದ್ಬುದ್ಧಿ ಬರುವಂತೆ ಏನಾದರೂ ಉಪಾಯ ಹೇಳಿಕೊಡಬೇಕೆಂದು ಬಿನ್ನವಿಸಿಕೊಂಡ. "ಹಿಂದಿನ ಜನ್ಮದಲ್ಲಿ ಆ ಕೋಹಲ ನಿನಗೆ ಸಾಲಕೊಟ್ಟಿದ್ದ. ನೀನು

ಅದನ್ನು ತೀರಿಸದೆ ಹಾಗೇ ಸತ್ತುಹೋದೆ. ಅವನು ಆ ಕೊರಗಿನಲ್ಲೇ ಸತ್ತು ಈ ಜನ್ಮದಲ್ಲಿ ನಿನ್ನ ಮಗನಾಗಿ ಜನಿಸಿ ಹೀಗೆ ಲೋಭಿಯಾಗಿದ್ದಾನೆ. ಏನಾದರೂ ಯುಕ್ತಿ ಮಾಡಿ ಅವನನ್ನು ಹಂಪೆ ಕ್ಷೇತ್ರದಲ್ಲಿರುವ ಸುವೃತ್ತ ತೀರ್ಥದಲ್ಲಿ ಮುಳುಗಿಸಿದರೆ ಅದರ ಪ್ರಭಾವದಿಂದ ಆ ನಿನ್ನ ಮಗನಿಗೆ ಸದ್ಬುದ್ಧಿ ಬರುತ್ತದೆ" ಎಂದು ಉದ್ದಾಲಕರು ವಾರುಣಿಗೆ ಹೇಳಿಕೊಟ್ಟರು.

ವಾರುಣಿ ಮಾಡಿದ ಯುಕ್ತಿ—ವಾರುಣಿ ಮನೆಗೆ ಹಿಂತಿರುಗಿ ಹೋಗಿ ಮಗನಿಗೆ ಎಷ್ಟೆಷ್ಟು ಬುದ್ಧಿ ಹೇಳಿದರೂ ಅವನಿಗೆ ಒಂದೂ ಹಿಡಿಸಲಿಲ್ಲ; ತಂದೆಯ ಬೋಧನೆ ಕೇಳಲಾರದೆ ಸಿಟ್ಟಾಗಿ ಅವನನ್ನೇ ದೊಣ್ಣೆಯಿಂದ ಬಡಿದ. ಈ ಕ್ರಮ ಸರಿಯಲ್ಲವೆಂದು ಬಗೆದು ವಾರುಣಿ ಅವನಿಗೆ ಬುದ್ಧಿ ಕಲಿಸುವುದಕ್ಕೆ ಸಮಯ ಕಾಯುತ್ತಲೇ ಇದ್ದ. ಒಂದುದಿನ ಮಗ ಎಲ್ಲೋ ಹೊರಗೆ ಹೋಗಿದ್ದಾಗ ವಾರುಣಿ ಅವನ ಹಣವನ್ನೆಲ್ಲಾ ಕಟ್ಟಿಕೊಂಡು ಸುವೃತ್ತತೀರ್ಥಕ್ಕೆ ಬಂದುಬಿಟ್ಟ. ಮನೆಗೆ ಬಂದು ಅಪಹೃತವಾದ ಹಣಕ್ಕಾಗಿ ಹಂಬಲಿಸುತ್ತಾ ತಂದೆಯನ್ನು ಹಿಂಬಾಲಿಸಿಕೊಂಡು ಸುವೃತ್ತತೀರ್ಥದ ಬಳಿಗೇ ಬಂದು ಸೇರಿದ.

ಮಗನನ್ನು ಕಂಡೊಡನೆ ವಾರುಣಿ ಆ ತೀರ್ಥಜಲದಲ್ಲಿ ಹಣವನ್ನೂ ಹಾಕಿ ಹಿಂದೆಯೇ ತಾನೂ ಧುಮುಕಿಬಿಟ್ಟ. ದುಡ್ಡಿನ ಹಂಬಲದಿಂದ ದಿಕ್ಕುತೋಚದೆ ಕೋಹಲನೂ ತೀರ್ಥದಲ್ಲಿ ಹಾರಿದ. ಆದರೆ ತೀರ್ಥಜಲ ಸ್ಪರ್ಶವಾಗುವುದೇ ತಡ, ಕೋಹಲನ ಚಿತ್ತವೃತ್ತಿಯೇ ಬೇರೆಯಾಯಿತು. ಅವನಿಗೆ ತನ್ನ ತಪ್ಪು ತನಗೇ ತಿಳಿಯಿತು. ತಂದೆಯ ಕ್ಷಮೆಬೇಡಿ ಅಲ್ಲೇ ನೂರು ವರ್ಷ ತಪಸ್ಸುಮಾಡಿ ತ್ರ್ಯಂಬಕನ ಅನುಗ್ರಹದಿಂದ ಗಂಧರ್ವ ನಾಯಕನಾದ.

ವಾರುಣಿಯ ತಪಸ್ಸು—ಅಲ್ಲೇ ಇನ್ನೊಂದು ಕಡೆ ಕುಳಿತು ವಾರುಣಿಯೂ ಸಾವಿರ ವರ್ಷ ಕಠಿನ ತಪಸ್ಸು ಮಾಡಿದ. ಅವನು ಧ್ಯಾನಾರೂಢನಾಗಿ ಕುಳಿತಿದ್ದಾಗ ಆ ಸರಸ್ಸಿನಲ್ಲಿದ್ದ ಬಕಪಕ್ಷಿಗಳು ಅವನ ದೇಹದ ಮಾಂಸಖಂಡಗಳನ್ನೇ ಕಿತ್ತು ಕಿತ್ತು ತಿಂದು ಹಾಕಿದವು. ಕಡೆಗೆ ಬರೀ ಎಲುಬುಗಳ ಗೂಡೇ ಉಳಿದುಕೊಂಡಿತು. ಇಷ್ಟಾದರೂ ವಾರುಣಿ ಸಮಾಧಿಯನ್ನು ವಿರಮಿಸಲಿಲ್ಲ. ಆದ್ದರಿಂದ ಅವನ ತಪೋಗ್ನಿಜ್ವಾಲೆಯಿಂದ ದೇವತೆಗಳೆಲ್ಲ ಪೀಡಿತರಾಗಿ ಸದಾಶಿವನನ್ನು ಮೊರೆಹೊಕ್ಕರು. ಆಗ ಖಂಡಪರುಶು ವಾರುಣಿಗೆ ಪ್ರತ್ಯಕ್ಷನಾಗಿ ಅವನ ದೇಹದ ಮೇಲೆ ತನ್ನ ತಲೆಯ ಮೇಲಿದ್ದ ಗಂಗೆಯ ಉದಕವನ್ನು ಪ್ರೋಕ್ಷಿಸಿದ. ಆಕ್ಷಣವೇ ವಾರುಣಿ ದಿವ್ಯಸುಂದರ ವಿಗ್ರಹಧಾರಿಯಾಗಿ ಎದ್ದು ನಿಂತು ಪರಮೇಶ್ವರನನ್ನು ಭಕ್ತಿಯಿಂದ ಸಂಸ್ತುತಿಸಿದ. ಭಕ್ತಪರಾಧೀನನಾದ ದೇವನು ವಾರುಣಿಯ ಸ್ತೋತ್ರದಿಂದ ಪ್ರಸನ್ನನಾಗಿ ಅವನಿಗೆ "ನೀನು ತಪಸ್ಸಿಗೆ ಕುಳಿತಿದ್ದಾಗ ಬಕಗಳು ನಿನ್ನ ಮಾಂಸವನ್ನೇ ಕಿತ್ತು ತಿಂದದ್ದರಿಂದ ನಿನಗೆ ಬಕದಾಲ್ಭ್ಯನೆಂಬ [1]

1 ಬಕದಾಲ್ಭ್ಯರ ಕಥೆ ಹಿಂದೆಯೇ 12ನೇ ಅಧ್ಯಾಯದಲ್ಲಿ ಬಂದಿದೆ.

ಹೆಸರೇ ಪ್ರಖ್ಯಾತವಾಗಲಿ. ನೀನು ಶಿಷ್ಯರಿಗೆ ಪಂಪಾಮಾಹಾತ್ಮ್ಯವನ್ನು ಹೇಳಿಕೊಡುತ್ತಾ ಇಲ್ಲೇ ವಾಸವಾಗಿದ್ದುಕೊಂಡು ಶಿವಧ್ಯಾನ ಪರಾಯಣನಾಗಿರು" ಎಂದು ಆಜ್ಞಾಪಿಸಿದ.

ಹೀಗೆ ಈ ತೀರ್ಥದಲ್ಲಿ ಸ್ನಾನಮಾಡಿದ್ದರಿಂದಲೇ ಕೋಹಲನಿಗೆ ಸದ್ಬುದ್ಧಿಯುಂಟಾದ್ದರಿಂದ ಈ ತೀರ್ಥವು ಸುವೃತ್ತತೀರ್ಥ[1]ವೆಂದು ಪ್ರಸಿದ್ಧವಾಯಿತು.

ಅಧ್ಯಾಯ 91. ಮುಕ್ತಿ ನರಸಿಂಹ (i)

[ಹಿಂದೆ 70ನೇ ಅಧ್ಯಾಯದ ಮುಖ ಟಿಪ್ಪಣಿಯಲ್ಲಿ ತಿಳಿಸಿದಂತೆ ಆನೆಗೊಂದಿಗೆ ಆಗ್ನೇಯ ದಿಕ್ಕಿನಲ್ಲಿ ತುಂಗಭದ್ರೆ ಉತ್ತರವಾಹಿನಿಯಾಗಿ ತಿರುಗುವ ಮೂಲೆಯಲ್ಲಿ ಪಶ್ಚಿಮ ದಡದ ಕಡೆ, ಕಪಿಲಾಶ್ರಮದ ಎದುರಿಗೆ ಭವ್ಯವಾದ ಚಿಂತಾಮಣಿ ಮಠ ಇದೆಯೆಂದು ಹೇಳಿದೆಯಷ್ಟೆ. ಅದರ ಪಕ್ಕದಲ್ಲಿ ಆ ಮಠಕ್ಕೇ ಸೇರಿದ ಒಂದು ನರಸಿಂಹಸ್ವಾಮಿ ದೇವಾಲಯವಿದೆ. ಇದೇ ಮುಕ್ತಿ ನರಸಿಂಹ.

ಈ ಕಥೆ ಮುಂದಿನ ಎರಡಧ್ಯಾಯಗಳಲ್ಲಿ ಕಥಿತವಾಗಿದೆ. ನರಸಿಂಹನ ಗುಡಿಯ ಹತ್ತಿರದಲ್ಲೇ ವಿಘ್ನೇಶ ಮತ್ತು ಕುಮಾರಸ್ವಾಮಿಗಳೂ ಇವೆ. ಆದರೆ ಪುರಾಣೋಕ್ತವಾದುವು ಇವೇ ಹೌದೋ ಅಥವಾ ಬೇರೆಯೋ ಹೇಳುವುದು ಕಷ್ಟವಾಗಿದೆ. ಮುಂದಿನ ಕಥಾಭಾಗದಲ್ಲಿ ಪ್ರಸಕ್ತವಾಗಿರುವ ಮುಕ್ತಿನರಸಿಂಹ ಸಾಲಿಗ್ರಾಮವೆಂದು ಕಂಠೋಕ್ತವಾಗಿ ಹೇಳಿರುವುದರಿಂದ ವೇದಗುಪ್ತ ಅರ್ಚಿಸಿದ ನರಸಿಂಹನೇ ಈಗಿಲ್ಲದಿದ್ದರೂ ಸ್ಥಳವೇನೋ ಇದೇ ಇರಬೇಕೆಂದು ಧಾರಾಳವಾಗಿ ಹೇಳಬಹುದು. ಏಕೆಂದರೆ ತಪಸ್ಸು ಮಾಡುವುದಕ್ಕೆ ಯೋಗ್ಯವಾದ ಅತ್ಯಂತ ರಮಣೀಯವಾದ ಈ ಪ್ರದೇಶವನ್ನು ನೋಡಿದರೆ ಯಾರಿಗಾದರೂ ಹಾಗೆನ್ನಿಸುತ್ತದೆ.

ಈಗ್ಗೆ ಸುಮಾರು 700 ವರ್ಷಗಳ ಹಿಂದೆ ಸಚ್ಚಿದಾನಂದ ಚಿಂತಾಮಣಿಗಳೆಂಬೊಬ್ಬ ಯೋಗಿಗಳು ಹಿಮಾಲಯ ಪ್ರದೇಶದಿಂದ ಆನೆಗೊಂದಿಗೆ ಬಂದರು. ಅವರು ರಾಜಾಶ್ರಯದಿಂದ ಈ ಸ್ಥಳದಲ್ಲೊಂದು ಗುರುಪೀಠವನ್ನು ಸ್ಥಾಪಿಸಿದರು ; ಅದೇ ಚಿಂತಾಮಣಿ ಮಠ. ಆದ್ದರಿಂದ ಈ ಚಿಂತಾಮಣಿ ಮಠದ್ದುಪ್ರಸಂಗ ಪುರಾಣದಲ್ಲಿ ಬರುವುದಿಲ್ಲ.—ವಿ.ತೀ.]

ಸುವೃತ್ತ ತೀರ್ಥವನ್ನು ನೋಡಿಕೊಂಡು ಬಕದಾಲ್ಭ್ಯರ ದರ್ಶನ ಮಾಡಿ ಸಪ್ತರ್ಷಿಗಳು ಮುಂದೆ ನಡೆದು ವಿಘ್ನೇಶನ ದರ್ಶನ ಮುಗಿಸಿಕೊಂಡು ಅಲ್ಲಿಂದ ಕುಮಾರಸ್ವಾಮಿಯ ಬಳಿಗೆ ಬಂದು ಸಾಷ್ಟಾಂಗ ಪ್ರಣಾಮಮಾಡಿ ಅವನನ್ನು ಸ್ತುತಿಸಿ ಸಂತೋಷದಿಂದ ಮುಂದೆ ಸಾಗಿ ಮುಕ್ತಿ ನರಸಿಂಹಸ್ವಾಮಿಯ ಬಳಿಗೆ ಬಂದರು. ಕ್ಷೇತ್ರಪಾಲ ಅವರಿಗೆ ಆ ಸ್ವಾಮಿಯ ಕಥೆಯನ್ನು ಹೀಗೆ ವಿಸ್ತಾರವಾಗಿ ಹೇಳಿದ.

ನರಸಿಂಹನ ಭಕ್ತ—ರಮ್ಯವಾದ ಅವಂತೀ ನಗರದಲ್ಲಿ ಕ್ಷಿಪ್ರಾನದಿ ಪ್ರವಹಿಸುತ್ತದೆ. ಆ ನಗರದಲ್ಲಿ **ವೇದಗುಪ್ತ**ನೆಂಬ[2] ವೇದಾಧ್ಯಯನ ಸಂಪನ್ನನಾದ ದ್ವಿಜಶ್ರೇಷ್ಠ

1 ಸು = ಒಳ್ಳೆಯ ; ವೃತ್ತ = ನಡತೆ, ಚರಿತ್ರೆ.

2 ಗುಪೂ ರಕ್ಷಣೇ ಎಂದು ಧಾತು ಇರುವುದರಿಂದ ವೇದರಕ್ಷಕನೆಂದು ಅರ್ಥವಾಗುತ್ತದೆ.

ನಿದ್ದ. ಅವನ ಭಾರ್ಯೆ **ಬಹುಮತಿ**[1] ಸುಶೀಲೆಯೂ ಶ್ರೀದೇವಿ ಪೂಜಾನಿರತಳೂ ಆಗಿದ್ದಳು. ಆ ದಂಪತಿಗಳಿಗೆ ವೇದಪ್ರಿಯ, ಪ್ರಿಯಮೇಧ,[2] ಗುಣವ್ರತ, ಧರ್ಮವಾದಿಯೆಂದು ನಾಲ್ವರು ಸತ್ಪುತ್ರರಿದ್ದರು. ಹಂಪೆ ಯಾತ್ರೆಗೆ ಬಂದಿದ್ದ ವೇದಗುಪ್ತ ಈ ಕ್ಷೇತ್ರದ ಮಹಿಮೆಗೆ ಬೆರಗಾಗಿ ತುಂಗಭದ್ರಾ ತೀರದಲ್ಲೇ ಒಂದು ಕಡೆ ಅಗ್ರಹಾರ ಕಟ್ಟಿಕೊಂಡು ವಸತಿ ಮಾಡಿದನು.[3] ತನ್ನ ಹತ್ತಿರ ಕುಲಕ್ರಮಾಗತವಾಗಿ ಬಂದಿದ್ದ ನರಸಿಂಹ ಸಾಲಿಗ್ರಾಮವನ್ನು ಅರ್ಚಿಸುತ್ತಾ ಅದರ ಪ್ರಭಾವದಿಂದ ಕಷ್ಟವಿಲ್ಲದೆ ಸುಖವಾಗಿ ನೂರ ನಲವತ್ತು ವರ್ಷ ಇಲ್ಲೇ ಇದ್ದುಬಿಟ್ಟ.

ರಾಜಾಗಮನ—ಅದೇ ಸಮಯದಲ್ಲಿ ಅಂಗದೇಶದ ರಾಜನಾದ **ವಿದ್ವೇಷಣ** ಕೆಲವು ಜನ ಅಮಾತ್ಯರು ಮತ್ತು ಸೈನ್ಯದೊಡನೆ ಹಂಪೆ ಯಾತ್ರೆಗಾಗಿ ಬಂದಿದ್ದ. ಯಾತ್ರೆ ಮುಗಿಸಿಕೊಂಡು ಹಿಂದಿರುಗುತ್ತಿದ್ದ ವಿದ್ವೇಷಣನಿಗೆ **ಶರಭ** ಮುನಿ ವೇದಗುಪ್ತನ ದರ್ಶನ ಮಾಡಿಕೊಂಡೇ ಹೋಗಬೇಕೆಂದೂ ಅದರಿಂದ ರಾಜನ ಸಕಲ ಅಘಗಳೂ ನಾಶವಾಗುವುದಲ್ಲದೆ ಪರಮೇಶ್ವರಾನುಗ್ರಹವೂ ಆಗುವುದೆಂದೂ ಬಲಾತ್ಕಾರಮಾಡಿ ಹೇಳಿದ. ಆದ್ದರಿಂದ ವಿದ್ವೇಷಣ ಸೈನ್ಯಪರಿವಾರ ಸಹಿತ ವೇದಗುಪ್ತನ ಅಗ್ರಹಾರಕ್ಕೆ ದಯಮಾಡಿಸಿ ಆ ವಿಪ್ರೋತ್ತಮನನ್ನು ಕಂಡು ಮಾತಾಡಿಸಿದ.

ಅಧ್ಯಾಯ 92. ಮುಕ್ತಿನರಸಿಂಹ (ii)

ರಾಜನಿಗೆ ಸತ್ಕಾರ—ಮಾತು ಮುಗಿದ ಬಳಿಕ ವಿದ್ವೇಷಣ ಹೊರಡಲನುವಾದ. ಸದ್ಧರ್ಮಾನುಷ್ಠಾನಜ್ಞನಾದ ವೇದಗುಪ್ತ ರಾಜನಿಗೆ ಉಪಚಾರ ಹೇಳುತ್ತಾ "ರಾಜ ವಿಷ್ಣುಸಮಾನ. ಧರ್ಮರಕ್ಷಣೆಗೆ ಅವನೇ ಕಾರಣ. ರಾಜನಿಗೆ ಸನ್ಮಾನ ಮಾಡಿದರೆ ಪಂಪಾಪತಿಗೂ ತೃಪ್ತಿಯಾಗುತ್ತದೆ. ಆದ್ದರಿಂದ ನಮ್ಮ ಆತಿಥ್ಯವನ್ನು ಮನ್ನಿಸಿ ನಾವು ಶಕ್ತ್ಯನುಸಾರ ಅರ್ಪಿಸುವ ಹಣ್ಣೋ ಹಂಪಲೋ ಸ್ವೀಕರಿಸಿ ಮುಂದೆ ಪ್ರಯಾಣ ಮಾಡಬೇಕೆಂ"ದು ಬಲಾತ್ಕಾರ ಮಾಡಿ ರಾಜನನ್ನೂ ಅವನ ಪರಿವಾರದವರನ್ನೂ ಸ್ನಾನ ಮಾಡಿಕೊಂಡು ಬರಹೇಳಿ ಕಳುಹಿಸಿದ.

ಅತ್ತಲಾಗಿ ತಾನು ಅಡಿಗೆ ಮನೆಗೆ ಬಂದು ನರಸಿಂಹ ಸಾಲಿಗ್ರಾಮವನ್ನರ್ಚಿಸಿ ಆ ಸ್ವಾಮಿಯನ್ನು ರಾಜಾತಿಥ್ಯಕ್ಕೆ ಯೋಗ್ಯವಾದ ಷಡ್ರಸೋಪೇತವಾದ ಭಕ್ಷ್ಯಭೋಜ್ಯಗಳನ್ನು ಕರುಣಿಸುವಂತೆ ಪ್ರಾರ್ಥಿಸಿಕೊಂಡ. ಕೇಳುವುದೊಂದೇ ತಡ, ಎಲ್ಲ ಅಡಿಗೆಗಳೂ ಸಿದ್ಧವಾಗಿಬಿಟ್ಟವು. ರಾಜನೂ ಅವನ ಪರಿವಾರವೂ ಭೋಜನ ಮಾಡಿ ಪೂರ್ಣ ಸಂತುಷ್ಟರಾದರು.

---

1 ಪತಿಯ ಬಹುಮತವುಳ್ಳವಳು. 2 ಮೇಧ=ಯಜ್ಞವು, ಪ್ರಿಯವಾದವನು. 3 ಆ ಅಗ್ರಹಾರವೇ ಬೆಳೆದು ಇಂದು ಆನೆಗೊಂದಿಯಾಗಿರಬೇಕು.

ರಾಜನ ಕುಟಿಲಬುದ್ಧಿ—ಭೋಜನದ ಸುವ್ಯವಸ್ಥೆಯನ್ನು ಕಂಡು ಬೆರಗಾದ ವಿದ್ವೇಷಣ ವೇದಗುಪ್ತನನ್ನು ಕರೆಯಿಸಿ ಅಷ್ಟುಬೇಗ ಅಂಥಾ ದಿವ್ಯಭೋಜನವನ್ನು ಹೇಗೆ ಸಿದ್ಧಗೊಳಿಸಿದನೆಂದು ಕೇಳಿದ. ನಿಷ್ಕಪಟ ಹೃದಯನಾದ ವಿಪ್ರ ಸ್ವಲ್ಪವೂ ಮರೆ ಮಾಚದೆ ನರಸಿಂಹ ಸಾಲಿಗ್ರಾಮದ ಪೂಜಾ ಪ್ರಭಾವದಿಂದಲೇ ಅಷ್ಟೆಲ್ಲಾ ಅನುಕೂಲ ಒದಗಿಸಲು ಸಾಧ್ಯವಾಯಿತೆಂದು ಯಥಾಸ್ಥಿತವನ್ನೇ ಹೇಳಿದ. ಅದನ್ನು ಕೇಳಿ ರಾಜ ನಿಗೆ ನರಸಿಂಹ ಸಾಲಿಗ್ರಾಮದ ಮೇಲೆ ಮನಸ್ಸು ಜೋಲಿತು. ಯಥೇಷ್ಟ ಮುತ್ತು ಮಾಣಿಕ್ಯಗಳನ್ನು ತೆಗೆದುಕೊಂಡು ಆ ಸಾಲಿಗ್ರಾಮವನ್ನು ತನಗೆ ಕೊಡಬೇಕೆಂದು ದ್ವಿಜೋತ್ತಮನನ್ನು ಪರಿಪರಿ ಪೀಡಿಸಿದ. ವಂಶಪರಂಪರಾಗತವಾಗಿ ಬಂದ ಆ ಸಾಲಿ ಗ್ರಾಮವನ್ನು ಕೊಡುವುದು ಸುತರಾಂ ಸಾಧ್ಯವಿಲ್ಲವೆಂದು ವೇದಗುಪ್ತ ನಿಷ್ಠೂರವಾಗಿ ಹೇಳಿದಾಗ ವಿದ್ವೇಷಣ ಬಲಾತ್ಕಾರದಿಂದಲಾದರೂ ಆ ನರಸಿಂಹನನ್ನು ಕಿತ್ತುಕೊಳ್ಳಲೇ ಬೇಕೆಂದು ನಿಶ್ಚೈಸಿಕೊಂಡು ಸೈನ್ಯಸಮೇತನಾಗಿ ಆ ಬಡಬ್ರಾಹ್ಮಣನ ಮೇಲೆ ಕೈಮಾಡು ವುದಕ್ಕೆ ಹೊರಟ.

ನರಸಿಂಹನ ಪ್ರಾದುರ್ಭಾವ—ಆಗ ವೇದಗುಪ್ತ ತನ್ನ ಕುಲದೇವನಾದ ನರಸಿಂಹನನ್ನು

ರಕ್ಷ ರಕ್ಷ ಜಗನ್ನಾಥ ನೃಹರೇ ಭಕ್ತವತ್ಸಲ

ಎಂದು ಬೇಡಿಕೊಂಡ. ಒಡನೆಯೇ ಆ ಸಾಲಿಗ್ರಾಮದಿಂದ ನರಸಿಂಹ ಆವಿರ್ಭವಿಸಿ ಬಂದು ರಾಜನನ್ನು ತಡೆಗಟ್ಟಿದ. ಅತ್ತಲಾಗಿ ನರಸಿಂಹನ ರೂಪಕ್ಕೆ ಭೀತನಾದ ವಿದ್ವೇ ಷಣ ತನ್ನ ಕುಲದೇವನೂ ಇಷ್ಟದೇವತೆಯೂ ಆದ ಶಂಕರನನ್ನು ಸ್ತುತಿಸಿ

ಭಕ್ತಂ ಪಾಲಯ ಗೌರೀಶ ತ್ವದಧೀನಂ ಜಗತ್ಪತೇ

ಎಂದು ಬೇಡಿಕೊಳ್ಳಲು ಅವನಿಗೆ ನರಹರಿಯೇ ಶಂಕರನಾಗಿ ಕಾಣಿಸಿಕೊಂಡ. ಇದನ್ನು ಕಂಡು ಬೆಕ್ಕಸ ಬೆರಗಾಗಿ ನೋಡುತ್ತಿರಲು ಆ ಬ್ರಾಹ್ಮಣ-ಕ್ಷತ್ರಿಯರಿಬ್ಬರಿಗೂ ಶಂಕರ ಕೇಶವಾತ್ಮಕವಾದ ರೂಪದ್ವಯದ ಲಕ್ಷಣಗಳು ಏಕಮೂರ್ತಿಯಲ್ಲೇ ಪ್ರಕಟವಾಗಿ ಕಾಣಿ ಸಿಕೊಂಡವು. ಆಗ ಆ ಭಕ್ತರಿಬ್ಬರೂ ಅಭಿನ್ನವಾಗಿ ಕಾಣಿಸುವ ಆ ರೂಪದ್ವಯವನ್ನು

ವೈಕುಂಠವಾಸಂ ರಜತಾದ್ರಿ[1]ವಾಸಂ
ಗಜೇಂದ್ರವಂದ್ಯಂ ಗಜಸೂದನಂ[2] ಚ ||
ಫಣೀಶಭೂಷಂ[3] ಫಣಿರಾಜತಲ್ಪಂ[4]
ನೌಮ್ಯದ್ವಯಂ[5] ಶಂಕರಮದ್ವಿತೀಯಮ್ ||

---

1 ರಜತಾದ್ರಿ=ಕೈಲಾಸ ಬೆಳ್ಳಿಯಬೆಟ್ಟ. 2 ಕುವಲಯಾಪೀಡವೆಂಬ ಕಂಸನ ಆನೆಯನ್ನು ಕೃಷ್ಣ ಸಂಹಾರಮಾಡಿದ್ದನಷ್ಟೆ. 3 ಸರ್ಪಭೂಷಣ, ಶಿವ. 4 ಶೇಷಶಾಯಿ ವಿಷ್ಣು. 5 ನೌಮಿ+ಅದ್ವಯಂ ಎಂದು ಪದಚ್ಛೇದ. ಅಭಿನ್ನರಾದ ಹರಿಹರರನ್ನು ವಂದಿಸುತ್ತೇನೆ ಎಂದರ್ಥ.

(ಕೂರ್ಮಾವತಾರ) ಮುಕ್ತಿನರಸಿಂಹ—ಪುಟ–142 (ಅನ್ನಪೂರ್ಣಾ)

ಇತ್ಯಾದಿ ರೀತಿಯಾಗಿ ಸ್ತೋತ್ರಮಾಡಿದರು. ಕೊನೆಗೆ ವಿದ್ವೇಷಣ ತನ್ನ ದುರ್ಬುದ್ಧಿಗಾಗಿ ಪಶ್ಚಾತ್ತಾಪಪಟ್ಟು, ಬ್ರಾಹ್ಮಣ ಹಿಂಸಾರೂಪ ಪಾಪವನ್ನು ಕ್ಷಮಿಸಿ ಮುಕ್ತಿ ಅನುಗ್ರಹಿಸುವಂತೆ ಆ ಸ್ವಾಮಿಯನ್ನು ಬೇಡಿಕೊಂಡ. ಆಗ ಸದಾಶಿವ ನರಹರಿಯ ರೂಪದಿಂದಲೇ ಆ ರಾಜನಿಗೆ ಮುಕ್ತಿಯನ್ನು ಅನುಗ್ರಹಿಸಿದ. ಆದ್ದರಿಂದ ಆ ದೇವನಿಗೆ ಮುಕ್ತಿನರಸಿಂಹ ಎಂಬ ಹೆಸರು ಅನ್ವಯಿಸಿತು. ಅನಂತರ ವೇದಗುಪ್ತನಿಗೂ ಅಲ್ಲೇ ತಪಸ್ಸು ಮಾಡಿಕೊಂಡಿರುವಂತೆ ಹೇಳಿ ಅಂತರ್ಧಾನನಾದ.

ಅಧ್ಯಾಯ 93. ಪಾತಾಳೇಶ್ವರ ಮತ್ತು ನವದುರ್ಗೆಯರು

[ಹಂಪಿಯಿಂದ ಕಮಲಾಪುರಕ್ಕೆ ಹೋಗುವ ದಾರಿಯಲ್ಲಿ ಮಧ್ಯೆ ಅಕ್ಕತಂಗಿಯರ ಗುಂಡಿನ ಬಳಿ ಒಂದು ದಾರಿ ಹಾಳು ಪಟ್ಟಣದ ಕಡೆಗೆ ಹೋಗುವುದಕ್ಕೆ ಒಡೆಯುತ್ತದೆ. ಅಲ್ಲೇ ನೆಲ ಮಟ್ಟಕ್ಕಿಂತ ತಗ್ಗಿನಲ್ಲಿ ಒಂದು ಗುಡಿಯಿದೆ. ಈ ಗುಡಿಗೆ 'Underground Temple' ಎಂದು ಬೋರ್ಡು ಹಾಕಿದೆ. ಇದೇ ಪಾತಾಳೇಶ್ವರನ ಗುಡಿ. ತಾರಕೇಶ್ವರನಿಗೇ ಪಾತಾಳೇಶ್ವರನೆಂದೂ ಹೆಸರೆಂದು ಮುಂದಿನ ಕಥಾಭಾಗದಿಂದ ಗೊತ್ತಾಗುವುದು.

ಈ ಗುಡಿಯ ಆವರಣದಲ್ಲೇ ಶಾಲಿವಾಹನ ಶಕ ೧೪೩೫ನೇ ಶ್ರೀಮುಖ ಸಂ|| ಚೈತ್ರ ಶು. ೫ ಯ (—ಮಾರ್ಚ್ 12, ಕ್ರಿ. ಶ. 1513) ಒಂದು ಶಿಲಾಶಾಸನವಿದೆ. ಇದರಲ್ಲಿ ವಿಜಯನಗರದ ಅರಸನಾಗಿದ್ದ 'ಕೃಷ್ಣರಾಯ ಮಹಾರಾಯರು' ತಮ್ಮ ಪಟ್ಟದಲ್ಲಿ ಶ್ರೀ ಪ್ರಸನ್ನ ವಿರೂಪಾಕ್ಷದೇವರ 'ಅಮೃತಪಡಿ ನೈವೇದ್ಯಕೂ ಅಂಗರಂಗ ವಯಭೋಗ (ವೈಭೋಗ)ಕೂ ಮಾಸಪೂಜೆ' ಮೊದಲಾದ ಪೂಜೆಗಳಿಗಾಗಿಯೂ ಕೆಲವು ಗ್ರಾಮಗಳನ್ನೂ ಎರಡು ತೋಟಗಳನ್ನೂ ಸರ್ವಮಾನ್ಯವಾಗಿ ತನ್ನ ತಂದೆ-ತಾಯಿಗಳ ಪುಣ್ಯಾರ್ಥವಾಗಿ 'ಸೂರ್ಯಗ್ರಹಣ ಪುಣ್ಯಕಾಲದಲೂ ಆಚಂದ್ರಾರ್ಕಸ್ಥಾಯಿಯಾಗಿ ನಡೆಯ ಮರಿಯಾದೆಯಲು ಸಮರ್ಪಿಸಿ'ದಂತೆ ಉಲ್ಲೇಖವಿದೆ. ಇದರಿಂದ ಈ ಗುಡಿಯಲ್ಲಿದ್ದ ದೇವರಿಗೆ ಪ್ರಸನ್ನ ವಿರೂಪಾಕ್ಷನೆಂಬ ಹೆಸರೂ ಇದ್ದಂತೆ ಗೊತ್ತಾಗುತ್ತದೆ. (*South Indian Inscriptions*, Vol IX, Pt II, No. 491.)

ಈ ಅಧ್ಯಾಯದ ಕಡೆಭಾಗದಲ್ಲಿ ಬರುವ ನವದುರ್ಗೆಯರು ಪಂಪಾಪತಿ ಗುಡಿಯ ಆವರಣದ ಒಳಗೇ ಹಿಂದುಗಡೆ ನೈರುತ್ಯ ಮೂಲೆಯಲ್ಲಿ ಸ್ಥಾಪಿತವಾಗಿದ್ದಾರೆ—ವಿ. ಶೀ.]

ವೇದಗುಪ್ತಾದಿಗಳ ತಪಸ್ಸು—ಮಹೇಶ್ವರನ ಅಪ್ಪಣೆಯಂತೆ ವೇದಗುಪ್ತ ತನ್ನ ನಾಲ್ವರು ಮಕ್ಕಳೊಡನೆ ತಪಶ್ಚರಣೆ ನಡೆಸಿದ. ಅವನ ಭಾರ್ಯೆ ಬಹುಮತಿ ಶಕ್ತಿತ್ರಯಮಯಿಯಾದ ಗೌರಿಯನ್ನು ಆರಾಧಿಸಿದಳು. ಹೀಗೆ ಬಹುಕಾಲ ನಿರ್ವಿಘ್ನವಾಗಿ ಅವರೆಲ್ಲ ತಪಸ್ಸು ಮಾಡುತ್ತಿರಲು, ಅವರ ತಪಸ್ಸಿಗೆ ಅಮರಕಂಟಕನಾದ **ನಿಕುಂಭನೆಂಬ** ಮಹಾಸುರನಿಂದ ವಿಘ್ನವುಂಟಾಯಿತು.

ನಿಕುಂಭನೂ ಅವನ ನೂರುಜನ ಮಕ್ಕಳೂ ಬ್ರಹ್ಮನಿಂದ ವರಪಡೆದು ಗರ್ವೋದ್ಧ

ತರಾಗಿ ಪಾತಾಲದಿಂದ ಭೂಲೋಕಕ್ಕೆ ಬಂದು ಆಶ್ರಮದಲ್ಲಿದ್ದ ಸಾಧುಗಳನ್ನೂ ಮುನಿಗಳನ್ನೂ ಹಿಂಸಿಸತೊಡಗಿದರು. ಅವರ ಕಾಟ ತಡೆಯುಲಾರದೆ ತಪಸ್ವಿಗಳು ಹೆಂಡತಿ ಮಕ್ಕಳನ್ನೂ ಬಿಟ್ಟು ದಿಕ್ಕುಪಾಲಾಗಿ ಚದರಿ ಓಡಿಹೋದರು. ಕೆಲವರು ಗತ್ಯಂತರವಿಲ್ಲದೆ ಅವರನ್ನೇ ಮೊರೆಹೊಕ್ಕು ಬದುಕಿಕೊಂಡರು. ಎಲ್ಲೆಲ್ಲೂ ರಾಜ್ಯ ಕ್ಷೋಭೆಯಾಯಿತು, ಬ್ರಾಹ್ಮಣರಿಗೂ ತಪಸ್ವಿಗಳಿಗೂ ಉಳಿಗಾಲವಿರಲಿಲ್ಲ.

ನಾರದರ ಯುಕ್ತಿ—ಒಂದು ದಿನ ಸಂಚಾರಮಾಡುತ್ತಾ ಭೂಲೋಕಕ್ಕೆ ಬಂದ ನಾರದರು ಈ ವೃತ್ತಾಂತವನ್ನು ಕೇಳಿ ಆ ದಾನವರನ್ನು ನಾಶಪಡಿಸಬೇಕೆಂದು ಯೋಚಿಸಿ ನೇರವಾಗಿ ನಿಕುಂಭನ ನಿಲಯಕ್ಕೇ ದಯಮಾಡಿಸಿದರು. ನಿಕುಂಭ ನಾರದರನ್ನು ಸ್ವಾಗತಿಸಿ ಸತ್ಕರಿಸಿದ. ಅವರು ರಾಕ್ಷಸೇಂದ್ರನ ವೈಭವವನ್ನೂ ದಿಗ್ವಿಜಯವನ್ನೂ ಹೊಗಳಿ "ಎಲ್ಲಾ ಸರಿ. ಆದರೆ ಹಂಪಿಕ್ಷೇತ್ರದಲ್ಲಿರುವ ವೇದಗುಪ್ತನ ಮುಂದೆ ಮಾತ್ರ ನಿನ್ನಾಟ ಏನೂ ನಡೆಯಲಿಲ್ಲವೇನು? ಅವನನ್ನು ವಶಮಾಡಿಕೊಳ್ಳದೆ ಹೋದ ಮೇಲೆ ನಿನ್ನ ಪೌರುಷವೆಲ್ಲ ವ್ಯರ್ಥ" ಎಂದು ಹೇಳಿ ಅವನನ್ನು ಉಬ್ಬಿಸಿದರು.

ನಿಕುಂಭ ಉರಿಯುತ್ತಿರುವ ಬೆಂಕಿಯಂತೆ ರೋಷದಿಂದ ಪ್ರಜ್ವಲಿಸುತ್ತಾ ಸೈನಿಕರಿಗೆಲ್ಲಾ ಆಜ್ಞೆ ಮಾಡಿ ಅವರೊಡನೆ ತಾನೂ ಹಂಪೆಗೆ ಬಂದ. ಬರಬರುತ್ತಲೇ ಗುಡಿಗೋಪುರಗಳನ್ನೂ ಆಶ್ರಮಗಳನ್ನೂ ಪರ್ಣಶಾಲೆಗಳನ್ನೂ ಲೂಟಿ ಮಾಡುತ್ತಾ, ಸುಡುತ್ತಾ ಅನೇಕರನ್ನು ಸಂಹರಿಸುತ್ತಾ ಜನಗಳಿಗೆ ವಿಚಿತ್ರ ಹಿಂಸೆ ಕೊಡುತ್ತಲೇ ಮುಂದೆ ಸಾಗಿದ. ಆ ದೈತ್ಯ ತಂಡಗಳ ಲೂಟಿಯನ್ನು ತಡೆಯಲಾರದೆ ಜನರು ದಿಕ್ಕು ತೋರದೆ ಬೆಟ್ಟಗುಡ್ಡಗಳಲ್ಲೂ ಬಳ್ಳಿಗಳಲ್ಲಿ, ಪೊದೆಗಳಲ್ಲಿ ಸಂದಿಗೊಂದಿಗಳಲ್ಲೆಲ್ಲಾ ಎಲ್ಲಿ ಸಿಕ್ಕರಲ್ಲಿ ಅಡಗಿಕೊಂಡರು.

ತಪೋವಿಘ್ನ—ಆ ಅಸುರರು ಹೀಗೆಯೇ ಲೂಟಿಮಾಡುತ್ತಾ ಹಂಪೆಗೆ ಬಂದು ವೇದಗುಪ್ತನ ಆಶ್ರಮದ ಬಳಿಗೂ ಬಂದರು. ಆ ಸಮಯದಲ್ಲಿ ವೇದಗುಪ್ತ ತ್ರಿತಾರ ಮಂತ್ರ ಜಪಿಸುತ್ತಾ ಮುಕ್ತಿನೃಸಿಂಹಸ್ವಾಮಿಯ ಸಮೀಪದಲ್ಲೇ ಯೋಗಾರೂಢನಾಗಿ ಕುಳಿತಿದ್ದ. ವೇದಪ್ರಿಯ ಒಂದು ಹಳ್ಳದಲ್ಲಿ ಕುಳಿತು ಮಂತ್ರಜಪ ಮಾಡುತ್ತಿದ್ದ. ಪ್ರಿಯಮೇಧ ಕುಂಭಸಂಸ್ಥನಾಗಿ (ಮಡಕೆಯಲ್ಲಿ ಕುಳಿತು) ಶಿವನನ್ನು ಆರಾಧಿಸುತ್ತಿದ್ದ. ಗುಣವ್ರತ ರುದ್ರಾಕ್ಷಿಮಣಿಗಳಿಂದ ಮುಚ್ಚಿಕೊಂಡು ಪೂಜೆಮಾಡುತ್ತಿದ್ದ. ಧರ್ಮವಾದಿ ವಸ್ತ್ರಗಳನ್ನು ಬಿಟ್ಟು ಮೈಗೆಲ್ಲಾ ವಿಭೂತಿ ಲೇಪಿಸಿಕೊಂಡು ರುದ್ರ ಮಂತ್ರ ಜಪಿಸುತ್ತಿದ್ದ. ಬಹುಮತಿ ನವಭಕ್ತಿ ಸಮನ್ವಿತಳಾಗಿ ಅಂಬಿಕೆಯನ್ನು ಪೂಜಿಸುತ್ತಿದ್ದಳು.

ರಾಕ್ಷಸರು ಮುನ್ನುಗ್ಗಿ ಅವರ ಅನುಷ್ಠಾನವನ್ನು ಕೆಡಿಸಹೋದರು, ಆದರೆ ಅವರೆಲ್ಲ ಅಲ್ಲಲ್ಲೇ ಆ ವೇದಗುಪ್ತಾದಿಗಳ ತೇಜೋಗ್ನಿಯಿಂದ ದಗ್ಧರಾದರು. ಅಳಿದುಳಿದ ಕೆಲವರು ಓಡಿಹೋಗಿ ನಿಕುಂಭನಿಗೆ ಈ ಸುದ್ದಿ ಮುಟ್ಟಿಸಿದರು. ಅವನು ಉರಿದುಬಿದ್ದು ತನ್ನ ಅಮಾತ್ಯರನ್ನು ಆ ಬ್ರಾಹ್ಮಣರ ಮೇಲೆ ಧಾಳಿಮಾಡಲು ಕಳುಹಿಸಿದ. ಅವರು ಮುದ್ಗರ

ಗಳನ್ನೂ ಭಿಂಡಿಪಾಲಗಳನ್ನೂ ಧರಿಸಿ ಮುನಿಗಳನ್ನು ಹೊಡೆಯುವುದಕ್ಕೆ ಹೋಗಿ ಆ ತಪೋಧನರ ತೇಜಸ್ಸಿನಿಂದ ಭಸ್ಮಾವಶೇಷರಾದರು.

ತಪೋವನದಲ್ಲಿ ರಣ ಕೋಲಾಹಲ—ಈ ಸಮಾಚಾರ ಕೇಳಿ ನಿಕುಂಭ ತಾನೇ ಯುದ್ಧಕ್ಕೆ ಹೊರಟು ಆಕಾಶವೇ ಕಾಣದಂತೆ ಬಾಣಗಳ ಮಳೆ ಸುರಿಸಿಬಿಟ್ಟ. ಆದರೆ ಅವೂ ಸಹ ಕ್ಷಣಮಾತ್ರದಲ್ಲಿ ಸುಟ್ಟು ತಿರೋಭಾನವನ್ನೈದಿದುವು. ಆಶ್ಚರ್ಯಮಗ್ನ ರಾದ ನಿಕುಂಭನ ಸೈನಿಕರು ಹುಂಕಾರಮಾಡುತ್ತಾ ಮುನಿಗಳ ತಪಸ್ಸಿಗೇ ವಿಘ್ನಮಾಡ ಬೇಕೆಂದು ಮುನ್ನುಗ್ಗಿದರು. ಅವರ ಕೋಲಾಹಲಧ್ವನಿಯಿಂದ ತುಂಬಿ ಆ ತಪೋ ವನವೇ ಒಂದು ರಣಾಂಗಣದಂತಾಯಿತು. ಇನ್ನು ವೇದಗುಪ್ತನ ಆಟ ಏನೂ ನಡೆಯುವ ಹಾಗಿರಲಿಲ್ಲ.

ಈ ಉತ್ಕಟಪರಿಸ್ಥಿತಿಯನ್ನು ಕಂಡು ಭಕ್ತಸಂರಕ್ಷಣದೀಕ್ಷಿತನಾದ ವಿಶ್ವನಾಥ ಆ ನಿಕುಂಭಾದಿ ದೈತ್ಯರ ಸಂಹಾರಕ್ಕಾಗಿ ನಾನಾ ರೂಪಗಳಿಂದ ಆವಿರ್ಭವಿಸಿದನು. ಹೇಗೆಂದರೆ ವೇದಗುಪ್ತನ ಬಳಿ **ತಾರಕೇಶ್ವರನೂ**, ವೇದಪ್ರಿಯನ ಬಳಿ **ಪಾತಾಳೇಶ್ವರನೂ**, ಪ್ರಿಯ ಮೇಧನ ಹತ್ತಿರ ಕುಂಭೇಶನೂ ಗುಣವ್ರತನ ಸಮೀಪದಿಂದ ರುದ್ರಾಕ್ಷೇಶ್ವರನೂ ಧರ್ಮ ವ್ರತ ಇದ್ದಲ್ಲಿ ಭಸ್ಮೇಶ್ವರನೂ ಆವಿರ್ಭವಿಸಿದರು. ಬಹುಮತಿಯಿಂದ ಆರಾಧಿತಳಾಗಿದ್ದ ಶಕ್ತಿತ್ರಯಾತ್ಮಕಳಾದ ಅಂಬೆ **ನವದುರ್ಗಾ** ರೂಪದಿಂದ ಅಭಿವ್ಯಕ್ತಳಾದಳು. ಆ ನವ ದುರ್ಗಿಯರು ಯಾರೆಂದರೆ—1. ಹಂಸಾರೂಢಳೂ, ಬ್ರಹ್ಮಾಸ್ತ್ರಧಾರಿಣಿಯೂ ಆದ ಬ್ರಾಹ್ಮೀ. 2. ಗರುಡಾರೂಢಳೂ ಶಂಖಚಕ್ರಧಾರಿಣಿಯೂ ಆದ ವೈಷ್ಣವೀ. 3. ವೃಷಭವಾಹನೆಯೂ ತ್ರಿಶೂಲಾದಿಪಾಣಿಯೂ ಆದ ಮಾಹೇಶ್ವರೀ. 4. ಮಯೂರ ವಾಹನೆಯೂ ಶಕ್ತ್ಯಾಯುಧಳೂ ಆದ ಕೌಮಾರೀ. 5. ಐರಾವತಾರೂಢಳೂ ಶಕ್ತಿ ಧಾರಿಣಿಯೂ ಆದ ಇಂದ್ರಾಣೀ. 6. ದಂಷ್ಟ್ರಯುತೆಯಾದ ವಾರಾಹೀ. 7. ಚಾಮುಂಡೇಶ್ವರೀ. (ಇನ್ನಿಬ್ಬರ ಹೆಸರು ಲುಪ್ತವಾಗಿದೆ.)

ನಿಕುಂಭಾದಿಗಳ ವಧೆ—ಹೀಗೆ ಆವಿರ್ಭವಿಸಿದ ಇವರೆಲ್ಲರೂ ಪುನಃ ಅನೇಕ ಮಂದಿ ಉಗ್ರರೂಪರಾದ ಪ್ರಥಮರನ್ನೂ ಭೈರವರನ್ನೂ ಸೃಷ್ಟಿಸಿ ಒಟ್ಟಿಗೆ ದಾನವ ಸೈನ್ಯದ ಮೇಲೆ ಧಾಳಿ ನಡೆಸಿದರು. ಪ್ರಮಥರಿಗೂ ದಾನವರಿಗೂ ರೋಮಹರ್ಷಕವಾದ ಭಯಂಕರ ಯುದ್ಧ ನಡೆಯಿತು. ಅವರು ಪರಸ್ಪರ ವೃಕ್ಷಗಳಿಂದಲೂ ಶಿಲೆಗಳಿಂದಲೂ ಶೂಲ ಪರಿಘ ಪಟ್ಟಿಸ ಭಿಂಡಿಪಾಲ ಪಾಶ ಮುದ್ಗರಗಳಿಂದಲೂ ಬಡಿದಾಡುತ್ತಾ ಹೋರಾ ಡಿದರು. ಬರಬರುತ್ತಾ ಪ್ರಮಥರ ಕೈ ಮೇಲಾಯಿತು. ದಾನವರು ಹಿಮ್ಮೆಟ್ಟಿ ಪಲಾ ಯನಸೂಕ್ತ ಪಡಿಸಲಾರಂಭಿಸಿದರು.

ಪಲಾಯನ ಮಾಡುತ್ತಿದ್ದ ತನ್ನ ಸೈನಿಕರನ್ನು ತಡೆಯುವುದಕ್ಕಾಗಿ ನಿಕುಂಭ ಮುನ್ನುಗ್ಗಿ ಬಂದ. ತಾರಕೇಶ್ವರ ಅವನನ್ನು "ನಿಲ್ಲು, ನಿಲ್ಲು. ಬಾ, ನನ್ನೊಡನೆ ದ್ವಂದ್ವ

ಯುದ್ಧ ಮಾಡಬಾ" ಎಂದು ಕೂಗಿ ತಡೆದು ನಿಲ್ಲಿಸಿಸ್ಪಯುದ್ಧಕ್ಕೆ ಆಹ್ವಾನಿಸಿದ. ಒಂದು ಕಡೆ ನಿಕುಂಭನಿಗೂ ತಾರಕೇಶ್ವರನಿಗೂ ತುಮುಲವಾದ ದ್ವಂದ್ವ ಯುದ್ಧಾರಂಭವಾಗುತ್ತಿರಲು ಇನ್ನೊಂದು ಕಡೆ ನವದುರ್ಗಿಯರು ನಿಕುಂಭನ ನೂರು ಮಕ್ಕಳನ್ನೂ ಸಂಹರಿಸಿ ಅವರ ರಕ್ತವನ್ನು ಹೀರಿಬಿಟ್ಟರು. ಅಷ್ಟು ಹೊತ್ತಿಗೆ ತಾರಕೇಶ ನಿಕುಂಭನೊಡನೆ ಸ್ವಲ್ಪ ಹೊತ್ತು ಹೋರಾಡಿ ಕಡೆಗೆ ಅವನನ್ನು ನೆಲಕ್ಕೆ ಹಾಕಿ ಅಪ್ಪಳಿಸಿಬಿಟ್ಟ. ಮತ್ತೊಂದು ಕಡೆ ಕುಂಭೇಶ್ವರ – ರುದ್ರಾಕ್ಷೇಶ್ವರಾದಿಗಳು ಪ್ರಮಥರ ಸಹಾಯದಿಂದ ದಾನವಚಮುವನ್ನು ಚಲ್ಲಾಪಿಲ್ಲಿ ಮಾಡಿ ಓಡಿಸಿಬಿಟ್ಟರು.

ಕೋಲಾಹಲವೆಲ್ಲ ಶಾಂತವಾದ ಬಳಿಕ ವೇದಗುಪ್ತಾದಿಗಳು ಪಾತಾಳೇಶ್ವರಾಭಿನ್ನನಾದ ತಾರಕೇಶ್ವರಾದಿಗಳನ್ನೂ ನವದುರ್ಗಿಯರನ್ನೂ ಸ್ತುತಿಸಿ ಪೂಜಿಸಿ ಅವರ ಅನುಗ್ರಹದಿಂದ ಇಹದಲ್ಲೂ ಸುಖವನ್ನನುಭವಿಸಿ ಕೊನೆಗೆ ಶಿವನನ್ನು ಸೇರಿದರು.

ಈ ಶಿವಚರಿತ ಅಖಿಲಾರ್ಥದ; ಮತ್ತು ಭವವಾರಿರಾಶಿಗೆ ಪೋತದಂತಿದೆ. ಇದನ್ನು ಪಠನ ಮಾಡುವವನು ಶಿವಪದವನ್ನು ಸೇರುತ್ತಾನೆ.

ಅಧ್ಯಾಯ 94. ವ್ಯೋಮಕೇಶ್ವರ (1)

[94—96 ಈ ಮೂರು ಅಧ್ಯಾಯಗಳಲ್ಲೂ ವ್ಯೋಮಕೇಶ್ವರನಿಗೆ ಸಂಬಂಧಿಸಿದ ಕಥೆಯನ್ನೇ ಹೇಳಿದೆ. ವ್ಯೋಮಕೇಶ್ವರನ ಹೆಸರು 96ನೇ ಅಧ್ಯಾಯದ ಕಡೆಯಲ್ಲಿ ಪ್ರಸಕ್ತವಾಗಿದೆ.

ಪಂಪಾಪತಿ ಗುಡಿಯಲ್ಲಿ ಕನಕಗಿರಿಯ ಗೋಪುರದ ಕಡೆಯಿಂದ ನದೀ ಕಡೆಗೆ ಹೋಗುವಾಗ ಉತ್ತರ ಭಾಗದಲ್ಲಿ ವಾರಿಯಲ್ಲಿ ಒಂದು ದೊಡ್ಡ ಹೊಂಡವಿದೆ. ಇದನ್ನು ರೂಢಿಯಲ್ಲಿ 'ಮನ್ಮಥಕುಂಡ'ವೆಂದು ಕರೆಯುವುದುಂಟು, ಆದರೆ ಇದು ಅಶುದ್ಧ ಅದೇ ನಿಜವಾದ ಮನ್ಮುಖ ತೀರ್ಥ. ದೇವಸ್ಥಾನದ/ರಿಕಾರ್ಡುಗಳಲ್ಲೆಲ್ಲಾ ಮನ್ಮುಖತೀರ್ಥವೆಂಬ ಹೆಸರೇ ಇದೆಯೆಂಬುದು ಗಮನಾರ್ಹವಾದ ವಿಷಯ.• ಇಲ್ಲೇ ದುರ್ಗಿಗುಡಿಯಲ್ಲಿರುವ ಶಕ ೧೧೨೧ನೆಯ 'ಸಿದ್ಧಾರ್ಥಿ ಸಂವತ್ಸರದ (ಕ್ರಿ. ಶ. 1199) ಒಂದು ಶಿಲಾ ಶಾಸನದಲ್ಲೂ ಸಹ 'ಮನ್ಮುಖತೀರ್ಥ' ಎಂಬ ಹೆಸರೇ ಸ್ಪಷ್ಟವಾಗಿ ಲಿಖಿತವಾಗಿದೆ. ಮನ್ಮುಖ ಎಂದರೆ ಮತ್ = ನನ್ನ, ಮುಖ-ಈಶ್ವರನ ಮುಖದಿಂದ ಹುಟ್ಟಿದ ತೀರ್ಥ. ಇದಕ್ಕೆ ಈ ಹೆಸರು ಬರಲು ಕಾರಣವನ್ನು ೧೪೧ನೇ. ಅಧ್ಯಾಯದಲ್ಲಿ ಹೇಳಿದೆ.

ವ್ಯೋಮಕೇಶ್ವರ ಪಂಪಾಪತಿಯ ಗರ್ಭಗುಡಿಯ ಹಿಂಭಾಗದಲ್ಲಿ ಈಗಲೂಇದ್ದಾನೆ–ವಿ.ತೀ.]

ಸಂತಾನವಿಲ್ಲದ ದಂಪತಿಗಳು—ದಕ್ಷಿಣದಲ್ಲಿ **ದ್ವೈವತ** ಎಂಬ ಅದ್ರಿಯುಂಟು. ಆ ಅದ್ರಿಯ ಸಮೀಪದಲ್ಲಿ ಭಾರದ್ವಾಜ ಕುಲೋದ್ಭವನಾದ **ಸುಧರ್ಮ**ನೆಂಬ ವಿಪ್ರೋತ್ತಮನಿದ್ದ. ಹೆಸರಿಗೆ ಅನ್ವರ್ಥವಾಗಿ ಆತ ಬಹಳ ಸದಾಚಾರಿ, ದೇವತಾತಿಥಿ ಪೂಜಕ, ವೇದಾಧ್ಯಯನ ಸಂಪನ್ನ ಮತ್ತು ಪಂಚಯಜ್ಞ ಪರಾಯಣ. ಅವನಿಗೆ ಅನುರೂಪಳಾದ ಮಹಾಸಾಧ್ವಿಯಾದ **ಸುದೇಹಾ** ಎಂಬ ಪತಿಪರಾಯಣೆಯು ಅವನ ಸದ್ಗೃಹಿಣಿಯಾಗಿದ್ದಳು.

ಆ ದಂಪತಿಗಳಿಗೆ ಸಕಲ ಭಾಗ್ಯಗಳಿದ್ದರೂ ಗೃಹಸ್ಥರಿಗೆ ಮುಖ್ಯವಾಗಿ ಇರಬೇಕಾದ ಸಂತಾನಭಾಗ್ಯವೇ ಇರಲಿಲ್ಲ. ಆ ದಂಪತಿಗಳಿಗೆ ಇದೊಂದು ಭಾರಿ ಚಿಂತೆಯಾಗಿತ್ತು. ಒಂದುದಿನ ಸುದೇಹೆಯ ಜೊತೆಯವರು ಮಾತುಬಂದಾಗ

ಸುತೋ ನಾಸ್ತಿ ಗೃಹೇ ಯಸ್ಯ ಸ್ಮಶಾನಸದೃಶಂ ಭವೇತ್

ಎಂದರೆ ಯಾರ ಮನೆಯಲ್ಲಿ ಸುತನಿಲ್ಲವೋ ಅದು ಸ್ಮಶಾನಕ್ಕೆ ಸಮಾನ ಎಂದು ಹೀಯಾಳಿಸಿ ಮಾತಾಡಿದರು. ಸುದೇಹೆಗೆ ಈ ವ್ಯಂಗ್ಯೋಕ್ತಿ ಕೇಳಿ ಬಹಳ ನೋವಾಯಿತು. ಅವಳು ತನ್ನ ಪತಿಗೆ ಬಲಾತ್ಕಾರಮಾಡಿ ತನ್ನ ತಮ್ಮನ ಮಗಳು **ವ್ಯೋಮಾ** ಎಂಬುವಳನ್ನು ತಂದು ಮದುವೆ ಮಾಡಿಸಿದಳು. ವ್ಯೋಮಾ ಕೂಡ ದೈವಭಕ್ತಳು, ಸುಶೀಲೆ, ಪತಿಗೆ ಅನುಕೂಲಳೂ ಆಗಿದ್ದಳು.

ಸೇವೆಗಾಗಿ ಹಂಪೆಗೆ ಆಗಮನ—ಒಂದು ದಿನ ವ್ಯೋಮಾ ತನ್ನ ಪತಿಯನ್ನು ಕುರಿತು—"ಹಂಪೆ ದಕ್ಷಿಣ ಕಾಶೀ. ವಿರೂಪಾಕ್ಷನೇ ವಿಶ್ವನಾಥ. ತುಂಗಭದ್ರೆಯೇ ತ್ರಿಪಥಗಾ. ಆದ್ದರಿಂದ ಅಲ್ಲಿಗೆ ಹೋಗಿ ಸಂತಾನಾರ್ಥವಾಗಿ ಮಹಾದೇವನನ್ನು ಆರಾಧಿಸೋಣ" ಎಂದಳು. ಅದಕ್ಕೆ ಅನುಮತಿಸಿ ಸುಧರ್ಮ ತನ್ನ ಇಬ್ಬರು ಪತ್ನಿಯರನ್ನೂ ಕರೆದುಕೊಂಡು ಹಂಪೆಗೆ ಬಂದು ವಿರೂಪಾಕ್ಷನ ಸೇವೆ ಆರಂಭಮಾಡಿದ.

ಅಧ್ಯಾಯ 95. ವ್ಯೋಮಕೇಶ್ವರ (ii)

ವ್ಯೋಮೆಯ ಶಿವಾರಾಧನೆ—ವ್ಯೋಮಾ ನಿತ್ಯವೂ ತ್ರಿಕಾಲ ಸ್ನಾನಮಾಡಿ ಮಣ್ಣಿನ ನೂರೆಂಟು ಲಿಂಗಗಳನ್ನು ಮಾಡಿ ವಿಧಿಪೂರ್ವಕ ಅರ್ಚಿಸಿ ವಿಸರ್ಜಿಸುತ್ತಿದ್ದಳು. "ಪ್ರತ್ಯಕ್ಷವಾದ ಬಹಿರ್ಲಿಂಗವೇ ಇರುವಾಗ ಈ ಮಣ್ಣಿನ ಲಿಂಗಗಳೇಕೆ?"ಎಂದು ಸುದೇಹೆ ಕೇಳಲು ವ್ಯೋಮಾ ತನ್ನ ಬಾಲ್ಯದ ಕಥೆ ವಿವರಿಸುತ್ತಾ "ನಾನು ಚಿಕ್ಕವಳಾಗಿದ್ದಾಗ ನಮ್ಮ ತಂದೆ **ವಾಮದೇವ**ನ ಮನೆಗೆ **ನಂದಿಮುನಿ** ಬಂದಿದ್ದರು. ಅವರು ನಮ್ಮ ತಂದೆಗೆ ಈ ಪೂಜಾವಿಧಾನವನ್ನು ಉಪದೇಶಿಸಿ ತನ್ನ ದೇಹವೆಲ್ಲಾ ಅಗಣಿತ ಲಿಂಗಗಳಿಂದ ತುಂಬಿರುವುದನ್ನು ತೋರಿಸಿ ಅವರ ಪ್ರಭಾವವನ್ನರುಹಿದ್ದರು. ಇದನ್ನು ನಿತ್ಯವೂ ತಪ್ಪದಂತೆ ಮಾಡಿದರೆ ಸರ್ವಾಭೀಷ್ಟ ಸಿದ್ಧಿಯಾಗುವುದೆಂದು ಹೇಳಿ ನಮ್ಮ ತಂದೆ ಆ ವಿಧಾನವನ್ನು ನನಗೂ ಹೇಳಿಕೊಟ್ಟಿದ್ದರು" ಎಂದು ಹೇಳಿದಳು.

ಸಂತಾನ ಪ್ರಾಪ್ತಿ—ವ್ಯೋಮಾಳ ಪೂಜೆ ಫಲಿಸಿತು. ಅವಳು ಗರ್ಭಧಾರಣ ಮಾಡಿ ಸಕಾಲದಲ್ಲಿ ಸತ್ಪುತ್ರನನ್ನು ಪ್ರಸವಿಸಿದಳು. ಸುಧರ್ಮನ ಸಂತೋಷಕ್ಕೆ ಪಾರವೇ ಇರಲಿಲ್ಲ. ಬ್ರಾಹ್ಮಣರಿಗೆ ಗೋ ಭೂ ತಿಲಹಿರಣ್ಯಗಳನ್ನು ದಾನಮಾಡಿ ಮಗನಿಗೆ ಜಾತಕರ್ಮ-ನಾಮಕರಣಗಳನ್ನೆಲ್ಲಾ ಸಕ್ರಮವಾಗಿ ನಡೆಸಿ ತನ್ನ ಮಗ ಧರ್ಮದಿಂದ ಬೆಳೆ

ಯತಕ್ಕವನೆಂದು ತಿಳಿದು ಅವನಿಗೆ **ಧರ್ಮವರ್ಧನ**ನೆಂದು [1] ಹೆಸರಿಟ್ಟ. ವ್ಯೋಮಾ ನಿಶ್ಚಲಭಾವದಿಂದ ಆ ಕೂಸನ್ನು ಸುದೇಹೆಗೇ ಒಪ್ಪಿಸಿ 'ಇದು ನಿನ್ನ ಮಗುವೇ' ಎಂದು ನಿಷ್ಕಪಟವಾಗಿ ಹೇಳಿದರೂ ಸುದೇಹೆಗೆ ಸ್ತ್ರೀ ಸಾಮಾನ್ಯವಾದ ಸವತಿ ಮಾತ್ಸರ್ಯತಪ್ಪಲಿಲ್ಲ.

ಅಧ್ಯಾಯ 96. ವ್ಯೋಮಕೇಶ್ವರ (iii)

ಸವತಿಮಾತ್ಸರ್ಯ—ಸುದೇಹೆ ಮೇಲೆಮೇಲೆ ಪ್ರೀತಿನಟಿಸುತ್ತಿದ್ದರೂ ಹೊಟ್ಟೆ ಒಳಗೆ ಕಿಚ್ಚು ತುಂಬಿತ್ತು. ಜನಗಳು ಮಗುವನ್ನು ಮುದ್ದಿಸಿದಂತೆ ಇವಳ ಹೊಟ್ಟೆಯಲ್ಲಿ ಬೆಂಕಿ ಬೀಳುತ್ತಿತ್ತು. ಅವಳು ಛಲ ಸಾಧಿಸುವುದಕ್ಕೆ ಸಮಯ ಎದುರು ನೋಡುತ್ತಿದ್ದಳು. ಒಂದುದಿನ ರಾತ್ರಿ ಧರ್ಮವರ್ಧನ ಮಲಗಿ ನಿದ್ರಿಸುತ್ತಿದ್ದ. ಹತ್ತಿರದಲ್ಲಿ ಯಾರೂ ಇರಲಿಲ್ಲ. ಈ ಸುಸಮಯವನ್ನು ನೋಡಿ ಸುದೇಹೆ ಆ ಮಗುವನ್ನು ತುಂಡು ತುಂಡು ಮಾಡಿ ಅದನ್ನು **ಮನ್ಮಖಕುಂಡ**ಕ್ಕೆ ತೆಗೆದುಕೊಂಡು ಹೋಗಿ ಅದರಲ್ಲಿ ಬಿಸಾಡಿ ಹಿಂದಿರುಗಿ ಬಂದು ಏನೂ ಅರಿಯದವಳಂತೆ ಮಲಗಿಕೊಂಡು ಬಿಟ್ಟಳು.

ವ್ಯೋಮಕೇಶ್ವರನ ಪ್ರಾದುರ್ಭಾವ—ಈ ಸಂಗತಿಯೊಂದನ್ನೂ ಅರಿಯದ ವ್ಯೋಮಾ ನಿತ್ಯದಂತೆ ಎದ್ದು ಅಷ್ಟೋತ್ತರಶತ ಲಿಂಗಾರ್ಚನೆಯಲ್ಲಿ ತೊಡಗಿದಳು. ಅವಳ ದಾಸಿ ಧರ್ಮವರ್ಧನನನ್ನು ಎಬ್ಬಿಸುವುಕ್ಕೆ ಹೋದಾಗ ಮಗುವನ್ನೇ ಕಾಣದೆ, ಹಾಸಿಗೆಯೆಲ್ಲಾ ರಕ್ತಮಯವಾಗಿದ್ದುದನ್ನು ನೋಡಿ ಗಾಬರಿಯಾಗಿ ಕಿರಿಚಿಕೊಂಡಳು. ಈ ಸುದ್ದಿ ತಿಳಿದಾಗ ವ್ಯೋಮೆಗೂ ದಿಕ್ಕು ತೋರದಂತಾಯಿತು. ಆದರೂ ಹೇಗೋ ಮನಸ್ಸಿಗೆ ವೈರಾಗ್ಯ ಹೇಳಿಕೊಂಡು ಧೈರ್ಯತಾಳಿ ಸುಮ್ಮನಾದಳು. ಪ್ರಾರಂಭಿಸಿದ್ದ ಲಿಂಗಪೂಜೆಯನ್ನಾದರೂ ಮುಗಿಸಬೇಕೆಂದು ಸಂಕಲ್ಪಮಾಡಿಕೊಂಡು ಆ ಪೂಜೆ ಮುಗಿಸಿ ಲಿಂಗಗಳನ್ನು ವಿಸರ್ಜಿಸಿ ಮನ್ಮಖ ಕುಂಡದಲ್ಲಿ ಹಾಕಿ ಹಿಂದಕ್ಕೆ ಬರುತ್ತಿದ್ದಳು. ಅಷ್ಟರಲ್ಲೇ ಅವಳಿಗೆ "ಅಮ್ಮಾ, ನನ್ನನ್ನು ಜೋಡಿಸಿದರೆ ನಾನು ಬದುಕುತ್ತೇನೆ" ಎಂದು ತನ್ನ ಮಗನೇ ಕೂಗಿದ ಹಾಗಿ ಧ್ವನಿ ಕೇಳಿಸಿತು. ಹತ್ತಿರ ಹೋಗಿ ನೋಡಲು ಮಗುವಿನ ದೇಹದ ತುಂಡುಗಳು ಕಾಣಿಸಿದುವು. ಅವನ್ನೆಲ್ಲಾ ಜೋಡಿಸಲು **ವ್ಯೋಮಕೇಶ್ವರ**ನೆಂಬ ಶಿವಮೂರ್ತಿ [2] ಆವಿರ್ಭವಿಸಿದ.

ಆ ಸ್ವಾಮಿ ವ್ಯೋಮೆಯ ಮನಸ್ಸು ಪರೀಕ್ಷಿಸುವುದಕ್ಕಾಗಿ ಅವಳಿಗೆ "ನಿನ್ನ ಮಗನನ್ನು ತುಂಡುಮಾಡಿದ ಆ ದುಷ್ಟ ಸವತಿಯನ್ನು ಈ ಕ್ಷಣವೇ ಸಂಹರಿಸಿಬಿಡುವೆನು, ಹೇಳು" ಎಂದನು. ಅದಕ್ಕೆ ವ್ಯೋಮಾ ವ್ಯೋಮಕೇಶ್ವರನನ್ನು ಸ್ತುತಿಸಿ "ನಿರ್ಗತಿಕ

---

1 ವರ್ಧನ ಎಂದರೆ ಬೆಳೆಯುವಿಕೆ. ವೃಧ್ (ವರ್ಧ್) ಧಾತು.

2 ವ್ಯೋಮಕೇಶನೆಂಬುದು ಶಿವನ ಹೆಸರೇ. ಅಮರ ನೋಡಿ—ವ್ಯೋಮಕೇಶೋ ಭವೋ ಭೀಮಃ ಸ್ಥಾಣೂ ರುದ್ರ ಉಮಾಪತಿಃ ||

ಕ್ಕಾದ ನನ್ನ ಸವತಿಗೆ ಮೊದಲು ಮುಕ್ತಿಯನ್ನನುಗ್ರಹಿಸು. ನಿನಗೆ ನನ್ನ ಜ್ಞಾಪಕಾರ್ಥ ವ್ಯೋಮಕೇಶ್ವರನೆಂದೇ ಹೆಸರಾಗಲಿ. ನೀನು ಇಲ್ಲೇ ಇದ್ದು ಭಕ್ತರನ್ನುದ್ಧರಿಸು" ಎಂದು ಪ್ರಾರ್ಥಿಸಿಕೊಂಡಳು. ಹಾಗೇ ಆಗಲೆಂದು ವರ ಕೊಟ್ಟು ಅವಳ ಮಗನನ್ನೂ ಬದುಕಿಸಿ ಆ ವ್ಯೋಮಕೇಶ ಅಂತರ್ಧಾನನಾದ. ವ್ಯೋಮಾ ಆ ಸ್ವಾಮಿಯನ್ನು ಆರಾಧಿಸಿ ಶಿವ ಲೋಕವನ್ನು ಸೇರಿದಳು.

ಕಲಿಕಲ್ಮಶನಾಶಕವಾದ ಈ ಮಹಿಮೆಯನ್ನು ಯಾರು ಪಠಿಸುವರೋ ಅವರು ಪಾಪಮುಕ್ತರಾಗಿ ವ್ಯೋಮಕೇಶನ ಪ್ರಸಾದದಿಂದ ಧ್ರುವಪದವನ್ನು ಹೊಂದುತ್ತಾರೆ.

ಅಧ್ಯಾಯ 97. ಬ್ರಹ್ಮಕುಂಡ

[ಬ್ರಹ್ಮಕುಂಡವು ಹೇಮಕೂಟದಲ್ಲಿದೆಯೆಂದೂ ಮಹಾಮಹಿಮೋಪೇತವಾದುದೆಂದೂ ಮುಂದಿನ ಭಾಗದಿಂದ ಗೊತ್ತಾಗುತ್ತದೆ. 131ನೇ ಅಧ್ಯಾಯದಿಂದ ಮನ್ಮುಖತೀರ್ಥವೇ ಬ್ರಹ್ಮ ಕುಂಡವೆಂದು ಗೊತ್ತಾಗುತ್ತದೆ. 131ನೇ ಅಧ್ಯಾಯವನ್ನೂ ಓದಿ ನೋಡಿ.—ವಿ. ಶೀ.]

ಬ್ರಹ್ಮಕುಂಡದ ಮಹಿಮೆ—ಈ ಬ್ರಹ್ಮಕುಂಡ ಹೇಮಕೂಟದಲ್ಲಿದೆ. ಸರ್ವ ದಾರಿದ್ರ್ಯಕ್ಕೂ ಮಹೌಷಧ. ಬ್ರಹ್ಮಹತ್ಯಾದಿ ಅಯುತ ದೋಷಗಳೂ ಇದರಿಂದ ನಾಶವಾಗುವುವು. ಇತರ ತೀರ್ಥಗಳು ಅಧ್ವರಗಳು ತಪಸ್ಸುಗಳು ಇದರ ಮುಂದೆ ಏನು ಮಾಡಬಲ್ಲವು? ಇದರ ಸಕೃತ್ ಸ್ನಾನ[1]ವೂ ಕೈಲಾಸಪ್ರಾಪ್ತಿಗೆ ಸಾಧನ. ಬ್ರಹ್ಮಕುಂಡ ದಿಂದ ತೆಗೆದ ವಿಭೂತಿ ಮಹಾಫಲಪ್ರದ. ಆ ವಿಭೂತಿ ಊದಿದರೆ ಭೂತಪ್ರೇತಗಳೂ ನಾಶವಾಗುವುವು. ಬ್ರಹ್ಮ ಇಲ್ಲಿ ಯಜ್ಞ ಮಾಡಿ ಶಿವಶಾಪದಿಂದ ನಿರ್ಮುಕ್ತನಾದ.

ಬ್ರಹ್ಮ-ವಿಷ್ಣುಗಳಿಗೆ ಸ್ಪರ್ಧೆ—ಒಂದು ಸಲ ಬ್ರಹ್ಮ-ವಿಷ್ಣುಗಳಿಗೆ ನಾನು ಹೆಚ್ಚು ನಾನು ಹೆಚ್ಚು ಎಂದು ವಿವಾದ ಹುಟ್ಟಿತು. ಅವರಿಬ್ಬರೂ ಏನು ಸ್ಪರ್ಧೆ ಇಡಬೇಕೆಂದು ಯೋಚಿಸುತ್ತಿರುವಾಗ ಅವರೆದುರಿಗೆ ಒಂದು ಸ್ವಯಂಜ್ಯೋತಿರ್ಲಿಂಗ ಪ್ರಾದುರ್ಭವಿಸಿತು. ಆಗ ಬ್ರಹ್ಮ ವಿಷ್ಣುವಿಗೆ "ನಾನು ಮೇಲಿಂದ ಹುಡುಕುತ್ತೇನೆ. ನೀನು ಕೆಳಗಿನಿಂದ ಹುಡುಕುತ್ತಾ ಬಾ. ಯಾರು ಮೊದಲು ಇದರ ಆದ್ಯಂತವನ್ನು ಕಂಡುಹಿಡಿಯುವರೋ ಅವನೇ ಗೆದ್ದಹಾಗೆ" ಎಂದು ಹೇಳಿದ. ಇಬ್ಬರೂ ಅದಕ್ಕೊಪ್ಪಿದರು. ವಿಷ್ಣು ವರಾಹ ನಾಗಿ ಕೆಳಮುಖವಾಗಿ ಹುಡುಕಿಕೊಂಡು ಹೊರಟ. ಎಷ್ಟು ದೂರ ಹುಡುಕಿಕೊಂಡು ಹೋದರೂ ಲಿಂಗದ ಮೂಲ ಸಿಗಲಿಲ್ಲ. ಅವನು ಸೋತು ಹಿಂದಿರುಗಿದ.

ಬ್ರಹ್ಮನಿಗೆ ರುದ್ರಶಾಪ—ಮೇಲುಭಾಗದಿಂದ ಹೊರಟ ವಿರಿಂಚನಿಗೂ ಲಿಂಗದ ಬುಡ ಸಿಕ್ಕಲಿಲ್ಲ. ಆದರೂ ವಿಜಯಾಕಾಂಕ್ಷೆಯಿಂದ ವಿಷ್ಣುವಿನೊಡನೆ ತಾನು ಲಿಂಗದ ಬುಡ ಕಂಡುಬಂದನೆಂದು ಸುಳ್ಳು ಸುಳ್ಳೇ ಹೇಳಿದ. ಆ ಸುಳ್ಳುಮಾತನ್ನು ಕೇಳಿ ರುದ್ರ

---

1 ಸಕೃತ್ = ಒಂದು ಸರಿ.

ಅಜನಿಗೆ "ಹೇ ಧಾತಃ, ನೀನು ಸುಳ್ಳು ಹೇಳಿದ್ದರಿಂದ ನಿನಗೆ ಪೂಜೆಯೇ ಇಲ್ಲದೆ ಹೋಗಲಿ" ಎಂದು ಶಾಪಕೊಟ್ಟ. ಚತುರ್ಮುಖ ಹೆದರಿ ಬೇಡಿಕೊಂಡಾಗ ಪಶುಪತಿ ಅವನಿಗೆ "ಹೇಮಕೂಟದಲ್ಲಿ ಯಜ್ಞಾನುಷ್ಠಾನ ಮಾಡಿದರೆ ನಿನ್ನ ಶಾಪ ಹೋಗುತ್ತದೆ" ಎಂದು ವಿಶಾಪಕೊಟ್ಟ.

ಬ್ರಹ್ಮ ಯಜ್ಞ ಮಾಡಿದ್ದು.—ರುದ್ರನ ಮಾತಿನಂತೆ ಹಿರಣ್ಯಗರ್ಭ ಹೇಮಕೂಟದಲ್ಲಿ ಒಂದು ಯಜ್ಞಕುಂಡ ರಚಿಸಿ ದೀಕ್ಷಾಬದ್ಧನಾಗಿ 88 ಸಾವಿರ ವರ್ಷ ಇಲ್ಲಿ ಪೌಂಡರೀಕಾದಿ ಸಕಲ ಯಜ್ಞಗಳನ್ನೂ ಮಹಾದೇವನ ಪ್ರೀತ್ಯರ್ಥ ಮಾಡಿದನು. ಅದರಿಂದ ಪರಮೇಶ್ವರ ಪ್ರೀತನಾಗಿ "ಈಗ ನೀನು ದೋಷನಿರ್ಮುಕ್ತನಾದಿ. ಇನ್ನು ಮೇಲೆ ಶ್ರೌತಸ್ಮಾರ್ತಕರ್ಮಗಳಲ್ಲಿ ನಿನಗೆ ಪೂಜೆಯಾಗುತ್ತದೆ. ಆದರೆ ನಿನ್ನ ಮೂರ್ತಿ ಪೂಜೆ ಮಾತ್ರ ಆಗುವುದಿಲ್ಲ" ಎಂದು ವರಕೊಟ್ಟ. ಅಂದಿನಿಂದ ಈ ತೀರ್ಥ ಬಹಳ ಪವಿತ್ರವಾಯಿತು. ಅನೇಕ ದೇವತೆಗಳೂ ಮಹರ್ಷಿಗಳೂ ಇಲ್ಲಿ ವಿಧಾನ ಪೂರ್ವಕ ಯಾಗಮಾಡಿ ಸಿದ್ಧಿಪಡೆದರು. ಆದ್ದರಿಂದ ಮುಮುಕ್ಷುಗಳಾದ ಮರ್ತ್ಯರೂ ಇಲ್ಲಿ ಯಜ್ಞ ಮಾಡುತ್ತಾರೆ.

ಈ ಕಥೆ ಸಕಲ ಸಂಸೃತಿನಾಶಕರ. ಇದರ ಪಠನದಿಂದ ಶಿವಪದ ಪ್ರಾಪ್ತ ವಾಗುತ್ತದೆ.

ಅಧ್ಯಾಯ 98. ಭುವನೇಶ್ವರೀ

[ಭುವನೇಶ್ವರಿಯ ವಿಗ್ರಹ ಪಂಪಾಪತಿ ಗುಡಿಯ ಆವರಣದಲ್ಲೇ ಉತ್ತರದ ಕಡೆಗೆ ಪಂಪಾ ದೇವಿಯ ಮಗ್ಗುಲಿಗೆ ಇದೆ. ಈ ಗುಡಿ ಬಹಳ ಪ್ರಾಚೀನವಾದುದೆಂದು ಇತಿಹಾಸ ಪರಿಶೋಧಕರು ಅಭಿಪ್ರಾಯಪಟ್ಟದ್ದಾರೆ. ಈ ದೇವಿಯನ್ನು ಆರಾಧಿಸಿಯೇ ವಿದ್ಯಾರಣ್ಯರು ಸುವರ್ಣವೃಷ್ಟಿ ಸುರಿಸಿದರೆಂದು ಹೇಳುತ್ತಾರೆ—ವಿ.ಶೀ.]

ಭುವನೇಶ್ವರಿಯ ವೃತ್ತಾಂತ.—ಹಿಂದೆ ಪಾರ್ವತೀದೇವಿ ಪರಶಿವನ ಅದ್ಭುತ ಶಕ್ತಿಯನ್ನು ನೋಡಲಿಚ್ಛಿಸಿದಳು. ಆಗ ಶೂಲಿ ಅವಳಿಗೆ ಜ್ಞಾನ ಚಕ್ಷುಸ್ಸು ಕೊಟ್ಟು ತನ್ನ ಅಪಾರ ಶಕ್ತಿಯನ್ನು ತೋರಿಸಿದ. ಅದನ್ನು ಕಂಡು ಪಾರ್ವತಿ ಭಕ್ತಿಪರವಶಳಾಗಿ ದೇವನನ್ನು ಸ್ತುತಿಸಿ ಆ ದಿವ್ಯ ರೂಪವನ್ನು ಉಪಸಂಹರಿಸುವಂತೆಯೂ ತನಗೆ ಅವನಲ್ಲಿ ನಿಶ್ಚಲವಾದ ಭಕ್ತಿಯುಂಟಾಗುವಂತೆಯೂ ಅನುಗ್ರಹಿಸಬೇಕೆಂದು ಕೇಳಿಕೊಂಡಳು. ಅದಕ್ಕೆ ಸಾಂಬಶಿವ ಅವಳಿಗೆ ಮನ್ಮುಖಕುಂಡದಲ್ಲಿ ಸ್ನಾನಮಾಡಿ ತನ್ನನ್ನು ಕುರಿತು ತಪಸ್ಸುಮಾಡುವಂತೆ ಹೇಳಿದ.

ಅದರಂತೆ ಆಕೆ ಘೋರ ತಪಸ್ಸುಮಾಡಲು ವಿರೂಪಾಕ್ಷ ಪ್ರತ್ಯಕ್ಷನಾಗಿ ಅವಳಿಗೆ ತನ್ನ ಸಮೀಪದಲ್ಲೇ ಆಕಲ್ಪಾಂತವಾಗಿದ್ದುಕೊಂಡು ಭಕ್ತರಿಗೆ ಅನುಗ್ರಹ ಮಾಡುತ್ತಾ **ಭುವನೇಶ್ವರೀ** ಎಂದು ಪ್ರಸಿದ್ಧಳಾಗುವಂತೆ ಅನುಗ್ರಹಿಸಿದ.

ಈ ರೀತಿ ಕ್ಷೇತ್ರಪಾಲ ಹೇಳಿದ ಸಮಾಚಾರಗಳನ್ನು ಕೇಳಿ ಬಹಳ ಸಂತುಷ್ಟರಾದ ಸಪ್ತರ್ಷಿಗಳು ವಿರೂಪಾಕ್ಷನನ್ನೂ ದೇವಿಯನ್ನೂ ಷೋಡಶೋಪಚಾರಗಳಿಂದ ಅರ್ಚಿಸಿ ಕೃತಾರ್ಥರಾದರು. ಪವಿತ್ರವಾದ ಈ ಆಖ್ಯಾನ ಹೇಳಿ ಕೇಳುವವರಿಗೆ ಸರ್ವಸಿದ್ಧಿ ಯಾಗುತ್ತದೆ.

ಇಂತು ಸ್ಕಾಂದಪುರಾಣದ ಹೇಮಕೂಟ ಖಂಡದಲ್ಲಿ ಪಂಪಾ ಮಾಹಾತ್ಮ್ಯದಲ್ಲಿ ವಿಷ್ಣುತೀರ್ಥಪ್ರೋಕ್ತವಾದ ಕನ್ನಡ ಭಾವಾನುವಾದದಲ್ಲಿ

ಭುವನೇಶ್ವರೀ ಮಹಿಮಾನುವರ್ಣನವೆಂಬ

98ನೇ ಅಧ್ಯಾಯ ಸಮಾಪ್ತ.

ಪೂರ್ವಭಾಗ ಸಮಾಪ್ತ

ನವವೃಂದಾವನಸ್ಥಸ್ಯ ವಿಷ್ಣುತೀರ್ಥಸ್ಯ ಸೇವಯಾ ।
ತೃಪ್ಯೇತಾಂ ವಾಙ್ಮನೋದೇವೌ ಪಾರ್ವತೀಪರಮೇಶ್ವರೌ ॥

ಪಂಪಾಮಾಹಾತ್ಮ್ಯ

ಮಧ್ಯಭಾಗ--ಪೂರ್ವಾರ್ಧ

99. (1) ಹೇಮಕೂಟದರ್ಶನ

ಈ ಪೂರ್ವಾರ್ಧದಲ್ಲಿ ಒಟ್ಟು ೩೩ ಅಧ್ಯಾಯಗಳಿವೆ. ಇದನ್ನು ಮೂರು ಭಾಗವಾಗಿ ವಿಂಗಡಿಸಬಹುದು. (a) ಮೊದಲ ಏಳರಲ್ಲಿ ಸಪ್ತರ್ಷಿಗಳ ಕ್ಷೇತ್ರನಿವಾಸದ ವರ್ಣನೆ. (b) ಮುಂದಿನ ಎಂಟರಲ್ಲಿ ಹಂಪೆಕ್ಷೇತ್ರದ ದ್ವಾರೋಪದ್ವಾರಗಳ ಸಂಕ್ಷಿಪ್ತ ವರ್ಣನೆ. (c) ಉಳಿದ ಹದಿನೇಳರಲ್ಲಿ ಸಣ್ಣಪುಟ್ಟ ತೀರ್ಥಗಳ ವರ್ಣನೆ. ಈ ಮಧ್ಯೆ ವಾಸಿಷ್ಠ ತೀರ್ಥದ ಕಥೆ ಹೇಳುವಾಗ ಹರಿಶ್ಚಂದ್ರನ ಕಥೆಯನ್ನು ಪ್ರಸಂಗವಶಾತ್ ವಿಸ್ತಾರವಾಗಿ ಹದಿನಾರು ಅಧ್ಯಾಯಗಳಲ್ಲಿ ಹೇಳಲಾಗಿದೆ.

ಮುದ್ರಿತವಾಗಿರುವ ಮೂಲ (ಸಂಸ್ಕೃತ) ಮಾಹಾತ್ಮ್ಯದಲ್ಲಿ ಮಧ್ಯಭಾಗದ ಪೂರ್ವಾರ್ಧ ಉತ್ತರಾರ್ಧಗಳ ಹಾಗೂ ಉತ್ತರಭಾಗದ ಅಧ್ಯಾಯಗಳಿಗೆಲ್ಲಾ ಬೇರೆ ಬೇರೆ ಸಂಖ್ಯೆಯನ್ನೇ ಕೊಟ್ಟಿದೆ. ಇದರಿಂದ ಪಾಠಕರಿಗೆ ಸ್ವಲ್ಪ ಭ್ರಮೆಯುಂಟಾಗಬಹುದೆಂದು ಈ ಗ್ರಂಥದಲ್ಲಿ ಅಧ್ಯಾಯ ಸಂಖ್ಯೆಯನ್ನು ಉದ್ದಕ್ಕೂ ಮುಂದರಿಸಿಕೊಂಡೇ ಹೋಗಲಾಗಿದೆ. ಸಂಸ್ಕೃತ ಗ್ರಂಥದ ಅಧ್ಯಾಯ ಸಂಖ್ಯೆಯನ್ನು ಕಂಸಗಳಲ್ಲಿ ತೋರಿಸಿದೆ.]

ಸೂತಶೌನಕರ ಪ್ರಶ್ನೋತ್ತರ—ಶೌನಕಾದಿಗಳು ಸೂತರನ್ನು ಕುರಿತು "ಸೂತ, ಮಹಾಪ್ರಾಜ್ಞ ! ವಿರೂಪಾಕ್ಷನ ದಿವ್ಯವಾದ ನಾನಾವಿಧ ಕಥೆಗಳನ್ನು ವರ್ಣಿಸುವ ತಮ್ಮ ವಾಕ್ಯಾಮೃತ ಪಾನಮಾಡಿ ನಮ್ಮ ಮತಿ ಚರಿತಾರ್ಥವಾಯಿತು. ಈ ಮಾಹಾತ್ಮ್ಯ ಶ್ರವಣದಿಂದ ನಮಗೆ ಬ್ರಹ್ಮಾನಂದಕ್ಕಿಂತಲೂ ನೂರರಷ್ಟು ಆನಂದವಾಗಿದೆ. ಆ ಸಪ್ತಮಹಾಮುನಿಗಳು ಮುಂದೇನು ಮಾಡಿದರು ? ಅದನ್ನು ತಿಳಿಸಬೇಕು" ಎಂದು ಬಿನ್ನವಿಸಿಕೊಂಡರು.

ಅದಕ್ಕೆ ಸೂತರು ಹೀಗೆ ಉತ್ತರ ಹೇಳಿದರು—ಯೋಗ್ಯ ಶ್ರೋತೃಗಳು ಸಿಕ್ಕರೆ ಹೇಳುವವರಿಗೂ ಉತ್ಸಾಹ ಉಕ್ಕುತ್ತದೆಯಲ್ಲವೆ ! ನನಗೂ ಉತ್ಸಾಹ. ಹೇಳುವೆನು, ಕಿವಿಗೊಟ್ಟಾಲಿಸಿರಿ. ಸನತ್ಕುಮಾರನೂ ನಿಮ್ಮಂತೆಯೇ ಸ್ಕಂದನನ್ನು [1] ಪ್ರಶ್ನೆ ಮಾಡಿದಾಗ ಸ್ಕಂದ ಆ ಕಥೆಯನ್ನು ಹೀಗೆ ಮುಂದುವರಿಸಿದನು.

ಹೇಮಕೂಟಕ್ಕೆ ಆಗಮನ—ಸಪ್ತರ್ಷಿಗಳು ಹಿಮವತ್ಪ್ರಾಂತದಲ್ಲಿದ್ದ ಭದ್ರ

---

1 ಪೂರ್ವಭಾಗದ 1–2ನೇ ಅಧ್ಯಾಯ ನೋಡಿ.

ಶಿಲಾತೀರ್ಥದಲ್ಲಿ ಸ್ನಾನಮಾಡಿಕೊಂಡು ಆ ತೀರ್ಥದ ಅಪ್ಪಣೆ ಪಡೆದು ಆಕಾಶಮಾರ್ಗದಿಂದ ಹೇಮಕೂಟಕ್ಕೆ ಬಂದರು.[1] ಅವರು ಬರುತ್ತಿರುವುದನ್ನು ಕಂಡು ಕೆಳಗೆ ತಪಸ್ಸು ಮಾಡುತ್ತಾ ಕುಳಿತಿದ್ದ ಮುನಿಗಳೆಲ್ಲರು ಅವರಿಗೆ ಇದ್ದಲ್ಲಿಂದಲೇ ವಂದಿಸಿದರು.

100. (2) ಹಂಪೆಪ್ರವೇಶ

ತುಂಗಭದ್ರಾ ಸ್ನಾನ—ಸಪ್ತರ್ಷಿಗಳು ಹೇಮಕೂಟದ ಮೇಲಿಂದಲೇ ಪಂಚಕ್ರೋಶಾತ್ಮಕವಾದ ಹಂಪೆಯನ್ನೂ ಅದರ ಮಧ್ಯೆ ಬಳಸಿ ಹೋಗಿರುವ ತುಂಗಭದ್ರಾನದಿಯನ್ನೂ ನೋಡಿ ಆನಂದಭರಿತರಾದರು. ದಿವ್ಯವಾದ ಆ ನದಿಯನ್ನೇ ಬಹಳ ಹೊತ್ತು ನೋಡಿ ಅದನ್ನು ಪ್ರಶಂಸಿಸುತ್ತಾ "ಭಾಗೀರಥೀ ಸರಸ್ವತೀ ನರ್ಮದಾ ಗೋಮತೀ ಗಂಡಕ್ಯಾದಿ ಎಷ್ಟೋ ನದಿಗಳನ್ನು ನಾವು ನೋಡಿದ್ದೇವೆ; ಅಲ್ಲೆಲ್ಲಾ ಸ್ನಾನವೂ ಮಾಡಿದ್ದೇವೆ. ಆದರೆ ಈ ನದಿ ಅವೆಲ್ಲಕ್ಕಿಂತ ಹೆಚ್ಚು ರಮಣೀಯವಾಗಿದೆ.[2] ಇದರ ತರಂಗಗಳ ಮೇಲೆ ಹಾದು ಬರುವ ಮಂದಮಾರುತ ತಾಪತ್ರಯವನ್ನೇ ಪರಿಹಾರ ಮಾಡುತ್ತದೆ" ಎಂದು ಮಾತಾಡಿಕೊಂಡು ಅದರಲ್ಲಿ ಸ್ನಾನಮಾಡಿ ಆಚಮನ ಅರ್ಘ್ಯಾದ್ಯಾಹ್ನಿಕಗಳನ್ನು ಮುಗಿಸಿದರು.

ಕ್ಷೇತ್ರ ಪ್ರವೇಶ—ಅನಂತರ ಪಶ್ಚಿಮ ದ್ವಾರದಿಂದ ಕ್ಷೇತ್ರ ಪ್ರವೇಶಮಾಡಿ ನೋಡಲು ನಾನಾಭಕ್ತರು ನಾನಾರೀತಿ ಈಶಸೇವೆ ಮಾಡುತ್ತಿರುವುದನ್ನೂ ಓಡಾಡುತ್ತಿದ್ದ ಪ್ರಮಥಗಣಗಳನ್ನೂ ತ್ರಿಮೂರ್ತಿಗಳೇ ಮೊದಲಾದವರು ತಪಸ್ಸುಮಾಡಿ ಸಿದ್ಧಿಪಡೆದ ಕ್ಷೇತ್ರಗಳನ್ನೂ ನಾನಾವಿಧ ರುದ್ರರನ್ನೂ ಕಂಡರು. ಮುಂದಕ್ಕೆ ಬಂದು ಗೋಪುರದ ಬಳಿಗೆ ಹೋಗಿ ಅಲ್ಲಿದ್ದ ಕ್ಷೇತ್ರಾಧಿಪನ ಅಪ್ಪಣೆ ಪಡೆದು ಬಹಳ ಸಂತೋಷಪಟ್ಟರು.

101. (3) ಮಂಟಪ ಪ್ರವೇಶ

ಕಕ್ಷ್ಯಭೇದಗಳು—ಅಲ್ಲಿಂದ ಮುಂದೆ ನಡೆದು ವೈಭವೋಪೇತವಾದ ಸಾವಿರಾರು ಕಕ್ಷ್ಯ (ರೂಮು)ಗಳನ್ನೂ ಅದರಲ್ಲಿ ನಾನಾಸನ್ನಾಹಗಳಲ್ಲಿ ತೊಡಗಿದ್ದ ಅಸಂಖ್ಯಾತ ಗಣಗಳನ್ನೂ ಕಂಡು ಇನ್ನೂ ಮುಂದೆ ಪ್ರಯಾಣ ಬೆಳೆಸಿ ಮುಂದೆ ವಿನಾಯಕ ಕುಮಾರ ನಂದಿಗಳನ್ನೂ ಕಂಡು ಅವರನ್ನೆಲ್ಲ ಸ್ತುತಿಸುತ್ತಾ ಮಂಟಪದೊಳಕ್ಕೆ ಪ್ರವೇಶ ಮಾಡಿದರು.

---

1 ಈ ಕಥಾಸಂವಿಧಾನ ಎಲ್ಲೋ ಮಧ್ಯೆ ಆರಂಭವಾದಂತೆ ಭಾಸವಾಗುತ್ತದೆ. ಪೂರ್ವ–ಮಧ್ಯ ಭಾಗಗಳ ಜೋಡಣೆ ಹೊಂದಿಕೆಯಾಗಿಲ್ಲ.

2 ಪುಟ 8ರ ಪಾದಟಿಪ್ಪಣಿ ನೋಡಿ.

ಮಂಟಪ ವರ್ಣನೆ—ವಿರೂಪಾಕ್ಷನ ಮುಂದುಗಡೆ ಇದ್ದ ಮಂಟಪಕ್ಕೆ ನಾಲ್ಕು ವೇದಗಳೇ ನಾಲ್ಕು ಕಾಲುಗಳಾಗಿದ್ದವು. ಅದರ ಸುತ್ತಲೂ ದಶದಿಕ್ಪತಿಗಳೂ ನಿಂತಿದ್ದರು. ಸರ್ವಧರ್ಮಮಯಾಕಾರವಾದ ದೇವೇಂದ್ರಾದಿ ಸುಪೂಜಿತವಾದ ಆ ದಿವ್ಯ ಮಂಟಪವನ್ನು ಕಂಡು ಅವರು ಪುಳಕಾಂಕಿತರಾದರು.

102. (4) ವಿರೂಪಾಕ್ಷಾರ್ಚನೆ

ಮಂಟಪವನ್ನು ಸ್ವಲ್ಪಹೊತ್ತು ದಿಟ್ಟಿಸಿ ನೋಡಿದ ಬಳಿಕ ಅವರಿಗೆ ಪರಮಾಶ್ಚರ್ಯಕರವಾದ ಜ್ವಾಜ್ವಲ್ಯಮಾನವಾದ ವಿರೂಪಾಕ್ಷನ ಲಿಂಗ ಕಣ್ಣಿಗೆ ಬಿತ್ತು. ಅದನ್ನು ಕಂಡು ಆನಂದಭರಿತಾಶಯರಾಗಿ ಸಂಕಲ್ಪಮಾತ್ರದಿಂದ ಸಿದ್ಧವಾದ ಫಲಪುಷ್ಪಾದಿ ಪೂಜಾಸಾಮಗ್ರಿಗಳಿಂದ ವೇದಘೋಷಣೆ ಮಾಡುತ್ತಾ ವಿಧಿಪೂರ್ವಕ ಪೂಜೆಯನ್ನರ್ಪಿಸಿದರು. ಭಕ್ತಪ್ರಿಯನಾದ ಆ ಅಮರಪ್ರಭು ಅಕೃತ್ರಿಮ ಸ್ವಭಾವವುಳ್ಳ ಅವರ ಸೇವೆಗೆ ಸಂತುಷ್ಟನಾಗಿ ಅವರಿಗೆ ಪ್ರತ್ಯಕ್ಷನಾದ.

103. (5) ವಿರೂಪಾಕ್ಷಸ್ತವ

ಅವರ ಅಖಂಡ ಪುಣ್ಯ ಸಂಚಯಗಳ ಫಲವೇ ಮೂರ್ತಿಮತ್ತಾಗಿ ಆವಿರ್ಭವಿಸಿ ಎದುರಿಗೇ ನಿಂತಿದೆಯೋ ಎನ್ನುವಂತಿದ್ದ ಆ ದೇವೋತ್ತಮನನ್ನು ಕಂಡು ಆ ಪರಮರ್ಷಿಗಳು ಆನಂದವಿವಶರಾಗಿ ಕೈ ಮುಗಿದುಕೊಂಡು ಆನಂದಬಾಷ್ಪವನ್ನು ಧಾರಾಕಾರವಾಗಿ ಸುರಿಸುತ್ತಾ ಮೈಮೇಲೆ ಎಚ್ಚರವಿಲ್ಲದೆ ಏನು ಮಾಡಬೇಕು ಏನಾಗಬೇಕು ಎಂಬುದು ಯಾವುದೂ ತಿಳಿಯದೆ ಭಕ್ತ್ಯುನ್ಮೇಷವಶೀಕೃತರಾಗಿ ಪರಮೇಶ್ವರನ ಜಟಾಜೂಟವನ್ನೂ ಅದರಲ್ಲಿದ್ದ ಗಂಗೆಯನ್ನೂ ನಾಗಭೂಷಣಗಳನ್ನೂ ಗಜಾಜಿನಗಳನ್ನೂ ನೋಡುತ್ತಾ ನರ್ತನಮಾಡಿ ಪ್ರತಿಯೊಬ್ಬರೂ ತಮತಮಗೆ ತೋಚಿದ ರೀತಿ ಆ ಸ್ವಾಮಿಯನ್ನು ಬೇರೆ ಬೇರೆ ಸ್ತೋತ್ರ ಮಾಡಿದರು. ಈ ಸ್ತೋತ್ರಗಳನ್ನು ಪಠಿಸುವವರು ಶಿವಸಾಲೋಕ್ಯ ಹೊಂದಿ ಮೋದಪಡುತ್ತಾರೆ. *

104. (6) ವರಪ್ರಸಾದ

ಸಪ್ತರ್ಷಿಗಳು ಮಾಡಿದ ಸ್ತೋತ್ರದಿಂದ ಪರಮಪ್ರಸನ್ನನಾದ ವಿರೂಪನೇತ್ರ ಅವರನ್ನು ಕುರಿತು "ನನ್ನ ದರ್ಶನ ಮಾತ್ರದಿಂದಲೇ ನೀವು ಸಿದ್ಧಫಲೋದಯರಾಗಿದ್ದರೂ

---

* ಈ ಸ್ತೋತ್ರಗಳನ್ನು ಅಪೇಕ್ಷಿಸುವವರು ಮೂಲ ಗ್ರಂಥ ನೋಡಬೇಕು.

ನಾನು ನಿಮಗೆ ವಿಶೇಷಾನುಗ್ರಹ ಮಾಡಲಾಕಾಂಕ್ಷಿಸುತ್ತೇನೆ. ಬೇಕಾದ ವರ ಬೇಡಿರಿ" ಎಂದನು. ಅದಕ್ಕೆ ಅವರು ಆ ದೇವನನ್ನು "ಅಕ್ಲೇಶದಿಂದ ಸರ್ವೇಷ್ಟಸಿದ್ಧಿ ಪ್ರದವಾದ ಉಪಾಯವನ್ನು ತಿಳಿಸು" ಎಂದು ಪ್ರಾರ್ಥಿಸಿಕೊಂಡರು. ಅದಕ್ಕೆ ಆ ದೇವ ಅವರಿಗೆ **ವಿರೂಪಾಕ್ಷಾಷ್ಟೋತ್ತರಶತ ನಾಮಸ್ತೋತ್ರವನ್ನು** ಉಪದೇಶಿಸಿ "ಇದರಿಂದ ಸರ್ವೇಷ್ಟಸಿದ್ಧಿಯಾಗುತ್ತದೆ. ನೀವು ಇಲ್ಲೇ ವಾಸವಾಗಿದ್ದು ಕಲ್ಪಕಲ್ಪಾಂತಗಳನ್ನು ಜಯಿಸಿ ಸಾಯುಜ್ಯ ಹೊಂದುವಿರಿ" ಎಂದು ವರ ಕರುಣಿಸಿದನು. ಅದರಂತೆ ಆ ಮುನಿಗಳು ಆ ಕ್ಷೇತ್ರರಾಜನಲ್ಲಿ ನಿವಾಸವಾಗಿದ್ದು ಬಂದವರಿಗೆ ಹಂಪೆದರ್ಶನ ಮಾಡಿಸುತ್ತಾ ಸುಖವಾಗಿದ್ದರು.

105. (7) ಹಂಪೆಯಲ್ಲಿ ವಾಸ

ಆ ಸಪ್ತ ಮುನಿಪ್ರವರರು ಹೇಮಕೂಟಾಧಿಪತಿಯನ್ನು ಮನಸಾ ಧ್ಯಾನ ಮಾಡುತ್ತಾ ಸ್ವಸ್ವಾನುಷ್ಠಾನಗಳಲ್ಲಿ ನಿರತರಾಗಿ ಇತರ ಭಾವಗಳನ್ನೆಲ್ಲಾ ತೊರೆದು ತದೇಕಧ್ಯಾನ ನಿರತರಾಗಿ ಕಾಲಕಳೆಯುತ್ತಿದ್ದರು.

106. (8) ವಿಷ್ಣುವೃದ್ಧನ ಪ್ರಶ್ನೆ

[ಹಿಂದೆಯೇ 99ನೇ ಅಧ್ಯಾಯದ ಮುಖ ಟಿಪ್ಪಣಿಯಲ್ಲಿ ತಿಳಿಸಿದಂತೆ ಇಲ್ಲಿಂದ 8 ಅಧ್ಯಾಯಗಳಲ್ಲಿ ಹಂಪೆಯ ದ್ವಾರೋಪದ್ವಾರಗಳ ವರ್ಣನೆ ಮಾಡಲಾಗುವುದು. ಈ ಅಧ್ಯಾಯ ಆ ವರ್ಣನೆಗೆ ಪೀಠಿಕಾರೂಪವಾಗಿದೆ.]

ಒಂದು ದಿನ ಸಪ್ತತಪೋಧನರು ಶಿಷ್ಯಪ್ರಶಿಷ್ಯಪರಿವೃತರಾಗಿ ಏನೋ ವಿಚಾರ ಮಾಡುತ್ತಾ ಕುಳಿತಿದ್ದಾಗ ಶ್ರೋತೃಗಣದ ಮಧ್ಯದಿಂದ **ವಿಷ್ಣುವೃದ್ಧನೆಂಬೊಬ್ಬ** ಮಹಾತಪಸ್ವಿ ಎದ್ದು ಭರದ್ವಾಜರಿಗೆ ನಮಸ್ಕಾರಮಾಡಿ ಕೃತಾಂಜಲಿಬದ್ಧನಾಗಿ "ಭಗವನ್, ಶುದ್ಧ ಬುದ್ಧಿಯುಳ್ಳವರಿಗೆ ಪರಮಾರ್ಥ ಪ್ರಕಾಶಕರಾದ ತಾವೂ ಈ ಜಮದಗ್ನಿ ವಸಿಷ್ಠಾದಿ ಮಹಾತಪಸ್ವಿಗಳೂ ಅನ್ಯಕ್ಷೇತ್ರಗಳೆಲ್ಲ ಇರಲು ಈ ಕ್ಷೇತ್ರದಲ್ಲೇ ಬಂದು ನೆಲೆಸಲು ಕಾರಣವೇನು ? ಈ ಕ್ಷೇತ್ರರಾಜನ ಮಹಿಮೆಯೇನು ? ವಿರೂಪಾಕ್ಷನ ವಿಭೂತಿಗಳೇನು ? ಇದನ್ನೆಲ್ಲಾ ತಮ್ಮ ಮುಖದಿಂದಲೇ ಕೇಳಿ ತಿಳಿದುಕೊಂಡು ಕೃತಾರ್ಥನಾಗಬೇಕೆಂದಿದ್ದೇನೆ. ಅನುಗ್ರಹಿಸಬೇಕು" ಎಂದು ವಿಜ್ಞಾಪಿಸಿಕೊಂಡ.

ಆ ಮುನಿಗಳೆಲ್ಲರೂ ವಿಷ್ಣುವೃದ್ಧನ ಪ್ರಶ್ನೆಯನ್ನು ಪ್ರಶಂಸಿಸಿ ಅದಕ್ಕೆ ಭರದ್ವಾಜರೇ ಉತ್ತರ ಹೇಳತಕ್ಕದ್ದೆಂದು ಒಮ್ಮತದಿಂದ ಅನುಮೋದಿಸಲು ಭರದ್ವಾಜರು ಭಾಷಣ ಮಾಡಲಾರಂಭಿಸಿದರು.

107. (9) ಹಂಪೆಯು ಪೂರ್ವದ್ವಾರ ವರ್ಣನೆ

ವಾಸ್ತವವಾಗಿ ಹೇಮಕೂಟ ಅಸಾಧಾರಣವಾದ ವೈಭವವುಳ್ಳದ್ದು. ಇದು ಸ್ಥಾವರವಾದ ಕಲ್ಲುಗುಡ್ಡವಲ್ಲ, ಇದು ಶಂಭುವಿನ ಒಂದು ಸ್ವರೂಪವೇ ಸರಿ[1]. ಕಿಷ್ಕಿಂಧಾದ್ರಿಯ ಮಧ್ಯದಲ್ಲಿ ಪಂಚಯೋಜನ ವಿಸ್ತೀರ್ಣವುಳ್ಳ ಈ ಕ್ಷೇತ್ರಕ್ಕೆ[2] ನಾಲ್ಕು ಮಹಾದ್ವಾರಗಳೂ ನಾಲ್ಕು ಉಪದ್ವಾರಗಳೂ ಇವೆ.

ಅವುಗಳಲ್ಲಿ ಒಂದು ಯೋಜನ ದೂರದಲ್ಲಿರುವ **ಪೂರ್ವದ್ವಾರ**ದಲ್ಲಿ ಕಿನ್ನರ ಸೇವಿತನಾದ ಕಿನ್ನರೇಶ ಇದ್ದಾನೆ. ಅವನು ತಪೋನಿಷ್ಠನಾಗಿದ್ದರೂ ಕಿನ್ನರಗಾನಾಸಕ್ತನಾಗಿದ್ದಾನೆ.

108. (10) ಕಿನ್ನರೇಶ

ಕಿನ್ನರರು ಈ ಕಿನ್ನರೇಶನ ಅನುಗ್ರಹದಿಂದಲೇ ಗಾನವಿದ್ಯಾನಿಪುಣರಾಗಿ ನಾನಾ ವಾದ್ಯಗಳನ್ನು ಬಾರಿಸುತ್ತ ಈ ದೇವನ ಧ್ಯಾನಮಾಡುತ್ತಿರುತ್ತಾರೆ. ನಾರದರೂ ಈ ಸ್ವಾಮಿಯ ಸೇವೆಯಿಂದಲೇ ಸಿದ್ಧರಾಗಿ ನಾದವಿದ್ಯಾನಿಪುಣರಾದರು. ಹಾಗೆಯೇ ತುಂಬುರಾದಿಗಳೂ ಇಲ್ಲೇ ಸಿದ್ಧಿ ಪಡೆದರು. ಈ ದ್ವಾರಕ್ಕೆ ಸಂಬಂಧಿಸಿದ ಅನೇಕ ಆಖ್ಯಾನಗಳಿವೆ ; ಅವನ್ನೆಲ್ಲ ಹೇಳುವುದು ಅಸಾಧ್ಯವಾದ್ದರಿಂದ ಸಂಕ್ಷೇಪವಾಗಿ ಹೇಳಿದ್ದೇನೆ.

[ಸೂಚನೆ—ಕಿನ್ನರೇಶನ ಕಥೆ ಮತ್ತು ಪೂರ್ವದ್ವಾರದ ವರ್ಣನೆ ಹಿಂದೆ ೨೨-೨೬ನೇ ಪುಟಗಳಲ್ಲಿ ಬಂದಿದೆ.]

---

1 ಪೂರ್ವಭಾಗದ 7ನೇ ಅಧ್ಯಾಯದ ಕಡೇ ಭಾಗ ನೋಡಿ.

2 ಹಂಪೆಯು ಪ್ರಸಿದ್ಧವಾದ ಹತ್ತು ಭಾಸ್ಕರ ಕ್ಷೇತ್ರಗಳಲ್ಲಿ ಒಂದು. ಆ ಭಾಸ್ಕರ ಕ್ಷೇತ್ರಗಳು ಯಾವುವೆಂದರೆ—1. ಕಾಶೀ, 2. ಪುಷ್ಪಗಿರಿ, 3. ಕಂಚಿ, 4. ನಿವೃತ್ತ, 5. ಅಲಂಪುರೀ, 6. ಶ್ರೀಶೈಲ, 7. ಹಂಪೆ, 8. ರಾಮೇಶ್ವರ, 9. ಕೇದಾರ, 10. ಗೋಕರ್ಣ.

ಅಲ್ಲದೆ ಹಂಪೆಗೆ ಕಿಷ್ಕಿಂಧಾ, ವಿದ್ಯಾನಗರ, ವಿಜಯನಗರ, ವಿದ್ಯಾವಿಜಯನಗರ ಎಂಬ ಹೆಸರುಗಳೂ ಉಂಟು. ವಾದಿರಾಜ ಸ್ವಾಮಿಗಳು ಹಂಪೆಯ ಮಹಿಮೆಯನ್ನು ವರ್ಣಿಸುತ್ತಾ

ಪಂಪಾ ಸಂಪತ್ಕರೀ ಸೇಯಂ ಕಿಂ ಪಾಪಂ ನ ಹರೇನ್ನೃಣಾಮ್ ।
ಯೋಽಧೋಮುಖೀಕರೋತ್ಯೇ-(ನೋ ನಾಮೋ) ತನ್ನಾಮೋಚ್ಚಾರಣಮಾತ್ರತಃ ॥

ಎಂದು ಹೇಳಿದ್ದಾರೆ. ಎಂದರೆ ಪಂಪಾ ಎಂಬ ಹೆಸರು ಹೇಳೋಣ ಮಾತ್ರ ಪಾಪಗಳು ತಲೆ ಕೆಳಗಾಗುತ್ತವೆ, (ಪಾಪಂ ಎಂಬ ಅಕ್ಷರಗಳನ್ನು ಹಿಂದೆ ಮುಂದೆ ಮಾಡಿದರೆ ಪಂಪಾ ಎಂದಾಗುತ್ತದೆ. ಗಮನಿಸಿ.)

109. (11) ದಕ್ಷಿಣದ್ವಾರ

[ದಕ್ಷಿಣ ದ್ವಾರದ ಮತ್ತು ಅಲ್ಲಿರುವ ತೀರ್ಥಗಳ ವರ್ಣನೆ ಹಿಂದೆ 21-36ನೇ ಅಧ್ಯಾಯಗಳಲ್ಲಿ ಮಾಡಿದೆ. 28ನೇ ಅಧ್ಯಾಯದ ಮುಖ ಟಿಪ್ಪಣಿ ನೋಡಿ.]

ದಕ್ಷಿಣದ್ವಾರಾಧಿಪನಾದ ಜಾಂಬವತೇಶ್ವರ ಬ್ರಹ್ಮಕುಂಡಕ್ಕೆ ನಾಲ್ಕು ಕ್ರೋಶ ದೂರದಲ್ಲಿದೆ. ಇಲ್ಲಿ ಅನೇಕ ಸಿದ್ಧರೂ ಸಾಧ್ಯರೂ ವಿಶ್ವೇದೇವತೆಗಳೂ ಅಮರರೂ ಇದ್ದಾರೆ. ಇಲ್ಲಿ ಮಾಡುವ ದಾನ ಧರ್ಮ ತಪಸ್ಸು ವ್ರತ ಎಲ್ಲವೂ ಸಿದ್ಧಿಸುತ್ತವೆ. ಈ ದ್ವಾರದ ರಕ್ಷಕ **ಚಂಡಭೈರವ**. ಅವನು ಗದಾಪಾಣಿಯಾಗಿ ನಿಂತು ಪ್ರಪನ್ನರನ್ನು ಭೂತಪ್ರೇತಪಿಶಾಚಾದಿಗಳ ಭಯದಿಂದ ಸಲಹುತ್ತಾನೆ.

ಇಲ್ಲಿ **ವೀರ**ನೆಂಬ ಗಣೇಶನೂ ದುರಿತಹಾರಿಣಿಯಾದ **ಭದ್ರೆ** ಎಂಬ ದುರ್ಗಿಯೂ ಇದ್ದಾರೆ. ಮಹಾದೇವ ಋಕ್ಷರೂಪಿಯಾದ ಜಾಂಬವಂತನ ತಪಸ್ಸಿಗೆ ಮೆಚ್ಚಿ ಅವನಿಗೆ ಅನುಗ್ರಹಿಸಿ ಅವನ ಹೆಸರಿನಿಂದ **ಜಾಂಬವತೇಶ್ವರ**ನೆಂಬ ಅಭಿಧಾನದಿಂದ ಇಲ್ಲೇ ನೆಲೆಸಿ ಭಕ್ತರಿಗೆ ಅನುಗ್ರಹಮಾಡುತ್ತಿದಾನೆ.

110. (12) ಪಶ್ಚಿಮದ್ವಾರ

[ಪಶ್ಚಿಮದ್ವಾರದ ತೀರ್ಥಗಳ ವರ್ಣನೆ ಹಿಂದೆ ಅ. 39-46ಗಳಲ್ಲಿ ಬಂದಿದೆ. ಈ ಅಧ್ಯಾಯದ ವಿಷಯವನ್ನು ಅ. 40 ರ ವಿಷಯದೊಡನೆ ಹೋಲಿಸಿ ನೋಡಿ. ಇಲ್ಲಿ ಹೇಳಿರುವ ಅಹಲ್ಯಾ ಶಾಪ ವೃತ್ತಾಂತಕ್ಕೂ ರಾಮಾಯಣೋಕ್ತ ವೃತ್ತಾಂತಕ್ಕೂ ಎಷ್ಟು ಅಂತರವಿದೆಯೆಂಬುದು ಗಮನಾರ್ಹವಾದ ವಿಷಯ.]

ಪಶ್ಚಿಮದ್ವಾರ ಬ್ರಹ್ಮಕುಂಡಕ್ಕೆ ಐದು ಕ್ರೋಶದೂರದಲ್ಲಿದೆ. ಅಲ್ಲಿ ಸೋಮಾದ್ರಿ-ಸೋಮತೀರ್ಥಗಳೂ ಸೋಮೇಶ್ವರನೂ **ಸನ್ಮತ**ನೆಂಬ ಭೈರವನೂ **ವರದ**ನೆಂಬ ವಿಘ್ನೇಶನೂ **ಸುಭಗೆ**ಯೆಂಬ ದುರ್ಗೆಯೂ ಇದ್ದಾರೆ.

ಸೋಮತೀರ್ಥದಲ್ಲಿ ಸ್ನಾನಮಾಡಿ ಚಂದ್ರನು ಕಲಾಧರನಾದ. ವೈಶಾಖ ಪೂರ್ಣಿಮಾದಿನ ಇದರಲ್ಲಿ ಸ್ನಾನಮಾಡಿ ಸೋಮೇಶ್ವರನನ್ನು ಅರ್ಚಿಸಿ ಮಂತ್ರ ಜಪಿಸುವವರಿಗೆ ಮಂತ್ರಸಿದ್ಧಿಯಾಗುತ್ತದೆ. ಆ ಕಾಲದಲ್ಲಿ ಈ ತೀರ್ಥದ ತೀರದಲ್ಲಿ ಒಂದು ಗೋದಾನಮಾಡಿದರೂ ಅಶ್ವಮೇಧಯಜ್ಞ ಮಾಡಿದ ಫಲ ಬರುತ್ತದೆ. ಆ ದಿನ ಇಲ್ಲಿ ಭಾರಿ ಉತ್ಸವ ನಡೆಯುತ್ತದೆ; ಅದಕ್ಕೆ ನಾಲ್ಕು ದಿಕ್ಕುಗಳಿಂದಲೂ ಜನಸಂದಣಿಯೂ ನಾಗಲೋಕ ಪಾತಾಳಲೋಕ ಸ್ವರ್ಗಗಳಿಂದೆಲ್ಲ ನಾಗರೂ ಸಿದ್ಧಚಾರಣ-ಗಂಧರ್ವರೂ ನೆರೆಯುತ್ತಾರೆ. ಈ ತೀರ್ಥದ ವಿಷಯದಲ್ಲೊಂದು ಆಖ್ಯಾನವುಂಟು.

ಗೌತಮರ ತೀರ್ಥಸ್ನಾನ—ಒಂದು ವರ್ಷ ಗೌತಮರು ತಮ್ಮ ಮೂರು

ಮಕ್ಕಳೊಡನೆ ಈ ಜಾತ್ರೆಗಾಗಿ ಹೊರಟು ಬಂದರು. ಅವರಲ್ಲಿ ಗಂಡುಮಕ್ಕಳಿಬ್ಬರೂ ಚಿಕ್ಕವರಾಗಿದ್ದುದರಿಂದ ಅವರಿಬ್ಬರನ್ನೂ ಹೆಗಲ ಮೇಲೆತ್ತಿಕೊಂಡು ಮಗಳನ್ನು ನಡೆಸಿಕೊಂಡು ಹೊರಟರು. ದೂರದಪ್ರಯಾಣ ; ಬಿಸಿಲಿನ ಬೇಗೆ ಬೇರೆ; ಜೊತೆಗೆ ಮಕ್ಕಳ ಹೊರೆ. ಗೌತಮರು ಬಳಲಿ ಹೋದರು. ಸೋಮತೀರ್ಥದ ಬಳಿ ವಿಶ್ರಮಿಸಿಕೊಳ್ಳುವುದಕ್ಕಾಗಿ ಕೂತರು.

ಆಗ ಮಗಳು ತಂದೆಗೆ "ಅಪ್ಪಾ, ಸ್ವಂತ ಮಗಳನ್ನು ನಡೆಸಿಕೊಂಡು ಹೋಗುತ್ತೀಯೆ. ಬೇರೆಯವರ ಮಕ್ಕಳನ್ನು ಹೊತ್ತುಕೊಂಡು ತಿರುಗಿ ಬಳಲುತ್ತಿದ್ದೀಯೆ, ಇದೇನು ಗ್ರಹಚಾರ?" ಎಂದು ಆಕ್ಷೇಪಿಸಿದಳು. ಆಕ್ಷೇಪಣೆ ಕೇಳಿದ ಮುನಿ "ಅಮ್ಮಾ, ನೀನು ಹೇಳುವುದಕ್ಕೆ ಪ್ರಮಾಣವೇನಿದೆ?" ಎಂದು ಕೇಳಿದರು. ಸ್ವಲ್ಪ ಯೋಚಿಸಿ ಆ ಬಾಲಕಿ "ಹಾಗಾದರೆ ಈ ತೀರ್ಥದಲ್ಲಿ ಎಲ್ಲರನ್ನೂ ಅದ್ದು. ನಿಜವಾದ ಮಕ್ಕಳು ಅವಿಕಾರವಾಗಿರುತ್ತಾರೆ. ಅನ್ಯರು ವಿಕಾರಹೊಂದುತ್ತಾರೆ" ಎಂದು ಹೇಳಿದಳು.

ಗುಟ್ಟು ರಟ್ಟಾದುದು—ಅವಳ ಮಾತಿನಂತೆ ಗೌತಮರು ಮೂರು ಮಕ್ಕಳನ್ನೂ ಸೋಮತೀರ್ಥದಲ್ಲಿ ಮುಳುಗಿಸಿದರು. ಆ ಕೂಡಲೆ ಆ ಇಬ್ಬರು ಗಂಡು ಮಕ್ಕಳ ಮುಖಗಳೂ ವಿಕಾರಹೊಂದಿ ಕೋತಿ ಮುಖಗಳಾದವು. ಮಗಳು ಮಾತ್ರ ಯಥಾವತ್ತಾಗಿ ಪೂರ್ವದಂತೇ ಇದ್ದಳು. ಸಂಶಯಗ್ರಸ್ತರಾದ ಗೌತಮರು ಮನೆಗೆ ಬಂದು ಪತ್ನಿಯಾದ ಅಹಲ್ಯೆಯನ್ನು ವಿಚಾರಿಸಲು ಅವರಿಬ್ಬರು ಗಂಡುಮಕ್ಕಳೂ ಇಂದ್ರ ಮತ್ತು ಸೂರ್ಯರಿಂದ ಅವಳಲ್ಲಿ ಹುಟ್ಟಿದರೆಂದು ಗೊತ್ತಾಯಿತು.[1] ಪತ್ನಿಯ ದುರ್ನಡತೆ ಕಂಡು ಕ್ರುದ್ಧನಾದ ಗೌತಮ ಅಹಲ್ಯೆಗೆ ಕಲ್ಲಾಗೆಂದು ಶಾಪಕೊಟ್ಟರು. ಆಮೇಲೆ ಪುನಃ ಅವಳು ತಮಗೆ ಮಾಡಿದ್ದ ಸೇವೆಯನ್ನು ನೆನೆಸಿಕೊಂಡು ಕನಿಕರದಿಂದ ರಾಮಪಾದಸ್ಪರ್ಶದಿಂದ ಉದ್ಧಾರವಾಗುವಂತೆ ವಿಶಾಪ ಕೊಟ್ಟರು.

ಆ ಮಕ್ಕಳಲ್ಲಿ ಹಿರಿಯವನಿಗೆ **ವಾಲಿ** ಎಂದು ಹೆಸರಾಯಿತು. ಅವನು ತನ್ನ ತಾಯಿಯ ಕೇಶವಾಲವನ್ನು (ಜಡೆಯನ್ನು) ಕಪಿಚೇಷ್ಟೆಗೆ ಅನುಗುಣವಾಗಿ ಮುಟ್ಟಿದ್ದರಿಂದ ಅವನಿಗೆ ಈ ಹೆಸರು ಬಂತು. (ವಾಲ-ಕೇಶಜಾಲವು ಉಳ್ಳವನು ವಾಲೀ). ಕಿರಿಯ ಮಗನ ಕಂಠವು ಸುಂದರವಾಗಿದ್ದುದರಿಂದ ಅವನಿಗೆ **ಸುಗ್ರೀವ** (ಸು-ಸಮೀಚೀನವಾದ ಅಥವಾ ಸುಂದರವಾದ, ಗ್ರೀವ-ಕಂಠವುಳ್ಳವನು) ಎಂದು ಹೆಸರು ಬಂತು. ಕಡೆಯ ಮಗಳು ತನ್ನ ಮೇಲೆ ಚಾಡಿ ಹೇಳಿದ್ದರಿಂದ ಅಹಲ್ಯೆ ಅವಳಿಗೆ ವಾನರಿಯಾಗುವಂತೆ ಶಾಪಕೊಟ್ಟಳು.

ಅನ್ಯತೀರ್ಥಗಳು—ಸೋಮತೀರ್ಥಕ್ಕೆ ಸ್ವಲ್ಪದೂರದಲ್ಲೆ ಅಗಸ್ತ್ಯರು ತಪಸ್ಸು ಮಾಡಿದ ಸ್ಥಳ ಇದೆ. ಅಲ್ಲೇ **ಅಗಸ್ತ್ಯತೀರ್ಥ** ಇದೆ. ಅದರ ಹತ್ತಿರದಲ್ಲೇ **ಧನುಸ್ತೀರ್ಥವೂ** ಇದೆ. ಹೀಗೆಯೇ ಇನ್ನೂ ಎಷ್ಟೋ ತೀರ್ಥಗಳಿವೆ.

---

1 67ನೇ ಅಧ್ಯಾಯ ನೋಡಿ.

111. (13) ಉತ್ತರದ್ವಾರ.

ಉತ್ತರದ್ವಾರ ಬ್ರಹ್ಮಕುಂಡಕ್ಕೆ ನಾಲ್ಕು ಕ್ರೋಶ ದೂರದಲ್ಲಿದೆ. ಇಲ್ಲಿ ಮಾಣಿಭದ್ರೇಶ್ವರನೂ, **ಭೀಷಣ**ನೆಂಬ ಭೈರವನೂ **ಹಸ್ತಿಮುಖ** (ಗಜಾನನ) ನೆಂಬ ಗಣೇಶನೂ **ಹೈಮವತೀ** ಎಂಬ ದುರ್ಗೆಯೂ ಇದ್ದಾರೆ. ಇದು ತಪಸ್ಸಿಗೆ ಉತ್ತಮವಾದ ಸ್ಥಳ.

[ಸೂಚನೆ—ಉತ್ತರದ್ವಾರದ ತೀರ್ಥಗಳ ವರ್ಣನೆ ಹಿಂದೆ 47-71 ಅಧ್ಯಾಯಗಳಲ್ಲಿ ಮಾಡಿದೆ. 46ನೇ ಅಧ್ಯಾಯದ ಮುಖಟಿಪ್ಪಣಿ ನೋಡಿ.]

112. (14) ಉಪದ್ವಾರಗಳು (i)

ಆಗ್ನೇಯ ಉಪದ್ವಾರದಲ್ಲಿ ದ್ರೌಪದೀ ಕ್ಷೇತ್ರವೂ ರಾಮತೀರ್ಥ ಮಣಿಕುಂಡಲ ತೀರ್ಥಾದಿಗಳೂ ಇವೆ. ಇಲ್ಲಿ **ರುರು**ವೆಂಬ ಭೈರವನೂ **ವಿನಾಯಕ**ನೆಂಬ ವಿಘ್ನೇಶನೂ **ಮಹಾಮಾಯೆ** ಎಂಬ ಶಕ್ತಿಯೂ ಇರುವರು. ತ್ರೇತಾಯುಗದಲ್ಲಿ ರಾವಣನನ್ನು ಗೆಲ್ಲುವುದಕ್ಕಾಗಿ ರಾಮಚಂದ್ರ ತಪಸ್ಸುಮಾಡಿ ಸಿದ್ಧಿಪಡೆದ ಸ್ಥಳವೇ ರಾಮತೀರ್ಥ.[1] ದ್ವಾಪರದಲ್ಲಿ ದ್ರೌಪದಿಯೂ ಪಾಂಡವರೂ ಮಹಾಮಾಯೆಯನ್ನು ಎಲ್ಲಿ ಆರಾಧಿಸಿ ರಾಜ್ಯಪಡೆದರೋ ಆ (ಆರಾಧನೆಮಾಡಿದ) ಕ್ಷೇತ್ರವೇ ದ್ರೌಪದೀಕ್ಷೇತ್ರ. ಹಿಂದೆ ಸೂರ್ಯನು ಹೇಮಕೂಟದ ಮೇಲೆ ಹಾದು ಹೋಗುವಾಗ ಅಪ್ರದಕ್ಷಿಣವಾಗಿ ಹೋಗುತ್ತಿದ್ದ. ರುರು ಎಂಬ ಈ ಉಪದ್ವಾರದ ಭೈರವ ಸೂರ್ಯನನ್ನು ಹಿಡಿದು ಅವನ ಮಣಿ-ಕುಂಡಲವನ್ನು ಕಿತ್ತುಕೊಂಡು ಬೇರೆಕಡೆ ಇಟ್ಟು ಬಿಟ್ಟ. ಸೂರ್ಯ:ಪ್ರದಕ್ಷಿಣಾಕಾರವಾಗಿ ಹೋಗುವುದಕ್ಕೆ ಒಪ್ಪಲು ರುರು ಅವನ ಮಣಿಕುಂಡಲವನ್ನು ಅವನಿಗೆ ಹಿಂದಿರುಗಿ ಕೊಟ್ಟನು. ಆ ಮಣಿಕುಂಡಲವನ್ನು ಇಟ್ಟಿದ್ದ ಸ್ಥಳವೇ ಮಣಿಕುಂಡಲ ತೀರ್ಥ.

ನೈಋತ್ಯ ಉಪದ್ವಾರದಲ್ಲಿ ಶಂಕರೇಶ್ವರ ಕ್ಷೇತ್ರವಿದೆ. ಇದಕ್ಕೆ ಶಂಕರೇಶ್ವರನೇ ಅಧಿದೇವತೆ. ಇಲ್ಲಿ ಕಾಳಿ ಎಂಬ ದುರ್ಗೆಯೂ ಕ್ರೋಧನೆಂಬ ಭೈರವನೂ ಶೂರನೆಂಬ ಗಣೇಶನೂ ಷಡಾನನನೂ (ಕುಮಾರಸ್ವಾಮಿಯೂ) ಇರುವರು. ಅಲ್ಲದೆ ಶಂಕರೇಶ್ವರ ತೀರ್ಥವೂ ದೊಡ್ಡ ಶಿವಪಾದವೂ ಇವೆ. ಈ ಶಿವಪಾದದ ಮೇಲೆ ಪಿಂಡಹಾಕಿದರೆ ಪಿತೃಗಳಿಗೆ ಮುಕ್ತಿಯಾಗುತ್ತದೆ.

ಒಂದು ದಿನ ತುಂಗೆಯು ಪೂರ್ಣ ಪ್ರವಾಹದೊಡನೆ ಹರಿಯುತ್ತಿದ್ದಳು. ಆ ಸಮಯದಲ್ಲಿ ಕುಮಾರಸ್ವಾಮಿ ಹುಡುಗತನದಿಂದ ಈ ನದಿಯಲ್ಲೇ ಆಡುತ್ತಿದ್ದ. ಅದನ್ನು

1 ಅ. 61 ಮತ್ತು 74ಗಳನ್ನೂ ನೋಡಿ.

ಪಾರ್ವತೀ ಸಮೇತನಾದ ಈಶ್ವರ ನೋಡುತ್ತಿದ್ದ. ಆಟ ಮುಗಿದ ಮೇಲೆ ಕುಮಾರ (ಸ್ಕಂದ) ತಂದೆ-ತಾಯಿಗಳಿಗೆ ನಮಸ್ಕಾರ ಮಾಡಿ ಅವರನ್ನು ಪೂಜಿಸಿದ. ಆದ್ದರಿಂದ ಈ ಕ್ಷೇತ್ರಕ್ಕೆ ಶಂಕರೇಶ್ವರಕ್ಷೇತ್ರವೆಂದು ಹೆಸರು ಬಂತು.

113. (15) ಉಪದ್ವಾರ (ii)

ವಾಯುವ್ಯ ಉಪದ್ವಾರದಲ್ಲಿ ಮಹಾಕಾಲವೆಂಬ ಕ್ಷೇತ್ರವೂ ಅದೇ ಹೆಸರಿನ ತೀರ್ಥವೂ ತಟಚ್ಛಿಲೆಯೂ ಇವೆ. ಇದನ್ನು **ಕಪಾಲೀ** ಎಂಬ ಭೈರವನೂ ಮಹಾ ಕಾಳೀ ಎಂಬ ಶಕ್ತಿಯೂ ಲಂಬೋದರನೆಂಬ ಗಣೇಶನೂ ಸಂರಕ್ಷಿಸುತ್ತಾರೆ. ಮಂದ ರಾದ್ರಿಯಿಂದ ಬಂದ ಮಹಾಕಾಲನೆಂಬ ಗಣನಾಥ ಹಿಂದೆ ಈ ಕ್ಷೇತ್ರದಲ್ಲಿ ತಪಸ್ಸುಮಾಡಿ ವಿರೂಪಾಕ್ಷನನ್ನು ಪ್ರತ್ಯಕ್ಷೀಕರಿಸಿಕೊಂಡ: ಆ ಸ್ಥಾನವೇ ತಟಚ್ಛಿಲೆ. ಅಲ್ಲದೆ ಅದೇ ಮಹಾಕಾಲ ಅದೇ ಹೆಸರಿನ ಶಿವಮೂರ್ತಿಯನ್ನು ಪೂಜಿಸಿದ ಕಾರಣ ಈ ಕ್ಷೇತ್ರಕ್ಕೂ ಆ ಹೆಸರೇ ಬಂದಿದೆ. ಈ ಕ್ಷೇತ್ರ ಮಂತ್ರಸಿದ್ಧಿ ಪ್ರದಾಯಕ. ಇಲ್ಲಿಯ ತೀರ್ಥದಲ್ಲಿ ಸ್ನಾನ ಮಾಡುವವರು ಧೂತಪಾಪ್ಮರಾಗಿ ಅಖಿಲ ಶುಭವನ್ನೂ ಹೊಂದುವರು.

ಐಶಾನ್ಯ ಉಪದ್ವಾರದಲ್ಲಿ ದೇವಖಾತ ಕ್ಷೇತ್ರವೂ ದೇವಖಾತ ಋಷಿಖಾತ ಪಿತೃ ಖಾತಗಳೆಂಬ ತೀರ್ಥಗಳೂ ಇವೆ. ಇಲ್ಲಿ ಸಂಹಾರನಾಮಕ ಭೈರವನೂ ಮಹಾಭೈರವಿ ಯೆಂಬ ದುರ್ಗಿಯೂ ಭಕ್ಷ್ಯಪ್ರಿಯನೆಂಬ ವಿಘ್ನೇಶನೂ ಸೋಮನಾಥ ರಾಮಲಿಂಗ ಗಳೂ ಇವೆ. ಈ ಕ್ಷೇತ್ರವೂ ಪಾಪಹಾರಕ; ಇಲ್ಲಿ ಒಂದು ರಾತ್ರಿ ವಾಸಮಾಡಿದರೂ ಹತ್ತು ಸಾವಿರ ಅಶ್ವಮೇಧ ಮಾಡಿದ ಫಲ ಬರುತ್ತದೆ. ಇಲ್ಲಿ ಸಾಯುವ ಪ್ರಾಣಿಗಳೂ ಮುಕ್ತಿಭಾಗಿಗಳಾಗುತ್ತವೆ; ಅವುಗಳ ಶರೀರವನ್ನು ಕ್ರಿಮಿಕೀಟಗಳೂ ಕೆಡಿಸುವುದಿಲ್ಲ.

ದುಂದುಭಿ ಕಥೆ—ಹಿಂದೆ ದುಂದುಭಿ ಎಂಬ ದಾನವ ದೇವಕಂಟಕನಾಗಿದ್ದ. ಆವನ ವಿನಾಶಕ್ಕಾಗಿ ಎಲ್ಲರೂ ಈ ಕ್ಷೇತ್ರದಲ್ಲಿ ವಿರೂಪಾಕ್ಷನನ್ನು ಕುರಿತು ತಪಸ್ಸು ಮಾಡಿದರು. ಆ ದೇವನು ಪ್ರಸನ್ನನಾಗಿ ಅವರಿಗೆ "ವಾಲಿಯೆಂಬ ವಾನರನು ಅವ ನನ್ನು ಸಂಹರಿಸುವನು" ಎಂದು ಹೇಳಿದ್ದರಿಂದ ಅವರೆಲ್ಲ ಅಲ್ಲೇ ತಪಸ್ಸು ಮಾಡುತ್ತ ಕುಳಿತಿದ್ದರು. ಅಲ್ಲಿಗೆ ಆಗಾಗ್ಗೆ ದೇವತೆಗಳ ಗೂಢಚಾರರು ಬರುತ್ತಿದ್ದರು. ಈ ಸಮಾಚಾರವನ್ನೆಲ್ಲಾ ಹೇಗೋ ಕೇಳಿ ದುಂದುಭಿ ಹೊರಕ್ಕೆ ಬಂದು ಸಿಂಹ ಗರ್ಜನೆ ಮಾಡಿದ.

ಆ ಗರ್ಜನಧ್ವನಿ ಕೇಳಿ ಅಂಜಿಕೊಂಡು ಅಲ್ಲಿದ್ದ ದೇವತೆಗಳೂ ಋಷ್ಯಾದಿಗಳೂ ಅಲ್ಲಲ್ಲೇ ಸೀರಿಸಲ್ಲೋ ಸಂದಿಗಳಲ್ಲೋ ಅಡಗಿಕೊಂಡರು. ದೇವತೆಗಳು ಅಡಗಿಕೊಂಡಿದ್ದ ಸ್ಥಳವೇ ದೇವಖಾತ [1] ವೆಂದೂ ಋಷಿಗಳು ಹುದುಗಿಕೊಂಡಿದ್ದ ಸ್ಥಳ ಋಷಿಖಾತ

1 ಖಾತ ಶಬ್ದವು ಖನ್—ಅಗಿ ಎಂಬ ಧಾತುವಿನ ರೂಪ. ಅದಕ್ಕೆ ಅಗಿಯಲ್ಪಟ್ಟದ್ದು, ಹಳ್ಳ, ಗುಂಡಿ ಎಂದು ಅರ್ಥವಾಗುತ್ತದೆ.

ವೆಂದೂ ಪಿತೃಗಳು ಅವಿತುಕೊಂಡ ಸ್ಥಳ ಪಿತೃಖಾತವೆಂದೂ ಪ್ರಸಿದ್ಧವಾಯಿತು. ಗಣರಾತ್ರಿ[2] ಕಳೆದ ಬಳಿಕ ವಾನರಾಧಿಪತಿಯಾದ ವಾಲಿ ದುಂದುಭಿಯನ್ನು ಸಂಹರಿಸಿದ.[3]

ಈ ಸ್ಥಳದಲ್ಲಿ ಚಂದ್ರ ಸೋಮನಾಥನನ್ನು ಪ್ರತಿಷ್ಠೆಮಾಡಿ ಪೂಜಿಸಿದನು. ಹಾಗೆಯೇ ಶ್ರೀರಾಮನೂ ಸಹ ರಾವಣ ಸಂಹಾರದಿಂದುಂಟಾದ ಬ್ರಹ್ಮಹತ್ಯಾದೋಷ ಪರಿಹಾರಾರ್ಥ ರಾಮಲಿಂಗವನ್ನು ಈ ಸ್ಥಳದಲ್ಲಿ ಪ್ರತಿಷ್ಠೆ ಮಾಡಿದ್ದಾನೆ. ಈ ಲಿಂಗವನ್ನು ಭಕ್ತಿಯಿಂದ ಆರಾಧಿಸುವವರು ಶತ್ರುಗಳನ್ನು ಜಯಿಸಿ ಶ್ರೀಮಂತರಾಗುತ್ತಾರೆ.

ಫಲಸ್ತುತಿ—ಈ ಪ್ರಕಾರ ಇದುವರೆಗೆ ವರ್ಣಿಸಲ್ಪಟ್ಟಿರುವ ದ್ವಾರಗಳ ಮಹಿಮೆಯ ಶ್ರವಣಮಾತ್ರದಿಂದ ಜನಗಳು ಸರ್ವಾಧಿಕ್ಯತೆ ಪಡೆಯುತ್ತಾರೆ. ದ್ವಾರೋಪದ್ವಾರಯುಕ್ತವಾದ ಹೇಮಕೂಟ ವಿರೂಪಾಕ್ಷನಿಗೆ ಹೃದಯಸ್ಥಾನದಂತಿದೆ. ಈ ವಿವರಣೆ ಶ್ರೇಯಃಪ್ರದ, ಸಮಸ್ತಾಭಿಮತಪ್ರದಾಯಕ, ಸಮಸ್ತಶಕ್ತಿರೂಪನಾದ ಶಂಭುವಿನ ಪರಂಧಾಮ.

114. (16) ನಾನಾ ತೀರ್ಥಗಳು

[ಹಿಂದೆ ತಿಳಿಸಿದಂತೆ ಈ ಅಧ್ಯಾಯದಲ್ಲಿ 40 ತೀರ್ಥಗಳ ವರ್ಣನೆ ಬರುತ್ತದೆ. ಈ ಪ್ರಸಂಗದಲ್ಲೇ ವಾಸಿಷ್ಠ ತೀರ್ಥವರ್ಣನಾವಸರದಲ್ಲಿ ಅದಕ್ಕೆ ಸಂಬಂಧಿಸಿದ ಹರಿಶ್ಚಂದ್ರನ ಉಪಾಖ್ಯಾನ ಹದಿನಾರು ಅಧ್ಯಾಯಗಳಲ್ಲಿ ಪ್ರೋಕ್ತವಾಗಿದೆ. ಕಡೆಯ ಅಧ್ಯಾಯ(130)ದಲ್ಲಿ ಮತ್ತೆ ಕೆಲವು ತೀರ್ಥಗಳ ವರ್ಣನೆ ಬರುತ್ತದೆ. ಅಲ್ಲಿಗೆ ಈ ಮಧ್ಯಭಾಗದ ಪೂರ್ವಾರ್ಧ ಮುಗಿಯುತ್ತದೆ. ಇಲ್ಲಿ ವರ್ಣಿಸಿರುವ ಪ್ರಾಯಃ ಎಲ್ಲ ತೀರ್ಥಗಳೂ ಈಗ ಅಪ್ರಸಿದ್ಧವಾಗಿವೆ.—ವಿ. ತೀ.]

ಪ್ರಶ್ನೋತ್ತರ—ಭರದ್ವಾಜರು ಹೇಮಕೂಟದ ದ್ವಾರೋಪದ್ವಾರಗಳ ವರ್ಣನೆ ಮಾಡಿದ್ದನ್ನು ಕೇಳಿ ಸಂತೋಷಗೊಂಡು ವಿಷ್ಣುವೃದ್ಧ ಭರದ್ವಾಜರನ್ನು ಪುನಃ "ಹೇ ಸದ್ಗುರುಗಳೇ ! ಹೇಮಕೂಟದ ದ್ವಾರೋಪದ್ವಾರಗಳ ವರ್ಣನೆ ಕೇಳಿ ನಾನು ಚರಿತಾರ್ಥನಾದೆ. ಇದೇ ರೀತಿ ಇಲ್ಲಿರುವ ಇತರ ಪುಣ್ಯಸ್ಥಳಗಳ ಮಹಿಮೆಯನ್ನೂ ಕೇಳಲಿಚ್ಛಿಸುತ್ತೇನೆ" ಎಂದು ಬೆಸಗೊಂಡ. ಅದಕ್ಕೆ ಭರದ್ವಾಜರು ಹೀಗೆ ವರ್ಣಿಸಲಾರಂಭಿಸಿದರು—

ಈ ಪುಣ್ಯಹಂಪೆ ಕ್ಷೇತ್ರದಲ್ಲಿ ಅನೇಕ ಮುನಿವರ್ಯಾದಿಗಳು ಪ್ರಕಾಶಪಡಿಸಿದ ಎಷ್ಟೋ ಸ್ಥಳಗಳಿವೆ. ಅವುಗಳಲ್ಲಿ ಕೆಲವು ಸ್ಥಳಗಳ ವಿಚಾರ ಹೇಳುತ್ತೇನೆ, ಲಾಲಿಸು. ಮೊದಲು ಸಪ್ತರ್ಷಿಗಳಿಂದ ಪ್ರಕಾಶಕ್ಕೆ ಬಂದ ಸಪ್ತದ್ವೀಪಗಳ ಮಹಿಮೆ ಹೇಳುತ್ತೇನೆ.

ರಂಭಾಶಿಲಾದ್ವೀಪ—ತಪೋವಿಘ್ನಮಾಡಿದ ರಂಭೆಗೆ ವಿಶ್ವಾಮಿತ್ರರು ಕಲ್ಲಾಗೆಂದು ಶಾಪ ಕೊಟ್ಟರು. ಅದರಂತೆ ಶಿಲೆಯಾಗಿದ್ದ ರಂಭೆ ಸ್ನಾನಮಾಡಿದ ಸ್ಥಳವೇ ಈ ದ್ವೀಪ. ಇಲ್ಲಿ ಮಾಡುವ ದಾನಧ್ಯಾನತಪೋಹೋಮಗಳು ಸಿದ್ಧಿಯಾಗುತ್ತವೆ.

---

2 ಅನೇಕ ರಾತ್ರಿಗಳ ಗುಂಪಿಗೆ ಗಣರಾತ್ರಿ ಎಂದು ಹೆಸರು. "ಗಣರಾತ್ರಂ ನಿಶಾ ಬಹ್ವ್ಯಃ"—ಅಮರ, 3 ಅ. 67, ಪುಟ 93 ನೋಡಿ.

2. **ಕುಂತೀನಿವಾಸದ್ವೀಪ**—ಇದರಲ್ಲಿ ಕುಂತಿ ತನ್ನ ಮಕ್ಕಳಿಗೆ ರಾಜ್ಯಲಾಭ ವಾಗಲೆಂದು ತಪಸ್ಸುಮಾಡಿದ್ದಳು. ಇಲ್ಲಿ ಮಾಡುವ ತಪಸ್ಸು ಕೋಟಿಗುಣ ಅಧಿಕವಾಗುತ್ತದೆ, ದಾನ ಅಕ್ಷಯವಾಗುತ್ತದೆ.

3. **ಅಶ್ವತ್ಥಭಿದಾದ್ವೀಪ**—ಹವಿಸ್ಸನ್ನು ಹೊರುವುದಕ್ಕೆ ಅಶಕ್ತನಾದ ಅಗ್ನಿ ಇಲ್ಲಿರುವ ಅಶ್ವತ್ಥವೃಕ್ಷದಲ್ಲಿ ಅಡಗಿಕೊಂಡಿದ್ದನು.[1] ಬಹುಕಾಲವಾದ ಮೇಲೆ ದೇವತೆಗಳ ಪ್ರಾರ್ಥನೆಯನ್ನು ಕೇಳಿ ಆ ಅಶ್ವತ್ಥವೃಕ್ಷವನ್ನು ಭೇದಿಸಿಕೊಂಡು[2] ಹೊರಗೆ ಬಂದು ಪ್ರಜ್ವಲಿಸಿದನು. ಆದರಿಂದ ಈ ದ್ವೀಪಕ್ಕೆ ಈ ಹೆಸರು ಬಂತು. ಈ ದ್ವೀಪದಲ್ಲಿ ವಾಸ ಮಾಡುವವರ ಬ್ರಹ್ಮವರ್ಚಸ್ಸು ಪ್ರಜ್ವಲವಾಗುತ್ತದೆ.

4. **ಚಂದ್ರಶಿಲಾದ್ವೀಪ**—ಇಲ್ಲಿ ಚಂದ್ರ ತಪಸ್ಸು ಮಾಡಿ ಪೂರ್ಣಕಾಮನಾದ.[3] ಇಲ್ಲಿ ವಾಸಮಾಡಿದರೆ ದೇಹಕಾಂತಿ ಬರುತ್ತದೆ. ಇಲ್ಲಿಯು ಸ್ನಾನವೂ ಪ್ರಶಂಸಾರ್ಹ.

5. **ಹರಿಣಪ್ಲುತದ್ವೀಪ**—ಯಾಗದ ಅಗ್ನಿಕುಂಡದಲ್ಲಿ ಹರಿಣಗಳು ಹಾರಿದ ಸ್ಥಳ.[4] ಇದರ ದರ್ಶನದಿಂದ ಅಶ್ವಮೇಧಫಲ ಲಭಿಸುತ್ತದೆ.

6. **ವ್ಯಾಘ್ರಪ್ಲುತದ್ವೀಪ**—ಸೋಮನದೀ ಎಂಬ ವ್ಯಾಘ್ರ ಹೇಮಕೂಟವನ್ನು ನೋಡುವುದಕ್ಕಾಗಿ ಹಿಮಾಲಯ ಪ್ರದೇಶದಿಂದ ಈ ಕ್ಷೇತ್ರಕ್ಕೆ ಬಂದು ಈ ಸ್ಥಳದಲ್ಲಿ ತುಂಗಭದ್ರಾ ನದಿಗೆ ಧುಮುಕಿತು. ಅದರಿಂದ ಈ ದ್ವೀಪವು ಈ ನಾಮದಿಂದ ಪ್ರಸಿದ್ಧವಾಗಿದೆ.[5] ಇದು ಸರ್ವಸಿದ್ಧಿಪ್ರದವಾದ ಸ್ಥಾನ. ಇಲ್ಲಿ ವಾಸಮಾಡುವವರು ಸದ್ಗುಣಿಗಳಾಗುತ್ತಾರೆ.

7. **ದರ್ಭದ್ರೋಣೀದ್ವೀಪ**—ಯಜ್ಞಕ್ಕಾಗಿ ತಂದಿದ್ದ ದರ್ಭೆಗಳು ಈ ಸ್ಥಳದಲ್ಲಿಅಮೃತಬಿಂದುಗಳಾದುವು. ಇಲ್ಲಿ ವಾಸಮಾಡುವವರಿಗೆ ದೀರ್ಘಾಯುಷ್ಮಂತರಾದ ಪುತ್ರರು ಹುಟ್ಟುತ್ತಾರೆ.

ಇಲ್ಲಿಂದ ಮುಂದೆ ಏಕಾದಶರುದ್ರರಿಂದ ಕೂಡಿದ ಹನ್ನೆರಡು ಕ್ಷೇತ್ರಗಳ ಮಹಿಮೆ ಹೇಳಲಾಗುವುದು.

1. (8) **ಬದರೀಕ್ಷೇತ್ರ**—ವ್ಯಾಸರು ಉದಯಿಸಿದ ಸ್ಥಳ. ಇಲ್ಲಿ ಬ್ರಾಹ್ಮಣ ಭೋಜನ ಮಾಡಿಸಿದರೆ ಪಿತೃಗಳು ತೃಪ್ತರಾಗುತ್ತಾರೆ.

2. (9) **ಮಹಾಶಾಕಕ್ಷೇತ್ರ**—ಶಾಕಾಹಾರಿಯಾದ ಮಂಕಣಕ ಋಷಿ ತಪಸ್ಸ

---

1 ಅಧ್ಯಾಯ 79 ನೋಡಿ. 2 ಭಿದ್ =ಭೇದಿಸು ಎಂಬ ಧಾತುವಿನ ರೂಪವೇ ಭಿದಾ 3 ಏಕೆ ತಪಸ್ಸು ಮಾಡಿದ, ಏನು ಕಾಮ ಹೊಂದಿದ ಎಂಬುದು ಅಸ್ಪಷ್ಟವಾಗಿದೆ. 4 ಅಧ್ಯಾ. 84-86 ನೋಡಿ. 5 ಅಧ್ಯಾ. 41 ರೊಡನೆ ಹೋಲಿಸಿ.

ಮಾಡಿ ತತ್ತ್ವಜ್ಞಾನ ಪಡೆದ ಸ್ಥಳ. ಇಲ್ಲಿ ವಾಸಮಾಡುವವರಿಗೆ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯಾಗುತ್ತದೆ.

3. (10) **ಕರ್ಣಿಕಾರಕ್ಷೇತ್ರ**—ಕರ್ಣಿಕಾರ[2]ಪುಷ್ಪಗಳಿಂದ ಕರ್ಣಿಕಾರೇಶ್ವರನನ್ನು ಪೂಜಿಸಿದರೆ ದರ್ಶನಸಿದ್ಧಿ[3]ಯಾಗುತ್ತದೆ.

4. (11) **ಶರಪುಂಖಕ್ಷೇತ್ರ**—ಸ್ಕಂದಕುಮಾರ ಶರವಣ[4]ನಿಂದ ಹುಟ್ಟಿದ ಸ್ಥಳ. ಇದರ ಸ್ಮರಣೆಯಿಂದ ವಾಜಿಮೇಧಫಲ[5] ಬರುತ್ತದೆ.

5. (12) **ದ್ರೋಣವನ**—ದ್ರೋಣಾಚಾರ್ಯರು ತಪಸ್ಸು ಮಾಡಿದ ಸ್ಥಳ. ಇಲ್ಲಿ ತಪಸ್ಸು ಮಾಡಿದರೆ ಶೀಘ್ರ ಸಿದ್ಧಿಯಾಗುತ್ತದೆ, ಸುಖಸಾಮ್ರಾಜ್ಯ ದೊರಕುತ್ತದೆ.

6. (13) **ಬಿಲ್ವಾರಣ್ಯ**—ಈ ಸ್ಥಳದ ಮಹಿಮೆಯಿಂದ ವ್ಯಾಧನೂ ಕೂಡ ಶಿವ ಪ್ರಸಾದದಿಂದ ಸಿದ್ಧನಾದ.[6]

7. (13) **ಹನುಮದ್ವೀಪ**—ಹನುಮಂತ ವಿಹರಿಸಿದ ಸ್ಥಳ. ಇಲ್ಲಿ ಮಾಡುವ ಧ್ಯಾನ ಹೋಮ ಜಪ ಎಲ್ಲಾ ಸಿದ್ಧಿಯಾಗುತ್ತವೆ.

8. (14) **ವಟುಕಕ್ಷೇತ್ರ**—ಇಲ್ಲಿ ಹೈತುಕ ತ್ರಿಪುರಾಂತಕರೇ ಮೊದಲಾದ ಹತ್ತು ಮಂದಿ ಭೈರವರು ದಶದಿಕ್ಕುಗಳಲ್ಲಿಯೂ ಇರುವರು. ಇಲ್ಲಿನ ನಿವಾಸಿಗಳಿಗೆ ಆಜ್ಞಾ ಸಿದ್ಧಿಯಾಗುತ್ತದೆ.

9. (15) **ಕಾಲಸೇತು**—ಕಾಲನೆಂಬ ಗಣಾಧ್ಯಕ್ಷ ತಪಸ್ಸುಮಾಡಿದ ಸ್ಥಳ.

10. (16) **ಅಮ್ರಕೂಟ**[7]—ಮಾವಿನ ಮರದ ಬುಡದಲ್ಲಿರುವ ಪರಮೇಶ್ವರ ಶ್ರೇಯಃಪ್ರದನಾಗಿದ್ದಾನೆ. ಇಲ್ಲಿ ಮಾಡುವ ಹೋಮ ಜಪಗಳು ಅಕ್ಷಯವಾಗುವುವು. ಇಲ್ಲಿ ವಾಸಮಾಡುವವರಿಗೆ ಅವ್ಯಾಹತಸಂಪತ್ತು ದೊರಕುತ್ತದೆ.

11. (17) **ಮಧೂಕವನ**ದಲ್ಲಿ ನಿರಾಯಾಸವಾಗಿ ಕರ್ಮಸಿದ್ಧಿಯಾಗುತ್ತದೆ.

12. (18) **ತಿಂತ್ರಿಣೀ ದ್ವೀಪ** [8] ದಲ್ಲಿ ಅಶ್ವಿನೀ ದೇವತೆಗಳು ತಪಸ್ಸುಮಾಡಿ ಸಾರವಾದ ಸಂಜೀವನೌಷಧವನ್ನು ಪಡೆದರು. ಇಲ್ಲಿ ತ್ರಿಕರಣದಿಂದ [9] ಮಾಡಿದ ಪುಣ್ಯ ಕೋಟಿ ಫಲವಾಗುತ್ತದೆ. ಈ ಹನ್ನೊಂದೂ [10] ಏಕಾದಶರುದ್ರರಿಂದ ಪಾಲಿತವಾಗಿವೆ.

---

2 ಬೆಟ್ಟದ ಕಣಿಗಲೆ ಹೂವು. 3 ದರ್ಶನ = ತತ್ತ್ವ, ಸಿದ್ಧಾಂತ, ಮತ. ಉದಾ. ಷಡ್ದರ್ಶನಗಳು. 4 ಶರ್ವ ಶಬ್ದದ ರೂಪಾಂತರ, ಶರ್ವ = ಈಶ್ವರ. ಶರ = ಬಾಣದ, ಪುಂಖ = ರೆಕ್ಕೆಯಂತಿರುವ ಹಿಂಭಾಗ, 5 ಅಶ್ವಮೇಧಯಾಗ ಮಾಡಿದ ಫಲ, ವಾಜಿ = ಅಶ್ವ. 6 ಅಧ್ಯಾಯ 16, 65 ನೋಡಿ. 7 ಅ. 66 ನೋಡಿ. 8 ತಿಂತ್ರಿಣೀ ಎಂದರೆ ಹುಣಿಸೇಮರ 9 ಕಾಯಾ, ವಾಚಾ,ಮನಸಾ (ದೇಹ, ಮಾತು,ಮನಸ್ಸು) ಇವೇ ತ್ರಿಕರಣಗಳು. 10 ಹನ್ನೊಂದು ಎಂದು ಹೇಳಿದ್ದರೂ ಹನ್ನೆರಡರ ಹೆಸರು ಕೊಟ್ಟಿದೆ. ಆದ್ದರಿಂದ ಯಾವುದೋ ಒಂದನ್ನು ಅದರ ಹಿಂದಿನದರಲ್ಲಿ ಅಂತರ್ಭಾವ ಮಾಡಿಕೊಳ್ಳಬೇಕು.

ಇನ್ನೂ ಕೆಲವು ಮುಖ್ಯವಾದ ಸ್ಥಳಗಳು

19. **ಕುಬೇರನಿಧಿ** ಎಂಬ ಗುಹೆಯು ಕುಬೇರ ತಪಸ್ಸುಮಾಡಿ ಶಿವಸಖನಾದ ಸ್ಥಳ.[1] ಇದರ ಸಮೀಪದಲ್ಲೇ (20) **ಅಗ್ರದ್ರೋಣಿ ತೀರ್ಥ**ವಿದೆ; ಇದು ಕಲಿ ಕಲ್ಮಶನಾಶಕ. 21. **ದುರ್ವಾಸಕ್ಷೇತ್ರ**—ದುರ್ವಾಸರು ಸ್ವಾತ್ಮ ಸಿದ್ಧಿಗಾಗಿ ತಪಸ್ಸು ಮಾಡಿದ ಸ್ಥಳ. ಸರ್ವಪುಣ್ಯಫಲಪ್ರದ. ಇಲ್ಲಿ ವಾಸಮಾಡಿದರೆ ಆಜ್ಞಾಸಿದ್ಧಿ, ವೇದದಲ್ಲಿ ದಾರ್ಢ್ಯ, ಶಾಸ್ತ್ರದೃಷ್ಟಿ, ಶಮಾದಿಗುಣಗಳು ಇವೆಲ್ಲಾ ಉಂಟಾಗುತ್ತವೆ.

22. **ವೇಣ್ವಾಶ್ರಮ**—ಈ ಸ್ಥಳದಲ್ಲಿ ವೇಣು ಎಂಬ ಮುನಿ ತಪಸ್ಸುಮಾಡುತ್ತಾ ಕುಳಿತನು. ಅವನ ಮೇಲೆ ಹುತ್ತ ಬೆಳೆಯಿತು. ಕಡೆಗೆ ವಿರೂಪಾಕ್ಷ ಪ್ರತ್ಯಕ್ಷನಾಗಿ ಆ ಮುನಿಗೆ ಸರ್ವರಂಜಕವಾದ ಗಂಧರ್ವ ವಿದ್ಯೆಯನ್ನನುಗ್ರಹಿಸಿದ.

23. **ಕುಠಾರಾವರ್ತ ತೀರ್ಥ**[2]—ಕ್ಷಾತ್ರಕುಲಾಂತಕನಾದ ಪರಶುರಾಮನು ಕ್ಷತ್ರಿಯರ ರಕ್ತದ ಸುಳಿಯಲ್ಲಿ ತನ್ನ ಕುಠಾರವನ್ನು ಇಟ್ಟ ಸ್ಥಳ. ಈ ಸ್ಥಳದಿಂದ ಧೈರ್ಯ ಸಿದ್ಧಿಯಾಗುತ್ತದೆ.

24. **ಕಠಾಶ್ರಮ**—ಕಠರೆಂಬ ಋಷಿಗಳು ಕರೀಕಲ್ಲಿನ (ಬಂಡೆಯ) ಮೇಲೆ ತಪಸ್ಸುಮಾಡಿ ಸರ್ವಜ್ಞತ್ವವನ್ನು ಪಡೆದ ಸ್ಥಳ. ಅನಂತರ ಅವರು ಇಲ್ಲೇ ಇದ್ದು ಯಜುರ್ವೇದಾಧ್ಯಯನ ಮಾಡಿಸಿದರು. 25-26 **ಅಷ್ಟಾವಕ್ರತೀರ್ಥ, ಕಣ್ವಾಶ್ರಮ.** ಈ ಎರಡೂ ಪಿತೃತರ್ಪಣಕ್ಕೆ ಮುಖ್ಯವಾದ ಸ್ಥಳಗಳು, 27, **ಜಟಾಯು ತೀರ್ಥ** ಸ್ನಾನದಿಂದ ಸಕಲ ಪಾಪನಾಶ. ಇವಲ್ಲದೆ 28. **ಗಾಲವ ತೀರ್ಥ,** 29. ಗೌತಮತೀರ್ಥ, 30. ಭರದ್ವಾಜ ತೀರ್ಥಗಳು ಕಲಿಕಲ್ಮಶನಾಶಕ. ನದೀಮಧ್ಯದಲ್ಲಿರುವ (31) ಭೃಗುತೀರ್ಥ 32. ಕ್ರತುತೀರ್ಥ. 33. ಆತ್ರೇಯತೀರ್ಥ 34. ಕಶ್ಯಪ ತೀರ್ಥ. 35. ಅಮೃತತೀರ್ಥ. 36. ದಾಮಕುಕ್ಷಿತೀರ್ಥವೂ ಸರ್ವಪಾಪ ಪ್ರಣಾಶಕ.

37. **ಸಾಂಬತೀರ್ಥ**[3]ದಲ್ಲಿ ಸ್ನಾನಮಾಡಿ ಸಾಂಬ ತಪೋಬಲದಿಂದ ಸರ್ವ ತೇಜೋಮಯವಾದ ಶರೀರಸಿದ್ಧಿ ಪಡೆದ. ಇದರಲ್ಲಿ ಸ್ನಾನಮಾಡಿ ಸಾಂಬಶಿವನನ್ನು ಆರಾಧಿಸಿದರೆ ಆಯುರಾರೋಗ್ಯವೂ ಕಾಂತಿಯೂ ಪ್ರವೃದ್ಧಿಯಾಗುತ್ತವೆ. 38. **ಅಗಸ್ತ್ಯತೀರ್ಥ**ದ ಸ್ನಾನಮಾತ್ರದಿಂದ ಮನುಜನು ತಾನೂ ಪವಿತ್ರನಾಗುವುದಲ್ಲದೆ ಹಿಂದೆ ಹತ್ತು, ಮುಂದೆ ಹತ್ತು ತಲೆಗಳ ವಂಶೀಕರನ್ನೆಲ್ಲಾ ಪಾವನಮಾಡುತ್ತಾನೆ. 39. **ಮರೀಚಿತೀರ್ಥ**—ಮರೀಚಿಋಷಿ ಸೂರ್ಯನನ್ನು ನೋಡುತ್ತಾ ತಪಸ್ಸುಮಾಡಿದಸ್ಥಳ. ಸರ್ವತೀರ್ಥಫಲ ಪ್ರದ.

40. **ವಾಸಿಷ್ಠ ತೀರ್ಥ** ಸರ್ವೋತ್ಕೃಷ್ಟವಾದುದು. ಇಲ್ಲಿ ಸ್ನಾನಜಪಹೋಮ

---

1 ಅಧ್ಯಾಯ 52 2 ಕುಠಾರ=ಕೊಡಲಿ. ಆವರ್ತ=ಸುಳಿ, ತಿರುಗುವಿಕೆ. 3 ಇದು ಮತಂಗಪರ್ವತದಲ್ಲಿದೆಯೆಂದು ಹಿಂದೆಯೇ ಹೇಳಿದೆ, 80ನೇ ಅಧ್ಯಾಯ ನೋಡಿ.

ಗಳು ಸಿದ್ಧಿಸುತ್ತವೆ. ಇದಕ್ಕೆ ದಕ್ಷಿಣದಲ್ಲೇ ಅಮೃತತೀರ್ಥ (ನಂಬರ್ 35) ಇದೆ. ಸೂರ್ಯವಂಶದ ಹರಿಶ್ಚಂದ್ರ ವಸಿಷ್ಠಾಶ್ರಮಕ್ಕೆ ಬಂದಾಗ ಅವರು ಅವನನ್ನು ಆದರಿಸಿ ಅವನಿಗೆ ವಿಶ್ವಾಮಿತ್ರಾಶ್ರಮಕ್ಕೆ ಹೋಗಬಾರದೆಂದು ಎಚ್ಚರಿಕೆ ಕೊಟ್ಟರು. ಅವರ ಮಾತನ್ನು ಪರಿಪಾಲಿಸಿದ ಕಾರಣ ಹರಿಶ್ಚಂದ್ರ ದುಷ್ಕರ್ಮದಿಂದ ಪಾರಾಗಿ ಇಷ್ಟಸಿದ್ಧಿ ಪಡೆದ.

ಇವುಗಳೇ ಅಲ್ಲದೆ ಇನ್ನೂ ಎಷ್ಟೋ ತೀರ್ಥಗಳಿವೆ; ಆದರೆ ವಸಿಷ್ಠತೀರ್ಥದ ಸಮಾನ ಭೂಮಿಯಲ್ಲಿ ಮತ್ತಾವುದೂ ಇಲ್ಲ. ಈ ಪ್ರಕಾರ ಗಂಧರ್ವವಿದ್ಯಾಧರ ಯಕ್ಷ ಸಿದ್ಧರಿಗೆ ಆವಾಸಭೂತವಾದ, ಶುಭಪ್ರದವಾದ ಮುಖ್ಯ ಮುಖ್ಯ ತೀರ್ಥಕ್ಷೇತ್ರಗಳನ್ನು ಮಾತ್ರ ಇಲ್ಲಿ ಹೇಳಿದ್ದೇನೆ. ಇವಲ್ಲದೆ ಇನ್ನೂ ಎಷ್ಟೋ ಇವೆ, ಅದರ ಸಂಖ್ಯೆ (ಮಹರ್ಷಿಗಳಾದ) ನಮಗೇ ಗೊತ್ತಿಲ್ಲ.

ಹರಿಶ್ಚಂದ್ರೋಪಾಖ್ಯಾನ

ಪೀಠಿಕೆ—ಇಲ್ಲಿಂದ 16 ದೊಡ್ಡದೊಡ್ಡ ಅಧ್ಯಾಯಗಳಲ್ಲಿ ಈ ಉಪಾಖ್ಯಾನ ನಿರೂಪಿತವಾಗಿದೆ. ಆದರೆ ಹರಿಶ್ಚಂದ್ರನ ಕಥೆ ಬಹು ಪ್ರಸಿದ್ಧವಾದ ಕಥೆ. ಅದನ್ನು ಈ ಸಂಗ್ರಹ ಪುಸ್ತಕದಲ್ಲಿ ವಿಸ್ತಾರವಾಗಿ ಹೇಳುವ ಅವಶ್ಯಕತೆ ನನಗೇನೂ ಕಂಡು ಬರುವುದಿಲ್ಲ. ಆದ್ದರಿಂದ ಈ ಭಾಗವನ್ನು ಬಹು ಸಂಕ್ಷೇಪವಾಗಿ ಹೇಳುತ್ತಾ ಮುಖ್ಯಾಂಶಗಳೇನಾದರೂ ಇದ್ದರೆ ಅವನ್ನು ವಿಶೇಷಾಕಾರವಾಗಿ ಉಲ್ಲೇಖಿಸುತ್ತಾ ಹೋಗಲಾಗಿದೆ—ವಿ. ತೀ.]

ವಿಷ್ಣುವೃದ್ಧನ ಪ್ರಾರ್ಥನೆ—(ಭರದ್ವಾಜರು ವಸಿಷ್ಠತೀರ್ಥವರ್ಣನಾವಸರದಲ್ಲಿ ಹೇಳಿದ ಹರಿಶ್ಚಂದ್ರನ ಕಥೆಯನ್ನು ಕೇಳಲು ಉತ್ಸುಕನಾಗಿ) ವಿಷ್ಣುವೃದ್ಧ ಭರದ್ವಾಜರನ್ನು "ವಸಿಷ್ಠರು ಹರಿಶ್ಚಂದ್ರನಿಗೆ ವಿಶ್ವಾಮಿತ್ರಾಶ್ರಮಕ್ಕೆ ಹೋಗಬಾರದೆಂದೇಕೆ ನಿರೋಧಿಸಿದರು? ಅದನ್ನು ವಿಸ್ತಾರವಾಗಿ ಹೇಳಬೇಕೆಂ"ದು ಪ್ರಾರ್ಥಿಸಿಕೊಂಡ. ಆದ್ದರಿಂದ ಭರದ್ವಾಜರು ಆ ಕಥೆಯನ್ನು ವಿಸ್ತಾರವಾಗಿ ಹೇಳತೊಡಗಿದರು.

115. (17) ವಸಿಷ್ಠ ವಿಶ್ವಾಮಿತ್ರರ ವಿವಾದ

ಒಂದು ದಿನ ದೇವೇಂದ್ರನ ಸಭೆಯಲ್ಲಿ ಇಬ್ಬರು ದೇವಗಾಯಕರು ಹರಿಶ್ಚಂದ್ರನ ಪ್ರಶಂಸೆಮಾಡಿ ಅವನು ಬಹಳ ಸತ್ಯಶೀಲನೆಂದು ಕೊಂಡಾಡಿದರು. ವಸಿಷ್ಠರು ಅವರ ಪ್ರಶಂಸೆಯನ್ನು ಅನುಮೋದಿಸಿ ಸಮರ್ಥಿಸಿದರು. ಅಲ್ಲೇ ಕುಳಿತಿದ್ದ ವಿಶ್ವಾಮಿತ್ರ ವಸಿಷ್ಠರ ಮಾತನ್ನು ಆಕ್ಷೇಪಿಸುತ್ತಾ "ಹರಿಶ್ಚಂದ್ರನನ್ನು ನಾನೂ ಬಲ್ಲೆ. ಅವನು ಒಳ್ಳೆಯ ರಾಜನೆಂಬುದರಲ್ಲೇನೂ ಸಂದೇಹವಿಲ್ಲ. ಆದರೆ ಮಹಾಸತ್ಯವಂತನೆಂಬುವನ್ನು ಒಪ್ಪುವುದಕ್ಕಾಗುವುದಿಲ್ಲ. ಕ್ಷಾತ್ರಧರ್ಮ ಸತ್ಯ ಈ ಎರಡೂ ಒಂದು ಕಡೆ ಸೇರುವುದೆಂದರೆ ಬೆಂಕಿಯೂ ಕತ್ತಲೆಯೂ ಒಂದು ಕಡೆ ಸೇರುವಂತೆ ಅಸಂಭವ. ಕುಲಪುರೋಹಿತನಾದ

ರಿಂದ ವಸಿಷ್ಠ ತನ್ನ ಶಿಷ್ಯನನ್ನು ವಹಿಸಿಕೊಂಡು ಮಾತಾಡುತ್ತಾನೆ" ಎಂದು ಬಿರುಸಾಗಿ ನುಡಿದರು.

ಅದನ್ನು ಕೇಳಿ ವಸಿಷ್ಠರು ಕೆರಳಿ ಎದ್ದು ನಿಂತು "ಇಡೀ ಭೂಮಿಯೇ (ಸ್ವಸ್ಥಾನದಿಂದ) ಚಲಿಸಿದರೆ, ಆಕಾಶವೇ ಕಳಚಿ ಬಿದ್ದರೆ, ಮಹಾಸಾಗರವೇ ಒಣಗಿ ಬತ್ತಿಹೋದರೆ ಹರಿಶ್ಚಂದ್ರನೂ ಅಸತ್ಯವಾಡಿಯಾನು.

ಚಲೇದ್ಯದಿ ಮಹೀ ಸರ್ವಾ ಪತೇದ್ದ್ಯೌರ್ಯದಿ ವಾಖಿಲಾ ।
ಶುಷ್ಯೇದ್ಯದಿ ಮಹಾಂಭೋಧಿ-ರ್ಹರಿಶ್ಚಂದ್ರೋಽಪ್ಯಸತ್ಯವಾಕ್ ॥

ನನ್ನ ಶಿಷ್ಯನೆಂದು ಹೊಗಳಿಕೊಳ್ಳುವುದಲ್ಲ, ಹರಿಶ್ಚಂದ್ರ ನಿರುಪಾಧಿಕವಾಗಿ ಸತ್ಯವನ್ನೇ ನುಡಿಯುತ್ತಾನೆ" ಎಂದು ಪ್ರತಿಭಟಿಸಿ ನುಡಿದರು. ಹೀಗೆಯೇ ಅವರಿಬ್ಬರಿಗೂ ಬಿರುನುಡಿಗಳು ನಡೆಯುತ್ತಿರಲು ಇಂದ್ರ ಇಬ್ಬರಿಗೂ ಸಮಾಧಾನ ಹೇಳಿ ಸಭೆಯನ್ನು ಮುಕ್ತಾಯಗೊಳಿಸಿದ. ಎಲ್ಲರೂ ತಮ್ಮ ತಮ್ಮ ನಿವಾಸಗಳಿಗೆ ತೆರಳಿದರು.

116. (18) ಹರಿಶ್ಚಂದ್ರನ ಬೇಟೆ

ಬಹುಸುವರ್ಣಯಾಗ—ವಸಿಷ್ಠರು ಶಿಷ್ಯನ ಕ್ಷೇಮಕ್ಕಾಗಿ ಶಿವನನ್ನು ಪ್ರಾರ್ಥಿಸಿ ರಾಜನಿಗೆ (ಅನಿಷ್ಟ ಪರಿಹಾರವಾಗುವುದಕ್ಕಾಗಿ) ಬಹುಸುವರ್ಣಯಾಗವನ್ನು ಮಾಡುವಂತೆ ಆಜ್ಞಾಪಿಸಿದರು. ಹರಿಶ್ಚಂದ್ರ ಆ ಯಾಗವನ್ನು ವೈಭವದಿಂದ ಮಾಡಿ ಮುಗಿಸಿದ. ಆ ಯಾಗಕ್ಕೆ ವಿಶ್ವಾಮಿತ್ರರೂ ಬಂದಿದ್ದರು. ರಾಜ ಅವರಿಗೆ ಅರ್ಧರಾಜ್ಯ ದಾನಮಾಡಿದನು. ಅವರು ಅದನ್ನು ತಾತ್ಕಾಲಿಕವಾಗಿ ಅವನಿಗೇ ಒಪ್ಪಿಸಿ ನೋಡಿಕೊಂಡಿರುವಂತೆ ಹೇಳಿ ರಾಜನಿಗೆ ಹರಸಿ ಹೋದರು.

ಮೃಗಬೇಟೆ—ಹರಿಶ್ಚಂದ್ರ ನಿರಾತಂಕವಾಗಿ ರಾಜ್ಯಭಾರ ಮಾಡುವುದನ್ನು ಕಂಡು ಅವನ ರಾಜ್ಯದಲ್ಲಿ ಕ್ಷೋಭೆ ಎಬ್ಬಿಸುವುದಕ್ಕಾಗಿ ವಿಶ್ವಾಮಿತ್ರರು ನಾನಾ ವಿಧವಾದ ಈತಿಬಾಧೆಗಳನ್ನು ಸೃಷ್ಟಿಸಿದರು. ನಾನಾ ದುಷ್ಟಮೃಗಗಳು ಹುಟ್ಟಿ ದೇಶವನ್ನೇ ನಾಶಪಡಿಸಿದುವು. ಜನರು ತಡೆಯಲಾರದೆ ಬಂದು ರಾಜನ ಮುಂದೆ ದೂರು ಹೇಳಿಕೊಂಡರು. ಹರಿಶ್ಚಂದ್ರರಾಜ ರಾಣೀ ಚಂದ್ರಮತಿ, ಮಗ ರೋಹಿತಾಶ್ವ, ಮಂತ್ರಿ ಸತ್ಯಕೀರ್ತಿಗಳನ್ನು ಕರೆದುಕೊಂಡು ಸೈನ್ಯ ಸಮೇತನಾಗಿ ಬೇಟೆಗೆ ಹೊರಟು ಕ್ರೂರ ಮೃಗಗಳನ್ನು ನಾಶಮಾಡುತ್ತಾ ವಶಿಷ್ಠರ ಆಶ್ರಮಕ್ಕೆ ಬಂದು ಸೇರಿದ.

117. (19). ವಶಿಷ್ಠರ ಧರ್ಮೋಪದೇಶ

ಹರಿಶ್ಚಂದ್ರ ಸೈನ್ಯವನ್ನು ದೂರದಲ್ಲೇ ನಿಲ್ಲಿಸಿ ಮಿತಪರಿವಾರದೊಡನೆ ಆಶ್ರಮ ಪ್ರವೇಶಮಾಡಿ ಗುರುಗಳಾದ ವಶಿಷ್ಠರಿಗೆ ನಮಸ್ಕಾರಮಾಡಿದ. ವಶಿಷ್ಠರು ಯೋಗ ಕ್ಷೇಮ ವಿಚಾರಿಸಿ ಸಮಯೋಚಿತವಾಗಿ ಧರ್ಮೋಪದೇಶಮಾಡಿ "ಇನ್ನು ನೇರವಾಗಿ ಅಯೋಧ್ಯೆಗೆ ಹಿಂದಿರುಗು. ವಿಶ್ವಾಮಿತ್ರರ ಆಶ್ರಮದ ಕಡೆಗೆ ಹೋಗಬೇಡ" ಎಂದು ಎಚ್ಚರಿಸಿ ಆಶೀರ್ವದಿಸಿ ಬೀಳ್ಕೊಟ್ಟರು.

118. (20). ಮಾಯಾವರಾಹ

ಹರಿಶ್ಚಂದ್ರ ಅವರ ಅಪ್ಪಣೆ ಪಡೆದು ಅವರು ಹೇಳಿದ್ದಂತೆ ವಿರೂಪಾಕ್ಷಸ್ವಾಮಿಯನ್ನಾರಾಧಿಸಿ ಆ ಕ್ಷೇತ್ರದಲ್ಲಿದ್ದ ಕ್ರೂರ ಮೃಗಗಳನ್ನು ಬೇಟೆಯಾಡಿ ವಿಶ್ರಮಿಸಿಕೊಳ್ಳುವುದಕ್ಕೆಂದು ಒಂದು ಕಡೆ ಕುಳಿತುಕೊಂಡ. ವಿಶ್ವಾಮಿತ್ರ ಇದನ್ನೆಲ್ಲಾ ಯೋಗ ದೃಷ್ಟಿಯಿಂದ ಕಂಡುಕೊಂಡು ಹರಿಶ್ಚಂದ್ರನನ್ನು ಆಕರ್ಷಿಸುವುದಕ್ಕಾಗಿ ಒಂದು ಮಾಯಾ ವರಾಹವನ್ನು ಸೃಷ್ಟಿಸಿ ಹರಿಶ್ಚಂದ್ರನ ಬಳಿಗೆ ಕಳುಹಿಸಿದರು. ಅದು ನುಗ್ಗಿ ಬಂದ ರಾಜನ ಸೈನ್ಯವನ್ನೆಲ್ಲಾ ಕ್ಷಣಮಾತ್ರದಲ್ಲಿ ಅಲ್ಲೋಲಕಲ್ಲೋಲ ಮಾಡಿತು.

ಈ ಸುದ್ದಿ ಬಂದೊಡನೆಯೇ ರಾಜ ಧನುರ್ಬಾಣ ತೊಟ್ಟು ಆ ವರಾಹವನ್ನು ಬೆನ್ನಟ್ಟಿದ. ಅದು ಕೈಗೆ ಸಿಕ್ಕಿದಂತೆ ನಟಿಸುತ್ತಾ ರಾಜನನ್ನು ವಂಚಿಸಿ ಕಾಡಿನಿಂದ ಕಾಡಿಗೆ ಓಡುತ್ತಾ ಹರಿಶ್ಚಂದ್ರನನ್ನು ಎಲ್ಲಿಗೋ ಬಹುದೂರ ಒಯ್ದುಬಿಟ್ಟಿತು. ಅಷ್ಟಾದರೂ ಬಿಡದೆ ರಾಜ ಆ ಮೃಗವನ್ನು ಬಾಣದಿಂದ ಹೊಡದೇ ಬಿಟ್ಟ. ಆಮೇಲೆ ರಕ್ತದ ಚಿಹ್ನೆಯಿಂದ ದಾರಿ ಗುರುತಿಸಿಕೊಂಡು ಸೈನ್ಯದ ಬಳಿಗೆ ಬಂದು ದಣುವಾರಿಸಿಕೊಳ್ಳಲು ಒಂದು ಮರದ ಕೆಳಗೆ ಕುಳಿತುಕೊಂಡ.

119. (21). ಚಂಡಾಲಕನ್ಯೆಯರು

ಆಯಾಸದಿಂದ ಬಳಲಿಹೋಗಿದ್ದ ರಾಜ ರಾಣಿಯ ತೊಡೆಯಮೇಲೆ ಹಾಗೆಯೇ ಪವಡಿಸಿದ. ಒಡನೆಯೇ ನಿದ್ದೆ ಹತ್ತಿತು. ಆದರೆ ಭಯಂಕರ ದುಃಸ್ವಪ್ನಗಳನ್ನು ಕಂಡು ಬೆಚ್ಚಿ ಎದ್ದುಬಿಟ್ಟ. ರಾಜ ರಾಣಿ ಮಂತ್ರಿಗಳು ಸ್ವಪ್ನವೃತ್ತಾಂತವನ್ನೆತ್ತಿ ಮಾತಾಡುತ್ತಿದ್ದಾಗ ಕೆಲವು ಋಷಿಕುಮಾರಕರು ಮಾತಾಡಿಕೊಳ್ಳುತ್ತಾ ಸರಿದು ಹೋದರು. ಅವರ ಮಾತಿನಿಂದ ಅದು ವಿಶ್ವಾಮಿತ್ರಾಶ್ರಮವೆಂದು ಗೊತ್ತಾಯಿತು. ಗುರುಗಳ ಆಜ್ಞಾಭಂಗವಾಯಿತಲ್ಲಾ ಎಂದು ಅವರಿಗೆಲ್ಲಾ ಬಹಳ ಪೇಚಾಟವಾಯಿತು.

ಇಷ್ಟರಲ್ಲಿ ರಾಜನಿಂದ ಬಾಣಹತವಾದ ವರಾಹ ವಿಶ್ವಾಮಿತ್ರರ ಎದುರಿಗೆ ಬಂದು ಹೊರ ಳಾಡುತ್ತಾ ಬಿತ್ತು.

ಮಹರ್ಷಿ ಆ ಮೃಗವನ್ನು ಬಹಳ ಶ್ಲಾಘಿಸಿ ಮರುಕ್ಷಣದಲ್ಲೇ ಹರಿಶ್ಚಂದ್ರನ ಮೇಲೆ ರೋಷಾವಿಷ್ಟಚಿತ್ತರಾಗಿ ಕಿಡಿಕಿಡಿಯಾದರು. ಅವರ ಕೋಪದಿಂದ ಹುಟ್ಟಿದ ಬೆವರಿನ ಹನಿಯಿಂದ ಇಬ್ಬರು ಸ್ಫುರದ್ರೂಪಿಗಳಾದ ಚಂಡಾಲ ಕನ್ನಿಕೆಯರು ಪ್ರಾದುರ್ಭ ವಿಸಿ ಋಷಿಗೆ ಪ್ರಣಾಮಮಾಡಿ "ನಮಗೆ ಏನಾಜ್ಞೆ ?" ಎಂದು ಕೇಳಿದರು. ಋಷಿ ಅವರಿಗೆ "ನಾನಾ ಹಾವಭಾವವಿಲಾಸ ಭಂಗಿಗಳಿಂದ ಹರಿಶ್ಚಂದ್ರನನ್ನು ವಂಚಿಸಿ ಧರ್ಮ ಚ್ಯುತನನ್ನಾಗಿ ಮಾಡಿರಿ" ಎಂದು ಆಜ್ಞಾಪಿಸಿ ಕಳುಹಿಸಿದರು.

120. (22). ಕನ್ಯೆಯರ ಭಂಗ

ಋಷಿಯ ಅಪ್ಪಣೆಯಂತೆ ಆ ಕನ್ಯೆಯರಿಬ್ಬರೂ ರಾಜನ ಬಳಿಗೆ ಬಂದು ಏನೇನೋ ಹಾವ ಭಾವಗಳನ್ನು ಬೀರುತ್ತಾ ಬೆಡಗುಮಾಡಿದರು. ಆದರೆ ಹರಿಶ್ಚಂದ್ರ ಜುಮ್ಮೆನ್ನಲಿಲ್ಲ. ಕಡೆಗೆ ತೀರ ಮರ್ಯಾದೆ ಮೀರುವ ಪ್ರಸಂಗ ಬರಲು ರಾಜ ಅವರಿಬ್ಬರನ್ನೂ ಕಶಾಘಾತ ದಿಂದ [1] ಹೊಡೆಸಿ ದೂಡಿಸಿಬಿಟ್ಟ. ಅವರು ಏಟಿನ ನೋವು ಸಹಿಸಲಾರದೆ ಗೋಳಾ ಡುತ್ತಾ ಅಬ್ಬರ ಮಾಡಿಕೊಂಡು ಋಷಿಯ ಮುಂದೆ ಮುಕ್ತಕಂಠದಿಂದ ಪ್ರಲಾಪಿಸಿದರು.

ಅವರ ಗೋಳಾಟ ಕೇಳಿ ರಾಜನಿಗೆ ಎದೆಯೇ ಒಡೆಯಿತು. ಮುಂದೇನು ಗತಿ ಯೆಂದು ಯೋಚಿಸುತ್ತಿರುವಷ್ಟರಲ್ಲಿ ವಿಶ್ವಾಮಿತ್ರರೇ ಅಲ್ಲಿಗೆ ದಯಮಾಡಿಸಿದರು.

121. *(23).* ರಾಜ್ಯಾಪಹರಣ

ಭರಭರುತ್ತಲೇ ವಿಶ್ವಾಮಿತ್ರ ಹುಬ್ಬು ಗಂಟು ಹಾಕಿಕೊಂಡೇ ಕೆಂಡ ಕಾರುತ್ತ ಬಂದರು. ರಾಜ

ಸಂರಂಭಪ್ರತಿಕಾರೋ ಹಿ ಪ್ರಣಿಪಾತೋ ಮಹಾತ್ಮನಾಮ್

ಮಹಾತ್ಮರ ಕೋಪಕ್ಕೆ ನಮಸ್ಕಾರವೇ ಪ್ರತಿಕಾರ (ಪರಿಹಾರ) ವೆಂದು ತಿಳಿದು ಋಷಿಗಳ ಪಾದ ಹಿಡಿದು ನಮಸ್ಕಾರ ಮಾಡಿದ. ಆದರೆ ವಿಶ್ವಾಮಿತ್ರ ರಾಜನನ್ನು ಝಾಡಿಸಿ ಒದ್ದು ಹೀನಾಮಾನ ದೂಷಿಸಿದರು. ರಾಜ ಅದೆಲ್ಲವನ್ನೂ ಸಹಿಸಿಕೊಂಡು ಕ್ಷಮಾಪಣೆ ಬೇಡಿದ.

ಆಗ ಋಷಿ "ಹಾಗಾದರೆ ನನ್ನ ಆ ಇಬ್ಬರು ಕನ್ಯೆಯರನ್ನೂ ವಿವಾಹವಾಗು" ಎಂದರು. ವಜ್ರಾಘಾತೋಪಮವಾದ ಆ ಮಾತು ಕೇಳಿ ಹರಿಶ್ಚಂದ್ರನಿಗೆ ಮೂರ್ಛೆಯೇ ಬಂತು. ಚೇತರಿಸಿಕೊಂಡೆದ್ದು ಕೈಮುಗಿದು "ಕೋಶಾಗಾರ ಸಹಿತವಾದ ರಾಜ್ಯ ವನ್ನಾದರೂ ಕೊಟ್ಟೇನು, ಇವರನ್ನು ಎಂದೆಂದಿಗೂ ಪರಿಗ್ರಹಿಸಲಾರೆ" ಎಂದ.

---

1 ಬಾರುಕೋಲಿನ ಹೊಡೆತ, ಛಾವಟಿಯ ಏಟು.

ಮುನಿಗಳಿಗೆ ಅಷ್ಟೇ ಬೇಕಾಗಿತ್ತು. "ನೀನು ಸತ್ಯವಾದಿಯಲ್ಲವೇ ? ನೀನು ನುಡಿದಂತೆ ರಾಜ್ಯವನ್ನು ಕೊಟ್ಟುಬಿಡು" ಎಂದು ಪೀಡಿಸಿ ರಾಜ್ಯಾಪಹಾರ ಮಾಡಿದ್ದಲ್ಲದೆ "ನೀನು ನನ್ನ ರಾಜ್ಯದಲ್ಲೇ ಇರಕೂಡದೆಂ"ದು ಹೇಳಿ ರಾಜ್ಯದಿಂದಲೂ ಹೊರಮೂಡಿಬಿಟ್ಟರು.

[ಸೂಚನೆ—ಮೂಲದಲ್ಲಿ ವಿಶ್ವಾಮಿತ್ರನ ಕೋಪಾವಸ್ಥೆಯನ್ನು ವಿಸ್ತಾರವಾಗಿ ಬಹು ಸ್ವಾರಸ್ಯವಾಗಿ ಮಾಡಿದೆ. ಮತ್ತು ಹೆಜ್ಜೆಹೆಜ್ಜೆಗೂ ವಿಶ್ವಾಮಿತ್ರರ ಕಠೋರತನವನ್ನು ಮನವುಟ್ಟುವಂತೆ ವರ್ಣಿಸಿದೆ.]

122. (24). ರಾಜ್ಯದಿಂದ ನಿರ್ಗಮನ

ಅಷ್ಟಕ್ಕೆ ತೃಪ್ತರಾಗದೆ ವಿಶ್ವಾಮಿತ್ರ ರಾಜನನ್ನು ಪೀಡಿಸುವುದಕ್ಕೆ ಒಂದು ಹೊಸ ಯುಕ್ತಿ ಹೂಡಿದರು. "ಹಿಂದೆ ನೀನು ನನಗೆ ಅರ್ಧರಾಜ್ಯ ಕೊಟ್ಟಿದ್ದಿಯಷ್ಟೆ. ಅದನ್ನು ನಿನಗೇ ಒಪ್ಪಿಸಿ ಹೋಗಿದ್ದೆನಲ್ಲಾ, ಅದನ್ನು ಈಗ ಹಿಂದಿರುಗಿಕೊಡು. ಇಲ್ಲದಿದ್ದರೆ ನಿನ್ನ ಸತ್ಯತೆ ಭ್ರಷ್ಟವಾಗುತ್ತದೆ" ಎಂದು ಕಾಡಿಸತೊಡಗಿದರು. ರಾಜನಿಗೆ ದಿಕ್ಕೇ ತೋರದಂತಾಯಿತು. ಆ ಋಷಿಯನ್ನೇ ಮೊರೆಹೊಕ್ಕು "ಅಖಂಡ ರಾಜ್ಯವನ್ನೇ ತಮಗೆ ಒಪ್ಪಿಸಿರುವಾಗ ನನಗೆ ಗತ್ಯಂತರವೆಲ್ಲಿದೆ ? ತಾವೇ ಹೇಳಬೇಕು" ಎಂದು ದೈನ್ಯತೆಯಿಂದ ಬೇಡಿಕೊಂಡ.

ಆ ಮುನಿ "ಕೊಡಬೇಕೆಂಬ ಮನಸ್ಸಿದ್ದರೆ ಉಪಾಯಗಳಿಗೇನು ಕಡಿಮೆ ? ನೀವು ರಾಜ ರಾಣಿ ಮಗ ಮೂವರಿದ್ದೀರಲ್ಲವೆ ? ಎಲ್ಲರನ್ನೂ ಮಾರಿ ಹಣ ತಂದೊಪ್ಪಿಸು. ನಿನಗಾಗಿ ಒಂದು ಮಂಡಲ (48 ದಿನ) ಅವಧಿಕೊಟ್ಟಿದ್ದೇನೆ ಆದರೆ ನನ್ನ ರಾಜ್ಯದಲ್ಲಿ ಮಾತ್ರ ಯಾರಿಗೂ ಮಾರಿಕೊಳ್ಳಕೂಡದು. ಅವಧಿಯೊಳಗಾಗಿ ಹಣ ಮುಟ್ಟಿಸದಿದ್ದರೆ ನಿನ್ನ ಮಾತು ಹೋದಂತೆ" ಎಂದು ನಿಷ್ಠೂರವಾಗಿ ನುಡಿದು ಸ್ಮರಣ ಮಾತ್ರದಿಂದ ಸನ್ನಿಹಿತನಾದ ನಕ್ಷತ್ರಿಕನೆಂಬ ಶಿಷ್ಯನಿಗೆ ರಾಜನನ್ನೊಪ್ಪಿಸಿ ತಾವು ಹೊರಟುಹೋದರು.

ಕ್ರೌರ್ಯದಲ್ಲಿ ನಕ್ಷತ್ರಿಕ ಗುರುವಿಗಿಂತಲೂ ಮೂರು ಹೆಜ್ಜೆ ಮುಂದಿದ್ದ. ರಾಜನಿಗೆ ಹೆಜ್ಜೆ ಹೆಜ್ಜೆಗೂ ಅವನ ತಗಾದೆ ತಡೆಯುವುದು ಅಸಾಧ್ಯಕ್ಕಿಟ್ಟುಕೊಂಡಿತು. ರಾಜ ಬಹಳ ಯೋಚಿಸಿ

ಹೇಮಕೂಟಶ್ಚ ಕಾಶೀ ಚ ಕ್ಷೇತ್ರೇ ದ್ವೇ ಜಗತಿ ಸ್ಫುಟೇ ।
ಈಶ್ವರಾಜ್ಞೈವ ಜಾಗರ್ತಿ ನಾನ್ಯಾಜ್ಞಾ ಕಾಚಿದೇತಯೋಃ ॥

"ಹೇಮಕೂಟ ಕಾಶೀ ಈ ಎರಡು ಕ್ಷೇತ್ರಗಳಲ್ಲಿ ಈಶ್ವರಾಜ್ಞೆಯೊಂದೇ ನಡೆಯುತ್ತದೆ. ಇತರರು ಇವುಗಳ ಮೇಲೆ ಶಾಸನ ಮಾಡಲಾರರು. ಆದ್ದರಿಂದ ಕಾಶಿಗೆ

ಹೋಗಿ ದುಡ್ಡು ಸಂಗ್ರಹಿಸುವ ಪ್ರಯತ್ನ ಮಾಡುತ್ತೇನೆ" ಎಂದು ಯೋಚಿಸಿಕೊಂಡು ಕಾಶೀ ಕಡೆಗೆ ಪ್ರಯಾಣ ಬೆಳೆಸಿದ.

123. (25). ಮಾರ್ಗದಲ್ಲಿ ಮಾಯಾ ಸೃಷ್ಟಿ

ರಾಜನ ನಿರ್ಧಾರಕ್ಕೆ ಬೆರಗಾಗಿ ಮುನಿ ಅವನು ಕಾಶಿಗೇ ಹೋಗದಂತೆ ಮಾಡ ಬೇಕೆಂದು ನಿರ್ಧರಿಸಿಕೊಂಡು ಮೊದಲು ಹೆಜ್ಜೆ ಹೆಜ್ಜೆಗೂ ಹರಿಶ್ಚಂದ್ರನಿಗೆ ದಾರಿ ತಪ್ಪಿ ಹೋಗುವಂತೆ ನಾನಾಮಾಯೆಗಳನ್ನು ಸೃಷ್ಟಿಸಿದರು. ಒಂದು ಕಡೆ ದಾರಿ ತಪ್ಪುತ್ತಿತ್ತು. ಇನ್ನೊಂದು ಕಡೆ ಹೆಂಡತಿ ಮಕ್ಕಳೇ ಕಾಣಿಸದಂತಾಗುವರು. ಈ ಕಡೆ ದಟ್ಟವಾದ ಕಾಡು ಬಂದರೆ ಆ ಕಡೆ ಗುಡ್ಡ ಎದುರಾಗುವುದು. ಇಲ್ಲಿ ಭಯಂಕರವಾದ ಬಿರುಗಾಳಿ ಏಳುವುದು, ಅಲ್ಲಿ ಪ್ರಳಯಾಗ್ನಿಯಲ್ಲಿ ದಾರುಣವಾದ ಮಾಯಾವಹ್ನಿಯ ಕಿಚ್ಚು ಕವರಿಕೊಳ್ಳುವುದು. ಸಾಲದ್ದಕ್ಕೆ ಮಧ್ಯೆ ಮಧ್ಯೆ ನಕ್ಷತ್ರಿಕ ಕಾಣಿಸಿಕೊಂಡು 'ಅಷ್ಟು ದಿನವಾಯಿತು' 'ಇಷ್ಟು ದಿನವಾಯಿತು' 'ಯಾವಾಗ ಕೊಡುವಿ?' ಎಂದು ಬೇರೆ ಕೈ ಕಾಲುಗೆಡಿಸುವನು.

ಹರಿಶ್ಚಂದ್ರ ಇಷ್ಟೆಲ್ಲಾ ಕಷ್ಟಗಳನ್ನು ಎದುರಿಸಬೇಕಾಗಿ ಬಂದದ್ದರಿಂದ ಒಂದು ತಿಂಗಳು ಕಳೆದರೂಕೇವಲ ಒಂದು ಹರಿದಾರಿ ಪ್ರಯಾಣ ಸಾಗಿಸಿದ್ದ.

124. (26) ಚಂದ್ರವತಿ ವಿಕ್ರಯ

ಎಲ್ಲ ಕಷ್ಟಗಳನ್ನೂ ಎದುರಿಸಿಕೊಂಡು ಹಾಗೂ ಹೀಗೂ ಕಾಶೀ ಸೇರುವ ಹೊತ್ತಿಗೆ 48 ದಿನಗಳ ಅವಧಿಯಲ್ಲಿ 2 ದಿನ ಉಳಿದುಕೊಂಡವು. ಈ ವಿಚಾರ ಮನಸ್ಸಿನಲ್ಲಿ ಬರುವ ಹೊತ್ತಿಗೆ ಸರಿಯಾಗಿ ನಕ್ಷತ್ರಿಕ ಕಾಣಿಸಿಕೊಂಡು ಪರುಶೋಕ್ತಿಗಳನ್ನಾಡಿ ಹೋದ. ಬೀದಿಬೀದಿ ಸುತ್ತುವಷ್ಟರಲ್ಲಿ ಆ ದಿನವೂ ಕಳೆದೇಹೋಯಿತು. ನಕ್ಷತ್ರಿಕ ಪುನಃ ಕಾಣಿಸಿಕೊಂಡು ಎಚ್ಚರಿಕೆ ಕೊಟ್ಟು ಹೋದ.

ರಾಜ ರಾಣಿಯನ್ನೂ ಮಗನನ್ನೂ ಮಾರುವುದಕ್ಕಾಗಿ ಬೀದಿಬೀದಿಯಲ್ಲಿ ಕೂಗುತ್ತಾ ಹೊರಟ. ಕಾಲಕೌಶಿಕ [1] ನೆಂಬ ಬ್ರಾಹ್ಮಣ ಲಕ್ಷ ಬಂಗಾರ ನಾಣ್ಯಕ್ಕೆ ಚಂದ್ರವತಿ ರೋಹಿತಾಶ್ವ ಇಬ್ಬರನ್ನೂ ಕೊಂಡುಕೊಂಡ. ಆ ಹಣವನ್ನು ರಾಜ ನಕ್ಷತ್ರಿಕನಿಗೆ ಒಪ್ಪಿಸಿದರೆ ಅವನೇನೆನ್ನಬೇಕು ? "ಈ ಹಣ ನಾನು ಇಷ್ಟು ದಿನ ನಿನ್ನ ಹಿಂದೆ ಸುತ್ತಾಡಿದ್ದಕ್ಕೆ ಕೂಲಿಯಾಯಿತು. ಇನ್ನು ಒಂದೇ ಋಣವ ಉಳಿದಿವೆ, ಬೇಗ ಗುರುಗಳ ಹಣ ತೀರಿಸಿ ಕೊಟ್ಟು ವಚನ ಉಳಿಸಿಕೋ" ಎಂದು ನಿರ್ದಯವಾಗಿ ಹೇಳಿದ.

---

1 ಮೂಲದಲ್ಲಿ ಇವನ ವರ್ಣನೆ ಕಣ್ಣಿಗೆ ಕಟ್ಟುವಂತೆ ಮಾಡಿದೆ. ಕಾಲ = ಕಪ್ಪು ಅಥವಾ ಯಮ. ಕೌಶಿಕ = ವಿಶ್ವಾಮಿತ್ರ. ಹೆಸರಿನಲ್ಲೇ ಬಹಳ ಸ್ವಾರಸ್ಯವಿದೆ.

125. (27) ವೀರಬಾಹು

ಮುಂದಿನ ಕಾರ್ಯಾಲೋಚನೆ ಮಾಡುತ್ತಿರುವಷ್ಟರಲ್ಲೇ ಸೂರ್ಯಾಸ್ತಮಯ ಸಮಯ ಸಮೀಪಿಸಿತು. ಹರಿಶ್ಚಂದ್ರ ಎಲ್ಲೆಲ್ಲಿ ಅಡ್ಡಾಡಿದರೂ ಅವನನ್ನು ಕೊಂಡು ಕೊಳ್ಳುವ ದಣಿ ಸಿಕ್ಕಲಿಲ್ಲ. ನಕ್ಷತ್ರಿಕ ಪುನಃ ಬಂದು ಎಚ್ಚರಿಸಿ ಹೋದ. ರಾಜ ನಿರಾಶನಾಗುವ ಸಂಭವ. ಅಷ್ಟರಲ್ಲೇ ಸ್ಮಶಾನ ಕಾಯುವ ವೀರಬಾಹುವೆಂಬ ಚಂಡಾಲ [1] ರಾಜನನ್ನು ಕೊಂಡುಕೊಳ್ಳಲು ಬಂದ.

126. (28) ಋಣವಿಮೋಚನೆ

ವ್ಯಾಪಾರದ ಚೌಕಾಸಿ ನಡೆಯಿತು. ವೀರಬಾಹು ಒಂದು ಪದ್ಮ ಸಂಖ್ಯೆ ಹಣ ಕೊಟ್ಟು ಹರಿಶ್ಚಂದ್ರನನ್ನು ಕೊಂಡುಕೊಂಡ. ಆ ಹಣವನ್ನು ನಕ್ಷತ್ರಿಕನಿಗೆ ಒಪ್ಪಿಸಿ ಹರಿಶ್ಚಂದ್ರ ಋಷಿಯ ಋಣದಿಂದ ವಿಮುಕ್ತನಾದ. ಆದರೆ ಸ್ಮಶಾನ ಕಾಯುವ ಹೊತ್ತು ಬಂತು. ಎಲ್ಲವೂ ಪ್ರಾರಬ್ಧಕರ್ಮದ ಫಲ.

127. (29) ಚಂದ್ರವತೀ ರೋಹಿತಾಶ್ವರ ದುಃಸ್ಥಿತಿ

ಕಾಲಕೌಶಿಕನು ಚಂದ್ರವತೀ ರೋಹಿತಾಶ್ವ ಇಬ್ಬರನ್ನೂ ಚಿತ್ರವಿಚಿತ್ರವಾಗಿ ಹಿಂಸಿಸುತ್ತಿದ್ದ. ರೋಹಿತಾಶ್ವ ಕಾಡಿಗೆ ಹೋಗಿದ್ದಾಗ ಹಾವು ಕಚ್ಚಿ ಮೃತನಾದ. ಚಂದ್ರವತೀ ಮಗನ ಕಳೇಬರವನ್ನು ತೆಗೆದುಕೊಂಡು ಉತ್ತರಕ್ರಿಯೆ ನಡೆಸಲು ಸ್ಮಶಾನಕ್ಕೆ ಬಂದಳು.

128. (30) ಚಂದ್ರವತೀ ವಧೋದ್ಯಮ

ಸ್ಮಶಾನಕ್ಕೆ ಬಂದ ಚಂದ್ರವತಿ ವೀರಬಾಹುವಿನ ಭಟರ ಕೈಲಿ ಸಿಕ್ಕಿಬೀಳುವಳು. ವೀರಬಾಹು ಅವಳನ್ನು ವಧಿಸುವಂತೆ ಸೇವಕನಾದ ಹರಿಶ್ಚಂದ್ರನಿಗೇ ಅಪ್ಪಣೆಮಾಡಿದ. ಸತ್ಯವಂತನಾದ ಹರಿಶ್ಚಂದ್ರ ದಣಿಯ ಅಪ್ಪಣೆ ಮೀರಲಾರದೆ ತನ್ನ ಪತ್ನಿಯನ್ನೇ ಕೊಲ್ಲುವುಕ್ಕೆ ಸಿದ್ಧನಾಗಿ ಖಡ್ಗವನ್ನೆತ್ತಿ ಪ್ರಹಾರಮಾಡಲನುವಾದ.

129. (31) ವರದಾನ (ಕಥಾಸಮಾಪ್ತಿ)

ರಾಜನ ಸತ್ಯನಿಷ್ಠೆ ಕಂಡು ವಿಶ್ವಾಮಿತ್ರ ಬೆರಗಾಗಿ ಹೋದರು. ಕೂಡಲೇ ತಾವೇ ಶಿಷ್ಯಸಮೇತರಾಗಿ ಸ್ಮಶಾನಭೂಮಿಗೆ ಬಂದು ರಾಜನನ್ನು ಪ್ರಶಂಸಿಸಿದರು. ಅಲ್ಲಿಗೆ

---

1 ಮೂಲದಲ್ಲಿ ಇವನ ವರ್ಣನೆಯೂ ಚೆನ್ನಾಗಿದೆ. ಭೀಭತ್ಸರಸ ತುಂಬಿ ತುಳುಕಾಡುವಂತಿದೆ.

ತ್ರಿಮೂರ್ತಿಗಳೂ ಇತರ ದೇವತೆಗಳೂ ಋಷಿಗಳೂ ಬಂದು ಹರಿಶ್ಚಂದ್ರನಿಗೆ ಬೇಕು ಬೇಕಾದ ವರದಾನ ನೀಡಿದರು. ರೋಹಿತಾಶ್ವನೂ ಬದುಕಿದ. ಹರಿಶ್ಚಂದ್ರ ಅಯೋಧ್ಯೆಗೆ ಹೋಗಿ ಸಿಂಹಾಸನಾರೋಹಣ ಮಾಡಿದ.

ಫಲಸ್ತುತಿ—ಹೀಗೆ ಪ್ರಸಂಗಾತ್ ಹೇಳಿದ ಈ ಹರಿಶ್ಚಂದ್ರೋಪಾಖ್ಯಾನವನ್ನು ಓದುವವರು ಮೋಹರಹಿತರಾಗಿ ಶಿವಸಾಯುಜ್ಯವನ್ನು ಹೊಂದುವರು.

130. (32) ನದೀತೀರದ ತೀರ್ಥಗಳು

ಹರಿಶ್ಚಂದ್ರೋಪಾಖ್ಯಾನವನ್ನು ಕೇಳಿದ ಬಳಿಕ ವಿಷ್ಣುವೃದ್ಧ ಪುನಃ ಭರದ್ವಾಜರನ್ನು "ತುಂಗಭದ್ರಾ ನದೀತೀರದಲ್ಲಿರುವ ತೀರ್ಥಗಳನ್ನು ತಿಳಿಸಬೇಕು" ಎಂದು ಪ್ರಾರ್ಥಿಸಿಕೊಂಡ. ಅದಕ್ಕೆ ಭರದ್ವಾಜರು ಆ ತೀರ್ಥಗಳನ್ನು ವರ್ಣಿಸಿದರು.

1. (41) **ಪಾಪಶಾಶನ ತೀರ್ಥ** [1] ವಸಿಷ್ಠಾಶ್ರಮದಲ್ಲಿದೆ. ಇಲ್ಲಿ ದೇವರ್ಷಿ ಪಿತೃತರ್ಪಣ ಕೊಟ್ಟವನು ಬ್ರಹ್ಮಹತ್ಯಾದಿ ದೋಷಗಳಿಂದ ಮುಕ್ತನಾಗುತ್ತಾನೆ. **2.** (42) **ಸುರಸಾಸಂಗಮು ತೀರ್ಥವೂ** ಅದಕ್ಕೆ ಹತ್ತಿರದಲ್ಲೇ ಇದೆ. ಇದರಲ್ಲಿ ಸ್ನಾನಮಾಡಿದರೆ ನೂರು ಗಂಗಾಸ್ನಾನ ಮಾಡಿದ ಫಲವುಂಟಾಗುತ್ತದೆ.

3. (43) **ಕಕುಭತೀರ್ಥ** [2] (ಹಿಂದೆ ನದೀತೀರದಲ್ಲಿ) ಗಗನಚುಂಬಿಗಳಾದ ಶಾಖೋಪಶಾಖೆಗಳಿಂದ ಕೂಡಿದ ದೊಡ್ಡ ಕೆಂಪುಮತ್ತಿಮರ (ಅರ್ಜುನವೃಕ್ಷ ಅಥವಾ ಕಕುಭವೃಕ್ಷ)ವಿತ್ತು. ಒಂದು ದಿನ ಒಂದು ವಾನರ ಆ ಮರದ ಮೇಲೆ ಹತ್ತಿ ತನ್ನ ಚಪಲಬುದ್ಧಿಗನುಗುಣವಾಗಿ ಕೊಂಬೆಯಿಂದ ಕೊಂಬೆಗೆ ಹಾರಾಡುತ್ತಿತ್ತು. ಅಷ್ಟರಲ್ಲೇ ಇದ್ದಕ್ಕಿದ್ದ ಹಾಗೆ ನದೀಪ್ರವಾಹ ಬಂದು ಆ ಗಿಡವನ್ನೇ ಮುಳುಗಿಸುವಷ್ಟು ಮೇಲಕ್ಕೆ ನೀರು ಏರಿತು. ಭೀತನಾದ ಕಪಿ, ಏನು ಮಾಡುವುದಕ್ಕೂ ತೋರದೆ ಚಪಲಬುದ್ಧಿಯಿಂದ ನದೀ ಪ್ರವಾಹದಲ್ಲೇ ಧುಮುಕಿತು. ಬಿದ್ದೊಡನೆಯೇ ಮುಕ್ತಜೀವಿತವಾಗಿ (ಎಂದರೆ ಪ್ರಾಣ ಹೋಗಿ) ಆ ವಾನರ ಅಮರರಿಗೂ ದುಷ್ಪ್ರಾಪವಾದ ಬ್ರಹ್ಮಲೋಕವನ್ನು ಸೇರಿತು. ಆ ಮತ್ತಿಮರ ಈಗಲೂ ನದೀಪ್ರವಾಹ ಮಧ್ಯದಲ್ಲಿದೆ. ಇದರಿಂದ ಭೃಗುಪಾತ ಫಲ [?] ದೊರಕುವುದೆಂದು ಆಸ್ತಿಕರು ಹೇಳುತ್ತಾರೆ.

---

1 ಹಿಂದೆ 47ನೆ ಅಧ್ಯಾಯದಲ್ಲಿ ಬೇರೆ ಒಂದು ಪಾಪನಾಶನ ತೀರ್ಥದ ವರ್ಣನೆ ಬಂದಿತ್ತು. ಆದರೆ ಅದು ನದೀತೀರಕ್ಕೆ ಬಹುದೂರದಲ್ಲಿದೆ. ಆದ್ದರಿಂದ ಇಲ್ಲಿ ಹೇಳಿರುವ ಈ ತೀರ್ಥವೇ ಬೇರೆ ಇರಬೇಕು. ಇದೇ ರೀತಿ ಒಂದೇ ಹೆಸರಿನ ಇನ್ನೂ ಅನೇಕ ತೀರ್ಥಗಳ ಪ್ರಸಕ್ತಿ ಬಂದಿದೆ. ಉದಾ: ಅಮೃತತೀರ್ಥ ಅಧ್ಯಾ. 46 ಮತ್ತು 114ರಲ್ಲಿ 35ನೇ ತೀರ್ಥ, ಕಕುಭತೀರ್ಥ ಅಧ್ಯಾ 59 ಮತ್ತು ಅಧ್ಯಾ 130ರಲ್ಲಿ 43ನೇ ತೀರ್ಥ ಇತ್ಯಾದಿ.

2 ಕಕುಭ ಎಂದರೆ ಅರ್ಜುನ ವೃಕ್ಷ ಅಥವಾ ಕೆಂಪು ಮತ್ತಿಮರ. ಆ ಮರದ ಹೆಸರಿನಿಂದ ಈ ತೀರ್ಥ ಪ್ರಸಿದ್ಧವಾಗಿದೆ. ಅಧ್ಯಾ 59ನ್ನೂ ನೋಡಿ.

4. [44] **ದಶಾಶ್ವಮೇಧತೀರ್ಥ**ದಲ್ಲಿ ಸ್ನಾನಮಾಡಿದರೆ ಹತ್ತು ಅಶ್ವಮೇಧ ಯಾಗಮಾಡಿದ ಫಲ ಬರುತ್ತದೆ. ಹಿಂದೆ ಪದ್ಮಕಲ್ಪದಲ್ಲೇ ಈ ವಿಷಯದ ರಹಸ್ಯ ಗುಹನಿಗಾಗಿ ಶಿವನಿಂದಲೇ ಪ್ರಕಾಶಪೂತಲ್ಪಟ್ಟಿತು. ಒಂದು ಅಶ್ವಮೇಧ ಮಾಡುವುದೇ ಎಷ್ಟೋ ಕೃತಕೃತಾವಸ್ಥೆ, ಹೀಗಿರುವಾಗ ಹತ್ತು ಅಶ್ವಮೇಧಗಳ ಫಲ ಸ್ನಾನಮಾತ್ರ ದಿಂದ ಹೇಗೆ ಬರುತ್ತದೆಯೆಂದು ಗುಹ ಸಂದೇಹಪಟ್ಟ. ಆ ರಹಸ್ಯವನ್ನು ಹೊರಗೆಡ ಹುವುದಕ್ಕಾಗಿ ಶಂಕರ ಭಿಕ್ಷುಕನ ವೇಷ ಹಾಕಿಕೊಂಡು ಗುಹನೊಡನೆ ಈ ತೀರ್ಥದ ಬಳಿಗೆ ಬಂದು, ಅಲ್ಲಿದ್ದವರನ್ನೆಲ್ಲ ಸಂಬೋಧಿಸಿ "ಇಲ್ಲಿ ನೆರೆದಿರುವ ಜನರಲ್ಲಿ ದಶಾಶ್ವಮೇಧ ಮಾಡಿದ ಪುಣ್ಯಾತ್ಮರು ಯಾರಾದರೂ ಇದ್ದರೆ ಹೇಳಿ. ನಾನು ಆ ಪುಣ್ಯಾತ್ಮನ ಮನೆ ಯಲ್ಲೇ ಊಟಮಾಡುತ್ತೇನೆ. ಇತರ ಕಡೆ ಭೋಜನ ಮಾಡುವುದಿಲ್ಲವೆಂದು ನನ್ನ ಪ್ರತಿಜ್ಞೆಯಿದೆ" ಎಂದು ಸಾರಿದನು.

ಅದನ್ನು ಕೇಳಿ ಒಬ್ಬ ಬ್ರಾಹ್ಮಣ ಅವನ ಬಳಿಗೆ ಬಂದು "ನನ್ನ ಮನೆಗೆ ಭೋಜ ನಕ್ಕೆ ದಯಮಾಡಿಸಬೇಕು" ಎಂದು ಔತಣಕೊಟ್ಟ. ಶಂಭು "ನೀನು ಹತ್ತು ಅಶ್ವ ಮೇಧಗಳನ್ನು ಯಾವಾಗ ಮಾಡಿದಿಯಪ್ಪಾ ?" ಎಂದು ಕೇಳಿದ. ಆ ಭೂಸುರ ನಕ್ಕು "ಸ್ವಾಮಿ, ಏನು ಹೇಳಲಿ. ಈ ತೀರ್ಥದಲ್ಲಿ ಸಕೃತ್‌ಸ್ನಾನಮಾಡಿದರೇ ದಶಾಶ್ವಮೇಧ ಫಲಬರುತ್ತದೆ. ಅಂಥಾದ್ದರಲ್ಲಿ ನಾನು ಜನ್ಮಪ್ರಭೃತಿ ಇಲ್ಲೇ ಇದ್ದು ನಿತ್ಯ ಸ್ನಾನಾಹ್ನಿಕ ಗಳನ್ನೆಲ್ಲಾ ಮಾಡಿಕೊಳ್ಳುತ್ತಾ ಬಂದಿದ್ದೇನೆ. ಅಂದಮೇಲೆ ನನಗೆ ಎಷ್ಟೋ ಅಶ್ವಮೇಧ ಫಲ ಬಂದಿರುವಾಗ ಹತ್ತು ಅಶ್ವಮೇಧಯಾಗ ಮಾಡಿದ ಫಲಕ್ಕೆ ಕೊರತೆಯೇನಿದೆ ?" ಎಂದು ಪ್ರತ್ಯುತ್ತರ ಕೊಟ್ಟ.

ಅವನ ದೃಢವಿಶ್ವಾಸಕ್ಕೆ ಪ್ರಸನ್ನನಾಗಿ ಪರಮೇಶ್ವರ ಆ ವಿಪ್ರನನ್ನು ಹೊಗಳಿ ಅವ ನಿಗೆ ಸಾಯುಜ್ಯವನ್ನು ಕರುಣಿಸಿದ.

ಮಿಕ್ಕತೀರ್ಥಗಳ ಮಹಿಮೆಯನ್ನೂ ಹೇಳುವೆನು, ಕೇಳು ಎಂದು ಭರದ್ವಾಜರು ಹೇಳಿದರು.

ಇಂತು ಸ್ಕಾಂದಪುರಾಣೋಕ್ತ ಪಂಪಾಮಾಹಾತ್ಮ್ಯೆಯಲ್ಲಿ

ಮಧ್ಯಭಾಗದ ಪೂರ್ವಾರ್ಧ ಸಮಾಪ್ತಿ

ಪಂಪಾಕ್ಷೇತ್ರಸ್ಯ ಮಾಹಾತ್ಮ್ಯಂ ಮಂದಾನಾಂ ಬೋಧಸಿದ್ಧಯೇ ।
ಭಕ್ತೇನ ವಿಷ್ಣುತೀರ್ಥೇನ ಪ್ರಾಕೃತೀಕೃತಮಂಜಸಾ ॥

ಸ್ಕಾಂದಪುರಾಣೋಕ್ತ ಪಂಪಾಮಾಹಾತ್ಮ್ಯ

ಮಧ್ಯಭಾಗ--ಉತ್ತರಾರ್ಧ

ಮುನ್ನುಡಿ—ಈ ಉತ್ತರಾರ್ಧದಲ್ಲಿ ನಾಲ್ಕೇ ಅಧ್ಯಾಯಗಳಿವೆ. ಈ 4 ರಲ್ಲೂ ಅ. 130 ರ ಕಡೆಯಲ್ಲಿ ಪ್ರತಿಜ್ಞೆ ಮಾಡಿದಂತೆ, ಪೂರ್ವಾರ್ಧದಲ್ಲಿ ಹೇಳದೆ ಮಿಕ್ಕ ತೀರ್ಥಗಳ ಮತ್ತು ಅನೇಕ ಮೂರ್ತಿಗಳ ವರ್ಣನೆ ಮಾಡಿದೆ. ಈ ನಾಲ್ಕನ್ನೇ ಏಕೆ ಬೇರೆ ಮಾಡಲಾಯಿತೋ, ಉತ್ತರಾರ್ಧ ಎಂದು ಹೆಸರಿಡುವುದರಲ್ಲಿ ಏನುದ್ದೇಶವಿದೆಯೋ ಅರ್ಥವಾಗುತ್ತಿಲ್ಲ.

ನಾಲ್ಕು ಅಧ್ಯಾಯಗಳ ಪೈಕಿ 1ರಲ್ಲಿ ಬ್ರಹ್ಮಕುಂಡದ ಮಹಿಮೆಯನ್ನೂ, 2ರಲ್ಲಿ ಬ್ರಹ್ಮಕುಂಡಾಂತರ್ಗತ 20 ಅವಾಂತರ (ಸಣ್ಣ) ತೀರ್ಥಗಳ ಮಹಿಮೆಯನ್ನೂ, 3ರಲ್ಲಿ ಪಂಪಾಪತಿ ದೇವಸ್ಥಾನದ ಪ್ರಾಕಾರದ ಸುತ್ತಲೂ ಇರುವ 8 ದೇವರುಗಳ ವರ್ಣನೆಯನ್ನೂ, 4ರಲ್ಲಿ ಮಿಕ್ಕ 12 ಮೂರ್ತಿಗಳ ವರ್ಣನೆಯನ್ನೂ ಹೇಳಿದೆ.—ವಿ.ತೀ.

131. (1) ಬ್ರಹ್ಮಕುಂಡ ಅಥವಾ ಮನ್ಮುಖ ತೀರ್ಥ

[ಈ ವಿಚಾರ ಹಿಂದೆಯೇ 97ನೇ ಅಧ್ಯಾಯದಲ್ಲೇ ಬಂದಿದೆ ಆದರೆ ಅಲ್ಲಿ ಬ್ರಹ್ಮಕುಂಡವೇ ಮನ್ಮುಖತೀರ್ಥವೆಂಬುದು ಗೊತ್ತಾಗುವ ಹಾಗಿಲ್ಲ ಈ ಅಧ್ಯಾಯದಲ್ಲಿ ಆ ಅಂಶ ಸ್ಪಷ್ಟವಾಗಿ ತಿಳಿದುಬರುತ್ತದೆ. ಅ. 94ರ ಮುಖ ಟಿಪ್ಪಣಿಯಲ್ಲಿ ಹೇಳಿದ ಮನ್ಮುಖತೀರ್ಥದ ಅವಯವಾರ್ಥ ಇಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ.]

ಬ್ರಹ್ಮಕುಂಡ ಅಥವಾ **ಮನ್ಮುಖತೀರ್ಥ**ದ ಮಹಿಮೆಯನ್ನು ಸಾಕ್ಷಾತ್ ಚತುರ್ಮುಖನೇ ಬಣ್ಣಿಸಲು ಸಮರ್ಥ. ಆದರೂ ನನಗೆ ತಿಳಿದಷ್ಟು ಹೇಳುತ್ತೇನೆ. (ಇದು ಭರದ್ವಾಜರು ವಿಷ್ಣುವೃದ್ಧನಿಗೆ ಹೇಳುತ್ತಿರುವ ಮಾತು.) ಕಾಮನನ್ನು ದಹಿಸಿದ ಬಳಿಕ ರುದ್ರನ ಮುಖದಿಂದ ಬೆವರಿನ ಕಣ ಬಂತು. ಅದರಿಂದಲೇ ಈ ಕುಂಡ ನಿರ್ಮಿತವಾಯಿತು. ಈ ಕಥೆಯನ್ನು ಸ್ಕಂದನಿಗೆ ಸಾಕ್ಷಾಚ್ಛಂಕರನೇ ಹೇಳಿ ಅದಕ್ಕೆ ಮನ್ಮುಖ ತೀರ್ಥವೆಂಬ ಹೆಸರು ಬಂದುದಕ್ಕೂ ಕಾರಣ ಹೇಳುತ್ತಾನೆ—"ನನ್ನ ಮುಖದಿಂದ ಹುಟ್ಟಿದ್ದರಿಂದ ಇದು ಮನ್ಮುಖ [1] ತೀರ್ಥವೆನಿಸಿಕೊಂಡಿತು."

ಹಿಂದೆ ಆದಿಕಲ್ಪದಲ್ಲಿ ಬ್ರಹ್ಮನೇ ಮೊಟ್ಟಮೊದಲು ಈ ಕುಂಡದಲ್ಲಿ ಸ್ನಾನಮಾಡಿದನಾದ ಕಾರಣ ಇದಕ್ಕೆ ಬ್ರಹ್ಮಕುಂಡವೆಂಬ ಹೆಸರೂ ಪ್ರಸಿದ್ಧವಾಗಿದೆ. ಇದು ದೇವ

---

1 ಮದ್ + ಮುಖ ಎಂದರೆ ನನ್ನ ಮುಖ ಎಂದರ್ಥ.



ಬ್ರಹ್ಮಕುಂಡ ಅಥವಾ ಮನ್ಮುಖತೀರ್ಥ (ಪುಟ–148, 176)

ಪೀಠಕ್ಕೆ ಪೂರ್ವದಿಕ್ಕಿನಲ್ಲಿದೆ. ಬಹಳ ಪಾವನವಾದುದು, ಮಹಾಪಾತಕ ನಾಶಕ. ಇದರಲ್ಲಿ ಸೂರ್ಯೋದಯ ಕಾಲಕ್ಕೆ ಸ್ನಾನಮಾಡಿ ಅಷ್ಟೋತ್ತರ ಶತನಾಮದಿಂದ ವಿರೂಪಾಕ್ಷನನ್ನು ಅರ್ಚಿಸಿದರೆ ಇಷ್ಟಾರ್ಥಸಿದ್ಧಿಯಾಗುತ್ತದೆ. ಇದನ್ನು ಬ್ರಹ್ಮಾದಿಸುರವೃಂದಗಳೂ ಸೇವಿಸುತ್ತವೆ.

132. (2). ಅವಾಂತರ ತೀರ್ಥಗಳು

[ಮುನ್ನುಡಿಯಲ್ಲಿ ತಿಳಿಸಿದಂತೆ ಈ ಅಧ್ಯಾಯದಲ್ಲಿ ಬ್ರಹ್ಮಕುಂಡಾಂತರ್ಗತವಾದ ಅಥವಾ ಅದಕ್ಕೆ ಸಂಬಂಧಿಸಿದ ಸಣ್ಣ ಸಣ್ಣ (ಅವಾಂತರ) ತೀರ್ಥಗಳನ್ನೂ ಅವುಗಳ ಉತ್ಪತ್ತಿಕ್ರಮ ಮಹಿಮೆಗಳನ್ನೂ ಹೇಳಲಾಗಿದೆ.—ವಿ. ತೀ.]

1. **ಬ್ರಹ್ಮೇಶ್ವರ**—ಬ್ರಹ್ಮಕುಂಡದಲ್ಲಿ ಸ್ನಾನಮಾಡಿದ ಬಳಿಕ ಬ್ರಹ್ಮ ಅಲ್ಲೇ ಬ್ರಹ್ಮೇಶ್ವರನೆಂಬ ಲಿಂಗ ಪ್ರತಿಷ್ಠೆಮಾಡಿ ಅದನ್ನು ಆರಾಧಿಸಿದ. ಈ ಲಿಂಗಾರಾಧನೆ ಮಾಡಿದರೆ ಪುನರಾವರ್ತವರ್ಜಿತವಾದ ಬ್ರಹ್ಮಲೋಕಪ್ರಾಪ್ತಿಯಾಗುತ್ತದೆ.

ಇಲ್ಲೇ ಇರುವ ಇತರ ತೀರ್ಥಗಳ ಮಹಿಮೆಯನ್ನೂ ತಿಳಿದುಕೊಳ್ಳಬೇಕು. ಇವುಗಳ ಶ್ರವಣಮಾತ್ರದಿಂದ ನರನು ಧೂತಪಾಪನಾಗುತ್ತಾನೆ. ಅವುಗಳಲ್ಲಿ 2. **ಬ್ರಹ್ಮ ತೀರ್ಥ**ವೆಂಬುದು ಬ್ರಹ್ಮ ಸೂರ್ಯೋದಯ ವೇಳೆಯಲ್ಲಿ ಸ್ನಾನ ಮಾಡಿದ ಸ್ಥಳ. ಇದರಲ್ಲಿ ಕಾರ್ತಿಕ ಸ್ನಾನಮಾಡಿದರೆ ಹತ್ತು ಸಾವಿರ ವರ್ಷ ಸ್ನಾನಮಾಡಿದ ಫಲ ಬರುತ್ತದೆ. ಇತ್ಯಾದಿ........3. **ಬ್ರಹ್ಮಪಾದ**—ಬ್ರಹ್ಮನು ಕಾಲಿಟ್ಟಿದ್ದ ಸ್ಥಳ. ಇದರ ಮೇಲೆ ಪಿಂಡ ಪ್ರದಾನ ಮಾಡಿದರೆ ಅಕ್ಷಯವಾದ ಪಿತೃ ತೃಪ್ತಿಯಾಗುತ್ತದೆ. 4. **ಬ್ರಹ್ಮಶಿಲೆ** ಕೂರ್ಮಾಕಾರವಾಗಿದೆ. ಇದರ ಮೇಲೆ ಕುಳಿತುಕೊಂಡು ಬ್ರಹ್ಮ ಗಾಯತ್ರೀಜಪಾನುಷ್ಠಾನ ಮಾಡಿದ್ದ. ಅದರ ಎದುರಿಗೇ 5. **ಗಾಯತ್ರೀಶಿಲೆ**ಯಿದೆ; ಇದರ ಮೇಲೆ ಕುಳಿತು ಬ್ರಹ್ಮಾಣಿಯು (ಸರಸ್ವತೀ) ಜಪಾನುಷ್ಠಾನ ಮಾಡಿದ್ದಳು. ಬ್ರಹ್ಮಶಿಲೆಯ ಮೇಲೆ ಕುಳಿತು ಗಾಯತ್ರೀ ಜಪಮಾಡಿದರೆ ಬ್ರಹ್ಮಲೋಕ ಪ್ರಾಪ್ತಿಯಾಗುತ್ತದೆ. ಅಥವಾ ಕೇವಲ 108 ಗಾಯತ್ರೀ ಜಪಮಾಡಿದರೇ ಸಾಕು, ಸಂಧ್ಯಾಲೋಪದೋಷ ನಿವಾರಣೆಯಾಗುತ್ತದೆ.

6. **ಸೋಮತೀರ್ಥ** ಸ್ನಾನದಿಂದ ಅಶ್ವಮೇಧಫಲ. 7. ಮಹಾಕಾಲನೆಂಬ ಗಣೇಶ ಸ್ನಾನಮಾಡಿದ **ಮಹಾಕಾಲತೀರ್ಥ**ದ ಸ್ನಾನದಿಂದ ಗಣಾಧಿಪತ್ಯ ಸಿದ್ಧಿ. 8. **ತಾರಾತೀರ್ಥ**ವು ಅಶ್ವಿನ್ಯಾದಿ ನಕ್ಷತ್ರಗಳು (ತಾರಾ=ನಕ್ಷತ್ರ] ಸ್ನಾನಮಾಡಿದ ಸ್ಥಳ. ಇದರಿಂದ ಗ್ರಹಪೀಡೆ ನಿವಾರಣೆ, ಐಶ್ವರ್ಯ ವೃದ್ಧಿ. 9. **ಸೂರ್ಯ ತೀರ್ಥ**ದಲ್ಲಿ ಸ್ನಾನಮಾಡಿ ಸೂರ್ಯ ಗ್ರಹಾಧಿಪತಿಯಾದ. ಆರೋಗ್ಯಪ್ರದ. 10. **ವಾಯುತೀರ್ಥ**

ವಾಯು ತಪಸ್ಸುಮಾಡಿ ಪ್ರಬಲನಾದ ಸ್ಥಳ. ಇದರಿಂದ ಬಲಸಿದ್ಧಿ. 11. **ವತ್ಸತೀರ್ಥ**ದಿಂದ ಬ್ರಹ್ಮವರ್ಚಸ್ಸುಂಟಾಗುತ್ತದೆ. 12. **ರೇವಾತೀರ್ಥ**ದ ಮಹಿಮೆಯನ್ನು ರೈಭ್ಯರು ಪ್ರಕಟಮಾಡಿದರು. ಇದರಿಂದ ಭವಶೋಧನ.

13. **ದಾಮೋದರ ತೀರ್ಥ**ವನ್ನು ದಾಮೋದರನೆಂಬ ಮುನಿ ಕಂಡರು. ಇದರಿಂದ ಸರ್ವಯಜ್ಞ ಫಲ. 14. **ಸೌಭಾಗ್ಯ ತೀರ್ಥ**ದಲ್ಲಿ ಸ್ನಾನಮಾಡಿ ಅನೇಕ ಪತಿವ್ರತಾ ಸ್ತ್ರೀಯರು ಪಂಪಾದೇವಿಯನ್ನು ಹಿಂದಿನ ಕಾಲದಲ್ಲಿ ಪ್ರಾರ್ಥಿಸಿದ್ದರು. ಇದರಿಂದ ವೈಧವ್ಯ ಅಮಂಗಲಾದಿ ನಿವೃತ್ತಿ. 15. **ನಾಗತೀರ್ಥ** ವಿಷಾಪಹಾರಿ, ರೋಗಪರಿಹಾರಕ. 16. **ಮಾರ್ಕಂಡೇಯ ತೀರ್ಥ**ವು ಮಾರ್ಕಂಡಮುನಿ ತಪಸ್ಸಿದ್ಧಿ ಪಡೆದ ಸ್ಥಳ. ಚೇತಃಕಲ್ಮಶನಾಶನ, ಆಯುರ್ವೃದ್ಧಿ. 17. **ಗಜತೀರ್ಥ**—ನೀರು ಕುಡಿಯುವುದಕ್ಕೆ ಬಂದ ಬಾಯಾರಿ ದಣಿದ ಒಂದು ಕಾಡಾನೆ ಈ ತೀರ್ಥಸ್ನಾನ ಪುಣ್ಯದಿಂದ ಐರಾವತವಾಯಿತು. ಐಶ್ವರ್ಯ ಪ್ರಾಪ್ತಿ. 18. **ಅಶ್ವತೀರ್ಥ**—ಉತ್ತಾನಪಾದರಾಜ ಕುದುರೆಯ ಮೇಲೆ ಕುಳಿತು ಹೇಮಕೂಟವನ್ನೆಲ್ಲಾ ಸುತ್ತಿ ಬಂದು ಈ ಸ್ಥಳದಲ್ಲಿ ತನ್ನ ಕುದುರೆಯನ್ನು ಬಿಟ್ಟು ಪರಮೇಶ್ವರನ ಪೂಜೆಗಾಗಿ ಹೋದ. ಬಾಯಾರಿ ದಣಿದಿದ್ದ ಆ ಅಶ್ವ ನೀರು ಕುಡಿಯುವುದಕ್ಕೆಂದು ಈ ತೀರ್ಥದಲ್ಲಿಳಿಯಿತು. ಅಷ್ಟು ಪುಣ್ಯದಿಂದಲೇ ಅದಕ್ಕೆ ಅಶ್ವಜನ್ಮ ನಿವೃತ್ತಿಯಾಗಿ ಮನುಷ್ಯರೂಪ ತಾಳಿ ವಿಮಾನದಲ್ಲಿ ಕುಳಿತು ಸ್ವರ್ಗಕ್ಕೆ ಹೋಯಿತು. ಆ ಉತ್ತಾನಪಾದ ರಾಜನು ವಿರೂಪಾಕ್ಷನ ದಯದಿಂದ ಬಾಡಮುಖನೆಂಬ ಗಣಾಧ್ಯಕ್ಷನಾದ.

19. **ಕಾದಂಬಿನೀನದಿ** ಹೇಮಕೂಟಕ್ಕೂ ಮಾಲ್ಯವಂತಕ್ಕೂ ಮಧ್ಯೆ ಹರಿಯುತ್ತದೆ.[1] ಸಹಸ್ರ ರಾಜಸೂಯಫಲ. ಅದರ ಹತ್ತಿರದಲ್ಲೇ 20. **ರುದ್ರಪಾದವೂ** ಇದೆ. ಇದರ ಮೇಲೆ ಪಿಂಡಹಾಕಿದರೆ ಗಂಗೆಯಲ್ಲಿ ಹಾಕಿದ ಫಲ. ಈ ಸ್ಥಳದಲ್ಲಿ ಸ್ವಭಾವ ರುದ್ರರೆಂಬ ಅನೇಕ ರುದ್ರರಿದ್ದಾರೆ.

ಇವೆಲ್ಲಕ್ಕೂ ಮನ್ಮಥತೀರ್ಥ ಆದ್ಯ [=ಮೊದಲನೆಯದು ಅಥವಾ ಮೂಲ]. ಇದರಲ್ಲಿ ತುಂಗಭದ್ರೆ ಅರವತ್ತು ವರ್ಷಕ್ಕೊಮ್ಮೆ ಉದ್ಭವಿಸುತ್ತಾಳೆ. ಆಗ ಈ ತೀರ್ಥಸ್ನಾನದ ಮಹಿಮೆ ಇನ್ನೂ ಹೆಚ್ಚು. ಮನ್ಮಥತೀರ್ಥದಲ್ಲಿ ಸ್ನಾನಮಾಡಿ ಬ್ರಹ್ಮೇಶ್ವರನ ಸೇವೆ ಮಾಡಿದರೆ ಸರ್ವಸಿದ್ಧಿಯುಂಟಾಗುತ್ತದೆ.

133. (3) ಪ್ರಾಕಾರಸ್ಥ ಮೂರ್ತಿಗಳು

(ಮುಂದಿನ 2 ಅಧ್ಯಾಯಗಳಲ್ಲೂ ಪಂಪಾಪತಿ ಗುಡಿಯ ಪ್ರಾಕಾರದಲ್ಲಿರುವ ಇತರ ಮೂರ್ತಿಗಳ ವರ್ಣನೆ ಮಾಡಲಾಗುವುದು. ಈಗ ಗುಡಿಯ ಸುತ್ತಲೂ ಎಷ್ಟೋ ಲಿಂಗಗಳೂ

---

1 ಈಗ ಹರಿಯುತ್ತಿಲ್ಲ.

ಇತರ ಮೂರ್ತಿಗಳೂ ಇವೆ. ಆದರೆ ಈಗ ಪ್ರಸಿದ್ಧವಾಗಿರುವ ಹೆಸರುಗಳಿಗೂ ಪುರಾಣದಲ್ಲಿರುವ ಹೆಸರುಗಳಿಗೂ ಬಹಳ ಅಂತರವಿದೆ. ಒಂದೆರಡು ಹೆಸರುಗಳು ಮಾತ್ರ ಅದೇ ರೀತಿ ಇವೆ; ಅವುಗಳನ್ನು ಪಾದ ಟಿಪ್ಪಣಿಯಲ್ಲಿ ಸೂಚಿಸಲಾಗಿದೆ.—ವೀ. ಶೀ.)

ಈಗ (ಪಂಪಾವತಿ) ದೇವಸ್ಥಾನದ ಪ್ರಾಕಾರದ ಸುತ್ತಲೂ ಇರುವ ಪುಣ್ಯಸ್ಥಾನಗಳನ್ನು ತಿಳಿಸುತ್ತೇನೆ.

1. **ನಲೇಶ್ವರ** ಉತ್ತರ ಭಾಗದಲ್ಲಿದೆ. ಇದು ವಿಶ್ವಕರ್ಮನ ಮಗನಾದ ನಲನೆಂಬ ವಾನರ ಸ್ಥಾಪಿಸಿದ ಲಿಂಗ. ಈ ದೇವನ ಸೇವೆಯಿಂದಲೇ ಅವನಿಗೆ ಸಮುದ್ರಕ್ಕೆ ಸೇತುವೆ ಕಟ್ಟುವ ಶಕ್ತಿ ಬಂತು. 2. **ಬ್ರಹ್ಮೇಶ್ವರ**ನನ್ನು ಭಕ್ತಿಯಿಂದ ಸೇವಿಸಿದರೆ ಶಿವನು ತನ್ನ ಸಾಯುಜ್ಯ ಕೊಡುತ್ತಾನೆ. 3. ಮೂರನೆಯದು **ಮಾಧವೇಶ್ವರ.**[1]

4. **ರಂಭೇಶ್ವರ**ನ ಬಳಿ ಗೋದಾನ ಮಾಡಿದರೆ ಗೋಲೋಕಪ್ರಾಪ್ತಿ. 5. **ಹನುಮೇಶ್ವರ** ಹನುಮಂತ ಸ್ಥಾಪಿಸಿದ ಲಿಂಗ. 6. **ಗಂಧಮಾದನೇಶ್ವರ**ನನ್ನು ಗಂಧಮಾದನನೆಂಬ ಕಪಿ ಸ್ಥಾಪಿಸಿದ. 7. ರಾವಣನನ್ನು ಜಯಿಸುವುದಕ್ಕಾಗಿ ರಾಮಲಕ್ಷ್ಮಣರು ಸ್ಥಾಪಿಸಿ ಪೂಜಿಸಿದ ಲಿಂಗವೇ **ರಾಮಲಕ್ಷ್ಮಣೇಶ್ವರ.** ಸೀತೆ ಪ್ರತಿಷ್ಠೆ ಮಾಡಿದ ಒಂದು ಲಿಂಗವೂ ಸಹ ಉಂಟು. ಇದೇ ರೀತಿ ಅನೇಕ ಕಪಿವೀರರು ಪ್ರತಿಷ್ಠಿಸಿದ ಇನ್ನೂ ಎಷ್ಟೋ ಲಿಂಗಗಳಿವೆ. ಅವನ್ನೆಲ್ಲಾ ಎಣಿಸುವುದು ಸಾಧ್ಯವಿಲ್ಲ. ಇಲ್ಲೆಲ್ಲಾ ಅನ್ನದಾನ ಮಾಡಿದರೆ ಕೋಟಿಫಲ.

8. ರುದ್ರನಲ್ಲೇ ವಿಷ್ಣುವಿದಾನೆ ಎಂದು ಲೋಕಕ್ಕೆ ತೋರಿಸುವುದಕ್ಕಾಗಿ **ಯೋಗನೃಸಿಂಹ**.[2] ಈ ಪ್ರಾಕಾರದಲ್ಲೇ ಇದ್ದಾನೆ. ಇವನು ರಾಕ್ಷಸರಿಗೆಲ್ಲಾ ಭಯಂಕರನಾದ ಮೂರ್ತಿ. ಈ ಸ್ವಾಮಿ ಸಕಲ ಜಗತ್ತಿಗೂ ಕಾಂಕ್ಷಿತಗಳನ್ನು ಸಲ್ಲಿಸುತ್ತಾನೆ. ಬ್ರಹ್ಮಪುಷ್ಕರಣೀಸ್ನಾನ[3] ವಿರೂಪಾಕ್ಷದರ್ಶನ ನೃಸಿಂಹೋಪಾಸನೆ ಈ ಮೂರು ಸುಲಭತ್ರಯವೆಂದು ಪಂಡಿತರು ಹೇಳುತ್ತಾರೆ.

---

1. ಪ್ರಾಯಶಃ ಇದೇ ಗುಲಗಂಜಿಮಾಧವ ಇರಬಹುದು. ಈಗ ಜನರು ಹೇಳುವುದೇನೆಂದರೆ ಈ ಮಾಧವ (ವಿಷ್ಣು) ಉತ್ತರ ಕಾಶಿಯನ್ನೂ ದಕ್ಷಿಣ ಕಾಶೀ ಎನಿಸಿದ ಹಂಪೆಯನ್ನೂ ತಕ್ಕಡಿಯಲ್ಲಿ ತೂಗಿ ನೋಡಲು ಹಂಪೆಯ ಮಹಿಮೆಯೇ ಗುಲಗಂಜಿ ತೂಕ ಹೆಚ್ಚಾಯಿತಂತೆ. ಅದಕ್ಕೇ ಈ ಮಾಧವನಿಗೆ 'ಗುಲಗಂಜಿ ಮಾಧವ' ಎಂಬ ಹೆಸರು ಬಂತಂತೆ. ಆದರೆ ಈ ಕಥೆಗೆ ಆಧಾರ ಯಾವುದೋ ತಿಳಿಯದು. ಈ ಮೂರ್ತಿಯನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ ಕೈಯಲ್ಲಿ ತಕ್ಕಡಿಯಾಗಲೀ ಗುಲಗಂಜಿಯಾಗಲಿ ಹಿಡಿದಿರುವಂತೆ ಕಾಣುವುದಿಲ್ಲ. ಈ ಮೂರ್ತಿ ಭುವನೇಶ್ವರಿಯ ಪಕ್ಕದಲ್ಲಿ ಕೆಳಮಾಳಿಗೆಯಲ್ಲಿದೆ.

2. ಈಗ ಪಂಪಾವತಿಯ ಪ್ರಾಕಾರದಲ್ಲಿ ದಕ್ಷಿಣದ ಭಾಗದಲ್ಲಿ ಬಲಿಪೀಠಕ್ಕೆ ಎದುರುಗಡೆ ಒಂದು ನರಸಿಂಹಸ್ವಾಮಿಯ ಸೋ ಇದೆ. ಆದರೆ ಅದಕ್ಕೆ ಈಗ ಮುಕ್ತಿ ನರಸಿಂಹ ಎಂಬ ಹೆಸರು ರೂಢಿಯಲ್ಲಿದೆ. ಬೇರೆ ಯಾವ ನರಸಿಂಹನೂ ಇಲ್ಲ.

3. ಬ್ರಹ್ಮಕುಂಡದ (ಅಥವಾ ಮನ್ಮಥ ತೀರ್ಥದ) ಸ್ನಾನ ಎಂದರ್ಥ. ಪುಷ್ಕರಿಣೀ = ಕೊಳ, ಕುಂಡ, ತೀರ್ಥ.

ಯೋಗ ನೃಸಿಂಹನ ಮಹಿಮೆ—ನೃಸಿಂಹಕಲ್ಪಾಂತದಲ್ಲಿ ಅಂಧಕನೆಂಬ ದುರ್ಜೇಯನಾದ ದೈತ್ಯನಿದ್ದ. ಅವನ ಸಂಹಾರಕ್ಕಾಗಿ ಪ್ರಾರ್ಥಿತನಾದ ಹರ ಯುದ್ಧ ದಲ್ಲಿ ಆ ದೈತ್ಯನ ದೇಹವನ್ನು ಕತ್ತರಿಸಿ ಹಾಕುತ್ತಾ ಹೋದ. ಹರ ಕತ್ತರಿಸಿದ ಹಾಗೆಲ್ಲಾ ದೈತ್ಯರ ಸಂಖ್ಯೆ ಹೆಚ್ಚುತ್ತಾ ಹೋಯಿತು. ಏಕೆಂದರೆ ಆ ದೈತ್ಯನ ರಕ್ತಬಿಂದುಗಳು ನೆಲದ ಮೇಲೆ ಬಿದ್ದ ಬಿದ್ದ ಹಾಗೆಲ್ಲಾ ಅವುಗಳಿಂದ ಹೊಸ ಹೊಸ ರಾಕ್ಷಸಯೋಧರು ಉತ್ಪನ್ನ ರಾಗುತ್ತಿದ್ದರು. ಹೀಗೆ ನೂರಾರು ಕೋಟಿ ದೈತ್ಯರು ಹುಟ್ಟಿಕೊಂಡರು.

ಅದನ್ನು ಕಂಡು ಸದಾಶಿವ ರಕ್ತವನ್ನು ಹೀರಬಲ್ಲ ಶಕ್ತಿಗಳೆಂಬ ಅಸಂಖ್ಯ ಮಾತೃ ಗಣಗಳನ್ನು ಸೃಷ್ಟಿಮಾಡಿದ. ಈ ಶಕ್ತಿಗಳು ನಾಲಿಗೆಗಳನ್ನು ಚಾಚಿಕೊಂಡು ಭರ್ಗನು ದೈತ್ಯಸಂಹಾರ ಮಾಡಿದಂತೆಲ್ಲಾ ಒಂದು ತೊಟ್ಟು ರಕ್ತವೂ ನೆಲದ ಮೇಲೇ ಬೀಳದಂತೆ ದೈತ್ಯಶೋಣಿತವನ್ನು ಹೀರುತ್ತಾ ಹೋದರು. ಅದರಿಂದ ರಾಕ್ಷಸವಾಹಿನಿ ಕ್ರಮವಾಗಿ ಕ್ಷೀಣವಾಗಿ ಅಂಧಕನೂ ಹತನಾದ.

ಆದರೆ ರಕ್ತಪಾನ ಮಾಡಿ ಮಾಡಿ ಈ ಮಾತೃಗಣಗಳಿಗೆ ರಕ್ತಪಿಪಾಸೆ ಹೆಚ್ಚಾ ಯಿತು. ಅವರ ಹಾವಳಿ ಮಿತಿ ಮೀರಿ ಅಸಾಧ್ಯವಾಯಿತು. ಆಗ ಈಶಾನ ನೃಸಿಂಹ ನಿಗೆ "ಈ ಮಾತೃಗಣಗಳನ್ನು ದಮನಮಾಡಲು ನೀನೇ ಸಮರ್ಥ. ಇವರ ಪುಂಡಾಟ ಅಡಗಿಸಿ ಲೋಕಕ್ಕೆ ಬಾಧೆಯಾಗದಂತೆ ಮಾಡು" ಎಂದ. ಒಡನೆಯೇ ನೃಸಿಂಹ ಬೇರೆ (ಪ್ರತಿ) ಮಾತೃಗಳನ್ನು ಸೃಜಿಸಿ ಅವರಿಗೆ ಶಿವಮಾತೃಗಣಗಳನ್ನು ಅಡಗಿಸುವಂತೆ ಆಜ್ಞೆ ಮಾಡಿದ. ಹೇಳುವುದೊಂದೇ ತಡ, ಹೊಸ ಮಾತೃಗಳು ರುದ್ರಮಾತೃಗಣಗಳ ದರ್ಪ ವನ್ನಡಗಿಸಿ ಅವರನ್ನು ಬಂಧಿಸಿ ನರಸಿಂಹನ ಬಳಿಗೆ ಎಳೆದುಕೊಂಡು ಬಂದರು. ಹತ ದರ್ಪರಾದ ರುದ್ರಮಾತೃಗಳು ಭಯದಿಂದ ನರಸಿಂಹನಿಗೆ ಕೈಮುಗಿದು "ನಮ್ಮ ದರ್ಪ ವೆಲ್ಲಾ ಅಡಗಿತು. ನಮಗೇನಾದರೂ ವೃತ್ತಿ ಕಲ್ಪಿಸಿಕೊಟ್ಟು ಅನುಗ್ರಹಿಸಿಸಬೇಕೆಂ"ದು ಕೇಳಿಕೊಂಡರು.

ಅದಕ್ಕೆ ನರಸಿಂಹಸ್ವಾಮಿ "ಹಾಗಾದರೆ ಇನ್ನು ಈ ಕ್ಷೇತ್ರಕ್ಕೆ ಬಂದು ಯಾರು ಧರ್ಮವನ್ನೂ ಗುರುಹಿರಿಯರನ್ನೂ ವೇದ ಗೋ ಅಶ್ವತ್ಥ ದ್ವಿಜ ಅಗ್ನಿ ಯತಿಗಳನ್ನೂ ನಿಂದಿಸುವರೋ ಅವರನ್ನೂ ದುರಾಚಾರಿಗಳನ್ನೂ ಶಿವಪೂಜೆ ಶಿವಾಲಾಪ ಶಿವಮಂತ್ರಗಳ ನಿಂದಕರನ್ನೂ ಹಿಂಸೆಮಾಡಿರಿ. ಆದರೆ ಹರಿಹರರ ಭಕ್ತರ ತಂಟೆಗೆ ಮಾತ್ರ ಹೋಗ ಬೇಡಿ" ಎಂದು ಶಾಸನ ಮಾಡಿದನು.

ಈ ಪ್ರಕಾರ ವಿರೂಪಾಕ್ಷ ಯೋಗನೃಸಿಂಹ ಸಹಿತನಾಗಿ ಮಾತೃಗಣಗಳಿಂದ ಸೇವ್ಯನಾಗಿ ತನ್ನ ಪಾದಭಕ್ತರಿಗೆ ಐಹಿಕಾಮುಷ್ಮಿಕ ಫಲಪ್ರದನಾಗಿದ್ದಾನೆ. ಅವನ ಮಂದಿರದ ಒಳಪ್ರಾಕಾರದಲ್ಲೇ ಮಹಾಮಂತ್ರ ಫಲಪ್ರದನಾದ ನೃಸಿಂಹನೂ ವಿರಾಜಿಸುತ್ತಾನೆ.

134. (4). ಉಳಿದ ಮೂರ್ತಿಗಳು

9. ನರಸಿಂಹನ ಮುಂದುಗಡೆಯೇ **ಮಹಾಕಾಳೇಶ್ವರನ**ಸಿದ್ದಾನೆ. ಇದನ್ನು ಮಹಾಕಾಲನೆಂಬ ಗಣಾಧ್ಯಕ್ಷ[1] ಸ್ಥಾಪನೆ ಮಾಡಿದ. ಸದ್ಗತಿಲಾಭ. 10 ಮಾರ್ಕಂಡೇಯ ಮುನಿ **ಮಾರ್ಕಂಡೇಯೇಶ್ವರ**ನನ್ನು[2] ಪೂಜಿಸಿ ಮೃತ್ಯುವನ್ನು ಜಯಿಸಿದ. ಇದರ ಬಳಿ ಪಂಚಾಕ್ಷರಿಯನ್ನು ಅಷ್ಟೋತ್ತರಶತ ಜಪಮಾಡಿದರೆ ಸಿದ್ಧಿಲಾಭ, ಆಯುರ್ವೃದ್ಧಿ.

11. **ಪಂಪಾದೇವಿ** ವಿರೂಪಾಕ್ಷನಿಗೆ ಉತ್ತರದಲ್ಲಿದಾಳೆ.[3] ಹಂಪೆಯ ವೈಭವಕ್ಕೆ ಈ ದೇವಿಯೇ ಮುಖ್ಯ ಕಾರಣ. ಇಡೀ ಕ್ಷೇತ್ರಕ್ಕೂ ಈಕೆಯ ಹೆಸರೇ ಬಂದಿದೆ. [ಅಧ್ಯಾಯ 7ರ ಉತ್ತರ ಭಾಗ ನೋಡಿ]. ಈ ದೇವಿಯ ಸನ್ನಿಧಿಯಲ್ಲಿ ಯಾವ ಸ್ತ್ರೀಯರು ಸುಮಂಗಲಿಯರಿಗೂ ಕುಮಾರಿಯರಿಗೂ ಪೂಜೆಮಾಡಿ ದಾನ ದಕ್ಷಿಣೆಗಳಿಂದ ಆದರಮಾಡುತ್ತಾರೋ ಆ ನಾರಿಯರಿಗೆ ಮಾಂಗಲ್ಯಭಾಗ್ಯ ಸ್ಥಿರವಾಗುತ್ತದೆ. ಭೂತ ಪ್ರೇತಪಿಶಾಚಾದಿ ಬಾಧೆಗಳು ಪಂಪಾರ್ಯೆಯ ಅರ್ಚಕರನ್ನು ಕಂಡರೇ ಪಲಾಯನ ಮಾಡುತ್ತವೆ. ಪಂಪಾಂಬೆಯ ಮಹಿಮೆಯನ್ನು ಇಲ್ಲಿ ಕಿಂಚಿತ್ತೇ ಹೇಳಿದೆ. ಸಾಕಲ್ಯ ದಿಂದ ಹೇಳುವುದಕ್ಕೆ ಸಹಸ್ರಮುಖನಾದ ಆದಿಶೇಷನಿಗೂ ಅಳವಲ್ಲ.

12. **ಕೌಶಿಕೀ ಅಥವಾ ಸೌಮ್ಯಪಂಪಾ ದೇವಿಯು** ಪಂಪಾದೇವಿಗೆ ದಕ್ಷಿಣದಲ್ಲಿದಾಳೆ. ಹಿಂದೆ ಅವಳ ಹೆಸರು ಕಾಳೀ ಎಂದಿತ್ತು. [ಕಾಳೀ ಎಂದರೆ ಕಪ್ಪು ಬಣ್ಣವುಳ್ಳವಳೆಂದರ್ಥ]. ಆ ಹೆಸರಿಗೆ ಬೇಸರಪಟ್ಟು ಆಕೆ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ ಗೌರಿಯಾದಳು. [ಗೌರ ಎಂದರೆ ಬಿಳಿಯ ಎಂದರ್ಥ. "ಅವದಾತಃ ಸಿತೋ ಗೌರಃ"—ಅಮರ. ಅದರಿಂದ ಗೌರೀ = ಬೆಳ್ಳಗಿರುವವಳು ಎಂದಾಗಿದೆ. ಗೌರೀ ಶಬ್ದಕ್ಕೆ ಗಿರಿಶಬ್ದದಿಂದಲೂ ನಿಷ್ಪತ್ತಿ ಹೇಳಬಹುದು. ಗಿರೇಃ ಅಪತ್ಯಂ ಸ್ತ್ರೀ ಗೌರೀ = ಗಿರಿಯ ಮಗಳು, ಹಿಮವತ್ಪರ್ವತರಾಜನ ಮಗಳು.] ಈಕೆ ಗೌರೀಕಲ್ಪದಲ್ಲಿ ಪಾರ್ವತಿಯ ಶರೀರ ಕೋಶದಿಂದ ಹುಟ್ಟಿದಾಗ ಕೌಶಿಕೀ ಎಂಬ ಹೆಸರು ಬಂತು.

ಕೌಶಿಕಿಯು ಶುಂಭ—ನಿಶುಂಭಾಖ್ಯ ದೈತ್ಯರನ್ನು ಚಾಮುಂಡಾದಿಗಳೊಡನೆ ಸಂಹಾರಮಾಡಿ ಪಂಪಾದೇವಿಯ ಹತ್ತಿರ ಬಂದಳು. ಆ ಆರ್ಯೆ ಈಕೆಗೆ 'ಸೌಮ್ಯ ಪಂಪಾ' ಎಂಬ ಬಿರುದುಕೊಟ್ಟು "ನನ್ನನ್ನು ಪೂಜಿಸುವಂತೆಯೇ ನಿನ್ನನ್ನೂ ಸಹ ಯಾರು ಆದರದಿಂದ ಪೂಜಿಸುವರೋ ಅವರ ಅರಿಷ್ಟಗಳನ್ನು ಕಳೆದು ನೀನು ಅವರಿಗೆ ಅಭೀಷ್ಟಪ್ರದಳಾಗಿರು" ಎಂದು ವರ ಕೊಟ್ಟು ಈಕೆಯನ್ನು ತನ್ನ ಪಕ್ಕದಲ್ಲೇ ಇಟ್ಟು ಕೊಂಡಳು.

1—2 : ಅಧ್ಯಾಯ 132ರಲ್ಲಿ 7 ಮತ್ತು 16ನೇ ಹೆಸರುಗಳನ್ನು ಹೋಲಿಸಿನೋಡಿ

3 ಈ ದೇವಿ ಮಾತ್ರ ಈಗಲೂ ಇಲ್ಲಿ ಹೇಳಿರುವಂತೆ ಪಂಪಾಪತಿ ಗರ್ಭಗುಡಿಗೆ ಉತ್ತರ ಭಾಗದಲ್ಲಿ ಸ್ವಲ್ಪ ಹಿಂದಕ್ಕೆ ಪೂರ್ವಾಭಿಮುಖವಾಗಿ ನಿಂತಿದ್ದಾಳೆ.

13. ಉತ್ತರದಲ್ಲಿ ಲಿಂಗರೂಪಿಯಾದ **ಭೈರವನಿರುವನು.** [1] ಇದರಂತೆಯೇ ಅಜರ ಅಪಕುಂಭಾಧಿ ಅನೇಕ ಭೈರವರಿದ್ದಾರೆ. ಅವರಿಗೆ ಸಮೀಪದಲ್ಲೇ ಪದ್ಮ ಮಹಾಪದ್ಮ ಪಾಂಡರ ವಾಸುಕಿ ಮೊದಲಾದ ಪಾತಾಲವಾಸಿ ನಾಗಗಳಿಂದ ಆರಾಧಿತನಾದ [14] **ನಾಗನಾಥ** [2] ಇದ್ದಾನೆ. ಈ ದೇವನಿಗೆ ಪಂಚಾಮೃತಾಭಿಷೇಕ ಮಾಡುವವನು ಮರಣರಹಿತನಾಗುವನು, ಸಂಪದಭಿವೃದ್ಧಿಯೂ ಆಗುತ್ತದೆ. 15. **ಕೇದಾರೇಶನ** ದರ್ಶನ ಮಾಡಿದರೆ [ಬದರಿಯ ಬಳಿ ಇರುವ] ಕೇದಾರಕ್ಷೇತ್ರಕ್ಕೆ ಹೋಗಿ ಬಂದ ಫಲ ದೊರಕುತ್ತದೆ. 16. **ಮಲ್ಲಿಕಾರ್ಜುನನೂ** ಕೇದಾರೇಶನ ಹತ್ತಿರದಲ್ಲೇ ಇದ್ದಾನೆ. ಈ ಮನ್ಮುಖತೀರ್ಥದಲ್ಲಿ ಸ್ನಾನಮಾಡಿ ಮಲ್ಲಿಗೆ ಹೂವಿನಿಂದ ಅರ್ಚಿಸಿದರೆ ಈ ದೇವ ಅವನ ಅಧೀನನಾಗುವನು. 17. ಅದಕ್ಕೆ ಪೂರ್ವದಲ್ಲಿ **ಬಾಲವಿನಾಯಕನಿದ್ದಾನೆ.** [3] ಇವನ ಸನ್ನಿಧಿಯಲ್ಲಿ ಚಿಕ್ಕ ಮಕ್ಕಳಿಗೆ ಭೋಜನ ಮಾಡಿಸಿದವನಿಗೆ ಈ ವಿಘ್ನೇಶ ಸರ್ವ ವಿಘ್ನಗಳನ್ನೂ ಅಪಹರಿಸಿ ಇಷ್ಟಾರ್ಥ ನೆರವೇರಿಸುತ್ತಾನೆ.

18. ಲಕ್ಷ್ಮೀ ಸ್ವರ್ಣಪ್ರಭಾ ದುರ್ಗಾ ಚಾಮುಂಡಾ ಮಧುಮತೀ ಕಾಲೀ ಕರಾಲೀ ಕಂಕಾಲೀ ಮಹಾಕಾಲೀ ಕೋಟರೀ ಎಂಬ **ದಶಶಕ್ತಿಗಳು** ಹತ್ತು ಶಕ್ತಿ ಸ್ಥಾನಗಳಲ್ಲಿರುವುವು. ಕೃಷ್ಣಪಕ್ಷದ ಅಷ್ಟಮೀ ಚತುರ್ದಶಿಗಳಲ್ಲೂ ಭಾನುವಾರ ಮಂಗಳ ವಾರಗಳಲ್ಲೂ ಈ ದಶಶಕ್ತಿಗಳನ್ನು ಪೂಜಿಸುವವರು ಸರ್ವಕಾಮಗಳನ್ನು ಹೊಂದುತ್ತಾರೆ. ಇವಲ್ಲದೆ ಮಾಲ್ಯವದ್ಗಿರಿಯ ಬುಡದಲ್ಲಿ ಇಚ್ಛಾಶಕ್ತಿ ಕ್ರಿಯಾಶಕ್ತಿ ಜ್ಞಾನಶಕ್ತಿ ಎಂಬ **ಶಕ್ತಿತ್ರಯದ** ಚರಣಗಳಿವೆ. ಕಲ್ಪಾರಂಭದಲ್ಲಿ ಈ ಮೂರು ಶಕ್ತಿಗಳೂ ಅಹಂಕಾರದಿಂದ ಮದಿಸಿ ಪರಮೇಶನಿಂದ ಬೇರೆಯಾದವು. ಅವುಗಳಿಲ್ಲದಿದ್ದರೂ ಶಂಕರ ತನ್ನ ಕಾರ್ಯ ನಿರ್ವಹಿಸಿದ. ಆಗ ಈ ಶಕ್ತಿಗಳು ಸೋತು ಈ ಬೆಟ್ಟದ ತಪ್ಪಲಲ್ಲಿ ಈಶ್ವರನನ್ನು ಕುರಿತು ತಪಸ್ಸುಮಾಡಿದುವು. ತಪಸ್ಸಿಗೆ, ಮೆಚ್ಚಿ ಈಶ ಅವುಗಳನ್ನು ಪುನಃ ಆತ್ಮೀಕರಿಸಿಕೊಂಡ. ಈ ಶಕ್ತಿಗಳ ಪದನ್ಯಾಸಕ್ಕೆ ಎರಗುವವರು ಎಲ್ಲರಿಂದಲೂ ವಂದ್ಯರಾಗುತ್ತಾರೆ. ಅವುಗಳ ಹತ್ತಿರದಲ್ಲೇ **ಸ್ಕಂದಸರಸ್ಸು** ಇದೆ; ಇದರ ಸ್ನಾನ ಮಹಾಫಲಪ್ರದ.

ಇಲ್ಲಿ ಹೇಳಿರುವ ಅಥವಾ ಮುಂದೆ ಹೇಳುವ ಅಖಿಲ ತೀರ್ಥಗಳಲ್ಲೂ ಸ್ನಾನ

---

1 ಪಂಪಾಪತಿಗುಡಿಯ ಕನಕಗಿರಿ ಗೋಪುರದ ಹೊರಗಡೆ (ಉತ್ತರದಲ್ಲಿ) ಭೈರವನ ವಿಗ್ರಹವೇನೋ ಇದೆ; ಆದರೆ ಅದು (ಪುರಾಣದಲ್ಲಿ ಹೇಳಿರುವಂತೆ) ಲಿಂಗರೂಪಿಯಾಗಿಲ್ಲ; ಮನುಷ್ಯಾಕೃತಿಯೇ ಆಗಿದೆ.

2 ಕನಕಗಿರಿ ಗೋಪುರದ ಹೊರಗೆ ಮನ್ಮುಖ ಕುಂಡದ ದಡದಲ್ಲಿ ಒಂದು ಕಡೆ ಅನೇಕ ನಾಗಗಳನ್ನು ಪ್ರತಿಷ್ಠೆ ಮಾಡಿದೆ. ಅದರ ಎದುರಿಗಿರುವ ಲಿಂಗವೇ ನಾಗನಾಥೇಶ್ವರ. ಗುಡಿಯ ಮುಂದೆ ನೆಲದ ಮೇಲೆ ಒಂದು ಕಡೆ ಈ ಹೆಸರನ್ನು (ತೆಲುಗು ಲಿಪಿಯಲ್ಲಿ) ಕಡೆದಿದೆ.

3 ಗುಡಿಯ ಆವರಣದಲ್ಲಿ ಪೂರ್ವದ ಕಡೆಯೇ ಎಷ್ಟೋ ವಿನಾಯಕಗಳಿವೆ. ಆದರೆ ಇಲ್ಲಿ ಪ್ರಸಕ್ತವಾದ ಬಾಲವಿನಾಯಕ ಯಾವುದೋ ಗುರುತಿಸುವುದು ಸಾಧ್ಯವಿಲ್ಲ.

ಧ್ಯಾನ, ಜಪ ತರ್ಪಣ ಅನ್ನದಾನ ಹೋಮ ಶಿವಪೂಜೆ ಇವೆಲ್ಲಾ ಸಾಧಾರಣವಾಗಿ ಮಾಡಲೇಬೇಕಾದ ವಿಧಿಗಳು.

ಮಧ್ಯಭಾಗ ಸಮಾಪ್ತ

ನವವೃಂದಾವನಸ್ಥೇನ ವಿಷ್ಣುತೀರ್ಥೇನ ಪ್ರಾಕೃತೇ ।
ಸಂಪ್ರೋಕ್ತೋ ವಾಙ್ಮನಃಶುದ್ಧ್ಯೈ ಪಂಪಾಮಾಹಾತ್ಮ್ಯ ಸಂಗ್ರಹಃ ॥

ಉತ್ತರ ಭಾಗ

ಮುನ್ನುಡಿ

ಈ ಉತ್ತರ ಭಾಗವೆಲ್ಲ ಕೇವಲ ಪ್ರಮೇಯ ನಿರೂಪಣೆಗಾಗಿಯೂ ತತ್ತ್ವೋಪದೇಶಕ್ಕಾಗಿಯೂ ಮೀಸಲಾಗಿದೆ. ಇದರಲ್ಲಿ ಒಟ್ಟು 16 ಅಧ್ಯಾಯಗಳಿವೆ. ಅದರಲ್ಲಿ 1ರಲ್ಲಿ ಸಂಕ್ಷೇಪವಾಗಿ ದೇಶಕಾಲಾಧಿಕಾರಿಗಳ ನಿರೂಪಣೆ ಮಾಡಿದೆ. ಅನಂತರ 5 ಅಧ್ಯಾಯಗಳಲ್ಲಿ ವೇದಗಳ ವಿಚಾರವೂ ಕಾಲ ಅಧಿಕಾರಿಗಳ ನಿರೂಪಣೆಯೂ ಹೆಚ್ಚು ವಿಸ್ತಾರದಿಂದ ಮಾಡಲ್ಪಟ್ಟಿದೆ. ಮುಂದೆ ಸದಾಚಾರದ ವಿಚಾರ ಎತ್ತಿ ವರ್ಣಾಶ್ರಮಧರ್ಮಗಳನ್ನು ವಿವರಿಸಿ ಪಂಚಾಕ್ಷರೀ ವಿಷಯವನ್ನು 4 ಅಧ್ಯಾಯಗಳಲ್ಲಿ ಹೇಳಿ ಬಳಿಕ ತದಂಗವಾದ ಸಾಧನಗಳ ವಿಷಯವನ್ನು ಕಡೆಯ 6 ಅಧ್ಯಾಯಗಳಲ್ಲಿ ಮಾಡಲಾಗಿದೆ. ಅಲ್ಲಿಗೆ ಪಂಪಾ ಮಾಹಾತ್ಮ್ಯ ಮುಗಿಯುತ್ತದೆ. ಈ ಪ್ರಮೇಯಗಳೆಲ್ಲ ಬಹಳ ಗಹನವಾದುವು. ಇಲ್ಲಿ ಅವುಗಳನ್ನು ಸ್ಥೂಲವಾಗಿ ಸೂಚಿಸಿದೆ, ಅಷ್ಟೆ.—ವಿ. ತೀ.

135 [1]. ದೇಶಕಾಲಾದಿ ವಿಚಾರ

ವಿಚಾರ ಪರಂಪರೆ—ಸೂತ ಪುರಾಣಿಕರು ವರ್ಣಿಸಿದ ವಿಷಯಗಳನ್ನೆಲ್ಲ ಕೇಳುತ್ತಿದ್ದ ಶೌನಕಾದಿಗಳು ವಿಷ್ಣು ವೃದ್ಧ ಇನ್ನೇನೇನು ಪ್ರಶ್ನೆ ಮಾಡಿದನೋ ತಿಳಿಯ

ಲಿಚ್ಛಿಸಿದರು. ಅದಕ್ಕೆ ಸೂತರು ಹೇಳಬಾರಂಭಿಸಿದರು—ಪರಮ ಮೇಧಾವಿಯಾದ ವಿಷ್ಣುವೃದ್ಧ "ಹೇಮಕೂಟೇಶನ ಸೇವೆ ಸುಕೃತಿಗಳಿಗೇ ದೊರಕುವುದಷ್ಟೆ! ಅಂಥಾ ಸೇವೆಗೆ ದೇಶ ಯಾವುದು? ಕಾಲವಾವುದು? ಅಧಿಕಾರಿಗಳಾರು? ಇದನ್ನೆಲ್ಲ ತಿಳಿಸಿ ಅನುಗ್ರಹಿಸ ಬೇಕೆಂ"ದು ಕೇಳಿದನು.

ಅದಕ್ಕೆ ಭರದ್ವಾಜರು ಹೀಗೆ ಹೇಳಿದರು—ಈ ವಿಷಯಚರ್ಚೆ ಹಿಂದೆ ಅನೇಕ ಮಹನೀಯರು ಮಾಡಿದ್ದಾರೆ. ಪೂರ್ವದಲ್ಲಿ ಸನತ್ಕುಮಾರರು ನಂದಿಯನ್ನು ಇದೇ ರೀತಿ ಪ್ರಶ್ನಿಸಿದ್ದರು. ಇದಕ್ಕೂ ಹಿಂದೆ ಸ್ಕಂದನು ಈಶ್ವರನನ್ನು ಪ್ರಶ್ನಿಸಿದ್ದನು. ಅದಕ್ಕೂ ಮುಂಚೆ ವಟತರುವಿನ ಮೂಲದಲ್ಲಿ ದಕ್ಷಿಣಾಮೂರ್ತಿಯನ್ನು ಸನಕಾದಿಗಳೂ ವಾಲ ಖಿಲ್ಯರೂ ಕೇಳಿದ್ದರು. ದಕ್ಷಿಣಾಮೂರ್ತಿ ಉತ್ತರ ಹೇಳುವಾಗ ಈ ವಿಷಯವನ್ನು ಹಿಂದೆ ವಿಷ್ಣು ತನ್ನನ್ನು ಕೇಳಿದ್ದನೆಂದು ತಿಳಿಸಿ ಅದಕ್ಕೆ ಉತ್ತರವನ್ನಿತ್ತಿದ್ದನು. ಹೀಗೆ ಪರಂಪ ರಾಗತವಾಗಿ ಬಂದ ಪ್ರಮೇಯ ಏನೆಂದರೆ—

ದೇಶಕಾಲಾದಿಗಳ ಸಂಕ್ಷಿಪ್ತ ನಿರೂಪಣೆ—ಭಗವಂತ ಸೃಷ್ಟಿಸಿರುವ ಲೋಕಗ ಳಲ್ಲೆಲ್ಲಾ ಭೂಲೋಕವೇ ಸರ್ವಶ್ರೇಷ್ಠ. ಕಾಲ ಅನಂತವಾಗಿದ್ದರೂ ಒಳ್ಳೆಯ ಭಾವನೆ ಹುಟ್ಟಿದ ಕಾಲವೇ ಪರಮೋತ್ಕೃಷ್ಟ ಕಾಲ. ನಿರಂತರವಾಗಿ ಸತ್ಕರ್ಮ ಮಾಡಬೇಕೆಂಬ ನಿಷ್ಠೆ ಇರುವವನೇ ಅಧಿಕಾರಿ. ಸಮಸ್ತ ಶುಭಕರ್ಮಗಳೇ ಸಾಧನ. ಇದನ್ನು ತಿಳಿದವ ನಿಗೆ ದುರಂತ ಬಂಧವಿಲ್ಲ.

136. [2] ವೇದ ಮಹಿಮೆ

'ಭಗವಂತ ಸೃಷ್ಟಿಸಿರುವ ಲೋಕಗಳಲ್ಲೆಲ್ಲಾ........' ಎಂದು ಹೇಳಿದ್ದನ್ನು ಕೇಳಿ ವಿಷ್ಣುವೃದ್ಧನಿಗೆ ನಿರ್ವಿಕಲ್ಪನೂ ನಿರೀಹನೂ ಆದ ಶಿವನಿಗೆ ಸೃಷ್ಟ್ಯಾದಿಗಳು ಹೇಗೆ ಕೂಡುತ್ತವೆ? ಎಂಬ ಸಂದೇಹ ಬಂತು. ಅದನ್ನು ನಿವಾರಿಸುವುದಕ್ಕಾಗಿ ಮುಂದಿನ ಪ್ರಮೇಯ ಹೊರಟಿದೆ.

ವೇದ ಶಿವಸ್ವರೂಪ—ಸದಾಶಿವನಿಗೆ ಅರ್ಥಾತ್ಮಕ ಶಬ್ದಾತ್ಮಕ ಎಂದು ಎರಡು ರೂಪ. ಮೊದಲ ರೂಪ ಅನಂತಜ್ಯೋತೀರೂಪ. ಎರಡನೆಯದು ಶಬ್ದಬ್ರಹ್ಮವೆಂತಲೂ ವೇದವೆಂತಲೂ[1] ಭಿನ್ನಭಿನ್ನ ನಾಮಗಳಿಂದ ಹೇಳಲ್ಪಡುತ್ತದೆ. ಸಕಲ ಶಾಸ್ತ್ರಗಳೂ ಆ ವೇದಕ್ಕೆ ಅಂಗಗಳೇ. ವ್ಯಾಕರಣವೇ ಮುಖ. ಶಿಕ್ಷಾ ಮೂಗು. ನಿರುಕ್ತ ಕಿವಿಗಳು. ಜ್ಯೋತಿಷ್ಯ ಕಣ್ಣುಗಳು, ಕಲ್ಪ ಹಸ್ತಗಳು, ಛಂದಸ್ಸು ಪಾದಗಳು, ನ್ಯಾಯ ಧರ್ಮ ತರ್ಕಾದಿಗಳು ಅದಕ್ಕೆ ಎಂಟು ಉಪಾಂಗಗಳು.

---

1 ಆದಕ್ಕಾಗಿಯೇ ಹಿರಿಯರು "ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾ ಶಿವಃ" ಎಂದು ಹೇಳುವರು.

ಆ ವೇದ [1] ಪ್ರಣವರೂಪದಿಂದಲೂ [2] ಋಗ್ವೇದಾದಿ ನಾಲ್ಕು ರೂಪಗಳಿಂದಲೂ [3] ಸ್ಮೃತಿರೂಪದಿಂದಲೂ [4] ಪುರಾಣರೂಪದಿಂದಲೂ ನಾಲ್ಕು ಪ್ರಕಾರ ಲೋಕದಲ್ಲಿ ಪ್ರಕಟವಾಯಿತು. ಇಂಥಾ ವೇದಗಳ ಮಹಿಮೆ ತಿಳಿದವನೇ ಜ್ಞಾನಿ, ಅವನೇ ಶ್ರೇಷ್ಠ, ಕೃತಕೃತ್ಯ. ಇಲ್ಲಿ ಹೇಳಿದ ಈ ವೇದೋದಯದ ವಿಚಾರವನ್ನೂ ಅದರ ಪ್ರಭಾವವನ್ನೂ ಶ್ರವಣ ಮಾಡುವವನು ಸರ್ವಕಾಮಗಳನ್ನು ಹೊಂದುತ್ತಾನೆ.

137. [3] ವೇದ ವಿಭಜನೆ

ವೇದಪ್ರಚಾರ—ಚತುರೂಪವಾದ ಆ ವೇದವನ್ನು ಸೃಷ್ಟಿಪ್ರವೃದ್ಧಿಗಾಗಿ ಬ್ರಹ್ಮ ತನ್ನಂಗದಿಂದ ಉದ್ಭವಿಸಿದ ನವಬ್ರಹ್ಮರಿಗೂ ಸಪ್ತರ್ಷಿಗಳಿಗೂ ಕೊಟ್ಟ. ಅವರಿಂದಲೇ ಅದು ಲೋಕದಲ್ಲೆಲ್ಲಾ ಪ್ರಚಾರಕ್ಕೆ ಬಂತು. ಬಹುಕಾಲದ ಮೇಲೆ ವೇದಗಳು ಕ್ರಮವಾಗಿ ಉತ್ಸನ್ನ[1]ವಾಗುತ್ತ ಬಂದವು. ಅವುಗಳನ್ನು ಪ್ರತಿಮನ್ವಂತರದಲ್ಲೂ ಸಪ್ತರ್ಷಿಗಳು ಪುನಃಪುನಃ ಉದ್ಬೋಧನ ಮಾಡುವರು.

ಅದೂ ಅಲ್ಲದೆ, ಒಂದೇ ಮಾನವ ಜನ್ಮದಲ್ಲಿ ಸಕಲವೇದಗಳನ್ನೂ ಅಧ್ಯಯನ ಮಾಡುವುದು ಅಸಾಧ್ಯ. ಆದ್ದರಿಂದ ಅನುಕೂಲಕ್ಕಾಗಿ ವೇದಗಳನ್ನು ವಿಭಜನೆ ಮಾಡಬೇಕಾಯಿತು; ಈ ಕಾರ್ಯಕ್ಕೆ 'ವ್ಯಾಸ' ಎಂದೂ ಹೆಸರು. ವೇದಗಳನ್ನು ವ್ಯಾಸ [ವಿಭಜನೆ] ಮಾಡಿದ ಋಷಿಗಳೇ ವೇದವ್ಯಾಸ ಅಥವಾ ವ್ಯಾಸರು ಎನಿಸಿಕೊಂಡರು. ಈ ಕಾರ್ಯವನ್ನು ಆ ವ್ಯಾಸರು 28 ದ್ವಾಪರಯುಗಗಳಲ್ಲಿ 28 ಭಿನ್ನ ಭಿನ್ನ ನಾಮಗಳಿಂದ ಮಾಡಿ ತಮ್ಮ ಶಿಷ್ಯಪ್ರಶಿಷ್ಯರಿಗೆಲ್ಲಾ ಹೇಳಿಕೊಟ್ಟರು. ಅವರಿಂದ ಮುಂದೆ ಹಾಗೆಯೇ ವೇದ ಪ್ರಚಾರವಾಯಿತು.

ಪುರಾಣಗಳು—ಆದರೆ ಎಲ್ಲರಿಗೂ ವೇದಾಧ್ಯಯನಕ್ಕೆ ಅಧಿಕಾರವಿಲ್ಲ. ಆದ್ದರಿಂದ ಎಲ್ಲರಿಗೂ ಉಪಕಾರವಾಗುವುದಕ್ಕಾಗಿ ಆ ಸರ್ವವೇದಾರ್ಥ ಸಾಮಗ್ರಿಯನ್ನೇ ತೆಗೆದುಕೊಂಡು ವ್ಯಾಸಮಹರ್ಷಿಗಳು ಅಷ್ಟಾದಶ [18] ಪ್ರಭೇದವುಳ್ಳ **ಪುರಾಣ** ರಚನೆ ಮಾಡಿದರು. 1. ಶೈವ 2. ಸ್ಕಾಂದ 3. ಲೈಂಗ 4. ಕೌರ್ಮ 5. ಮಾತ್ಸ್ಯ 6. ವಾಮನ 7. ಪಾದ್ಮ 8. ಭವಿಷ್ಯತ್ 9. ವಾರಾಹ 10. ಮಾರ್ಕಂಡೇಯ ಈ ಹತ್ತೂ ಶೈವಪುರಾಣಗಳು. 11. ನಾರದೀಯ 12 ಭಾಗವತ 13. ಗಾರುಡ 14 ವೈಷ್ಣವ (ವಿಷ್ಣು) ಈ ನಾಲ್ಕೂ ವಿಷ್ಣುಪುರಾಣಗಳು. 15. ಬ್ರಹ್ಮಾಂಡ 16. ಬ್ರಹ್ಮವೈವರ್ತ 17. ಬ್ರಾಹ್ಮ ಈ ಮೂರೂ ಬ್ರಹ್ಮಪುರಾಣಗಳು. 18. ಆಗ್ನೇಯ ಅಗ್ನಿದೇವನದು. ವಜ್ರನ್ನೇ ಬಾಹ್ಮೀ, ಭಾಗವತೀ, ಶೈವೀ, ಸೌರೀ ಎಂದು ಎಂದು ನಾಲ್ಕು ವಿಧವಾಗಿ

1 ಉತ್ಸನ್ನ = ಶಿಥಿಲ, ಜೀರ್ಣ, ಹಾಳಾಗಿ ಹೋದ, ಕೆಟ್ಟು ಹೋದ.

ವಿಂಗಡಿಸುವುದೂ ಉಂಟು. ಇವಲ್ಲದೆ ಅಷ್ಟಾದಶ ಉಪಪುರಾಣಗಳೂ ಇವೆ. ಇವೆಲ್ಲವೂ ಶಿಷ್ಯಪ್ರಶಿಷ್ಯರ ದ್ವಾರಾ ಲೋಕದಲ್ಲಿ ಪ್ರಚುರವಾದುವು.

ಭಗವಂತ ವೇದೋಕ್ತರೀತಿಯಿಂದ ರಾಜಸಗುಣವನ್ನಾಶ್ರಯಿಸಿ ಸ್ಥಾವರಜಂಗಮಾತ್ಮಕವಾದ ಜಗತ್ತನ್ನು ಸೃಷ್ಟಿಸಿದ್ದಾನೆ.

138. (4). ನವವಿಧ ಸೃಷ್ಟಿ

ಆ ಸೃಷ್ಟಿ ಮುಖ್ಯವಾಗಿ ನವವಿಧವಾಗಿದೆ. 1. ಮಹತ್ತತ್ವ ಸೃಷ್ಟಿ 2. ತನ್ಮಾತ್ರಗಳಿಂದ [1] ಭೂತ ಸೃಷ್ಟಿ [2] 3. ಇಂದ್ರಿಯ[3]ಗಳ ಸೃಷ್ಟಿಯೆಂಬ ವೈಕಾರಿಕ ಸೃಷ್ಟಿ ಈ ಮೂರೂ ಪ್ರಾಕೃತಸೃಷ್ಟಿಗಳು. 4. ತಿರ್ಯಕ್ ಸೃಷ್ಟಿಯೇ ತಾಮಸಸೃಷ್ಟಿ 5. ಮಾನವ ಸೃಷ್ಟಿಯೇ ರಾಜಸಸೃಷ್ಟಿ 6. ದೇವಸೃಷ್ಟಿ ಸಾತ್ವಿಕಸೃಷ್ಟಿ. 7. ಭೂತಪ್ರೇತಾದಿಗಳ ಸೃಷ್ಟಿ. 8. ಅನುಗ್ರಹ ಸೃಷ್ಟಿ ಈ ಐದೂ (4-8) ವೈಕೃತ ಸೃಷ್ಟಿಗಳು. 9. ಕೌಮಾರ ಸೃಷ್ಟಿ ಒಂಬತ್ತನೆಯದು. ಈ ನವಸೃಷ್ಟಿಗಳಲ್ಲಿ ಅನಂತ ಅವಾಂತರ ಭೇದಗಳಿವೆ. ಈ ಸೃಷ್ಟಿ ಕಥೆಯನ್ನು ಭಕ್ತಿಯಿಂದ ಕೇಳುವವನು ಸಿದ್ಧಸೇವಿತವಾದ ಬ್ರಹ್ಮಲೋಕಕ್ಕೆ ಹೋಗುತ್ತಾನೆ.

139. (5). ಭುವನಕೋಶ ವರ್ಣನೆ

ಸೃಷ್ಟಿಕ್ರಮ ಪ್ರಸಂಗದಿಂದ ಭುವನಕೋಶ ವರ್ಣನೆ ಮಾಡಲಾಗುತ್ತದೆ. ಇದರಿಂದ ಸರ್ವಜ್ಞತ್ವವುಂಟಾಗುತ್ತದೆ. ಲೋಕಗಳು ಅನಂತವಿದ್ದರೂ ಅವುಗಳಲ್ಲಿ ಚತುರ್ದಶ ಲೋಕಗಳು ಪ್ರಸಿದ್ಧ. ಅವುಗಳೆಲ್ಲೂ ಸತ್ಕರ್ಮಗಳ ಭೂಮಿಯೇ ಭೂಲೋಕ. ಇದು ಪಂಚಾಶತ್ಕೋಟಿ (50 ಕೋಟಿ) ವಿಸ್ತೀರ್ಣವುಳ್ಳದ್ದು. ಇದರಲ್ಲಿ ಜಂಬೂ ಪ್ಲಕ್ಷ ಶಾಲ್ಮಲ ಕುಶ ಕ್ರೌಂಚ ಶಾಕ ಪುಷ್ಕರ ಎಂಬ ಸಪ್ತದ್ವೀಪಗಳೂ ಲವಣ ಇಕ್ಷು (ಕಬ್ಬು) ಸುರಾ ಸರ್ಪಿ (ಘೃತ) ದಧಿ ಕ್ಷೀರ ಜಲ ಎಂಬ ಸಪ್ತ ಸಮುದ್ರಗಳೂ ಇವೆ. ಇವುಗಳೆಲ್ಲ ಕ್ರಮವಾಗಿ ಎರಡೆರಡರಷ್ಟು ದೊಡ್ಡವು. ಸಪ್ತ ದ್ವೀಪಗಳಲ್ಲಿ ಕುಲಾಚಲಗಳೂ ನದಿಗಳೂ ಇವೆ. ಶಾಕದ್ವೀಪದ ಸುತ್ತಲೂ ಇರುವ ಕ್ಷೀರ ಸಮುದ್ರದ ನಡುವೆ ಶ್ವೇತ ದ್ವೀಪವಿದೆ. ಅದರಲ್ಲೇ ಜಗದ್ರಕ್ಷಕನಾದ ವಿಷ್ಣು ಶೇಷಪರ್ಯಂಕದ ಮೇಲೆ ಪವಡಿಸಿದ್ದಾನೆ. ಅದರಾಚೆ ಪುಷ್ಕರದ್ವೀಪವೂ ಮಾನಸೋತ್ತರಾದ್ರಿಯೂ ಇವೆ. ಅದರಲ್ಲಿ ತ್ರಿಮೂರ್ತಿಗಳಿದ್ದಾರೆ. ಅದಕ್ಕೂ ಆಚೆ ಕಾಂಚನ ಭೂಮಿಯೂ ಜಲಸಮುದ್ರವೂ ಲೋಕಾಲೋಕಗಳೂ ಇವೆ. ಅದಕ್ಕಿಂತಲೂ ಆಚೆ ತಮೋಲೋಕವಿದೆ. ಅದರ ಹೊರಗೆ ಬ್ರಹ್ಮಾಂಡಕಟಾಹವಿದೆ.

---

1 ಶಬ್ದ ಸ್ಪರ್ಶ ರೂಪ ರಸ ಗಂಧ ಇವೇ ಪಂಚತನ್ಮಾತ್ರಗಳು. ಇವುಗಳಿಂದ ಕ್ರಮವಾಗಿ ಆಕಾಶಾದಿ ಪಂಚಭೂತಗಳು ಹುಟ್ಟಿದವು. (2) ಆಕಾಶ ವಾಯು ಅಗ್ನಿ ಅಪ್ ಪೃಥಿವೀ ಇವೇ ಭೂತಗಳು. (3) ಶ್ರೋತ್ರ ತ್ವಕ್ ಚಕ್ಷು ಜಿಹ್ವಾ ಘ್ರಾಣ ಈ ಐದೂ ಜ್ಞಾನೇಂದ್ರಿಯಗಳು. ವಾಕ್ ಪಾಣಿ ಪಾದ ಪಾಯು ಉಪಸ್ಥ ಇವು ಪಂಚ ಕರ್ಮೇಂದ್ರಿಯಗಳು.

ಭರತವರ್ಷ—ಜಂಬೂ ದ್ವೀಪದಲ್ಲಿ ಮೇರು ಹಿಮವತ್ ಹೇಮಕೂಟಾದಿ ಪರ್ವತಗಳೂ ಭಾರತ, ಹರಿ, ಕಿಂಪುರುಷಾದಿ ನವ (9) ವರ್ಷ (ಅಥವಾ ಖಂಡ) ಗಳೂ ಇವೆ. ಆದರೆ ಇವುಗಳಲ್ಲೆಲ್ಲಾ ಭೂಲೋಕವೂ ಅದರಲ್ಲೂ ಜಂಬೂದ್ವೀಪವೂ ತತ್ರಾಪಿ ಭಾರತವರ್ಷವೂ ಶ್ರೇಷ್ಠ. ಈ ಭಾರತ ವರ್ಷ ಸರ್ವಕರ್ಮಗಳಿಗೂ ಸಿದ್ಧಿಪ್ರದವಾದ ಭೂಮಿ. ಅದರಲ್ಲೂ ಹೇಮಕೂಟ ಸದ್ಯಃಫಲಪ್ರದ. ಇಲ್ಲಿ ನಿರಂತರ ಧ್ಯಾನಮಾಡುತ್ತಾ ಸತ್ಕರ್ಮ ಮಾಡುವವನು ಪರಂಧಾಮವಾಸಿಯಾಗುವನು.

140. (6). ಕಾಲಾಧಿಕಾರಿ ನಿರೂಪಣ

ಕಾಲನಿರೂಪಣ—ಕಾಲ ಅನಾದಿ ಅನಂತ. ಆದರೂ ವ್ಯವಹಾರಕ್ಕಾಗಿ ಪರಾಪರ ಅತ್ಯಂತ ಸೂಕ್ಷ್ಮ ವಿಭಾಗದಿಂದ ಮಹತ್ತರವಾದ ಬ್ರಹ್ಮಕಲ್ಪ, ವಿಷ್ಣುಕಲ್ಪ, ರುದ್ರಕಲ್ಪ, ಸದಾಶಿವಕಲ್ಪಗಳವರೆಗೆ ಅನೇಕಾನೇಕ ವಿಭಾಗಗಳನ್ನು ಯಥೋಚಿತವಾಗಿ ಮಾಡಿವೆ.[1] ಅತ್ಯಂತ ಮಹತ್ತಮವಿಭಾಗವೆನಿಸಿದ ಸದಾಶಿವಕಲ್ಪವೂ ಕೂಡ ಆ ಪರಮೇಶ್ವರನಿಗೆ ಕ್ಷಣಮಾತ್ರ; ಅವನಿಗೆ ತಿಥಿ ವಾರಾದಿಗಳ ಕಲ್ಪನೆ ಸಹ ಇಲ್ಲ.

ಇಂಥಾ ಅನಾದ್ಯನಂತವಾದ ಅಖಂಡ ಕಾಲದಲ್ಲಿ ಯಾವ ಕಾಲಾಂಶದಲ್ಲಿ ಶಿವಭಕ್ತಿ ಪರಿಸ್ಫುರಿಸುತ್ತದೋ, ತೃಟಿಮಾತ್ರವಾದರೂ ಅದೇ ಸತ್ಕಾಲ, ಅದೇ ಸಾರ್ಥಕ, ಅದೇ ಫಲದಾಯಕ.

> ಕಾಲೇಷ್ವೇತೇಷು ಯತ್ರೈವ ಶಿವಭಕ್ತಿಃ ಪರಿಸ್ಫುರೇತ್ ।
> ತೃಟಿಕಾಲೋಽಪ್ಯಯಂ ಬ್ರಹ್ಮಾ ಬ್ರಹ್ಮಕಲ್ಪಾತ್ಪರಂಪರಾ ॥
> ತಸ್ಮಾದಣೀಯಸಿ ಪರಂ ಕಾಲೇಽಪಿ ಶಿವಭಾವನಾ ।
> ಜಾಯತೇ ಯತ್ರ ಪರಮಃ ಕಾಲೋಽಯಂ ಫಲದಾಯಕಃ ॥

ಅಧಿಕಾರಿನಿರೂಪಣ--84ಲಕ್ಷ ಜೀವಯೋನಿಗಳಲ್ಲಿ ಮನುಷ್ಯನೇ ಸಕಲ ಸತ್ಕರ್ಮಗಳಿಗೂ ಅಧಿಕಾರಿ. ಅದನ್ನು ಕಂಡೇ ದೇವತೆಗಳೂ ಕೂಡ ದುರ್ಲಭವಾದ ಮನುಷ್ಯ ಜನ್ಮವನ್ನು ಬಯಸುತ್ತಾರೆ. ಸರ್ವಕರ್ಮಗಳಿಗೂ ಶರೀರವೇ ಮೊದಲನೆಯ ಸಾಧನ.[2] ಶುಕ್ಲಶೋಣಿತ ಸಂಬಂಧದಿಂದ ಶರೀರೋತ್ಪತ್ತಿಯಾಗಿ ಅದು ಮಾತೃಗರ್ಭದಲ್ಲಿ ಒಂಬತ್ತು ತಿಂಗಳಲ್ಲಿ ಪಿಂಡಾವಸ್ಥೆಯಿಂದ ಆರಂಭಿಸಿ ನಾನಾ ರೀತಿ ಬೆಳೆದು ಕಡೆಗೆ ಶಿಶುರೂಪದಿಂದ ಜನಿಸುತ್ತದೆ. ಜನ್ಮಾನಂತರ ಆ ಜೀವಿಯು ಬಾಲ್ಯ

---

1 ಅವುಗಳ ಹೆಚ್ಚು ವಿವರಣೆ ಮಾಡಲು ಇಲ್ಲಿ ಅವಕಾಶ ಸಾಲದು.

2 ಶರೀರಮಾದ್ಯಂ ಖಲು ಧರ್ಮಸಾಧನಮ್ (ಕಾಲಿದಾಸ, ಕುಮಾರ ಸಂಭವ, ೫ನೇ ಸರ್ಗ).

ಕೌಮಾರ್ಯ ಯೌವನ ವೃದ್ಧಾಪ್ಯ ಎಂಬ ನಾಲ್ಕು ಅವಸ್ಥೆಗಳಲ್ಲಿ ನಾನಾ ಅನುಭವ ಪಡೆಯುತ್ತಾನೆ. ಇದಕ್ಕೆಲ್ಲಾ ಅವನ ಕರ್ಮವೇ ಪ್ರೇರಕ.

ಮಾನವ ಜೀವನ ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರೆಂದು ಚತುರ್ವರ್ಣಾತ್ಮಕ ವಾಗಿದೆ. ಚತುರ್ವರ್ಣಗಳಲ್ಲಿ ಬ್ರಾಹ್ಮಣ್ಯ ಶ್ರೇಷ್ಠ. ಆದರೆ ಜನ್ಮಮಾತ್ರದಿಂದ ಬ್ರಾಹ್ಮಣ ನಾದರೆ ಶ್ರೇಷ್ಠತ್ವ ಬರುವುದಿಲ್ಲ. ಬ್ರಾಹ್ಮಣನಾಗಿ ಹುಟ್ಟಿಯೂ ಶಿವ ಮಾಹಾತ್ಮ್ಯ ತಿಳಿಯದ ಬ್ರಾಹ್ಮಣಾಧಮನಿಗೆ ಅಧಿಕಾರಹಾನಿಯಾಗುತ್ತದೆ. ಅಂಥಾ ಬ್ರಾಹ್ಮಣ ಬ್ರುವನಿಗಿಂತ (ಹೆಸರಿಗೆ ಮಾತ್ರ ಬ್ರಾಹ್ಮಣ) ತತ್ವಬುಭುತ್ಸುಗಳಾದ ಇತರ ವರ್ಣದವರೇ ಮೇಲು. ವಿಶ್ವಾಮಿತ್ರ ಕ್ಷತ್ರಿಯನಾದರೂ ಬ್ರಾಹ್ಮಣ್ಯ ಸಂಪಾದಿಸಿದ. ವೈಶ್ಯರಾದ ಮರುದ್ಗಣಗಳು ಶಿವಭಕ್ತಿಯಿಂದ ಉನ್ನತ ಪದವಿ ಪಡೆದುವು. ಒಬ್ಬ ಶೂದ್ರ ಶಿವಭಕ್ತಿ ಮಾಡಿ ಕಲ್ಪಾಂತರದಲ್ಲಿ ನಾರದನಾದ. ಒಬ್ಬ ವ್ಯಾಧ ಶಿವತತ್ತ್ವವನ್ನು ತಿಳಿದು ಸತ್ಯ ತಪನೆಂಬ ಋಷಿಯಾದ. ಹೀಗೆಯೇ ಎಷ್ಟೋ ನಿದರ್ಶನ ಕೊಡಬಹುದು. ಮುಖ್ಯ ಸಾರಾಂಶವೇನೆಂದರೆ ಶಿವಭಕ್ತಿ ಮಾಡುವ ಬ್ರಾಹ್ಮಣನೇ ಸರ್ವಶ್ರೇಷ್ಠಾಧಿಕಾರಿ, ಅವನೇ ಸರ್ವ ಕಲಾರ್ಥವೇದಿ ಮತ್ತು ಕಾಲಜ್ಞಾನಿ.

141. (7). ಸದಾಚಾರ

ಸದಾಚಾರ ಎಂದರೇನು?—ಸಜ್ಜನರು ಆಚರಿಸುವ ಕರ್ಮಕ್ಕೇ ಸದಾಚಾರ ವೆಂದು ಹೆಸರು.

ಸದ್ಭಿರಾಚರಿತಂ ಕರ್ಮ ಸದಾಚಾರಃ ಪ್ರಕೀರ್ತ್ಯತೇ ॥

ಯಾವ ದೇಶದಲ್ಲಿ ಯಾವ ಆಚರಣೆ ಪರಂಪರಾಗತವಾಗಿ ಬಂದಿದೆಯೋ ಅದೇ ಸದಾಚಾರ. ವೇದಗಳು ಅನಾದಿಕಾಲದಿಂದ ಬಂದ ಪ್ರಮಾಣ. ಅನಂತರ ಅದಕ್ಕೆ ಅನುಕೂಲವಾದ ಸ್ಮೃತಿಗಳು ಭಾರತ ಇತಿಹಾಸ ಸತ್ಪುರುಷರ ಚರಿತೆಗಳು ಇವೂ ಪ್ರಮಾಣಗಳು. ಇವಕ್ಕೆ ಅವಿರೋಧವಾಗಿ ನಡೆಯುವುದು ಸದಾಚಾರ.

ಸದಾಚಾರದ ಆವಶ್ಯಕತೆ—ಸದ್ಗತಿಗೆ ಸದಾಚಾರವಲ್ಲದೆ ಬೇರೆ ಮಾರ್ಗವೇ ಇಲ್ಲ. ಆಚಾರದಿಂದಲೇ ಆಯುಸ್ಸು, ಆಚಾರದಿಂದಲೇ ತಪಸ್ಸು, ಆಚಾರದಿಂದಲೇ ಸ್ವರ್ಗ ಸಂಪತ್ತು ಎಲ್ಲ. ದುರಾಚಾರಿಗಳು ಸದ್ವಂಶದಲ್ಲಿ ಗಣಿಸಲ್ಪಡುವುದಿಲ್ಲ. ಹೂವು ಗಳಲ್ಲಿರುವ ಕ್ರಿಮಿಕೀಟಗಳಂತೆ ಇವರೂ ನಿಂದ್ಯರು. ಆಚಾರವೇ ಸರ್ವಸಿದ್ಧಿಗಳಿಗೂ ಆಧಾರ. ಸದಾಚಾರದಿಂದ ತಪಸ್ಸಿದ್ಧಿ. ತಪಸ್ಸಿನಿಂದ ಯೋಗಸಿದ್ಧಿ. ಅದರಿಂದ ಜ್ಞಾನ ಲಾಭ. ಜ್ಞಾನದಿಂದ ತತ್ತ್ವಾವಭಾಸ. ಆದ್ದರಿಂದ ಯುಕ್ತವಾದ ವರ್ಣಾಶ್ರ ಮಾಚಾರ ಮಾಡುವ ಪುರುಷನೇ ಪುಣ್ಯಲಕ್ಷಣ. ಅವನೇ ಇಹಪರ ಎರಡು ಲೋಕ ಗಳಲ್ಲೂ ಮೋದಪಡುತ್ತಾನೆ.

142. (8) ಪಂಚಾಕ್ಷರೀ

ವಿಷ್ಣುವೃದ್ಧನ ಪ್ರಾರ್ಥನೆ—ಪ್ರಾಣಿಗಳು ಕರ್ಮಬದ್ಧರಾಗಿ ಹುಟ್ಟುತ್ತಾರಷ್ಟೆ. ಕರ್ಮಗಳು ದುರಂತವಾದುವು. ಧರ್ಮಗಳು ಬಹಳ ಗಹನ. ಅವರಲ್ಲಿ ಬುದ್ಧಿ ಹುಟ್ಟುವುದೇ ಕಷ್ಟ. ಹುಟ್ಟಿದರೂ ಪ್ರಯತ್ನಮಾಡುವವರು ಕಡಿಮೆ. ಪ್ರಯತ್ನ ಮಾಡುವವರಿಗೆ ಅನೇಕ ವಿಘ್ನಗಳು ಬರುತ್ತವೆ. ಅವನ್ನೆಲ್ಲಾ ಈಶ್ವರಪ್ರಸಾದದಿಂದ ಗೆಲ್ಲಬೇಕು. ಹೀಗೆ ಕಷ್ಟಪರಂಪರೆ ಎದುರಿಸಬೇಕಾಗುವುದರಿಂದ ಜನರಿಗೆ ಕರ್ಮದ ಕಡೆ ಪ್ರವೃತ್ತಿಯುಂಟಾಗುವುದೇ ಕಷ್ಟ. ಆದ್ದರಿಂದ ಸುಲಭವಾಗಿ ಕರ್ಮಬಂಧನದಿಂದ ಮುಕ್ತನಾಗುವ ಉಪಾಯ ತಿಳಿಸಬೇಕು ಎಂದು ಪ್ರಾರ್ಥಿಸಲು ಭರದ್ವಾಜರು ಹೇಳುತ್ತಾರೆ.

ಪಂಚಾಕ್ಷರೀ ಮಹಿಮೆ—ಆದಿಯೋಗಿಯಾದ ಕುಮಾರನಿಗೆ ಸ್ಕಂದ ಹೇಳಿದ ರಹಸ್ಯವನ್ನೇ, ನಾನು ನಿನಗೆ ಅರುಹುತ್ತೇನೆ, ಕೇಳು. ಸಾಕ್ಷಾತ್ಪರಬ್ರಹ್ಮನಾದ ಶಿವನಿಗೆ ಏಕಾಂತವಾಚಕವಾದ ಪಂಚಾಕ್ಷರ ಮಂತ್ರವೊಂದುಂಟು.

ಮನನತ್ರಾಣನಿರ್ಮಾಣಾ ಮಂತ್ರಾಃ ಸ್ಯುಃ ಸಪ್ತಕೋಟಯಃ ||

ಮನನದಿಂದ ರಕ್ಷಿಸುವುದರಿಂದ ಮಂತ್ರಗಳಿಗೆ ಈ ಹೆಸರು ಬಂದಿದೆ.[1] ಈ ಮಂತ್ರಗಳು ಏಳು ಕೋಟಿ ಇವೆ. ಅವುಗಳಲ್ಲೆಲ್ಲಾ ಪಂಚಾಕ್ಷರಿಯೇ ಅತ್ಯುತ್ತಮವಾದುದು, ಮಹಾಮೋಹ ನಿಬರ್ಹಕವಾದುದು. ಪರಶಿವನನ್ನು ತೋರಿಸುವುದಕ್ಕೆ ಇದನ್ನು ಬಿಟ್ಟರೆ ಬೇರೆ ದೀಪವೇ ಇಲ್ಲ. ಈ ಮಂತ್ರದ ಋಷಿಛಂದಾದಿಗಳನ್ನು ಸರಿಯಾಗಿ ತಿಳಿದುಕೊಂಡು ಈ ಮಂತ್ರ ಜಪಮಾಡುವವನಿಗೆ ಸಕಲಾಘಸಂಚಯಗಳೂ ನಾಶವಾಗುತ್ತವೆ. ಇದನ್ನು ಜಪಿಸುವವನು ಕದಾಪಿ ದುಃಖ ಭಾಗಿಯಾಗುವುದಿಲ್ಲ. ಈ ವಿಷಯದಲ್ಲಿ ಒಂದು ಆಖ್ಯಾನವುಂಟು.

ಸಂಗಿರನ ಕಥೆ—ಹಿಂದೆ ಕಲ್ಪಾಂತರದಲ್ಲಿ ಸಂಗಿರ[2]ನೆಂಬ ದುರಹಂಕಾರಿ ಮಹಾವಾಚಾಳಿ ಬ್ರಾಹ್ಮಣನಿದ್ದ. ಅವನು ಮಾತು ಮಾತಿಗೆಲ್ಲಾ ಕುತರ್ಕ ಮಾಡುತ್ತಾ ವಿದ್ವಾಂಸರನ್ನೆಲ್ಲಾ ಖಂಡಿಸಿ ಗೇಲಿಮಾಡುತ್ತಿದ್ದ. ದುರ್ವಾಸನಾಮಯವಾದ ದುರ್ಮೋಹಾಕ್ರಾಂತ ಚೇತಸನಾಗಿ ಸಂಗಿರ ದೇವರು—ದಿಂಡರನ್ನೆಲ್ಲಾ ದೂಷಿಸುತ್ತಿದ್ದ. ಶೃತಿಸ್ಮೃತಿ ಪುರಾಣಗಳನ್ನೂ ಕುಯುಕ್ತಿಗಳಿಂದ ಖಂಡಿಸುತ್ತಿದ್ದ. ಯೋಗವನ್ನು ಅನು

1 ಮಂತ್ರ ಶಬ್ದವನ್ನು ಒಡೆದರೆ ಮನ್‌ತ್ರ ಎಂದು ಎರಡು ವಿಭಾಗವಾಗುತ್ತದೆ. ಮನ್ ಧಾತುವಿಗೆ ಮನನ ಮಾಡು, ಆಲೋಚಿಸು, ಧ್ಯಾನಮಾಡು ಎಂದರ್ಥ. ತ್ರಾ ಎಂಬ ಧಾತುವಿಗೆ ರಕ್ಷಿಸು ಎಂದರ್ಥ, ಅದರ ರೂಪಾಂತರವೇ ತ್ರ. ಹೀಗೆ ಮನ್+ತ್ರ ಸೇರಿ ಮನನ ಮಾಡುವವರನ್ನು ಕಾಪಾಡತಕ್ಕಂಥಾ ಎಂದರ್ಥವಾಗುತ್ತದೆ.

2 ಸಂ=ಚೆನ್ನಾಗಿ, ಅತಿಯಾಗಿ; ಗಿರ=ಮಾತಾಡುವವನು, ತಲೆ ಹರಟೆಯವನು ಎಂದರ್ಥ (ಗಿರ್ ಧಾತು).

ಪಪತ್ತಿಗಳಿಂದ ತಿರಸ್ಕರಿಸಿದ. ಮಂತ್ರ ತಂತ್ರಗಳನ್ನೆಲ್ಲಾ ಜರಿದಾಡಿದ. ಗಾಯತ್ರಿಯನ್ನೂ ಸಹ ಹಿಯ್ಯಾಳಿಸಿದ. ತಂದೆತಾಯಿ ಗುರುಹಿರಿಯರು ಯಾರನ್ನೂ ಲಕ್ಷಿಸುತ್ತಿರಲಿಲ್ಲ.

ಅವನ ದುರ್ಬುದ್ಧಿಯನ್ನು ಸಹಿಸಲಾರದೆ ಊರಿನವರೆಲ್ಲರೂ ಸೇರಿ ಅವನನ್ನು ಹೊರಹಾಕಿದರು. ಹೊರಗೆ ಹೋದರೂ ಅವನ ದುಷ್ಟ ಚಾಳಿ ತಪ್ಪಲಿಲ್ಲ. ಎಲ್ಲೆಲ್ಲಿ ಹೋದರೂ ಅವನಿಗೆ ಅರ್ಧಚಂದ್ರ ಪ್ರಯೋಗವೇ. ಹಾಗೂ ಹೀಗೂ ಜೀವಿಸಿದ್ದು ರೋಗ ಹತ್ತಿ ನರಳಿ ನರಳಿ ಒಂದು ದಿನ ಸತ್ತ. ಒಡನೆಯೇ ಯಮದೂತರು ಬಂದು ಅವನನ್ನು ಕರೆದೊಯ್ದು ಅಂತಕನ ಮುಂದೆ ನಿಲ್ಲಿಸಿದರು. ಅವನಿಗೆ ಏನು ಶಿಕ್ಷೆ ಕೊಡಬೇಕೆಂದೇ ಆ ಯಮರಾಜನಿಗೇ ತೋರದಂತಾಯಿತು. ಕಡೆಗೆ ಒಂದು ದುರಂತವಾದ ನರಕದಲ್ಲಿ ಅವನನ್ನು ತಳ್ಳಿದರು.

ಒಂದು ದಿನ ಶತಾನಂದರೆಂಬ ಮಹರ್ಷಿ ನರಕಲೋಕವನ್ನು ಕಣ್ಣಾರೆ ನೋಡಿಕೊಂಡು ಹೋಗುವುದಕ್ಕಾಗಿ ಬಂದರು. ಅಲ್ಲಿನ ನಾನಾಯಾತನೆಗಳನ್ನು ನೋಡಿ ಸಹಿಸಲಾರದೆ ಹೋದಾಗ ಸಂಕಟದಿಂದ ಅವರ ಬಾಯಿಂದ ಪಂಚಾಕ್ಷರೀ ಮಂತ್ರದ ಐದಕ್ಷರಗಳು ಹೊರಟವು. ಆ ಪಂಚಾಕ್ಷರಗಳೂ ಹತ್ತಿರವಲ್ಲೇ ಯಾತನೆಪಡುತ್ತಿದ್ದ ಸಂಗಿರನ ಕಿವಿಯ ಮೇಲೆ ಬಿದ್ದುವು. ತಾವನ್ಮಾತ್ರದಿಂದ ಸಂಗಿರನ ಪಾಪಗಳೆಲ್ಲ ತೊಳೆದು ಹೋಗಿ ಅವನಿಗೆ ದಿವ್ಯ ದೇಹವುಂಟಾಯಿತು. ಆಗ ಅವನಿಗೆ ನರಕವೇ ಸ್ವರ್ಗವಾಯಿತು. ಅನಂತರ ಸಂಗಿರ ಶುದ್ಧಾತ್ಮನಾಗಿ ಪಂಚಾಕ್ಷರಿಯ ಸಿದ್ಧಿಪಡೆದ. ಹೀಗೆ ಪಂಚಾಕ್ಷರಿಯ ಮಹಿಮೆ ಮಹಾಶ್ಚರ್ಯಕರವಾದುದು ಈ ವಿಷಯದಲ್ಲೂ ಮತ್ತೊಂದು ಆಖ್ಯಾನವುಂಟು.

ಹೆಚ್ಚು ಹೆಚ್ಚಿನ ಆಶ್ಚರ್ಯಗಳು—ಒಂದು ದಿನ ಯೋಗೀಂದ್ರರಾದ ಸನತ್ಕುಮಾರ ಭೂಪರ್ಯಟನ ಮಾಡುತ್ತಾ ಯಮುನಾಹ್ರದದಲ್ಲಿ (ಮಡುವಿನಲ್ಲಿ) ಅಡಗಿದ್ದರೂ ಇಡೀ ಭೂಮಂಡಲವನ್ನೇ ತನ್ನ ಶಿರಸ್ಸಿನ ಮೇಲೆ ಧರಿಸಿದ್ದ ಶೇಷನನ್ನು ಕಂಡು ಅದಕ್ಕೆ ಪರಮಾಶ್ಚರ್ಯ ಪಟ್ಟರು. ಅದನ್ನು ಕಂಡು ಶೇಷ "ನನಗಿಂತಲೂ ನಾನಿರುವ ಯಮುನೆ ಹೆಚ್ಚಿನ ಆಶ್ಚರ್ಯವಲ್ಲವೆ !" ಎಂದ. ಯಮುನೆ "ಗಂಗೆ ನನಗಿಂತಲೂ ಆಶ್ಚರ್ಯ" ಎಂದಳು. ಅವಳು "ನಾನು ಹುಟ್ಟುವ ಹಿಮಾದ್ರಿ ಇನ್ನೂ ಆಶ್ಚರ್ಯ" ಎಂದು ತಿಳಿಸಿದಳು. ಹೀಗೆಯೇ ನೋಡುತ್ತ ಹೋಗಲು ಹಿಮಾದ್ರಿಗಿಂತ ಭೂಮಿಯೂ, ಆಕೆಗಿಂತ ಸಮುದ್ರವೂ, ಅದಕ್ಕಿಂತ ಪರ್ಜನ್ಯನೂ ಪರ್ಜನ್ಯನಿಗಿಂತ ನಕ್ಷತ್ರಗಳೂ, ಅವಕ್ಕಿಂತ ಚಂದ್ರನೂ, ಆತನಿಗಿಂತ ಸೂರ್ಯನೂ,[1] ಅವನಿಗಿಂತ ಅಗ್ನಿಯೂ, ಅಗ್ನಿಗಿಂತ ಯಜ್ಞವೂ' ಅದಕ್ಕಿಂತ ದೀಕ್ಷಿತನೂ, ಅವನಿಗಿಂತ ವೇದಗಳೂ, ಅವಕ್ಕಿಂತ ಚತುರ್ಮುಖನೂ ಅಧಿಕರೆಂದು ಸನತ್ಕುಮಾರರಿಗೆ ತಿಳಿಯುತ್ತಾ ಬಂತು.

---

1 ಇಲ್ಲಿ ಮಧ್ಯೆ ಸ್ವಲ್ಪಭಾಗ ಗ್ರಂಥಪಾತವಾಗಿರುವ ಹಾಗೆ ತೋರುತ್ತದೆ.

ಹರಿಯು ಹಿರಿಮೆ—ಬ್ರಹ್ಮನನ್ನು ಕೇಳಿದರೆ ಅವನು "ಇಲ್ಲಪ್ಪ, ನನಗಿಂತ ಹರಿಯೇ ಅಧಿಕ. ಈ ವಿಷಯದಲ್ಲಿ ಹಿಂದೆ ನಡೆದ ಒಂದು ಸಂಗತಿ ಹೇಳುತ್ತೇನೆ, ಕೇಳು. ಪುರಾತನ ಕಾಲದಲ್ಲಿ ಪುಷ್ಕರ ಕಲ್ಪದಲ್ಲಿ ನನಗೂ ಹರಿಗೂ ಯಾರು ಹೆಚ್ಚೆಂಬ ವಿಷಯದಲ್ಲಿ ಸ್ಪರ್ಧೆ ಬಂತು. ಪರೀಕ್ಷೆಗಾಗಿ ಮೊದಲು ವಿಷ್ಣು ನನ್ನ ಹೊಟ್ಟೆಯನ್ನು ಪ್ರವೇಶಿಸಿ ಎಲ್ಲವನ್ನೂ ನೋಡಿಕೊಂಡು ಅನಾಯಾಸವಾಗಿ ಬಂದು ಬಿಟ್ಟ. ನಾನು ಅವನ ಹೊಟ್ಟೆಯಲ್ಲಿ ಹೋಗಿ ಅಲ್ಲಿದ್ದ ನಾನಾಲೋಕಗಳನ್ನು ಕಂಡು ದಿಗ್ಭ್ರಾಂತನಾಗಿ ಕೊನೆಮೊದಲು ಸಿಕ್ಕದೆ ಒದ್ದಾಡಿಬಿಟ್ಟೆ. ಕಡೆಗೆ ಹರಿಯನ್ನೇ ಸ್ತೋತ್ರಮಾಡಿದೆ. ಆಗ ಅವನು ನನ್ನನ್ನು ತನ್ನ ನಾಭಿಕಮಲದಿಂದ ಹೊರಗೆಡಹಿ ಕಾಪಾಡಿದ. ಹೀಗೆ ಸಕಲ ಜಗನ್ನಿಯಾಮಕನಾದ್ದರಿಂದ ಶ್ರೀ ಹರಿಯೇ ಸರ್ವೋತ್ತಮ" ಎಂದು ವರ್ಣಿಸಿದ. ಅದರ ತಥ್ಯಾಂಶವನ್ನು ಪರೀಕ್ಷಿಸಿಯೇ ಬಿಡಬೇಕೆಂದು ಸನತ್ಕುಮಾರರು ಅಚ್ಯುತನ ಬಳಿಗೇ ನಡೆದರು.

143. (9) ಪಂಚಾಕ್ಷರಿಯು ಸರ್ವೋತ್ತಮತ್ವ

ಅಚ್ಯುತನ ಹೇಳಿಕೆ—ಅಚ್ಯುತ (ವಿಷ್ಣು)ಹೀಗೆ ಹೇಳಿದ—ಹೇ ಯೋಗಿಶ್ರೇಷ್ಠ, ಆಶ್ಚರ್ಯಗಳಿಗಿಂತ ಆಶ್ಚರ್ಯಕರನಾದ ಶಂಕರನ ಮುಂದೆ ನನ್ನನ್ನೇನು ಹೊಗಳುತ್ತೀಯೆ ? ಹಿಂದೆ ಆ ಶಂಕರ ತನ್ನ ವಿಭೂತಿ ರೂಪಗಳನ್ನೆಲ್ಲಾ ನನಗೆ ತೋರಿಸಿ 'ಈ ಜಗತ್ತೆಲ್ಲ ನನ್ನ ವಿಭೂತಿರೂಪಗಳು' ಎಂದು ಹೇಳಿ ನರ್ತನಮಾಡಿದನು. ಆದ್ದರಿಂದ ನನಗಿಂತಲೂ ಶಂಕರನೇ ಆಶ್ಚರ್ಯ.

ಶಂಕರನ ಕಥನ—ವಿಷ್ಣುವಿನ ಮಾತು ಕೇಳಿ ಸನತ್ಕುಮಾರ ಕೈಲಾಸಕ್ಕೆ ಬಂದು ಮಹಾದೇವನನ್ನು ವಿಚಾರಿಸಿದರು. ಅದಕ್ಕೆ ಶಿವ ಹೀಗೆಂದ—"ನಾನು ಮಹಾಶ್ಚರ್ಯವೆಂಬುದೇನೋ ನಿಜ. ಆದರೆ ನನಗಿಂತಲೂ ಪಂಚಾಕ್ಷರಿಯೇ ಅತ್ಯಾಶ್ಚರ್ಯ. ಬ್ರಹ್ಮಾದಿ ಸ್ತಂಬಪರ್ಯಂತವಾದ ಚರಾಚರಾತ್ಮಕವಾದ ಜಗತ್ತೇ ಆ ಪಂಚಾಕ್ಷರಿಯ ಶರೀರ. ಕ್ರಿಮಿ ಕೀಟ ಪತಂಗಗಳಿಗಿಂತ ಪಶುಗಳು ಪ್ರಜ್ಞೆಯಲ್ಲಿ ಹೆಚ್ಚು. ಅವಕ್ಕಿಂತ ಆನೆ, ಅದಕ್ಕಿಂತ ಮನುಷ್ಯರು, ಅವರಲ್ಲೂ ಮುನಿಗಳು ವರರು ; ಅವರಲ್ಲೂ ಸಪ್ತರ್ಷಿಗಳು ಜ್ಞಾನಾಧಿಕರು. ಅವರಿಗಿಂತ ಬ್ರಹ್ಮಾದಿಗಳು. ಅವರಿಗಿಂತ ವಿಷ್ಣು ಅಧಿಕ. ಅವನಿಗಿಂತ ರುದ್ರ ಅಧಿಕ–ಆ ರುದ್ರನೇ ನಾನು. ನನ್ನ ಮೂರ್ತಿರೂಪವೇ ಪಂಚಾಕ್ಷರಿ. ಅದೇ ನನ್ನ ಐಶ್ವರ್ಯ, ಶಕ್ತಿ, ಪೌರುಷ, ಆತ್ಮ ಎಲ್ಲವೂ ಆ ಪಂಚಾಕ್ಷರಿ. ನನ್ನ ಸಂಖ್ಯೆಯನ್ನಾದರೂ ತಿಳಿಯಬಹುದು. ಆ ಪಂಚಾಕ್ಷರೀ ಮಹಿಮೆಯ ಸಂಖ್ಯೆಯನ್ನು ನೋಡವುದು ಅಸಾಧ್ಯ. ಬ್ರಹ್ಮಾದಿ ಸ್ಥಾವರಾಂತವಾದ ವಸ್ತುಗಳಲ್ಲೂ ನನ್ನಲ್ಲೂ ಏನೇನು ಆಶ್ಚರ್ಯಗಳಿವೆಯೋ ಎಲ್ಲವೂ ಈ ಪಂಚಾಕ್ಷರಿಯಲ್ಲಿ ಹುದುಗಿವೆ" ಎಂದನು.

ಈ ಮಾತು ಕೇಳಿ ಸನತ್ಕುಮಾರರು ಪಂಚಾಕ್ಷರಿಯ ಮಹಿಮೆಯನ್ನು ತಿಳಿದುಕೊಂಡು ಆ ಮಂತ್ರವನ್ನು ಜಪಿಸಿ ಸಿದ್ಧಿ ಪಡೆದುಕೊಂಡರು. ಹೀಗೆ ಸರ್ವಸಾರಗಳಿಗೂ

ಪರಮಾವಧಿಯಾದ ಮತ್ತು ಆಶ್ಚರ್ಯಗಳಲ್ಲೆಲ್ಲಾ ಗರಿಷ್ಠವಾದ ಪಂಚಾಕ್ಷರಿಯೇ ಸಮಸ್ತ ಸಂಪತ್ತುಗಳನ್ನು ಸಂಪಾದಿಸಿ ಕೊಡುವುದರಲ್ಲಿ ಸುಖೋಪಾಯ.

144· (10) ಜಪವಿಧಿ

[ಈ ಅಧ್ಯಾಯದಲ್ಲಿ ಪಂಚಾಕ್ಷರೀ ಜಪವಿಧಿ ಹೇಳಿದೆ· ಈ ಅಂಶಗಳನ್ನು ಗುರುವಿನ ಮುಖದಿಂದಲೇ ಅರಿತುಕೊಳ್ಳಬೇಕಾದ್ದರಿಂದಲೂ ಅವೆಲ್ಲವೂ ಕೇವಲ ಪುಸ್ತಕ ಪಾಠದಿಂದ ಗೊತ್ತಾಗುವುದಿಲ್ಲವಾದ್ದರಿಂದಲೂ ಇಲ್ಲಿ ಸ್ಥೂಲ ವಿಚಾರಗಳನ್ನು ಮಾತ್ರ ಸಂಗ್ರಹಿಸಿದೆ.]

ಜಪಕಾಲ—ಜ್ಞಾನಸಿದ್ಧಿ ಪಡೆದ ಗುರು ಯಾವ ಗಳಿಗೆ ಸಕಾಲವೆನ್ನುವನೋ ಅದೇ ಆ ಶಿಷ್ಯನಿಗೆ ಪರಿಪಕ್ವಕಾಲ. ಆ ಸಮಯದಲ್ಲಿ ಮನಸ್ಸನ್ನು ರಜಸ್ತಮೋಗುಣಗಳಿಂದ ತೊಳೆದುಕೊಂಡು ಸಾತ್ವಿಕಭಾವದೊಡನೆ ಸ್ವಸ್ಥಚಿತ್ತನಾಗಿರುವುದೇ ಸರಿಯಾದ ಸ್ಥಿತಿ. ಗುರುವಿನ ಕಾರುಣ್ಯರೂಪವಾದ ದೀಕ್ಷೆಯೂ ಆವಶ್ಯಕ. ಅದರಿಂದ ಜ್ಞಾನೋದಯವೂ ಪಾಪಕ್ಷಯವೂ ಆಗುತ್ತವೆ.

ಇತರ ವಿಧಿಗಳು—ಈ ಮಂತ್ರವನ್ನು ಶುಭಾಕಾಂಕ್ಷೆಯಿಂದ ವಿಚಾರಪೂರ್ವಕ ಜಪಿಸಬೇಕು. ಗುರುಭಕ್ತಿಯಿಂದ ಶುದ್ಧನಾದ ಧೀಮಂತನೇ ಅಧಿಕಾರಿ. ಗುರು ಶುಶ್ರೂಷೆ ಜಾಗ ಏಕಾಗ್ರತೆ ಅನಹಂಕಾರ(ದೈನ್ಯ) ಶಿವಭಕ್ತಿ ಶಿವಾಚಾರ ಇತ್ಯಾದಿ ಗಳು :ಸಾಧನಸಂಪತ್ತು. ಸಿದ್ಧಕ್ಷೇತ್ರ ಶಿವಕ್ಷೇತ್ರ ಶಿವತೀರ್ಥಗಳು ;ಪುಣ್ಯದೇಶ ಇವೇ ಜಪಸ್ಥಾನಗಳು. ಅಥವಾ ಮನಃಸ್ಥೈರ್ಯ ಬರುವ ಬೇರೆ ಯಾವ ಸ್ಥಳವಾದರೂ ಜಪಕ್ಕೆ ಪ್ರಶಸ್ತ. ಇದರಲ್ಲಿ ತ್ರೈವರ್ಣಿಕರು ಪ್ರಣವಸಹಿತ ಜಪಮಾಡಬೇಕು. ಸ್ತ್ರೀ ಶೂದ್ರ-ಮಿಶ್ರವರ್ಣದವರು ಪ್ರಣವರಹಿತವಾದ ಮಂತ್ರವನ್ನು ಜಪಿಸಿದರೆ ಸಿದ್ಧಿಯಾಗುತ್ತದೆ.

ಷಡಧ್ವಗಳು—ಸಿದ್ಧಿ ಪಡೆಯುವುದಕ್ಕೆ ವೀರ್ಣಾಧ್ವಾ ಸದಾಧ್ವಾದಿ ಆರು ಅಧ್ವ ಅಥವಾ ಮಾರ್ಗಗಳಿವೆ. ಇವಕ್ಕೆ ಷಡಧ್ವಗಳೆಂದು ಹೆಸರು. ಈ ಆರರಲ್ಲಿ ಮೂರು ಶಬ್ದರೂಪ ; ಮಿಕ್ಕ ಮೂರು ಅರ್ಥಾತ್ಮಕ.

ಪ್ರಾಸಾದಗಳು—ಪ್ರಸಾದ ಎಂದರೆ ಪ್ರಸನ್ನತೆ, ಒಲವು. ಮನಃಪ್ರಸಾದಕ್ಕೆ ಅಂದರೆ ಮನಸ್ಸು ನಿಶ್ಚಿಂತವಾಗಿ ಏಕಾಗ್ರವಾಗಿರುವುದಕ್ಕೆ ಬೇಕಾಗುವ ಸಾಮಗ್ರಿಗೇ **ಪ್ರಾಸಾದ** ಎಂದು ಹೆಸರು.

ಪ್ರಸಾದನತ್ವಾನ್ಮನಸಃ ಪ್ರಸಾದ ಇತಿ ಕಥ್ಯತೇ ||

ಈ ಪ್ರಸಾದದ ವಿಭೇಧಗಳು ಅನೇಕ ಇವೆ. ಆದರೆ ಅವುಗಳಲ್ಲೆಲ್ಲಾ ಪ್ರಣವವು ಮೊದಲನೆಯದು. ಸತ್ಯ ಮೊದಲಾದವೂ ಬಹುಮುಖ್ಯವಾದ ಪ್ರಾಸಾದಗಳು. ಇವುಗಳಿಂದ ಉತ್ತಮಗತಿಯಾಗುತ್ತದೆ.

145. (11) ಪಂಚಾರ್ಥ ಚರಣಗಳು

ಈ ಅಧ್ಯಾಯದಲ್ಲಿ ಮಂತ್ರ ಜಪಸಿದ್ಧಿಗೆ ಉಪಯುಕ್ತವಾದ ಸಾಧನೆಗಳ ವರ್ಣನೆ ಇಳಿದೆ. ಗುರೂಪದೇಶವಿಲ್ಲದೆ ಯಾವ ಮಂತ್ರವೂ ಸಿದ್ಧಿಸದು. ಆ ಗುರು ನವಗಣ ಗಳನ್ನು ತಿಳಿದವನಾಗಿರಬೇಕು. ಅಂಥಾ ಯೋಗ್ಯನಾದ ಗುರು ಶಿಷ್ಯನಿಗೆ ವಿಧೇಯ ರೂಪವಾದ ದೀಕ್ಷೆಕೊಟ್ಟು ಅವನನ್ನು ಧನ್ಯನನ್ನಾಗಿ ಮಾಡಬೇಕು. ಪಂಚಾರ್ಥ ಜ್ಞಾನ-ವಿಜ್ಞಾನ, ಪಾಶುಪತಯೋಗಚಿಂತೆ ಇತ್ಯಾದಿಗಳೇ ಧನ್ಯಲಕ್ಷಣಗಳು.

ಈ ಸಾಧನ ಸಾಮಗ್ರಿಗಳೆಲ್ಲ ಪರಿಪಕ್ವದೆಶೆಗೆ ಬಂದಾಗ ಮಂತ್ರ ಜಪ ಸಿದ್ಧಿಯಾಗು ತ್ತದೆ. ಈ ಕ್ರಮಪ್ರಕಾರವಾಗಿ ಕಥಿತವಾದ ಮಾರ್ಗಕ್ಕೇ ಪಂಚಾರ್ಥಚರಣವೆಂದು ಹೆಸರು. ಈರೀತಿ ಅನುಷ್ಠಾನಮಾಡುವುದರಿಂದ ಬಂಧದಿಂದ ಪಾರಾಗುತ್ತಾನೆ.

146. (12) ಪಾಶುಪತವ್ರತ

ಪ್ರಾಯಶ್ಚಿತ್ತ—ವಿಷ್ಣುವೃದ್ಧನಿಗೆ ಭಾರದ್ವಾಜರ ಮಾತು ಕೇಳಿ 'ನಿಯಮಗಳು ಅನೇಕವಾಗಿರುವುದರಿಂದ ಅವೆಲ್ಲ ಅಸ್ಖಲಿತವಾಗಿ ಚ-ತುಕೂಡ ತಪ್ಪದಂತೆ ನಡೆಯುವುದು ಅಸಾಧ್ಯ. ಎಷ್ಟೋ ಜ್ಞಾತಾಜ್ಞಾತ ದೋಷಗಳು ಸಂಭವಿಸುವುದು ಸಹಜವೇ ಸರಿ ಯಷ್ಟೆ. ಹಾಗೆ ಅನಿವಾರ್ಯವಾಗಿ ಸಂಭವಿಸುವ ದೋಷಗಳು ನಿವಾರಣೆಯಾಗುವುದು ಹೇಗೆಂ'ದು ದೊಡ್ಡ ಸಂಶಯ ಬಂತು. ಅವನ ಸಂಶಯವನ್ನು ನಿವಾರಿಸುವುದಕ್ಕಾಗಿ ಭಾರದ್ವಾಜರು ಹೇಳುತ್ತಾರೆ.

ನಿಜ. ಖಲಸಂಗದಿಂದ ತ್ರಿಕರಣಗಳಿಂದಲೂ ದೋಷಗಳು ಸಂಭವಿಸುತ್ತವೆ. ಅಷ್ಟೇ ಅಲ್ಲ, ಆ ದೋಷಗಳಿಂದ ಹಾನಿಯೂ ಉಂಟೇ ಉಂಟು. ವಾಚಕ [1] ದೋಷ ಗಳಿಂದ ಮೃಗಪಕ್ಷಿಗಳ ಜನ್ಮ ಬರುತ್ತದೆ. ಮಾನಸಿಕ ದೋಷಗಳಿಂದ ಅಂತ್ಯಜಾತಿತ್ವ ವುಂಟಾಗುಗುತ್ತದೆ. ಕಾಯಿಕ[2]ವಾದ ಕರ್ಮಜನ್ಯ ದೋಷಗಳಿಂದ ಸ್ಥಾವರಜನ್ಮ [3] ಸಂಭವಿಸುತ್ತದೆ. ಆದರೆ **ಪ್ರಾಯಶ್ಚಿತ್ತ** ಮಾಡಿಕೊಳ್ಳುವ ನರನನ್ನು ಯಾವ ದೋಷವೂ ಬಾಧಿಸುವುದಿಲ್ಲ. ಮಾನಸಿಕ ದೋಷಗಳ ಪ್ರಾಯಶ್ಚಿತ್ತಕ್ಕಿಂತ ವಾಚಕ ದೋಷಗಳ ಪ್ರಾಯಶ್ಚಿತ್ತ ಎರಡರಷ್ಟು ಅಧಿಕ. ಅದಕ್ಕಿಂತಲೂ ಕಾಯಿಕ ದೋಷಗಳ ಪ್ರಾಯಶ್ಚಿತ್ತ ಎರಡರಷ್ಟು ಅಧಿಕ.

---

1 ಮಾತಿನಿಂದ ಸಂಭವಿಸುವ, ಹೆಚ್ಚು ಕಡಿಮೆ ಮಾತಾಡುವುದರಿಂದ ಉಂಟಾಗುವ. 2 ದೇಹದಿಂದ ಸಂಭವಿಸುವ, ಕೈಯಾರ ಮಾಡುವ. 3 ಚಲನೆಯಿಲ್ಲದ ಗಿಡ ಮರಗಳ ಜನ ಅಥವಾ ಬೆಟ್ಟ ಗುಡ್ಡ ಕಲ್ಲು ಕಂಬ ಆಗೋಣ.

ಪಾಶುಪತವ್ರತ—ಪ್ರಾಯಶ್ಚಿತ್ತ ಬಾಹ್ಯ[1] ಆಭ್ಯಂತರ[2] ಎಂದು ಎರಡು ವಿಧ. ಪಶುಪತಿಯ (ಶಿವನ) ಆರಾಧನಾರೂಪವಾದ ವ್ರತವೇ ಎರಡು ವಿಧವಾದ ಪ್ರಾಯಶ್ಚಿತ್ತ ಗಳಿಗೂ ಮೂಲಕಾರಣ ; ಅದೇ ಪಾಶುಪತವ್ರತ. ಶಿವಸಮೀಪದಲ್ಲಿಯೇ ದಾನ ಸ್ನಾನ ಮೊದಲಾದುವು ಬಾಹ್ಯಪ್ರಾಯಶ್ಚಿತ್ತಗಳು. ಇದೇ ರೀತಿ ಶಿವಾರ್ಚನೆ, ರುದ್ರಾಭಿಷೇಕ, ಮಂತ್ರಜಪ ಇತ್ಯಾದಿಗಳಿಂದಲೂ ದೋಷ ಪರಿಹಾರವಾಗುತ್ತದೆ.

147. (13) ಶೈವಚರ್ಯೆ

ಮಹಾವ್ರತ—(ಪಾಶುಪತವ್ರತದ ವರ್ಣನೆಯಾದ ಬಳಿಕ ಮಹಾವ್ರತವೆನಿಸುವ ಮತವನ್ನು ವರ್ಣಿಸುತ್ತಾರೆ.)

ಮಹಾವ್ರತವು ಶೈವಮತದಿಂದಲೇ ಹುಟ್ಟಿತು. ಇದರ ಮಹಿಮೆಯನ್ನು ಹಿಂದೆ ಶ್ವೇತಗಿರಿಯಲ್ಲಿ ಶ್ವೇತಮುನಿ ಅಲ್ಲಿ ನೆರೆದಿದ್ದ ಮುನಿಗಳಿಗೆ ಹೇಳಿದ್ದರು. ಅನೇಕ ಮಹಾ ವ್ರತಗಳು ಈ ವ್ರತದಲ್ಲಿ ಅಂತರ್ಭೂತವಾಗಿರುವುದರಿಂದ ಇದಕ್ಕೆ **ಮಹಾವ್ರತ**ವೆಂದು ಹೆಸರು.

ಅಸ್ಮಿನ್ ಸಂತಿ ಮಹಾಂತ್ಯೇವ ವ್ರತಾನೀತಿ ಮಹಾವ್ರತಮ್ ॥

ಈ ವ್ರತದ ಚರ್ಯೆ (ಅಥವಾ ಅನುಷ್ಠಾನ) ನಿಶ್ಚಯವಾಗಿ ಮೋಕ್ಷಪ್ರಾಪಕವಾಗುತ್ತದೆ.

ಚರ್ಯೆಯ ಮಹಿಮೆ—ಸಾಧಕನು ಶುಭಚರ್ಯೆ [ಆಚಾರ ಅಥವಾ ನಡವಳಿಕೆ] ಯಿಂದಲೇ ವಿರಾಜಿಸುತ್ತಾನೆ. ಚರ್ಯೆ ಸರಿಯಾಗಿದ್ದರೆ ದೋಷಗಳು ಸಂಭವಿಸಿದರೂ ವಿಚಲಿತನಾಗುವುದಿಲ್ಲ [ಎಂದರೆ ದಾರಿತಪ್ಪುವುದಿಲ್ಲ]. ಗಾಳಿಗೆ ಬೆಟ್ಟ ಅಲುಗುತ್ತದೆಯೇ ? ಅದರಂತೆ ಶುಭ ಚರ್ಯೆಯುಳ್ಳವನು ಅಚಲವಾಗಿರುವನು, ತತ್ರಾಪಿ ಭಿಕ್ಷು ಚರ್ಯೆ ಬಹಳ ಶ್ರೇಷ್ಠ.

ಶೈಲೋಪಮಾನಿ ದುಃಖಾನಿ ಜಲಬಿಂದುಸಮಂ ಸುಖಮ್ ।
ಶರೀರಸ್ಯ ವಿನಾಶಿತ್ವಾತ್ ಭಿಕ್ಷುಚರ್ಯಾಂ ಸಮಾಶ್ರಯೇತ್ ॥

ಲೋಕದಲ್ಲಿ ದುಃಖಗಳು ಬೆಟ್ಟದಂತೆ ಬರುತ್ತವೆ. ಸುಖ ನೀರಿನ ಹನಿಯಷ್ಟು ಶರೀರವೇ ನಶ್ವರ, ಜೀವನ ಅಸ್ಥಿರ. ಆದ್ದರಿಂದ ಭಿಕ್ಷು ಚರ್ಯೆ ಅವಲಂಬಿಸಬೇಕು. ಗಾಣಕ್ಕೆ ಸಿಗಿಸಿರುವ ಮಾಂಸಕ್ಕೆ ಆಶೆಪಟ್ಟು ಮೀನುಗಳು ಸಿಕ್ಕಿಬೀಳುವಂತೆ ವಿಷಯಾಸಕ್ತ ಚಿತ್ತರಾದ ಮನುಷ್ಯರು ಪರಾಭವ ಹೊಂದುತ್ತಾರೆ. ಆದ್ದರಿಂದ, ಹಾವು ಹಳೆ ಪೊರೆ ಯನ್ನು ಬಿಟ್ಟು ವಿರಾಜಿಸುವಂತೆ ವ್ರತಸ್ಥನು ಘೋರವಾದ ವಿಷಯಗಳನ್ನು ಪರಿತ್ಯಜಿಸಿ ಅಮೃತೋಪಮವಾದ [ಸಾಧು] ಚರ್ಯೆ ಗ್ರಹಣಮಾಡಬೇಕು. ನೀರಿನ ಮಧ್ಯದಲ್ಲಿ ರುವ ಹಡಗು ತುಳುಕಾಡುತ್ತಿದ್ದರೂ ಹೇಗೆ ಸ್ಥಿರವಾಗಿ ನಿಲ್ಲುತ್ತದೋ ಅದರಂತೆ ಚರ್ಯಾ

---

1 ಹೊರಗಿನ 2 ಒಳಗಿನ (ಅಭ್ಯಂತರ= ಒಳಭಾಗ.)

ರೂಢನಾದ ಧೀರ ಯಾವ ಅಪಾಯಕ್ಕೂ ಹೆದರುವುದಿಲ್ಲ. ಚಿಲ್ಲು ಬೀಜ ಕೆಸರು ನೀರನ್ನೂ ಸಹ ಸ್ವಚ್ಛಮಾಡಿಬಿಡುವಂತೆ ಚರ್ಯೆ ಸಾಧಕನನ್ನು ಪರಿಶುದ್ಧಿಗೊಳಿಸುತ್ತದೆ. ವಿಷಹರ ಮಂತ್ರ ಬಲ್ಲವನಿಗೆ ಹೇಗೆ ಹಾವಿನ ಭಯವಿಲ್ಲವೋ, ನಿರ್ಮಲಜಲದ ಸರಸ್ಸಿನಲ್ಲಿರುವವನಿಗೆ ಹೇಗೆ ಬಾಯಾರಿಕೆಯ ಭಯವಿಲ್ಲವೋ ಅದರಂತೆಯೇ ಶುದ್ಧ ಚರ್ಯೆಯುಳ್ಳವನು ಗರ್ಭವಾಸಾದಿ ದುಃಖಗಳಿಗೂ ಅಂಜಬೇಕಾಗಿಲ್ಲ.

ಪರ್ವತದ ಶಿಖರದ ಮೇಲಿರುವವನು ಹೇಗೆ ಕೆಳಗಿರುವವರನ್ನು ನಿರೀಕ್ಷಿಸುವನೋ ಹಾಗೆಯೇ ಚರ್ಯೆಯ ಶಿಖರದ ಮೇಲಿರುವವನೂ ಇತರರನ್ನು ಮೇಲಿಂದ ಅವಲೋಕನ ಮಾಡುತ್ತಾನೆ. ಔಷಧೋಪಚಾರಗಳಿಂದ ರೋಗಗಳು ಪರಿಹಾರವಾಗುವಂತೆಯೇ ಚರ್ಯೆಯಿಂದ ದೋಷಗಳೆಲ್ಲವೂ ನಿವಾರಣೆಯಾಗುವುವು. ಶಿರೋಮಣಿಯು ಹೇಗೆ ಸರ್ವಾಂಗಗಳಿಗೂ ಶೋಭಾದಾಯಕವಾಗಿರುತ್ತದೋ ಅದರಂತೆ ವ್ರತಚರ್ಯೆಯಿಂದ ಪರಿಶೋಭಿಸುವ ವ್ರತಿಯು ವ್ರತಚರ್ಯೆಯಿಂದ ಶುದ್ಧನಾಗಿ ಗರ್ಭವಾಸ ಜನನ ಜರಾ ಮರಣಾದಿ ದುಃಖಗಳನ್ನೂ ಲೆಕ್ಕಿಸದೇ ಚರ್ಯೆಯ ಅಂಗಗಳಲ್ಲೇ ಹಂಸಕ್ಷೀರನ್ಯಾಯದಿಂದ ಸಂಚರಿಸಬೇಕು.

ಶೈವ ಚರ್ಯೆ— ಹೀಗೆ ನಡೆದುಕೊಳ್ಳುವುದೇ ಶೈವ ಚರ್ಯೆ. ಇದಕ್ಕೆ 1. ಅಹಿಂಸಾ, 2. ಸತ್ಯ, 3. ಅಸ್ತೇಯ, 4. ಬ್ರಹ್ಮಚರ್ಯ, 5. ಅಕಲ್ಪನ, 6. ಅಕ್ರೋಧ, 7. ಗುರುಶುಶ್ರೂಷೆ, 8. ಶೌಚ, 9. ಸಂತೋಷ, 10. ಆರ್ಜವ ಎಂದು ಹತ್ತು ಅಂಗಗಳಿವೆ.

ಇವುಗಳ ವಿವರಣೆಯನ್ನು ಅರಿತುಕೊಂಡು ಶಿವಚರ್ಯೆಯಲ್ಲಿ ನಿರತನಾದವನನ್ನು ಶಿವನು ಕಾಲಾಂತರದಲ್ಲಿ ರಕ್ಷಿಸುತ್ತಾನೆ. ಈ ಪ್ರಕಾರ ಮಹಾವ್ರತವು ದುರಿತಾಂಧಕಾರ ನಿರ್ಭೇದನಕಾರ್ಯದಲ್ಲಿ ಸೂರ್ಯಕಿರಣಜಾಲದಂತಿದೆಯೆಂದೂ ಚಂದ್ರಶೇಖರನ ಸದ್ಯಃಪ್ರಸಾದಜನಕವೆಂದೂ ತಿಳಿಯಬೇಕು.

148. [14]. ಕಾಲಾಮುಖ ಪ್ರಶಂಸೆ

ಕಾಲಾಮುಖಮತ—ಕಾಲಾಮುಖಮತ ಸಕಲಾಗಮಗಳಲ್ಲೂ ತಂತ್ರಗಳಲ್ಲೂ ಪುರಾಣೇತಿಹಾಸಗಳಲ್ಲೂ ಪ್ರಶಂಸಿಸಲ್ಪಟ್ಟಿದೆ. ಇದು ಸಕಲ ಮಂತ್ರಾರ್ಥಸಿದ್ಧಿಪ್ರದ. ಶಿವೋಪಾಸನೆಯಿಂದ ಇದರ ಮಹಾಫಲ ದೃಷ್ಟವಾಗಿ ಕಲಾಪೂರ್ಣವಾಗಿದೆ. ಇದನ್ನು ಅನುಷ್ಠಾನಮಾಡುವವನೂ ಕಾಲಾಮುಖನೇ. ಈ ಕಾಲಾಮುಖವಿಲ್ಲದೆ ತಪಸ್ಸು ಶಾಂತಿ ದಯೆ ಶ್ರದ್ಧೆ ದಾನ ವ್ರತ ಯಾವುದೂ ಶೋಭಿಸುವುದಿಲ್ಲ. ಇದನ್ನು ಗುರು ಮುಖದಿಂದಲೇ ತಿಳಿದುಕೊಳ್ಳಬೇಕು. ಕಲಾರಹಿತವಾಗಿ ಯಾವುದೂ ಪ್ರವರ್ತಿಸುವುದಿಲ್ಲ.

ಅದರ ಕಥೆ—ಹಿಂದೆ ಅನಿಲಗಿರಿಯ ಶೃಂಗದ ಮೇಲೆ ಸ್ಕಂದ ಪಾರ್ವತೀ ಸಮೇತ

ನಾಗಿ ಕುಳಿತಿದ್ದ ಶಂಕರನನ್ನು "ದೇವ ದೇವ ! ತಂತ್ರಗಳಲ್ಲೆಲ್ಲಾ ಅತಿಮುಖ್ಯವಾದು ದನ್ನು ಅನುಗ್ರಹಿಸು" ಎಂದು ಪ್ರಾರ್ಥಿಸಿದ. ಆಗ ಶಂಕರ ಕಾಲಾಮುಖವನ್ನು ಅವನಿಗೆ ಉಪದೇಶಿಸಿ "ಇದೇ ಸರ್ವ ವೇದೈಕ ಸಮ್ಮತವಾದುದು ಮತ್ತು ಬಹು ಗುಹ್ಯ" ಎಂದು ಹೇಳಿದ. ಅಷ್ಟು ಹೊತ್ತಿಗೆ ಗಜಾನನ ಅಲ್ಲಿಗೆ ಆಡುತ್ತ ಬಂದ. ಇನ್ನೊಂದು ಕಡೆಯಿಂದ ನಂದನವನದ ದೇವತೆಯೂ ಬಂದು ಪಾರ್ವತಿಗೆ ಒಂದು ಹಣ್ಣು ತಂದೊಪ್ಪಿಸಿದಳು. ಆ ಹಣ್ಣಿನ ಮೇಲೆ ಸ್ಕಂದ ಗಜಾನನ ಇಬ್ಬರ ಕಣ್ಣೂ ಬಿತ್ತು. ಅದನ್ನು ಕಂಡು ಪಾರ್ವತಿ ವಿನೋದಕ್ಕಾಗಿ "ಯಾರು ಭೂಪ್ರದಕ್ಷಿಣೆ ಮಾಡಿಕೊಂಡು ಮೊದಲು ಬರುವರೋ ಅವರಿಗೆ ಈ ಹಣ್ಣು" ಎಂದು ಹೇಳಿದಳು. ಸ್ಕಂದ ಕ್ಷಣದೊಳಗಾಗಿ ಭೂಪ್ರದಕ್ಷಿಣೆ ಮಾಡಿಕೊಂಡು ಬಂದ. ಅಷ್ಟರಲ್ಲೇ ಗಣೇಶ ತಾಯಿಗೆ ಪ್ರದಕ್ಷಿಣೆಮಾಡಿ ನಿಂತ; ಗೌರಿಗೆ ಪ್ರದಕ್ಷಿಣೆಮಾಡಿದ್ದರಿಂದ ಗಣೇಶನಿಗೂ ಭೂಪ್ರದಕ್ಷಿಣೆ ಮಾಡಿದಂತೆಯೇ ಆಯಿತು. ಆದ್ದರಿಂದ ಗೌರಿ ಆ ಇಬ್ಬರಿಗೂ ಆ ಹಣ್ಣನ್ನು ಸಮಭಾಗಮಾಡಿ ಹಂಚಿ ಕೊಟ್ಟಳು.

ಸ್ಕಂದ ಭೂಪ್ರದಕ್ಷಿಣೆ ಮಾಡುವಾಗ ಅವನೊಡನೆ ಸ್ಕಂದನ ಮಹಾಭಕ್ತ ಮಹಾ ಕಾಲನೂ ಭೂಮಿಯನ್ನು ಸುತ್ತಿಕೊಂಡು ಬಂದ. ಆದರೆ ಅವನು ಎರಡು ಮುಹೂರ್ತ ತಡವಾಗಿ ಬಂದ. ಆದರೂ ಸ್ಕಂದ ಅವನನ್ನು ಸನ್ಮಾನಿಸಿ ಅವನ ಸೇವೆಗೆ ಮೆಚ್ಚಿ ಅವನಿಗೆ ಈಶ್ವರ ತನಗೆ ಉಪದೇಶಿಸಿದ ತಂತ್ರವನ್ನು ಬೋಧಿಸಿದ. ಮಹಾಕಾಲ ಅದನ್ನು ಕೆಲವು ಮುನಿಗಳಿಗೂ ದೇವತೆಗಳಿಗೂ ಹೇಳಿಕೊಟ್ಟ. ಅವರಿಂದ ಅನೂಚಾನವಾಗಿ ಈ ತಂತ್ರ ಪರಂಪರಾಗತವಾಗಿ ಬಂದಿದೆ. ಸುಸೂಕ್ಷ್ಮಜ್ಞಾನವನ್ನು ಕೊಡುವುದಕ್ಕೆ ಈ ತಂತ್ರಕ್ಕಿಂತಲೂ ಉತ್ತಮವಾದುದು ಯಾವುದೂ ಇಲ್ಲ.

149. [15]. ಕಾಲಾಮುಖ ಮತ

ಕಾಲಾಮುಖ ಪಂಚಕಲೆಗಳನ್ನು ಆಶ್ರಯಿಸಿದೆ. ಕಲಾಪಂಚಕವನ್ನರಿತವನೇ ಗುರು. ಅಂಥಾ ಗುರುವೇ ಶಿಷ್ಯನನ್ನು ಪಾಶಬಂಧನದಿಂದ ಬಿಡಿಸಬಲ್ಲ. ಗುರು ದೀಕ್ಷಾಬದ್ಧನೂ ಶುಚಿಯೂ ಜ್ಞಾನಿಯೂ ವೇದಮಾರ್ಗಮರ್ಮಜ್ಞ ವಿಪ್ರನೂ ಆಗಿರ ಬೇಕು, ಕಾಲಾಮುಖಕ್ಕೆ ಅನುಗುಣವಾಗಿ ನಡೆದುಕೊಳ್ಳಬೇಕು.

ಕಲಾಶ್ರಯವಾಗಿ ಬ್ರಹ್ಮಚರ್ಯ ದಯಾ ಸತ್ಯ ಅಕ್ರೋಧ ಶಾಂತಿ ಆರ್ಜವ ಶಿವಭಕ್ತಿ ತಪಸ್ಸು ಗುರುಸೇವೆ ಜಪ ಎಂಬ ಹತ್ತು ಅಂಗಗಳನ್ನು ಪಾಲಿಸಬೇಕು ಇವಕ್ಕೆ ಸಂಬಂಧಪಟ್ಟ ಅನುಷ್ಠಾನ ವಿಶೇಷಗಳನ್ನೆಲ್ಲಾ ಅರಿತವನೇ ಉತ್ತಮ ಗುರು ಇತ್ಯಾದಿ.

150. (16) ಗ್ರಂಥೋಪಸಂಹಾರ

ಅಷ್ಟಾಂಗಯೋಗವನ್ನು ಚೆನ್ನಾಗಿ ಅರಿತಕೊಂಡು ಅಭ್ಯಾಸಮಾಡಿದರೆ ಸದ್ಯಃ ಸಿದ್ಧಿಯನ್ನು ಪಡೆಯಬಹುದು. ಅಷ್ಟಾಂಗಯೋಗಜ್ಞಾನವುಂಟಾದರೆ ಭ್ರಮವಾಗಲಿ ವಿಷಾದವಾಗಲಿ ದುಃಖವಾಗಲಿ ಶ್ರಮಮೋಹಮದಾದಿಗಳಾಗಲಿ ಬರುವುದಿಲ್ಲ.

ಯೋಗ ವಿಭಾಗ—ಯೋಗ ಪ್ರಥಮತಃ ಐದು ವಿಧವಾಗಿದೆ—ಮಂತ್ರಯೋಗ ಸ್ಪರ್ಶಯೋಗ ಭಾವಯೋಗ ಅಭಾವಯೋಗ ಮಹಾಯೋಗ. ಮಹಾಯೋಗ ಪುನಃ ಶಿವಯೋಗ ಬ್ರಹ್ಮಯೋಗ ಮನೋಯೋಗವೆಂದು ತ್ರಿವಿಧ ಅವಾಂತರ ಭೇದಾತ್ಮಕವಾಗಿದೆ. ಅದರಲ್ಲಿ ಶಿವಯೋಗ ಪುನಃ ಯಮ ನಿಯಮ ಆಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿ ಎಂದು ಎಂಟು ಅಂಗಗಳಿಂದ [ಅಷ್ಟಾಂಗಗಳಿಂದ] ಕೂಡಿದೆ. ಬ್ರಹ್ಮಯೋಗ ಬ್ರಹ್ಮಚರ್ಯಾದಿ [1] ದಶಾಂಗವುಳ್ಳದ್ದು.

ಯೋಗ ಮುದ್ರೆಗಳು—ಈಗ ಯೋಗದ ಪ್ರಸಂಗದಿಂದ [ಯೋಗ] ಮುದ್ರೆಗಳ ಲಕ್ಷಣಗಳನ್ನೂ ಹೇಳುತ್ತಾರೆ. ಯಾವ ಯೋಗಿ ಈ ಮುದ್ರೆಗಳಿಂದ ಸನ್ನದ್ಧನಾಗಿರುವನೋ ಅವನಿಗೇ ಯೋಗ ಸಿದ್ಧಿಸುತ್ತದೆ. ಆದ್ದರಿಂದ ಇವುಗಳ ಜ್ಞಾನ ಅತ್ಯಾವಶ್ಯಕ.

ಮುದ್ರೆಗಳು ಅಸಂಖ್ಯಾತವಾಗಿವೆ. ಆದರೂ ಅವುಗಳಲ್ಲಿ—1. ಉಡ್ಡಿಯಾಣ, 2. ನಭೋಮುದ್ರೆ, 3. ಮಹಾಮುದ್ರೆ 4. ಜಲಂಧರಾ, 5. ಮೂಲಮುದ್ರೆ ಈ ಐದ ಬಹುಮುಖ್ಯವಾದುವು. ಈ ಐದನ್ನು ಸರಿಯಾಗಿ ತಿಳಿದುಕೊಂಡ ಯೋಗಿ ಸರ್ವವನ್ನೂ ತಿಳಿದಂತೆ.

ಉಪಸಂಹಾರ ಮತ್ತು ಫಲಸ್ತುತಿ—ಈ ಪ್ರಕಾರ ಆನಂದರಸೈಕರೂಪವಾದ ಯೋಗ ವಿಸ್ತಾರವಾಗಿ ನಿರೂಪಿತವಾಯಿತಷ್ಟೆ. ಇದರಲ್ಲೇ ಬುದ್ಧಿಯನ್ನಿಟ್ಟು ಜಿತಾತ್ಮನಾದ ಮಾನವ ಸಿದ್ಧಿ ಹೊಂದುತ್ತಾನೆ. ಹೀಗೆ ಸರ್ವಪಾಪಭಯಾವಹವಾದ ಹೇಮಕೂಟದ ಮಹಿಮೆ **ಹನ್ನೊಂದು ಸಾವಿರ ಗ್ರಂಥಗಳಿಂದ** [2] ವರ್ಣಿಸಲ್ಪಟ್ಟಿದೆ. ಪುಣ್ಯತಮವಾದ ಈ ಆಖ್ಯಾನವನ್ನು ಯಾರು ಸದಾ ಶ್ರವಣಮಾಡುತ್ತಾರೋ ಅವರು ಪುತ್ರ ಪೌತ್ರ ಸಹಿತರಾಗಿ ಸ್ವರ್ಗ ಲೋಕದಲ್ಲಿ ಪೂಜಿತರಾಗುತ್ತಾರೆ.

---

1. ಅಧ್ಯಾಯ 149 ರಲ್ಲಿ ಹೇಳಿದ ಬ್ರಹ್ಮಚರ್ಯ ದಯ ಸತ್ಯಾದಿ ಹತ್ತು ಅಂಗಗಳು.

2. ಮೂವತ್ತೆರಡು ಅಕ್ಷರಗಳಿಗೆ ಒಂದು ಗ್ರಂಥ. ವಾಲ್ಮೀಕಿರಾಮಾಯಣದಲ್ಲಿ 24 ಸಾವಿರ ಗ್ರಂಥಗಳಿವೆ. ಭಾಗವತ 18 ಸಾವಿರ ಗ್ರಂಥ. ಇದರಿಂದ 11 ಸಾವಿರದ ಅಂದಾಜು ಮಾಡಿಕೊಳ್ಳಬಹುದು.

ಇಂತು ಸ್ಕಾಂದ ಪುರಾಣೋಕ್ತ ಹೇಮಕೂಟಖಂಡದಲ್ಲಿ
ಸಪ್ತರ್ಷಿ ಯಾತ್ರಾ ಪ್ರಕಾಶಿಕಾ ಎಂಬ

ಪಂಪಾಮಾಹಾತ್ಮ್ಯದಲ್ಲಿ

ನವವೃಂದಾವನಾವಾಸಿ ವಿಷ್ಣುತೀರ್ಥನಿಂದ ರಚಿತವಾದ ಕನ್ನಡ ಸಂಗ್ರಹದಲ್ಲಿ

ಉತ್ತರಭಾಗ ಸಮಾಪ್ತ

ಯಾ ಸೇವಾ ವಿಷ್ಣುತೀರ್ಥೇನ ನವವೃಂದಾವನೌಕಸಾ ।
ಭೂಯಾತ್ಸಾ ವಾಙ್ಮನೋದೇವ-ಗೌರೀಶಾನಪ್ರಿಯಂಕರೀ ॥

ಪಂಪಾಮಾಹಾತ್ಮ್ಯ ಸಂಪೂರ್ಣ

ಶ್ರೀಕೃಷ್ಣಾರ್ಪಣಮಸ್ತು

ಹೇಮಲಂಬಿ, ೧೮೭೯
ಜ್ಯೇ. ಕೃ. ೧೧, ಸೋಮ.

ದಿನಾಂಕ 24-6-57

ಪಂಪಾಮಾಹಾತ್ಮ್ಯ

ಐತಿಹಾಸಿಕ ವಿಭಾಗ

ವಿಜಯನಗರದ ಇತಿಹಾಸ

ಮಂಗಳ ಶ್ಲೋಕಗಳು 1

ವಿರೂಪಾಕ್ಷನ ಸ್ತುತಿ

ನಮಸ್ತುಂಗಶಿರಶ್ಚುಂಬಿ-ಚಂದ್ರಚಾಮರಚಾರವೇ ।
ತ್ರೈಲೋಕ್ಯನಗರಾರಂಭ-ಮೂಲಸ್ತಂಭಾಯ ಶಂಭವೇ ॥

ಗಣೇಶ ಸ್ತುತಿ

ಕಲ್ಯಾಣಾಯಾಸ್ತು ತದ್ಧಾಮ ಪ್ರತ್ಯೂಹತಿಮಿರಾಪಹಮ್ ।
ಯದ್ಗಜೋಽಪ್ಯಗಜೋದ್ಭೂತಂ ಹರಿಣಾಪಿ ಚ ಪೂಜ್ಯತೇ ॥

ವರಾಹಸ್ತುತಿ 2

ಹರೇರ್ಲೀಲಾವರಾಹಸ್ಯ ದಂಷ್ಟ್ರಾದಂಡಃ ಸ ಪಾತು ವಃ ।
ಹೇಮಾದ್ರಿಕಲಶಾ ಯತ್ರ ಧಾತ್ರೀ ಛತ್ರಶ್ರಿಯಂ ದಧೌ ॥

1 ಹಂಪೆ—ವಿಜಯನಗರ

ಹಳೆ ಮತ್ತು ಹೊಸ ಹಂಪೆ—ಇಲ್ಲಿಯವರೆಗೆ ನೂರೈವತ್ತು ಅಧ್ಯಾಯಗಳಲ್ಲಿ ಪುರಾಣೋಕ್ತವಾದ ಮಾಹಾತ್ಮ್ಯವನ್ನು ಓದಿದೆವಷ್ಟೆ. ಆದರೆ ಇಂದು ನಾವು ನೋಡುವ ಹಂಪೆ ಈ ಪುರಾಣಯುಗದ ಹಂಪೆಯಲ್ಲ—ಇದನ್ನು ನಾವು ಮರೆಯಲಾಗದು. ಪುರಾಣ ಯುಗದ ಆ ಹಂಪೆ ಕಾಲಗತಿಯಿಂದ ಈಗ, ಅದರಲ್ಲೂ ಕಳೆದ ಆರು ಶತಮಾನ

---

1 ಈ ಮೂರು ಶ್ಲೋಕಗಳನ್ನೂ ವಿಜಯನಗರದ ಶಿಲಾಶಾಸನಗಳಿಂದಲೇ ಆರಿಸಿ ಕೊಂಡಿದೆ. 2 ಈ ಶ್ಲೋಕವು ಸಣ್ಣ ಕಂಚಿಯಲ್ಲಿ ಅರುಲಾಲ್ ಪೆರುಮಾಳ್ ಗುಡಿಯಲ್ಲಿರುವ ಶ್ರೀಕೃಷ್ಣದೇವರಾಯನ ಶಾಸನದಲ್ಲಿದೆ. ವರಾಹವು ಈ ರಾಜರ ವಂಶಲಾಂಛನ.

ಗಳಿಂದೀಚೆಗೆ, ಸಂಪೂರ್ಣವಾಗಿ ಒಂದು ಹೊಸ ರೂಪವನ್ನೇ ತಾಳಿದೆ. ಹಿಂದೆ ಇದರ ವೈಶಿಷ್ಟ್ಯವೇ ಬೇರೆಯಾಗಿತ್ತು, ಇಂದು ಅದರವೈಶಿಷ್ಟ್ಯವೇ ಬೇರೆಯಾಗಿದೆ.

ಪುರಾಣಯುಗದ ಹಂಪೆ—ಪುರಾಣಯುಗದಲ್ಲಿ ಹಂಪೆ ಮುಖ್ಯವಾಗಿ ಒಂದು ಪವಿತ್ರವಾದ **ತೀರ್ಥಕ್ಷೇತ್ರ**ವಾಗಿತ್ತು. ಆಗಿನ ಜನರ ದೃಷ್ಟಿ ಇಲ್ಲಿಯ ತೀರ್ಥಕ್ಷೇತ್ರಗಳು ದೇವತಾಧಿದೇವತೆಗಳ ಮತ್ತು ತತ್ತನ್ಮಹಿಮೆಗಳ ಕಡೆ ಇರುತ್ತಿತ್ತು. ಪುರಾಣವು ಅದಕ್ಕನು ಗುಣವಾಗಿಯೇ ಆ ತೀರ್ಥಾದಿಗಳ ಮಹಿಮೆಯನ್ನು ಯಥಾಕ್ರಮವಾಗಿ ವರ್ಣಿಸಿತು. ಇದೇ ನಾವು ಸೂಚಿಸಿದ ಪುರಾಣಯುಗದ ದೃಷ್ಟಿ.

ಆಧುನಿಕ ಹಂಪೆ—ಆದರೆ ಈಗ ನಮ್ಮ ದೃಷ್ಟಿ ಅದಲ್ಲ. ಈಗ ಹಂಪೆಗೆ ಬರುವವರೆಲ್ಲ ಬಹಳವುಟ್ಟಿಗೆ ಇಲ್ಲಿರುವ ಜಗದ್ವಿಖ್ಯಾತವಾದ ವಿಜಯನಗರದ ಅವಶೇಷ ಗಳನ್ನು ನೋಡಿಕೊಂಡು ಹೋಗುವುದಕ್ಕೇ ಬರುತ್ತಾರೆ; ಕೇವಲ ಯಾತ್ರಾರ್ಥಿಗಳಾಗಿ ಬರುವವರು ಬಹಳ ವಿರಳ—ಯಾತ್ರಾರ್ಥಿಗಳಿಗಿಂತಲೂ ಪ್ರೇಕ್ಷಕರ ಸಂಖ್ಯೆಯೇ ಹೆಚ್ಚು. ಹೀಗಾಗಿ ಹಂಪೆಯ ಎಷ್ಟೋ ತೀರ್ಥಗಳೂ ಮೂರ್ತಿಗಳೂ ಹೇಳ ಹೆಸರಿಲ್ಲದಂತೆ ಅಳಿದು ಹೋಗಿವೆ; ಇದನ್ನು ಹಿಂದೆ ಅಲ್ಲಲ್ಲೆ ಎಷ್ಟೋಕಡೆ ಸೂಚಿಸಲಾಗಿದೆ.

ಅಷ್ಟೇಕೆ, ಹಂಪೆಯಲ್ಲೇ ಹುಟ್ಟಿ ಬೆಳೆದವರಿಗೂ ಸಹ ಚಕ್ರತೀರ್ಥ, ಮಾಲ್ಯವಂತ, ಸೀತಾಸರೋವರ ಮುಂತಾದ ಹೆಸರುಗಳು ರೂಢಿಯಾಗಿ ಗೊತ್ತೇ ವಿನಾ ಅವುಗಳ ಮಹಿಮೆಯಾಗಲಿ ತತ್ಸಂಬಂಧಿ ಆಖ್ಯಾಯಿಕೆಗಳಾಗಲಿ ಗೊತ್ತಿಲ್ಲ. ಹೀಗಿರುವಾಗ ಹೊರಗಿನಿಂದ ಬಂದು ಹೋಗುವವರ ಪಾಡಿನ್ನೇನು! ಈಗಿನ ನಮ್ಮ ದೃಷ್ಟಿ ಬೇರೆ ಎಂಬುದಕ್ಕೆ ಈ ಒಂದು ನಿದರ್ಶನವೇ ಸಾಕು.

ಪ್ರವಾಸಿಕೇಂದ್ರ—ಹಿಂದೆ ಸೂಚಿಸಿದಂತೆ ಈಗ ಹಂಪೆ ಯಾತ್ರಾಸ್ಥಳಕ್ಕಿಂತ ಹೆಚ್ಚಾಗಿ ಪ್ರಸಿದ್ಧವಾದ ಒಂದು **ಪ್ರವಾಸಿಕೇಂದ್ರ** (ಟೂರಿಸ್ಟ್ ಸೆಂಟರ್ tourist centre) ಆಗಿಹೋಗಿದೆ. ಹಂಪೆಗೆ ಈ ಹೊಸ ಆಕರ್ಷಣೆಯನ್ನು ತಂದು ಕೊಟ್ಟದ್ದು ಇದೇ ಕ್ಷೇತ್ರದಲ್ಲಿ ಹುಟ್ಟಿ ಬೆಳೆದು ಮೆರೆದು ಅಳಿದುಹೋದ **ವಿಜಯನಗರ ಸಾಮ್ರಾಜ್ಯ.** ಈಗ ಹಂಪೆಯ ಖ್ಯಾತಿ ವಿಜಯನಗರದ ಖ್ಯಾತಿಯೊಂದಿಗೆ ಬೆರೆತು ಹೋಗಿದೆ; ವಿಜಯ ನಗರದ ಅವಶೇಷಗಳಿಗೆ "ಹಂಪಿ ರೂಯಿನ್ಸ್" ಎಂದೇ ಹೆಸರು ಬಿದ್ದುಹೋಗಿದೆ. ಇದ ರಿಂದಲೇ ಹಂಪೆಗೂ ವಿಜಯನಗರಕ್ಕೂ ಇರುವ ಘನಿಷ್ಠ ಸಂಬಂಧ ತಿಳಿದುಬರುತ್ತದೆ.

ವಿಜಯನಗರವೂ ವಿದ್ಯಾರಣ್ಯರೂ—ಹಂಪೆಯ ಖ್ಯಾತಿಗೆ ವಿಜಯನಗರ ಹೇಗೆ ಕಾರಣವಾಯಿತೋ ಹಾಗೆ ವಿಜಯನಗರದ ಖ್ಯಾತಿಗೆ ವಿದ್ಯಾರಣ್ಯರು ಕಾರಣೀ ಭೂತರು. ಅವರ ತಪಃಶಕ್ತಿಯ ಮಹಿಮೆಯಿಂದ, ಅನೇಕ ವರ್ಷಗಳ ದುಡಿಮೆಯ ಫಲವಾಗಿ ವಿಜಯನಗರ ರೂಪುಗೊಂಡಿತು. ಅವರ ಕೈವಾಡವಿಲ್ಲದಿದ್ದರೆ ವಿಜಯನಗರ ವೈಭವದ ಸಾಮ್ರಾಜ್ಯವಾಗುತ್ತಿರಲಿಲ್ಲ. ಇತರ ಸಾಮ್ರಾಜ್ಯಗಳಂತೆಯೇ ಇದೂ ಒಂದು ಯಃಕಶ್ಚಿತ್ ಸಾಮ್ರಾಜ್ಯವಾಗುತ್ತಿತ್ತು. ಇದರಲ್ಲಿ ಲೇಶವೂ ಸಂದೇಹವಿಲ್ಲ.



ಬಿಷ್ಟಪ್ಪಯ್ಯನ ಗೋಪುರದ ಬಳಿ ಇರುವ ಕೃಷ್ಣದೇವರಾಯನ ಶಿಲಾಶಾಸನ—ಹಿಂಭಾಗ (ಪುಟ-239)

ಇದಕ್ಕೆ ನಿದರ್ಶನರೂಪವಾಗಿ ಹಂಪೆಯ ಮತ್ತು ಹಂಪೆ ಗುಡಿಯ ಇತಿಹಾಸವನ್ನು ತೆಗೆದುಕೊಳ್ಳಬಹುದು.

ಹಂಪೆಯ ಇತಿಹಾಸ[1]—ಹಂಪೆಯು ಬುನಾದಿಯಿಂದ ಹೆಸರಾದ ಕ್ಷೇತ್ರವಾಗಿತ್ತೆಂಬ ಬಗ್ಗೆ ಪ್ರಾಚೀನ ಪುರಾಣಗಳ ಆಧಾರವೇ ಅಲ್ಲದೆ ಹಳೆಯ ಶಾಸನಗಳ ಬೆಂಬಲವೂ ಇದೆ. (1) ಬಾದಾಮಿಯ ಚಾಲುಕ್ಯ ರಾಜನಾದ ವಿನಯಾದಿತ್ಯನು ಹಂಪೆಯಲ್ಲಿ ಬೀಡುಬಿಟ್ಟಿದ್ದಾಗ ಕರ್ನೂಲು ಜಿಲ್ಲೆಯ ತೊಗರ್ಚೇಡು ಗ್ರಾಮದಲ್ಲಿ ಭೂಮಿಯನ್ನು ವಿದ್ವಾಂಸರಿಗೆ ದಾನ ಮಾಡಿದನೆಂದು ಆ ಗ್ರಾಮದ ತಾಮ್ರ ಶಾಸನ (ಶಾ. ಶ. ೬೧೩, ಕ್ರಿ.ಶ. 691) ದಿಂದ ತಿಳಿದುಬರುತ್ತದೆ.

(2) ಗೋಣಹಾಳು ಗ್ರಾಮದಲ್ಲಿ (ಹೊಸಪೇಟೆ ತಾ.) ದೊರೆತ ಒಂದು ಶಾಸನದಲ್ಲಿ ಪಲ್ಲವ ಕುಲದ ವೃದ್ಧಿಮಬ್ಬರಸಿಯು ಶಕವರ್ಷ ೯೩೫ (ಕ್ರಿ. ಶ. 1013) ರಲ್ಲಿ ಪಂಪಾಪತಿಯಾದ ಮಹಾಕಾಲನಿಗೆ ಭೂದಾನ ಮಾಡಿದ ಉಲ್ಲೇಖವಿದೆ. (3) ಇದೇ ರೀತಿ ಅರಸೀಬೀದಿಯ ಒಂದು ಲಿಪಿಯಲ್ಲಿ ಅಕ್ಕಾದೇವಿ ಎಂಬುವಳು ಶಾ. ಶ. ೯೩೫ ಕ್ಕೆ ಸಲ್ಲುವ ವಿಜಯ ಸಂ|| ದಲ್ಲಿ (ಕ್ರಿ.ಶ. 1013ರಲ್ಲಿ) ಹಂಪೆಯ ತೀರ್ಥದಲ್ಲಿ ಭೂದಾನ ಮಾಡಿದ ವಿಷಯ ಬರೆದಿದೆ.

(4) ಹಂಪೆಯ ವಿರೂಪಾಕ್ಷನ ಗುಡಿಯಲ್ಲೇ ಇರುವ ಒಂದು ಲಿಪಿಯಲ್ಲಿ ಕುರುಗೋಡಿನಲ್ಲಿ (ಬಳ್ಳಾರಿ ಜಿಲ್ಲಾ) ಆಳುತ್ತಿದ್ದ ನಾಗವಂಶದ ಕಲಿದೇವನ ಆಳಿಕೆಯಲ್ಲಿ ಶಕ ೧೧೨೧ (ಕ್ರಿ.ಶ. 1199) ರಲ್ಲಿ ವಿರೂಪಾಕ್ಷನಿಗೂ ಹಂಪಾದೇವಿಗೂ ಭೂದಾನ ಮಾಡಿದ ಸಂಗತಿ ಲಿಖಿತವಾಗಿದೆ. (5) ಹೀಗೆಯೇ ಅದೇ ಗುಡಿಯ ಕನಕಗಿರಿ ಗೋಪುರದಲ್ಲಿ (ಉತ್ತರದಿಕ್ಕಿನ, ನದಿಗೆ ಹೋಗುವ ದಾರಿಯಲ್ಲಿರುವ ಎತ್ತರವಾದ ಗೋಪುರದಲ್ಲಿ) ನಟ್ಟ ಒಂದು ಶಿಲಾಲಿಪಿಯಲ್ಲಿ ಶಕ ೧೧೫೯ನೆ ದುರ್ಮುಖಿ ಸಂ|| ದಲ್ಲಿ (ಕ್ರಿ.ಶ. 1237) ಹೊಯಿಸಳ ಮನೆತನದ ಸೋಮೇಶ್ವರನು ಚಿಕ್ಕಗರಜೆಯ ವಿಪ್ರರು ತನಗೆ ಕೊಡುತ್ತಿದ್ದ ವಾರ್ಷಿಕ ಕರವನ್ನು ವಿರೂಪಾಕ್ಷನಿಗೆ ದಾನಮಾಡಿದಂತೆ ಹೇಳಿದೆ.

5. ಇಷ್ಟೇ ಅಲ್ಲದೆ ವಿಜಯನಗರದ ಕಾಲಕ್ಕೆ ಹಿಂದೆಯೇ ಎಷ್ಟೋ ಮಂದಿ ಕವಿ–ಕಬ್ಬಿಗರೂ ವಚನಕಾರರೂ ಹಂಪೆಯಲ್ಲಿ ಆಗಿಹೋದ ವಿಚಾರಗಳು ಕನ್ನಡ ಕವಿಚರಿತೆಯಲ್ಲಿ ವರ್ಣಿತವಾಗಿವೆ.

---

1 ಮುಂದಿನ ಕೆಲವು ಖಂಡಗಳಲ್ಲಿ ಹೇಳಿರುವ ಅಂಶಗಳನ್ನು ಬಹಳ ಮಟ್ಟಿಗೆ ಭಾರತ ಸರ್ಕಾರದ ಪ್ರಾಚ್ಯ ಶಾಖೆಯವರು ಕನ್ನಡದಲ್ಲಿ ಪ್ರಕಟಿಸಿದ್ದ *A Guide to Hampi and Vijayanagar* by R. S. Panchamukhi, M.A. ಎಂಬ ಪುಸ್ತಕದಿಂದ ಸಂಗ್ರಹಿಸಿದ್ದೇನೆ. ಅವರಿಗೆ ನಾನು ಋಣಿಯಾಗಿದ್ದೇನೆ.

ಹಂಪೆಗುಡಿಯ ಇತಿಹಾಸ—ವಿದ್ಯಾರಣ್ಯರ ಕಾಲಕ್ಕೆ ಮುಂಚೆ ಹಂಪೆಯ ಗುಡಿ ಈಗಿನಂತೆ ವಿಶಾಲವಾಗಿ ವೈಭವಯುತವಾಗಿರಲಿಲ್ಲ. ಹಲವಾರು ಶಿಲಾಶಾಸನಗಳಿಂದ ಈಗಿನ ಗುಡಿಯ ಬೇರೆ ಬೇರೆ ಭಾಗಗಳು ಭಿನ್ನ ಭಿನ್ನ ಕಾಲಗಳಲ್ಲಿ ನಿರ್ಮಾಣವಾಗಿವೆಯೆಂದು ಖಚಿತವಾಗಿ ತಿಳಿದುಬರುತ್ತದೆ. ಹಂಪೆ ಬಹು ಪುರಾತನ ಕಾಲದಿಂದಲೂ ಪ್ರಸಿದ್ಧವಾಗಿದ್ದರೂ ಇಲ್ಲಿ ವಿಜಯನಗರ ಕಾಲಕ್ಕೆ ಮುಂಚೆ ಗುಡಿ-ಗೋಪುರಗಳು ವಿಶೇಷವಾಗಿ ಇದ್ದಹಾಗೆ ಕಂಡು ಬರುವುದಿಲ್ಲ. ಏಕೆಂದರೆ—ನಾಗವಂಶದ ಕಲಿದೇವರಸನ ಶಕ ೧೧೨೧ [ಕ್ರಿ. ಶ. 1199]ರ ಹಂಪೆಯ ಶಾಸನದಲ್ಲಿ ಕುಂತಳ ದೇಶದಲ್ಲಿ ಬಲಕುಂದೆನಾಡೂ, ಅದರಲ್ಲಿ ದೊರೆವದಿನಾಡೂ, ಆ ನಾಡಿನಲ್ಲಿ ಪಂಪಾತೀರ್ಥವಿದೆಯೆಂದೂ, ಆ ತೀರ್ಥದಲ್ಲಿ ವಿರೂಪಾಕ್ಷಗೃಹಕ್ಕೆ ಹೊಂದಿ ಪಂಪಾಲಯ, ಬ್ರಹ್ಮೇಶಾಲಯ, ಭೈರವಗೃಹ [ಅಥವಾ ಭೈರವಾಲಯ], ರಾಜಮಲ್ಲೇಶ್ವರ ದೇವಾಲಯಗಳಿದ್ದುವೆಂದೂ ಹೇಳಿದೆ.

ಇವುಗಳಲ್ಲಿ ಪಂಪಾಲಯನೇ ಭುವನೇಶ್ವರೀ ಗುಡಿಯಾಗಿರಬೇಕು; ಇದೇ ಈ ಆವರಣದಲ್ಲಿರುವ ಗುಡಿಗಳಲ್ಲೆಲ್ಲಾ ಅತಿಪ್ರಾಚೀನವಾದುದೆಂದು ಕಂಡು ಬರುತ್ತದೆ. ಈ ಗುಡಿಯ ದ್ವಾರದ ಕೆತ್ತನೆ ಕೆಲಸಗಳು ಕುಸುರಿ ಕೆಲಸಗಳು ಮುಂತಾದ ಲಕ್ಷಣಗಳನ್ನು ನೋಡಿದರೆ ಈ ಗುಡಿ ಕಲ್ಯಾಣಿಯ ಚಾಲುಕ್ಯರ ಕಾಲದ್ದೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ವಿರೂಪಾಕ್ಷಗೃಹವೇ ಮೂಲಲಿಂಗವಿರುವ ಗರ್ಭಗುಡಿ. ಆದರೆ ಆಗ ಇದು ಬಹಳ ಚಿಕ್ಕದಾಗಿದ್ದಿರಬೇಕು. ಕಾಲಕ್ರಮದಲ್ಲಿ ಗರ್ಭಗುಡಿಯ ಮುಂದಿನ ಪ್ರಾಕಾರಗಳೂ, ಗೋಪುರಗಳೂ, ಕಲ್ಯಾಣಮಂಟಪ—ಪೌಳಿಗಳು ಮೊದಲಾದುವೆಲ್ಲ ವಿಜಯನಗರದ ಅರಸರ ಕಾಲದಲ್ಲಿ ನಿರ್ಮಿತವಾದುವೆಂದು ಇತಿಹಾಸಜ್ಞರಿಂದ ನಿಶ್ಚಯಿಸಲ್ಪಟ್ಟಿದೆ. [ಮಿಕ್ಕ ಎರಡು ಗುಡಿಗಳು ಯಾವುವೋ ನಿರ್ಧರವಾಗಿ ಹೇಳಲು ಸಾಧ್ಯವಿಲ್ಲ.]

ಹಂಪೆ ಗುಡಿಯ ವಿಸ್ತರಣ—ಈಗ ಹಂಪೆ ಗುಡಿಯ ಪ್ರಾಕಾರದಲ್ಲಿ ನಾಲ್ಕು ಗೋಪುರಗಳು ಕಂಗೊಳಿಸುತ್ತಿವೆ. ಇವುಗಳೆಲ್ಲೆಲ್ಲಾ ಮಹಾದ್ವಾರದ ಮೇಲಿರುವ ಗೋಪುರವೇ ಅತ್ಯಂತ ಎತ್ತರವಾದುದು. ಇದು 165 ಅಡಿ ಎತ್ತರವುಳ್ಳ ಹನ್ನೊಂದು ಮಾಳಿಗೆಗಳ ಅತ್ಯದ್ಭುತವಾದ ಕಟ್ಟಡ. ಇದನ್ನು ವಿದ್ಯಾರಣ್ಯರ ವಂಶದವರಾದ ಬಿಷ್ಟಪ್ಪಯ್ಯ ಎಂಬುವರು ಕಟ್ಟಿಸಿದರೆಂದು ಹೇಳುತ್ತಾರೆ. ಅದಕ್ಕೇ ಇವತ್ತಿಗೂ ಇದನ್ನು **ಬಿಷ್ಟಪ್ಪಯ್ಯನ ಗೋಪುರ**ವೆಂದು ಕರೆಯುತ್ತಾರೆ. ಎರಡನೆಯ ಮಾಳಿಗೆ ಹತ್ತಿ ನೋಡಿದರೆ ಕೊನೆಯ (ಹನ್ನೊಂದನೆಯ) ಮಾಳಿಗೆವರೆಗೂ ಇಡೀ ಗೋಪುರ ಕಾಣಿಸುವಂತೆ ಒಳಗೆ ಟೊಳ್ಳಾಗಿ ರಚನೆಮಾಡಿರುವುದು ಅತಿವಿಚಿತ್ರವಾದ ಅದ್ಭುತ ಕೈಚಳಕ.

ಈ ಗೋಪುರವನ್ನು ದಾಟಿದರೆ ಒಳಗೆ ಬಹು ವಿಶಾಲವಾದ ಅಂಗಳವೂ ಮಂಟಪ

ಗಳೂ ಕಾಣಿಸುತ್ತವೆ. ಇವುಗಳ ಹಿಂಬದಿಯಲ್ಲಿ ಇನ್ನೊಂದು ಸಣ್ಣ ಗೋಪುರ ಕಣ್ಣಿಗೆ ಬೀಳುತ್ತದೆ. ಇದಕ್ಕೆ **ರಾಯರ ಗೋಪುರ**ವೆಂದು ಹೆಸರು. ಇದನ್ನು ಕೃಷ್ಣದೇವ ರಾಯ ತನ್ನ ಪಟ್ಟಾಭಿಷೇಕ ಸಮಯದಲ್ಲಿ ಶಾ. ಶ. ೧೪೩೦ (ಕ್ರಿ.ಶ. 1509)ರಲ್ಲಿ ಕಟ್ಟಿಸಿದನೆಂದು ಈ ಗುಡಿಯಲ್ಲಿರುವ ಶಾಸನಗಳಿಂದ [1] ಗೊತ್ತಾಗುತ್ತದೆ. ಅದೇ ಶಾಸನ ಈ ರಾಯನು 'ಮುಂದಣ ಗೋಪುರವನು' (ಬಿಷ್ಟಪ್ಪಯ್ಯನ ಗೋಪುರವನ್ನೂ) ಜೀರ್ಣೋದ್ಧಾರ ಮಾಡಿಸಿದನೆಂದೂ ಹೇಳುತ್ತದೆ. ಇದರಿಂದ 'ಹಿರಿಯ ಗೋಪುರ' 1509ಕ್ಕಿಂತಲೂ ಬಹಳ ಹಿಂದಿನದೆಂದು ಸ್ವಯಂ ವ್ಯಕ್ತವಾಗುತ್ತದೆ.

ಉತ್ತರ ದಿಕ್ಕಿನಲ್ಲಿ ನದಿಗೆ ಹೋಗುವ ದಾರಿಯಲ್ಲಿ ರಾಯರ ಗೋಪುರಕ್ಕಿಂತಲೂ ಎತ್ತರವಾದ ಇನ್ನೊಂದು ಗೋಪುರವಿದೆ. ಇದಕ್ಕೆ **ಕನಕಗಿರಿ ಗೋಪುರ** ಅಥವಾ ಕಣ್ಣಗಿರಿ ಗೋಪುರವೆಂದು ಹೆಸರು. ಇದನ್ನೂ ಕೃಷ್ಣದೇವರಾಯನೇ ಕಟ್ಟಿಸಿದ್ದೆಂದು ಕೆಲವರು ಹೇಳುವರು ; ಕನಕಗಿರಿಯ ರಾಜ ಕಟ್ಟಿಸಿದ್ದೆಂದು ಕೆಲವರು ಹೇಳುವರು. ಆದರೆ ಯಾವುದಕ್ಕೂ ನಿರ್ದಿಷ್ಟವಾದ ಪ್ರಮಾಣಗಳಿಲ್ಲ.

ಪಂಪಾಪತಿಗುಡಿಯ ಮಧ್ಯದ ಪ್ರಾಕಾರಗಳೂ ಬುರುಜುಗಳೂ ಮಂಟಪಗಳೂ ವಿಶಾಲವಾದ ಹಜಾರ ಸಣ್ಣ ಸಣ್ಣ ಮಂದಿರಗಳು ಇವೆಲ್ಲ ವಿಜಯನಗರದ ಕಾಲದಲ್ಲಿಯೇ ಕ್ರಮಕ್ರಮವಾಗಿ ಕಟ್ಟಲ್ಪಟ್ಟಿರಬೇಕು. 1513ರಲ್ಲಿ ಪೋರ್ಚುಗಲ್ ರಾಯಭಾರಿಯಾಗಿ ಬಂದಿದ್ದ ಪೇಜ಼್ ಅಥವಾ ಪೆಯಜ಼್ (Paes) ಬರೆದ ವರ್ಣನೆ ಓದಿದರೆ ಈಗಿನ ಗುಡಿ ಕಣ್ಣಿಗೆ ಕಟ್ಟಿದಂತಾಗುತ್ತದೆ.

ಪೇಜನ ವರ್ಣನೆ—ಬಿಸನಾಗ(=ವಿಜಯನಗರ)ದ ಹೊರ ಭಾಗದಲ್ಲಿ ಮೂರು ಒಳ್ಳೆ ಸುಂದರವಾದ ಧೇವಾಲಯಗಳಿವೆ. ಅವುಗಳಲ್ಲಿ ಒಂದು ವಿಠ್ಠಲನ ಗುಡಿ [ಎರಡನೆಯದು ಹಜಾರರಾಮನ ಗುಡಿ. ಇನ್ನೊಂದು ರಾಜನ ಕುಲದೇವರ ಗುಡಿ.].... ಇದೇ ವಿರೂಪಾಕ್ಷನ ಗುಡಿ. ಈ ದೇವರನ್ನು ಜನರೂ ರಾಜರೂ ಬಹು ಭಕ್ತಿಯಿಂದ ಆರಾಧಿಸುತ್ತಾರೆ. ಈ ದೇವಸ್ಥಾನದ ಮಹಾದ್ವಾರದ ಎದುರಿಗೆ ವಿಶಾಲವಾದ ಬೀದಿಯುಂಟು. ಇಲ್ಲಿ ರಾಜನ ಅರಮನೆಯೂ ಶ್ರೀಮಂತರ ಅರಮನೆಗಳೂ, ಯಾತ್ರಿಕರಿಗಾಗಿ ರಾಜನು ಕಟ್ಟಿಸಿದ ಮಂಡಪಗಳೂ ಕಂಗೊಳಿಸುತ್ತವೆ.[2]

ಮಹಾದ್ವಾರದ ಮೇಲೆ ಭವ್ಯವೂ ಎತ್ತರವೂ ಆದ ಗೋಪುರವಿದ್ದು [ಇದೇ ಬಿಷ್ಟಪ್ಪಯ್ಯನ ಗೋಪುರ] ಅಲ್ಲಿ ಸ್ತ್ರೀಪುರುಷರ ಗೊಂಬೆಗಳೂ ಬೇಟೆಯ ದೃಶ್ಯಗಳೂ ಇನ್ನೂ ಅನೇಕ ಮೂರ್ತಿಗಳೂ ಬಹುಚಂದವಾಗಿ ಕೆತ್ತಲ್ಪಟ್ಟವೆ. ಗಂಡು–ಹೆಣ್ಣು ಮೂರ್ತಿಗಳು ಮೇಲಕ್ಕೇರಿದಂತೆ ಪ್ರಮಾಣದಲ್ಲಿ ಕಡಿಮೆಯಾಗುತ್ತ ಕಣ್ಣಿಗೆ ಸೊಬಗನ್ನು ಬೀರು

---

1 ಈ ಶಾಸನದ ಸಂಪೂರ್ಣ ವಿಷಯವನ್ನೂ ಚಿತ್ರ ಪಟವನ್ನೂ ಮುಂದೆ ಕೃಷ್ಣದೇವರಾಯನ ಆಡಳಿತವನ್ನು ವಿವರಿಸುವಾಗ ಕೊಟ್ಟಿದೆ.

2 ಈಗ ಇವೆಲ್ಲ ದುರ್ದೆಶೆಯಲ್ಲಿವೆ.

ತ್ತವೆ. ಪುಹಾದ್ವಾರದ ಎದುರಿಗೆ ನಾಲ್ಕು ಕಂಬಗಳನ್ನು [ಗೋಪುರಗಳನ್ನು ?] ನಿಲ್ಲಿಸಿ ದ್ದಾರೆ. ಅವುಗಳಲ್ಲಿ ಎರಡು ತಾಮ್ರದ ತಗಡಿನ ಹೊದಿಕೆಯುಳ್ಳವು, ಉಳಿದೆರಡು ಬಂಗಾರದ ಕಲಾಯಿಯುಳ್ಳವು. ಮಹಾದ್ವಾರದ ಹತ್ತಿರವೇ ಇದ್ದ ಕಂಬವನ್ನು [ಇದೇ ರಾಯರ ಗೋಪುರವಿರಬೇಕು] ಈಗ ರಾಜನಾದ ಕೃಷ್ಣದೇವರಾಯನು ದೇವ ರಿಗಾಗಿ ಕಟ್ಟಿಸಿದ್ದಾನೆ. ಮಹಾದ್ವಾರದ ಹೊರಗಿನ ಗೋಡೆಯು ಮಾಳಿಗೆಯವರೆಗೆ ತಾಮ್ರದ ತಗಡಿನಿಂದ ಮುಚ್ಚಿದ್ದು ಆದರ ಮೇಲೆ ಬಂಗಾರದ ಕಲಾಯಿ ಮಾಡಿದೆ.

ಇದನ್ನು ದಾಟಿದ ಮೇಲೆ ಒಳ ಅಂಗಳವೂ ಅದನ್ನು ಎದುರಿನ ದ್ವಾರ [ರಾಯರ ಗೋಪುರ] ದಿಂದ ದಾಟಿದರೆ ಮತ್ತೊಂದು ಒಳ ಅಂಗಳವೂ ಬರುತ್ತದೆ. ಇದರ ಸುತ್ತಲೂ ಪೌಳಿಗಳಿವೆ. ನಡುವೆ ತುಂಗಭದ್ರಾ ಕಾಲುವೆ ಹರಿಯುತ್ತಿದೆ. ಇದರ ಅಂಗಳದಲ್ಲಿ ವಿರೂಪಾಕ್ಷನ ದೇವಾಲಯವಿದೆ. ಕಂಬದಲ್ಲಿ ದೀಪ ಹಚ್ಚಲು ಸಣ್ಣ ಸಣ್ಣ ರಂಧ್ರಗಳಿದ್ದು ಅಲ್ಲಿ ನಿತ್ಯ ಸಂಜೆಗೆ 25-30 ಸಾವಿರ ದೀಪಗಳನ್ನು ಹಚ್ಚುತ್ತಾರೆ. ....ಗರ್ಭ ಗೃಹದಲ್ಲಿ ವಿರೂಪಾಕ್ಷನ ಲಿಂಗವು ಕಂಗೊಳಿಸುತ್ತದೆ. ಇದಕ್ಕೆ ಪೂಜೆಪುನ ಸ್ಕಾರಗಳು ನಿತ್ಯವೂ ವೈಭವದಿಂದ ನಡೆಯುತ್ತವೆ....ಇತ್ಯಾದಿ.

ಅಲ್ಲದೆ ಆಕಾಲದಲ್ಲಿ ಕೂಡ ಯಾತ್ರಾರ್ಥಿಗಳು ದೇವರ ದರ್ಶನಾದಿಗಳಿಗೆ ದುಡ್ಡು ಕೊಡಬೇಕಾಗಿತ್ತೆಂದೂ, ತಾನೂ ಸಹ ದುಡ್ಡು ಕೊಟ್ಟೇ ಪ್ರವೇಶಪಡೆದನೆಂದೂ ಗುಡಿ ಯಲ್ಲಿ ಸದಾ ಮೂರು ಸಾವಿರ (ನಂದಾ) ದೀಪಗಳು ಉರಿಯುತ್ತಿದ್ದುವೆಂದೂ ಡಾಮಿಂಗೋಸ್ ಪೇಜನು ಬರೆದಿಟ್ಟಿದ್ದಾನೆ.

ಹೀಗೆ ಒಂದೇ ನಿದರ್ಶನದಿಂದ ವಿಜಯನಗರಕ್ಕೆ ಹಂಪೆ ಎಷ್ಟು ಋಣಿಯಾಗಿದೆ ಯೆಂಬುದು ಗೊತ್ತಾಗುತ್ತದೆ. ವಿಜಯನಗರ ತಾನು ಹಾಳಾದರೂ ಹಂಪೆಗೆ ಒಂದು ಹೊಸ ಕಳೆ ತಂದುಕೊಟ್ಟಿತು. ಮುಂದಿನ ಪುಟಗಳಲ್ಲಿ ಅದನ್ನೇ ಸಂಕ್ಷೇಪವಾಗಿ ತಿಳಿಸ ಲಾಗಿದೆ.

2 ಐತಿಹಾಸಿಕ ಹಿನ್ನೆಲೆ

ದಕ್ಷಿಣ ಭಾರತದ ವೈಶಿಷ್ಟ್ಯ — ತೆಂಗಿನಕಾಯಿ ಒಂದೇ ಆದರೂ ಆದರ ಮೇಲ್ಭಾಗದ ಹೋಳಿಗೂ ಕೆಳಭಾಗದ ಹೋಳಿಗೂ ಆಕಾರ—ಪ್ರಕಾರಗಳಲ್ಲಿ ಎಷ್ಟೋ ಅಂತರ ಕಂಡುಬರುವಂತೆಯೇ ಸಮಗ್ರ ಭಾರತ ಒಂದೇ ರಾಷ್ಟ್ರವಾದರೂ ಉತ್ತರ ದೇಶಕ್ಕೂ ದಕ್ಷಿಣ ದೇಶಕ್ಕೂ ಅಜ-ಗಜಾಂತರವು ವಿಚಕ್ಷಣಾಧ್ಯಯನಶೀಲರಿಗೆ ಕಾಣದೆ ಇರದು. ಅಷ್ಟೇ ಅಲ್ಲ. ದಕ್ಷಿಣ ದೇಶದ ಒಂದು ವೈಶಿಷ್ಟ್ಯವೇ ಹೊರಬೀಳು ತ್ತದೆ. ಈ ಭಿನ್ನತೆಗೆ, ಈ ವೈಶಿಷ್ಟ್ಯಕ್ಕೆ ಉತ್ತರ-ದಕ್ಷಿಣಗಳ ಪ್ರಾಕೃತಿಕ ಸಂನಿವೇಶ ಗಳೇ ಮುಖ್ಯ ಕಾರಣ. ಹೀಗಾಗಿ ಭಾಷೆ, ನುಡಿ, ಜನತೆ, ಸಂಸ್ಕೃತಿ, ಆಚಾರ— ವ್ಯವಹಾರಗಳು, ಚಲನ-ವಲನಗಳು—ಯಾವ ವಿಷಯದಿಂದ ಅಧ್ಯಯನ ಮಾಡ

ಹೊರಟರೂ ಇವೆರಡಕ್ಕೂ ಸಾಮರಸ್ಯಕ್ಕಿಂತ ವ್ಯತ್ಯಾಸವೇ ಹೆಚ್ಚಾಗಿ ಎದ್ದು ಕಾಣುತ್ತದೆ.

ದಕ್ಷಿಣ ದೇಶ ಪ್ರಾಕೃತಿಕ ಸಂನಿವೇಶಗಳಿಂದಲೇ ಭಿನ್ನ ಭಿನ್ನ ಲಕ್ಷಣಗಳುಳ್ಳ ಸಣ್ಣ ಸಣ್ಣ ಖಾನೆಗಳಂತೆ ಒಡೆದು ಹಂಚಿ ಹೋಗಿದೆ. ಈ ಕಾರಣದಿಂದಲೇ ಇಲ್ಲಿ ಅನಾದಿ ಕಾಲದಿಂದಲೂ ಸಣ್ಣ ಪುಟ್ಟ ರಾಜ್ಯಗಳು ಮೇಲಿಂದ ಮೇಲೆ ತಲೆದೋರುತ್ತ ನಿಂತು ಕೊಳ್ಳುತ್ತಲೇ ಇವೆ. ಇದುವರೆಗೆ ದಕ್ಷಿಣದಲ್ಲಿ ಎಷ್ಟೋ ದೊಡ್ಡ ದೊಡ್ಡ ಸಾಮ್ರಾಧಿಪತ್ಯಗಳು ಹುಟ್ಟಿ ಕೀರ್ತಿಗೊಂಡವು. ಆದರೆ ಯಾವುವೂ ಸಣ್ಣ ಸಣ್ಣ ರಾಜ್ಯಗಳನ್ನು ನಿರ್ನಾಮ ಮಾಡಿಬಿಡಲಿಲ್ಲ; ಅದಕ್ಕೆ ಪ್ರತಿಯಾಗಿ ಸಣ್ಣ ಸಣ್ಣ ರಾಜ್ಯಗಳ ವ್ಯಕ್ತಿತ್ವವನ್ನು ಉಳಿಸಿ ಪೋಷಿಸಿ ಬೆಂಬಲಕೊಟ್ಟು ತಾವೂ ಅವರಿಂದ ಪ್ರತಿಫಲ ಹೊಂದಿ ಸಮರಸವಾಗಿಯೇ ವರ್ತಿಸುತ್ತಿದ್ದುವು. ಈ ವಿಷಯದಲ್ಲಿ ವಿಜಯನಗರದ ಕೃಷ್ಣದೇವರಾಯನೇ ಒಂದು ಉತ್ತಮ ನಿದರ್ಶನ.

ಹೀಗೆ ಒಂದು ರೀತಿಯಿಂದ ಸಾಮರಸ್ಯ ಕಂಡು ಬಂದರೂ ಇನ್ನೊಂದು ಕಡೆ ರಾಜ್ಯ-ರಾಜ್ಯಗಳಿಗೆ, ಅರಸು-ಅರಸುಗಳಿಗೆ ದ್ವೇಷಾಸೂಯೆಗಳು ತಲೆ-ತಲಾಂತರಗಳವರೆಗೆ ನಡೆದ ನಿದರ್ಶನಗಳೂ ಹೇರಳವಾಗಿ ದೊರಕುತ್ತವೆ. ರಾಜಕೀಯದಲ್ಲೇ ಅಲ್ಲ. ಧಾರ್ಮಿಕ ಕ್ಷೇತ್ರದಲ್ಲೂ—ಮತ-ಮತಾಂತರಗಳ ವಿಷಯವಾಗಿ ಎಷ್ಟೋ ಆಂದೋಳನಗಳು ನಡೆದುಹೋಗಿವೆ. ಈ ತಾಕಲಾಟಗಳ, ಪರಸ್ಪರ ಈರ್ಷ್ಯಾಸೂಯೆಗಳ ಪರಿಣಾಮವಾಗಿ ನಾಡು ಸೂರಾಗಿ ಹೋಗಿದೆ. ಏಳು—ಬೀಳುಗಳ, ಉನ್ನತಿ ಅವನತಿಗಳ ಭಾರಿ ಹೊಯ್ದಾಟಕ್ಕೆ ಸಿಕ್ಕಿ ತಲ್ಲಣಿಸಿಹೋಗಿದೆ, ಮತ್ತೆ ಪುನಃ ಚೇತರಿಸಿಕೊಂಡು ಎದ್ದಿದೆ. ಇದೇ ದಕ್ಷಿಣದ ಇತಿಹಾಸದ ತಿರುಳು.

ಈ ಅಂಶವನ್ನು ನೆನಪಿನಲ್ಲಿಟ್ಟುಕೊಂಡರೆ ಮುಂದಿನ ಇತಿಹಾಸನಿರೂಪಣೆ ಸಮಂಜಸವಾಗಿ ಅರ್ಥವಾಗುತ್ತಾ ಸಾಗುವುದು.

ಕ್ರಾಂತಿಯೂ ಮಹಾತ್ಮರೂ—ಯಾವ ದೇಶದಲ್ಲೇ ಆಗಲಿ, ಯಾವಕಾಲದಲ್ಲೇ ಆಗಲಿ, ಸರ್ವೇಸಾಧಾರಣ ಪರಿಸ್ಥಿತಿಗಳಲ್ಲಿ ಯಾವ ಕ್ರಾಂತಿಯೂ ನಡೆಯುವುದಿಲ್ಲ; ಯಾವ ಮಹಾತ್ಮರೂ ಉದಯಿಸುವುದಿಲ್ಲ. ರಾತ್ರಿಯೇ ಇಲ್ಲದೆ ಹಗಲೆಲ್ಲಿ? ಸೂರ್ಯೋದಯವೆಲ್ಲಿ?

ಕ್ರಾಂತಿಯುಂಟಾಗಿರಬೇಕಾದರೆ ಅದರ ಹಿನ್ನೆಲೆಯಲ್ಲಿ ಏನೋ ಮಹತ್ತರವಾದ, ಅಪರಿಮಿತವಾದ, ಅನುಸಂಕಟವಿರಬೇಕು; ಸಹಿಸಲಶಕ್ಯವಾದ ಘೋರ ದಬ್ಬಾಳಿಕೆ ನಡೆದಿರಬೇಕು. ಹೀಗೆಯೇ ಯಾವಾಗ ಒಂದು ದೇಶದ ಪರಿಸ್ಥಿತಿ ಹದಗೆಟ್ಟು, ಅನ್ಯಾಯ-ಅತ್ಯಾಚಾರಗಳ ಉರಿವಣಿಗೆ ಹೆಚ್ಚಿ ಧರ್ಮಕ್ಕೆ ಗ್ಲಾನಿತಗಲುವುದೋ, ಮತ್ತು ತತ್ಫಲವಾಗಿ ಏನಾದರೊಂದು ಉತ್ಕಟ ದೇಶ ವಿಪ್ಲವ—ಸಾಮಾನ್ಯ ಜನರಿಂದ ಸರ್ವಥಾ

ಅಪರಿಹಾರ್ಯವಾದ ಗಂಡಾಂತರ—ಒದಗುವುದೋ ಆಗಲೇ ಮಹಾತ್ಮರು ಪ್ರಾದುರ್ಭವಿಸುವರು.

ಆದಕಾರಣ ವಿಜಯನಗರ ಏಕೆ ಸ್ಥಾಪನೆಯಾಯಿತು ? ಆಗ ಏನೇನು ರಾಷ್ಟ್ರೀಯ ರಾಜಕೀಯ ಆರ್ಥಿಕ-ಸಾಮಾಜಿಕ ಕ್ರಾಂತಿಗಳಾದುವು ? ಅದರಲ್ಲಿ ಯಾರ ಯಾರ ಕೈವಾಡವೇನು ? ಭವಿಷ್ಯಕ್ಕೆ ಅದರಿಂದಾದ ಲಾಭವೇನು ? ಎಂಬ ಅಂಶಗಳನ್ನು ತತ್ವತಃ ಮನಗಾಣಬೇಕಾದರೆ, ಅದಕ್ಕೆ ಹಿನ್ನೆಲೆಯಾಗಿ ಆ ಕಾಲಕ್ಕೆ ಹಿಂದೆ (ಎಂದರೆ ಕ್ರಿ. ಶ. ಹದಿನಾಲ್ಕನೇ ಶತಮಾನದ ಆದಿಭಾಗದಲ್ಲಿ) ದಕ್ಷಿಣಭಾರತದ ಪರಿಸ್ಥಿತಿ ಹೇಗಿತ್ತೆಂಬುದನ್ನು ಮೊದಲು ಅರಿತುಕೊಳ್ಳುವುದು ಅತ್ಯಾವಶ್ಯಕ.

ದಕ್ಷಿಣ ರಾಜ್ಯಗಳ ಮಹದ್ದೆಶೆ—ಕ್ರಿಸ್ತಶಕಾರಂಭಕ್ಕೆ ಎಷ್ಟೋ ಹಿಂದಿನಿಂದಲೇ ಇಲ್ಲಿ ಸುವ್ಯವಸ್ಥಿತವಾದ ರಾಜ್ಯಾಂಗದ ಶಿಸ್ತು ರೂಪುಗೊಂಡಿತ್ತು. ಆಂಧ್ರರು, ಚಾಲುಕ್ಯರು, ರಾಷ್ಟ್ರಕೂಟರು, ಪಲ್ಲವರು, ಹೊಯ್ಸಳರು, ಯಾದವರು, ಕಾಕತೀಯರು ಪಾಂಡ್ಯರು, ಚೇರರು, ಚೋಳರು ಮೊದಲಾದ ಎಷ್ಟೋ ಹೆಸರಾಂತ ರಾಜವಂಶಗಳ ಅರಸರು ಆಳಿ ಈ ನಾಡನ್ನು ವೈಭವದ ಅತ್ಯುನ್ನತ ಶಿಖರಕ್ಕೆ ಏರಿಸಿದರು. ಸಂಖ್ಯೆಯಿಲ್ಲದ ಕವಿ-ಕಬ್ಬಿಗರು ಸಂಸ್ಕೃತ, ಪ್ರಾಕೃತ, ಆಂಧ್ರ ಕನ್ನಡ, ತಮಿಳು, ಮಲೆಯಾಳ ಇತ್ಯಾದಿ ಎಲ್ಲ ವಾಙ್ಮಯಗಳಲ್ಲೂ ಲೆಕ್ಕಮೀರಿದ ಕೃತಿಗಳನ್ನು ರಚಿಸಿ ಆ ಕಿರುತಾರೆಗಳಿಂದ ಸಾಹಿತ್ಯವ್ಯೋಮಮಂಡಲವು ಸದಾ ಮಿನುಗುವಂತೆ ಮಾಡಿದರು.

ಇದಕ್ಕೂ ಮಿಗಿಲಾಗಿ ಆಚಾರ್ಯತ್ರಯರೆಂದು ಪ್ರಸಿದ್ಧರಾದ ಶಂಕರ ರಾಮಾನುಜ ಮಧ್ವರು ಬ್ರಹ್ಮಸೂತ್ರಗಳಿಗೆ ಗೀತೆ-ಉಪನಿಷತ್ತುಗಳಿಗೆ ಸಂಸ್ಕೃತದಲ್ಲಿ ಭಾಷ್ಯಗಳನ್ನು ಬರೆದು, ವೇದ ಪ್ರಾಮಾಣ್ಯವನ್ನು ಸಾಧಿಸಿ, ಸನಾತನ ವೈದಿಕಧರ್ಮವನ್ನು ಎತ್ತಿ ಹಿಡಿದು, **ವೇದಾಂತ ಶಾಸ್ತ್ರ**ವೆಂಬ ಚ್ಯುತಿಯೇ ಇಲ್ಲದ ದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಇನ್ನೊಂದು ಕಡೆ ತಿರುವಾಳ್ವಾರ್, ಮಾಣಿಕ್ಕವಾಚಿಕರ್, ಆಳ್ವಾರ್ (ಆಟ್‌ವಾರ್)ಗಳು, ಬಸವ ಅಲ್ಲಮರಂತಹ ಧಾರ್ಮಿಕ ಸುಧಾರಕರು ನಿಮ್ನ ವರ್ಗದವರಿಗೂ ಸಹ ಅರ್ಥವಾಗುವಂತೆ ಅವರವರ ದೇಶದ (ಮಾತೃ) ಭಾಷೆಗಳಲ್ಲಿ ಸರಳವೂ ಹೃದಯಂಗಮವೂ ಆದ ಸುಲಭ ಶೈಲಿಯಲ್ಲಿ ತತ್ವಗಳನ್ನು ಉಪದೇಶಿಸುತ್ತಾ ನವ ಚೈತನ್ಯವನ್ನು ಜಾಗ್ರತೆಗೊಳಿಸಿ ಒಂದು ಹೊಸ ಚಳುವಳಿಯನ್ನೇ ಎಬ್ಬಿಸಿದರು; ಎಂದೆಂದಿಗೂ ನಂದಿಹೋಗದ ಜ್ಞಾನ ಜ್ಯೋತಿಯನ್ನು ಇಡೀ ಜಗತ್ತಿಗಾಗಿ ಬೆಳಗಿಸಿ ಹೋದರು.

ಕಡೆಯದಾಗಿ ಆ ಕಾಲದ ಎಲ್ಲ ರಾಜರೂ ಭಾರಿ ಭಾರಿ ಕಲ್ಲಿನ ದೇವಾಲಯಗಳನ್ನೂ ಅವುಗಳಿಗೆ ಗಗನಚುಂಬಿ ಗಾರೆಯ ಗೋಪುರಗಳನ್ನೂ ಕಟ್ಟಿಸಲು ಯಥೇಷ್ಟ ಉತ್ತೇಜನ ಕೊಟ್ಟರು. ಇದರಿಂದ ಶಿಲ್ಪಿಗಳೂ, ಬೇಲ್ದಾರರೂ, ತತ್ಸಂಬಂಧಿ ಇತರ ಕಲಾವಿದರೂ ಪ್ರೋತ್ಸಾಹಿತರಾಗಿ, ಸೌಂದರ್ಯ-ಶೃಂಗಾರಗಳ ಹೊಸ ಹೊಸ ನಮೂನೆ

ಗಳನ್ನೂ ಸೃಷ್ಟಿಸಿ ಅಳವಡಿಸಿಕೊಂಡು, ಅತ್ಯದ್ಭುತವಾದ ಕಲಾಕೃತಿಗಳನ್ನು ನಿರ್ಮಿಸಿ, ತಮ್ಮ ಬುದ್ಧಿಕುಶಲತೆಯನ್ನೂ ಕೈಚಳಕದ ಚಾತುರ್ಯವನ್ನೂ ಪ್ರದರ್ಶಿಸುತ್ತ ಭೂಮಿಯನ್ನೇ ಸ್ವರ್ಗಕ್ಕೂ ಮಿಗಿಲೆನಿಸಿದ್ದಾರೆ. ಹೀಗೆ ಅನೇಕ ವಿಧಗಳಿಂದ ಇದು ದಕ್ಷಿಣ ಭಾರತದ ಇತಿಹಾಸದಲ್ಲಿ ಅತ್ಯಂತ ವೈಭವದ ಕಾಲ. [1]

ದುರ್ದೆಶೆಯ ಆರಂಭ—"ಅತ್ಯುನ್ನತಿಃ ಪತನಹೇತುಃ" ಎಂಬ ಸೂಕ್ತಿಗೆ ಅನುಗುಣವಾಗಿ ಮಿತಿಮೀರಿ ಉನ್ನತಿಗೇರುವುದೂ ಕ್ಷೇಮವಲ್ಲ. ಲೌಕಿಕ ಸಂಪತ್ತು ಅಳತೆ ಮೀರಿ ಬೆಳೆಯಿತೆಂದರೆ ಅವನತಿ ಆರಂಭವಾದ ಹಾಗೆಯೆ. ಅಪಾರ ಸಂಪತ್ತು ಏಕತ್ರ ಸಂಗ್ರಹವಾದಂತೆಲ್ಲ ಭೋಗವಿಲಾಸಗಳ ಲಾಲಸೆ ವೃದ್ಧಿಯಾಗಿ, ಉನ್ನತಿಗೆ ಪರಿಪಂಥಿಗಳಾದ ಕಾಮಕ್ರೋಧಾದಿ ಷಡ್ರಿಪುಗಳ ಉಪಟಳ ಒಂದೊಂದಾಗಿ ಹೆಚ್ಚಿ, ಕಡೆಗೆ "ಬುದ್ಧಿನಾಶಾತ್ ಪ್ರಣಶ್ಯತಿ" [2] ಎನ್ನುವವರೆಗೂ ಎಳೆದುಕೊಂಡು ಹೋಗದೆ ಬಿಡುವುದಿಲ್ಲ. ಇದಕ್ಕೆ ದಕ್ಷಿಣದ ನಾಡುಗಳು ಒಳ್ಳೆಯ ನಿದರ್ಶನ.

ಕಾಲಕ್ರಮದಲ್ಲಿ ಚಾಳುಕ್ಯ ಪಲ್ಲವಾದಿ ದೊಡ್ಡ ದೊಡ್ಡ ರಾಜ್ಯಗಳು ಪರಸ್ಪರ ದ್ವೇಷಾಸೂಯೆಗಳಿಂದ ಹೊಡೆದಾಡಿ-ಹೊಡೆದಾಡಿ ನಿರ್ನಾಮವಾಗಿ ಹೋದುವು. ಸಿಂಹಗಳು ಕಾದಾಡಿ ಸೋತುಬಿದ್ದಾಗ ನರಿಗಳೇ ಪ್ರಬಲಿಸುವಂತೆ ಚಾಳುಕ್ಯ-ಪಲ್ಲವ ರಾಜ್ಯಗಳು ಅಸ್ತವಾಗುತ್ತಲೆ ಹಿಂದೆ ಅವರ ಅಧೀನದಲ್ಲಿದ್ದ ಸಾಮಂತರಾಜ್ಯಗಳೇ ಗರಿಗಟ್ಟಿಕೊಂಡು ನಿಂತುವು. ತತ್ರಾಪಿ ಯಾದವ, ಕಾಕತೀಯ, ಹೊಯ್ಸಳ, ಪಾಂಡ್ಯ ಈ ನಾಲ್ಕು ರಾಜ್ಯಗಳು ಬಹಳ ಮುಂದಕ್ಕೆ ಬಂದುವು. ಆದರೇನು? ಡಾ. ಸಾಲೆತೊರೆ ತೋರಿಸಿರುವಂತೆ ಇವರಲ್ಲಿ ಒಬ್ಬಾನೊಬ್ಬನಾದರೂ ಪ್ರಾಚೀನಕಾಲದಿಂದ ಆದರಣೀಯವಾಗಿ ನಡೆದು ಬಂದ ಜನಾಂಗವನ್ನೂ ಹಿಂದೂಸಮಾಜವನ್ನೂ ಸಂರಕ್ಷಿಸಲು ತಕ್ಕ ದಕ್ಷತೆಯ ಆಳಿಕೆ ನಡೆಸಲಾರದೆ ಹೋದರು. [3] ತೆಂಕಣ ನಾಡಿನ ಹದಿಮೂರನೆಯ ಶತಮಾನದ ಇತಿಹಾಸವೆಲ್ಲಾ ಈ ನಾಲ್ಕು ರಾಜ್ಯಗಳ ಪರಸ್ಪರ ತಾಕಲಾಟಗಳ ಕೋಲಾಹಲದಿಂದಲೇ ತುಂಬಿಹೋಗಿದೆ. ಆದಕಾರಣ ಕೆಲವು ಇತಿಹಾಸಕಾರರು ಕ್ರಿ. ಶ. ಹದಿಮೂರನೇ ಶತಮಾನಕ್ಕೆ **ನಾಲ್ಕುರಾಜ್ಯಗಳ ಯುಗ**ವೆಂದೇ ಹೆಸರಿಟ್ಟಿದ್ದಾರೆ.

ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು ಎಂಬ ಗಾದೆಗೆ ತಕ್ಕಂತೆ ರಾಜ-ರಾಜರ ಈ ತಿಕ್ಕಾಟಗಳಿಂದ ದೇಶದ ಮೇಲೂ ಜನಗಳ ಮೇಲೂ ವಿಷಮ ಪರಿಣಾಮಗಳುಂಟಾದುವು. ಮೊದಲನೆಯದಾಗಿ ಹೊಡೆದಾಟ-ಬಡಿದಾಟಗಳ ಕಾಳಗ-ಕದನಗಳ ಗೊಂದಲದಿಂದ ದೇಶಕ್ಕೆ ದೇಶವೇ ಹಾಳಾಯಿತು. ಸಮರ ದುಂದುಭಿಗಳು ಮೊಳಗಿ

---

1 *History of South India* by K. A. Nilakanta Sastry, M.A. (1958), p. 8. 2 ಭಗವದ್ಗೀತೆ—೨ನೇ ಅಧ್ಯಾಯ. 62 ಶ್ಲೋ.

3 *Social and Political Life in the Vijayanagar Empire*, by Dr. B. A. Saletore, M. A., Ph. D., V. I, ch. I.

ಮೊಳಗಿ ರಾಜ್ಯಸೂತ್ರಗಳ ಬಿಗಿ ಸಡಿಲಿ ಹೋಯಿತು. ಸತ್ಯ ಚ್ಯುತವಾಯಿತು. ರಾಜ ಧರ್ಮ ಕಣ್ಮರೆಯಾಯಿತು. ಪ್ರಜೆಗಳ ನೆಮ್ಮದಿ ಲೋಪವಾಯಿತು. ಶಾಂತಿ ಕಾಡು ಪಾಲಾಯಿತು. ಹಿಂದಿನ ವೈಭವವೆಲ್ಲ ಮಾಯವಾಯಿತು.

ಒಂದು ಕಡೆ ಈ ರಾಜಕೀಯ ಬಿಕ್ಕಟ್ಟು. ಇನ್ನೊಂದು ಕಡೆ ಸಮಾಜದಲ್ಲೂ ಇದೇ ಮುಗ್ಗಟ್ಟು. ಅದೇ ಆಗತಾನೇ ಆಚಾರ್ಯತ್ರಯರು ಸಾಧಿಸಿಕೊಟ್ಟ ವೇದಾಂತ ಪ್ರಮೇಯಗಳಾಗಲಿ, ಮತಸುಧಾರಕರು ಬೋಧಿಸಿದ ಹೊಸ ತತ್ವಗಳಾಗಲಿ ಜನ ಸಾಮಾನ್ಯರಿಗೆ ಹೃದ್ಗತವಾಗಿ ಮೈಗೆ ಅಂಟಹೋಗಿರಲಿಲ್ಲ. ಪಾಷಂಡ—ವೈದಿಕ, ಶೈವ-ವೈಷ್ಣವ ಎಂಬ ಭಿನ್ನ ಭಿನ್ನ ಧರ್ಮಗಳು ಜನರಿಗೆ ಗೋಚರವಾಯಿತೇ ಹೊರತು ಧರ್ಮಗಳ ಸಮನ್ವಯ ಬೋಧವಾಗಲಿಲ್ಲ, ಮತಗಳ ಸಾಮಂಜಸ್ಯ ಅವರಿಗೆ ತಿಳಿಯ ಲಿಲ್ಲ. ಹೀಗಾಗಿ ಯಾವ ಧರ್ಮವನ್ನವಲಂಬಿಸಬೇಕೋ ಗೊತ್ತಾಗದೆ ಜನರು ಕಂಗೆಟ್ಟು ಹೋದರು.

ಅತ್ತ ರಾಜಕೀಯ ಹಾಗಿದೆ, ಇತ್ತ ಸಮಾಜ ಹೀಗೆ ದಿಕ್ಕುಗೆಟ್ಟಿದೆ. ಇಂತಹ ಉತ್ಕಟ ಸನ್ನಿವೇಶದಲ್ಲಿ ಸಾಹಿತ್ಯ ಇನ್ನೆಷ್ಟರ ಮಟ್ಟಿಗೆ ಬೆಳೆದೀತು ? ಕಲೆ-ಕುಶಲ ವಿದ್ಯೆ ಗಳಿಗೆ ಇನ್ನೇನು ಪ್ರೋತ್ಸಾಹ ಸಿಕ್ಕೀತು ! ಶಾಂತವಾತಾವರಣ ವಿಲ್ಲದೆ, ಪ್ರೋತ್ಸಾಹ ವಿಲ್ಲದೆ, ಪೋಷಕರಿಲ್ಲದೆ ಸಾಹಿತ್ಯ-ಕಲೆಗಳೆಂಬ ಯಮಳನದಿಗಳು ಬತ್ತಿ ಬರಡಾಗಿ ಹೋದವು. ಹೀಗೆ ವಿಜಯನಗರ ಉದಯಿಸುವುದಕ್ಕೆ ಹಿಂದಿನ ಕಾಲ ಎಲ್ಲ ರೀತಿಯಿಂದಲೂ ತೀರ ಇಳಿಗಾಲವಾಗಿತ್ತು.

3. ಮುಸಲ್ಮಾನರ ಧಾಳಿಗಳು

ಕುರುವಿನ ಮೇಲೆ ಹುಣ್ಣು—ವಿಪತ್ತು ಬರುವಾಗ ಒಂದೊಂದೇ ಬರುವುದಿಲ್ಲ. ಆರಂಭವಾಗುವುದೇ ತಡ; ಮೇಲಿಂದ ಮೇಲೆ ಬಂದು ಘುಮುಕುತ್ತದೆ; ತಿಕ್ಕಿ ಮುಕ್ಕಿ ಗ್ರಹಚಾರ ಬಿಡಿಸಿ ಬಿಡುತ್ತದೆ. ಅವುಗಳಿಂದ ಪಾರಾಗುವುದು ಮಹಾಕಠಿನ ಪ್ರಸಂಗ. ಈ ಮಾತಿನ ಅನುಭವ 14ನೆಯ ಶತಮಾನದ ಆರಂಭದಲ್ಲಿ ದಕ್ಷಿಣ ಭಾರತಕ್ಕೆ ಚೆನ್ನಾಗಿ ಆಯಿತು—ಬಲವಾಗಿ ಬರೆ ಬಿದ್ದು ಮರೆಯದಂತೆ ಅನುಭವಕ್ಕೆ ಬಂತು.

ಹಿಂದಿನ ಅಧ್ಯಾಯದಲ್ಲಿ ವರ್ಣಿಸಿದಂತೆ, ನಮ್ಮ ನಾಡು ಯಾವ ಯಾವ ಬಗೆ ಯಿಂದ ನೋಡಿದರೂ ಕಡು ಹೀನ ಸ್ಥಿತಿಗೆ ಇಳಿದುಹೋಯಿತು. ಇದೇ ಒಂದು ದುರ್ದೆಶೆ—ಓಂ ಪ್ರಥಮ ವಿಪತ್ತು. ಇಷ್ಟಾದರೂ ನಮ್ಮವರು ಎಚ್ಚರಗೊಳ್ಳಲಿಲ್ಲ. ವೈಮನಸ್ಯಗಳನ್ನು ತೊರೆದು ಏಕವಾಗುವ ಪ್ರಯತ್ನ ಮಾಡಲಿಲ್ಲ. ತಲೆತಲಾಂತರ ಗಳಿಂದ ಸಂಪತ್ಸಮೃದ್ಧಿಯಲ್ಲಿ ಬೆಳೆದಿದ್ದ ಅವರಿಗೆ ಹಿಂದಿನ ಮಬ್ಬು ಇನ್ನೂ ಹೋಗಿರ

ಲಿಲ್ಲ. ಆ ಮಸುಗಿನಲ್ಲಿ ಭವಿಷ್ಯದ—ಕಾದು ನಿಂತಿರುವ ಮಹಾವಿಪತ್ತುಗಳ—ದೂರಾಲೋಚನೆ ಹೊಳೆಯಲಿಲ್ಲ. ಇದು ಮತ್ತೂ ವಿಷಾದಕರವಾದ ಸಂಗತಿ.

ಹೀಗಿರುವಲ್ಲಿ "ಗಂಡಸ್ಯೋಽಪರಿ ಪಿಟಕಃ ಸಂವೃತ್ತಃ" [ಕುರುವಿನ ಮೇಲೆ ಹುಣ್ಣೆದ್ದಿತು] ಎಂಬ ರೀತಿ, ದೊಡ್ಡ ಸಿಡಿಲು ಬಡಿದಂತೆ ಮತ್ತೊಂದು ಪ್ರಚಂಡ ಗಂಡಾಂತರ ಬಂದೊದಗಿತು.

ಹುಲಿಯ ಕಣ್ಣು ಹೋತನ ಮೇಲೆ—ಈ ಮಧ್ಯೆ ಉತ್ತರ ಭಾರತದ ಪರಿಸ್ಥಿತಿ ಮೇಲಿಂದ ಮೇಲೆ ಮೂರು ಶತಮಾನಗಳ ಕಾಲ ನಡೆದ ಮುಸಲ್ಮಾನ ಧಾಳಿಕಾರರ ಹಾವಳಿಯಿಂದ ಮತ್ತಷ್ಟು ಅಲ್ಲೋಲ—ಕಲ್ಲೋಲವಾಗಿ ಹೋಗಿತ್ತು. ಕ್ರಿ. ಶ. 1001 ರಲ್ಲಿ ಘಜ್ನಿಮೊಹಮ್ಮದನ [1] ದಂಡಯಾತ್ರೆಯ ಧೂಮಕೇತು ಕಾಣಿಸಿಕೊಂಡಾಗ ಆರಂಭವಾದ ಸಮರ ಕೋಲಾಹಲ ಮುನ್ನೂರು ವರ್ಷಗಳು ಉರುಳಿಹೋದರೂ, ಉತ್ತರ ಭಾರತವೆಲ್ಲ ಸೂರೆಯಾಗಿ, ಮ್ಲೇಚ್ಛಮಯವಾಗಿ, ಇಸ್ಲಾಂಶಾಹಿಗೆ ತುತ್ತಾಗಿ ಹೋದರೂ ಇನ್ನೂ ಆರಿರಲಿಲ್ಲ. ಸಿವೆಲ್ಲ್ ಹೇಳಿರುವಂತೆ ಅನೇಕ ಧಾಳಿಗಳು ತಡೆಯಿಲ್ಲದೆ ಒಂದರ ಮೇಲೊಂದು ನಡೆದುವು. ಯುದ್ಧದ ಮೇಲೆ ಯುದ್ಧವಾಯಿತು; ಉತ್ತರ ಭಾರತಕ್ಕೆ ವಿರಾಮದ ಹೆಸರೇ ಇಲ್ಲದಾಯಿತು. [2]

ಆದರೂ ಯಾವ ಸುಯೋಗದಿಂದಲೋ ಏನೋ ವಿಂಧ್ಯದ ದಕ್ಷಿಣಕ್ಕೆ ಈ ಮಹಾವಿಪತ್ತಿನ ಸೆಕೆ ಸಹ ಬಡಿದಿರಲಿಲ್ಲ. ಹಿಂದೆ [ಪುಟ 204 ರಲ್ಲಿ] ಪ್ರಸ್ತಾಪಿಸಿದ್ದ ದಕ್ಷಿಣದ ವೈಶಿಷ್ಟ್ಯವನ್ನು ಸಮರ್ಥಿಸುವುದಕ್ಕೆ ಇದು ಒಳ್ಳೆಯ ನಿದರ್ಶನ.

ರಾಜ್ಯಾಕಾಂಕ್ಷಿಗಳೂ ಧನಕನಕಲೋಲುಪರೂ ಸ್ವಮತಾಂಧರೂ ಆಗಿದ್ದ ದಿಲ್ಲಿಯ ಸುಲ್ತಾನರು ಸಿಕ್ಕಿದಷ್ಟಕ್ಕೆ ತೃಪ್ತರಾಗಿ ಕೂಡುವುದು ಸಾಧ್ಯವಿರಲಿಲ್ಲ. ಭಗವಾನ್ ವೇದವ್ಯಾಸರು ಹೇಳಿರುವಂತೆ—

ನ ಜಾತು ಕಾಮಃ ಕಾಮಾನಾ-ಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ [3] ॥

---

1 ಫಾರಸೀಲಿಪಿಯಲ್ಲಿ ಅಕಾರ-ಇಕಾರ-ಉಕಾರಗಳ (ಜಬರ್, ಜ಼ೇರ್, ಪೇಶ್), ಊಕಾರ-ಓಕಾರಗಳ (ವಾವ್), ಈಕಾರ-ಏಕಾರ-ಯಕಾರಗಳ (ಯಾಯ್), ಓಕಾರ-ವಕಾರಗಳ ಕಲಬೆರಕೆ (ಪಲ್ಲಟನೆ, confusion) ಬಹಳ ಬರುತ್ತದೆ. ಉದಾಹರಣೆಗೆ—ಮೋಹಮ್ಮದ್ ಎಂಬುದು ಶುದ್ಧರೂಪ. ಇದಕ್ಕೆ ಮೂಹಮ್ಮದ್, ಮೊಹಮ್ಮದ್, ಮೋಹಮದ್, ಮಹಮದ್, ಮುಹಮದ್, ಮಹಮ್ಮೂದ್, ಮುಹಮ್ಮದ್, ಮಹ್ಮದ್, (ಮಮ್ಮೂದ್, ಮುಮ್ಮದ್, ಮಮ್ಮದ್, ಇತ್ಯಾದಿ ಅಪಭ್ರಂಶರೂಪಗಳು) ಮೊದಲಾಗಿ ನಾನಾ ರೂಪಾಂತರಗಳು ವಾಡಿಕೆಯಲ್ಲಿ ಬಂದಿವೆ.

2 *A Forgotten Empire,* by R. Sewell, (Indian edn., 1962) p, 3

3 ಭಾಗವತ, ನವಮಸ್ಕಂ, ಅ 16., 14 ಶ್ಲೋ.

ಅಗ್ನಿಗೆ ತುಪ್ಪ ಹಾಕುತ್ತಾ ಹೋದ ಹಾಗೆಲ್ಲಾ ಅದು ಹೇಗೆ ಇನ್ನೂ ಜ್ವಾಜ್ವಲ್ಯ ಮಾನವಾಗಿ ಉರಿಯುವುದೋ ಅದರಂತೆ ಐಹಿಕ ಸುಖಗಳನ್ನು ಸೇವನೆ ಮಾಡಿ-ಮಾಡಿ ದಷ್ಟೂ ಅವುಗಳ ಲಾಲಸೆ ಹೆಚ್ಚುವುದೇ ಹೊರತು ಅಡಗುವುದಿಲ್ಲ. ಭಾಗ್ಯಲಕ್ಷ್ಮಿಯ ಕ್ರೀಡಾರಂಗದಂತಿಪ್ಪ ದಕ್ಷಿಣದ ಮೇಲೂ ಮುಸಲ್ಮಾನರ ಕಣ್ಣು ಬಿತ್ತು; ಕ್ರಿ. ಶ. ಹದಿನಾಲ್ಕನೆಯ ಶತಮಾನದ ಆರಂಭಕ್ಕೆ ಮುಂಜೆಯೇ ಮೊಹಮ್ಮದೀಯರು ಮೆಲ್ಲಮೆಲ್ಲನೆ ದಕ್ಷಿಣದಲ್ಲೂ ಅಡಿಯಿಡಲಾರಂಭಿಸಿದರು.

ಮೊದಲನೆಯ ಧಾಳಿ—ಕ್ರಿ. ಶ. 1278ರಲ್ಲೇ ಒಂದು ಮುಸಲ್ಮಾನರ ತಂಡವು ಹೊಯಿಸಳರ ನಾಡಿನವರೆಗೂ ಬಂದು ಧಾಳಿನಡೆಸಿತೆಂದು ಬೇಲೂರಿನ (ಹಾಸನ ಜಿಲ್ಲೆಯ) ಒಂದು ತಾಮ್ರ ತಗಡಿನ ದಾನಪತ್ರದಿಂದ [1] ಗೊತ್ತಾಗುತ್ತದೆ. ಇದುವರೆಗೆ ನಡೆದಿರುವ ಶೋಧದಂತೆ ಇದೇ ದಕ್ಷಿಣದ ಮೇಲೆ ನಡೆದಿರುವ ಮೊಟ್ಟಮೊದಲ ಧಾಳಿ. ಹೆಚ್ಚಿನ ಪರಿಷ್ಕಾರವಾಗುವವರೆಗೆ ಈ ಘಟನೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲು ಸಾಧ್ಯವಿಲ್ಲ.

ಇದಾದ ಹದಿನೈದು ಹದಿನಾರು ವರ್ಷಗಳ ಸುಮಾರಿನಲ್ಲೇ ಮತ್ತೊಂದು ಮಹತ್ತರವಾದ ಧಾಳಿ ನಡೆಯಿತು. ಈ ಘಟನೆ ಯಾವ ವರ್ಷ ನಡೆಯಿತೆಂಬ ವಿಷಯದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿತ್ತು. ಈಚೆಗೆ 1297ರಲ್ಲೇ ಇದು ನಡೆಯಿತೆಂದು ನಿಶ್ಚಯಿಸಲಾಗಿದೆ. [2] ಇದು ಗರ್‌ಶಾಸ್ಪ್ ಮಲ್ಲಿಕ್ ಎಂಬ ಒಬ್ಬ ಆಫ್‌ಘನ್ ತರುಣ ಗುಪ್ತವಾಗಿ ಹಂಚಿಕೆ ಹಾಕಿ ಏಕಾಏಕಿ ಕೈಕೊಂಡ ಅರಖಾಸಗಿ ಸೈನಿಕೋದ್ಯಮವಾಗಿತ್ತು. ಈ ತರುಣನೇ ಮುಂದೆ **ಅಲಾಉ-ದ್‌ದೀನ್ ಖಿಲ್ಜಿ** ಎಂಬ ಹೆಸರಿನಿಂದ ದಿಲ್ಲಿಯ ಸುಲ್ತಾನನಾದ.

ಹೆಬ್ಬಯಕೆಯುವನೂ ಅಧಿಕಾರಲೋಲುಪನೂ ಧನಕನಕಾಕಾಂಕ್ಷಿಯೂ ಆಗಿದ್ದ ಅವನ ಕಿವಿಗೆ ದಕ್ಷಿಣದ ಸಂಪತ್ತಿನ ಸುದ್ದಿ ಹೇಗೋ ಬಿತ್ತು. ಅದೇ ಹಂಚಿಕೆಯಲ್ಲಿದ್ದ ಅವನು ಏಕಾಏಕಿ 8000 ರಾವುತರ ಸೈನ್ಯದೊಡನೆ ಹೊರಟು 700 ಮೈಲಿ ಕೂಚುಮಾಡಿ ಯಾದವರ ರಾಜಧಾನಿ ದೇವಗಿರಿಯ ಮೇಲೆ ಬಿದ್ದು ಮುತ್ತಿಗೆ ಹಾಕಿದನು. ಯಾದವ ಸೈನ್ಯ ತೀರ ದಕ್ಷಿಣದ ರಾಜ್ಯಗಳ ಮೇಲೆ ದಂಡಯಾತ್ರೆಗಾಗಿ ಹೋಗಿತ್ತು. ದೇವಗಿರಿಯ ಅರಸ ರಾಮದೇವ ಕಕ್ಕಾಬಿಕ್ಕಿಯಾದ. ಆದರೂ ಸಾಹಸಪಟ್ಟು ಒಂದು ವಾರ ಮುತ್ತಿಗೆಯನ್ನು ಪ್ರತಿಭಟಿಸಿದ. ಕಡೆಗೆ ಗತ್ಯಂತರವಿಲ್ಲದೆ ಕರಾರಿಗೆ ಒಪ್ಪಿದ. 'ತಾರೀಖ್-ಎ-ಹಿಂದ್' ಎಂಬ ಫಾರಸೀ ಚರಿತ್ರಕಾರ ಫರಿಸ್ತಾ ಬರೆದಿರುವ ಪ್ರಕಾರ ಬಹುಸಂಖ್ಯಾಕವಾದ ಗಜತುರಗಗಳನ್ನೇ ಅಲ್ಲದೆ 600 ಮಣ ಮುತ್ತುಗಳು, ಎರಡೆರಡು ಮಣ ವಜ್ರ, ಕೆಂಪು ಪಚ್ಚೆ ಮತ್ತು ನೀಲಿಮಣಿಗಳು, ಸಾವಿರ ಮಣ ಚಿನ್ನ-ಬೆಳ್ಳಿ ನಾಲ್ಕುಸಾವಿರ

---

1 *Mysore Inscriptions*, L. Rice, Belur, pp, 276-77.

2 ಭಾರತೀ ವಿದ್ಯಾಭವನದ *Delhi Sultanate*, p. 15; App. A, p. 47 ನೋಡಿರಿ.

ಥಾನು ರೇಷ್ಮೆ ಬಟ್ಟೆಗಳ ಜೊತೆಗೆ ಒಪ್ಪುವುದಕ್ಕೆ ಅಸಂಭವವೆಂದು ತೋರುವ ಭಾರಿಪಟ್ಟಿಯಷ್ಟು ಇನ್ನೂ ಅನೇಕ ಅನರ್ಘ ವಸ್ತುಗಳನ್ನೂ ಸಾಗಿಸಿಕೊಂಡು ಅಲ್ಲಾ ಉ-ದ್-ದೀನ್ ದಿಲ್ಲಿಗೆ ತೆರಳಿದ.

ಈ ವಿಜಯ ಇಷ್ಟಕ್ಕೇ ಕೊನೆಗೊಂಡಿದ್ದರೆ ಕ್ಷೇಮವಾಗಿತ್ತು; ಆದರೆ ವಸ್ತುತಃ ವಿಪರೀತವೇ ಆಯಿತು. ಲೇನ್-ಪೋಲ್ ಹೇಳುವಂತೆ "ದಕ್ಷಿಣದ ಕಡೆಗೆ ಹೀಗೆ ಆರಂಭವಾದ ಹೆದ್ದಾರಿ ಮತ್ತೆ ಪುನಃ ಮುಚ್ಚಲೇ ಇಲ್ಲ" [1]

ಮಹರ್ಷಿಗಳ ಅನುಭವದ ಮಾತು ಎಂದಿಗೆ ಸುಳ್ಳಾದೀತು! "ಹವಿಷಾ ಕೃಷ್ಣವರ್ತ್ಮೇವ" ಎಂಬಂತೆ ಮೊದಲನೆಯ ವಿಜಯದಿಂದ ಅಲ್ಲಾ ಉ-ದ್-ದೀನನ ಧನಪಿಪಾಸೆ ಮತ್ತಷ್ಟು ತೀವ್ರವಾಯಿತು. ದಕ್ಷಿಣದ ವಿಷಯದಲ್ಲಿ ಅವನ ಧೋರಣೆ ದಿಗ್ವಿಜಯಕ್ಕಿಂತ ಹೆಚ್ಚಾಗಿ ಲೂಟಿ-ಸುಲಿಗೆಗಳದ್ದಾಗಿತ್ತು. ಹಿಂದಿನ ವಿಜಯದಿಂದ ಹುರುಪುಗೊಂಡು 1303-04ರಲ್ಲಿ ಉಲುಗ್‌ಖಾನನ ನಾಯಕತ್ವದಲ್ಲಿ ಒಂದು ಪಡೆಯನ್ನು ವರಂಗಲ್ಲಿನ ಮೇಲೆ ಕಳುಹಿಸಿದ. ಆದರೆ ಅದು ಸೋತು ಹಿಂದಿರುಗಿ ಬಂತು. ಸಾಲದುದಕ್ಕೆ ದೇವಗಿರಿಯ ಯಾದವರಾಜನೂ ಸಹ ತಾನು ಕೊಡುತ್ತಿದ್ದ ವಾರ್ಷಿಕ ಪೊಗದಿಯನ್ನೂ ನಿಲ್ಲಿಸಿಬಿಟ್ಟ. ಸೋಲಿನ ಅವಮಾನವನ್ನು ಕಳೆದುಕೊಳ್ಳುವುದಕ್ಕಾಗಿಯೂ ಯಾದವರಾಜನನ್ನು ಸೆಣಸುವುದಕ್ಕಾಗಿಯೂ ಪುನಃ 1307ರಲ್ಲಿ ದಂಡು ಕಳುಹಿಸಿದ. ಆದರೆ ಈ ಸಲ ತನ್ನ ನೆಚ್ಚಿನ ದಳಪತಿ ಮಲ್ಲಿಕ್ ಕಾಫೂರನನ್ನು ಕಳುಹಿಸಿದನು.

ಮಲ್ಲಿಕ್ ಕಾಫೂರನ ದಂಡಯಾತ್ರೆಗಳು—ಮೊದಲು ಮಲ್ಲಿಕ್ ತನ್ನ ಸ್ವಾಮಿಯ ಒಬ್ಬ ಗುಲಾಮನಾಗಿದ್ದ; ಅವನ ಮೆಚ್ಚಿಗೆ ಪಡೆದು ಮೇಲಕ್ಕೇರಿ 'ಹಜಾರ್ ದಿನಾರೀ' (ಸಹಸ್ರ ನಾಣ್ಯಗಳ ಮನುಷ್ಯ) ಎಂಬ ಬಿರುದಿಗೆ ಪಾತ್ರನಾಗಿ, ಕಟ್ಟಕಡೆಗೆ ದಳಪತಿಯ ಪದವಿಗೆ ಬಂದಿದ್ದ. ಒಳ್ಳೆಯ ದಕ್ಷ ದಳಪತಿ ಎಂಬುವರಲ್ಲೇನೂ ಸಂದೇಹವಿಲ್ಲ. ಕೇವಲ ಹತ್ತು ವರ್ಷದ ಅವಧಿಯೊಳಗಾಗಿಯೇ ವಿಂಧ್ಯಕ್ಕೆ ದಕ್ಷಿಣಕ್ಕಿರುವ ಇಡೀ ತೆಂಕಣನಾಡನ್ನು ಸೂರೆಗೊಂಡು ತನ್ನ ಯಜಮಾನನ ಹೆಬ್ಬಯಕೆಯನ್ನು ಪೂರ್ಣಮಾಡಿಸಿಕೊಟ್ಟ. 1307-08ರಲ್ಲಿ ದೇವಗಿರಿ ಅವನ ಧಾಳಿಗೆ ತುತ್ತಾಯಿತು. ಅದರ ಯುವರಾಜನಾಗಿದ್ದ ಸಂಖನು (ಅಥವಾ ಸಂಗಮ) ಸೋತು ಪರಾರಿಯಾದ, ಹಿರಿಯ ದೊರೆ ಕೈಸೆರೆಯಾಳಾಗಿ ದಿಲ್ಲಿಗೆಒಯ್ಯಲ್ಪಟ್ಟ. ದೇವಗಿರಿ ಲೂಟಿಯಾಗಿ ಹೋಯಿತು.

ಮರುವರ್ಷ (1309) ವರಂಗಲ್ ಮೇಲೆ ಧಾಳಿ ನಡೆಯಿತು. ಫೆರಿಸ್ತಾ ಹೇಳುವ ಪ್ರಕಾರ ಅದರ ಅರಸಾದ 'ಲುದ್ದರ್ ದೇವ್' (ರುದ್ರದೇವ ಅಥವಾ ಪ್ರತಾಪ ರುದ್ರದೇವ) ಒಂದು ತಿಂಗಳು ಪ್ರತಿಭಟಿಸಿ, ಸೋತು ಕಪ್ಪಕೊಡಲೊಪ್ಪಬೇಕಾಯಿತು. ರಾಜಧಾನಿಯನ್ನು ಲೂಟಿಮಾಡಿ ನೂರು ಆನೆಗಳು ಏಳು ನೂರು ಕುದುರೆಗಳು ಮತ್ತು ಹೇರಳವಾದ ನಗನಾಣ್ಯಗಳೊಡನೆ ಜೂನ್ 1310ರಲ್ಲಿ ಮಲ್ಲಿಕ್ ಹಿಂದಿರುಗಿದನು.

---

1 Mediaeval India.

1311ರಲ್ಲಿ ಹೊಯಿಸಳರ ರಾಜಧಾನಿಯಾಗಿದ್ದ ದ್ವಾರಸಮುದ್ರ (ಮುಸಲ್ಮಾನ ಇತಿಹಾಸಕಾರರು ಧೂರ್ ಸಮುಂದರ್ ಎನ್ನುತ್ತಾರೆ) ಪತನವಾಯಿತು. ತಾರೀಖ್-ಇ-ಫಿರೂಜ್‌ಶಾಹಿಯ ಪ್ರಕಾರ ಅರಸಾದ ಬಿಲಾಲ್‌ರಾಯ್ (ಬಲ್ಲಾಳರಾಯನು) ಮೊದಲನೆಯ ಆಕ್ರಮಣಕ್ಕೇ ಮೊಹಮ್ಮದೀಯರ ಕೈಗೆ ಸಿಕ್ಕಿದ. ಅವನ ಧೂರ್-ಸಮುಂದರ್ ಗೆದ್ದವರ ವಶವಾಯಿತು. ಮುವತ್ತಾರು ಆನೆಗಳೂ, ಅರಮನೆಯ ಭಂಡಾರವೂ ಶತ್ರುಗಳ ಪಾಲಾಗಿ ಹೋಯಿತು. ಖುಸ್ರು ಎಂಬ ಇನ್ನೊಬ್ಬ ಇತಿಹಾಸಕಾರ ಇನ್ನೂ ಹೆಚ್ಚಿನ ವರ್ಣನೆ ಕೊಟ್ಟಿದ್ದಾನೆ[1]. ಅಗ್ನಿಪೂಜಕನಾದ ಬಿಲಾಲ್‌ದೇವ್ (—ಮುಮ್ಮಡಿ ವೀರಬಲ್ಲಾಳರಾಯ) ಮಿಡತೆ ಹುಳುವಿನಂತೆ ಸ್ಥಳದಿಂದ ಸ್ಥಳಕ್ಕೆ ರಾಜಧಾನಿ ಬದಲಾಯಿಸುತ್ತಾ ತಿರುಗಾಡಿದರೂ, ಪವಿತ್ರವಾದ ತನ್ನ ಜನಿವಾರವನ್ನು ಉಳಿಸಿಕೊಳ್ಳುವುದಕ್ಕಾಗಿ ತನ್ನ ಬೊಕ್ಕಸವನ್ನೂ ರಾಜಧಾನಿಯನ್ನೂ ಅವರಧೀನ ಮಾಡಿ ಕಪ್ಪವನ್ನೂ ಕೊಡಲೊಪ್ಪಬೇಕಾದ ಹೊತ್ತು ಬಂತು. ಅಷ್ಟೇ ಅಲ್ಲದೆ ತನ್ನ ಮಗ ನಾಲ್ಮಡಿ ಬಲ್ಲಾಳನನ್ನು ದಿಲ್ಲಿಗೆ ಕೈಸೆರೆಯಾಗಿಯೂ ಕಳುಹಿಸಬೇಕಾಯಿತೆಂದು ಶಿವಮೊಗ್ಗೆಯ ಒಂದು ವೀರಗಲ್ಲಿನಿಂದ ತಿಳಿದುಬರುತ್ತದೆ[2]. ದ್ವಾರಸಮುದ್ರ ಲೂಟಿಯಾಗಿ ಸ್ಮಶಾನಸದೃಶವಾಯಿತು. ಹೀಗಾದ್ದರಿಂದ ದಕ್ಷಿಣದಲ್ಲೆಲ್ಲಾ ಬಹಳ ಪ್ರಬಲವಾಗಿದ್ದ ಒಂದು ಕನ್ನಡ ಸಾಮ್ರಾಜ್ಯವೇ ಸಂಪೂರ್ಣ ಅಸ್ತವಾಗಿ ಹೋದಂತಾಯಿತು.

ಮಾ'ಬಾರ್ ಮತ್ತು ಪಾಂಡ್ಯ ರಾಜ್ಯಗಳ ಪತನ — ದ್ವಾರಸಮುದ್ರವನ್ನು ಲೂಟಿಮಾಡಿ ಹೊಯಿಸಳ ರಾಜ್ಯವನ್ನು ನಿರ್ನಾಮ ಮಾಡಿಬಿಟ್ಟ ನಂತರ ಮಲ್ಲಿಕ್ ಮಾ'ಬಾರ್[3] ಕಡೆ ಹೊರಳಿದನು. ಆ ಭಾಗಗಳನ್ನು ಆಳುತ್ತಿದ್ದ ಪಾಂಡ್ಯರೂ ಚೇರರೂ ತಮ್ಮ ತಮ್ಮ ಒಡಕುಗಳನ್ನು ಕೆಲಕಾಲ ಮರೆತು ಒಗ್ಗಟ್ಟಾದರು; ಬಹಳ ಯುಕ್ತಿಯಿಂದ ದಿಲ್ಲೀ ಸೈನ್ಯವನ್ನು ಹೂಡು ಯುದ್ಧಗಳಲ್ಲಿ ಎದುರಿಸದೆ, ತಾವು ಕೋಟೆಗಳಲ್ಲಿ ಬಚ್ಚಿಟ್ಟು ಕೊಂಡು ಸಿಕ್ಕಿಬೀಳದೆ ಸಣ್ಣಸಣ್ಣ ಕದನ ಕಾದುತ್ತಾ ಮುಸಲ್ಮಾನ ದಳವನ್ನು ಬಹಳ ಹೆಣಗಾಡಿಸಿಬಿಟ್ಟರು, ಅವರಿಗೆ ಮಳೆಗಾಲವೂ ಬಹಳ ಅನುಕೂಲವಾಗಿ ಸಿಕ್ಕಿತು. ದಿಲ್ಲೀ ಸೈನ್ಯ ಅಪಾರ ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತು. ಇಷ್ಟಾದರೂ

---

1 The History of India as told by its own Historians, ed by Elliot and Dowson, III, pp 88 et seq.

2 Epigraphica Carnatica, vii, p. 26.

3 ಇದು ಮುಸ್ಲಿಂ ಇತಿಹಾಸಕಾರರು ಉಪಯೋಗಿಸಿರುವ ಒಂದು ರೂಢಿಯ ಶಬ್ದ. ಅರಬೀ ಭಾಷೆಯಲ್ಲಿ ಈ ಪದಕ್ಕೆ ಮಾರ್ಗ ಅಥವಾ ದಾರಿ ಎಂದರ್ಥವಿದೆಯಂತೆ. ಆದಕಾರಣ ಅರಬರ ಹಡಗುಗಳು ಆಗಿಂದಾಗ್ಗೆ ಓಡಾಡುತ್ತಿದ್ದ ಪಶ್ಚಿಮ ಕರಾವಳಿಯ (ಮಲಬಾರ್ ತೀರದ) 'ಕುಲಾಂ' ಅಥವಾ ಕ್ವಿಲಾನ್ ಪಟ್ಟಣದಿಂದ ಪೂರ್ವದ ಕಡೆ 'ನಿಲಾವರ್' (ನೆಲ್ಲೂರು) ವರೆಗಿನ ಭಾಗಕ್ಕೆ ಮಾ'ಬಾರ್ ಎಂದು ಹೆಸರು ರೂಢಿಯಾಗಿತ್ತೆಂದು ಆ ಕಾಲದ ಒಬ್ಬ ಅರಬೀ ವರ್ತಕನ ಲೇಖನದಿಂದ ಗೊತ್ತಾಗುತ್ತದೆ.

ಮಲ್ಲಿಕ್ ಜಗ್ಗಲಿಲ್ಲ. ಹಾಗೆ ಹಾಗೆಯೇ ಪಾಂಡ್ಯರ ಮುಖ್ಯ ಸ್ಥಳಗಳನ್ನೆಲ್ಲ ಒಂದೊಂದಾಗಿ ಸೂರೆಗೊಳ್ಳುತ್ತಾ "ರಾಮೇಸ್ಸರ್ ಸೇತ್ತ್ ಬಂದ್"ವರೆಗೆ ಮುನ್ನುಗ್ಗಿದನು. ಇದರ ಫಲ ವಾಗಿ ಮುಸ್ಲಿಂ ಚರಿತ್ರಕಾರರು'ಬೀರ್‌ಧೂಲ್'ಎಂದು ಕರೆಯುವ ವೀರಧವಳ ಪಟ್ಟಣವೂ 'ಮರ್‌ಹತ್‌ಪುರಿ' ಎಂದು ಕರೆಯುವ 'ಕಂಚಿ-ಕಾಳಹಸ್ತಿ'ಗಳೂ ಶ್ರೀರಂಗ-ಮದುರೆ ಗಳೂ ಅದರಲ್ಲಿದ್ದ ಉತ್ತಮೋತ್ತಮ ಗುಡಿಗಳೂ ವಿಧರ್ಮೀಯರ ಘಾತಕ ಕೃತ್ಯಗಳಿಗೆ ಸಿಕ್ಕು ಮಣ್ಣು ಮುಕ್ಕಿಹೋದುವು—ಅವುಗಳಲ್ಲಿ ಸಂಗ್ರಹವಾಗಿದ್ದ ಕೋಟ್ಯಾಂತರ ಬೆಲೆ ಬಾಳುವ ಆಭರಣ-ಒಡವೆ ವಸ್ತುಗಳು ಮುಸ್ಲಿಮರ ಕೈಗೆ ವಶವಾದುವು.

ಮಲ್ಲಿಕ್‌ಕಾಫರ್ ಹಿಂದುಗಳ ಮಂದಿರಗಳನ್ನೆಲ್ಲ ನಿರ್ದಾಕ್ಷಿಣ್ಯವಾಗಿ ಸವರಿಹಾಕಿ ಅದೇ ಸಾಮಾನುಗಳಿಂದ ರಾಮೇಶ್ವರದ ಬಳಿ ತನ್ನ ಅತುಲ ವಿಜಯೋತ್ಸವದ ಸ್ಮಾರ ಕಾರ್ಥವಾಗಿ ಒಂದು ಮಸೀದಿಯನ್ನು ಕಟ್ಟಿಸಿ, ಮದುರೆಯಲ್ಲಿ ಒಬ್ಬ ಮುಸ್ಲಿಂ ಅಧಿಕಾರಿ ಯನ್ನು ನೇಮಿಸಿ, ಫರಿಸ್ತಾ ಹೇಳುವ ಪ್ರಕಾರ "312 ಆನೆಗಳು, 20,000 ಕುದುರೆ ಗಳು, 96 ಸಾವಿರ ಮಣ ಬಂಗಾರ, ನಗ-ನಾಣ್ಯಗಳ ಮುತ್ತು-ರತ್ನಗಳ ಎಷ್ಟೋ (ಅಸಂಖ್ಯ) ಪೆಟ್ಟಿಗೆಗಳು, ಇನ್ನೂ ಬೇರೆಬೇರೆ ಅನರ್ಘ (ಅಮೂಲ್ಯ) ಪದಾರ್ಥ ಗಳನ್ನೂ"[1] ಆನೆಗಳ ಮೇಲೂ ಒಂಟೆಗಳ ಮೇಲೂ ಹೊರಿಸಿಕೊಂಡು (1311ರಲ್ಲಿ) ದಿಲ್ಲಿಗೆ ಹಿಂದಿರುಗಿದನು.

1312ರಲ್ಲಿ ದೇವಗಿರಿ ಮತ್ತೆ ಪ್ರತಿಭಟಿಸಿತು. ಮಲ್ಲಿಕ್ ಅದರ ಮೇಲೆಬಿದ್ದು, ಅಲ್ಲಿನ ರಾಜವಂಶವನ್ನು ಹೆಸರೇ ಉಳಿಯದಂತೆ ನಿರ್ನಾಮಮಾಡಿ ಅಲ್ಲಿ ಹೊಸ (ಮುಸ್ಲಿಂ) ಶಾಸನ ಪದ್ಧತಿಯನ್ನು ನಿಯಮಿಸಿದ. ಆದರೆ ಅಲ್ಲಿದ್ದ ಹಿಂದುಗಳ ಗುಡಿ ಯೊಂದೂ ಉಳಿಯದಂತೆ ಧ್ವಂಸಮಾಡಿ ಅವುಗಳಿಗೆ ಪ್ರತಿಸ್ಪರ್ಧಿಯಾಗಿ ಬಂಗಾರದ ಒಂದು ದಿವ್ಯವಾದ ಮಸೀದಿ ಕಟ್ಟಿಸಿದನು. ಅದಕ್ಕೆ ತನ್ನ ಒಡೆಯನ ಹೆಸರೇ ಇಟ್ಟನು. ಹೀಗೆ ಯಾದವರ ವಂಶವೂ ಅವರ ರಾಜಧಾನಿಯೂ ನಿರ್ನಾಮವಾಗಿ ಹೋದುವು.

ಯಾದವರ ಮೂಲಸ್ಥಾನ ನಾಶವಾದರೂ ಅವರ ಕೆಲವರು ಸಾಮಂತರು ಮಾತ್ರ ಅಲ್ಲಲ್ಲೇ ತಲೆಯೆತ್ತಿಕೊಂಡೇ ಇದ್ದರು. ಇವರಲ್ಲೆಲ್ಲಾ ಕಂಪಿಲಿಯ ಸಿಂಗೆಯ ನಾಯಕ

---

1 ಮಣದ ನಿರ್ದಿಷ್ಟ ತೂಕ ನಿರ್ಧಾರವಾಗಿಲ್ಲ. ಫರಿಸ್ತಾ ಅಭಿಪ್ರಾಯ 24 ಪೌಂಡು ಎಂದಿಟ್ಟುಕೊಂಡರೂ 96 ಸಾವಿರ ಮಣ ಎಂದರೆ 23 ಲಕ್ಷ ಚಿಲ್ಲರೆ ಪೌಂಡು—ಅಥವಾ ಒಂದು ಸಾವಿರ ಟನ್ನಿಗೂ ಹೆಚ್ಚು ತೂಕ ಬಂಗಾರವನ್ನು ಮಲ್ಲಿಕ್-ಕಾಫರ್ ದ್ವಾರಸಮುದ್ರ, ಮಧುರೆ ಕಂಚಿ ಮೊದಲಾದ ದೇವಸ್ಥಾನಗಳಲೂಟಿಯಿಂದ, ಹೊಯಿಸಳ ಪಾಂಡ್ಯ ರಾಜರ ಬೊಕ್ಕಸಗಳಿಂದ ಒಯ್ದನೆಂದು ಗೊತ್ತಾಗುತ್ತದೆ. ಈಗ ನಮಗೆ ಇದು ಅಗಾಧವಾಗಿ ಕಂಡರೂ ನೂರಾರು ವರ್ಷ ಗಳಿಂದ ಸಹಸ್ರಾರು ರಾಜರೂ ಪ್ರಜೆಗಳೂ ದಾನ ಕೊಟ್ಟುಕೊಟ್ಟು ಅಷ್ಟು ಹಣ ಶೇಖರವಾಗಿತ್ತು, ಅದನ್ನು ಮೊದಲನೇ ಸರಿ ಲೂಟಮಾಡಿದವನಿಗೆ ಅಷ್ಟು ಸಿಕ್ಕಿದ್ದು ಏನೂ ಅಸಂಭವವಲ್ಲವೆಂದು ಸಿವಿಲ್ ಅಭಿಪ್ರಾಯ. (*For. Emp*. p. 571-2).

ಕಂಪಿಲರಾಯ, ಕುಮಾರರಾಮರ ಹೆಸರು ಪ್ರಧಾನವಾದುವು.[1] ಮಲ್ಲಿಕ್ ಇವರನ್ನೂ ಸೆಣಸಲು ಪ್ರಯತ್ನಮಾಡಿದ; ಆದರೆ ದಿಲ್ಲಿಯಲ್ಲಿ ಅಲ್ಲಾವುದೀನನ ಮರಣಾನಂತರ [ಜನವರಿ 1316] ಉತ್ತರಾಧಿಕಾರಿಯ ವಿಷಯವಾಗಿ ಘೋರ ಹತ್ಯಾಕಾಂಡ ಆರಂಭ ವಾಯಿತು. ಮಲ್ಲಿಕ್ ಆ ಗಲಭೆಗೆ ತುತ್ತಾಗಿ ಹೋದ; ಅವನ ತಲೆ ಕೊಲೆಗಾರರ ಕೈಗೆ ಸಿಕ್ಕಿ ಚೆಂಡಾಡಿಹೋಯಿತು ! ಇಹಲೋಕದ ಯಮನಂತಿದ್ದ ಆ ಹಿಂಸಕನ ಘಾತಕ ಜೀವನಕ್ಕೆ ತಕ್ಕ ಸಾವೇ ಅವನಿಗೆ ಬಂತು !

ಅಮಾನುಷವಾದ ಕೊಲೆ—ಅನೇಕ ಹತ್ಯಾಕಾಂಡದ ಪ್ರಸಂಗಗಳೂ ದಬ್ಬಾಳಿಕೆಯೂ ನಡೆದು ಕಡೆಗೆ ಏಪ್ರಿಲ್ ಹೊತ್ತಿಗೆ ಅಲ್ಲಾಉ-ದ್-ದೀನನ ಹದಿನೇಳು ವರ್ಷ ವಯಸ್ಸಿನ ಒಬ್ಬ ಮಗ ಕಳೆದುಳಿದು ಕುತ್ಬುಉ-ದ್-ದೀನ್ ಮುಬಾರಕ್ ಷಾಎಂಬ ಹೆಸರಿನಿಂದ ಗದ್ದಿಗೆಯ ಮೇಲೇರಿಸಲ್ಪಟ್ಟ. ಇವನಿಗೆ ರಾಜ್ಯದಲ್ಲಿ ಎಳ್ಳಷ್ಟೂ ಆಸಕ್ತಿಯಿರಲಿಲ್ಲ—ಗಾನ ಪಾನ ಭೋಗ ವಿಲಾಸಗಳಲ್ಲೇ ಮುಳುಗಿರುತ್ತಿದ್ದ. ಇದರಿಂದ ರಾಜ್ಯಸೂತ್ರಗಳೆಲ್ಲ ಸಡಿಲಿ ಹೋದುವು.

ದೇವಗಿರಿಯ ಯಾದವರು ಸಮಯ ಕಾಯುತ್ತಲೇ ಇದ್ದರು. ಮಲ್ಲಿಕ್ ಕಾಫೂರನು ನಿಯಮಿಸಿದ್ದ ಮುಸ್ಲಿಂ ಅಧಿಕಾರಿಯು ಕೊಲೆಗೆ ತುತ್ತಾಗಿ ಹೋದ. ಇದರಿಂದ ಯಾದವರಿಗೆ ಕೈಕಾಲಾಡಿಸಲು ಸಮಯ ಸಿಕ್ಕಿತು. ರಾಮಚಂದ್ರನ ಅಳಿಯ ಹರಪಾಲದೇವನು ದೇವಗಿರಿಯನ್ನು ಸ್ವಾಧೀನಪಡಿಸಿಕೊಂಡು ಆಳಲಾರಂಭಿಸಿದ. ಈ ಸುದ್ದಿ ಕೇಳಿದೊಡನೆಯೇ ಮುಬಾರಕನಿಗೆ ಏಕಾಏಕಿ ಕಿಚ್ಚುಕೆರಳಿತು. ಆ ಕೂಡಲೇ ಭಾರಿ ಸೈನ್ಯದೊಡನೆ ದಕ್ಷಿಣದಮೇಲೆ ಸಿಡಿಲಿನಂತೆ ಆರ್ಭಟಿಸುತ್ತಾ ದೇವಗಿರಿಯ ಮೇಲೆ ಬಂದೆರಗಿದ. ಬೆಟ್ಟಗುಡ್ಡಮಯವಾದ ಆ ಪ್ರಾಂತದಲ್ಲಿ ಹರಪಾಲನನ್ನು ಎದುರಿಸುವುದು ಸ್ವಲ್ಪ ಪ್ರಯಾಸದ ಕೆಲಸವಾಗಿರಲಿಲ್ಲ; ಮುಬಾರಕನಿಗೆ ಮೂಗು ಹಿಡಿದಂತಾಗಿತ್ತು. ಕಡೆಗೆ ಹೋರಾಟ ನಡೆಯುತ್ತಿದ್ದಾಗ ಹರಪಾಲನಿಗೆ ದೈವವಶಾತ್ ತೀವ್ರವಾದ ಒಂದೇಟು ತಗುಲಿತು, ಅವನು ಶತ್ರುವಿನ ಕೈಗೆ ಸಿಕ್ಕಿಬಿದ್ದ.

ಆ ಕಾಲದಲ್ಲೇ ಜೀವಿಸಿ ಕಣ್ಣಾರೆ ಈ ಘಟನೆಯನ್ನು ಕಂಡ ಒಬ್ಬ ಮುಸ್ಲಿಂ ಲೇಖಕ, ಅಲ್‌ಬರೂನಿ, ಹರಪಾಲನ ಕೊಲೆಯ ಚಿತ್ರವನ್ನು ಹೀಗೆ ವಿವರಿಸಿದ್ದಾನೆ—ಮುಬಾರಕ್ ಕೈಸೆರೆ ಸಿಕ್ಕಿದ ಹರಪಾಲನನ್ನು ತನ್ನೆದುರಿಗೆ ಕರೆತರಿಸಿ, ಪಶುಗಳ ಚರ್ಮ ಸುಲಿಯುವ ಕಸಾಯಿಗಳನ್ನು (ಕಟುಕರನ್ನು) ಕರೆಸಿ. ಅವರಿಂದ ಹರಪಾಲನ ಚರ್ಮವನ್ನು ತನ್ನ ಕಣ್ಣಾರೆ ಸುಲಿಸಿ—ಸುಲಿಸಿ ಹಾಕಿದ್ದಲ್ಲದೆ ಅವನ ರುಂಡವನ್ನು ಭಲ್ಲೆಗೆ ಸಿಗಿಸಿ ಚುಚ್ಚಿ ಊರಗಸೆಯ ಬಾಗಿಲಿಗೆ ಕಟ್ಟಿಸಿದನು (1818ರಲ್ಲಿ). ರಾಜಕುಟುಂಬದವರನ್ನೆಲ್ಲ ಸೆರೆಹಿಡಿದು ತನ್ನೊಡನೆ ದಿಲ್ಲಿಗೆ ಕರೆದೊಯ್ದನು. ಈ ಘೋರಕೃತ್ಯವನ್ನು

---

1 ಮುಂದೆ ಇವರೆಲ್ಲರೂ ವಿಜಯನಗರದ ಸ್ಥಾಪನೆಗೆ ಬೆನ್ನುಕೊಟ್ಟು ನಿಂತರು, ಈ ವಿಷಯ ಕ್ರಮೇಣ ವರ್ಣಿಸಲ್ಪಡುವುದು.

ಕಂಡು, ಹಿಂದುಗಳಿರಲಿ, ಮುಸಲ್ಮಾನ್ ಸೈನಿಕರು ಸಹ ಮರಮರ ಮರುಗುತ್ತ ಕಣ್ಣೀರು ಸುರಿಸಿದರಂತೆ ! ಇನ್ನೆಂತಹ ಪಾಷಾಣ ಹೃದಯವೋ ಅವನದು !!

ವರಂಗಲ್ಲಿನ ಅಳಿಗಾಲ—ಮುಬಾರಕನ ಮರಣದ ನಂತರ ದಿಲ್ಲಿಯಲ್ಲಿ ರಾಜ್ಯಕ್ಕಾಗಿ ಭಾರಿಭಾರಿ ಉತ್ಪಾತಗಳು, ಕೊಲೆಗಳು, ದಂಗೆಗಳು ನಡೆದುಹೋದುವು. ಈ ಅವ್ಯವಸ್ಥೆಯಲ್ಲಿ ವರಂಗಲ್ಲಿನ ದೊರೆ ಎರಡನೆಯ ಪ್ರತಾಪರುದ್ರ ದಿಲ್ಲಿಯ ಆಳಿಕೆಗೆ ತಿರುಗಿ ಬಿದ್ದು ಸ್ವತಂತ್ರನಾದ. ಆಗ ದಿಲ್ಲಿಯಲ್ಲಿ ಯುವರಾಜನಾಗಿದ್ದ ಜೂನಾ ಅಥವಾ ಉಲುಗ್‌ಖಾನ್ ಎಂಬುವನು 1321ರಲ್ಲಿ ವರಂಗಲ್ಲಿನ ಮೇಲೆ ಧಾಳಿಮಾಡಿದನು. ಹಿಂದುಗಳು ಸರಿಯಾಗಿ ಸನ್ನಾಹ ಮಾಡಿಕೊಂಡಿದ್ದ ಕಾರಣ ಜೂನಾ ಸೋತು ಹಿಂದಿರುಗಬೇಕಾಯಿತು.

ಜೂನಾ 1323ರಲ್ಲಿ ಪುನಃ ಹೆಚ್ಚುಸೈನ್ಯದೊಡನೆ ಬಂದು ವರಂಗಲ್ಲನ್ನು ಮುತ್ತಿದ. ಪ್ರತಾಪರುದ್ರ ವೈಮರೆತು ಕುಳಿತಿದ್ದ, ಎರಡನೇ ಮುತ್ತಿಗೆಗೆ ಸಿದ್ಧನಾಗಿರಲಿಲ್ಲ. ಮುತ್ತಿಗೆಯೊ ಕಟಂಕಟೆ ಐದು ತಿಂಗಳಾದರೂ ಬಿಡಲಿಲ್ಲ. ರಾಜ ದಿಕ್ಕೆಟ್ಟು ಶರಣಾಗತನಾದ. ಉಲೂಗ್‌ಖಾನ್ ಪ್ರತಾಪರುದ್ರನನ್ನೂ ಅವನ ಬಂಧುಗಳನ್ನೂ ಸೆರೆಹಿಡಿದು ಹಿಂಸಿಸಿ ಕೆಲವು ಮುಖ್ಯಸ್ತರನ್ನು ತಕ್ಕ ಸಿಬ್ಬಂದಿಯೊಡನೆ ದಿಲ್ಲಿಗೆ ರವಾನಿಸಿದ. ಈ ಅವಮಾನ ಸಹಿಸಲಾರದೆ ಪ್ರತಾಪರುದ್ರ ಮಧ್ಯಮಾರ್ಗದಲ್ಲೇ ಆತ್ಮಹತ್ಯೆ ಮಾಡಿಕೊಂಡು ಬಿಟ್ಟ. ಇತ್ತಲಾಗಿ ವರಂಗಲ್ಲು ಸೂರೆಯಾಗಿ ಪಾಳುಬಿತ್ತು, ಕಾಕತೀಯರ ಹೆಸರೇ ಚರಿತ್ರೆಯಿಂದ ತೊಡೆದುಹೋಯಿತು, ಅವರ ರಾಜ್ಯವಷ್ಟೂ ದಿಲ್ಲಿಯ ಸಲ್ತನತ್ತಿಗೆ ಸೇರಿಹೋಯಿತು (1323).

ಹೀಗೆ ವರಂಗಲ್ಲನ್ನು ಕಬಳಿಸಿದ ಉಲೂಗ್‌ಖಾನ್ ಮಾ'ಬಾರ್ ಮೇಲೆ ನುಗ್ಗಿ ಬಂದ. ಪಾಂಡ್ಯವಂಶದ ರಾಜರಲ್ಲಿ ತಮ್ಮತಮ್ಮಲ್ಲೇ ಒಡಕುಗಳು ಹುಟ್ಟಿದ್ದವು, ಒಬ್ಬರಮೇಲೊಬ್ಬರು ಛಲ ಸಾಧಿಸುತ್ತಿದ್ದರು. ಅದರಿಂದ ಇಡೀ ಪಾಂಡ್ಯರಾಜ್ಯ (ಈಗಿನ ಕೇರಳ—ತಮಿಳುನಾಡು) ವಿಶೇಷ ಶ್ರಮವಿಲ್ಲದೆ ಮುಕ್ಕಿ ಖಾನನ ಬುಟ್ಟಿಗೆಬಿತ್ತು. ಪಾಂಡ್ಯರ ಕಡೆಯ ರಾಜ ಪರಾಕ್ರಮದೇವ ಸೆರೆಸಿಕ್ಕಿದ; ಉಲುಗ್ ಅವನನ್ನು ದಿಲ್ಲಿಗೆ ಸಾಗಿಸಿಕೊಂಡು ಹೋದ. ಇದಾದ ಎರಡು ವರ್ಷಗಳೊಳಗಾಗಿಯೇ (1325ರಲ್ಲಿ) ಜೂನಾ ಅಥವಾ ಉಲುಗ್‌ಖಾನನೇ ಸುಲ್ತಾನ್ ಅಲ್‌ಮುಜಾಹಿದ್ **ಮೊಹಮ್ಮದ್** (ಇಬ್ನ್ ಅಥವಾ) **ಬಿನ್ ತೊಗಲಖ್** ಎಂಬ ಹೆಸರಿನಿಂದ ದಿಲ್ಲಿಯ ಸುಲ್ತಾನನಾದ. ಇವನ ಸಾಮ್ರಾಜ್ಯದ ಹುಚ್ಚು ದಬ್ಬಾಳಿಕೆ ಕ್ರಮವು ಹಿಂದುಗಳ ಮನಸ್ಸಿನಲ್ಲಿ ಮತ್ತಷ್ಟು ಭೀತಿಯನ್ನೂ ಕಳವಳವನ್ನೂ ಬಿತ್ತಿತು. ಇಂತಹ ವಿಲಕ್ಷಣ ಪುರುಷ ದಿಲ್ಲಿಯ ಗದ್ದುಗೆಯ ಮೇಲೆ ಎಂದೂ ಕೂಡಲಿಲ್ಲ. ಒಂದು ಕಡೆ ಅವನು ದೊಡ್ಡ ವಿದ್ಯಾವಂತ, ಅವನ ಅರಬೀ ಪತ್ರಗಳ ಶೈಲಿ–ಸರಣಿ ಇಂದಿಗೂ ಪಂಡಿತರ ಮೆಚ್ಚಿಗೆಗೆ ಪಾತ್ರವಾಗಿವೆಯಂತೆ. ಸಾಲದುದಕ್ಕೆ ವೈದ್ಯ ವಿಜ್ಞಾನ ಖಗೋಳ ಗಣಿತ ತರ್ಕ ತತ್ತ್ವಶಾಸ್ತ್ರ ಲಲಿತಕಲೆ

ಮೊದಲಾದ ವಿದ್ಯೆಗಳಲ್ಲೆಲ್ಲಾ ಅವನಿಗೆ ಪರಿಶ್ರಮವಿತ್ತು. ಅವನು ವಿದ್ವಜ್ಜನ ಪಕ್ಷಪಾತಿಯೂ ಅಳತೆ ಮೀರಿ ಉದಾರಿಯೂ ಆಗಿದ್ದ. ಆದರೆ ಮಹಾ ಹಠಮಾರಿ ಹಿಂಸಾವಿನೋದಿ ಕಡುಮುಂಗೋಪಿ ಚಪಲಚಿತ್ತ. ಕ್ರೌರ್ಯ ನಿಷ್ಕರುಣೆ ಮತಾಂಧತೆಗಳಲ್ಲಿ ಅವನಿಗೆ ಸರಿಗಟ್ಟುವವರು ಯಾರೂ ಇಲ್ಲ.

ಈ ವಿಷಯವೆಲ್ಲ ಅನೇಕ ಮುಸಲ್ಮಾನ ಚರಿತ್ರಕಾರರು ಅನೇಕ ರೀತಿ ಬಣ್ಣಿಸಿರುವ ನಾನಾ ಸಂಗತಿಗಳಿಂದ ಅಭಿವ್ಯಕ್ತವಾಗುತ್ತದೆ. ಆಧುನಿಕ ಇತಿಹಾಸಕಾರರು ಅವನನ್ನು ವಿರೋಧಗಳ ಸಂಮಿಶ್ರಣವೆಂದೂ ನಿಪುಣಾತಿರೇಕನೆಂದೂ ಕಾಲಕ್ಕೆ ಮಿಂಚಿದ ಜಾಣಾಕ್ಷನೆಂಮೂ ಭಾವನೆಗಳ ಮನುಷ್ಯನೆಂದೂ **ಹುಚ್ಚು ದೊರೆ**ಯೆಂದೂ ನಾನಾ ರೀತಿ ಕರೆದಿದ್ದಾರೆ. ಇದಕ್ಕೆ ಅವನ ಅನೇಕ ಕಾರ್ಯಗಳು ಆಧಾರವಾಗಿವೆ. ಪೋರ್ಚುಗಲ್ಲಿನ ನ್ಯೂನಿಜ್ ಪ್ರಯಾಣಿಕನು ಮೊಹಮ್ಮದನ ಕೆಲವು ವಿಚಿತ್ರ ಕಾರ್ಯಗಳನ್ನು ವರ್ಣಿಸಿ ಕಡೆಯಲ್ಲಿ "ಇವೂ ಮತ್ತು ಇದೇ ವಿಧವಾದ ಇನ್ನೂ ಎರಡು ಸಾವಿರ ಕಥೆಗಳಿವೆ...."[1] ಎಂದು ಬರೆದಿಟ್ಟಿದ್ದಾನೆ. ಇಷ್ಟರಿಂದಲೇ ಮೊಹಮ್ಮದನ ಹುಚ್ಚು ಕಾರಬಾರದ ಅಂದಾಜು ಮಾಡಿಕೊಳ್ಳಬಹುದು.

ಈತ ಸುಲ್ತಾನನಾಗುವ ವೇಳೆಗಾಗಲೆ ಇಡೀ ತೆಂಕಣದೇಶ—ಗೋದಾವರಿಯಿಂದ ಕನ್ಯಾಕುಮಾರಿಯವರೆಗೆ ಒಟ್ಟಾರೆಯಾಗಿ ದಿಲ್ಲಿಯ ಸುಲ್ತಾನ್ ಶಾಹಿಗೆ ಒಳಪಟ್ಟಂತೆ ಆಗಿತ್ತು. ಆದಕಾರಣ ಇವನು ಪಟ್ಟಕ್ಕೆ ಬಂದನಂತರ ಇಡೀ ಭರತಖಂಡವನ್ನು ಏಕಚ್ಛತ್ರದಿಂದ ಆಳಲು ಹವಣಿಸಿ 1327ರಲ್ಲಿ ದೇವಗಿರಿಗೇ ತನ್ನ ರಾಜಧಾನಿಯನ್ನು ತಂದನು. ಇಲ್ಲಿಗೆ 1297ರಲ್ಲಿ ಹಿಡಿಯಲಾರಂಭಿಸಿದ್ದ ಕಾಳರಾಹುವಿನ ಭೀಷಣಚ್ಛಾಯೆಯು ಪೂರ್ಣಖಗ್ರಾಸವಾಗಿ ಇಡೀ ನಾಡನ್ನೇ ಆವರಿಸಿ ಬಿಟ್ಟಂತಾಯಿತು.

ಹಿನ್ನೆಲೆಯ ಉಪಸಂಹಾರ—ಹೀಗೆ ಕೇವಲ ಮೂವತ್ತು ವರ್ಷಗಳ ಅವಧಿಯಲ್ಲೇ (1297-1327) ಮುಸಲ್ಮಾನರ ಧಾಳಿಗಳು ಸಾಗರದ ತೆರೆಗಳಂತೆ ಮೇಲಿಂದ ಮೇಲೆ ನುಗ್ಗಿ ಬಂದು ನಾಡಿಗೆ ನಾಡನ್ನೇ ಸೂರೆಗೊಂಡುವು. ದಕ್ಷಿಣದಲ್ಲಿ ನೂರಾರು ವರ್ಷಗಳಿಂದ ನೆಲೆಸಿ ನಿಂತಿದ್ದ ಯಾದವ ಕಾಕತೀಯ ಹೊಯಿಸಳ ಪಾಂಡ್ಯ ನಾಲ್ಕು ಪ್ರಬಲ ರಾಜ್ಯಗಳೂ ನಿಸ್ತೇಜವಾಗಿ ನಿರ್ನಾಮವಾಗಿ ಹೋದುವು. ಒಂದೊಂದಾಗಿ ದೇವಗಿರಿ "ವಾರಂಗಲ್ ದ್ವಾರಸಮುದ್ರ, ತಿರುವಣ್ಣಾಮಲೆ, ಕಂಚಿ, ಶ್ರೀರಂಗಂ ಮಧುರೆ ಮತ್ತು ರಾಮೇಶ್ವರಗಳು ಅಪವಿತ್ರವಾದುವು, ಸೂರೆಯಾಗಿ ಹಾಳಾದುವು."[2] ಒಂದು ಕಡೆ ಮನೆ-ಮಾರುಗಳು ಉರುಳಿ ಬೀಳುತ್ತಿದ್ದುವು, ಇನ್ನೊಂದು ಕಡೆ ಗುಡಿ-ಗೋಪುರಗಳು ಧ್ವಂಸವಾಗಿ ಹೋಗುತ್ತಿದ್ದವು. ಈ ಕಡೆ ಲೂಟಿ-ಸುಲಿಗೆ ಅತ್ಯಾಚಾರ; ಆ ಕಡೆ ಆನೆಗಳ ಮೇಲೆ-ಒಂಟೆಗಳ ಮೇಲೆ ಸಾವಿರಗಟ್ಟಲೆ ಮಣಗಳಷ್ಟು ಬೆಳ್ಳಿ-ಬಂಗಾರ, ಮುತ್ತು-ರತ್ನಗಳು ಉತ್ತರಕ್ಕೆ ಸಾಗಿ-ಸಾಗಿ ಹೋಗುತ್ತಿದ್ದುವು. ಅನೇಕ ಸಾವಿರ

---

1 *For Emp.*, p. 9. 2 ವಿಜಯನಗರ ವಿ. ರಾಘವೇಂದ್ರರಾವ್ M.A., B.T., ಅ ೧.

ಶ್ರೀ ನರಹರಿತೀರ್ಥರು, ಹಂಪೆ

(ಪೀಠಾಧಿಪತ್ಯ ಕಾಲ 1324–1333 ಕ್ರಿ. ಶ.)



ಸಸೀತಾ ಮೂಲರಾಮಾರ್ಚಾ ಕೋಶೇ ಗಜಪತೇಃ ಸ್ಥಿತಾ |
ಯೇನಾನೀತಾ ನಮಸ್ತಸ್ಮೈ ಶ್ರೀಮನ್ನೃಹರಿಭಿಕ್ಷವೇ || ೧ ||

ಭೂದೇವೀತನಯಾಸಕ್ತ – ರಘ್ವೀಶಪದಮಾನಸಃ |
ನೃಹರ್ಯಾಖ್ಯಗುರುರ್ಭೂಯಾ – ದಸ್ಮದಿಷ್ಟಾರ್ಥಸಿದ್ಧಯೇ || ೨ ||

ಪಿ. ವಿಷ್ಣುತೀರ್ಥ, ನವವೃಂದಾವನ, ಆನೆಗೊಂದಿ (ರಾಯಚೂರು ಜಿ.)

ವ್ಯಾಸರಾಯರ ವೃಂದಾವನ

ನವವೃಂದಾವನ



ಅರ್ಥಿಕಲ್ಪಿತಕಲ್ಪೋಽಯಂ ಪ್ರತ್ಯರ್ಥಿಗಜಕೇಸರೀ ।
ವ್ಯಾಸತೀರ್ಥಗುರುರ್ಭೂಯಾ – ದಸ್ಮದಿಷ್ಟಾರ್ಥಸಿದ್ಧಯೇ ॥

ಪುರಂದರದಾಸರು

[illegible] ನವವೃಂದಾವನ, ಆನೆಗೊಂದಿ (ರಾಯಚೂರು ಜಿ.)

ವರ್ಷಗಳಿಂದ ಬೆಳೆದು ಬಂದಿದ್ದ ಪ್ರಾಚೀನಧರ್ಮ-ಪುರಾತನ ಸಂಪ್ರದಾಯ ತಲೆಯೆತ್ತ ದಂತಾಗಿ ಹೋಯಿತು. ಅವಕ್ಕೆ ಪ್ರತಿಯಾಗಿ ಇಸ್ಲಾಂ ಧರ್ಮ ಎಲ್ಲೆಲ್ಲೂ ಹರಡ ಹತ್ತಿತು. ಸಹನೆಯ ಪರಮಾವಧಿಯೂ ಮೀರಿತು, ದಟ್ಟದಟ್ಟವಾಗಿ ಧೂಮವನ್ನು ಕಾರುತ್ತಿದ್ದ ಕ್ರಾಂತಿಯ ಕಿಡಿಗೊಳ್ಳಿಯ ತಾಪವು ಪ್ರಜ್ವಲನ ಬಿಂದುವಿನ (ignition point) ವರೆಗೂ ಏರಿತು.

ಸಿವೆಲ್ ಹೇಳುವಂತೆ "ಪ್ರತಿಯೊಂದೂ ಅನಿವಾರ್ಯವಾದ ಒಂದೇ ವಿನಾಶದ ಕಡೆಗೆ ತಳ್ಳಿಕೊಂಡು ಹೋಗುತ್ತಿರುವಂತೆ ಕಾಣಿಸಿತು—ಹಿಂದೂರಾಜ್ಯಗಳು ಹಾಳಾಗಿ ಸೂರೆಯಾಗೋಣ, ಅಲ್ಲಿದ್ದ ಪ್ರಾಚೀನ ರಾಜವಂಶಗಳು ನಿರ್ನಾಮವಾಗೋಣ, ಅವರ ಮತ-ಧರ್ಮ, ಅವರ ದೇವಾಲಯುಗಳು, ಅವರ ನಗರಗಳು ಎಲ್ಲದರ ಮೂಲೋತ್ಪಾಟನೆ. ದಕ್ಷಿಣದ ನಿವಾಸಿಗಳು ಅತ್ಯಂತ ಮಮತೆಯಿಂದ ಗೌರವಿಸುತ್ತಿದ್ದುದೆಲ್ಲವೂ ಕುಲುಕಿ ಹೋಗಿ ಪತನಾವಸ್ಥೆಯಲ್ಲಿದ್ದುವು." [1]

ಈ ಕಡೆ ಇಂತಹ ಉತ್ಕಟ ವಿಷಮ ಪರಿಸ್ಥಿತಿಯುಂಟಾದರೂ ಇನ್ನೊಂದು ಕಡೆ ಅನೇಕ ಮಹಾತ್ಮರು—ವಿದ್ಯಾರಣ್ಯರು, ಸಾಯಣರು, ವೇದಾಂತದೇಶಿಕರು, ನರಹರಿ ತೀರ್ಥ-ಅಕ್ಷೋಭ್ಯತೀರ್ಥರು ಮೊದಲಾದವರು ಮುಂದೆ ಬಂದರು. ಅವರು ಧರ್ಮ ಸಂಸ್ಥಾಪನೆ ಮಾಡಿ ಇಡೀ ಜನಾಂಗವನ್ನೇ ಪರಿವರ್ತನಗೊಳಿಸಿ ರಾಷ್ಟ್ರೋದ್ಧಾರ ಕಾರ್ಯದಲ್ಲಿ ಅನುವಾದರು.

ಬೆಟ್ಟಬೇಸಿಗೆಯ ಬೇಗುದಿಯಿಂದ ಒಣಗಿಹೋದ ಸಸ್ಯವೃಂದಕ್ಕೆ ಮುಂಗಾರು ಮೋಡ ಮಳೆಸುರಿಸಿ ಸಂತೈಸುವಂತೆಯೂ, ಹಗಲುಹೊತ್ತು ಚಂಡಕಿರಣನ ಕಡುತಾಪಕ್ಕೆ ನೊಂದು ಬಳಲಿದ ಜನ-ಮನಗಳಿಗೆ ಚಂದ್ರಮನ ತಂಬೆಳಕು ತಂಪುನೀಡಿ ಆಹ್ಲಾದಪಡಿಸುವಂತೆಯೂ, ನಾನಾರೀತಿಗಳಿಂದ ತಲ್ಲಣಗೊಂಡಿದ್ದ ಆ ಕಾಲದ ಜನಾಂಗಕ್ಕೆ ಮಹಾನುಭಾವರಾದ ವಿದ್ಯಾರಣ್ಯರೂ ಅವರ ಸಮಕಾಲೀನರೂ ಹೇಗೆ ಆಶ್ವಾಸನ ಕೊಟ್ಟು ಪ್ರೋತ್ಸಾಹಿಸಿದರು ; ಅಂಥಾ ಅಪೂರ್ವಶಕ್ತಿಯನ್ನು ಅವರು ಹೇಗೆ, ಎಷ್ಟು ಕಷ್ಟಪಟ್ಟು ಸಂಪಾದಿಸಿದರು ; ತಮ್ಮ ತಪಃಪ್ರಭಾವದಿಂದ ಭೀಷಣ ವಿಷಮ ಪರಿಸ್ಥಿತಿಯನ್ನೇ ಹೇಗೆ ಬಲು ಜಾಣ್ಮೆಯಿಂದ ದೇಶೋದ್ಧಾರ ಕಾರ್ಯಕ್ಕೆ ಉತ್ತೇಜಕ ಶಕ್ತಿಯನ್ನಾಗಿ ಮಾರ್ಪಡಿಸಿದರು; ದೌರ್ಜನ್ಯ ದರ್ಪ ದಮನ ದುರಾಗ್ರಹಗಳಿಗೆ ಬಲಿಯಾಗಿ ಕುಂದಿ ನಂದಿಹೋಗುತ್ತಿದ್ದ ಸ್ವಾತಂತ್ರ್ಯದ ಕಿಡಿಗೆ ಹೇಗೆ ಗಾಳಿಹಾಕಿ ಅದನ್ನು ಭುಗಿಲ್ಲೆಂದು ಉರಿಯೇಳುವಂತೆ ಹತ್ತಿಸಿದರು ; ಅಂತಃಕಲಹಗಳ ಘೋರ ವಿಷಜ್ವಾಲೆಯಿಂದ ಭಸ್ಮಾವಶೇಷವಾಗಿ ಖಿಲವಾಗಿ ಹೋಗಿದ್ದ ಸ್ವದೇಶಪ್ರೇಮ, ಸ್ವಧರ್ಮಾಭಿಮಾನ, ವೀರ್ಯ, ಶೌರ್ಯ, ಒಗ್ಗಟ್ಟು

1 *For. Emp.* p. 4.

ಗಳೇ ಮೊದಲಾದ ಕ್ಷಾತ್ರಗುಣಗಳನ್ನು ಹೇಗೆ ಏಕೀಕರಿಸಿ ಒಂದು ಭದ್ರವಾದ ಭವ್ಯ ಸಾಮ್ರಾಜ್ಯ ಭವನಕ್ಕೆ ತಳಹದಿ ಹಾಕಿದರು; ದೇಶಕ್ಷೋಭಕರವಾಗಿದ್ದ ಮುಸಲ್ಮಾನರ ಹಾವಳಿಯನ್ನು ಪ್ರತಿಭಟಿಸಲು ದಕ್ಷವಾದ ಹಿಂದೂ ರಾಜ್ಯವೆಂಬ ಬಲವಾದ ಅಡ್ಡ ಗೋಡೆಯನ್ನು ಹೇಗೆ ಕಟ್ಟಿದರೆಂಬ ಮುಖ್ಯ ವಿಷಯಗಳನ್ನು ಮುಂದಿನ ಅಧ್ಯಾಯದಲ್ಲಿ ಕ್ರಮವಾಗಿ ವರ್ಣಿಸಲಾಗಿದೆ.

4. ಸಾಮ್ರಾಜ್ಯ ಸ್ಥಾಪನೆ

ಚರಿತ್ರೆಗೆ ಆಧಾರಗಳು :—ವಿಜಯನಗರದ ಚರಿತ್ರೆಯನ್ನು ಬರೆಯುವುದಕ್ಕೆ ಅನುಕೂಲವಾಗಿ ಪ್ರಾಯಶಃ ಎಲ್ಲಾ ವಿಧವಾದ ಆಧಾರ ಸಾಮಗ್ರಿಗಳೂ ಭಾಗ್ಯವಶಾತ್ ನಮಗೆ ಹೇರಳವಾಗಿ ದೊರೆತಿವೆ. ಇವುಗಳಲ್ಲೆಲ್ಲಾ ಆ ಅರಸರ ಅಥವಾ ಆ ಕಾಲದ ಶಿಲಾ ಶಾಸನಗಳೂ ದಾನಪತ್ರದ ತಾಮ್ರಲಿಪಿಗಳೂ ಹೆಚ್ಚು ಪ್ರಾಮಾಣಿಕವಾದುವು. ಇವು ಎಪಿ ಗ್ರಾಫಿಕಾ ಇಂಡಿಕಾ, ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್, ಎಪಿಗ್ರಾಫಿಕಾ ಕರ್ನಾಟಕ ಮೊದಲಾದ ಹೆಸರಿನಿಂದ ಪ್ರಕಟಿತವಾಗಿವೆ. ಇವನ್ನು ಬಿಟ್ಟರೆ ಮುಸಲ್ಮಾನ ಚರಿತ್ರಕಾರರು ಫಾರಸಿಯಲ್ಲಿ ಬರೆದ ಇತಿಹಾಸಗಳು. ಇವರಲ್ಲಿ ತಾರೀಖ್-ಎ-ಹಿಂದ್(ದಕ್ಷಿಣದ ಇತಿಹಾಸ) ಬರೆದ ಫರಿಶ್ತಾ ಬಹಳ ಪ್ರಸಿದ್ಧ; ಅಲ್ ಬರೂನಿ, ಇಬನ್ ಬತೂತಾ, ಸೈಯದ್ ಅಲೀ, ಇಸಾಮಿಯಾ ಮೊದಲಾದವರು ಇತರರು. ಪ್ರಾಯಶಃ ಇವರೆಲ್ಲರ ದೃಷ್ಟಿಯೂ ಸ್ವಮತ ದಲ್ಲಿ ದುರಭಿಮಾನ, ಹಿಂದುಗಳಲ್ಲಿ ಈರ್ಷ್ಯಾಸೂಯೆಗಳಿಂದ ಕಲುಷಿತವಾಗಿದೆ. ಇವರ ಹೇಳಿಕೆಗಳು ಬಹಳ ಮಟ್ಟಿಗೆ ಇಲಿಯಟ್ ಮತ್ತು ಡೌಸನ್ ಎಂಟು ಭಾಗಗಳಲ್ಲಿ ಪ್ರಕಟಿಸಿದ The History of India as told by its own Historians (ಲಂಡನ್, 1867-77) ನಲ್ಲಿ ಸಂಗ್ರಹೀತವಾಗಿವೆ. ಫರಿಶ್ತಾ ಚರಿತ್ರೆಯ ಎರಡು ಅನುವಾದಗಳಾಗಿವೆ (ಸ್ಕಾಟ್ ಮತ್ತು ಬ್ರಿಗ್ಸ್).

ಮುಸ್ಲಿಂ ಚರಿತ್ರಕಾರರ ಹೇಳಿಕೆಗಳನ್ನು ವಿಮರ್ಶೆಮಾಡಲು ವಿದೇಶೀಯ ಯಾತ್ರಿ ಕರ ಲೇಖನಗಳು ಬಹಳ ಅನುಕೂಲವಾಗಿ ದೊರೆತಿವೆ. ಇವುಗಳಲ್ಲಿ ನ್ಯೂನಿಜ್ ಮತ್ತು ಡಾಮಿಂಗೋಸ್ ಪೇಜ್ ಎಂಬ ಪೋರ್ಚುಗೀಸ್ ಯಾತ್ರಿಕರ ಕಥನ (ಕ್ರಾನಿಕಲ್ಸ್) ಗಳ ಇಂಗ್ಲೀಷ್ ಅನುವಾದವನ್ನು A Forgotten Empireನಲ್ಲಿ ಓದಬಹುದು. ನಿಕೋಲೊಕೊಂಟಿ, ಮಾರ್ಕೊ ಪೋಲೋ, ಪರ್ಶಿಯಾ ದೊರೆಯ ರಾಯಭಾರಿ ಅಬ್ದುರ್ ರಜಾಕ್ ಮೊದಲಾದವರ ಹೇಳಿಕೆಗಳೂ ದೊರೆತಿವೆ. ಇವುಗಳಿಂದ ಮಹತ್ತರವಾದ ಚರಿತ್ರಾಂಶಗಳು ತಿಳಿದುಬಂದಿವೆ.

ಆ ಕಾಲದ ಎಷ್ಟೋ ನಾಣ್ಯಗಳೂ ಉಪಲಬ್ಧವಾಗಿವೆ. ಇವುಗಳ ಸೂಕ್ಷ್ಮ ಅಧ್ಯ ಯನದಿಂದಲೂ ಬೆಲೆಯುಳ್ಳ ವಿಚಾರಗಳು ಹೊರಬಿದ್ದಿವೆ. ಅಲ್ಲದೆ ಆ ಕಾಲದ ಎಷ್ಟೋ

ಸಾಹಿತ್ಯಿಕ ಕೃತಿಗಳಲ್ಲಿಯೂ ಎಷ್ಟೋ ಚರಿತ್ರಾಂಶಗಳು ಪ್ರಾಸಂಗಿಕವಾಗಿ ಉಕ್ತವಾಗಿವೆ. ವಿಜಯನಗರದ ಅರಸರು ಅನೇಕ ಕವಿಗಳಿಗೂ ಗ್ರಂಥಕಾರರಿಗೂ ಉದಾರಾಶ್ರಯ ಕೊಟ್ಟಿದ್ದರು; ಅವರೆಲ್ಲರೂ ತಮ್ಮ ಆಶ್ರಯದಾತರ ವಂಶಾವಳಿಯನ್ನೂ ದಿಗ್ವಿಜಯಾದಿ ಅಂಶಗಳನ್ನೂ ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ. ಇವು ಸಂಸ್ಕೃತ, ತೆಲುಗು, ಕನ್ನಡ ಮೊದಲಾದ ಎಲ್ಲ ಭಾಷೆಗಳಲ್ಲೂ ದೊರಕಿವೆ. ಇಂತಹ ಸಂಗ್ರಹಗಳನ್ನೇ ಆರಿಸಿ ಮದರಾಸ್ ವಿಶ್ವವಿದ್ಯಾಲಯದವರು Sources of Vijayanagar History (ಒಂದು ಭಾಗ) 1919; Further Sources (ಮೂರು ಭಾಗ), 1946 ಎಂದು ಪ್ರಕಟಿಸಿದ್ದಾರೆ. ಈ ಸಂಗ್ರಹಗಳ ಅಧ್ಯಯನವು ಮುಸ್ಲಿಂ ಚರಿತ್ರಕಾರರ ಪಕ್ಷಪಾತಮಯವಾದ ಹೇಳಿಕೆಗಳನ್ನು ವಿಮರ್ಶೆಮಾಡಿ ತಿದ್ದಿಕೊಳ್ಳಲು ಮತ್ತು ಬೆಳೆಸಲು ಸಹ ಬಹಳ ಅನುಕೂಲವಾಗುತ್ತದೆ. ಇವುಗಳ ಜೊತೆಗೆ ಆಗಿನ ಕಾಲದ ಗ್ರಾಮಗಳ (ಹಳ್ಳಿಗಳ ಅಥವಾ ಊರುಗಳ) ಸ್ಥಳೀಯ ಆಡಳಿತದ ಕಡಿತಗಳಿಂದಲೂ ಸ್ವಲ್ಪಮಟ್ಟಿಗೆ ಸುದ್ದಿಸಮಾಚಾರಗಳು ಗೊತ್ತಾಗುತ್ತವೆ. ಇಂತಹ ಕಡಿತಗಳಿಗೆ ತೆಲುಗಿನಲ್ಲಿ ದಂಡಕವಿಲೆ ಅಥವಾ ಕವಿಲೆಗಳೆಂದು ಹೆಸರು. ದೀರ್ಘವಾಗಿದ್ದ ಕವಿಲೆಗಳನ್ನು ಕೆಲವು ಅಧಿಕಾರಿಗಳು ಸಂಗ್ರಹಿಸಿ ಬರೆದಿಟ್ಟಿದ್ದಾರೆ; ಇವಕ್ಕೆ ಕೈಫಿಯತ್‌ಗಳೆಂದು ಹೆಸರು. ಇವುಗಳನ್ನೂ ಸಹ ಮೇಲೆ ಹೇಳಿದ Further Sourcesನಲ್ಲಿ ಆರಿಸಿ ಕೊಟ್ಟಿದೆ. ಸಾಲದುದಕ್ಕೆ ಜನಸಾಮಾನ್ಯದಲ್ಲಿ ಎಷ್ಟೋ ದಂತಕಥೆಗಳೂ ಪ್ರಚಾರದಲ್ಲಿವೆ; ಇವು ಅಷ್ಟು ಪ್ರಾಮಾಣಿಕವಲ್ಲದಿದ್ದರೂ ಕೆಲವು ವೇಳೆ ವಿದ್ವಾಂಸರ-ಪರಿಶೋಧಕರ ಮೂಗು ಹಿಡಿಯುತ್ತವೆ.

ಆಧಾರಗಳ ಸಂಶೋಧನೆ—ಈ ಪ್ರಕಾರ ಅನೇಕ ವಿಧವಾದ ಚಾರಿತ್ರಿಕ ಆಧಾರ ಸಾಮಗ್ರಿಗಳು ದೊರೆತರೂ ಸರಿಯಾಗಿ—ನಿರ್ವಿವಾದವಾಗಿ ವಿಜಯನಗರದ ಇತಿಹಾಸವನ್ನು ಬರೆಯುವುದಕ್ಕೆ ಇದುವರೆಗೂ ಸಾಧ್ಯವಾಗಿಲ್ಲ. ಏಕೆಂದರೆ ಭಿನ್ನ ಭಿನ್ನ ಆಧಾರಗಳಲ್ಲಿ ಒಂದಕ್ಕೊಂದಕ್ಕೆ ತಾಳಮೇಳಗಳೇ ಇಲ್ಲ; ಒಬ್ಬೊಬ್ಬರ ಮತ ಒಂದೊಂದು ರೀತಿಯಾಗಿದೆ. ಯಾವುದಕ್ಕೆ ಏನು ಬೆಲೆ ಕೊಡಬೇಕೆಂಬ ವಿಷಯದಲ್ಲಿ ನಾನಾ ಪರಿಶೋಧಕರು ನಾನಾಪ್ರಕಾರ ನಿರ್ಣಯಮಾಡಿದ್ದಾರೆ. ಆದರೆ ಎಲ್ಲಕ್ಕೂ ಮೊಟ್ಟಮೊದಲು ಸ್ಥೂಲವಾಗಿ ವಿಜಯನಗರದ ಇತಿಹಾಸವನ್ನು ರೂಪಗೊಳಿಸಿದ ಕೀರ್ತಿ A Forgotten Empireನ್ನು ಬರೆದ ರಾಬರ್ಟ್ ಸಿವೆಲ್‌ಗೆ ಸಲ್ಲುತ್ತದೆ; ಈತ 60 ವರ್ಷಗಳ ಹಿಂದೆ ಬಳ್ಳಾರಿಯ ಕಲೆಕ್ಟರಾಗಿದ್ದು ಆಮೇಲೆ ನಿವೃತ್ತನಾದರೂ ಸಂಶೋಧನ ಕಾರ್ಯದಲ್ಲಿ ಆ ಮ ರ ಣಾಂ ತ ತೊಡಗಿದ್ದನಂತೆ. ಸಿವೆಲ್ ಬಿಟ್ಟರೆ ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ರೆವರೆಂಡ್ ಹೆರಾಸ್, ಡಾಕ್ಟರ್ ಭಾಸ್ಕರ ಆನಂದ ಸಾಲೆತೊರೆ, ಡಾಕ್ಟರ್ ಎಂ. ಹೆಚ್. ಕೃಷ್ಣ, ಡಾ. ಎನ್. ವೆಂಕಟರಮಣಯ್ಯ, ಕೆ. ಎ. ನೀಲಕಂಠಶಾಸ್ತ್ರಿ ಮೊದಲಾದ ಸಂಶೋಧಕ ವಿದ್ವಾಂಸರೂ ಈ ಕಾರ್ಯದಲ್ಲಿ ಘನವಾದ ಸೇವೆ ಸಲ್ಲಿಸಿದ್ದಾರೆ. ಇವರೂ ಇನ್ನಿತರರೂ ನಡೆಸಿದ ಸಂಶೋಧನೆಗಳ ವರದಿಗಳು ಅನೇಕ ಪತ್ರಿಕೆಗಳಲ್ಲೂ, ಸರ್ಕಾರದವರು ಹೊರಡಿಸುವ ವಾರ್ಷಿಕ

ವರದಿಗಳಲ್ಲೂ (Madras Epigraphical Reports, Mysore Archaeological Reports ಇತ್ಯಾದಿ) ಪ್ರಕಟವಾಗಿವೆ. ಅನೇಕ ವಿದ್ವಾಂಸರ ವಿದ್ವತ್ತಾಪೂರ್ಣವಾದ ಚರಿತ್ರೆಗಳೂ ಪ್ರಕಾಶಿತವಾಗಿರುವುದಂತೂ ಪ್ರಸಿದ್ಧವಾದ ವಿಷಯ.

ಕನ್ನಡ ಸಾಹಿತ್ಯದಲ್ಲಿ ಹೆಸರಾಂತ ಗಳಗನಾಥರು **ಮಾಧವಕರುಣಾವಿಲಾಸ**ದಲ್ಲಿ ವಿದ್ಯಾರಣ್ಯರ ಕಥೆಯನ್ನು ಚಿತ್ರಿಸಲು ಪ್ರಯತ್ನಿಸಿದ್ದಾರೆ. ಈಚೆಗೆ ಹತ್ತು ಭಾಗಗಳಲ್ಲಿ ಪ್ರಕಾಶಿತವಾಗಿರುವ ಅ.ನ.ಕೃ. ಅವರ 'ವಿಜಯನಗರ ಸಾಮ್ರಾಜ್ಯದ ಉಪನ್ಯಾಸ ಮಾಲೆ'ಯೂ ಬಹಳ ಜನಪ್ರಿಯವಾಗಿದೆ. ಇವುಗಳು ಕಲ್ಪನಾಪ್ರಧಾನವಾದರೆ ಡಾ॥ ಡಿ. ವಿ. ಗುಂಡಪ್ಪನವರ 'ವಿದ್ಯಾರಣ್ಯರು ಮತ್ತು ಅವರ ಸಮಕಾಲೀನರು' (ಎರಡು ಭಾಗ) ವಿಚಾರಪೂರ್ಣವಾದ ಪ್ರಾಮಾಣಿಕ ಗ್ರಂಥ. ಇದೇ ರೀತಿ ಧಾರವಾಡ ದಲ್ಲಿ ಪ್ರಕಾಶಿತವಾದ ದೇಸಾಯಿ ಪಾಂಡುರಂಗರಾಯರ 'ವಿಜಯನಗರ ಸಾಮ್ರಾಜ್ಯ'ವು (1936) ಕನ್ನಡದಲ್ಲಿರುವ ಏಕಮಾತ್ರ ವಿಸ್ತಾರವಾದ ಚರಿತ್ರೆ.

ಆದರೆ ಇಲ್ಲಿ ನನ್ನ ಪ್ರಯತ್ನ ವಿಸ್ತಾರದ ಕಡೆ ಇಲ್ಲ; ಸಂಗ್ರಹಿಸುವುದೇ ಉದ್ದೇಶ ವಾಗಿದೆ. ಹಂಪೆಯನ್ನು ನೋಡಲು ಬಂದವರಿಗೆ 'ವಿಜಯನಗರದ ಅವಶೇಷ'ಗಳ ಮಹತ್ವವನ್ನು ತಿಳಿಯಲು ಎಷ್ಟು ಅತ್ಯಾವಶ್ಯಕವೋ ಅಷ್ಟು ಮಾತ್ರ ಕಥೆಯನ್ನು, ಆದರೆ ಪ್ರಾಮಾಣಿಕವಾಗಿ-ನವೀನ ಸಂಶೋಧನೆಗಳಿಗೆ ಒಳಪಟ್ಟು ಸಯುಕ್ತಿಕವಾಗಿರುವಂತೆ, ಈ ಮುಂದೆ ಹೇಳಲಾಗಿದೆ.

ಹುಚ್ಚು ದಬ್ಬಾಳಿಕೆಗೆ ಪ್ರತಿಕ್ರಿಯೆ—ಮಹಮ್ಮದ್ ಬಿನ್ ತೊಗಲಖನ ಹುಚ್ಚು ದಬ್ಬಾಳಿಕೆಯ ವಿಷಯವನ್ನು ಹಿಂದೆಯೇ (ಪುಟ 116) ಪ್ರಸ್ತಾಪಿಸಲಾಗಿ ತ್ತಷ್ಟೆ. ಬರಬರುತ್ತ ಜನರ ಸಹನೆ ಮಿತಿಮೀರಿತು. ಅವನ ಹುಚ್ಚು ಯೋಜನೆಗಳ ಪರಿಣಾಮವಾಗಿ ಭಂಡಾರವೆಲ್ಲ ಬರಿದಾಗಲು ಅವನು ರೈತರ ಮೇಲೆ ಹೇರಿದ ಭಾರಿ ತೆರಿಗೆ ಹೊರೆಯನ್ನು ತೆರಲಾರದೆ ರೈತರು ಮನೆಮಾರುಗಳನ್ನು ತ್ಯಜಿಸಿ ದನಕರುಗಳನ್ನು ಅಟ್ಟಿ ಬಿಟ್ಟು ಕಾಡು ಸೇರಿದರು. ಈ ನಿರ್ದಯಿ ಅವರನ್ನು ಅಲ್ಲಿಯೂ ಬಿಡದೆ ಕಾಡುಮೃಗ ಗಳಂತೆ ಬೇಟೆಯಾಡಿದನು. ಹೊಲ-ಗದ್ದೆಗಳು ಉಳುವವರಿಲ್ಲದೆ-ಬಿತ್ತುವರಿಲ್ಲದೆ ಬೆಂಗಾಡಾ ದವು. ಎಲ್ಲೆಲ್ಲೂ ಕ್ಷಾಮಡಾಮರಗಳು ಅಡರಿದವು. ಜನರಿಗೆ ಸಹಿಸಲಾರದಷ್ಟು ಕಷ್ಟನಿಷ್ಠುರ ಗಳಾದವು. ರಾಜ್ಯವನ್ನು ನೋಡಿಕೊಳ್ಳಲು ನಿಯುಕ್ತರಾಗಿದ್ದ ಅಧಿಕಾರಿಗಳ ಕ್ರೂರ ಅತ್ಯಾಚಾರಗಳನ್ನು[1] ತಡೆಯಲಾರದೆ ಪ್ರಜೆಗಳು ಎಲ್ಲೆಲ್ಲೂ ತಿರುಗಿಬಿದ್ದರು. ಸಾಲದುದಕ್ಕೆ

---

1 ಆ ಕಾಲದಲ್ಲಿ ಮುಸ್ಲಿಂ ಅಧಿಕಾರಿಗಳು ಹಿಂದುಗಳನ್ನು ಎಷ್ಟೆಷ್ಟು ಬಗೆಯಾಗಿ ಹಿಂಸಿಸುತ್ತಿದ್ದರೆಂಬುದು ಅವರ ಲೇಖನಗಳಿಂದಲೇ ಗೊತ್ತಾಗುತ್ತದೆ. "ಕೈಕಾಲುಗಳನ್ನೂ ಕಿವಿ ಮೂಗುಗಳನ್ನೂ ಕತ್ತರಿಸಿ ಹಾಕುವುದು: ಕಣ್ಣುಗಳನ್ನು ಕೀಳಿಸುವುದು, ಸೀಸ ಕಾಯಿಸಿ ಕರಗಿಸಿ ಗಂಟಲಿಗೆ ಸುರಿಯುವುದು; ಸುತ್ತಿಗೆಗಳಿಂದ ಮೈ ಎಲುಬುಗಳನ್ನು ಮುರಿಯುವುದು

ಹಸಿದ ತೋಳಗಳಂತೆ ರಾಜ್ಯದಾಹ ಪೀಡಿತರಾದ ಮುಸ್ಲಿಂ ಪ್ರಾಂತಾಧಿಕಾರಿಗಳು ಅಲ್ಲಲ್ಲೆ ಸ್ವತಂತ್ರರಾಗಲು ಹವಣಿಸುತ್ತಿದ್ದರು ; ಸ್ವಲ್ಪಮಟ್ಟಿಗೆ ಇವರೂ ಜನತೆಯನ್ನು ದಂಗೆಯೇಳಲು ಹುರಿದುಂಬಿಸುತ್ತಿದ್ದರು. ಹೀಗಾಗಿ ರಾಜ್ಯದ ಮೂಲೆ ಮೂಲೆಗಳಲ್ಲೆಲ್ಲಾ ದಂಗೆಗಳೂ ಬಂಡಾಯಗಳೂ ಏಳಲಾರಂಭಿಸಿದವು. ಮೊದಲು ಮುಲ್ತಾನಿನಲ್ಲಿ, ಆಮೇಲೆ ಬಂಗಾಳದಲ್ಲಿ, ಮಲಬಾರಿನಲ್ಲಿ ಲಾಹೋರಿನಲ್ಲಿ, ಪುನಃ ಮುಲ್ತಾನಿನಲ್ಲಿ. ಅನಂತರ ಸಾಗರದಲ್ಲಿ, ಈಗ ವರಂಗಲ್ಲಿನಲ್ಲಿ, ಬಳಿಕ ಅಯೋಧ್ಯೆಯಲ್ಲಿ ಬೀದರಿನಲ್ಲಿ, ಇತ್ತ ದೇವಗಿರಿಯಲ್ಲಿ, ಅತ್ತ ಗುಜರಾತಿನಲ್ಲಿ ಹೀಗೆ ಎಲ್ಲೆಲ್ಲೂ ಗಲಭೆಗಳೇ ಗಲಭೆಗಳಾದವು. [1] ಮೊಹಮ್ಮದ್ ಇವನ್ನು ಮೊದಮೊದಲು ದರ್ಪದಿಂದ ಉಗ್ರವಾಗಿ ದಮನ ಮಾಡಿದ. ಆದರೆ ಒಬ್ಬನಿಗೆ ಎಷ್ಟು ಕಡೆ ಅಡ್ಡಾಡಲು ಸಾಧ್ಯವಾದೀತು ?

ಹಿಂದುಗಳಿಗೆ ಸುವರ್ಣಯೋಗ—ದೂರ ದಕ್ಷಿಣದಲ್ಲಿ ಮಧುರೆಯಲ್ಲಿ ಸುಲ್ತಾನನ ಪ್ರಾಂತಾಧಿಕಾರಿಯಾಗಿ (ನಾಯಬನಾಗಿ) ದ್ದ ಜಲಾಲ್-ಉದ್‌ದೀನನು 1333-34 ರಲ್ಲಿ [2] ದಿಲ್ಲಿಯ ಆಡಳಿತ ಪ್ರತಿಭಟಿಸಿ ಸ್ವತಂತ್ರನಾಗಿ ಜಲಾಲ್-ಉದ್ದೀನ್ ಅಹಸನ್ ಶಾ ಎಂಬ ಹೆಸರಿನಿಂದ ಸುಲ್ತಾನರಂತೆ ಬಿರುದುಬಾವಲಿಗಳನ್ನು ಧರಿಸಿ ತನ್ನ ಹೆಸರಿನಲ್ಲಿ ನಾಣ್ಯಗಳನ್ನೂ ಮುದ್ರಿಸಿದ. ಈ ಸಮಾಚಾರ ತಿಳಿದ ಕೂಡಲೇ ತೊಗಲಖನು ಅವನನ್ನು ದಂಡಿಸಬೇಕೆಂದು ಹೊರಟು ವರಂಗಲ್ಲಿನವರೆಗೂ ನುಗ್ಗಿಬಂದ. ಆದರೆ ಅಲ್ಲಿ ಅವನ ಸೈನ್ಯವೂ ಅವನೂ ಸಾಂಕ್ರಾಮಿಕ ಜಾಡ್ಯಕ್ಕೆ ಸಿಕ್ಕಿಬಿದ್ದ ಕಾರಣ ಹಾಗೆಯೇ ಹಿಮ್ಮೆಟ್ಟಬೇಕಾಗಿ ಬಂತು. ಅವನ ಹೆಸರು ಕೆಡವುದಕ್ಕೆ ಇಷ್ಟೇ ಸಾಕಾಗಿತ್ತು ; ಜೊತೆಗೆ ಅವನು ಸತ್ತೇ ಹೋದನೆಂಬ ಸುಳ್ಳು ಸುದ್ದಿಯೂ ಸಹ ಹೇಗೋ ಹರಡಿತು. ಇದರಿಂದ ದಂಗೆಕಾರರಿಗೆ, ಹಿಂದೂ ಮುಸ್ಲಿಂ ಎರಡು ಪಂಗಡದವರಿಗೂ ಮತ್ತಷ್ಟು ಬೆಂಬಲ ಸಿಕ್ಕಿತು. ಅವರಲ್ಲೂ ಅನೇಕ ವರ್ಷಗಳಿಂದ ಪದಚ್ಯುತರಾಗಿ ರಾಜ್ಯಕೋಶಗಳನ್ನು ಕಳೆದುಕೊಂಡು ಖಿನ್ನರಾಗಿದ್ದ ಹಿಂದೂ ನಾಯಕರಿಗಂತೂ ಈ ಸಮಯ ತಮ್ಮ ತಮ್ಮ ರಾಜ್ಯಕೋಶಗಳನ್ನು ಸಾಧಿಸಿ ಗೆದ್ದುಕೊಳ್ಳಲು ಉತ್ತಮವಾದ ಸುವರ್ಣ

...ಕಬ್ಬಿಣದ ಮೊಳೆಗಳನ್ನು ಕೈಗಳಿಗೆ ಕಾಲುಗಳಿಗೆ ಬಡಿಯುವುದು....ಇವೂ ಮತ್ತು ಇದೇ ವಿಧವಾದ ಇನ್ನೂ ಅನೇಕ ಹಿಂಸೆಗಳನ್ನು ಕೊಡುತ್ತಿದ್ದರು. ಇಂಥಾ ಕೃತ್ಯಗಳನ್ನು ಆಚರಿಸುವುದು ಅಯೋಗ್ಯ"ವೆಂದು ಹೇಳಿ ಮುಂದೆ ತಾನೇ ಇಂಥಾ ಕೃತ್ಯಗಳನ್ನು 'ಖುದಾನ ಪ್ರೇರಣೆಯಿಂದ' ಮಾಡಿದಂತೆ ಫಿರೋಜ್ ಶಾ ಹೇಳಿದ್ದಾನೆ. ದಿಲ್ಲಿಯನ್ನಾಳಿದ ಮುಸಲ್ಮಾನ ದೊರೆಗಳಲ್ಲೆಲ್ಲಾ ಅತ್ಯಂತ ಕರುಣಾಮೂರ್ತಿಯೆನಿಸಿಕೊಂಡ ಫಿರೋಜನೇ ಇಂಥಾ ಶಿಕ್ಷೆ ಕೊಟ್ಟಾಗ ಇನ್ನು ಇತರ 'ನಿರ್ದಯ ಹೃದಯ'ರ ಪಾಡೇನು !! (*His Ins. of S.I.*, p. 192)

1 ಲೇನ್‌ಪೂಲ್, ಮೆಡೀವಲ್ ಇಂಡಿಯಾ, VI ಅ.

2 ಇದು ನೀಲಕಂಠಶಾಸ್ತ್ರಿಗಳ ಮತ (*His S. I.*, p. 228). ಆದರೆ *Historical Inscriptions of South India* by R. Sewell & S. K. Aiyangar, M.A.; Ph. D. (p. 363) ಪ್ರಕಾರ 1335 ರಲ್ಲಿ ನಡೆಯಿತು.

ಯೋಗದಂತಿತ್ತು. ಹೀಗೆ ಸಿಕ್ಕ ಸುಯೋಗವನ್ನು ಸರಿಯಾಗಿ ಉಪಯೋಗಿಸಿಕೊಂಡು ಸಮಯ ಸಾಧಿಸಿದವರಲ್ಲಿ ಹೊಯಿಸಳ ವಂಶದ ಕಡೆಯ ದೊರೆಯೂ ಹೆಸರಿಗೆ ತಕ್ಕಂತೆ ನಿಜವಾಗಿ ವೀರನೂ ಆಗಿದ್ದ ಮುಮ್ಮಡಿ **ವೀರ ಬಲ್ಲಾಳನೇ** ಪ್ರಧಾನ ಅಗ್ರಗಾಮಿ. ಅವನು ತಾನೊಬ್ಬನೇ ಅಲ್ಲದೆ ಸಂಗಡಿಗ ಹಿಂದೂ ನಾಯಕರೆಲ್ಲರನ್ನೂ ಹುರಿದುಂಬಿಸಿ ಪರಾಕ್ರಮ-ಸ್ವಾವಲಂಬನೆಗಳ ಹೆದ್ದಾರಿ ಹಾಕಿ ಕೊಟ್ಟು ಸ್ವಾತಂತ್ರ್ಯಜ್ವಾಲೆ ಭುಗಿಲ್ಲೆಂದು ಹತ್ತಿಕೊಳ್ಳುವಂತೆ ಗಾಳಿ ಹಾಕಿದನು. ಕೆಲವು ಚರಿತ್ರಕಾರರು ಈ ವೀರನನ್ನು ಅಲ್ಲಗಳೆದಿರುವುದನ್ನು ಡಾಕ್ಟರ್ ಎಸ್. ಕೃಷ್ಣಸ್ವಾಮಿ ಅಯ್ಯಂಗಾರರು ವಿರೋಧಿಸಿ ಬಲ್ಲಾಳನ ರಾಜತಂತ್ರದ ನೈಪುಣ್ಯವನ್ನೂ ಅವನು ಗುಪ್ತವಾಗಿ ಹವಣಿಸಿದ ಸಮರ ಸನ್ನಾಹವನ್ನೂ ವರ್ಣಿಸಿ ವಿಜಯನಗರದ ಸ್ಥಾಪನೆಯಲ್ಲಿ ಅವನ ಸನ್ನಾಹಗಳ ಮಹತ್ವವನ್ನೂ ಪ್ರತಿಪಾದಿಸಿ ತೋರಿಸಿದ್ದಾರೆ.[1]

ರಾಜ್ಯತಂತ್ರಜ್ಞನಾದ ಬಲ್ಲಾಳ ದಕ್ಷಿಣದ ರಾಜಕೀಯ ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದ. ಈಗಾಗಲೆ ಮುಸಲ್ಮಾನರ ಅಧಿಕಾರ ಬೇರುಗಳು ದಕ್ಷಿಣ ಭಾರತದ ಉತ್ತರ-ದಕ್ಷಿಣ ಎರಡು ಕಡೆಗಳಲ್ಲೂ ಊರಿನಿಂತು ಬಲಿಯತೊಡಗಿದ್ದುವು. ಇತ್ತ ದೇವಗಿರಿಯಲ್ಲೂ ಅತ್ತ ಮಧುರೆಯಲ್ಲೂ ನಿಯುಕ್ತರಾಗಿ ವೃದ್ಧಿಹೊಂದುತ್ತಿದ್ದ ದಿಲ್ಲೀ ಸುಲ್ತಾನನ ನಾಯಬರೆಂಬ ಪ್ರಾಂತಾಧಿಕಾರಿ (ಗವರ್ನರ್) ಗಳು ಕಲೆತು ಒಂದಾಗಿದ್ದರೆ, ಹಿಂದುಗಳು ತಲೆಯೆತ್ತುವ ಆಶೆಗೆ ಸಂಪೂರ್ಣವಾಗಿ ತಿಲಾಂಜಲಿ ಕೊಡ ಬೇಕಾಗುತ್ತಿತ್ತು. ಇದಕ್ಕೆ ಅಡ್ಡಿಯಾಗುವಂತೆ ಎರಡಕ್ಕೂ ನಡುವೆ ಪ್ರಬಲವಾದೊಂದು ಪ್ರಭುಶಕ್ತಿಯನ್ನು ಸ್ಥಾಪಿಸಿ ದಕ್ಷಿಣಕ್ಕೆ ಉತ್ತರದ ಸಂಬಂಧವನ್ನು ಮೊಟ್ಟಮೊದಲು ಕತ್ತರಿಸಬೇಕಾಗಿತ್ತು. ಇಂಥಾ ಪ್ರಭುಶಕ್ತಿಯನ್ನು ನಿಲಿಸುವುದಕ್ಕೆ ಹಂಪೆ-ಆನೆಗೊಂದಿ-ಕಂಪ್ಲಿಗಳಿರುವ ತುಂಗಭದ್ರಾ ತೀರದ ಪ್ರದೇಶ ಐನಾತಿ ಸ್ಥಳವಾಗಿತ್ತು. ನಡುನಾಡಿನಲ್ಲಿ ನೆಲೆಸಿ ದುರ್ಭೇದ್ಯಗಳಾದ ಗಿರಿರಾಜಿಗಳಿಂದ ಪರಿವೇಷ್ಟಿತವಾಗಿ ಬಹು ಫಲವತ್ತಾದ ಈ ಪ್ರದೇಶ ಉತ್ತರದ ರಾಜಕೀಯ ತಂತ್ರದಲ್ಲಿ ಆಯಕಟ್ಟಿನ ಹಾಯ್ಗಡವಾಗಿತ್ತು. ಉತ್ತರದಿಂದ ಬರುವ ಆಕ್ರಮಣಗಳನ್ನು ತಡೆಗಟ್ಟಲು ಅದು ಬಲು ಅನುಕೂಲವಾದ ಕೇಂದ್ರವಾಗಿತ್ತು, ಆದರೆ ರಕ್ಷಿಸದೆ ಹೋದರೆ ಅಷ್ಟೇ ಸುಲಭ ಭೇದ್ಯವಾದ ದುರ್ಬಲ ಸ್ಥಾನವೂ ಆಗಿತ್ತು. ಈ ಕಾರಣದಿಂದಲೇ ಈ ಗಡಿನಾಡುಪ್ರಾಂತ ವಿಜಯನಗರದ ಕಾಲದಲ್ಲೇ ಅಲ್ಲದೆ ಅದಕ್ಕೆ ಹಿಂದೆಯೂ, ಈಚೆಗೆ ಬ್ರಿಟಿಷರ ಕಾಲದಲ್ಲೂ, ಅಷ್ಟೇಕೆ, ಮೊನ್ನೆ ನಡೆದ ರಜಾಕಾರರ ಹಾವಳಿ ಸಮಯದಲ್ಲಿ ಸಹ, ಗಡಿಗಾವಲು ಠಾಣೆಯಾಗಿ ಪಾತ್ರವಹಿಸಿದೆ. ಡಾ|| ಎನ್. ವೆಂಕಟರಮಣಯ್ಯ ಹೇಳುವಂತೆ 'ವಿಜಯನಗರ

---

1 'The Character and Significance of the Empire of Vijayanagar in Indian History' in the *Vijayanagara Sex-centenary Commemoration Volume*, pp 4–10.

ಸ್ಥಾಪಿತವಾದ ಪರಿಸ್ಥಿತಿಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಕಂಪಿಲಿ ರಾಜ್ಯದ ಚರಿತ್ರೆಯ ಅರಿವು ಅವಶ್ಯವಾಗಿ ಬೇಕು.'[1] ಆನೆಗೊಂದಿಯ ವಿಚಾರವೂ ಅಷ್ಟೇ ಅವಶ್ಯಕ.

ಕಂಪಿಲಿ ರಾಜ್ಯ ಮತ್ತು ಕುಮಾರರಾಮ—ಕಂಪಿಲಿ (ಅಥವಾ ಕಂಪ್ಲಿ) ಹೊಸ ಪೇಟೆಗೆ ಸುಮಾರು ಇಪ್ಪತ್ತುಮೈಲಿ ದೂರದಲ್ಲಿ ಪೂರ್ವಕ್ಕಿದೆ. ಇದು ತುಂಗಭದ್ರಾ ನದೀ ತೀರದಲ್ಲಿ ಹಂಪೆ ಆನೆಗೊಂದಿಗಳ ಕೆಳಗೆ ಸುಮಾರು ಎಂಟುಮೈಲಿ ದೂರದಲ್ಲಿದೆ. ಇಬ್ನ್ ಬತೂತ ಮೊದಲಾದ ಕೆಲವು ಫಾರಸೀ ಇತಿಹಾಸಕಾರರು ಕಂಪಿಲಿಯನ್ನು ಕಂಪಿಲ ಅಥವಾ ಕಂಬಿಲ[2] ಎಂದು ಕರೆದಿದ್ದಾರೆ. ಅನೇಕ ಶಿಲಾಶಾಸನಗಳಲ್ಲಿ (ಉದಾ ವಿಜಯ ವಿಠಲನ ಗುಡಿಯ ಶಾಸನ A. R. No. 11 of 1904) ಕಂಪಿಲಿ ಎಂಬ ರೂಪವೇ ಇದೆ. ಒಂದುಕಡೆ ಮಾತ್ರ (ಅದೇ ಗುಡಿಯ ಇನ್ನೊಂದು ಶಾಸನ, A. R. 3 of 1904) ಕಂಪಿಲಾಪುರ ಎಂಬ ಪ್ರಯೋಗವಿದೆ. 'ಕುಮಾರರಾಮನ ಕತೆ' ಎಂಬ (ಸಾಂಗತ್ಯ) ಕಾವ್ಯದ[3] ಪ್ರಕಾರ ಮುಮ್ಮಡಿ ಸಿಂಗೆಯ ನಾಯಕನೆಂಬ ದೊರೆ ಈ ಸಣ್ಣ ರಾಜ್ಯವನ್ನು ಮುಂದಕ್ಕೆ ತಂದನೆಂದು ತಿಳಿದುಬರುತ್ತದೆ; ಇವನೂ ಇವನ ಪೂರ್ವಿಕರೂ ದೇವಗಿರಿಯ ಯಾದವರ ಸಾಮಂತರು. ಅನೇಕ ಶಾಸನಗಳ[4] ಆಧಾರದಿಂದ ಈ ಸಿಂಗೆಯ ಬಹಳ ಪ್ರಬಲನಾಗಿದ್ದನೆಂದು ತಿಳಿದು ಬರುತ್ತದೆ. ಅವನ ಮಗ ಕಂಪಿಲದೇವನೂ ಬಹಳ ಸಮರ್ಥ; ಇವನು ಕುಮ್ಮಟ ಹೊಸದುರ್ಗಗಳೆಂಬ ಕೋಟೆ ಗಳನ್ನು ಕಟ್ಟಿಸಿದನು. ಅವನ ಮಗನೇ ಕನ್ನಡ ವೀರರತ್ನಗಳಲ್ಲಿ ಒಬ್ಬನಾದ ಕಡುಗಲಿ ಕುಮಾರರಾಮ.[5]

ಆ ಕಾಲದಲ್ಲಿ ಕಂಪಿಲರಾಜ್ಯದ ಸುತ್ತಲೂ ಪ್ರಬಲವಾದ ರಾಜ್ಯಗಳಿದ್ದುವು; ಅವು ಗಳೊಡನೆ ಕಾದಾಟವಾಗುವುದು ಸ್ವಾಭಾವಿಕವೇ ಆಗಿತ್ತು. ಕುಮಾರರಾಮ ಹೊಯ್ಸಳ ಬಲ್ಲಾಳನನ್ನೂ ವರಂಗಲ್ಲಿನ ಪ್ರತಾಪರುದ್ರನನ್ನೂ ಎದುರಿಸಿ ಸೋಲಿಸಿದ. ಮಹಮ್ಮದ್ ತೊಗಲಖನ ಒಬ್ಬ ಮುದ್ದುಮಗಳು ಬಾಬಮಿ ಕುಮಾರರಾಮನ ಕೀರ್ತಿಯನ್ನು ಕೇಳಿ ಇವನನ್ನೇ ವರಿಸಬೇಕೆಂದು ಬಯಸಿದಳು. ಆದರೆ 'ಪರದಾರ ಸಹೋದರ'ನಾಗಿದ್ದ ರಾಮ ಅವಳನ್ನು ತಿರಸ್ಕರಿಸಿದ್ದರಿಂದ ತೊಗಲಖ್ ಸಿಟ್ಟಾಗಿ ಕಂಪಿಲಿಯನ್ನು ನಾಶಪಡಿಸಲು ನೇಮಿಖಾನನನ್ನು ಕಳುಹಿಸಿದ. ಕನ್ನಡವೀರನ ಮುಂದೆ ಅವನಾಟಸಾಗದೆ ಅವನು ಸೋತು

1 *Further Sources*, Vol. I, p. 9.

2 ಅರಬೀ ಭಾಷೆಯಲ್ಲಿ ಪಕಾರವೇ ಇಲ್ಲ; ಅವರು ಪಕಾರಕ್ಕೆ ಬಕಾರವನ್ನೇ ಬಳಸುತ್ತಾರೆ.

3 ಇದು ಕ್ರಿ.ಶ. ಹದಿನಾರನೆಯ ಶತಮಾನದ ರಚನೆಯಾಗಿರಬೇಕೆಂದು ವಿದ್ವಾಂಸರ ಮತ.

4 E. C. vii ಚನ್ನಗಿರಿ 24, xi ಹಿರಿಯೂರು 86, ಇತ್ಯಾದಿ.

5 ಕುಮಾರರಾಮನ ವಿಷಯವಾಗಿ ಹೆಚ್ಚಿನ ಸಂಗತಿಗಳನ್ನು ಆಲೂರು ವೆಂಕಟರಾಯರ 'ಕನ್ನಡ ವೀರರತ್ನಗಳು' ಮತ್ತು ದೇಜಗೌ ಅವರ 'ಕಡುಗಲಿ ಕುಮಾರರಾಮ' ಎಂಬ ಗ್ರಂಥಗ ಳಿಂದ ತಿಳಿಯಬಹುದು.

ಬಿದ್ದಂಬೇಳ ದಿಲ್ಲಿಗೆ ಪರಾರಿಯಾದನು. ಈ ಮಧ್ಯೆ ಇನ್ನೊಂದು ವಿಷಮಪ್ರಸಂಗ ಒದಗಿತು. ತೊಗಲಖ್‌ನ ಸಹೋದರನ ಮಗನಾದ ಬಹಾ-ಉದ್ ದೀನ್ ಎಂಬುವನು ಸುಲ್ತಾನನನ್ನು ಪ್ರತಿಭಟಿಸಿ ಬಂಡಾಯವೆಬ್ಬಿಸಿದ. ತನ್ನನ್ನು ಕೈಸೆರೆಹಿಡಿಯಲು ಬಂದ ದಿಲ್ಲಿ ಸೈನ್ಯಕ್ಕೆ ಸೋತು ಅವನು ಕಂಪಿಲರಾಜನನ್ನು ಶರಣುಹೊಕ್ಕ. ಈ ಧರ್ಮದ ಅನುಸಂಕಟಕ್ಕೆ ಸಿಕ್ಕಿ ಗತ್ಯಂತರವಿಲ್ಲದೆ ಅವನಿಗೆ ಆಶ್ರಯಕೊಟ್ಟಿದ್ದರಿಂದ ದಿಲ್ಲಿಯ ಸೈನ್ಯ ಕಂಪಿಲಿಯ ಮೇಲೆ ಧಾಳಿಮಾಡಿತು. ದೈವ ತುಂಬಿಬಂದಿತ್ತು, ಶತ್ರುಗಳು ಕೋಟೆಯೊಳಗೆ ನುಗ್ಗಿಬಿಟ್ಟರು. ಅಂತಃಪುರದವರು ಅಗ್ನಿಗೆ ಆಹುತಿಯಾದರು. ಪುರುಷರು ಯುದ್ಧದಲ್ಲಿ ಮಡಿದು ವೀರಸ್ವರ್ಗವನ್ನೈದಿದರು. ಇತ್ತ ಕಂಪಿಲಿ ಮುಸಲ್ಮಾನರ ಆಳ್ವಿಕೆಗೆ ಒಳಗಾಯಿತು; ಅಲ್ಲಿಗೆ ಮಲ್ಲಿಕ್ ನಾಯಬನೆಂಬ ಅಧಿಕಾರಿ ನಿಯುಕ್ತನಾದ. ಇದೀಗ ಕಂಪಿಲಿಯ ದುರಂತ ಕತೆ. (ಹಂಪೆಯ ರಾಣಿನಿವಾಸದ ಅವರಣದಲ್ಲಿರುವ ಒಂದು ಗಾರ್ಡ್ಸ್ ಕ್ವಾರ್ಟರ್'ಗೆ ಕುಮಾರರಾಮನ ಗರಡೀಮನೆಯೆಂದು ಹೆಸರು ಪ್ರಸಿದ್ಧವಾಗಿದೆ. ಕುಮಾರರಾಮನಿಗೂ ಇದಕ್ಕೂ ಹೇಗೆ ಸಂಬಂಧವುಂಟಾಯಿತೋ ತಿಳಿಯದು.)

ಆನೆಗೊಂದಿಯ ರಾಜ್ಯ—ಆನೆಗೊಂದಿಯಲ್ಲಿ ಕ್ರಿ. ಶ. ಎಂಟೊಂಬತ್ತನೆಯ ಶತಮಾನದಿಂದಲೇ ಒಂದು ಹಿಂದೂರಾಜ್ಯ ನೆಲೆಸಿತ್ತೆಂದು ಫರಿಶ್ತಾ ಹೇಳುತ್ತಾನೆ. ಈ ಊರಿನ ಹೆಸರು ಆನೆಗೊಂದಿ, ಆನೆಯಗೊಂದಿ, ಆನೆಯಗುಂದಿ, ಆನೆಗುಂದಿ ಎಂದು ನಾನಾರೀತಿ ಶಿಲಾಶಾಸನಗಳಲ್ಲಿ ಬರೆಯಲ್ಪಟ್ಟಿದೆ. ಕೆಲವು ತೆಲುಗು ಸಾಹಿತ್ಯ ಗ್ರಂಥಗಳಲ್ಲೀ ಆನೆಗೊಂದಿ ಎಂಬ ರೂಪ ಕಂಡು ಬರುವುದರಿಂದ ಇದೇ ಎಲ್ಲಕ್ಕಿಂತ ಪ್ರಾಮಾಣಿಕವಾದ ಶುದ್ಧರೂಪ. (ಈಗ ಕೆಲವರು ಆನಾಗುಂದಿ ಎಂದೂ ಬರೆಯುವರು.) ಇದಕ್ಕೆ ಈ ಹೆಸರು ಬರಲು ಕಾರಣವು ಶಿವಪುರಾಣದ ಒಂದು ಕತೆಯಲ್ಲಿ ಹೇಳಿದೆಯಂತೆ. ಈ ಸ್ಥಳದಲ್ಲಿದ್ದ ಒಂದು ಆನೆಯ ತಲೆಯನ್ನು ಕಡಿದು ಅದನ್ನೇ ಗಣೇಶನ ಮುಖಕ್ಕೆ ಜೋಡಿಸಿದರಂತೆ. ಅದಕ್ಕೇ ಇದು ಆನೆಗೊಂದಿಯಾಯಿತು. ಇನ್ನೊಂದು ಕತೆಯೂ ಉಂಟು. ಅಜ್ಞಾತವಾಸಾನಂತರ ಪಾಂಡವರು ಕೆಲಕಾಲ ಈ ಸ್ಥಳದಲ್ಲಿದ್ದರಂತೆ. ಆಗ ಅವರು ಇದನ್ನು ದಕ್ಷಿಣದ ಹಸ್ತಿನಾವತಿ (ಹಸ್ತಿ–ಆನೆ) ಎಂದು ಕರೆದದ್ದರಿಂದ ಅದೇ ಕಾಲಾಂತರದಲ್ಲಿ ಆನೆಗೊಂದಿ ಎಂದಾಯಿತಂತೆ. ಅದೇನಾದರೂ ಇರಲಿ. ಇದು ವಾಲಿ–ಸುಗ್ರೀವರ ರಾಜಧಾನಿಯಾದ ಕಿಷ್ಕಿಂಧೆಯೇ ಆಗಿತ್ತೆಂಬ ವಿಷಯವನ್ನು ಹಿಂದೆ ಪಂಪಾಮಾಹಾತ್ಮ್ಯದಲ್ಲಿ (ಅಧ್ಯಾಯ 67, ಪುಟ 91-2) ಸೂಚಿಸಲಾಗಿದೆ. ಇದಕ್ಕೆ ಪಂಪಾಸರೋವರ, ವಾಲಿಕಾಷ್ಠಗಳು ಸುತ್ತಮುತ್ತ ಇರುವುದೇ ಪೋಷಕಪ್ರಮಾಣ. ಕುಂತಿ, ದ್ರೋಣ, ಸಾಂಬ ಮೊದಲಾದವರು ಈ ಕ್ಷೇತ್ರದಲ್ಲಿ ತಪಸ್ಸು ಮಾಡಿದ ವಿಷಯಗಳೂ ವೇದಗುಪ್ತ ಅಗ್ರಹಾರ ಕಟ್ಟಿಕೊಂಡಿದ್ದ ಪ್ರಸಂಗವೂ ಹಿಂದೆ ಬಂದಿವೆ (ಅಧ್ಯಾ. 91, 114 ಇತ್ಯಾದಿ). ಹೀಗೆ ಆನೆಗೊಂದಿ ಪುರಾಣ ಪ್ರಸಿದ್ಧವಾದುದಲ್ಲದೆ ಇತಿಹಾಸ ಪ್ರಸಿದ್ಧವೂ ಆಗಿದೆ.

ವಿಜಯನಗರ ಸ್ಥಾಪನೆಗೆ ಹಿಂದೆ ಇಲ್ಲಿ ಆಳುತ್ತಿದ್ದ ಅರಸರ ಹೆಸರುಗಳು ನಮಗೆ 'ರಾಜವಂಶಾವಳಿ'ಯೆಂಬ ಪುರಾತನ ಗ್ರಂಥದಿಂದ ಗೊತ್ತಾಗಿವೆ. ಇವರಲ್ಲಿ ಶ್ರೀರಂಗ

ರಾಯನೇ ಮೊದಲಿಗ. ಆಮೇಲೆ ಕ್ರಮವಾಗಿ ನಂದ (ಕ್ರಿ. ಶ. 1014-76), ಚಾಲುಕ್ಯ (1076-1117), ವಿಜಯಧ್ವಜ, (1117-56) ಮೊದಲಾದವರು ಆಳಿದರು; ಈ ವಿಜಯಧ್ವಜನು ತುಂಗಭದ್ರೆಯ ದಕ್ಷಿಣತೀರದಲ್ಲಿ ಒಂದು ಕೋಟೆಯನ್ನು ಕಟ್ಟಿಸಿದ್ದ ನಂತೆ. ಅವನ ವಂಶದಲ್ಲೆ ಮುಂದೆ ಜಂಬುಕೇಶ್ವರರಾಯ (1291-1334) ಅರಸಾಗಿ ಆಳಿದ. ಇವನ ಅಂತ್ಯಕಾಲದಲ್ಲಿ ಆನೆಗೊಂದಿಯಲ್ಲಿ ಏಕಾಏಕಿ ಅಸಂತೋಷಾಗ್ನಿ ಹತ್ತಿ ಕೊಂಡಿತು. ಅದೇ ನೆಪವಾಗಿ ವಿಜಯನಗರ ಸ್ಥಾಪನೆಯಾಯಿತು. ಮೊಹಮ್ಮದೀ ಯರು ಕಂಪಿಲಿಯನ್ನು ಮುತ್ತಿದಂತೆ ಆನೆಗೊಂದಿಯ ಮೇಲೂ ಧಾವಿಸಿ ಬಂದರು. ಜಂಬುಕೇಶ್ವರನಿಗೆ ಈ ಸುದ್ದಿ ಮೊದಲೇ ಬಂದಿತ್ತು. ಅವನು ಅರಮನೆಯಲ್ಲಿದ್ದ ಅಪಾರ ಐಶ್ವರ್ಯವನ್ನೆಲ್ಲ ಸಾಗಿಸಿ ರಹಸ್ಯವಾಗಿರಿಸಿ, ವೃದ್ಧನಾಗಿದ್ದರೂ ಮುಸಲ್ಮಾನರನ್ನು ಅಸಾಧಾರಣ ಪರಾಕ್ರಮದಿಂದ ಎದುರಿಸಿದನು. ಅವನ ಯೋಧರೂ ಮಂತ್ರಿಯೂ ಮಡಿದುಬಿದ್ದರು. ಹೋರಾಡಿ ಹೋರಾಡಿ ಜಂಬುಕೇಶ್ವರ ಸೋತೂ ಇದ್ದ, ಅಷ್ಟರಲ್ಲಿ ಅವನ ಕುದುರೆಗೆ ಏಟು ಬಿದ್ದು ಅದು ಕೆಳಕ್ಕೆ ಬೀಳಲು ದೊರೆಯೂ ಕೆಳಕ್ಕೆ ಬಿದ್ದ. ಮುಸಲ್ಮಾನರು ಅವನ ತಲೆಯನ್ನು ಕಡಿದುಹಾಕಿದರು. ಆನೆಗೊಂ ದಿಯ ಸೈನ್ಯ ದಿಕ್ಕಾಪಾಲು ಚದರಿಹೋಯಿತು. ಯುದ್ಧ ಮುಗಿಯಿತು. ಅಂತಃಪುರ ಸ್ತ್ರೀಯರು ಮಾನ ಉಳಿಸಿಕೊಳ್ಳಲು ಅಗ್ನಿಪ್ರವೇಶ ಮಾಡಿದರು. ಹೀಗೆ ಆನೆಗೊಂ ದಿಯೂ ಮುಸಲ್ಮಾನರ ವಶವಾಯಿತು.

ಈ ಕಂಪಿಲಿ-ಆನೆಗೊಂದಿಗಳನ್ನು ಮುಸ್ಲಿಂ ಶಾಸನದ ಸೆರೆಯಿಂದ ಬಿಡಿಸಿ ಪಾರು ಮಾಡುವ ಕೀರ್ತಿ ಸಂಗಮ ಸಹೋದರರ ಪಾಲಿಗೆ ಮೀಸಲಾಗಿತ್ತು.

ಸಂಗಮ ಸಹೋದರರು—ಹದಿನಾಲ್ಕನೇ ಶತಮಾನದಲ್ಲಿ ಹಿಂದುಗಳ ಸ್ವಾತಂತ್ರ್ಯಭೇರಿಯನ್ನು ಮೊಳಗಿಸಲು ಪ್ರಯತ್ನಿಸಿದ ವೀರರು ನೂರಾರು ಜನರಿದ್ದರೂ ಅವರಲ್ಲೆಲ್ಲಾ ಸಂಗಮ ಸಹೋದರರು ಭಾಗ್ಯವಶದಿಂದ ಅಜರಾಮರರಾದರು. ಇವರು ಹರಿಹರ ಕಂಪ ಬುಕ್ಕ ಮಾರಪ್ಪ ಮುದ್ದಪ್ಪ ಎಂದು ಐವರು ಸಹೋದರರು; ಇವರ ತಂದೆ ಸಂಗಮ, ಚಂದ್ರವಂಶಕ್ಕೆ ಸೇರಿದ ಕ್ಷತ್ರಿಯನೆಂದೂ ಧರ್ಮೋದ್ಧಾರ ಮಾಡುವು ದಕ್ಕಾಗಿಯೇ ಭೂಮಿಗೆ ಬಂದಿದ್ದಂತೆಯೂ ಈ ವಂಶದ ರಾಜರ ಅನೇಕ ಶಿಲಾಶಾಸನಗಳು ಸಾರುತ್ತವೆ. ಕಪಿಲಾಶ್ರಮದಲ್ಲಿರುವ ಶಾಸನದಲ್ಲಿ "ಅಸ್ತಿ ಸ್ವಸ್ತಿಮದುದಯೋ ಮುಕ್ತಾ ಮಯಸೂತಿಸಂಭವನ್ಮಹಿಮಾ । ಅನಂತ್ಯಮೂಲನಿಲಯಃ ಸುಪರ್ವಮಹಿತೋ ಯದೋ ರ್ವರೋ ವಂಶಃ ॥ ಅಭೂತ್ತತ್ರ ಕುಲೇ ಶ್ರೀಮಾನಭಂಗುರಗುಣೋದಯಃ । ಅಪಾಸ್ತ ದುರಿತಾಸಂಗಃ ಸಂಗಮೋ ನಾಮ ಭೂಪತಿಃ॥" ಎಂದು ಸಂಸ್ಕೃತದಲ್ಲೂ,[1] ಕೃಷ್ಣಸ್ವಾಮಿ ಗುಡಿಯಲ್ಲಿ ಈಗ ತಂದಿಟ್ಟಿರುವ ಒಂದು ಶಾಸನದಲ್ಲಿ "ಶ್ರೀಮತ್ಸೋಮಾನ್ವಯಕ್ಕುದ್ಭ

1 *S. I. I.*, IX, ii, No. 453, A R. 24 of 1904.

ವಿಶಿಷ್ಟ ಯದುವಂಶಾವನೀಪಾಲರೊಳ್ಸಿಸ್ತೀವು ಶ್ರೀ ಸಂಗಮಕ್ಷ್ಮಾಪತಿ ದೊರೆವಡೆದಂ ತತ್ತನೂಜಂ ಸಮಸ್ತೋರ್ವೀವರಾನ್ಯಂ ರೂಢಿವೆತ್ತಂ ಹರಿಹರನಧಟಂ ತಂನಗೇಂದ್ರಾ ನುಜಂ ಸುತ್ರಾಮೋದ್ದಾಮಪ್ರತಾಪಂ ತಳೆದನಖಿಳ ಭೂಚಕ್ರಮಂ ಬುಕ್ಕರಾಯಂ॥" ಎಂದು ಕನ್ನಡದಲ್ಲೂ[1] ಹೇಳಿದೆ.

ಈ ಐವರಲ್ಲೂ ಹರಿಹರ (ಹಕ್ಕ) ಬುಕ್ಕರ ಹೆಸರು ಬಹಳ ಪ್ರಸಿದ್ಧವಾಗಿದೆ. ಹರಿಹರ ವಯೋಜ್ಯೇಷ್ಠನಾದರೆ ಬುಕ್ಕ ಗುಣಜ್ಯೇಷ್ಠ, ಎಲ್ಲರಿಗಿಂತ ಹೆಚ್ಚು ಸಮರ್ಥ. ಇವರ ಪೂರ್ವೋತ್ತರ ವೃತ್ತಗಳ ಬಗ್ಗೆ ಕಟುವಾದ ಅನೇಕ ಭಿನ್ನಾಭಿಪ್ರಾಯಗಳಿವೆ; ಈ ವಿಷಯವಾಗಿ ಭಾರಿ-ಭಾರಿ ವಾದ-ವಿವಾದಗಳು ಖಂಡನ-ಮಂಡನಗಳು ಬರೆಯಲ್ಪಟ್ಟಿವೆ. ಅದೇನೇ ಇರಲಿ, ಇವರೇ ವಿಜಯನಗರ ಸ್ಥಾಪಿಸಿದರು, ಹೊಯಿಸಳ ಬಲ್ಲಾಳ ದಕ್ಷಿಣದಲ್ಲಿ ನಡೆಸುತ್ತಿದ್ದ ಸಮರ ಸನ್ನಾಹಗಳಿಂದ ಇವರು ಪ್ರಭಾವಿತರಾದರೆಂಬುದರಲ್ಲಿ ಏನೂ ಸಂದೇಹವಿಲ್ಲ. ವಾಸ್ತವವಾಗಿ ಹೊಯಿಸಳ ಬಲ್ಲಾಳನ ಹೊಡೆದಾಟವೇ ವಿಜಯನಗರ ಸ್ಥಾಪನೆಗೆ ದಾರಿ ತೋರಿಸಿಕೊಟ್ಟಿತು. ಆ ಮಾರ್ಗ ಬಿಟ್ಟು ಚ್ಯುತರಾಗದಂತೆ ಸೂಕ್ತ ಸಲಹೆ ಕೊಟ್ಟು ವಿದ್ಯಾರಣ್ಯರು ಅವರನ್ನು ಉದ್ಧರಿಸಿದರು-ಪ್ರಬಲವಾದ ಸಾಮ್ರಾಜ್ಯಕ್ಕೆ ಬೇಕಾದ ದೃಢಶಂಕುಸ್ಥಾಪನೆ ಹಾಕಿಸಿದರು.

ಹೊಯ್ಸಳ ಬಲ್ಲಾಳನ ಹೊಡೆದಾಟ ಸಾಮ್ರಾಜ್ಯ ಸ್ಥಾಪನೆಗೆ ಇಂಬುಗೊಟ್ಟಿತು—ವೀರ ಬಲ್ಲಾಳನನ್ನು ನೋಡಿ ಹಿಂದು ನಾಯಕರಿಗೆಲ್ಲ ಹುರುಪು ಹುಟ್ಟಿತೆಂದು ಹಿಂದೆಯೇ ಹೇಳಲಾಯಿತಷ್ಟೆ. ವರಂಗಲ್ಲಿನ ಪ್ರೋಲಯ ನಾಯಕ, ಕಾಪಯ ನಾಯಕರ ಹಿಂದೆ ಎಪ್ಪತ್ತೈದಕ್ಕೆ ಕಡಿಮೆಯಿಲ್ಲದೆ ಸಣ್ಣ ಪುಟ್ಟ ಹಿಂದೂ ನಾಯಕರು ಬೆಂಬಲ ಕೊಟ್ಟು ನಿಂತು ಮಹಾನದಿಯಿಂದ ಹಿಡಿದು ನೆಲ್ಲೂರು ಜಿಲ್ಲೆಯ ಗುಂಡ್ಲಕಮ್ಮ ವರೆಗಿನ ಭಾಗಗಳಲ್ಲೆಲ್ಲಾ ಮುಸ್ಲಿಂ ಅಧಿಕಾರವನ್ನು ಕಿತ್ತೊಗೆದರು. ಇದನ್ನೆಲ್ಲ ನೋಡಿ ಆನೆಗೊಂದಿ-ಕಂಪಿಲಿಗಳ ಜನರಿಗೂ ಸ್ವಾತಂತ್ರ್ಯದ ಕಿಚ್ಚೇರಿತು, ಅಭೂತಪೂರ್ವವಾದ ಹುರುಪು ಬಂತು. ಅದೇ ಪ್ರಾಂತದಲ್ಲಿ ತಪಶ್ಚರಣೆ ಮಾಡಿ ಸಿದ್ಧಿ ಪಡೆದಿದ್ದ ವಿದ್ಯಾರಣ್ಯರು ಅವರನ್ನು ಮತ್ತಷ್ಟು ಪ್ರೋತ್ಸಾಹಗೊಳಿಸಿದರು. ಎಲ್ಲರೂ ಒಗ್ಗಟ್ಟಾಗಿ ಸೇರಿ ಕಂಪಿಲಿಯ ಮುಸ್ಲಿಂ ಅಧಿಕಾರಿ (ನಾಯಬ್) ಮಲ್ಲಿಕ್ ಮೊಹಮ್ಮದನ ಮೇಲೆ ತಿರುಗಿಬಿದ್ದರು. ಈ ಕಾದಾಟವನ್ನು ನ್ಯೂನಿಜ್ ಸ್ವಾರಸ್ಯವಾಗಿ ವರ್ಣಿಸಿದ್ದಾನೆ. 'ಒಟ್ಟು ರಾಜ್ಯವೇ ಅವನಿಗೆ ತಿರುಗಿಬಿತ್ತು. ಯಾರಿಗೆ ಏನೇನು ಬೇಕೋ ವಶಪಡಿಸಿಕೊಂಡರು. ಅವನನ್ನು ಮುತ್ತಿಬಿಟ್ಟು, ಕೊಡಬೇಕಾದ ತೆರಿಗೆಗಳನ್ನೂ ಕೊಡದೆ ಅವನಿಗೆ ಆಹಾರ ಸಾಮಗ್ರಿಗಳೂ ಸಹ ದೊರಕದಂತೆ ತಡೆದು ನಿಲ್ಲಿಸಿದರು'. ಮುಸ್ಲಿಂ ಅಧಿಕಾರಿಗಳು ಹೇಳದೆ-ಕೇಳದೆ ಪರಾರಿಯಾದರು. ಈ ರೀತಿ ಈ ಸ್ಥಳಗಳಿಂದ ಮುಸ್ಲಿಂ ಆಳಿಕೆ ತೊಲಗಿತು. ಈ ಕಾರ್ಯದಲ್ಲಿ ಮುಖ್ಯಪಾತ್ರ ವಹಿಸಿದ್ದ ಸಂಗಮ ಸಹೋದರರೇ

---

1 *Op. cit.*, IV No. 267, A.R. 38 of 1889.

ವಿದ್ಯಾರಣ್ಯರು ದಿಕ್ಸ್ಪರ್ಶನ ಮಾಡಿದ ಕ್ರಮವನ್ನನುಸರಿಸಿ ಆನೆಗೊಂದಿಗೆ ದಕ್ಷಿಣದಲ್ಲಿ ಹಂಪೆಯ ಬಳಿ **ಶಾ. ಶ. ೧೨೫೮ಲಕ್ಕೆ ಸಲ್ಲುವ ಧಾತೃಸಂವತ್ಸರದ ವೈಶಾಖ ಶುದ್ಧ ಸಪ್ತಮಿಗೆ ಸರಿಯಾದ ಏಪ್ರಿಲ್ 18, ಕ್ರಿ. ಶ. 1336 ಈ ದಿನ ವಿಜಯನಗರದ ಶಂಕುಸ್ಥಾಪನೆ ಮಾಡಿದರು.** (ಈ ವಿಷಯವು ನೆಲ್ಲೂರು ಜಿಲ್ಲೆಯ ಒಂದು ತಾಮ್ರದ ತಗಡಿನ ದಾನಪತ್ರದಿಂದ [1] ತಿಳಿದು ಬರುತ್ತದೆ.) ಈ ಮಹತ್ಕಾರ್ಯ ದಲ್ಲಿ ವಿದ್ಯಾರಣ್ಯರು ನೀಡಿದ ಎರವೇನೆಂಬುದನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸ ಲಾಗುವುದು.

5. ವಿಜಯನಗರ ಸಂಸ್ಥಾಪಕರು

ಸಂಸ್ಥಾಪಕರ ಸಂಬಂಧವಾಗಿ ವಿವಾದಗಳು-ನಶ್ವರವಾದ ಐಹಿಕ ಸಾಮ್ರಾಜ್ಯ ವನ್ನು ಸ್ಥಾಪಿಸಿದ ಹಕ್ಕ-ಬುಕ್ಕರ ವಿಷಯವಾಗಿ ಎಷ್ಟು ತೀಕ್ಷ್ಣವಾದ ಭಿನ್ನಾಭಿಪ್ರಾಯ ಗಳಿವೆಯೋ ಶಾಶ್ವತವಾದ ವೈದಿಕ-ಸಾಹಿತ್ಯಿಕ ಸಾಮ್ರಾಜ್ಯವನ್ನು ಸಂಸ್ಥಾಪನೆಮಾಡಿದವ ರಲ್ಲಿ ಧುರಂಧರರಾದ ವಿದ್ಯಾರಣ್ಯರ ವಿಷಯದಲ್ಲೂ ಕಡುತರವಾದ ವಿರುದ್ಧ ವಾದಗಳಿವೆ. ಇವರ ಹೆಸರು ಯಾವ ಶಾಸನದಲ್ಲೂ ಸ್ಪಷ್ಟವಾಗಿ ಬಂದಿಲ್ಲವೆಂಬ ಯುಕ್ತಿಯ ಬಲದಿಂದ ಅನೇಕ ಪರಿಶೋಧಕರು ಈ ಸಾಮ್ರಾಜ್ಯಸ್ಥಾಪನೆಯಲ್ಲಿ ಈ ಮಹಾನುಭಾವರಿಗೇ ಯಾವ ಸ್ಥಾನವನ್ನೂ ಕೊಡಲೊಪ್ಪುವುದಿಲ್ಲ. ಡಾ॥ ಸಾಲತೊರೆಯಂತೂ ವಿದ್ಯಾರಣ್ಯ ಶ್ರೀಪಾದ ಸಂಬಂಧಿ 'ಕತೆ' ಸಂಪೂರ್ಣವಾಗಿ ಸುಳ್ಳೆಂದು ಸಾಧಿಸಿ [2] ವಿಜಯನಗರ ಷಟ್ ಶತಾಬ್ದಿ ಸ್ಮಾರಕ ಸಂಚಿಕೆಯ ಒಂದು ಲೇಖನದಲ್ಲಿ 'ಈ ಕತೆಯನ್ನು ನಂಬುವವನು ಸತ್ಯವನ್ನು ತ್ಯಜಿಸಿ ಕೇವಲ ಕಲ್ಪನೆಯನ್ನೇ ಆರಿಸಿಕೊಳ್ಳುತ್ತಾನೆ' ಎಂದು ಸಾರಿದ್ದಾರೆ. ಇದೇರೀತಿ ಈ ಶ್ರೀಪಾದರು ಕನ್ನಡಿಗರೇ? ಆಂಧ್ರರೇ? ಅವರ ಜನ್ಮಸ್ಥಾನವಾವುದು? ಕಾಲವಾವುದು? ವಿವಾಹವಾಗಿತ್ತೆ? ಇಲ್ಲವೆ? ಎಂಬ ವಿಚಾರವಾಗಿಯೂ ಬಹಳ ಚರ್ಚೆ ನಡೆದಿದೆ. ಆದರೆ ನಾವು ಒಂದಂಶ ನೆನಪಿನಲ್ಲಿಟ್ಟುಕೊಂಡು ಮುಂದುವರಿಯ ಬೇಕಾದ್ದು ಅಗತ್ಯ. ಕೇವಲ ದಂತಕಥೆಗಳನ್ನೇ ಆಧಾರವಾಗಿಟ್ಟುಕೊಳ್ಳಲೂ ಬಾರದು; ಮತ್ತು ಅದೇ ರೀತಿ ಶಾಸನಗಳಿಗೂ ಅನಪೇಕ್ಷಿತವಾದ ಅನುಚಿತ ಪ್ರಾಮುಖ್ಯತೆಯನ್ನು ಕೊಟ್ಟು ದಂತಕತೆಗಳನ್ನೂ ಪರಂಪರಾಗತ ಐತಿಹ್ಯಗಳನ್ನೂ ನಿರಾಧಾರ ನಿರ್ಮೂಲ

---

1 *His Ins. S.I.*, p. 185; *Lists of Inscriptions* topographically arranged by V. Rangachari, ii, ನೆಲ್ಲೂರು 189; *E. C.*, X ಬಾಗೇ ಪಲ್ಲಿ 70.

2 *S.P.L.*, I, pp 108-12. 2 Theories concerning the Origin of Vijayanagar, p. 152.

ವೆಂದು ಅಲ್ಲಗಳೆಯಲೂ ಬಾರದು; ಮಧ್ಯಮಾರ್ಗವನ್ನವಲಂಬಿಸಿ ವಿಚಾರಮಾಡ ಬೇಕು. ಈ ದೃಷ್ಟಿಯಿಂದ ಪರಿಶೀಲಿಸಿದರೆ **ವಿದ್ಯಾರಣ್ಯರು ವಿಜಯನಗರ ರಾಜ್ಯ ಸ್ಥಾಪನೆಗೆ ಕಾರಣಕರ್ತ**ರೆಂದು ಹೇಳಲು ಅನೇಕ ಆಧಾರ[1]ಗಳಿವೆ.

1. **ಶಿಲಾಶಾಸನಗಳು** : (a) E. C., vi ಶಿವಮೊಗ್ಗೆಯ ಕ್ರಿ.ಶ. 1348ರ ಶಾಸನ.

   (b) E. C., vii ಶಿಕಾರಿಪುರದ 1368ರ ನಂ. 281.

   (c) M. A. R. of 1916, p. 58 ಇತರ ಶಿಲಾ ಮತ್ತು ತಾಮ್ರ ಶಾಸನಗಳನ್ನು ಉಲ್ಲೇಖಿಸಿದೆ.

   (d) M. A. R. of 1928, pp 15-24 ಈ ವಿಷಯವನ್ನು ವಿಮರ್ಶೆ ಮಾಡಿದೆ.

2. **ತಾಮ್ರಶಾಸನಗಳು**—(a) E. C. iv, ಯಡತೊರೆ (1376), ನಂ. 46(b) X ಗೋರಿಬಿದನೂರು (1505), ನಂ. 77 (ಮತ್ತು 46); (c) X ಮುಳುಬಾಗಲು (1344), ನಂ 158; (d) XII ಕುಣಿಗಲ್ (1380), ನಂ 43.

3. **ಗ್ರಂಥಗಳು**—(a) ವಿದ್ಯಾರಣ್ಯ ಕಾಲಜ್ಞಾನ—ಇದರ ವಿಮರ್ಶೆ M. A. R. of 1932ನಲ್ಲಿ ಮಾಡಲಾಗಿದೆ *Further Sources* I, Ch I ಸಹ ನೋಡಿರಿ (b) ರಾಜಕಾಲ ನಿರ್ಣಯ!(c) ಗುರುವಂಶ ವಾಕ್ಯ. (ಇವುಗಳ ಜೊತೆಗೆ (d) ಅಹೋಬಳಪತಿಯ ವಿರೂಪಾಕ್ಷ ಚಂಪೂವನ್ನೂ (e) ಕಾಪಲೂರ್ ತಗಡುಗಳನ್ನೂ (1336-37) ಉದಹರಿಸಬಹುದು. *Fur* S*ou* I pp 54-57.)

4. **ಶೃಂಗೇರಿ ಮಠದಲ್ಲಿನ ಕಡಿತಗಳು**—1380 ವರ್ಷಗಳದ್ದು.

5. **ಪುಣ್ಯಶ್ಲೋಕಮಂಜರಿ** – ಕಂಚಿ ಕಾಮಕೋಟಿ ಪೀಠದ್ದು.

ವಿದ್ಯಾರಣ್ಯರು ಕನ್ನಡಿಗರು ಎಂದು M. A. R. of 1931ನಲ್ಲಿ ಡಾ॥ ಎಂ. ಹೆಚ್. ಕೃಷ್ಣ ಅವರು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆಯ ಸಂಪುಟ ೧೫, ಸಂಚಿಕೆ ೧ರಲ್ಲೂ ಇದನ್ನು ಸಮರ್ಥಿಸಲಾಗಿದೆ. ಇದನ್ನು ಸಾಧಿಸುವುದಕ್ಕೆ ಮುಖ್ಯವಾದ ಪ್ರಮಾಣ ಏನೆಂದರೆ–ಹಂಪೆಯ ಕೃಷ್ಣನ ಗುಡಿಯಲ್ಲಿ ಈಗ ಇಟ್ಟಿರುವ "ದ್ರುಕ್ಷ್ಪರ ಶಿಖೀಂದು ಶಶಾಂಕ"" [=ಶಕಾಂಕ ?]=೧೩೩೨ನೇ "ವಿರೋಧಿ

---

1 ಈ ಆಧಾರಗಳನ್ನು ಶ್ರೀ ಕೆ. ಸಂಪದ್ಗಿರಿರಾವ್, M. A., ಅವರು ಅನೇಕ ವಿದ್ವಾಂಸರನ್ನು ವಿಚಾರಿಸಿ ನನಗಾಗಿ ಸಂಗ್ರಹಿಸಿ ಒಂದು ಪತ್ರದಲ್ಲಿ ಕಳುಹಿಸಿದ್ದರು; ಇದಕ್ಕೆ ನಾನು ಅವರಿಗೆ ಕೃತಜ್ಞನಾಗಿದ್ದೇನೆ

ಸಂವತ್ಸರ"ದ (ಕ್ರಿ. ಶ. 1410ರ) ದೇವರಾಯನ ಕಾಲದ 134 ಪಂಕ್ತಿಗಳ ಶಾಸನ.[1] ಅದರಲ್ಲಿ ಲಕ್ಷ್ಮೀಧರಾಮಾತ್ಯನ ಪ್ರಶಂಸೆ ಮಾಡುವ ಸಂದರ್ಭದಲ್ಲಿ 40–41ನೇ ಪಂಕ್ತಿಗಳಲ್ಲಿ ಬರುವ ವಾಕ್ಯಾಂಶವಿದು—**ಕಂನಡಿಗ ಕುಲಕೆ ರಂನದ ಕಂನಡಿಯೆನೆ** ವಿಶ್ವವಿದಿತ ಉ್ರುತ್ತ (=ವೃತ್ತ) ಶ್ರೀ ಸಂ [1] ಪಂನಂ ಲಕ್ಷ್ಮೀಧರ ದೇವಂ....ಇತ್ಯಾದಿ. ಈ ಲಕ್ಷ್ಮೀಧರ ವಿದ್ಯಾರಣ್ಯರಿಗೆ ಸೋದರಳಿಯನಾಗಬೇಕು; ಅವರ ತಂಗಿ ಸಿಂಗಲೆಯ ಮಗ. ಈ ಕವಿತೆಯನ್ನು ರಚಿಸಿದಾತ ಮಧುರ ಕವಿ. (ಕೆಳಗೆ 'ವಿದ್ಯಾರಣ್ಯರ ಜೀವನಚರಿತ್ರೆ' ಎಂಬ ಖಂಡ ನೋಡಿ.) ಅಲ್ಲದೆ 1386 ರಲ್ಲಿ ವಿದ್ಯಾರಣ್ಯರ ಗೌರವಾರ್ಥವಾಗಿ ದಾನ ಮಾಡಿದ ವಿದ್ಯಾರಣ್ಯ ಅಗ್ರಹಾರದಲ್ಲಿ ವಿಶೇಷವಾಗಿ ಹೊಯ್ಸಳ ಕರ್ಣಾಟಕರೇ ನೆಲಸಿದರು. ಇದರಿಂದಲೂ ವಿದ್ಯಾರಣ್ಯರೂ ಈ ಬಡಕಟ್ಟಿಗೆ ಸೇರಿದವರೆಂದು ಊಹಿಸಬಹುದಾಗಿದೆ.

ಡಾ|| ವೆಂಕಟರಮಣಯ್ಯ ಅವರು *Futher Sources* (I. pp. 54–58) ನಲ್ಲಿ ವಿದ್ಯಾರಣ್ಯರೂ ಸಾಮ್ರಾಜ್ಯಸ್ಥಾಪಕರೆಂಬುದಕ್ಕೆ ಪ್ರಮಾಣಗಳನ್ನು ಪರಿಹರಿಸಿ ಹಕ್ಕ-ಬುಕ್ಕರು "ರಾಜ್ಯಕ್ಕೆ ಸಂಬಂಧಪಟ್ಟ ಪ್ರಾಯಃ ಎಲ್ಲಾ ವಿಚಾರಗಳಲ್ಲೂ ವಿದ್ಯಾರಣ್ಯರ ಸಲಹೆ ತೆಗೆದುಕೊಳ್ಳುತ್ತಿದ್ದರೆಂದು ಹೇಳುವುದಕ್ಕೆ ಯಥೇಷ್ಟ ಪ್ರಮಾಣ (ರುಜುವಾತು) ಗಳಿವೆ. ಹೊಸನಗರದ ಭಾವನೆ ಮೊದಲು ವಿದ್ಯಾರಣ್ಯರ ಮನಸ್ಸಿನಲ್ಲಿ ಉದ್ಭವಿಸಿತು. ಆ ಭಾವನೆಯನ್ನು ಕಾರ್ಯರೂಪಕ್ಕೆ ತರುವಂತೆ ತಮ್ಮ ಶಿಷ್ಯರಿಗೆ ಅಪ್ಪಣೆಕೊಟ್ಟರು. ಅದರಂತೆ ಅವರು (ಶಿಷ್ಯರು) ಕ್ರಮಕೈಗೊಂಡು ಇಬ್ಬರೂ ಸೇರಿ ಹೊಸ ಪಟ್ಟಣ ಕಟ್ಟಿದರು....ಹೀಗೆ ವಿಜಯನಗರವನ್ನು ವಿದ್ಯಾರಣ್ಯ ಹರಿಹರ ಬುಕ್ಕ ಮೂವರೂ (ಕಲೆತು) ಕಟ್ಟಿದರು" ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಮೇಲೆ ಹೇಳಿದ ಆಧಾರಗಳಿಂದ ಕೆಲವು ಅಂಶಗಳನ್ನು ಸಂಗ್ರಹಿಸಿ ಮುಂದಿನ ಖಂಡದಲ್ಲಿ ಅವರ ಜೀವನ ಚರಿತ್ರೆಯನ್ನು ಬರೆಯಲಾಗಿದೆ.

ವಿದ್ಯಾರಣ್ಯರ ಜೀವನ ಚರಿತ್ರೆ—ವಿದ್ಯಾರಣ್ಯರು (ಪೂರ್ವಾಶ್ರಮದಲ್ಲಿ) ಪರಾಶರಸ್ಮೃತಿಗೆ ಬರೆದ ವ್ಯಾಖ್ಯಾನದ ಉಪೋದ್ಘಾತದಲ್ಲಿ ತಮ್ಮ ಕುಲಗೋತ್ರಾದಿಗಳನ್ನು ತಾವೇ ಹೀಗೆ ಹೇಳಿಕೊಂಡಿದ್ದಾರೆ—

ಶ್ರೀಮತೀ ಜನನೀ ಯಸ್ಯ ಸುಕೀರ್ತಿರ್ಮಾಯಣಃ ಪಿತಾ ।
ಸಾಯಣಃ ಸೋಮನಾಥಶ್ಚ ಮನೋಬುದ್ಧೀ ಸಹೋದರೌ ॥
ಯಸ್ಯ ಬೌಧಾಯನಂ ಸೂತ್ರಂ ಶಾಖಾ ಯಸ್ಯ ಚ ಯಾಜುಷೀ ।
ಭಾರದ್ವಾಜಂ ಯಸ್ಯ ಗೋತ್ರಂ ಸರ್ವಜ್ಞಃ ಸ ಹಿ ಮಾಧವಃ ॥

ಇದರಿಂದ ವಿದ್ಯಾರಣ್ಯರ ಪೂರ್ವಾಶ್ರಮದ ಹೆಸರು ಮಾಧವ (ಮಾಧವಾಚಾರ್ಯ), ತಂದೆ ಮಾಯಣ, ತಾಯಿ ಶ್ರೀಮತೀ, ಸಾಯಣ-ಸೋಮನಾಥ ಇಬ್ಬರೂ ತಮ್ಮಂ

---

1 *S. In. Ins.*, IV No. 267 (A.R. 38 of 1889)

ದಿರು. ಇವರದು ಭಾರದ್ವಾಜ ಗೋತ್ರ, ಬೌದ್ಧಾಯನ ಸೂತ್ರದ ಯಾಜುಷಶಾಖೆ ಎಂಬ ವಿಚಾರಗಳು ಸ್ಪಷ್ಟವಾಗಿ ತಿಳಿಯುತ್ತವೆ. ಇನ್ನು ಹಿಂದೆ ಪ್ರಸ್ತಾಪಿಸಿದ ಕೃಷ್ಣನಗುಡಿಯ ಶಾಸನದಿಂದ (A. R. 38 of 1889) ಇವರಿಗೆ ಸಿಂಗಲೆ ಯೆಂಬ ತಂಗಿಯೂ ಇದ್ದಳು; ಆಕೆಯನ್ನು ವಿಷ್ಣುವೃದ್ಧನಿಗೆ ಕೊಟ್ಟು ವಿವಾಹವಾಗಿತ್ತು; ಈ ದಂಪತಿಗಳಿಗೆ "ಕ್ರಮದಿಂ 1. ಲಕ್ಷ್ಮೀಧರ 2. ಚೆನ್ನಮಂತ್ರಿ 3. ಬುಕ್ಕಂಣ, 4. ಮಾಧವಂ. 5. ವೆಗ್ಗಡೆಯೆಂ"ದು 'ತನೂಜಪಂಚಕಂ' ಜನಿಸಿದುದು; ಇವರಲ್ಲಿ ಹಿರಿಯವನೇ ದೇವರಾಯನ ಮಂತ್ರಿಯಾದ ಲಕ್ಷ್ಮೀಧರನೆಂದೂ ಗೊತ್ತಾಗುತ್ತದೆ. ಹೀಗೆಯೇ "ಮತ್ತೊಂದು ತಾಮ್ರಲಿಪಿಯಲ್ಲಿ ವಿದ್ಯಾರಣ್ಯರ ಸಂನ್ಯಾಸ ಗ್ರಹಣಕಾಲವು ಶಾ. ಶ. ೧೨೫೩ನೇ (ಕ್ರಿ.ಶ. 1331) ಪ್ರಜೋತ್ಪತ್ತಿ ಸಂವತ್ಸರದ ಕಾರ್ತಿಕ ಶುದ್ಧ ಸಪ್ತಮೀ ಎಂತಲೂ ಮತ್ತು ಇವರ ಮೋಕ್ಷಕಾಲವು ಶಾ. ಶ. ೧೩೦೮ನೆಯ (1386) ಅಕ್ಷಯ ಸಂವತ್ಸರದ ಚೈತ್ರ ಶುದ್ಧ ತ್ರಯೋದಶೀ ಎಂತಲೂ ಬರೆಯಲ್ಪಟ್ಟಿದೆ."[1] ಅಲ್ಲದೆ ಗುರುಪದ್ಧತಿಯ ಪ್ರಕಾರ ವಿದ್ಯಾರಣ್ಯರು ಆದ್ಯ ಶಂಕರಾಚಾರ್ಯರ (746-769) ಅನಂತರ ನಾಲ್ಕುನೂರು ವರ್ಷಗಳಾದ ಬಳಿಕ ಶೃಂಗೇರಿಪೀಠಕ್ಕೆ ಬಂದರೆಂದೂ ತಿಳಿದುಬರುತ್ತದೆ.[2]

ಶ್ರೀ ಮಾ|| ವಿದ್ಯಾರಣರು

ಮಾಧವನ ವಿದ್ಯಾಭ್ಯಾಸ

ವಿದ್ಯಾತೀರ್ಥರು, ಭಾರತೀ ಕೃಷ್ಣತೀರ್ಥರು, ಶಂಕರಾನಂದರು ಮತ್ತು ಶ್ರೀಕಂಠನಾಥರೆಂಬ ಆ ಕಾಲದ ವಿದ್ವನ್ಮಣಿಗಳ[3] ಬಳಿ ಆಯಿತು. ವೇದ-ವೇದಾಂಗಗಳಲ್ಲೆಲ್ಲಾ ಇವರು ಅಪ್ರತಿಮಪಾಂಡಿತ್ಯ ಪಡೆದರು. ಹೀಗೆ ಘನಪಾಠಿ ವಿದ್ವಾಂಸರಾದರೂ ಜೀವನದಲ್ಲಿ ಎಳ್ಳಷ್ಟೂ ಸೌಖ್ಯವಿರಲಿಲ್ಲ. ಕಡು ದಾರಿದ್ರ್ಯದಿಂದ ವೃದ್ಧ ಮಾತಾಪಿತೃಗಳನ್ನು ಸಾಕುವುದೇ ದೊಡ್ಡ ಪ್ರಯಾಸವಾಗಿತ್ತು. ದಾರಿದ್ರ್ಯಪರಿಹಾರಕ್ಕಾಗಿ ಮಾಧವ ಹಂಪೆಯಲ್ಲಿರುವ **ಭುವನೇಶ್ವರೀ** ದೇವಿಯನ್ನು ಕುರಿತು ತಪಸ್ಸು ಮಾಡಿ ಪ್ರತ್ಯಕ್ಷೀಕರಿಸಿಕೊಂಡು ತಮಗೆ ವಿಪುಲೈಶ್ವರ್ಯವನ್ನು ಅನುಗ್ರಹಿಸುವಂತೆ ಕೇಳಿಕೊಂಡರು. ದೇವಿಯು 'ಈ ಜನ್ಮದಲ್ಲಿ

---

1. 2. 'ವೇದಾಂತ ಪಂಚದಶೀ, ಭಾರತೀ ಸಚ್ಚಿದಾನಂದ ಸಹಜಾನಂದ ವಿರಚಿತ ಕನ್ನಡ ಟೀಕಾ ತಾತ್ಪರ್ಯ ಸಹಿತ' (ಮೈಸೂರು, 1908) ಎಂಬ ಗ್ರಂಥದ ಪೀಠಿಕೆಯಿಂದ. 3. ಇವರ ವಿಷಯವಾಗಿ ಹೆಚ್ಚಿನ ಸಂಗತಿಗಳನ್ನು ಡಿ. ವಿ. ಗುಂಡಪ್ಪನವರ 'ವಿದ್ಯಾರಣ್ಯರ ಸಮಕಾಲೀನರು' (ಭಾಗ ೨) ಎಂಬ ಗ್ರಂಥದಲ್ಲಿ ಕಾಣಬಹುದು.

ಆ ಧನಯೋಗವಿಲ್ಲೆಂ'ದು ಹೇಳಿದ ಕಾರಣ ಮಾಧವರು ಜನ್ಮಾಂತರಪ್ರಾಪ್ತವಾದ ಸಂನ್ಯಾಸಗ್ರಹಣ ಮಾಡಿ ನಾಡಿನ ಹಿತಕ್ಕಾಗಿ ಸುವರ್ಣವೃಷ್ಟಿ ಸುರಿಸಿದರು. (ಈ ಸುವರ್ಣವೃಷ್ಟಿ ದೈವಿಕ ಘಟನೆಯೆಂದು ಕೆಲವರು ಒಪ್ಪುವುದಿಲ್ಲ; ಹೋಗಲಿ. ಮೊನ್ನೆ ಮೊನ್ನೆ ಗಾಂಧೀಜಿಯವರ ಕರೆ ಕೇಳಿ ಜನತೆ ಹೇಗೆ ಸಾವಿರಾರು-ಲಕ್ಷಾಂತರ ರೂಪಾಯಿಗಳನ್ನು ಅರ್ಪಿಸುತ್ತಿದ್ದರೋ ಅದರಂತೆಯೇ ಆಗಿನ ಕಾಲದ ಜನರ ದೇಶೋದ್ಧಾರಕ್ಕಾಗಿ ಬೆಳ್ಳಿ-ಬಂಗಾರವನ್ನು ತಂದುಸುರಿದು ಒಪ್ಪಿಸಿದರು——ಎಂದಾದರೂ ಒಪ್ಪಿಕೊಳ್ಳಲು ಏನೂ ಅಭ್ಯಂತರವಿಲ್ಲವಷ್ಟೆ!) ಅದನ್ನೆಲ್ಲ ವಿದ್ಯಾರಣ್ಯರು ದೇಶೋದ್ಧಾರ ಕಾರ್ಯಕ್ಕೆ ವಿನಿಯೋಗಿಸಿದರು.

ಭುವನೇಶ್ವರಿ

ವಿದ್ಯಾರಣ್ಯರಿಗೆ ಪೂರ್ವಾಶ್ರಮದಲ್ಲಿ ವಿವಾಹವಾಗಿತ್ತೆಂದು ಕೆಲವರ ಮತ. ಗಳಗನಾಥರು ಮಾಧವನಿಗೆ ವೈತಿಹೋತ್ರಿಯೆಂಬ ಅಮಾತ್ಯಪುತ್ರಿಯು ಪತ್ನಿಯಾಗಿದ್ದಳೆಂದು ಚಿತ್ರಿಸಿದ್ದಾರೆ; ಅವರಿಗೆ ಈ ಹೆಸರು ಹೇಗೆ, ಯಾವ ಆಧಾರದ ಮೇಲೆ ದೊರಕಿತೋ ತಿಳಿಯದು. ಇದೇ ರೀತಿ 'ಶ್ರೀ ವಿದ್ಯಾರಣ್ಯರು' ಎಂಬ ಸಣ್ಣ ಜೀವನ ಚರಿತ್ರೆಯಲ್ಲಿ ಓ.ಎಲ್. ಲಿಂಗಣ್ಣಯ್ಯನವರೂ ಮಾಧವನಿಗೆ ವಿವಾಹವಾದ ಸಂಗತಿಯನ್ನು ಬರೆದಿದ್ದಾರೆ. ಡಿ. ವಿ.ಗುಂಡಪ್ಪನವರ ನಾಟಕ 'ವಿದ್ಯಾರಣ್ಯ ವಿಜಯ'ವನ್ನೂ, ಅ.ನ.ಕೃ. ಅವರ 'ವಿಜಯವಿದ್ಯಾರಣ್ಯ'ವನ್ನೂ ನೋಡಿದರೆ ಅವರಿಗೆ ವಿವಾಹವಾಗಿರಲಿಲ್ಲವೆನಿಸುತ್ತದೆ. ಯಾವ ಶಾಸನಗಳಲ್ಲಾಗಲೀ ಯಾವ ಗ್ರಂಥಗಳಲ್ಲಾಗಲಿ ವಿದ್ಯಾರಣ್ಯರಿಗೆ ವಿವಾಹವಾದ ಸಂಗತಿಯ ಹೆಸರೇ ಇಲ್ಲವಾದ್ದರಿಂದ ಅವರಿಗೆ ವಿವಾಹವಾಗಿರಲಿಲ್ಲವೆಂದು ಹೇಳುವುದೇ ಹೆಚ್ಚು ಸೂಕ್ತವಾಗಿ ಕಾಣುತ್ತದೆ.

ವಿದ್ಯಾರಣ್ಯರು ಸಂನ್ಯಾಸಿಗಳಾಗಿ ಹಂಪೆಯ ವಿರೂಪಾಕ್ಷ ಪೀಠಕ್ಕೂ, ಶೃಂಗೇರಿಯ ಶಾರದಾ ಪೀಠಕ್ಕೂ ಘನವಾದ ಸೇವೆ ಸಲ್ಲಿಸಿದರು. ಮೈಸೂರು ಸರಸ್ವತೀ ಭಂಡಾರದಲ್ಲಿನ ಕಡಿತಗಳ ಪ್ರಕಾರ ಶೃಂಗೇರಿಯ ಜಗದ್ಗುರು ಪರಂಪರೆಯಲ್ಲಿ ವಿದ್ಯಾತೀರ್ಥರು (ಕಾಲ ಸುಮಾರು 1328-1385ರ ಮಧ್ಯೆ), ಭಾರತೀ ಕೃಷ್ಣತೀರ್ಥರು (ಸು. 1368-80) ಇವರಾದ ನಂತರ ಪೀಠಕ್ಕೆ ಬಂದು 1386ರಲ್ಲಿ ತಮ್ಮ ತೊಂಬತ್ತ

ದಿರು. ಇವರದು ಭಾರದ್ವಾಜ ಗೋತ್ರ, ಬೌದ್ಧಾಯನ ಸೂತ್ರದ ಯಾಜುಷಶಾಖೆ ಎಂಬ ವಿಚಾರಗಳು ಸ್ಪಷ್ಟವಾಗಿ ತಿಳಿಯುತ್ತವೆ. ಇನ್ನು ಹಿಂದೆ ಪ್ರಸ್ತಾಪಿಸಿದ ಕೃಷ್ಣನಗುಡಿಯ ಶಾಸನದಿಂದ (A. R. 38 of 1889) ಇವರಿಗೆ ಸಿಂಗಲೆ ಯೆಂಬ ತಂಗಿಯೂ ಇದ್ದಳು; ಆಕೆಯನ್ನು ವಿಷ್ಣುವೃದ್ಧನಿಗೆ ಕೊಟ್ಟು ವಿವಾಹವಾಗಿತ್ತು; ಈ ದಂಪತಿಗಳಿಗೆ "ಕ್ರಮದಿಂ 1. ಲಕ್ಷ್ಮೀಧರ 2. ಚೆನ್ನಮಂತ್ರಿ 3. ಬುಕ್ಕಂಣ, 4. ಮಾಧವಂ. 5. ವೆಗ್ಗಡೆಯೆಂ"ದು 'ತನೂಜಪಂಚಕಂ' ಜನಿಸಿದುದು; ಇವರಲ್ಲಿ ಹಿರಿಯವನೇ ದೇವರಾಯನ ಮಂತ್ರಿಯಾದ ಲಕ್ಷ್ಮೀಧರನೆಂದೂ ಗೊತ್ತಾಗುತ್ತದೆ. ಹೀಗೆಯೇ "ಮತ್ತೊಂದು ತಾಮ್ರಲಿಪಿಯಲ್ಲಿ ವಿದ್ಯಾರಣ್ಯರ ಸಂನ್ಯಾಸ ಗ್ರಹಣಕಾಲವು ಶಾ. ಶ. ೧೨೫೩ನೇ (ಕ್ರಿ.ಶ. 1331) ಪ್ರಜೋತ್ಪತ್ತಿ ಸಂವತ್ಸರದ ಕಾರ್ತಿಕ ಶುದ್ಧ ಸಪ್ತಮೀ ಎಂತಲೂ ಮತ್ತು ಇವರ ಮೋಕ್ಷಕಾಲವು ಶಾ. ಶ. ೧೩೦೮ನೆಯ (1386) ಅಕ್ಷಯ ಸಂವತ್ಸರದ ಚೈತ್ರ ಶುದ್ಧ ತ್ರಯೋದಶೀ ಎಂತಲೂ ಬರೆಯಲ್ಪಟ್ಟಿದೆ."[1] ಅಲ್ಲದೆ ಗುರುಪದ್ಧತಿಯ ಪ್ರಕಾರ ವಿದ್ಯಾರಣ್ಯರು ಆದ್ಯ ಶಂಕರಾಚಾರ್ಯರ (746-769) ಅನಂತರ ನಾಲ್ಕುನೂರು ವರ್ಷಗಳಾದ ಬಳಿಕ ಶೃಂಗೇರಿಪೀಠಕ್ಕೆ ಬಂದರೆಂದೂ ತಿಳಿದುಬರುತ್ತದೆ.[2]

ಶ್ರೀ ಮಾ॥ ವಿದ್ಯಾರಣರು

ಮಾಧವನ **ವಿದ್ಯಾಭ್ಯಾಸ** ವಿದ್ಯಾತೀರ್ಥರು, ಭಾರತೀ ಕೃಷ್ಣತೀರ್ಥರು, ಶಂಕರಾನಂದರು ಮತ್ತು ಶ್ರೀಕಂಠನಾಥರೆಂಬ ಆ ಕಾಲದ ವಿದ್ವನ್ಮಣಿಗಳ[3] ಬಳಿ ಆಯಿತು. ವೇದ-ವೇದಾಂಗಗಳಲ್ಲೆಲ್ಲಾ ಇವರು ಅಪ್ರತಿಮಪಾಂಡಿತ್ಯ ಪಡೆದರು. ಹೀಗೆ ಘನಪಾಠಿ ವಿದ್ವಾಂಸರಾದರೂ ಜೀವನದಲ್ಲಿ ಎಳ್ಳಷ್ಟೂ ಸೌಖ್ಯವಿರಲಿಲ್ಲ. ಕಡು ದಾರಿದ್ರ್ಯದಿಂದ ವೃದ್ಧ ಮಾತಾಪಿತೃಗಳನ್ನು ಸಾಕುವುದೇ ದೊಡ್ಡ ಪ್ರಯಾಸವಾಗಿತ್ತು. ದಾರಿದ್ರ್ಯಪರಿಹಾರಕ್ಕಾಗಿ ಮಾಧವ ಹಂಪೆಯಲ್ಲಿರುವ **ಭುವನೇಶ್ವರೀ** ದೇವಿಯನ್ನು ಕುರಿತು ತಪಸ್ಸು ಮಾಡಿ ಪ್ರತ್ಯಕ್ಷೀಕರಿಸಿಕೊಂಡು ತಮಗೆ ವಿಪುಲೈಶ್ವರ್ಯವನ್ನು ಅನುಗ್ರಹಿಸುವಂತೆ ಕೇಳಿಕೊಂಡರು. ದೇವಿಯು 'ಈ ಜನ್ಮದಲ್ಲಿ

---

1. 2. 'ವೇದಾಂತ ಪಂಚದಶೀ, ಭಾರತೀ ಸಚ್ಚಿದಾನಂದ ಸಹಜಾನಂದ ವಿರಚಿತ ಕನ್ನಡ ಟೀಕಾ ತಾತ್ಪರ್ಯ ಸಹಿತ' (ಮೈಸೂರು, 1908) ಎಂಬ ಗ್ರಂಥದ ಪೀಠಿಕೆಯಿಂದ. 3. ಇವರ ವಿಷಯವಾಗಿ ಹೆಚ್ಚಿನ ಸಂಗತಿಗಳನ್ನು ಡಿ. ವಿ. ಗುಂಡಪ್ಪನವರ 'ವಿದ್ಯಾರಣ್ಯರ ಸಮಕಾಲೀನರು' (ಭಾಗ ೨) ಎಂಬ ಗ್ರಂಥದಲ್ಲಿ ಕಾಣಬಹುದು.

ಸಾಯಣಾಚಾರ್ಯರು—ಇವರು ವಿದ್ಯಾರಣ್ಯರ ಮೊದಲ ತಮ್ಮಂದಿರು. ಅವರೊಡನೆಯೇ ಕಂಚಿಯಲ್ಲಿ ವಿದ್ಯಾತೀರ್ಥರ ಬಳಿ ವಿದ್ಯಾಭ್ಯಾಸ ಮಾಡಿ ಅಣ್ಣನಂತೆಯೇ ದಿಗ್ದಂತಿ ಪಂಡಿತರಾದರು. ಆದರೆ ಇವರಿಗೆ ಗೃಹಸ್ಥಾಶ್ರಮಿಗಳಾಗಿ ತಮ್ಮ ಪ್ರತಿಭೆ—ಪಾಂಡಿತ್ಯಗಳನ್ನು ಲೋಕಸೇವೆಗಾಗಿ ವಿನಿಯೋಗಿಸುವ ಅವಕಾಶ ದೊರೆಯಿತು. ಇವರ 'ಅಲಂಕಾರ ಸುಧಾನಿಧಿ' ಯೆಂಬ ಗ್ರಂಥದಿಂದ ಇವರಿಗೆ ಕಂಪಣ, ಮಾಯಣ, ಶಿಂಗಣ ಎಂಬ ಮೂರು ಮಕ್ಕಳಿದ್ದರೆಂದೂ ಅವರಲ್ಲಿ ಹಿರಿಯಾತ ಸಂಗೀತಜ್ಞನೆಂದೂ, ಎರಡನೆಯಾತ ಕವಿಯೆಂದೂ ಕಡೆಯಾತ ವೇದಾಧ್ಯಯನ ಸಂಪನ್ನನೆಂದೂ ಗೊತ್ತಾಗುತ್ತದೆ. ಅದೇ ಆಧಾರದಿಂದಲೇ ಸಾಯಣರು ಮಂತ್ರಿಗಳಾಗಿದ್ದರೆಂದೂ ಎಷ್ಟೋ ಸಲ ಯುದ್ಧಗಳಿಗೂ ಹೋಗಿ ಯುದ್ಧರಂಗದಲ್ಲೂ ಪರಾಕ್ರಮ ತೋರಿಸಿದರೆಂದೂ ತಿಳಿಯಬರುತ್ತದೆ.[1] ರಾಜ್ಯಸಂರಕ್ಷಣೆ ಮಾಡಿದ್ದಲ್ಲದೆ ರಾಜ್ಯ ವಿಸ್ತರಣೆಯನ್ನೂ ಮಾಡಿದರು. ಹೀಗೆ ನಾನಾ ರಾಜಕಾರ್ಯಗಳಲ್ಲಿ ಪ್ರವೃತ್ತರಾಗಿದ್ದರೂ ಅವರು ಲೇಖಣಿಯನ್ನು ಒತ್ತಟ್ಟಿಗಿಟ್ಟಿರಲಿಲ್ಲ. ಈ ಸಹೋದರರು ರಚಿಸಿದ ಸಂಸ್ಕೃತ ವ್ಯಾಖ್ಯಾನಾದಿ ಗ್ರಂಥಗಳು ಅಪಾರವಾಗಿವೆ, ವೈದ್ಯ, ಧರ್ಮ, ಜ್ಯೋತಿಷ್ಯ, ವ್ಯಾಕರಣ, ಮೀಮಾಂಸಾ, ವೇದ, ವೇದಾಂತ ಎಲ್ಲ ಶಾಖೆಗಳನ್ನೂ ಆವರಿಸಿವೆ. ಅವುಗಳಲ್ಲಿ ಅನೇಕ ಗ್ರಂಥಗಳು ಮುದ್ರಿತವಾಗಿವೆ. ಆ ಪೈಕಿ ಕೆಲವು:—ನಾಲ್ಕು ವೇದಗಳ ಭಾಷ್ಯ, ಐತರೇಯ-ತೈತ್ತಿರೀಯ ಬ್ರಾಹ್ಮಣ ಮತ್ತು ಆರಣ್ಯಕಗಳ ಭಾಷ್ಯ, ಉಪನಿಷದ್ಭಾಷ್ಯಗಳು, ಜೈಮಿನೀಯ ನ್ಯಾಯಮಾಲಾ, ಧಾತುವೃತ್ತಿ, ಪಂಚದಶೀ, ಪರಾಶರಸ್ಮೃತಿ ವ್ಯಾಖ್ಯಾ, ಮಾಧವನಿದಾನ, ವಾರ್ತಿಕಸಾರ, ಶತಪಥ ಬ್ರಾಹ್ಮಣಭಾಷ್ಯ, ಸರ್ವದರ್ಶನ ಸಂಗ್ರಹ ಮೊದಲಾದುವು.

ಸಾಯಣರು ವಿಜಯನಗರದ ನಾಲ್ಕು ಮಂದಿ ರಾಜರ ಬಳಿ ಮಂತ್ರಿಯಾಗಿದ್ದು, ತಮ್ಮ ಅಣ್ಣಂದಿರಿಗೂ ನೆರವಾಗಿದ್ದು ಬುಕ್ಕನ ಆ ಸ್ಥಾನದಲ್ಲಿ ನೆಲಸಿದರು. ಇವರು ಕ್ರಿ. ಶ. 1377-78 ರಲ್ಲಿ ಹಾಸನ—ಮೈಸೂರು ಜಿಲ್ಲೆಗಳ ಪ್ರಾಂತದಲ್ಲಿ ಇದ್ದಿರಬೇಕು. ಇಲ್ಲಿಂದ ಒಂಬತ್ತು ವರ್ಷಗಳ ಆಚೆಗೆ (1387 ರಲ್ಲಿ), ವಿದ್ಯಾರಣ್ಯರು ಬ್ರಹ್ಮಭೂತರಾದ ಒಂದು ವರ್ಷದ ಮೇಲೆ, ಸಾಯಣರೂ ಭೌತಕಳೇಬರವನ್ನು ತೊರೆದಂತೆ ತಿಳಿದು ಬರುತ್ತದೆ.

ಇನ್ನೂ ಕೆಲವು ಸಮಕಾಲೀನರು — ವಿದ್ಯಾರಣ್ಯರ ಸಮಕಾಲೀನರಾದ ವಿಭೂತಿಪುರುಷರಲ್ಲಿ ವಿಶಿಷ್ಟಾದ್ವೈತ ಪಂಗಡಕ್ಕೆ ಸೇರಿದ ಸುದರ್ಶನಭಟ್ಟರು, ವೇದಾಂತ ದೇಶಿಕರು ಮತ್ತು ಮಾಧ್ವಸಂಪ್ರದಾಯದ ಪದ್ಮನಾಭತೀರ್ಥರು ನರಹರಿತೀರ್ಥರು

---

1 ಈ ಮೂಲ ಸಂಸ್ಕೃತ ಶ್ಲೋಕಗಳಿಗೆ Sources (1919), pp. 46-50 ಮತ್ತು ಡಿ. ವಿ. ಜಿ. ಅವರ 'ಸಮಕಾಲೀನರು' ನೋಡಿ.

ಅಕ್ಷೋಭ್ಯತೀರ್ಥರು ಮೊದಲಾದವರ ಹೆಸರುಗಳೂ ಉಲ್ಲೇಖನೀಯವಾಗಿವೆ. **ಸುದರ್ಶನಭಟ್ಟರು** (ಜನನ ಕ್ರಿ. ಶ. 1275) ನಡಾದೂರ್ ಅಮ್ಮಾಳ್ ಎಂಬುವರ ಶಿಷ್ಯರು. ದೊಡ್ಡ ವಿದ್ವಾಂಸರು. ಶ್ರೀ ಭಾಷ್ಯಕ್ಕೆ ಶ್ರುತಪ್ರಕಾಶಿಕಾ ಎಂಬ ವಿಸ್ತಾರವಾದ ಟೀಕೆಯನ್ನೂ ವೇದಾರ್ಥಸಂಗ್ರಹದ ಟೀಕೆಯನ್ನೂ ಬರೆದಿದ್ದಾರೆ. ಇವರ ಕಾಲದಲ್ಲಿ ಶ್ರೀರಂಗವನ್ನು ಮುಸಲ್ಮಾನರು ಏಕಾಏಕಿ ಮುತ್ತಲು ಇವರು ತಮ್ಮ ಶ್ರುತಪ್ರಕಾಶಿಕೆಯನ್ನೂ ಇಬ್ಬರು ಮಕ್ಕಳನ್ನೂ ದೇಶಿಕರಿಗೆ ಒಪ್ಪಿಸಿ ಪರಾರಿಯಾದರಂತೆ. ಆ ಟೀಕೆಯು ಕಾವೇರಿಯ ಮರಳು ದಿಣ್ಣೆಯಲ್ಲಿಡಲ್ಪಟ್ಟು ರಕ್ಷಿತವಾಯಿತಂತೆ. **ವೇದಾಂತ ದೇಶಿಕರು** (1268–1369)[1] ಹೆಸರಿಗೆ ತಕ್ಕಂತೆ ವೇದಾಂತಕ್ಕೇ ಶಿರೋರತ್ನಪ್ರಾಯರು, ದಿಗ್ದಂತಿಪಂಡಿತರು, ಚತುಃಷಷ್ಟಿ-ಕಲಾನಿಪುಣರು. ಅನೇಕ ಸ್ತೋತ್ರಗಳನ್ನೂ ಯಾದವಾಭ್ಯುದಯ, ಹಂಸಸಂದೇಶಾದಿ ದಿವ್ಯಕಾವ್ಯಗಳನ್ನೂ ಬರೆದ ಕುಶಲ ಕವಿಗಳು. ಇವರು ಶ್ರೀಭಾಷ್ಯಕ್ಕೆ ತತ್ವಟೀಕೆಯನ್ನೂ, ಗೀತಾಭಾಷ್ಯಕ್ಕೆ ತಾತ್ಪರ್ಯ ಚಂದ್ರಿಕಾ ಟೀಕೆಯನ್ನೂ ಬರೆದಿದ್ದಾರೆ. ಇವರು ಚಿಕ್ಕಂದಿನಲ್ಲಿಯೇ ಗರುಡಮಂತ್ರ ಜಪಿಸಿ ಆ ಸಿದ್ಧಿಯಿಂದ ಹಯಗ್ರೀವ ಮಂತ್ರೋಪದೇಶ ಪಡೆದು ಆ ಮೂರ್ತಿಯನ್ನು ಒಲಿಸಿಕೊಂಡರು. ಮುಸಲ್ಮಾನರು ಶ್ರೀರಂಗವನ್ನು ಮುತ್ತಿದಾಗ ಇವರೂ ಇವರ ಸಂಗಡಿಗರೂ ಅಲ್ಲಿಯ ವಿಗ್ರಹಗಳನ್ನು ಉಳಿಸಿಕೊಳ್ಳುವುದಕ್ಕೆ ಎಷ್ಟು ಕಷ್ಟಪಟ್ಟರೆಂಬುದನ್ನು 'ಪ್ರಪನ್ನಾಮೃತ'ದಲ್ಲಿ (ಅಧ್ಯಾಯ 120–22) ವರ್ಣಿಸಿದೆ.[2]

ಮಾಧ್ವಯತಿಗಳಲ್ಲಿ ಪದ್ಮನಾಭತೀರ್ಥರು ನರಹರಿತೀರ್ಥರು ಮಾಧವತೀರ್ಥರು ಅಕ್ಷೋಭ್ಯತೀರ್ಥರು[3] ಈ ನಾಲ್ವರೂ ಮಧ್ವಾಚಾರ್ಯರ ಸಾಕ್ಷಾಚ್ಛಿಷ್ಯರೇ ಆದರೂ ಅವರ ಆದೇಶಾನುಸಾರ ಕ್ರಮವಾಗಿ ಗುರುಪೀಠಾಧಿಪತಿಗಳಾದರು. ಇವರಲ್ಲಿ **ಪದ್ಮನಾಭತೀರ್ಥ**ರ ವೃಂದಾವನ ಆನೆಗೊಂದಿಯ ಬಳಿಯಿರುವ ನವವೃಂದಾವನದಲ್ಲಿದೆ. ಇವರು ವೃಂದಾವನಸ್ಥರಾದುದು 1324 ರಲ್ಲಿ. ಇವರ ನಂತರ **ನರಹರಿತೀರ್ಥರು** ಪೀಠಾಧಿಪತಿಗಳಾಗಿ, 1333 ರಲ್ಲಿ ಹಂಪೆಯಲ್ಲಿ ವಿಜಯವಿಠಲನ ಗುಡಿಯ ಹಿಂಭಾಗದಲ್ಲಿ ತುಂಗಭದ್ರಾನದಿಯ ನಟ್ಟ ನಡುವೆ ಇರುವ ಒಂದು ಸಣ್ಣ ಗುಡ್ಡದ (ಬಂಡೆಯ) ಮೇಲೆ ವೃಂದಾವನಸ್ಥರಾದರು. ಇವರು ಸಂಸ್ಕೃತದಲ್ಲಿ ಗ್ರಂಥ (ವ್ಯಾಖ್ಯಾನ) ಬರೆದಿರುವುದರ ಜೊತೆಗೆ ಕನ್ನಡದಲ್ಲೂ ಅನೇಕ ಕೀರ್ತನೆ (ದೇವರನಾಮ)ಗಳನ್ನು ಮಾಡಿದ್ದಾರೆ.

---

1 ಹೆಚ್ಚಿನ ಅಂಶಗಳಿಗೆ 'ಗುರುಪರಂಪರಾ ಪ್ರಭಾವಂ' (ಮೈಸೂರು, 1914) ನಲ್ಲಿ 'ಅವತಾರ ಪ್ರಕಾರಂ' 'ವೈಭವಂ' ಪ್ರಕರಣಗಳನ್ನು (ಪುಟ 114–179) ನೋಡಿರಿ.

2 ಈ ಕಥೆ Sources (1919) pp. 34–40 ಗಳಲ್ಲಿ ಸಂಗ್ರಹಿಸಲ್ಪಟ್ಟಿದೆ.

3 ಈ ನಾಲ್ವರ ಹೆಸರುಗಳನ್ನೂ ಸಿವೆಲ್ಲ್ ತನ್ನ His. Ins of S. I. ದಲ್ಲಿ ಶ್ರೀಕೂರ್ಮಶಾಸನದ (E.I., IV 260) ಸಂದರ್ಭದಲ್ಲಿ ಉಲ್ಲೇಖಿಸಿದ್ದಾನೆ. (pp 143,164, 170, 181–2, 184, 191.)

ಕಳಿಂಗ ದೇಶದ ಹಿರಿಯ ದೊರೆ ಅಕಸ್ಮಾತ್ ಮರಣಹೊಂದಿ, ಅವನ ಮಗ ಇಮ್ಮಡಿ ನರಸಿಂಹ ಇನ್ನೂ ಚಿಕ್ಕವನಾಗಿದ್ದ ಕಾಲದಲ್ಲಿ ನರಹರಿತೀರ್ಥರು ಹನ್ನೆರಡು ವರ್ಷಕಾಲ (1281-93) ಕಳಿಂಗದೇಶದ ರಾಜ್ಯನಿರ್ವಹಣೆ ಮಾಡಿದರೆಂದೂ ಆ ಕಾಲದಲ್ಲಿ ದೇವ ಸ್ಥಾನ ಕಟ್ಟಿಸಿದರೆಂದೂ **ಶ್ರೀ ಕೂರ್ಮಂ ಶಾಸನ** ಘೋಷಿಸುತ್ತದೆ. ಈ ವಿಷಯ ಗಳನ್ನು ಕೂಲಂಕಷವಾಗಿ ವಿಚಾರ ಮಾಡಿದರೆ ಶ್ರೀಮಾನ್ ಕೆ. ಸಂಪದ್ಗಿರಿರಾಯರು ನನಗೆ ಬರೆದ ಒಂದು ಪತ್ರದಲ್ಲಿ "ವಿದ್ಯಾರಣ್ಯರೊಂದಿಗೆ ಇತರ ಮಠಾಧೀಶ್ವರರೂ— ವಿಶೇಷವಾಗಿ ದ್ವೈತಮತಾಚಾರ್ಯರೂ ಸಹಕರಿಸಿದರೆಂದು ನನ್ನ ಊಹೆ; ಇಲ್ಲವಾದರೆ ನರಹರಿತೀರ್ಥರೂ ಪದ್ಮನಾಭತೀರ್ಥರೂ ಆನೆಗೊಂದಿಯ ಬಳಿ ಬೃಂದಾವನಸ್ಥರಾದುದಕ್ಕೆ ಕಾರಣವಿಲ್ಲ. ಆದರೆ ಅವರ ಪಾತ್ರವೇನೆಂಬುದು ಖಚಿತವಾಗಿ ಹೇಳುವಂತಿಲ್ಲ" ಎಂದು ಅಭಿಪ್ರಾಯಪಟ್ಟಿರುವುದು ಸಯುಕ್ತಿಕವಾಗಿಯೇ ಕಾಣುತ್ತದೆ.

6. ನಾಲ್ಕು ರಾಜವಂಶಗಳು

ಆಳಿದ ಅರಸರ ಕಾಲನಿರ್ಣಯ—ಹಿಂದೆ, ಅಧ್ಯಾಯ 4ರ ಕಡೆಯಲ್ಲಿ, ವಿಜಯನಗರವು 1336ರಲ್ಲಿ ಸ್ಥಾಪಿತವಾಯಿತೆಂದು ಹೇಳಲಾಯಿತಷ್ಟೆ. ಅದರ ವಿನಾಶ 1565 ರಲ್ಲಿ ಆಗಿಹೋಯಿತು. ಈ ಇನ್ನೂರ ಮೂವತ್ತು ವರ್ಷಗಳ ಅವಧಿಯಲ್ಲಿ ಈ ನಗರದ ರತ್ನಸಿಂಹಾಸನವನ್ನು ನಾಲ್ಕು ವಂಶದ ಅರಸರು ಆಳಿದರು. ಈ ವಂಶಾ ವಳಿಗಳ ಚರಿತ್ರೆಯು ನಮಗೆ ಮುಖ್ಯವಾಗಿ (1) ವಿದ್ಯಾರಣ್ಯ ಕಾಲಜ್ಞಾನ (2) ಶಿವಯ್ಯನ ಕಾಲಜ್ಞಾನ (3) ವೀರಪ್ಪಯ್ಯನ ಕಾಲಜ್ಞಾನ (4) ಕೆಳದಿನೃಪವಿಜಯ (5) ವಿಜಯನಗರ ಸಾಮ್ರಾಜ್ಯಮು (6) ಗೋರಕಲ್ಲಿನ ಕವಿಲೆ ಮತ್ತು ಎಲ್ಲ ಕ್ಕಿಂತಲೂ ಹೆಚ್ಚು ಪ್ರಾಮಾಣಿಕವಾದ (7) ಶಾಸನಗಳು — ಈ ಆಧಾರಗಳಿಂದ ತಿಳಿದುಬರುತ್ತದೆ. ದುರದೃಷ್ಟವಶಾತ್ ಇವುಗಳು ಒಂದಕ್ಕೊಂದು ತಾಳ-ಮೇಳ ಬೀಳುತ್ತಿಲ್ಲ. ಆದರೂ ಸಿವೆಲ್ಲ್ ಮೊದಲಾದ ವಿದ್ವಾಂಸರು ಶಾಸನಗಳ ಮೂಲಾ ಧಾರದ ಮೇಲೆ ರಾಜರ, ಅವರ ಆಡಳಿತಗಳ, ಕಾಲಕ್ರಮವನ್ನು ಹೀಗೆ ನಿರ್ಣಯಿಸಿದ್ದಾರೆ:

I **ಸಂಗಮ ವಂಶ**—1336—1486 (150 ವರ್ಷಗಳು)

II **ಸಾಳುವ ವಂಶ**—1486—1505

III **ತುಳುವ ವಂಶ**—1505—1550

IV **ಅರವೀಡು** ಅಥವಾ ಆರವೇಟಿ ವಂಶ 1550—1672.

ಈ ಪೈಕಿ ನಾಲ್ಕನೆಯ ಅರವೀಡು ವಂಶದ ಅರಸರು 1565 ರ ನಂತರ ವಿಜಯ ನಗರ ಧ್ವಂಸವಾಗಿ ಹೋದಕಾರಣ ದೂರ ದಕ್ಷಿಣದಲ್ಲಿ ಹೋಗಿ ಪೆನುಕೊಂಡ ಚಂದ್ರಗಿರಿ

ಗಳಲ್ಲಿ ಆಳಲಾರಂಭಿಸಿದರು; ಆದಕಾರಣ ಆ ಇತಿಹಾಸವನ್ನು ಇಲ್ಲಿ ವರ್ಣಿಸುವುದಿಲ್ಲ; ನಮ್ಮ ಕತೆ 1565 ಕ್ಕೆ ಮುಗಿದುಹೋಗುತ್ತದೆ.

ಈ ನಾಲ್ಕು ವಂಶಗಳಲ್ಲಿ ಮೊದಲನೆಯ **ಸಂಗಮವಂಶದಲ್ಲಿ** ಹದಿಮೂರು ಮಂದಿ ಅರಸರು ಆಳಿದರೆಂದು ವಿದ್ಯಾರಣ್ಯ ಕಾಲಜ್ಞಾನ ಹೇಳುತ್ತದೆ.

ಹಬುಹಾ ವಿಬುದೇರಾವಿ ದೇವಿಮಾ ರಾವಿ—ಸಂಜ್ಞಿಕಾಃ ।
ಭವಿಷ್ಯಂತಿ ನರಾಧೀಶಾಃ ಕರ್ಣಾಟಕ್ಷಿತಿಮಂಡಲೇ ॥

ಹದಿಮೂರು ಅರಸರ ಹೆಸರಿನ ಮೊದಲನೇ ಅಕ್ಷರಗಳನ್ನು ಪೂರ್ವಾರ್ಧ ಸೂಚಿಸುತ್ತದೆ—1. ಮೊದಲನೇ ಹರಿಹರ 2. ಮೊದಲನೇ ಬುಕ್ಕ 3. ಇಮ್ಮಡಿ ಹರಿಹರ 4 ಮೊದಲ ವಿರೂಪಾಕ್ಷ 5. ಇಮ್ಮಡಿ ಬುಕ್ಕ 6. ಮೊದಲ ದೇವರಾಯ 7. ರಾಮಚಂದ್ರ 8. ವಿಜಯ. 9. ಇಮ್ಮಡಿ ದೇವರಾಯ 10. ಇಮ್ಮಡಿ ವಿಜಯ 11 ಮಲ್ಲಿಕಾರ್ಜುನ 12 ರಾಜಶೇಖರ 13 ಇಮ್ಮಡಿ ವಿರೂಪಾಕ್ಷ.

ಎರಡನೆಯ **ಸಾಳುವವಂಶ**ದಲ್ಲಿ ಇಬ್ಬರೇ ಅರಸರು—ಸಾಳುವ ನರಸಿಂಹ, ಇಮ್ಮಡಿ ನರಸಿಂಹ. ಮೂರನೆಯ **ತುಳುವವಂಶ**ದಲ್ಲಿ ನರಸನಾಯಕ, ವೀರನರಸಿಂಹ, ಕೃಷ್ಣದೇವರಾಯ, ಅಚ್ಯುತರಾಯ ಸದಾಶಿವರಾಯರೆಂದು ಐವರು ಅರಸರಾದರು. ನಾಲ್ಕನೆಯ **ಅರವೀಡು ಅಥವಾ ಆರವೇಟಿ ವಂಶ**ದಲ್ಲಿ ಮೊದಲನೆಯವನೇ ಅಳಿಯ ರಾಮರಾಯ; ಇವನ ಕಾಲದಲ್ಲೇ ವಿಜಯನಗರ ನಾಶವಾಗಿ ಹೋಯಿತು. ಹೀಗೆ ರಾಜರ ವಂಶಾವಳಿಯನ್ನು ವಿವರಿಸಿದ ಬಳಿಕ ಆಯಾ ವಂಶಗಳ ಆಳ್ವಿಕೆಯಲ್ಲಿ ನಡೆದ ಘಟನಾವಳಿಗಳನ್ನೂ ಇದೇ ಕ್ರಮದಲ್ಲಿ ವಿವರಿಸುವುದು ಅವಶ್ಯಕ.

ಸಾಮ್ರಾಜ್ಯದ ನಾಲ್ಕು ಹಂತಗಳು—ವಿಜಯನಗರವನ್ನು ನಾಲ್ಕು ವಂಶದವರು ಆಳಿದರಷ್ಟೆ! ಅದಕ್ಕೆ ಅನುಗುಣವಾಗಿ ಸಾಮ್ರಾಜ್ಯದ ಚರಿತ್ರೆಯಲ್ಲೂ ನಾಲ್ಕು ಹಂತಗಳು ಅಥವಾ ಘಟ್ಟಗಳು, ಆಕಸ್ಮಿಕವಾಗಿ, ಹೇಗೋ ತಾಳೆಬಿದ್ದಿವೆ. ಅವುಗಳನ್ನು ಹೀಗೆ ವಿಭಾಗಿಸಿಕೊಳ್ಳಬಹುದು:—

1. ಸಂಗಮರ ಕಾಲ (1336–1485) 150 ವರ್ಷ—ವೃದ್ಧಿಯ ಮತ್ತು ಸಂಘಟನೆಯ ಕಾಲ.

2. ಸಾಳುವರ ಕಾಲ (1485–1505) 21 ವರ್ಷ—ಕ್ಷೋಭೆಯ ಪ್ರಥಮ ದರ್ಶನ : ದುರಾಕ್ರಮಣಕಾಲ.

3. ತುಳುವರ ಕಾಲ (1504–1555) 50 ವರ್ಷ–ಪರಮೋನ್ನತಿಯ ಕಾಲ.

4. ಅರವೀಡು ಕಾಲ—(1555–1672) ಸುಮಾರು 120 ವರ್ಷ — ಅವನತಿ ಮತ್ತು ಪತನಕಾಲ.

ಈಗ ಒಂದೊಂದಾಗಿ ಪ್ರತಿಯೊಂದು ಕಾಲದ ಘಟನಾವಳಿಗಳ ವಿಹಂಗಮಾವಲೋಕನ ಮಾಡಲಾಗುವುದು.

ವೃದ್ಧಿಯ ಮತ್ತು ಸಂಘಟನೆಯ ಕಾಲ—1336 ರಲ್ಲಿ ಹೆಸರಿಗೆ ಶಂಕು ಸ್ಥಾಪನೆಯಾಗಿದ್ದರೂ ಹಿಂದುಗಳು ತಮ್ಮ ಪ್ರಯತ್ನಗಳನ್ನು ಮುಸಲ್ಮಾನರಿಗೆ ತಿಳಿಯದಂತೆ ಗುಪ್ತ-ಗುಪ್ತವಾಗಿಯೇ ಮಾಡಬೇಕಾಗಿತ್ತು. ಐದು ಮಂದಿ ಸಂಗಮ ಸಹೋದರು ದೇಶದ ಭಿನ್ನ ಭಿನ್ನ ಪಾರ್ಶ್ವಗಳಲ್ಲಿ ರಾಜ್ಯವಿಸ್ತಾರ ಮಾಡುತ್ತ ಎಲ್ಲ ಕಡೆಯೂ ತಮ್ಮ ವರ್ಚಸ್ಸು ಬೀರಿ ಹಿಂದುಗಳನ್ನು ಒಂದು ಸೂತ್ರದಲ್ಲಿ ಬಂಧಿಸುತ್ತಿದ್ದರು. ಇದಕ್ಕೆ ಅವರು ಧರಿಸಿದ **'ಹಿಂದುರಾಯ ಸುರತ್ರಾಣ'** ಎಂಬ ಬಿರುದು ಪುಷ್ಟಿಕರವಾಗಿತ್ತು. [ಸುರತ್ರಾಣ ಎಂಬುದು 'ಸುಲ್ತಾನ'ಎಂಬುದರ ರೂಪಾಂತರವೂ ಆಗುತ್ತದೆ; ದೇವೇಂದ್ರ ಎಂದೂ ಅರ್ಥವಾಗುವಂತಿದೆ.]

'ಹಿಂದು' ಶಬ್ದಕ್ಕೆ ಅನುಗುಣವಾಗಿ ಸಂಗಮವಂಶದ ಅರಸರು ಆಗ ಪ್ರಚಾರದಲ್ಲಿದ್ದ ಜೈನ, ಶೈವ, ವೀರಶೈವ, ಶಾಕ್ತ, ಸ್ಮಾರ್ತ ವೈದಿಕ ಎಲ್ಲ ಪಂಗಡದವರಿಗೂ ಪ್ರೋತ್ಸಾಹ ಕೊಟ್ಟರು. ಪರಸ್ಪರ ಜಾತಿಮತ್ಸರಗಳು ಬೆಳೆಯದಂತೆ ಬಲವಾದ ಶಾಸನ ಮಾಡಿದರು. ರಾಜಾಶ್ರಯ ಸಿಕ್ಕಿದ್ದರಿಂದ ಸಾಹಿತ್ಯವು ಚಿಗುರಿ ಕಳಕಳ ಬೆಳೆಯಲಾರಂಭಿಸಿತು. ಸಂಸ್ಕೃತ ತೆಲುಗು ಕನ್ನಡ ಎಲ್ಲ ವಾಙ್ಮಯಗಳೂ ಹೊಸ ಹೊಸ ಕೃತಿಗಳಿಂದ ಸಮೃದ್ಧವಾದುವು. ಖಿಲವಾಗಿ ಹೋಗುತ್ತಿದ್ದ ಪ್ರಾಚೀನ ಧರ್ಮವನ್ನು ಉದ್ಧರಿಸುವುದಕ್ಕಾಗಿ ಚತುರ್ವೇದಗಳಿಗೂ ಪುರಾಣೇತಿಹಾಸಗಳಿಗೂ ವ್ಯಾಖ್ಯಾನಗಳೂ ಅನುವಾದಗಳೂ ಬರೆಯಲ್ಪಟ್ಟವು. ಎಷ್ಟೋ ರಾಜವರ್ಗದವರೂ ಕೂಡ ಸಾಹಿತ್ಯ ಕೃತಿಗಳನ್ನು ಬರೆದರು. ಸಾಹಿತ್ಯದ ಜೊತೆಗೆ ಶಿಲ್ಪಕಲೆಯೂ ಹೊಸ ರೀತಿಯನ್ನನುಸರಿಸಿ ಹಲವು ಕೃತಿಗಳನ್ನು ರೂಪುಗೊಳಿಸಿತು. ಉಧ್ವಸ್ತವಾಗಿದ್ದ ಅನೇಕ ದೇವಾಲಯಗಳು ಜೀರ್ಣೋದ್ಧಾರವಾದುವು. ಹೊಸವು ರಚಿತವಾದುವು. **ವಿಜಯ ವಿಠಲಸ್ವಾಮಿಗುಡಿಯೂ ಹಜಾರರಾಮನ ಗುಡಿಯೂ** ಈ ಕಾಲದಲ್ಲೇ ಆರಂಭವಾದುವು. ಅರಮನೆಗಳು ಊರು-ಕೇರಿಗಳು ಸೊಬಗುಗೊಂಡವು. ಕೆಲವು ಕಡೆ ಜೈನಪದ್ಧತಿಯ ಅನುಕರಣೆ ಮಾಡಿದರೆ, ಕೆಲವು ಕಡೆ ಹಳೆಯ ಚಾಳುಕ್ಯ-ಪಲ್ಲವ ಕಲೆಗಳ ಅನುಕರಣೆ ಮಾಡಲಾಯಿತು.

ಆದರೆ ಈ ಕಾಲದ ಮುಖ್ಯವಾದ ಸಂಗತಿಯೆಂದರೆ ನೆರೆರಾಜ್ಯದ **ಬಹಮನೀ** ಸುಲ್ತಾನರೊಡನೆ ಪದೇ ಪದೇ ನಡೆಯುತ್ತಿದ್ದ ಕದನ-ಕಾದಾಟಗಳು. 1347ರಲ್ಲಿ ಅಲಾಉ-ದ್ ದೀನ್ ಬಹಮನಿ ಎಂಬ ಸರದಾರ ಗುಲ್ಬರ್ಗದಲ್ಲಿ [ಕಲ್ಬುರ್ಗಿಯಲ್ಲಿ] ಈ ಮುಸ್ಲಿಂ ರಾಜ್ಯ ಸ್ಥಾಪಿಸಿದನು. ಹೀಗೆ ಭಿನ್ನ ಭಿನ್ನ ಧರ್ಮಾವಲಂಬಿ ಈ ಎರಡು ರಾಜ್ಯಗಳಿಗೆ ತಿಕ್ಕಾಟ ಬೆಳೆಯುವುದು ಸಹಜವೇ ಆಗಿತ್ತು. ಇದು ಎಷ್ಟೋ ಸಾರಿ ಅತ್ಯುಗ್ರವಾಗಿ ವಿನಾಶಕರವಾಗಿ ಪರಿಣಮಿಸಿತು—ಕಷ್ಟ ನಷ್ಟಗಳಿಗೆ ಕಾರಣವಾಯಿತು. ಆದರೆ ಇದರಿಂದ ಹಿಂದುಗಳಿಗೆ ಒಂದು ರೀತಿ ಅನುಕೂಲವೇ ಆಯಿತು. ದುರ್ಬಲ

ವಾಗಿದ್ದ ಗಡಿನಾಡುಗಳನ್ನು ಬಲಪಡಿಸಬೇಕಾಯಿತು. ಮುಸ್ಲಿಂ ಸೈನಿಕರ ಶಿಸ್ತು ದೃಢತೆಗಳನ್ನು ಹಿಂದುಗಳೂ ಕಲಿತರು, ವಿಜಯನಗರದ ಸೈನಿಕರು ಯುದ್ಧಕಲೆಯಲ್ಲಿ ಕುಶಲರಾದರು. ಇಮ್ಮಡಿದೇವರಾಯನ ಕಾಲದಲ್ಲಂತೂ ಇಡೀ ಸೈನ್ಯವೇ ಪುನರ್ರಚನೆಯಾಯಿತು. ಹೀಗೆ ಸೈನ್ಯ ಸುಸಜ್ಜಿತವಾದ ಕಾರಣ ವಿಜಯನಗರದ ಅರಸರ ಪ್ರಾಬಲ್ಯ ಹೆಚ್ಚಿತು. ಅವರು ಯಥಾರ್ಥವಾಗಿ 'ಪೂರ್ವ ಪಶ್ಚಿಮ ದಕ್ಷಿಣ ಸಮುದ್ರಾಧೀಶ್ವರ'ರಾದರು. ಮುನ್ನೂರು ಬಂದರುಗಳು ಅವರ ಹತೋಟಿಗೆ ಬಂದುವು. ಇದರಿಂದ ಜೊತೆ ಜೊತೆಯಲ್ಲೇ ದೇಶದ ವ್ಯಾಪಾರ-ಸಾಪಾರಗಳು ಕೃಷಿ–ಕೈಗಾರಿಕೆ ಮೊದಲಾದ ವ್ಯವಸಾಯಗಳು ಧಾರಾಳವಾಗಿ ಬೆಳೆದು ಉತ್ಕರ್ಷ ಹೊಂದಿದುವು. ಒಟ್ಟಿನಲ್ಲಿ "ಸ್ವಧರ್ಮ ಜಾಗೃತಿ....ಜ್ಞಾನನಿಷ್ಠೆ, ಸಾಹಿತ್ಯಾಭಿರುಚಿ, ಕಲಾಪ್ರೀತಿ....ಮೊದಲಾದ ನಾಗರಿಕ ಜನಾಂಗದ ಅನೇಕ ಗುಣಗಳು....ಜನತೆಯಲ್ಲಿ ವಿಕಾಸಹೊಂದಿದವು." [1]

ಕ್ಷೋಭೆಯ ಪ್ರಥಮದರ್ಶನ—ಕಡೆಕಡೆಗೆ ಬಂದ ಅರಸರು ಅಸಮರ್ಥರು, ಅವಿವೇಕಿಗಳು. ಸಿಂಹಾಸನಕ್ಕಾಗಿ ಸ್ಪರ್ಧೆ ಆರಂಭವಾಯಿತು. ಶ್ರವಣಬೆಳಗೊಳದ ಒಂದು ಶಾಸನ [2] ಹೇಳುವಂತೆ ಇಮ್ಮಡಿ ದೇವರಾಯ ಕ್ಷಯ ಸಂವತ್ಸರದಲ್ಲಿ (1446) ಮರಣ ಹೊಂದಲು ರಾಜ್ಯಕ್ಕೂ ಕ್ಷಯರೋಗ ತಗಲಿತು. ಕಳಿಂಗದಲ್ಲಿ ಆಗತಾನೆ ಅಧಿಕಾರಕ್ಕೆ ಬಂದಿದ್ದ ಹೊಸ ಗಜಪತಿಗಳು ರಾಜಮಹೇಂದ್ರಿಯವರೆಗೆ ಗಡಿನಾಡನ್ನು ಆಕ್ರಮಿಸಿ, ಕೃಷ್ಣಾ ಮತ್ತು ದಕ್ಷಿಣ ಆರ್ಕಾಟು ಜಿಲ್ಲೆಗಳನ್ನು ಲೂಟಮಾಡಿ ತಿರುವಣ್ಣಾಮಲೆ ಕಂಚಿಗಳನ್ನೂ ಸೂರೆಗೊಂಡರು. ಈ ವಿಷಮಪರಿಸ್ಥಿತಿಯಿಂದ ರಾಜ್ಯವನ್ನು ಏಕನಿಷ್ಠನಾದ **ಸಾಳುವ ನರಸಿಂಹ**ನೆಂಬ ನಾಯಕನು ಸಂರಕ್ಷಿಸಿದನು, ಶತ್ರುಗಳನ್ನು ಸದೆಬಡಿದು ಬಹುಭಾಗವನ್ನು ಹಿಂದಕ್ಕೆ ಗೆದ್ದನು. ಆದರೆ ಸಂಗಮ ಅರಸೊತ್ತಿಗೆಯ ಕಡೆಯ ದೊರೆ ಇಮ್ಮಡಿ ವಿರೂಪಾಕ್ಷನನ್ನು ತಳ್ಳಿ ಸಿಂಹಾಸನವನ್ನು ತಾನೇ ಆಕ್ರಮಿಸಿ ಸಾಮ್ರಾಜ್ಯಾಭಿಷೇಕ ಮಾಡಿಸಿಕೊಂಡ. ಹೀಗೆ ಸಂಗಮರ ವಂಶ ಕೊನೆಗೊಂಡಿತು, ಸಾಳುವ ವಂಶ ಆರಂಭವಾಯಿತು. ಸಾಳುವನ ಮರಣಾನಂತರ ಅವನ ನಿಷ್ಪ್ರಯೋಜಕ ಮಗ ತನ್ನ ತಂದೆ ಸಂಪಾದಿಸಿದ ರಾಜ್ಯವನ್ನು ದಕ್ಕಿಸಿಕೊಳ್ಳಲಿಲ್ಲ; ಅದು ಆಗ ದಂಡನಾಯಕನಾಗಿದ್ದು ಅನೇಕ ವಿಜಯಯಾತ್ರೆ ಕೈಗೊಂಡಿದ್ದ ನರಸನಾಯಕನ ಅಧೀನವಾಯಿತು. ಇಲ್ಲಿಗೆ ಸಾಳುವ ಸಂತತಿಯೂ ಕೊನೆಗೊಂಡು ತುಳುವ ಸಂತತಿ ಆರಂಭವಾಯಿತು.

ಪರಮೋನ್ನತಿಯ ಕಾಲ—ಈ ನರಸನಾಯಕನಿಗೆ ಹಿರಿಯ ಹೆಂಡತಿ ತಿಪ್ಪಾಂಬಿಕೆಯಲ್ಲಿ ವೀರನರಸಿಂಹನೂ, ನಾಗಲಾದೇವಿಯಲ್ಲಿ ಕೃಷ್ಣದೇವರಾಯನೂ, ಕಿರಿಯ ಹೆಂಡತಿ ಓಬಾಂಬಿಕೆಯಲ್ಲಿ ಅಚ್ಯುತರಾಯ ರಂಗರಾಯ—ಹೀಗೆ ನಾಲ್ವರು ಮಕ್ಕಳಿದ್ದರು. ಇವರಲ್ಲಿ ಮೊದಲ ಮೂವರು ರತ್ನಸಿಂಹಾಸನವನ್ನೇರಿದರೂ ಶ್ರೀ ವೀರಪ್ರತಾಪ **ಶ್ರೀ ವೀರ ಕೃಷ್ಣದೇವ ಮಹಾರಾಯ**ನೇ ವಿಜಯನಗರದ ಅರಸರಲ್ಲೆಲ್ಲಾ ಅತ್ಯಂತ

---

1 ವಿಜಯನಗರ ಸಾಮ್ರಾಜ್ಯ, ದೇ. ಜಾಂ., ಪು ೮೧ 2 E. C. ii. 328.

ಸಮರ್ಥ, ಅತ್ಯಂತ ಪ್ರತಾಪಶಾಲಿ. ಇವನು ಪ್ರಬಲರಾಗಿದ್ದ ಗಜಪತಿಗಳನ್ನೂ ಶಾಹೀ ಸುಲ್ತಾನರನ್ನೂ ಹಣಿದು ಸದೆಬಡಿದನು; ಅವನ ರಾಜ್ಯವು ಕೃಷ್ಣಾನದಿಯಿಂದ ಕನ್ಯಾ ಕುಮಾರಿಯವರೆಗೂ ಸಾಲ್ಸತ್ತಿನಿಂದ ಕಟಕದವರೆಗೂ ಹಬ್ಬಿತು. ಕಳಿಂಗ ಮುದ್ಗಲ್ ರಾಯಚೂರು ಚೋಳ ಚೇರ ಪಾಂಡ್ಯಗಳನ್ನೆಲ್ಲ ಗೆದ್ದ ಸಂಗತಿ ಈ ಅರಸನ ನೂರಾರು ಶಾಸನ ಗಳಲ್ಲಿ ವರ್ಣಿತವಾಗಿವೆ.

ಶ್ರೀ ಕೃಷ್ಣದೇವರಾಯ

ರಾಯನ ಧರ್ಮೋದ್ಧಾರ — ಈ ರಾಯನ ವಿಜಯೋತ್ಸವಗಳಿಂದ ಸಾಮ್ರಾಜ್ಯದಲ್ಲಿ ವಿಲಕ್ಷಣವಾದ ಶಕ್ತಿ-ಸ್ಫೂರ್ತಿಗಳು ಸಂಚಾರಗೊಂಡವು, ಸ್ವಾಸ್ಥ್ಯ-ಸೌಖ್ಯಗಳು ಹೆಚ್ಚಿದುವು. ರಾಯನ ಔದಾರ್ಯಕ್ಕೆ, ಧಾರ್ಮಿಕಶ್ರದ್ಧೆಗೆ ಕೊನೆಯೇ ಇರಲಿಲ್ಲ. ಕಂಚಿ, ಕಾಳಹಸ್ತಿ, ತಿರುಪತಿ, ಶ್ರೀಶೈಲ, ಅಹೋಬಲ ಮೊದಲಾದ ತೀರ್ಥಕ್ಷೇತ್ರಗಳಲ್ಲೆಲ್ಲಾ ಅನೇಕ ಮಹಾದಾನಗಳನ್ನು ಮಾಡಿದನು. ಹಂಪೆಯಲ್ಲಿದ್ದ ಅನೇಕ ಗುಡಿಗಳಿಗೂ ಪುಷ್ಕಳ ದಾನ-ಧರ್ಮ ಕೊಟ್ಟನು. ಈ ಗುಡಿಗಳಲ್ಲಿರುವ ನೂರಾರು ಶಿಲಾ ಶಾಸನಗಳೇ ಇದಕ್ಕೆ ಪ್ರಮಾಣ. ನಿದರ್ಶನವಾಗಿ ಹಂಪೆ ಗುಡಿಯ ದೊಡ್ಡ ಗೋಪುರದ ಹೊರಗೆ ನೆಟ್ಟಿರುವ [ಈಗ ಇದು ತುಂಡಾಗಿದೆ] ಶಿಲಾಶಾಸನದ [ಕನ್ನಡ] ಒಕ್ಕಣೆ ಹೀಗಿದೆ [ಈ ಶಾಸನದ ಚಿತ್ರವನ್ನು ಕೊಡಲಾಗಿದೆ. ನೋಡಿ. ಪ್ರತಿಪಂಕ್ತಿಯೂ ಅನುಸ್ವಾರದಿಂದ ಆರಂಭವಾಗಿದೆ] —[ಪಂಕ್ತಿ 1] 0 ಶ್ರೀ ಕೃಷ್ಣದೇವರಾಯ ಶ್ರೀ ||ನಮಸ್ತುಂಗ....[1] [ಪಂಕ್ತಿ 2] ಮೂಲಸ್ತಂಭಾಯ ಶಂಭವೇ || ಕಲ್ಯಾಣಾಯಾಸ್ತು........[ಪಂಕ್ತಿ 3] ....ಪೂಜ್ಯತೇ[2] ....[ಪಂಕ್ತಿ 52]........ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ

---

1 ಆದಿಯ ಈ ಎರಡು ಶ್ಲೋಕಗಳಿಗೆ ಪುಟ 199 ನೋಡಿ. 2 ಇಲ್ಲಿಂದ ಮುಂದೆ 52ನೇ ಪಂಕ್ತಿವರೆಗಿನ ಭಾಗ ಸಂಸ್ಕೃತ ಭಾಷೆಯಲ್ಲಿದೆ; ಆದಕಾರಣ ಅದನ್ನು ಕೊಟ್ಟಿಲ್ಲ. ಈ ಭಾಗದಲ್ಲಿ ಚಂದ್ರನಿಂದ ಇವನವರೆಗೂ ವಂಶಾವಳಿ ಹೇಳಿ ಇವನ ಪೂರ್ವಜರ ಹಾಗೂ ಇವನ ದಿಗ್ವಿಜಯವನ್ನೂ ವರ್ಣಿಸಿದೆ. S. I. I, iv, 259 ನೋಡಬಹುದು.

ಶಕವರುಷ ೧೪೩೦ ಸಂದು [ಪ 53] ಮೇಲೆ ನಡೆವ ಶುಕ್ಲ ಸಂವತ್ಸರದ ಮಾಘ ಶು ೧೪ ಲು ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೀರಕೃ [ಪ. 54] [ಷ] ರಾಯ ಮಹಾರಾಯರೂ ಪಟ್ಟಾಭಿಷೇಕೋತ್ಸವ ಪುಂಣಕಾಲದಲೂ ಶ್ರೀ ವಿರೂಪಾಕ್ಷದೇವರ ಅಮೃತಪಡಿ ನೈವೇದ್ಯಕೆ ಸಿಂ [ಪ 55] ಗ್ಗಿ ನಾಯಕ್ಕನ ಹಳಿಯನೂ ಸಮರ್ಪಿಸಿ ದೇವರ ಸಂಮುಖದ ಮಹಾರಂಗಮಂಟಪವನೂ ಆ ಮುಂದಣ ಗೋಪ್ರರವನೂ ಕಟ (ಪ. 56) ಸಿ ಆ ಮುಂದಣ ಹಿರಿಗೋಪುರವನು ಜೀರ್ನ್ನೋದ್ಧಾರವ ಮಾಡಿಸಿ ಶ್ರೀ ವಿರೂಪಾಕ್ಷದೇವರಿಗೆ ನವರತ (=ರತ್ನ) ಖಚಿತವಾದ ಸುವರ್ನ ಕಮಲ ವನ್ನೂ (ಪ. 57) ನಾಗಾಭರಣವನ್ನೂ ಸಮರ್ಪ್ಪಿಸಿದರು ದೇವರ ನೈವೇದ್ಯ ಆರೋಗಣೆ ಮಾಡುವದಕೆ ಸಮರ್ಪ್ಪಿಸ್ತ ಚಿಂನದ ಹರಿವಾಣ ೧ ಆರ (ಪ. 58)ತಿ ಹಲಗೆ ೨ ಬೆಳಿಯ ಆರತಿ ೨೪ ಯಿಷ್ಟ [ನೂ] ಸಮರ್ಪ್ಪಿಸಿದರು ಯಿಾ ಧರ್ನ್ಮಕೆ ತಪ್ಪಿದವರುಗಳು ಗೋಹತ್ಯ ಬ್ರಂಹ್ಮಹತ್ಯಾದಿ (ಪ. 59) ಮಹಾಪಾತಕ [ಗ] ಳ ಮಾಡಿದ ಪಾಪಕ್ಕೆ ಹೋಗಲುಳವರು ಮಂಗಳಮಹಾ ಶ್ರೀ ಶ್ರೀ ಶ್ರೀ.

ಕೃಷ್ಣದೇವರಾಯ ತಿರುಪತಿಗೆ ಏಳುಸರಿ ಹೋಗಿದ್ದನಂತೆ; ಪ್ರತಿ ಸರಿಯೂ ದಾನಮಾಡಿದ ವಿವರಗಳನ್ನು ಆ ದೇವಸ್ಥಾನದಿಂದ ಪ್ರಕಟಿತವಾದ Epigraphical Report (ಪುಟ 151-66) ಮತ್ತು ಶಾಸನ ಗಳಿಂದ (Volume III) ತಿಳಿದು ಕೊಳ್ಳಬಹುದು. ಹಂಪೆಯಲ್ಲಿರುವ ತುಲಾಭಾರವು (ಚಿತ್ರನೋಡಿ) ಈ ದೊರೆ ಅಲ್ಲಿ ಬಂಗಾರವನ್ನು ತೂಗಿಸಿ ಕೊಂಡು ದಾನಮಾಡಿದಾಗ ಕಟ್ಟಿಸಿ ದ್ದೆಂದು ಪ್ರತೀತಿಯಿದೆ.



ತುಲಾಭಾರ

ಕೃಷ್ಣದೇವರಾಯನ ಗುರುಗಳು-ಶ್ರೀವೈಷ್ಣವ ಸಂಪ್ರದಾಯಕ್ಕೆ ಸೇರಿದ ವೆಂಕಟ ತಾತಾಚಾರ್ಯ ರೆಂಬುವರು ಈ ರಾಯನ ಕುಲಗುರು ಗಳು. ಈ ರಾಯನಿಗೆ 'ಸರ್ವಕ್ರತು ವಾ ಜ ಪೇ ಯ ಸರ್ವತೋಮುಖ ಯಾಜಿಗಳಾದ' ರಂಗನಾಥ ದೀಕ್ಷಿತರು 'ಪುರೋಹಿತ'ರಾಗಿದ್ದರು. (A. R. 686 of 1922). ಇದೇ ರೀತಿ ವೈಖಾನಸ

ಸೂತ್ರದವರೂ, ಭಾರಧ್ವಾಜ ಗೋತ್ರಆಪಸ್ತಂಬ ಸೂತ್ರದ ವಿರೂಪಾಕ್ಷಭಟ್ಟರೇ ಮೊದಲಾದವರೂ ಕೃಷ್ಣನ ಗುಡಿಯ ಶಾಸನದಲ್ಲಿ ಉಲ್ಲೇಖಿತವಾಗಿದ್ದಾರೆ. (A. R.25 of 1889). ಅಲ್ಲದೆ ಈ ರಾಯ 'ಆಜನ್ಮ ಬ್ರಹ್ಮಚಾರಿಯೂ ಅತ್ಯಂತ ಜಿತೇಂದ್ರಿಯನೂ ಆದ ಒಬ್ಬ ಯತಿಯ ಉಪದೇಶವನ್ನು ನಿತ್ಯವೂ ಕೇಳುತ್ತಿದ್ದ'ನೆಂದು ನ್ಯೂನಿಜ್ ಹೇಳಿರುವನು. ಆ ಯತಿಯೇ ವ್ಯಾಸರಾಯರಾಗಿರಬೇಕೆಂದು ಸಂಶೋಧಕರು ಅಭಿಪ್ರಾಯಪಟ್ಟಿರುವರು.[1] ವ್ಯಾಸರಾಯರಲ್ಲಿ ಕೃಷ್ಣದೇವರಾಯನಿಗೆ ಅತ್ಯಂತ ಗೌರವವಿತ್ತೆಂಬುದಕ್ಕೆ ಶಾಸನಗಳ ಪ್ರಮಾಣವೂ ದೊರಕುತ್ತದೆ. ತಿರುಪತಿಯ 4-5 ಶಾಸನಗಳಲ್ಲಿ [2] ವ್ಯಾಸರಾಯರಿಗೆ

ವ್ಯಾಸರಾಯರು ಕುಹೂಯೋಗ ಪರಿಹರಿಸುತ್ತಿರುವುದು

ಮಠ ಕಟ್ಟಿಕೊಳ್ಳಲು ಸ್ಥಳ ಕೊಟ್ಟ ಹಾಗೂ ನೈವೇದ್ಯದಲ್ಲಿ ತನ್ನ ಪಾಲನ್ನು ಅವರಿಗೆ ಅರ್ಪಿಸಿದಂತೆಯೂ ಹೇಳಿದೆ. ಇದೇ ಪ್ರಕಾರ ವಿಜಯವಿಠಲನ ಗುಡಿಯ ಮಧ್ಯ

---

1. ವಿ. ಸಾ., ದೇಸಾಯಿ, ಪು. ೧೩೩ 2. *T. T. D. Inscriptions* III, No. 157-59, 165, 175.

ಗುಡಿಯ ಪೂರ್ವ ಭಾಗದ ಗೋಡೆ ಮೇಲಿನ ಶಾಸನದಲ್ಲಿ[1] ನೈವೇದ್ಯದ ಹಂಚಿಕೆ ಪ್ರಮಾಣವನ್ನು ಹೇಳುವಾಗ "ವಿನಿಯೋಗ ನಾನಾ ವರ್ಗದ ನೈವೇದ್ಯ ಸಹಾ **ಗುರುವುಗಳು ವ್ಯಾಸರಾಯರಿಗೆ ಪಾಲು ೩**............" ಎಂದು ಬರೆದಿದೆ. ಹೀಗೆ ಅವರಲ್ಲಿ ಗೌರವ ಬೆಳೆದುದಕ್ಕೆ ಅವರ ವಿದ್ವತ್ತೂ ಇವನ ವಿದ್ಯಾಪಕ್ಷಪಾತವೂ ಕಾರಣವಾಗಿದ್ದುವು. ಅದಕ್ಕೂ ಹೆಚ್ಚಾಗಿ ವ್ಯಾಸರಾಯರು 1523ನೇ ನವಂಬರ್ 7 ರಂದು ಕೃಷ್ಣದೇವರಾಯನಿಗೆ ಸಂಭವಿಸಿದ್ದ **ಕುಹೂಯೋಗವನ್ನು** ಪರಿಹರಿಸಿದ್ದರು. ಜನ್ಮನಕ್ಷತ್ರ (ಜ್ಯೇಷ್ಠಾ)ದಲ್ಲಿ ತ್ಯಾಜ್ಯ ಅಮಾವಾಸ್ಯೆಯ ದಿನ ಶನ್ಯರ್ಕಾಂಗಾರಕ ಬುಧರ ಯೋಗವಾಗಿ ಆ ಜಾತಕನಿಗೆ ಮರಣವೋ ದೇಶತ್ಯಾಗ-ಧನಹಾನಿಗಳೋ ಆಗುವುದಕ್ಕೆ ಕುಹೂಯೋಗವೆಂದು ಹೆಸರು.[2] ಆ ವೇಳೆಗೆ ಸರಿಯಾಗಿ ವ್ಯಾಸರಾಯರು ರಾಜನನ್ನು ಸಿಂಹಾಸನದಿಂದ ಕೆಳಗಿಳಿಸಿ ತಾವು ಸಿಂಹಾಸನಾರೋಹಣ ಮಾಡಿದರು. ಆ ಯೋಗವು (ರಾಹು) ಸರ್ಪರೂಪದಿಂದ ಅಟ್ಟಿಕೊಂಡು ಬರಲು ವ್ಯಾಸಮುನಿಗಳು ಅದಕ್ಕೆ ಆಹುತಿಯಾಗಿ ತಾವು ಹೊದೆದಿದ್ದ ಶಾಟಿಯನ್ನು ಎಸೆದರು. ಅದನ್ನೇ ಆಹುತಿಗೊಂಡು ಮರಣದ ಯೋಗ ನಿವಾರಣೆಯಾಗಿ ಹೋಯಿತು. (ಈ ದೃಶ್ಯದ ಚಿತ್ರವು ಈಗಲೂ ಸೋಸಲೆ ಮಠದಲ್ಲಿದೆ)

ಸಾಹಿತ್ಯದ ಬೆಳವಣಿಗೆ—ಸುವರ್ಣಯುಗ. ಕೃಷ್ಣದೇವರಾಯನು ಸ್ವಯಂ ವಿದ್ವಾಂಸನೂ ಕವಿಯೂ ಆಗಿದ್ದನಂತೆ. ಅದಕ್ಕಿಂತಲೂ ಹೆಚ್ಚಾಗಿ ವಿದ್ಯಾಪಕ್ಷಪಾತಿ. ಇವನು ಅನೇಕ ಕವಿಗಳಿಗೆ ಪ್ರೋತ್ಸಾಹವಿತ್ತಕಾರಣ ಸಂಸ್ಕೃತ, ಕನ್ನಡ, ತೆಲುಗು ತಮಿಳು ಎಲ್ಲ ಭಾಷೆಗಳಲ್ಲೂ ಉತ್ತಮೋತ್ತಮ ಸಾಹಿತ್ಯ ಬೆಳೆಯಿತು. ಸಂಸ್ಕೃತದಲ್ಲಿ ವ್ಯಾಸರಾಯರು 'ವ್ಯಾಸತ್ರಯ'ಗಳೆಂದು ಪ್ರಸಿದ್ಧವಾದ ಚಂದ್ರಿಕಾ, ನ್ಯಾಯಾಮೃತ ತರ್ಕತಾಂಡವಗಳನ್ನು ರಚಿಸಿದರು. ಅದ್ವೈತ ಮತಪಂಥಕ್ಕೆ ಸೇರಿದ ಅಪ್ಪಯ್ಯದೀಕ್ಷಿತರು (1520–92) ವಿದ್ಯಾರಣ್ಯ-ಸಾಯಣರಂತೆ ಸಂಸ್ಕೃತ ಸಾಹಿತ್ಯದ ನಾನಾಶಾಖೆಗಳನ್ನೂ ಆವರಿಸಿದ ನೂರಾರು ಗ್ರಂಥಗಳನ್ನು ರಚಿಸಿದರು. ಸ್ವಯಂ ಕೃಷ್ಣದೇವರಾಯನೇ ಮದಾಲಸಾ ಚರಿತಂ, ರಸಮಂಜರೀ, ಜಾಂಬವತೀ ಕಲ್ಯಾಣ (ನಾಟಕ)ಗಳನ್ನು ರಚಿಸಿದನಂತೆ. ತೆಲುಗು ಸಾಹಿತ್ಯದಲ್ಲಂತೂ ಇದು ಸುವರ್ಣಯುಗ. ಇವನ ಆಸ್ಥಾನದಲ್ಲಿ ಅಷ್ಟದಿಗ್ಗಜಗಳೆಂದು ಹೆಸರಾದ ಪೆದ್ದನ, ಶ್ರೀನಾಥ ಮೊದಲಾದ ಕವಿಗಳಿದ್ದರು. ಕನ್ನಡ ಸಾಹಿತ್ಯದಲ್ಲಿ ದಾಸಕೂಟವೆಂಬ ಒಂದು ಹೊಸ ಹರಿದಾಸರ ಪಂಥವು ಶ್ರೀಪಾದರಾಯರು-ವ್ಯಾಸರಾಯರಿಂದ ಆರಂಭವಾಗಿ **ಕನಕದಾಸರು ಪುರಂದರದಾಸರುಗಳಿಂದ** ಅತ್ಯುಚ್ಛ್ರಾಯಸ್ಥಿತಿಗೇರಿತು. ಹೀಗೆ ಈ ಕಾಲ ಎಲ್ಲರೀತಿಯಿಂದಲೂ ವಿಜಯನಗರದ ಅತ್ಯುನ್ನತ ಸ್ಥಿತಿಯ ಯುಗ.

---

1. *S. I. I.* IV 254. 2. ದ್ವಾದಶಾಷ್ಟಮಜನ್ಮಸ್ಥಾಃ ಶನ್ಯರ್ಕಾಂಗಾರಕಾ ಬುಧಾಃ। ಕುರ್ವಂತಿ ಪ್ರಾಣಸಂದೇಹಂ ದೇಶತ್ಯಾಗಂ ಧನಕ್ಷಯಮ್ ॥ (ಸುಬೋಧ ಕುಸುಮಾಂಜಲಿ ಗ್ರಂಥಮಾಲೆಯ 'ಶ್ರೀ ವ್ಯಾಸರಾಯ ಸ್ವಾಮಿಗಳು' 1929, ಪು. ೩೪-೬.)

ರಾಜ್ಯದ ಅವನತಿ ಮತ್ತು ವಿನಾಶ-ಹಿಂದೆಯೇ ಪ್ರಸ್ತಾಪಿಸಿದ್ದಂತೆ (ಪು207) ಅತ್ಯುನ್ನತಿಯು ಯಾವಾಗಲೂ ಪತನವನ್ನೇ ಸೂಚಿಸುತ್ತದೆ. ಮಿತಿಮೀರಿದ ಸಂಪತ್ತಿನಿಂದ ಭೋಗ ವಿಲಾಸಗಳ ಲೋಲುಪತೆ ಅಳತೆಮೀರಿ ವೃದ್ಧಿಯಾದುವು, ಈರ್ಷ್ಯಾಸೂಯೆಗಳು ಹೆಚ್ಚಿದುವು. ರಾಜ್ಯಾಕ್ರಮಣದಿಂದ್ಧ ರಾಜಸ ತಾಮಸ ಸಂಪತ್ತು ಕ್ರೋಢೀಕೃತವಾಗಿ ಧರ್ಮಕ್ಕೆ ಗ್ಲಾನಿಯಾಗಹತ್ತಿತು. ಅಚ್ಯುತರಾಯನ ಮರಣಾನಂತರ ಸಲಕಂ ತಿಮ್ಮರಸನಂತಹ ಕೃತ್ರಿಮ ಅರಸರ ಉಪಟಳ ಹೆಚ್ಚಾಯಿತು, ನಿಜವಾಗಿ ಹಕ್ಕುದಾರನಾದ ಸದಾಶಿವ ಮೂಲೆಗೆ ಬಿದ್ದ. ಸರ್ವಾಧಿಕಾರಿಯಾದ **ಅಳಿಯ ರಾಮರಾಯ** ಮುಸಲ್ಮಾನರ ಶಾಹೀರಾಜ್ಯಗಳ ದ್ವೇಷಾಸೂಯೆಗಳಲ್ಲಿ ಪ್ರವೇಶಿಸಿ ಒಬ್ಬರ ಮೇಲೊಬ್ಬರನ್ನು ಎತ್ತಿಕಟ್ಟಿ ಸ್ವಾರ್ಥಸಾಧನೆ ಮಾಡಿಕೊಳ್ಳಬಯಸಿದ. ಆದರೆ ಕುತ್ಸಿತಮಾರ್ಗ ಎಂದಿದ್ದರೂ ಹಾನಿಕರ. ಶಾಹೀ ಸುಲ್ತಾನರು ತಮ್ಮ ತಪ್ಪನ್ನು ತಾವರಿತುಕೊಂಡರು. ಇಸ್ಲಾಂಧರ್ಮದ ಹೆಸರಿನಲ್ಲಿ ಎಲ್ಲರೂ ಒಗ್ಗಟ್ಟಾಗಿ ರಾಮರಾಯನ ಸೊಕ್ಕು ಮುರಿದು, ತಾನೇತಾನಾಗಿ ಮೆರೆಯುತ್ತಿದ್ದ ವಿಜಯನಗರ ಸಾಮ್ರಾಜ್ಯ ನಿರ್ನಾಮಗೊಳಿಸಿ ಬಿಡಬೇಕೆಂದು ಹವಣೆಮಾಡಿಕೊಂಡರು. ಈ ಸುದ್ದಿ ರಾಮರಾಯನಿಗೂ ತಿಳಿಯಿತು. 1564ನೇ ನವರಾತ್ರಿಯಲ್ಲೇ ರಾಮರಾಯ ತನ್ನ ಸಾಮಂತರಿಗೆಲ್ಲಾ ಯುದ್ಧೋದ್ಯಮ ಮಾಡುವಂತೆ ತಿಳಿಸಿದ. ಡಿಸೆಂಬರ್ ಹೊತ್ತಿಗಾಗಲೇ ಕಾಳಗದ ಕಹಳೆಗಳು ಆರ್ಭಟಿಸಹತ್ತಿದವು.

ರಾಕ್ಷಸ-ತಂಗಡಿ ಯುದ್ಧ—(ಜನವರಿ 1565) ರಾಯಚೂರ್-ಮುದ್ಗಲ್‌ಗಳಿಗೆ ಮುಂದೆ ಕೃಷ್ಣಾನದೀ ತೀರದಲ್ಲಿದ್ದ ರಾಕ್ಷಸ-ತಂಗಡಿ ಎಂಬ ಎರಡು ಹಳ್ಳಿಗಳ ಮೈದಾನದಲ್ಲಿ ಉಭಯರ ಸೈನ್ಯಗಳೂ ಕಲೆತುವು. ಎಷ್ಟು ಸೈನ್ಯ ಕಲೆಯಿತೆಂಬ ವಿಷಯದಲ್ಲಿ ನಂಬಲಸಾಧ್ಯವಾದಷ್ಟು ಸೈನ್ಯದ ಸಂಖ್ಯೆಯನ್ನು ಹಿಂದೂ ಮುಸಲ್ಮಾನ ಆಧಾರಗಳು ತಿಳಿಸುತ್ತವೆ. ಏನೇ ಆದರೂ ಬಹು ದೊಡ್ಡ ಸೈನ್ಯ ಶೇಖರಣೆ ಮಾಡಲಾಗಿತ್ತೆಂಬುದು ನಿಸ್ಸಂದಿಗ್ಧವಾದ ವಿಷಯ. ಯುದ್ಧ ಎಷ್ಟು ದಿವಸ ನಡೆಯಿತು ? ಯುದ್ಧಕ್ಕೆ ಕಾರಣಗಳೇನು ? ಯುದ್ಧದ ಸಮಾಪ್ತಿ ಹೇಗಾಯಿತು ? ಎಂಬ ವಿಷಯವಾಗಿಯೂ ಬಹಳ ಮತಭೇದಗಳಿವೆ. ಅವುಗಳನ್ನು ಹೊಂದಿಸುವುದು ಪ್ರಯಾಸಕರ.

'ರಾಮರಾಜನ ಬಖೈರು' ಎಂಬ ಒಂದು ವರದಿಯಲ್ಲಿ ಯುದ್ಧೋದ್ಯಮವನ್ನು ಹೀಗೆ ವರ್ಣಿಸಲಾಗಿದೆ—ಸಮಗ್ರಸೀಮಾ ಮೂಲ ಅಷ್ಟಪ್ರಧಾನಿಗಳು ಸಿದ್ಧವಾಗಲು ರಾಜಭೂವರನು (ಎಂದರೆ ರಾಮರಾಯ) ರಾಣೀವಾಸಕ್ಕೆ ಹೋಗಿ ಹೆಂಡತಿಯರು, ತಾಯಿ ಎಲ್ಲರನ್ನೂ ಬೀಳ್ಕೊಂಡು ವಳ್ಳಿ ಮುಹೂರ್ತವನ್ನು ನೋಡಿಸಿ ತನ್ನ ಗೃಹದಿಂದ ಹೊರಟು ಉತ್ತರದಿಕ್ಕಿಗೆ ನವಗಜ ಜಯಭೇರಿ ಸಂಗಡಯಿಳಿದರು. ಆ ಕಡೆ ನಿಜಾಮ ಶಾಹ ಭೈರಿಪಾದಶಾಹ ಅಲಿಆದಿಲ್‌ಶಾಹರು ಬಂದು ಯಿಳಿದರು ಮೊದಮೊದಲು. ಹಿಂದುಗಳಿಗೇ ಜಯವಾಯಿತು. ಕರ್ನಾಟಕ ಫೌಜು ಹಿಮ್ಮತು ಹಿಡಿದು ನಡದವರಾದರು. ಉಭಯಪಕ್ಷದಲ್ಲೂ ತಾರಾದವರು ಜಖಮೀ ಆದವರು (=ಸತ್ತವರು, ಗಾಯಗೊಂಡ

ವರು) ಆ ಸಂಖ್ಯೆ ಕಾಣದೆ ಹೋಯಿತು. ನಿಜಾಂಶಾ ಕುತುಬ್‌ಶಾ ಹಿಂದಕ್ಕೆ ತೆಗೆದು ಓಡಿದರು.

ಆಗ ಅವರು ಸಂಧಾನಕ್ಕೆ ಬಂದಂತೆ ನಟಿಸಿ ರಾಮರಾಯನನ್ನು ವಂಚಿಸಿದರು. ಸಾಲದುದಕ್ಕೆ ಘೋರಯುದ್ಧ ಮಧ್ಯದಲ್ಲಿ ರಾಮರಾಯನ ಕಡೆಯಿದ್ದ ಇಬ್ಬರು ಮಹಮ್ಮದೀಯ ದಳಪತಿಗಳು ಶತ್ರುಪಕ್ಷ ಸೇರಿದರು. ಎತ್ತನೋಡಿದರೂ ಗೊಂದಲವೆದ್ದಿತು. ಒಬ್ಬರ ಮಾತು ಇನ್ನೊಬ್ಬರಿಗೆ ಕೇಳಿಸದಂತಾಯಿತು. ರಾಮರಾಯ ಪಲ್ಲಕ್ಕಿ ಏರಿಕೊಂಡು ಮುನ್ನುಗ್ಗುತ್ತಿದ್ದಾಗ ಅವನು ನಿಜಾಂಶಹನ ಕೈಗೆ ಸೆರೆಯಾಳಾಗಿ ಸಿಕ್ಕ. ಅವನು ಆ ಕ್ಷಣವೇ ರಾಮರಾಯನ ತಲೆಯನ್ನು ಕತ್ತರಿಸಿ ಹಾಕಿ ಭಲ್ಲೆಗೆ ಚುಚ್ಚಿ ಮೇಲಕ್ಕೆತ್ತಿ ಹಿಡಿದ. ಅದನ್ನು ಕಂಡು ಹಿಂದೂ ಸೈನ್ಯ ಹೆದರಿ ದಿಕ್ಕಾಪಾಲು ಓಡಿತು. ಈ ಘಟನೆಯು 1565ನೇ ಜನವರಿ 25ರಲ್ಲಿ ನಡೆಯಿತೆಂದು ಸಾಧಾರಣವಾಗಿ ಒಪ್ಪಲಾಗಿದೆ. ಇದನ್ನೇ ರೂಢಿಯಲ್ಲಿ, ಆದರೆ ತಪ್ಪಾಗಿ, **ತಾಳಿಕೋಟೆ ಯುದ್ಧ**ವೆಂದೂ ಕರೆಯುವುದುಂಟು.

ವಿಜಯನಗರ ಲೂಟಿಯಾದುದು—ಯುದ್ಧದ ಪರಿಣಾಮ ಹೀಗೆ ವಿಪರೀತವಾದುದನ್ನು ಕಂಡು ವೆಂಕಟಾದ್ರಿ, ತಿರುಮಲರೆಂಬ ರಾಮರಾಯನ ತಮ್ಮಂದಿರು ರಣರಂಗದಿಂದ ಪಲಾಯನಮಾಡಿ ವಿಜಯನಗರಕ್ಕೆ ಧಾವಿಸಿ ಬಂದರು. ಆತುರಾತುರವಾಗಿ ಸಿಕ್ಕಿಸಿಕ್ಕಿದ ಒಡವೆ-ಆಭರಣ ಮುತ್ತು-ಮಾಣಿಕ್ಯ ಧನ-ಕನಕಗಳನ್ನೂ ರತ್ನಸಿಂಹಾಸನವನ್ನೂ ಅಂತಃಪುರ ಸ್ತ್ರೀಯರನ್ನೂ 550 ಆನೆ[1]ಗಳ ಮೇಲೆ ಹೇರಿಕೊಂಡು ಸುಮಾರು ನೂರುಮೈಲಿ ದೂರದಲ್ಲಿದ್ದ ಪೆನುಕೊಂಡ ಕೋಟೆಗೆ ಹೋಗಿ ಬಚ್ಚಿಟ್ಟರು. ಇಲ್ಲಿಂದ ಮುಂದಕ್ಕೆ, ಕೆಲವು ಕಾಲ ಇದೇ ರಾಜಧಾನಿಯಾಯಿತು.

ಅತ್ತ ವಿಜಯೋನ್ಮತ್ತರಾದ ವೈರಿಗಳು ಯುದ್ಧರಂಗದಿಂದ ಚದರಿಓಡುತ್ತಿದ್ದ ಹಿಂದೂ ಸೈನಿಕರನ್ನು ಬೆಂಬತ್ತಿ ಮನಸಾರ ಕೊಲೆಮಾಡಿದರು. ಅನಂತರ ಕೆಲವು ದಿವಸ ದಣುವಾರಿಸಿಕೊಂಡು ಉತ್ತರದಿಂದ ಆನೆಗೊಂದಿಯ ಮಾರ್ಗವಾಗಿ ವಿಜಯನಗರವನ್ನು ಲೂಟಮಾಡಲು ಮೃತ್ಯುವಿನ ದೂತರಂತೆ ಧಾವಿಸಿ ನುಗ್ಗಿದರು. ಅಲ್ಲಿಯ ಜನರಿಗೆ ವಿಪತ್ತಿನ ಸುಳಿವೇ ತಿಳಿಯದು. ರಕ್ಷಕರಿಲ್ಲದೆ ಅನಾಯಕನ ಪಾಳ್ಯದಂತಿದ್ದ ಆ ನಗರ—ಇನ್ನೂರು ವರ್ಷಗಳಿಂದ ವೈಭವದ ನೆಲೆವೀಡಾಗಿ ಬೆಳೆದು ಸಾಮ್ರಾಜ್ಯಲಕ್ಷ್ಮಿಯ ಒನಪು ವೈಯ್ಯಾರಗಳಿಂದ ವಿಲಸಿತವಾಗಿ ಶೋಭಿಸುತ್ತಿದ್ದ ವಿಜಯನಗರ—ಬೆಳಗಾಗುವುದರೊಳಗಾಗಿ ಚಿರಮತ್ಸರಗ್ರಸ್ತ ಮದಾಂಧ ಯವನ ಸೈನ್ಯಗಳ ರಾಕ್ಷಸೀ ಕೃತ್ಯಗಳಿಗೆ, ಕಡಿ ಬಡಿ ಕೀಳು ಕೆಡುವು ದೋಚು ಸುಡು ಲೂಟ ದರೋಡೆಗಳಿಗೆ, ಸುಲಭವಾಗಿ ಬಲಿಯಾಯಿತು, ಎಡೆಬಿಡದೆ ಕಟಂಕಟೆ ಆರುತಿಂಗಳು ನಡೆದ ಹಾವಳಿಗೆ ತುತ್ತಾಯಿತು, ಧಗಧಗ ಉರಿದು ಅಗ್ನಿನಾರಾಯಣಗೆ ಆಹುತಿಯಾಯಿತು. ಸಿವೆಲ್ಲ್ ಹೇಳುವಂತೆ "ಪ್ರಪಂಚದ ಇತಿಹಾಸದಲ್ಲೇ ಇಂಥಾ ವಿನಾಶ, ಇಷ್ಟು ಹಠಾತ್ತಾಗಿ, ಇಂಥಾ ಭವ್ಯವಾದ ನಗರಕ್ಕೆ ಪ್ರಾಯಶಃ

1 *For. Emp*. p. 198-99. ಆದರೆ ವಿ. ಸಾ., ಪುಟ ೧೭೭ ಪ್ರಕಾರ 1550 ಆನೆ.

ಎಂದೆಂದೂ ಸಂಭವಿಸಿರಲಾರದು." ಭಾರಿ ಸಾಮ್ರಾಜ್ಯದ ಭವ್ಯರಾಜಧಾನಿಯಾಗಿದ್ದ ವಿಜಯನಗರ ಕಣ್ಮುಚ್ಚಿ ಬಿಡುವುದರೊಳಗಾಗಿ ಹಾಳು ಕೊಂಪೆಯಾಗಿ ಹೋಯಿತು. ಅಕಟಕಟ, ಎಂಥಾ ಸಾಮ್ರಾಜ್ಯಕ್ಕೆ ಎಂಥಾ ವಿಪತ್ತು ಒದಗಿತು !

7. ಹಂಪೆ-ವಿಜಯನಗರಗಳಿಗೆ ಮಾರ್ಗದರ್ಶನ

ಇದರ ಆವಶ್ಯಕತೆ—ಪಂಪಾಕ್ಷೇತ್ರದ ಮಾಹಾತ್ಮ್ಯವನ್ನೂ ವಿಜಯನಗರದ ಇತಿಹಾಸವನ್ನೂ ನಿರೂಪಣೆಮಾಡಿದ ಬಳಿಕ ಇನ್ನೊಂದು ಕರ್ತವ್ಯ ಉಳಿಯುತ್ತದೆ. ಈ ಗ್ರಂಥ ಓದಿಕೊಂಡು ಈ ಕ್ಷೇತ್ರ ನೋಡಲು ಬಂದವರಿಗೆ ಅನುಕೂಲವಾಗುವಂತೆ ಕೆಲವು ಮಾರ್ಗ ಸೌಕರ್ಯಗಳ ವಿಷಯವನ್ನು ತಿಳಿಸುವುದೂ ಒಂದು ಮುಖ್ಯ ಕರ್ತವ್ಯ ಇದರಿಂದ ಹಂಪೆಗೆ ಬರುವ ಪ್ರವಾಸಿಕರಿಗೆ ಬಹಳ ಉಪಯೋಗವಾಗುವುದರಲ್ಲಿ ಸಂದೇಹವಿಲ್ಲ.

ಹೊಸಪೇಟೆ ಹಂಪೆ-ಆನೆಗೊಂದಿಗಳಿಗೆ ಅತಿಸಮೀಪವಾದ ರೈಲ್ವೆಸ್ಟೇಷನ್. ಇಲ್ಲಿಗೆ ಬಂದರೆ ಸುತ್ತಮುತ್ತಲಿನ ಪ್ರದೇಶಗಳನ್ನೆಲ್ಲ ನೋಡಿಕೊಂಡು ಬರುವುದಕ್ಕೆ ಬಸ್ಸುಗಳ ಮತ್ತು ಟ್ಯಾಕ್ಸಿಗಳ ಸೌಕರ್ಯ ಚೆನ್ನಾಗಿದೆ. ಛತ್ರಗಳೂ ಹೋಟಲು (ಖಾನಾವಳಿ)ಗಳೂ ಫಲಾಹಾರ ಮಂದಿರಗಳೂ ಪ್ರವಾಸಿ ಮಂದಿರವೂ ಅನುಕೂಲವಾಗಿವೆ. ಇದು ಬತ್ತ ಕಬ್ಬು ಬಾಳೆ ಬೆಳೆಯುವ ಕೇಂದ್ರವಾದ ಕಾರಣ ಒಳ್ಳೆಯ ವ್ಯಾಪಾರ ಸ್ಥಳ. ಹೊಸಪೇಟೆಯ ಬಳಿ ಎರಡು ಸಕ್ಕರೆ ಕಾರ್ಖಾನೆಗಳಿವೆ. ತುಂಗಭದ್ರೆಗೆ ಹಾಕಿರುವ ಭಾರಿ ಅಣೆಕಟ್ಟು ಇಲ್ಲಿಗೆ ಮೂರು ಮೈಲಿ ದೂರದಲ್ಲಿದೆ. ಅದೂ ಅಲ್ಲಿರುವ ವೈಕುಂಠ ಮತ್ತು ಕೈಲಾಸಗಳೆಂಬ ಗೋಪುರಗಳೂ ಪ್ರೇಕ್ಷಣೀಯವಾಗಿವೆ. ಮ್ಯಾಂಗನೀಸ್ ಗಣಿಗಳಿರುವ **ಸೊಂಡೂರು** ಇಲ್ಲಿಗೆ ಸಮೀಪದಲ್ಲೇ ಇದೆ; ಅಲ್ಲಿ ಗುಡ್ಡದ ಮೇಲಿರುವ ಕುಮಾರಸ್ವಾಮಿಯೂ ಪುರಾಣಪ್ರಸಿದ್ಧ ಮೂರ್ತಿ. 28–39 ಅಧ್ಯಾಗಳಲ್ಲಿ ವರ್ಣಿತನಾದ ಜಾಂಬವತೇಶ್ವರ ಇಲ್ಲಿಗೆ ಎರಡು ಮೈಲಿ ದೂರದಲ್ಲಿರುವ **ಜಂಬುನಾಥ ಗುಡ್ಡ**ದ ಮೇಲಿದಾನೆ. ಹೀಗೆಯೇ ಸೋಮನಾಥ (ಅಥವಾ ಸೋಮೇಶ್ವರ) ಹುಲಿಗಿ ಅಥವಾ **ಮುನಿರಾಬಾದಿನ** ಬಳಿ ಇದೆ. **ಅನಂತಶಯನ ಗುಡಿ** ಹಂಪೆಗೆ ಹೋಗುವ ದಾರಿಯಲ್ಲಿ ಸುಮಾರು ಅರ್ಧಮೈಲಿ ಮುಂದೆ ಸಿಗುತ್ತದೆ. ಈ ಗುಡಿಯ ದೀರ್ಘ–ವರ್ತುಲಾಕಾರದ ಕಟ್ಟಡ ಭವ್ಯವಾಗಿದೆ. ಅಲ್ಲಿ ದೇವರಿಲ್ಲ. ಗರ್ಭಗುಡಿಗೆ ದೊಡ್ಡದಾದ ಮೂರು ಬಾಗಿಲುಗಳಿವೆ. ಇಲ್ಲಿಯ ಒಂದು ಶಿಲಾಶಾಸನದಿಂದ ಈ ಗುಡಿಯನ್ನು ಕೃಷ್ಣದೇವರಾಯ 1524ರಲ್ಲಿ ಕಟ್ಟಿಸಿದನೆಂದು ಗೊತ್ತಾಗುತ್ತದೆ.

ಹಂಪೆ ಹೊಸಪೇಟೆಗೆ ಏಳು ಮೈಲಿ ದೂರದಲ್ಲಿದೆ; ಬೆಳಗಿನಿಂದ ರಾತ್ರಿಯವರೆಗೆ ಅನೇಕ ಬಸ್ಸುಗಳೂ ವ್ಯಾನುಗಳೂ ಓಡಾಡುತ್ತಲೇ ಇರುತ್ತವೆ. ಇಳಿದುಕೊಳ್ಳುವುದಕ್ಕೆ ಛತ್ರಗಳೂ ಊಟಕ್ಕೆ ಹೋಟಲುಗಳೂ ಇವೆ. ದೇವಸ್ಥಾನದಲ್ಲೂ ಕೆಲವು ರೂಮು

ಗಳು ದೊರಕುತ್ತವೆ; ದೇವಸ್ಥಾನದವರು ಅಡಿಗೆ ಮಾಡಿಕೊಳ್ಳಲು ಪಾತ್ರೆಸಾಮಾನು ಗಳನ್ನು ಎರವಾಗಿ ಕೊಡುತ್ತಾರೆ. ಸ್ನಾನಕ್ಕೆ ನದಿಯೇ ಅನುಕೂಲವಾಗಿದೆ. ಇಲ್ಲಿ ತಂಗಿದ್ದು ಸುತ್ತಮುತ್ತ ಇರುವಸ್ಥಳ ಗಳನ್ನು ನೋಡಿಕೊಂಡು ಬರುವುದು ಉತ್ತಮ.



ಹಂಪೆಯ ಗೋಪುರ

ಇಲ್ಲಿ ಮುಖ್ಯವಾಗಿ ನೋಡ ಬೇಕಾದ್ದು ಹಂಪೆಯ ಗುಡಿ (ಪುಟ 201-4 ನೋಡಿ) ವಿರೂಪಾಕ್ಷ ಮತ್ತು ಪಂಪಾಂಬಿಕೆಯರು (ಪುಟ 6-11)ಭುವನೇಶ್ವರೀ(ಪುಟ 152) ಗುಲಗಂಜಿ ಮಾಧವ (ಪು. 179, ಪಾದಟಿಪ್ಪಣಿ 1), ವಿದ್ಯಾರಣ್ಯರ ಗುಡಿ (ಪು.230) ಮನ್ಮಥಕುಂಡ (ಅಧ್ಯಾಯ 94, 97, 131), ಮತ್ತು ಇತರ ಪ್ರಾಕಾರದೇವತೆಗಳು. ಹಂಪೆಯಲ್ಲಿ ನಿತ್ಯವೂ ಉತ್ಸವವೇ ಆದರೂ ವರ್ಷದಲ್ಲಿ ಉರಿ ಸಿರಿ ಸಂಪತ್ತು ಎಂಬ ಮೂರು ಉತ್ಸವ ಗಳು ವಿಶೇಷತಃ ಮಂಗಳಕರ. ಕಾರ್ತಿಕ ಹುಣ್ಣಿಮೆ ದಿನ ನಡೆಯುವ ಮನ್ಮಥ ದಹನೋತ್ಸವಕ್ಕೆ **ಉರಿ**ಯೆಂದು ಹೆಸರು. ಮಾರ್ಗಶಿರ ಕೃಷ್ಣ ಬಿದಿಗೆ ನಡೆಯುವ ಫಲಪೂಜೆಗೆ (ನಿಶ್ಚಿತಾರ್ಥೋತ್ಸವಕ್ಕೆ) **ಸಿರಿ**ಯೆಂದೂ ಚೈತ್ರಶುದ್ಧ ತ್ರಯೋದಶೀ ನಡೆಯುವ ಕಲ್ಯಾಣೋತ್ಸವಕ್ಕೂ ಆಮೇಲೆ ಹುಣ್ಣಿಮೆ ನಡೆಯುವ ರಥೋತ್ಸವಕ್ಕೂ **ಸಂಪತ್ತೆಂ**ದೂ ಹೆಸರು. ಇವಲ್ಲದೆ ಶ್ರಾವಣ ಸೋಮವಾರಗಳು ಕಾರ್ತಿಕ ಸೋಮವಾರಗಳು ನೂಲುಹುಣ್ಣಿಮೆ [ಶ್ರಾವಣಿ] ಮಹಾಶಿವರಾತ್ರೆ ಮೊದನಾದುವೂ ಮುಖ್ಯ.

ಹಂಪೆ ಗುಡಿಗೆ ದಕ್ಷಿಣದಿಕ್ಕಿನಲ್ಲಿ ಎತ್ತರದ ಮೇಲೆ ಅನೇಕ ದೇವಾಲಯಗಳಿವೆ. ಇವಕ್ಕೆ **ಹೇಮಕೂಟದ ಜೈನದೇವಾಲಯ**ಗಳೆಂದು ಹೆಸರು. ಇವುಗಳ ರಚನಾ ಶೈಲಿ ಜೈನಮಾದರಿಯಲ್ಲಿದ್ದರೂ ಈ ಗುಡಿಗಳಲ್ಲಿ ಈಶ್ವರನ ಲಿಂಗಗಳೂ, ಗೋಡೆಗಳ-ಪ್ರಾಕಾರಗಳ ಮೇಲೆಲ್ಲಾ ತ್ರಿಮೂರ್ತಿ ಗಣೇಶ ಮೊದಲಾದ ಮೂರ್ತಿಗಳು ಇರುವುದ ರಿಂದ ಇವು ಜೈನರ ಗುಡಿಗಳಲ್ಲವೆಂದು ವಿದ್ವಾಂಸರ ಅಭಿಪ್ರಾಯ. ಜೈನಗುಡಿಗಳ ಗಿಂತಲೂ ಇನ್ನೂ ಸ್ವಲ್ಪಮೇಲೆ ದಿಣ್ಣೆಯ ಮೇಲುಗಡೆ **ಕಡ್ಲೆಕಾಳು ಗಣೇಶ**ನ ಗುಡಿ ಯಿದೆ. 16 ಅಡಿ ಎತ್ತರದ ಒಂದೇ ಕಲ್ಲಿನಲ್ಲಿ ಕೊರೆದ ಈ ವಿಗ್ರಹ ಭಗ್ನವಾಗಿದೆ. ಇದಕ್ಕೂ

ಹಿಂಭಾಗದಲ್ಲಿ ಎಂಟಡಿ ಎತ್ತರದ **ಸಾಸಿವೆಕಾಳು ಗಣೇಶ** ಇದೆ. ಈ ಗಣೇಶಗಳೂ ಜೈನಗುಡಿಗಳೂ ಇರುವ ಗುಡ್ಡವೇ **ಹೇಮಕೂಟ** (ಪು. 10). ಹೇಮಕೂಟಕ್ಕೆ ಪೂರ್ವದಲ್ಲಿರುವ ಗುಡ್ಡಪ್ರದೇಶಕ್ಕೆ **ರತ್ನಕೂಟ**ನೆಂದು ಹೆಸರು. ಈಚೆಗೆ ಇಲ್ಲಿ ಒಬ್ಬ ಜೈನ ಗುರುಗಳ ಆಶ್ರಮ ಆರಂಭವಾಗಿದೆ. ಗಣೇಶನ ಗುಡಿಗೆ ಮಗ್ಗುಲಲ್ಲಿ ದಕ್ಷಿಣಕ್ಕೆ ದೊಡ್ಡದಾದ ಕೃಷ್ಣಸ್ವಾಮಿಗುಡಿ ಇದೆ. (ಪು. 148 ನೋಡಿ)

ಹಂಪೆಗುಡಿ ಎದುರಿಗೆ ಸುಮಾರು 4-5 ಫರ್ಲಾಂಗ್ ಉದ್ದಕ್ಕೆ **ಹಂಪೆಬಜಾರು** ಇದೆ; ಪೇಜನ ವರ್ಣನೆಯೊಡನೆ [ಪು. 203-4] ಈಗಿನ ಸ್ಥಿತಿ ಹೋಲಿಸಿ ನೋಡಿ. ತೀರ ಇನ್ನೂ ಹಿಂದೆ ಎತ್ತರವಾದ **ಮತಂಗಪರ್ವತ**ವಿದೆ. [ಅಧ್ಯಾಯ 78]. ಇವನ್ನು ಹತ್ತುವುದಕ್ಕೆ ಮೆಟ್ಟಲುಗಳಿವೆ. ಈ ಬೆಟ್ಟ ಹತ್ತಿ ನೋಡಿದರೆ ಸುತ್ತಲಿನ ಅದ್ಭುತವಾದ ದೃಶ್ಯ ಗೋಚರವಾಗುತ್ತವೆ. ಇಂತಹ ನೋಟ ಅತ್ಯಪೂರ್ವವಾದುದೆಂದು ಲಾಂಗ್ ಹರ್ಸ್ಟ್ ಹೇಳಿದ್ದಾನೆ. ಹಂಪೆಬಜಾರು ದಾಟದರೆ ಎಡಕ್ಕೆ ನದಿಗೆ ಹೋಗಲು ದಾರಿ ಕಾಣುತ್ತದೆ. ಅಲ್ಲಿಂದ ಕಾಲುದಾರಿಯಲ್ಲಿ ಸ್ವಲ್ಪದೂರ ನಡೆದರೆ **ಚಕ್ರತೀರ್ಥವೂ** (ಅ. 76) ಕೋದಂಡರಾಮನ ಗುಡಿ, ಸೂರ್ಯನಾರಾಯಣ ಮತ್ತು ಯಂತ್ರೋದ್ಧಾರಕರ ಗುಡಿಗಳು ಸಿಗುತ್ತವೆ. ಚಕ್ರತೀರ್ಥದ ಸ್ನಾನ ಪುಣ್ಯಸಾಧಕ. ಇವಕ್ಕೆ ಎದುರಾಗಿ **ಋಷ್ಯಮೂಕಪರ್ವತ**ವೂ (ಅ. 13) ಇನ್ನೂ ಬಹಳ ದೂರದಲ್ಲಿ ಹಿಂದೆ ಅಂಜನಾದ್ರಿಯೂ ಕಾಣಿಸುತ್ತವೆ. ಋಷ್ಯಮೂಕಕ್ಕೆ ಎದುರುಭಾಗದಲ್ಲಿ ಬಂಡೆಗಲ್ಲುಗಳ ಮೇಲ್ಭಾಗದಲ್ಲಿ **ಕೋಟಿಲಿಂಗ** [ಅ. 75] ಇದೆ. ಅದಕ್ಕೂ ಸ್ವಲ್ಪ ಮುಂದೆ ನಡೆದುಕೊಂಡು ಹೋದರೆ ನದೀದಡದಲ್ಲೇ ಮಾಧ್ವಸಂಪ್ರದಾಯದ **ರಘುನಂದನ ತೀರ್ಥ**ರ ವೃಂದಾವನವಿದೆ; ಇವರು ಪ್ರಸಿದ್ಧರಾದ ಮಂತ್ರಾಲಯ ಸ್ವಾಮಿಗಳಾದ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಸೇರಿದವರು.

ಈ ವೃಂದಾವನದ ಹಿಂಭಾಗದಲ್ಲಿರುವ ಗುಡ್ಡದ ಪೂರ್ವಭಾಗದಲ್ಲಿ **ಸೀತಾಸರೋವರವೂ** [ಅ. 72-73] ಸುಗ್ರೀವನ ಗುಹೆ, ಎರಡಂತಸ್ತಿನ ಮನೆಯೂ ಇವೆ. ಈ ಎರಡಂತಸ್ತಿನ ಮನೆ ಹಿಂದೆ ವ್ಯಾಸರಾಯರ ಮಠವಾಗಿತ್ತೆಂದು ಐತಿಹ್ಯವುಂಟು.

ಕೋದಂಡರಾಮನ ಗುಡಿಯ ಹಿಂದೆ ಎತ್ತರವಾದ ಕಟ್ಟೆಯ ಮೇಲೆ **ರಂಗನಾಥನ ಗುಡಿ**ಯೂ ಕೆಳಗಡೆ ಸಣ್ಣ ಶ್ರೀನಿವಾಸನ ಹಾಳುಗುಡಿಯೂ ಇನ್ನೂ ಸ್ವಲ್ಪ ಮುಂದೆ ಎಡಕ್ಕೆ ಮೂಲೆಯಲ್ಲಿ **ವರಾಹದೇವರ ಗುಡಿ**ಯೂ ಕಾಣುವುವು. ಅದಕ್ಕೆ ಮುಂದೆ ಅನಂತಶಯನನ ಗುಡಿಯಿದೆ; ಈ ಮೂರ್ತಿ ಭಿನ್ನವಾಗಿಲ್ಲ, ನೋಡಲು ಅಂದವಾಗಿದೆ. ಈ ಎರಡು ಗುಡಿಗಳಿಗೆ ದಕ್ಷಿಣದ ಕಡೆ ಗದ್ದೆಯ ಹಿಂಭಾಗದಲ್ಲಿ ಸುಮಾರು 5-6 ಫರ್ಲಾಂಗ್ ಹಿಂದೆ ಇನ್ನೊಂದು ಭಾರಿ ಗುಡಿ ಕಾಣಿಸುತ್ತದೆ; ಅದೇ **ಅಚ್ಯುತರಾಯನಗುಡಿ.** ಇಲ್ಲಿಯೂ ಅನೇಕ ಶಿಲಾಶಾಸನಗಳಿವೆ. ಮಹಾದ್ವಾರದ ಶಾಸನದಿಂದ ಈ ಗುಡಿ ಅಚ್ಯುತರಾಯ 1539ರಲ್ಲಿ ಕಟ್ಟಿಸಿದನೆಂದು ಗೊತ್ತಾಗುತ್ತದೆ. ಒಳಗಿನ

ಭವ್ಯಮಂಟಪ ಹಜಾರಗಳೂ ವಿಸ್ತಾರವಾಗಿದ್ದರೂ ಶಿಲ್ಪಕಲಾದೃಷ್ಟಿಯಿಂದ ಗಮನಿಸಿದರೆ ಆಗಲೇ ಅವನತಿ ಎದ್ದುಕಾಣಿಸುತ್ತದೆ ; ದೊಡ್ಡ ಆಕಾರ, ನಿಪುಣತೆ ಕಡಮೆ. ಕಂಬಗಳಲ್ಲೂ ಕಲ್ಲು ಗೋಡೆಗಳಲ್ಲೂ ಶ್ರೀ ಕೃಷ್ಣನ ಲೀಲೆಗಳು ಕೆತ್ತಲ್ಪಟ್ಟಿವೆ. ವರಾಹ ಗುಡಿಯ ಕಡೆಯಿಂದ ಅಚ್ಯುತರಾಯನ ಗುಡಿಗೆ ಹೋಗುವ ದಾರಿಯುದ್ದಕ್ಕೂ ಸಾಲುಮಂಟಪಗಳಿವೆ. ಇದು ಹಿಂದೆ, ವಿಜಯನಗರದ ಕಾಲದಲ್ಲಿ, **ಸೂಳೆಬಜಾರ್** ಆಗಿತ್ತು ; ಈಗಲೂ ಅದೇ ಹೆಸರಿದೆ. ಆ ಕಾಲದಲ್ಲಿ ಇದು ಅತ್ಯಂತ ವೈಭವದ ಜನನಿಬಿಡವಾದ, ವೇಶ್ಯೆ–ದೇವದಾಸಿಯರಿರುವ ಕೇಂದ್ರವಾಗಿತ್ತು. ಪ್ರಪಂಚದಲ್ಲಿ ಅತ್ಯಂತ ಬೆಲೆಬಾಳುವ ಸುಗಂಧ ದ್ರವ್ಯಗಳು, ಹೂವು–ಹಣ್ಣುಗಳು, ಒಡವೆ ವಸ್ತುಗಳಿಗೆ ಇದೇ ಆಗಾರವಾಗಿತ್ತು. ಪರ್ಶಿಯಾ ರಾಯಭಾರಿ ಅಬ್ದುರ್ ರಜಾಕ್ ಇಲ್ಲಿದ್ದ ಕಾಮಾಂಗನೆಯರ, ಅವರ ನಿವೇಶನದ ಸೊಬಗಿನ, ಅವರ ಒನಪು ಒಯ್ಯಾರಗಳ—ಅದ್ಭುತವರ್ಣನೆ ಮಾಡಿದ್ದಾನೆ. .ಇಲ್ಲಿ ನವರತ್ನಗಳನ್ನು ಜೋಳದ ರಾಶಿಗಳಂತೆ ರಾಶಿಹಾಕಿರುತ್ತಿದ್ದರಂತೆ ! ಈ ವೇಶ್ಯೆಯರಿಂದ ಒಂದು ದಿವಸಕ್ಕೆ ಸುಮಾರು ಇಪ್ಪತ್ತೊಂದು ಸಾವಿರ ರೂಪಾಯಿ ವೇಶ್ಯಾಕರ [ಟ್ಯಾಕ್ಸ್] ಬರುತ್ತಿತಂತೆ. ಇನ್ನು ಅವರಿಗೆ ಎಷ್ಟು ಆದಾಯವಿರಬೇಕು ? ಆಗಿನ ಕಾಲದಲ್ಲಿ ವೇಶ್ಯಾ ವ್ಯಸನ ಎಷ್ಟು ತೀವ್ರವಾಗಿರಬೇಕು ? ಇದರಿಂದಲೇ ಊಹಿಸಿಕೊಳ್ಳಬಹುದು. ಎಷ್ಟೋ ವೇಶ್ಯೆಯರು ಧಾರ್ಮಿಕ ಕಾರ್ಯಗಳನ್ನೂ ಮಾಡಿ ಲೋಕೋಪಕಾರ ಮಾಡಿದ್ದಾರೆ.

ರಘುನಂದನತೀರ್ಥರ ವೃಂದಾವನಕ್ಕೆ ಸ್ವಲ್ಪ ಉತ್ತರದಲ್ಲಿ ನದೀ ಮಧ್ಯೆ ಉದ್ದಕ್ಕೂ ಕಲ್ಲುಕಂಬಗಳು ಸಾಲಾಗಿ ನಿಂತಿವೆ ; ಇದು ಹಿಂದೆ ಇಲ್ಲಿ ಕಟ್ಟಿದ್ದ **ಕಲ್ಲು ಸೇತುವೆಯ ಅವಶೇಷ**ವೆಂದು ಹೇಳುತ್ತಾರೆ. ಅದನ್ನೂ ದಾಟಿ ಮುಂದೆ ಹೋದರೆ ನದಿದಡಕ್ಕೆ ಹತ್ತಿಕೊಂಡು **ಪುರಂದರದಾಸರ ಮಂಟಪ** ಕಾಣಿಸುತ್ತದೆ; ಒಂದು ಕಂಬದ ಮೇಲೆ ಪುರಂದರದಾಸರ ಮೂರ್ತಿಯನ್ನು ಕೆತ್ತಲಾಗಿದೆ. ದಾಸರಾಯರು ಈ ಮಂಟಪದಲ್ಲೇ ಕುಳಿತು ಅಹ್ನಿಕಗಳನ್ನೂ ಜಪಾದ್ಯನು ಷ್ಠಾನಗಳನ್ನೂ ಮಾಡಿಕೊಳ್ಳುತಿದ್ದರಂತೆ. ಅಲ್ಲಿಂದ ಮುಂದೆ ಹೋದರೆ ಕೃಷ್ಣದೇವ ರಾಯನ **ತುಲಾಭಾರದ** ಮಂಟಪ ಕಾಣಿಸುತ್ತದೆ. [ಪುಟ 240 ನೋಡಿ]. ಇದರ ಕಂಭದ ಅಡಿಯಲ್ಲಿ ಒಂದು ಕಡೆ ಆ ರಾಯನ ಮತ್ತು ಅವನ ಇಬ್ಬರು ರಾಣಿಯರ ಪ್ರತಿಮೆಗಳು ಕೆತ್ತಲ್ಪಟ್ಟಿವೆ. ಅಲ್ಲಿಂದ ಹತ್ತಿರದಲ್ಲೇ ಅದ್ಭುತವಾದ **ವಿಜಯವಿಠಲನ ಗುಡಿ** ಸಿಗುತ್ತದೆ: ಚಕ್ರತೀರ್ಥದಿಂದ ಆರಂಭಿಸಿ ವಿಜಯವಿಠಲನ ಗುಡಿವರೆಗಿನ ಮಾರ್ಗ ಕೇವಲ ಕಾಲುಮಾರ್ಗ ; ಬಸ್ಸು ಕಾರುಗಳು ಅಡ್ಡಾಡುವುದು ಸಾಧ್ಯವಿಲ್ಲ. ವಿಠಲನ ಗುಡಿಯ ಕೆತ್ತನೆ ಕೆಲಸಗಳು ಕಟ್ಟಡದ ಶಿಲ್ಪಕಲೆ ಸಂವಿಧಾನ, ರಂಗಮಂಟಪ, ಕಲ್ಯಾಣಮಂಟಪ, ಕೇಂದ್ರ [ಗರ್ಭ]ಗುಡಿ ಎಲ್ಲದಕ್ಕೂ ಮಿಗಿಲಾಗಿ **ಕಲ್ಲುತೇರು** ಇವನ್ನೆಲ್ಲಾ ನೋಡಿದರೆ ಕಣ್ಣಿಗೆ ದೊಡ್ಡ ಹಬ್ಬವೆನಿಸುತ್ತದೆ. ಹಂಪೆ ಆವರಣದಲ್ಲಿರುವ ಗುಡಿಗಳಲ್ಲೆಲ್ಲಾ ಇದೇ ಅತ್ಯಂತ ಸುಂದರವಾದುದು. ಕೆಲವರು ಈ ಗುಡಿಯಲ್ಲಿ ದೇವರ ಪ್ರತಿಷ್ಠೆಯೇ ಆಗಿರಲಿಲ್ಲವೆಂದು ಜನ ಶ್ರುತಿ ನಂಬಿಕೊಂಡು ಹೇಳುವರು. ಆದರೆ ಇದು ಈ ಗುಡಿಯಲ್ಲೇ ಇರುವ 24–25 ಶಿಲಾಶಾಸನಗಳ



ವಿಜಯ ವಿಠ್ಠಲಸ್ವಾಮಿ ಗುಡಿಯಲ್ಲಿರುವ ಕಲ್ಲುತೇರು
(ಪುಟ 248)



ಕನಕಗಿರಿ ಗೋಪುರ
(ಪುಟ 203)



ಗಜಶಾಲೆ
(ಪುಟ 253)



ರಾಣಿಯರ ಸ್ನಾನಾಗಾರ
(ಪುಟ 252)

ಪ್ರಮಾಣಕ್ಕೆ ವಿರುದ್ಧವಾಗುತ್ತದೆ. ಈ ದೇವರ 'ಅಮೃತಪಡಿ ನೈವೇದ್ಯ'ಕ್ಕಾಗಿಯೂ ಬೇರೆಬೇರೆ ಭಕ್ಷ್ಯ-ಭೋಜ್ಯಗಳಿಗೂ ದಾನಕೊಟ್ಟಿರುವುದರಿಂದ ಇಲ್ಲಿ ದೇವರು ಇದ್ದೇ ಇದ್ದ ರೆಂದು ದೃಢವಾಗಿ ಗೊತಾಗುತ್ತದೆ. ಇಲ್ಲಿರುವ ಕಂಭಗಳಲ್ಲಿ ಸಪ್ತಸ್ವರ ಕೇಳಿಸುವುದು ಅತ್ಯಾಶ್ಚರ್ಯಕರವಾದ ಮಾದರಿ, ತಳಪಾಯಗಲ್ಲಿನಲ್ಲಿ ಉದ್ದಕ್ಕೂ ನೃತ್ಯದ ಭಂಗಿಗಳೂ ಕುದುರೆ-ಕುದುರೆಸವಾರರ ಚಿತ್ರಗಳೂ ಕೆತ್ತಿರುವುದರಿಂದ ಆ ಕಾಲದಲ್ಲಿ ಕುದುರೆ ವ್ಯಾಪಾರ ಎಷ್ಟು ಹೆಚ್ಚಾಗಿ ನಡೆಯುತ್ತಿತ್ತೆಂದು ಗೋಚರವಾಗುತ್ತದೆ. ಇವನ್ನು ನೋಡಿ ಕೊಂಡು ಬಸ್ ಓಡಾಡುವ ದಾರಿಯಲ್ಲಿ ಆನೆಗೊಂದಿ ಘಾಟಿನ ಕಡೆ ತೆರಳಬಹುದು. ವಿಜಯವಿಠಲನ ಗುಡಿ ಹಿಂಭಾಗದಲ್ಲಿ ನದಿಯ ಮಧ್ಯದಲ್ಲಿರುವ ಒಂದು ಸಣ್ಣ ಗುಡ್ಡ ಗಲ್ಲಿನ ಮೇಲೆ ಮಾಧ್ವ ಯತಿವರ್ಯರಾದ **ನರಹರಿತೀರ್ಥ**ರ [ಪುಟ 234] ವೃಂದಾ ವನವಿದೆ; ಈ ವೃಂದಾವನವಿರುವ ಸ್ಥಳ ಹುಡುಕುವುದು ಹೊಸಬರಿಗೆ ಕಷ್ಟ.

ವಿಶಾಲವಾದ **ಕೃಷ್ಣಸ್ವಾಮಿಯ ಗುಡಿ** ಹೇಮಕೂಟದ ಮೇಲ್ಭಾಗದಲ್ಲಿ ಗಣೇಶನ ಗುಡಿಗಳ ದಕ್ಷಿಣಕ್ಕಿದೆ. ಒಳಗೆ ಮಂಡಪಗಳೂ ಪಡಸಾಲೆಗಳೂ ವಿಶಾ ಲವಾಗಿದ್ದರೂ ವಿಜಲವಿಠಲನ ಗುಟಿಯಷ್ಟೇ ಸೊಬಗು ಇಲ್ಲಿ ಕಾಣುವುದಿಲ್ಲ. ಕೃಷ್ಣದೇವ ರಾಯ ಕಳಿಂಗವನ್ನು ಗೆದ್ದ ನೆನಪಿಗಾಗಿ ಉದಯಗಿರಿಯಲ್ಲಿದ್ದ ಬಾಲಕೃಷ್ಣ ವಿಗ್ರಹವನ್ನು ಇಲ್ಲಿ ತಂದು ಈ ಗುಡಿಕಟ್ಟಿಸಿ ೧೪೩೬ನೇ [1514] ಭಾವ ಸಂ॥ದ ಫಾಲ್ಗುಣ ಶು ೩, ಪ್ರತಿಷ್ಠೆ ಮಾಡಿದನೆಂದು ಇಲ್ಲಿಯ ಒಂದು ಶಾಸನ [A. R. 25 of 1889] ಹೇಳು ತ್ತದೆ. ಇದರ ಮುಂದೆ ಹಳ್ಳದಲ್ಲಿರುವ ಮಂಟಪಸಾಲು ಹಿಂದೆ ಕೃಷ್ಣಾಪುರದ ಬಜಾರು [ತೇರುಬೀದಿ] ಆಗಿತ್ತು. ಪಂಪಾಪತಿಯ ಕೆಲವು ಉತ್ಸವಗಳು ಇಲ್ಲಿಯವರೆಗೂ ಬರುವ ವಾಡಿಕೆಯಿತ್ತೆಂದು ಗುಡಿಯ ರಿವಾಜುಗಳಿಂದ ಗೊತ್ತಾಗುತ್ತದೆ.

ಕೃಷ್ಣನ ಗುಡಿ ದಾಟಿ ಇನ್ನೂ ಸ್ವಲ್ಪ ಕೆಳಗೆ ಹೋದರೆ ದೂರದಿಂದಲೇ ಅತ್ಯಂತ ಭವ್ಯವಾದ **ಉಗ್ರನರಸಿಂಹನ ಗುಡಿ** ಕಾಣಿಸುತ್ತದೆ. ಒಂದೇ ಕಲ್ಲಿನಲ್ಲಿ ಕೊರೆದ ಈ ಮೂರ್ತಿ 22 ಅಡಿ ಎತ್ತರವಿದೆ. ತೊಡೆಯ ಮೇಲಿದ್ದ ಲಕ್ಷ್ಮಿ ಕಾಣಿಸದಂತೆ ತುಂಡಾಗಿ ಹೋಗಿದೆ. ಈ ಮೂರ್ತಿಯನ್ನು ಆರ್ಯ ಕೃಷ್ಣಭಟ್ಟ ಶ್ರೀಕೃಷ್ಣದೇವ ರಾಯನ ಆಜ್ಞೆಯಿಂದ ೧೪೫೧ (1529) ರಲ್ಲಿ ಪ್ರತಿಷ್ಠೆಗೈದನೆಂದೂ ಪೂಜಾರಿಗಳಿಗೆ ಎರಡು ಗ್ರಾಮ ದತ್ತಿ ಹಾಕಿಕೊಟ್ಟಂತೆಯೂ ಇಲ್ಲಿರುವ ಶಾಸನದಿಂದ [E.I., I. p. 98] ಗೊತ್ತಾಗುತ್ತದೆ. ಈ ಗುಡಿಯ ಮೇಲಿನ ಕಟ್ಟಡವೆಲ್ಲ 1565ರಲ್ಲಿ ನಡೆದ ಹಾವಳಿಗೆ ತುತ್ತಾಯಿತು ಇದರ ಪಕ್ಕದಲ್ಲೇ 16 ಅಡಿ ಎತ್ತರವಿರುವ ಭಾರಿ ಲಿಂಗವಿದೆ; ಇದಕ್ಕೆ **ಬಡವಿಲಿಂಗ** ಎನ್ನುವರು. ಇನ್ನೂ ಸ್ವಲ್ಪ ಮುಂದೆ **ತುರತಕಾಲುವೆ** ಅಡ್ಡಾಗಿ ಬರುವುದು. ಇದು ಇಮ್ಮಡಿ ಬುಕ್ಕರಾಯನ (1405-61) ಕಾಲದಲ್ಲಿ ಬಹಳ ಹಣ ವೆಚ್ಚಮಾಡಿ ತುಂಗಭದ್ರಾ ನದಿಗೆ ಒಡ್ಡುಹಾಕಿ ರಚಿತವಾಯಿತೆಂದು ನ್ಯೂನಿಜ್

ಬರೆದಿದ್ದಾನೆ. ಇದು 15 ಮೈಲಿ ಉದ್ದಕ್ಕೂ ಸಾವಿರಾರು ಎಕರೆ, ಜಮೀನಿಗೆ ನೀರಿನ ಸರಬರಾಜು ಮಾಡುತ್ತದೆ. 'ಈ ಕಾಲುವೆ ಕಟ್ಟುವುದಕ್ಕೆ ಮುಂಚೆ ರಾಜಧಾನಿಯಲ್ಲಿ ಕುಡಿಯುವ ನೀರಿಗೆ ಬಹಳ ಗೋಳಾಗಿತ್ತಂತೆ; ಚಕ್ರತೀರ್ಥದಿಂದಲೋ ತಳವಾರಕಟ್ಟೆಯಿಂದಲೋ (3 ಮೈಲಿ ದೂರದಿಂದ) ನದೀ ನೀರು ತರಬೇಕಾಗಿತ್ತಂತೆ. ಈ ಕಾಲುವೆ ಯಾದದ್ದು ಅಲ್ಲಿಯ ನಿವಾಸಿಗಳಿಗೆ ವರಪ್ರಸಾದದಂತಿತ್ತು. ಅನೇಕ ಶಾಸನಗಳಲ್ಲಿ ಈ ಕಾಲುವೆ 'ಹಿರಿಯ ಕಾಲುವೆ' ಎಂಬ ಪ್ರಯೋಗ ಕಂಡುಬರುತ್ತದೆ (ಉದಾ. ಚಂಡಿಕೇಶ್ವರನ ಗುಡಿ ಶಾಸನ AR 7 of 1904); ಕಾಲುವೆಯ ಇಳುಕಲು [Gradient] ಹೆಚ್ಚಾಗಿರುವುದರಿಂದ ನೀರು ರಭಸವಾಗಿ ಹರಿಯುತ್ತದೆ; ಆದಕಾರಣ ಇದಕ್ಕೆ ಈ ಹೆಸರು ಬಂದಿದೆ.

ಇಲ್ಲಿಂದ ಮುಂದೆ ಹೋದರೆ **ಚಂಡಿಕೇಶ್ವರನ** ಹಾಳುಗುಡಿಯೂ **ಉದ್ದಾನ ವೀರಭದ್ರನ ಗುಡಿಯೂ** ಸಿಗುತ್ತವೆ. ಚಂಡಿಕೇಶ್ವರನ ಗುಡಿಯಲ್ಲಿನ ಶಾಸನದಿಂದ [ಕಾಲ ಶಕ ೧೪೬೭=ಕ್ರಿ. 1545] ಸದಾಶಿವರಾಯನ ಕಾರ್ಯಕರ್ತನ ದಳವಾಯಿ ಈ ಗುಡಿಗೆ ಕೆಲವು 'ಚಿಂನದ ಆಭರಣಗಳ'ನ್ನೂ ನೈವೇದ್ಯಗಳಿಗೆ 'ಸೋಸ್ತಿಗಳ'ನ್ನೂ 'ಸಮರ್ಪಿಸ್ತ'ನೆಂದು ಗೊತ್ತಾಗುತ್ತದೆ. ಇದೇ ರೀತಿ ವೀರಭದ್ರ ಗುಡಿಯ ಶಾಸನದಿಂದ ಅದೇ ದಳವಾಯಿ ಜಂಗಮಯ್ಯನವರು ಈ ಗುಡಿ ಕಟ್ಟಿಸಿ 'ಮುದುವೀರಂಣನ ಪ್ರತಿಷ್ಟೆಯನ್ನೂ ಮಾಡಿ........ಚಿಂನದ ಆಭರಣಗಳು ರಜತಾದಿ ಉಪಕರಣಗಳನ್ನೂ ಸಮರ್ಪಿಸಿ'........'ನಿತ್ಯನೈವೇದ್ಯಗಳಿಗೆಯೂ........ಬ್ರಾಹ್ಮಣ ವಿನಿಯೋಗ ಅಂಗರಂಗ ವೈಭೋಗ ಮೊದಲಾದ ವಿನಿಯೋಗಗಳಿಗಾಗಿ' ಕೆಲವು ಸ್ವಾಸ್ತಿಗಳನ್ನು ಸಮರ್ಪಿಸಿದರೆಂದು ಗೊತ್ತಾಗುತ್ತದೆ. ಇದರಿಂದ ಈ ದೇವರ ಸರಿಯಾದ ಹೆಸರು **ಮುದ್ದು ವೀರಣ್ಣ**; ಕಾಲಕ್ರಮದಿಂದ ಮುದ್ದು ಹೋಗಿ 'ಉದ್ದಾನ' ಆಗಿಬಿಟ್ಟದೆ. [ಅ. 87ರ ಮುಖಟಿಪ್ಪಣಿ ನೋಡಿ, ಪುಟ 136]

ಇದರಿಂದ ಸುಮಾರು ಮೂರು ಫರ್ಲಾಂಗ್ ಮುಂದೆ ಹೋದರೆ ಎರಡು ಭಾರಿ [ಸುಮಾರು 35 ಅಡಿ ಎತ್ತರ] ಬಂಡೆಗಳು ಡಿಕ್ಕಿಕೊಡುವಂತೆ ಆನಿಸಿಕೊಂಡಿವೆ, ಕೆಳಗೆ ಕಮಾನಿನಂತೆ ಖಾಲಿ ಸ್ಥಳವಿದೆ. ಈ ಗುಂಡುಗಳನ್ನು **ಅಕ್ಕತಂಗಿಯರ ಗುಂಡು** ಎಂದು ಕರೆಯುತ್ತಾರೆ. ಹಿಂದೆ ಇಬ್ಬರು ಅಕ್ಕತಂಗಿಯರು ಹಂಪೆಗೆ ಬಂದು ಎಲ್ಲಾ ವೈಭವವನ್ನೂ ನೋಡಿ ಅನುಭವಿಸಿ ಕಡೆಗೆ "ಈ ಹಂಪೆಗಿಂತ ಕೊಂಪೆಯೇ ಲೇಸು" ಎಂದರಂತೆ. ಅದಕ್ಕೆ ಮುನಿಸಿಕೊಂಡು ನಗರದೇವತೆ ಶಾಪಕೊಟ್ಟದ್ದರಿಂದ ಇವರು ಈ ರೀತಿ ಕಲ್ಲಾಗಿಬಿಟ್ಟರಂತೆ. ಅಕ್ಕತಂಗಿಯರ ಗುಂಡಿನ ಮುಂದೆಯೇ **ಪಾತಾಳೇಶ್ವರನ ಗುಡಿಯಿದೆ**. [ಪು. 145ನೋಡಿ].

ಇನ್ನೂ ಮುಂದೆ ಹೋದರೆ, ಎತ್ತರವಾದ ಚೌಕನೆಯ ಗೋಪುರ ಕಾಣಿಸುವ **ಡಣಾಯಕನ ಕೋಟೆ** ಸಿಗುತ್ತದೆ. ಇದು ದಂಡನಾಯಕನ [ಸೈನ್ಯಾಧಿಪತಿಯ]

ನಿವಾಸವಾಗಿತ್ತು. ಇದಕ್ಕೆ ಹಿಂದೆ, ಸುತ್ತಲೂ ಎತ್ತರವಾದ ಪೌಳಿಗಳಿಂದ ಸುತ್ತಲ್ಪಟ್ಟ **ಟಂಕಸಾಲೆ** ಇದೆ. ಈ ವಿಷಯದ ವಿವರಗಳು ನಮಗೆ, ಆ ಕಾಲದಲ್ಲಿ ಬಂದು ನೋಡಿಕೊಂಡು ಹೋಗಿದ್ದ ಪರದೇಶೀ ಯಾತ್ರಿಕರ ಲೇಖನಗಳಿಂದ ಪತ್ತೆಯಾಗುತ್ತವೆ. ಇದರ ಹಿಂದೆ ಒಂದು ಮಸೀದಿಯಂತಹ ಕಟ್ಟಡವಿದೆ. ಇದನ್ನು ಕೆಲವರು—ಮುಸಲ್ಮಾನ ಅಧಿಕಾರಿಗಳಿಗಾಗಿ ಕಟ್ಟಿಸಿದ ಮಸೀದಿ ಎಂದು ಹೇಳುತ್ತಾರೆ; ಇದು ಅಸಂಭವ. ಏಕೆಂದರೆ ಎಲ್ಲಾ ಮಸೀದಿಗಳು ಪಶ್ಚಿಮಾಭಿಮುಖವಾಗಿದ್ದರೆ ಇದು ಉತ್ತರಾಭಿಮುಖವಾಗಿದೆ, ಮತ್ತು ಮಸೀದಿಗೆ ಮುಖ್ಯವಾಗಿರಬೇಕಾದ 'ಮೆಹರಾಬ್' ಎಂಬ ಪ್ರಾರ್ಥನಾ ಕಟ್ಟೆಯು ಇಲ್ಲವೆಂದು ಪಂಚಮುಖಿಯವರು ಸೂಚಿಸಿದ್ದಾರೆ. ಈ ಕಟ್ಟಡಗಳನ್ನು ನೋಡಿಕೊಂಡು ಮುಂದೆ ಹೋದರೆ ಅದ್ಭುತವಾದ ಕೆತ್ತನೆಯ ಕೆಲಸ ಮಾಡಿರುವ ಗೋಡೆಗಳುಳ್ಳ **ಹಜಾರ ರಾಮಸ್ವಾಮಿ ಗುಡಿ** ಗೋಚರವಾಗುತ್ತದೆ. ಇದು ವಿಜಯನಗರದ ಅರಮನೆಯ ಗುಡಿ. ಇದರ ಗೋಡೆಗಳ ಮೇಲೆ, ಒಳಗೂ ಹೊರಗೂ ಸಹ, ಬೇಟೆಯ ದೃಶ್ಯಗಳು, ನರ್ತನ ಭಂಗಿಗಳು, ಚತುರಂಗ ಸೈನ್ಯ, ರಾಮಾಯಣದ ಪ್ರಸಂಗದ ಚಿತ್ರಗಳು ಕೊರೆಯಲ್ಪಟ್ಟಿವೆ. ಒಳಗಡೆ ಗರ್ಭಗುಡಿಯ ಮುಂದಿನ ಅಂಗಳದಲ್ಲಿರುವ ನಾಲ್ಕು ಕರಿಕಲ್ಲುಗಳಲ್ಲೂ ಅಲ್ಲಲ್ಲೇ ಇತರ ಕಡೆಗಳಲ್ಲೂ ಕಾಣಿಸುವ ವಂಕಿಯ ಕೆಲಸ, ಕುಸುರಿ ಕೆತ್ತನೆ ಪ್ರಥಮ ದರ್ಜೆಯ ಕಲೆ. ಹೊರಅಂಗಳದ ಒಂದು ಗೋಡೆಯ ಕಲ್ಲಿನ ಮೇಲೆ ಕೆತ್ತಿರುವ ಸಂಸ್ಕೃತ ಶ್ಲೋಕದಲ್ಲಿ 'ದೇವರಾಯ'ನ ಹೆಸರು ಇರುವುದರಿಂದ ಈ ಗುಡಿ ಅವನ ಕಾಲದಲ್ಲೇ ಕಟ್ಟಿರಬೇಕೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಗರ್ಭಗುಡಿಗೆ ಪಕ್ಕದಲ್ಲಿರುವ ಸಣ್ಣ ಗುಡಿಯಲ್ಲಿ ಸೀತಾಮ್ಮನವರ ವಿಗ್ರಹವಿರುತ್ತಿತ್ತು.

ಈ ರಾಮನಗುಡಿಗೆ ಹಿಂದೆ ದೊಡ್ಡ **ಕಲ್ಲಿನ ಗೋದಲೆ** ಇದೆ. ಇದು 42 ಅಡಿ ಉದ್ದವೂ, ಮೂರು ಅಡಿ ಅಗಲವೂ ಸುಮಾರು ಮೂರು ಅಡಿ ಆಳವೂ ಇದೆ. ಇದರಲ್ಲಿ ಸಾಮಂತರಾಜರ ಆನೆಗಳು ಕುಡಿಯುವುದಕ್ಕಾಗಿ ನೀರು ಇಟ್ಟಿರುತ್ತಿದ್ದರಂತೆ. ಈ ಗೋದಲೆಯ ಮುಂದೆಯೇ **ರಾಜರ ಆಸ್ಥಾನಭವನ (ಸಭಾಮಂಟಪ)** ಇದೆ. ಇದರ ಮೇಲ್ಭಾಗವೂ ಸುಟ್ಟುಹೋಯಿತು. ಎತ್ತರವಾದ ಸ್ಥಳದ ಮೇಲೆ ರಾಜ ಬಂದು ಕೂಡುತ್ತಿದ್ದ. ಇದಕ್ಕೆ ಹಿಂದೆ **ರಾಜನ ಅರಮನೆಯ ತಳಪಾಯವೂ** ಅಲ್ಲೇ ನೆಲಮಾಳಿಗೆಯೂ ಇವೆ. ಈ ನೆಲಮಾಳಿಗೆಗೆ ರಹಸ್ಯಮಂದಿರವೆಂದೂ ಹೆಸರು; ಇಲ್ಲೇ ಗುಪ್ತವಿಚಾರ ನಡೆಸುತ್ತಿದ್ದರು. ಇವು ಕಲ್ಲಿನ ಕಟ್ಟಡಗಳಾಗಿರದೆ ಗಚ್ಚಿನ [ಗಾರೆಯ] ಕೆಲಸಗಳಾಗಿವೆ. ಅರಮನೆಗೆ ನೀರಿನ ಸರಬರಾಜು ಮಾಡುತ್ತಿದ್ದ **ಕಲ್ಲಿನ ಕಾಲುವೆಗಳೂ** ನೋಡತಕ್ಕವು. ಏತದಿಂದ ನೀರೆತ್ತಿ ಇವುಗಳಲ್ಲಿ ಬಿಡುತ್ತಿದ್ದರು. ಇದರ ಪಕ್ಕದಲ್ಲೇ ಎತ್ತರವಾದ **ದಸರ ದಿಬ್ಬ**ವಿದೆ. **ಮಹಾನವಮಿ ದಿಬ್ಬ** ಅಥವಾ ಸಿಂಹಾಸನ ಮಂಟಪವೆಂತಲೂ ಕರೆಯುವುದುಂಟು. ನವರಾತ್ರಿ ಸಮಯದಲ್ಲಿ ಇದರ ಮೇಲೆ ಮಂಟಪ ಕಟ್ಟಿಸಿ ಅರಸರು ದರ್ಬಾರು ನಡೆಸುತ್ತಿದ್ದರು. ಈ ದಿಬ್ಬದ ಗೋಡೆಗಳ ಸುತ್ತಲೂ ಕಲ್ಲಿನಲ್ಲಿ ಅದ್ಭುತವಾದ ಕೆತ್ತನೆ ಕೆಲಸಗಳು—ನಾಟ್ಯದ, ಯುದ್ಧದ ಬೇಟೆಯ

ಪ್ರಸಂಗಗಳಿವೆ. ಈ ದಿಬ್ಬವನ್ನು ಕೃಷ್ಣದೇವರಾಯ ಗಜಪತಿ ಅರಸನನ್ನು ಗೆದ್ದುಕೊಂಡು ಬಂದ ಬಳಿಕ ಕಟ್ಟಿಸಿದ್ದರಿಂದ ಇದಕ್ಕೆ 'ವಿಜಯ ಮಂದಿರ'ವೆಂದೂ ಹೆಸರುಂಟೆಂದು ಪೇಜ್ ಹೇಳುತ್ತಾನೆ. ಇಲ್ಲೂ ಹಜಾರ ರಾಮನಗುಡಿ, ವಿಠಲನಗುಡಿಗಳಲ್ಲೂ ಇರುವ ಚಿತ್ರುಗಳ ಅಧ್ಯಯನದಿಂದ ಆ ಕಾಲದ ಸಾಮಾಜಿಕ ನಡೆನುಡಿಗಳ ಉತ್ತಮ ಪರಿಚಯ ವಾಗುತ್ತದೆ. ಈ ದಿಬ್ಬಕ್ಕೆ ಪೂರ್ವದಲ್ಲಿ ಭಾರಿಯ **ಕಲ್ಲಿನ ಬಾಗಿಲು** ಇದೆ; ಇದರ ಚಿತ್ರ ಕೆಲಸ ಸುಂದರವಾಗಿದೆ.

ಈ ದಿಬ್ಬಕ್ಕೂ ಹಿಂದೆ, ಕಾಮಲಾಪುರದ ರಸ್ತೆಗೆ ಎದುರಾಗಿ, **ರಾಣಿಯರ ಸ್ನಾನಾಗಾರ** ಅಥವಾ ಓಕಳಿಕುಂಡ (Queens' Bath) ಇದೆ. ಇದೂ ಗಚ್ಚಿನ (ಗಾರೆಯ) ಕಟ್ಟಡ. ಹೊರಭಾಗ ಬಹಳ ಸಾಧಾರಣವಾಗಿದೆ. ಇದರ ರಚನಾ ಶೈಲಿ "ಇಂಡೋ-ಸಾರ್ಸೆನಿಕ್" ಪದ್ಧತಿಯದು; ಇದು ಕಮಲಮಹಲ್ ಕಾಲದ ರಚನೆಯೇ ಆಗಿರಬೇಕು. ಈ ಸ್ನಾನಾಗಾರವ ಸ್ವಲ್ಪ ದಕ್ಷಿಣಕ್ಕೆ ನೀರು ತುಂಬುವ ದೊಡ್ಡ ತೊಟ್ಟಿ (water tower) ಇದೆ. ರಸ್ತೆಯಲ್ಲಿ ಹಂಪೆಯ ಕಡೆಗೆ ಸುಮಾರು ಒಂದು ಫರ್ಲಾಂಗ್ ಕೆಳಗೆ ಗಚ್ಚಿನ ಅಷ್ಟಕೋಣಾಕಾರದ **ಅರವಂಟಿಗೆ** ಇದೆ. ಇದರಲ್ಲಿ ನಡುವೆ ಒಂದು ಕಾರಂಜಿಯೂ ಒಂದೇ ಕಲ್ಲಿನಲ್ಲಿ ಕೊರೆದ ದೋಣಿಯೂ ಇವೆ. ಕಲ್ಲಿನ ದೋಣಿ ಯಲ್ಲಿ ಹಾಲುತುಂಬಿ ಬಡಬಗ್ಗರಿಗೆ ಮತ್ತು ಮಕ್ಕಳಿಗೆ ಆ ಕಾಲದಲ್ಲಿ ಹಾಲು ಕೊಡುತ್ತಿದ್ದ ರಂತೆ. ರಾಣಿಯರ ಸ್ನಾನಾಗಾರಕ್ಕೂ ಬಹಳ ಹಿಂಬದಿಯಲ್ಲಿ ಪೂರ್ವದ ಕಡೆ ಇನ್ನೊಂದು, ಇದೇ ಮಾದರಿಯ ಅಷ್ಟಾಕೋಣಾಕಾರದ **ಸ್ನಾನಮಂದಿರ**ವಿದೆ, ಇದು ರಾಜಪುತ್ರರ ಸ್ನಾನಮಂದಿರವಂತೆ.

ಇಲ್ಲಿಂದ ರಾಣಿಯರ ವಾಸಸ್ಥಾನದ ಕಡೆಗೆ ಬರಬೇಕು. ಹಜಾರರಾಮನ ಗುಡಿ ಎದುರಿಗೆ ಎತ್ತರನೆಯ ಕೋಟೆಗೋಡೆ ಕಾಣಿಸುತ್ತದೆ. ಇದೇ **ರಾಣಿಯರ ನಿವಾಸ.** ಈ ಕೋಟೆಗೂ ಗುಡಿಗೂ ಮಧ್ಯೆ ಹೊಸದಾಗಿ ಭಾರತ ಸರ್ಕಾರದವರು ಕ್ಯಾಂಟೀನ್ ಕಟ್ಟಿ ಸಿದ್ದಾರೆ. ಕೋಟೆಯ ಒಳಗಡೆ ಹೋದರೆ ರಾಣಿಯರ ಅರಮನೆಯ ತಳಪಾಯ ಮಾತ್ರ ಇದೆ. ಅದಕ್ಕೆ ವಾಯುವ್ಯಮೂಲೆಯಲ್ಲಿ **ಕಾವಲುಗಾರರ ಮನೆಗಳಿವೆ.** ಇದಕ್ಕೆ ಕುಮಾರರಾಮನ ಗರಡೀಮನೆಯೆಂಬ ಹೆಸರು ರೂಢಿಯಾಗಿ ಬಂದಿದೆ. [ಪುಟ 224, 1ನೇ ಪ್ಯಾರಾ ನೋಡಿ.] ಅಲ್ಲೇ ದಕ್ಷಿಣದ ಪಕ್ಕದಲ್ಲಿ ಸುಂದರವಾದ ಕಮಲದ ಆಕಾರದ ಉಪ್ಪರಿಗೆಯ ಮನೆಯಿದೆ; ಇದಕ್ಕೆ **ಕಮಲಮಹಲ್** ಎಂದು ಹೆಸರು. ಇದೂ ಗಚ್ಚಿನ ಕಟ್ಟಡ, ಇಂಡೋ-ಸಾರ್ಸೆನಿಕ್ ಮಾದರಿ. ಉಪ್ಪರಿಗೆಯಲ್ಲಿ ಬೇಕಾದಷ್ಟು ಕಿಟಕಿಗಳಿರುವುದರಿಂದ ಬೇಸಿಗೆಯಲ್ಲೂ ತಂಪಾದ ಗಾಳಿ ಬರಲು ಅನುಕೂಲವಾಗಿದೆ. ಈ ಕಟ್ಟಡವೇ ಈ ಆವರಣದಲ್ಲೆಲ್ಲಾ ಅತ್ಯಂತ ಸುಂದರವಾದುದು. ಇದರ ಕಂಬಗಳು ಕಮಾನುಗಳೂ ಮುಸ್ಲಿಂ ರೀತಿಯಲ್ಲಿವೆ, ಆದರೆ ತಳಪಾಯ ಮೇಲುಮಾಳಿಗೆ ಕಾರ್ನಿಸ್ ಮೊದಲಾದುವು. ಹಿಂದೂ ರೀತಿಯಲ್ಲಿವೆ. ಈ ಪ್ರಕಾರ ಎರಡೂ ಪದ್ಧತಿಗಳನ್ನು ಅಳ ವಡಿಸಿಕೊಳ್ಳುವುದು ವಿಜಯನಗರದ ಸಂಸ್ಕೃತಿಯ ಒಂದು ಪ್ರಾಶಸ್ತ್ಯ.

ಈ ಆವರಣದ ಆಗ್ನೇಯ ಐಶಾನ್ಯ ಎರಡು ಮೂಲೆಗಳಲ್ಲೂ ಎರಡು ಭಿನ್ನಭಿನ್ನ ಮಾಟದ ಗೋಪುರಾಕಾರದ ಎತ್ತರದ **ಕಾವಲುಗೋಪುರಗಳು**[watch towers] ಇವೆ; ಇವಕ್ಕೂ ಮುಸಲ್ಮಾನ ಶಿಲ್ಪಪದ್ಧತಿಯಂತೆ ಕಮಾನಿನ ಆಕಾರದ ಶಿಖರಗಳಿವೆ. ಇಲ್ಲಿ ರಾಣೀವಾಸದ ಕಾವಲು ಸ್ತ್ರೀಯರು ಇರುತ್ತಿದ್ದರು. ಕೋಟೆಯ ಹೊರಗಡೆ ದೊಡ್ಡದಾದ **ಆನೆಸಾಲು (ಗಜಶಾಲೆ)** ಇದೆ. ಇದರಲ್ಲಿ ಹನ್ನೊಂದು ಕೋಣೆಗಳಿದ್ದು ಮಧ್ಯದ್ದು ಎತ್ತರವಾಗಿ ದೊಡ್ಡದಾಗಿದೆ; ಪಟ್ಟದಾನೆಯನ್ನು ಇಲ್ಲೇ ಕಟ್ಟುತ್ತಿದ್ದರೆಂದು ಹೇಳುತ್ತಾರೆ. ಈಚಿಗೆ ಇಲ್ಲಿ ಭಾರತಸರ್ಕಾರದವರು ಪ್ರದರ್ಶನಶಾಲೆ [ಮ್ಯೂಜಿಯಂ] ಇಟ್ಟಿದ್ದಾರೆ. ಇದಕ್ಕೆ ಉತ್ತರದಲ್ಲಿ **ಕಾವಲುಗಾರರ ಮನೆ**ಯಿದೆ. ಇದು ಚಾವಡಿಯಂತೆ ಎತ್ತರವಾದ ಕಟ್ಟೆಯಮೇಲೆ ನಿಂತಿದೆ; ಕಂಬದ ಸಾಲುಗಳನ್ನೂ ಕಮಾನುಗಳನ್ನೂ ನೋಡಿದರೆ ಇದು ಕಾವಲುಗಾರರ ವಸತಿಯೆನಿಸುತ್ತದೆ. ಈಗ ಇಲ್ಲಿಯೂ ಪ್ರದರ್ಶನಶಾಲೆ ಏರ್ಪಡಿಸಲಾಗಿದೆ. ಗಜಶಾಲೆಗೆ ವಾಯುವ್ಯದಿಕ್ಕಿನ ಕಡೆ **ರಂಗನಾಥನ ಗುಡಿ** ಇದೆ. ಇಲ್ಲಿ ಬೃಹತ್ತಾದ 9ಅಡಿಯ ಹನುಮಂತನ ವಿಗ್ರಹವಿದೆ. ಇಲ್ಲಿರುವ ಒಂದು ಶಾಸನದಿಂದ ಇಲ್ಲಿಯ ಮಂಟಪವನ್ನು 1546ರಲ್ಲಿ ಸದಾಶಿವರಾಯನ ದಂಡನಾಯಕನಾದ ತಿಮ್ಮರಾಜು ಕಟ್ಟಿಸಿದನೆಂದು ತಿಳಿದುಬರುತ್ತದೆ. ಇದಕ್ಕೂ ಮುಂದೆ ಬಯಲಿನಲ್ಲಿ ಬೇವಿನಮರದಡಿಯಲ್ಲಿ **ಪಟ್ಟಣದ ಎಲ್ಲಮ್ಮನ ಗುಡಿ**ಯಿದೆ [ಸಣ್ಣಗುಡಿ]; ಈಕೆ ಊರುದೇವತೆ. ಈ ಬಯಲಿಗೆ ಹಿಂದಿರುವ ಗುಡ್ಡದ ಬದಿಯಲ್ಲಿ ಒಂದು **ಬಂಡೆಗಲ್ಲಿನಲ್ಲಿ ಕೊರೆದ ಗುಡಿ**ಯಿದೆ. ಒಂದೇ ಬಂಡೆಯಲ್ಲಿ ಮೂರು ರೂಮುಗಳುಳ್ಳ ಈ ಗುಡಿಯನ್ನು ಕೊರೆದಿದೆ. ಇದರ ಶೈಲಿ, ಸಂವಿಧಾನ ನೋಡಿದರೆ ಇದು 10-11ನೆಯ ಶತಮಾನದ ಜೈನರ ಗುಹಾಂತಶ್ಚೈತ್ಯಾಲಯವೆಂದು ತೋರುತ್ತದೆ.

ರಾಣಿಯರ ಸ್ನಾನಾಗಾರಕ್ಕೆ ಪಕ್ಕದಲ್ಲಿ, ಸ್ವಲ್ಪ ದಕ್ಷಿಣದ ಕಡೆ **ಚಂದ್ರಶೇಖರನ ಗುಡಿ, ಸರಸ್ವತೀಗುಡಿಗಳೂ** ಇವೆ. ಇದರ ಹತ್ತಿರವೇ ವಿಜಯನಗರದ **ಹಳೆಯ ಕೋಟಿಗೋಡೆಯ ಅವಶೇಷಗಳೂ** ಇವೆ. ಅಲ್ಲಿಂದ ಮುಂದೆ ಹೋದರೆ **ಕಾಮಲಾಪುರದ ಪ್ರವಾಸ ಮಂದಿರವೂ ಭಾರತದ ಪುರಾತತ್ತ್ವ ಶಾಖೆಯ ಕಾರ್ಯಾಲಯಗಳೂ** ಇವೆ. ಇಲ್ಲಿಂದ ದಕ್ಷಿಣದಿಕ್ಕಿಗೆ ಹೋಗುವ ರಸ್ತೆ **ಹಂಪೆಯ ವಿದ್ಯುದುತ್ಪಾದಕ ಭವನದ (ಹಂಪಿ ಪವರ್ ಹೌಸ್)** ಕಡೆಗೆ ಹೋಗುತ್ತದೆ. ಈ ಸ್ಥಳದಲ್ಲಿ ತುಂಗಭದ್ರಾ ಅಣೆಕಟ್ಟಿನಿಂದ ಪವರ್ ಕೆನಾಲ್ ಮೂಲಕ ನೀರನ್ನು ತಂದು ಕೃತಕಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವರು. ಇದೇ ದಾರಿಯಲ್ಲೇ ಪ್ರಾರಂಭದಲ್ಲಿ ಅಚ್ಯುತರಾಯ ಕಟ್ಟಿಸಿದ ಬಹುದೊಡ್ಡ **ಪಟ್ಟಾಭಿರಾಮನ ಗುಡಿ** ಸಿಗುವುದು. ಇಲ್ಲಿರುವ ಕಲ್ಯಾಣಮಂಟಪ ಚಿತ್ರ ವಿಚಿತ್ರವಾದ ಚಿತ್ರಗಳುಳ್ಳ ಕಂಬಗಳಿಂದ ಆಕರ್ಷಣೀಯವಾಗಿದೆ. ಇದರ ವಿಸ್ತಾರ ವಿಜಯವಿಠಲನ ಗುಡಿಗಿಂತ ಬಹಳ ದೊಡ್ಡದಾಗಿದ್ದರೂ ಇಲ್ಲಿಯ ಕಲಾ-ಕೌಶಲ್ಯ ಅಷ್ಟೊಂದು ಹೇಳಿಕೊಳ್ಳುವಷ್ಟು ಸುಂದರವಾಗಿಲ್ಲ.

ಕಾಮಲಾಪುರದಿಂದ ಕಂಪಿಲಿಗೆ ಹೋಗುವ ದಾರಿಯಲ್ಲಿ ಸುಮಾರು ನಾಲ್ಕು

ಫರ್ಲಾಂಗ್ ದೂರದಲ್ಲಿ ರಸ್ತೆಯ ಮಗ್ಗುಲಲ್ಲೇ **ಗಾಣಿಗಿತ್ತಿ ಗುಡಿ** ಇದೆ. ಇದಕ್ಕೆ ಈ ಹೆಸರು ಹೇಗೆ ಬಂತೋ ಪ್ರಾಮಾಣಿಕವಾಗಿ ಹೇಳಲು ಸಾಧ್ಯವಿಲ್ಲ. ಇದು ಒಂದು ಜೈನದೇವಾಲಯ. ಮಹಾದ್ವಾರದ ಚೌಕಟ್ಟಿನ ಮೇಲಿರುವ ಜಿನಮೂರ್ತಿಯೇ ಇದಕ್ಕೆ ಸಾಕ್ಷಿ. ಅಲ್ಲದೆ ಇಲ್ಲಿರುವ ದೀಪಸ್ತಂಭದ ಮೇಲಿನ ಶಾಸನದಿಂದಲೂ ಈ ಮಾತು ದೃಢವಾಗುತ್ತದೆ; ಇಮ್ಮಡಿ ಹರಿಹರನ ಮಂತ್ರಿಯಾದ ಇರುಗಪ ಇದನ್ನು ಶಕ ೧೩೦೭ [1385]ರಲ್ಲಿ ಕಟ್ಟಿಸಿದ ಈ ಗುಡಿಗೆ ಶ್ರೀ ಕುಂಥುಜಿನನಾಥ ಚೈತ್ಯಾಲಯವೆಂದು ಹೆಸರಿತ್ತು. ಈ ಗುಡಿಯ ಹಿಂದಕ್ಕೆ ಸುಮಾರು ಎರಡು ಫರ್ಲಾಂಗ್ ದೂರದಲ್ಲಿ ದೊಡ್ಡ **ಭೀಮನ ಅಗಸಿ** ಇದೆ. ಅಗಸಿಯ ಗೋಡೆಯ ಮೇಲೆ ಭೀಮಸೇನ ದುಃಶಾಸನನ ಕರಳು ಬಗೆದ ಚಿತ್ರ ಕೆತ್ತಿರುವುದರಿಂದ ಈ ಹೆಸರು ಬಂದಿದೆ. ಗಾಣಗಿತ್ತಿಗುಡಿಯಿಂದ ಸುಮಾರು ಒಂದು ಮೈಲಿಮುಂದೆ ಹೋದರೆ ರಸ್ತೆ ಕವಲೊಡೆಯುತ್ತದೆ. ನೇರವಾದ ರಸ್ತೆ ಕಂಪಿಲಿ ಕಡೆಗೂ ಇನ್ನೊಂದು ಆನೆಗೊಂದಿಗೂ ಹೋಗುತ್ತದೆ. ಕಂಪಿಲಿ ರಸ್ತೆಯಲ್ಲಿ ನೂರು ಗಜದಷ್ಟು ಮುಂದೆ ಹೋದರೆ ಎಡಗಡೆ.ಬೆಟ್ಟದಮೇಲೆ ಗುಡಿಯ ಗೋಪುರಗಳು ಗೋಚರವಾಗುತ್ತವೆ, ಇದೇ **ಮಾಲ್ಯವಂತ.** [ಹೆಚ್ಚಿನ ವಿವರಗಳಿಗೆ ಅ. 61, ಪು 80-82ನೋಡಿ].

ಆನೆಗೊಂದಿಗೆ ಹೋಗುವ ರಸ್ತೆಯಲ್ಲಿ ಸುಮಾರು ಒಂದೂವರೆ ಮೈಲಿ ಮುಂದೆ ಬಂದರೆ ಗಚ್ಚಿನಿಂದ ಮಾಡಿದ **ಅಗಸೆ ಬಾಗಿಲು** (Fort gate) ಸಿಗುತ್ತದೆ. ಈ ಅಗಸೆಯ ಕೆಳಭಾಗ ಕಲ್ಲಿನ ಕಟ್ಟಡ, ಇದು ಹಿಂದುಗಳ ಶೈಲಿಯಲ್ಲಿದೆ. ಇದರ ಮೇಲೆ ಕಟ್ಟಿರುವ ಗಚ್ಚಿನ ಗೋಪುರದಲ್ಲಿ ಕಮಾನುಗಳು ಮುಸ್ಲಿಂ ಶೈಲಿಯಲ್ಲಿವೆ; ಮೇಲಿನ ಬುರುಜುಗಳು ಹಿಂದೂ ಮಾದರಿಯಲ್ಲಿವೆ. ಹೀಗೆ ಇದೂ ಇಂಡೋ-ಸಾರ್ಸೆನಿಕ್ ವರ್ಗದ ಕಟ್ಟಡ. ವಿಜಯ ವಿಠಲನ ಗುಡಿಯನ್ನು ನೋಡಲು ಕಾರು ಅಥವಾ ಬಸ್ಸುಗಳಲ್ಲಿ ಬರಲಿಚ್ಛಿಸುವವರು ಈ ಮಾರ್ಗವಾಗಿಯೇ ಬರಬೇಕು. ಈ ಗೇಟಿನಿಂದ ಒಂದು ಫರ್ಲಾಂಗ್ ಮುಂದೆ ರಸ್ತೆ ಕವಲೊಡೆದು, ಒಂದು ಕವಲು (ನೇರವಾಗಿ ಹೋದರೆ) ನದೀ ಕಡೆಗೂ ಆನೆಗೊಂದಿಗೂ ಹೋಗುತ್ತದೆ. ಇನ್ನೊಂದು (ಎಡಕ್ಕೆ ತಿರುಗಿದರೆ) ವಿಜಯ ವಿಠಲನಗುಡಿ ಕಡೆಗೂ ಹೋಗುತ್ತದೆ.

ಆನೆಗೊಂದಿಗೆ ಹೋಗಲು ನದೀ ದಾಟಬೇಕು ; ಈ ನದೀ ಘಾಟಿಗೆ **ತಳವಾರ ಗಟ್ಟೆ** ಎಂದು ಹೆಸರು. (ಹೊಸಪೇಟೆಯಿಂದ ತಳವಾರಗಟ್ಟೆಗೆ ಸರ್ವೀಸ್ ಬಸ್ಸು ಇದೆ.) ನದೀ ದಾಟಿ ಆನೆಗೊಂದಿಗೆ (ಪುಟ 224) ಹೋಗಬೇಕು. ಕಾರು-ಬಸ್ಸುಗಳಲ್ಲಿಯೇ ಆನೆಗೊಂದಿಗೆ ಬರಬೇಕಾದವರೆ ಕಂಪ್ಲಿ-ಗಂಗಾವತಿ ಮಾರ್ಗದಲ್ಲಾಗಲಿ ಹೊಸಪೇಟೆ ಮುನಿರಾಬಾದ್ ಮಾರ್ಗವಾಗಿಯಾಗಲಿ ಬರಬೇಕು.

ಆನೆಗೊಂದಿಯಲ್ಲಿ ನೋಡಬೇಕಾದ ವಿಶೇಷಗಳು—1. ಚಿಂತಾಮಣಿ ಮಠ 2. ಮುಕ್ತಿ ನರಸಿಂಹನಗುಡಿ, (ಅ. 91-2, ಪು. 142-45) 3. ಮಲಪ್ರಹಾರಿಣೀ

ತೀರ್ಥ, 4. ಕಪಿಲಾಶ್ರಮ, 5. ಪುಣ್ಯಕೋಟಿ ತೀರ್ಥ, 6. ವಿರಜಾತೀರ್ಥ, 7. ಕಾಲ ಕೂಟಾದ್ರಿ, 8. ನವವೃಂದಾವನ [ಅ. 70, ಪು. 98–100], 9. ತಾರಾಪರ್ವತ [ಅ. 69, ಪು. 97], 10. ಗವಿರಂಗನಾಥ [ಅ. 67, ಪು. 91–5], 11. ಪಂಪಾ ಸರೋವರ, 12. ಮಾನಸ ಸರೋವರ, 13. ವಿಪ್ರಕೂಟ ಅ. 7, ಪು. 10], 14. ಶಬರಿಗುಹೆ (ಅ. 65 ಪು. 8–9], 15, ಆಂಜನಾದ್ರಿ ಅಥವಾ ಕಿಷ್ಕಿಂಧಾದ್ರಿ [ಅ. 7, ಪು. 12], 16. ಮಾಣಿಭದ್ರ, [ಅ. 54–58, ಪು. 67–77], 17. ಅಮೃತತೀರ್ಥ, 18. ಪಾಪನಾಶನ ತೀರ್ಥ [ಅ. 46–9, ಪು. 51–59], 19. ರಾಮಬಾಣ, 20. ವಾಲಿಕಾಷ್ಠ, 21. ವಾಲಿ ಭಂಡಾರ 22. ಸುಖದುಃಖಾರೋಹಣ ಪರ್ವತ.

ನವವೃಂದಾವನದಲ್ಲಿ ಪದ್ಮನಾಭ ತೀರ್ಥರು, ಕವೀಂದ್ರರು, ವಾಗೀಶರು, ವ್ಯಾಸ ರಾಯರು, ರಘುವರ್ಯರು, ಸುಧೀಂದ್ರರು, ಶ್ರೀನಿವಾಸತೀರ್ಥರು, ರಾಮತೀರ್ಥರು. ಗೋವಿಂದ ಒಡೆಯರು ಎಂಬ ಒಂಬತ್ತು ಮಾಧ್ವಪಂಥದ ಯತಿಗಳ ವೃಂದಾವನಗಳಿವೆ. ಇದು ಮಾಧ್ವರಿಗೆ ವಿಶೇಷತಃ ಪ್ರೇಕ್ಷಣೀಯವಾದ ಸ್ಥಳ. ವೃಂದಾವನಗಳ ಹೊರತು ಇಲ್ಲಿ ಹೆಚ್ಚಿನ ವಿಶೇಷವೇನೂ ಇಲ್ಲ. ನವವೃಂದಾವನ ನಡುಗಡ್ಡೆಯಾದ್ದರಿಂದ ಇಲ್ಲಿಗೆ ಹೋಗಬೇಕಾದರೆ ಹರಿಗೋಲಿನಲ್ಲಿ ನದೀ ದಾಟಿಯೇ ಹೋಗಬೇಕು. **ಕಪಿಲಾಶ್ರ**ಮಕ್ಕೆ ತಳವಾರಗಟ್ಟೆಯಿಂದಲೇ ನದೀದಡದ ಮೇಲೆಯೇ ಹೋಗಬೇಕು ; ನದೀ ಘಾಟನಿಂದ ಸುಮಾರು ಒಂದು ಮೈಲಿ ದೂರವಾಗುತ್ತದೆ. ಅದರ ಪಕ್ಕದಲ್ಲೇ ಇನ್ನೂ ಸ್ವಲ್ಪ ಮುಂದೆ **ವಾಲಿಕಾಷ್ಠ** ವಿದೆ, ಇದು ವಾಲಿಯನ್ನು ದಹನ ಮಾಡಿದ ಸ್ಥಳವೆಂದು ಹೇಳು ತ್ತಾರೆ. ಗದ್ದೆಗಳ ಮಧ್ಯೆದಲ್ಲಿ ಸಿಕ್ಕಿಕೊಂಡಿರುವುದರಿಂದ ಇದನ್ನು ಗುರುತಿಸುವುದು ಶ್ರಮಸಾಧ್ಯ.

ಪಂಪಾಸರೋವರದಲ್ಲಿ ಸಾಧುಗಳಿಗೆ ಸದಾವರ್ತ [ಸ್ವಯಂಪಾಕ] ನಿಃಶುಲ್ಕ ವಾಗಿ ಕೊಡುವ ಏರ್ಪಾಡಿದೆ. ಇಲ್ಲಿ ಜಯಲಕ್ಷ್ಮಿಯ ದೇವಸ್ಥಾನವಿದೆ. ಲಕ್ಷ್ಮಿಯ ಮೂರ್ತಿ ಬಹಳ ಮುದ್ದಾಗಿದೆ. ಈ ಸರೋವರದ ಹಿಂದೆಯೇ **ಅಂಜನಾದ್ರಿ**ಯಿದೆ. ಇದನ್ನು ಹತ್ತುವ ಮಾರ್ಗ ಬಹಳ ಕಡಿದಾಗಿದೆ. **ಮಾಣಿಭದ್ರೇಶ್ವರ**ನ ಗುಡಿಗೆ ಹೋಗ ಲಿಚ್ಛಿಸುವವರು ಯಾರಾದರೊಬ್ಬ ದಾರಿತೋರಿಸುವವನನ್ನು ಕರೆದು ಕೊಂಡು ಹೋಗು ವುದು ಉತ್ತಮ. **ರಾಮಬಾಣ** ವೆಂಬುದು ಚಿಂತಾಮಣಿ ಮಠಕ್ಕೆ ಸೇರಿದ ಆವರಣ ದಲ್ಲಿದೆ, ರಾಮ ಈ ಸ್ಥಳದಲ್ಲಿ ನಿಂತುಕೊಂಡೇವಾಲಿಗೆ ಬಾಣ ಹೊಡೆದನೆಂದು ಹೇಳುತ್ತಾರೆ. ಐತಿಹ್ಯ ಬಿಟ್ಟರೆ ಇದಕ್ಕೆ ಬೇರೆ ಯಾವ ಪ್ರಮಾಣವೂ ಇಲ್ಲ. ಗವಿ ರಂಗನಾಥ ಇರುವ ಗುಡ್ಡಕ್ಕೆ **ಸುಖದುಃಖಾರೋಹಣ ಪರ್ವತ**ವೆಂದು ಹೆಸರು. ಅದರ ಮೇಲೆ ಕಾಣಿ ಸುವ ಗೋಪುರದಿಂದ ಸ್ವಲ್ಪ ಮುಂದೆ ಹೋದರೆ ಕೆಳಭಾಗದಲ್ಲಿ ಭಾರಿ [20 ಅಡಿ ಎತ್ತರ, ಸುಮಾರು 15 ಅಡಿ ಅಗಲದ] ಬಂಡೆ ಕಾಣಿಸುತ್ತದೆ, ಅದರ ಮೇಲೆ ಕಪಿಗಳ ಚಿತ್ರವೂ ಕಾಣಿಸುತ್ತದೆ. ಇದೇ **ವಾಲಿಭಂಡಾರ**. ಈ ಗವಿಯಲ್ಲೇ ವಾಲಿ ತನ್ನ ಭಂಡಾರವನ್ನಿಟ್ಟಿದ್ದನಂತೆ.

ಕಡೆಯಮಾತು—ಇಂತು ಈ ಚಿಕ್ಕ ಹೊತ್ತಿಗೆಯಲ್ಲಿ ವರ್ಣಿತವಾಗಿರುವ ಹಂಪೆಯ ಕ್ಷೇತ್ರ ಸುಮಾರು ಹದಿನೈದು ಮೈಲಿಗಳಷ್ಟು ವಿಸ್ತಾರವಾಗಿದ್ದರೂ, ಈ ಭೂಮಿ ಹೆಜ್ಜೆಹೆಜ್ಜೆಗೂ ಪವಿತ್ರವಾಗಿದೆ; ಇದರ ರೇಣುರೇಣುವೂ ಹುತಾತ್ಮ ವೀರರ ರಕ್ತಬಿಂದುಗಳಿಂದ ಸಿಂಚಿತವಾಗಿದೆ. ಒಂದುಕಡೆ ಸೃಷ್ಟಿಯ ಸೌಂದರ್ಯ ಹರಡಿದ್ದರೆ ಇನ್ನೊಂದು ಕಡೆ ಮಾನವನ ಕೈಚಮತ್ಕೃತಿಯ ಭಂಡಾರವೇ ನೆಲೆಸಿದೆ. ಕೆಲವರು ಪುರಾಣ ಪ್ರಸಿದ್ಧವಾದ ಈ ತೀರ್ಥಗಳ, ಮೂರ್ತಿಗಳ ಅಗಾಧ ಮಹಿಮೆಗೆ ತಲೆಬಾಗಿ ನಮಿಸಿದರೆ ಕೆಲವರು ಇಲ್ಲಿಯ ಐತಿಹಾಸಿಕ ಭಗ್ನಾವಶೇಷಗಳನ್ನು ನೋಡಿ ಮರುಗಿ ಸಂತಾಪಸೂಚನೆ ಸಲ್ಲಿಸುತ್ತಾರೆ. ಹೇಮಕೂಟ ಋಷ್ಯಮೂಕ ಪಂಪಾಸರೋವರಾದಿ ಪ್ರಾಕೃತಿಕ ಸ್ಮಾರಕಗಳು ಯುಗಯುಗಾಂತರಗಳಲ್ಲಿ ನಡೆದ ರಾಮಾಯಣಾದಿ ಪೌರಾಣಿಕ ಘಟನೆಗಳಿಗೆ ಪ್ರತ್ಯಕ್ಷ ಸಾಕ್ಷಿಗಳಂತಿದ್ದರೆ ಮಹಾನವಮೀ ದಿಬ್ಬ ಕಮಲಮಹಲು ಅರಮನೆಗಳ ಅವಶೇಷಗಳು ಮೊದಲಾದುವುಗಳಲ್ಲಿ ಎದ್ದು ಕಾಣುವ ಕಲಾನೈಪುಣ್ಯವೆಂಬ ಶಿಲಾಮಯ ಕಾವ್ಯಗಳು ಗತಿಸಿ ಮರೆತು ಹೋದ ಸಾಮ್ರಾಜ್ಯದ ಮರೆಯಲಾಗದ ವೈಭವದ ಚಿತ್ರಗಳನ್ನು ಕಣ್ಮುಂದೆ ತಂದು ನಿಲ್ಲಿಸಬಲ್ಲ ಮೂಕ ಇತಿಹಾಸಕಾರರಂತಿವೆ. ಈ ಕಡೆ ಪೂಜೆ-ಪುರಸ್ಕಾರಗಳಾಗುತ್ತಿರುವ ಮೂರ್ತಿಗಳ ದರ್ಶನದಿಂದ ಭಕ್ತಿಭಾವನೆ ಒಡಮೂಡುತ್ತಿದ್ದರೆ ಇನ್ನೊಂದು ಕಡೆ ಹಾಳು ಗುಡಿಗಳಲ್ಲಿದ್ದರೂ ತಲೆಯಿಲ್ಲದ ನಡುವಿಲ್ಲದ ಕೈಮುರುಕ ಕಾಲ್ಮುರುಕ ವಿಗ್ರಹಗಳನ್ನು ನೋಡಿದರೇ ಸಾಕು, ಮೈಸ್ಮೃತಿಯೇ ತಪ್ಪಿ ಹೋಗುತ್ತದೆ. ಮಾನವನು ಎಷ್ಟೇ ಸಾಹಸಪಟ್ಟು ಎಂಥಾ ಅದ್ಭುತ ಕಾರ್ಯಗಳನ್ನೇ ಎಸಗಿದರೂ ಅವೆಲ್ಲವೂ ಅಲ್ಪ ಕ್ಷಣಿಕವೆಂಬುದು ಒಂದರಿಂದ ತಿಳಿದು ಬಂದರೆ ವಿಶ್ವ ಶಿಲ್ಪಿಯ ಅನಂತ ಅಪಾರ ವೈಭವದ ಅರಿವೂ ಜೊತೆಯಲ್ಲೇ ಆಗುವುದು.

ಒಟ್ಟಿನಲ್ಲಿ ಇಲ್ಲಿಗೆ ಬರುವ ಪ್ರವಾಸಿಕರು-ಧಾರ್ಮಿಕ ನೈಸರ್ಗಿಕ ಪೌರಾಣಿಕ ಐತಿಹಾಸಿಕ ಕುತೂಹಲಾತ್ಮಕ ಸಂಶೋಧನಾತ್ಮಕ ಆಧ್ಯಾತ್ಮಿಕ ಅಥವಾ ಕಲೋಪಾಸನಾತ್ಮಕ, ಯಾವ ಯಾವ ದೃಷ್ಟಿಯಿಂದಲೇ ನೋಡಲಿ-ಅವರಿಗೆ ಇಲ್ಲಿ ಹಬ್ಬದ ಸವಿಯೂಟವೇ ಊಟ, ಮರೆವೆನೆಂದರೂ ಮರೆಯಲಾಗದ ಊಟ! ಎಷ್ಟು ನೋಡಿದರೂ ದಣಿಯದ ನೋಟ! ಇದನ್ನೆಲ್ಲ ಕಂಡೇ ಮಹರ್ಷಿಗಳು ಹೀಗೆ ಉದ್ಗಾರ ಮಾಡಿರಬೇಕು.

ಪುನಾತಿ ಸರ್ವಕ್ಷೇತ್ರಂ ಹಿ ದರ್ಶನಾದಭಿಷೇಚನಾತ್ ।
ಪುನಾತಿ ಸ್ಮರಣಾದೇವ ಸರ್ವಾನ್ ಪಂಪಾಪುರೀ ಸದಾ॥

ಸಂಪೂರ್ಣ

ಬೆಲೆಗೆ ಸಿದ್ಧವಾಗಿರುವ ಕೆಲವು

ಚಿತ್ರಪಟಗಳು

1. **ನವವೃಂದಾವನ, ಆನೆಗೊಂದಿ** (ಆಕಾರ 23 ಸೆ. ಮೀ. × 29 ಸೆ. ಮೀ. ಅಥವಾ 9½" × 11½") ಶ್ರೀ ಕೆ. ಜಿ. ಹಲಸಿಗಿ, B.A., B.Ed., D.P.El., Photo Artist, ಧಾರವಾಡ ಇವರಿಂದ ಪ್ರಕಾಶಿತವಾದವು -

ಉತ್ತಮ ಪ್ರತಿ ಒಂದಕ್ಕೆ **40 ನ.ಪೈ**

2. **ಯಂತ್ರೋದ್ಧಾರಕ ಪ್ರಾಣದೇವರು, ಹಂಪೆ,** ಶ್ರೀಮದ್ ವ್ಯಾಸರಾಜತೀರ್ಥರ ವಿರಚಿತ ಯಂತ್ರೋದ್ಧಾರಕ ಸ್ತೋತ್ರದೊಡನೆ (ಆಕಾರ, ಪ್ರಕಾರವು, ಬೆಲೆ ಎಲ್ಲವೂ ಮೇಲಿನಂತೆ.) ದೇವನಾಗರೀ ಮತ್ತು ಕನ್ನಡ ಎರಡು ಲಿಪಿಗಳಲ್ಲಿ ಉಪಲಭ್ಯವಾಗಿವೆ. ಯಾವ ಲಿಪಿ ಬೇಕೆಂಬುದನ್ನು ಮರೆಯದೆ ನಮೂದಿಸಬೇಕು.

3. **ನರಹರಿ ತೀರ್ಥರ ವೃಂದಾವನ** (ಆಕಾರ ಡೆಮ್ಮಿ ಅಷ್ಟಪತ್ರ ಅಂದರೆ 23 ಸೆ. ಮೀ. × 13.5 ಸೆ. ಮೀ. ಅಥವಾ 9" × 5½")

ಸಾಧಾರಣ ಪ್ರತಿ 1ಕ್ಕೆ **7 ನ.ಪೈ.**

ಉತ್ತಮ ಪ್ರತಿ 1ಕ್ಕೆ **10 ನ ಪೈ.**

4. **ವ್ಯಾಸರಾಯರ ವೃಂದಾವನ (ಪುರಂದರದಾಸರು ಸಹ)** (ಆಕಾರ ಮತ್ತು ಬೆಲೆ ಮೇಲಿನಂತೆ.)

5. **ವ್ಯಾಸರಾಯರು ಕೃಷ್ಣದೇವರಾಯನ ಕುಹುಯೋಗ ಪರಿಹಾರ ಮಾಡಿದ್ದು** (ಆಕಾರ ಮತ್ತು ಬೆಲೆ ಹಿಂದಿನಂತೆ.)

ಸೂಚನೆ—ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುವುದು. ಅಡ್ವಾನ್ಸ್ ಇಲ್ಲದೆ ವಿ.ಪಿ. ಕಳುಹಿಸಲಾಗುವುದಿಲ್ಲ.

ಪಿ. ವಿಷ್ಣುತೀರ್ಥ
ನವವೃಂದಾವನ, ಆನೆಗೊಂದಿ
(ಗಂಗಾವತಿ ತಾ|| ರಾಯಚೂರು ಜಿಲ್ಲಾ)

ಅಧ್ಯಾಯ 54 ಮಾಣಿಭದ್ರೋಪಾಖ್ಯಾನ

[ಇಲ್ಲಿಂದ ಐದು ಅಧ್ಯಾಯಗಳಲ್ಲಿ ಮಾಣಿಭದ್ರ–ಸರ್ವಮಂಗಳೆಯರ ವಿವಾಹ ವೃತ್ತಾಂತದ ವರ್ಣನೆ ಬರುತ್ತದೆ. ಅದಕ್ಕೆ ಪೀಠಿಕಾರೂಪವಾಗಿ ಸಪ್ತರ್ಷಿಗಳ ಪ್ರಶ್ನೆ ನಿರೂಪಿಸಿ ಕ್ಷೇತ್ರಪಾಲನ ಮುಖದಿಂದ ವಿವಾಹವರ್ಣನೆ ಮಾಡಿಸಿದೆ.]

ಉತ್ತರದಿಕ್ಕಿನ ತೀರ್ಥಗಳನ್ನು ಸಂದರ್ಶಿಸಿದ ಸಪ್ತರ್ಷಿಗಳು ಆ ದಿಕ್ಕಿನ ಸದ್ಯೋಜಾತಮೂರ್ತಿಯಾದ ಮಾಣಿಭದ್ರನ ಉಪಾಖ್ಯಾನವನ್ನು ಕೇಳಲಿಚ್ಛಿಸಿ ಕ್ಷೇತ್ರಪಾಲನನ್ನು 'ಮಹಾಪ್ರಾಜ್ಞ, ನಿನ್ನ ವಾಕ್ಯಾಮೃತಪಾನಾಸಕ್ತರಾದ ನಮಗೆ ಮಾಣಿಭದ್ರೋಪಾಖ್ಯಾನವನ್ನು ವಿಸ್ತಾರವಾಗಿ ಹೇಳು. ಈ ಕಥೆ ಶ್ರೋತೃಗಳ ಪಾಪಗಳನ್ನು ಪರಿಹರಿಸುತ್ತದೆ. ಅಲ್ಲದೆ ಮನಶ್ಶುದ್ಧಿಕರವೂ ದಾರಿದ್ರ್ಯಮೋಚಕವೂ ಸ್ತ್ರೀಯರಿಗೆ ಸೌಭಾಗ್ಯದಾಯಕವೂ ಆಗಿರುವುದು. ಆದ್ದರಿಂದ ಅದನ್ನು ನಾವು ಕೇಳಲಿಚ್ಛಿಸುತ್ತೇವೆ' ಎಂದು ಪ್ರಾರ್ಥಿಸಲು ಕ್ಷೇತ್ರಪಾಲ ಆ ಕಥಾನಕವನ್ನು ವಿಸ್ತಾರವಾಗಿ ಈ ರೀತಿ ನಿರೂಪಿಸಿದನು.

ಶಿವ–ಪಾರ್ವತಿಯರ ಕಲಹ—ರಮ್ಯವಾದ ಕೈಲಾಸನಗರದಲ್ಲಿ ಒಂದು ದಿನ ಶಿವ-ಪಾರ್ವತಿಯರು ವಿನೋದಕ್ಕಾಗಿ ಪಗಡೆ ಆಡುತ್ತಾ ಕುಳಿತಿದ್ದರು. ಆಟದಲ್ಲಿ ನಾನು ಗೆದ್ದೆ, ನಾನು ಗೆದ್ದೆ ಎಂದು ಇಬ್ಬರಿಗೂ ಮಾತು ಮಾತಿನಲ್ಲೇ ಕಲಹ ಆರಂಭವಾಯಿತು. ದೇವಿ ಪ್ರೇಮಕೋಪಾನ್ವಿತಳಾಗಿ "ಸೃಷ್ಟಿ ಸ್ಥಿತಿಲಯಗಳನ್ನು ನಡೆಸುವ ಆದಿಶಕ್ತಿ ನಾನೇ ಅಲ್ಲವೇ? ಹೀಗೆ ಸರ್ವದಾ ನನ್ನಧೀನನಾಗಿರುವ ನೀನು ನನ್ನನ್ನು ಹೇಗೆ ಜಯಿಸಬಲ್ಲೆ? ವಿಶ್ವವಿಲಾಸಿನಿಯಾದ ನಾನು ಎಂಥೆಂಥಾ ಅಸಾಧ್ಯಕಾರ್ಯಗಳನ್ನಾದರೂ ಮಾಡಿ ತೋರಿಸಲು ದಕ್ಷಳು. ಕ್ಷಣಮಾತ್ರದಲ್ಲಿ ಸಮುದ್ರವನ್ನು ನಿರ್ಜಲವಾಗಿಯೂ ಪಾಷಾಣವನ್ನು ಅತಿಕೋಮಲವಾಗುವಂತೆಯೂ, ಅಗ್ನಿಯನ್ನು ತಣ್ಣಗೂ, ಹಿಮವನ್ನು ಅಗ್ನಿಯಂತೆಯೂ ಮಾಡಲು ನಾನು ಸಮರ್ಥಳೆಂಬುದಕ್ಕೆ ನೀನೇ ಸಾಕ್ಷಿಯಾಗಿದ್ದೀಯೆ. ಆದ್ದರಿಂದ ನಾನೇ ನಿನ್ನನ್ನು ಗೆದ್ದೆ" ಎಂದು ವಾದಿಸಿದಳು.

ಹೀಗೆ ಗಿರಿಜೆ ಗರ್ವದಿಂದ ನುಡಿಯಲು, ನೀಲಲೋಹಿತ ಅದನ್ನು ಸೈರಿಸದೆ ಅವಳ ಗರ್ವವನ್ನು ಖಂಡಿಸುತ್ತಾ, "ನಿನಗೆ ಈ ಶಕ್ತಿಯೆಲ್ಲ ಬಂದಿದ್ದು ನನ್ನ ಸನ್ನಿಧಾನದಿಂದಲೇ ಅಲ್ಲವೆ? ನನ್ನ ದೃಷ್ಟಿ ನಿನ್ನ ಮೇಲೆ ಬಿದ್ದರೇ ಅಲ್ಲವೇ ನೀನು ಚಿದ್ರೂಪಳಾಗುವುದು? ಇಲ್ಲದಿದ್ದರೆ ನೀನೂ ಜಡವೇ. ಸರ್ವಧುರಂಧರರಾದ ನಿನ್ನಂಥ ಎಷ್ಟೋ ಮಂದಿಗಳು ನನ್ನಿಂದ ಸೃಷ್ಟಿಸಲ್ಪಟ್ಟಿದ್ದಾರೆ. ನೀನು ಜಗತ್ತಿನ ಸೃಷ್ಟ್ಯಾದಿಗಳನ್ನು ನಡೆಸುವುದೂ ನನ್ನ ಅನುಗ್ರಹಬಲದಿಂದಲೇ. ಆದರೆ ನಾನು ಮಾತ್ರ ನೀನಿಲ್ಲದಿದ್ದರೂ ಲೀಲಾಮಾತ್ರದಿಂದ ಸೃಷ್ಟಿ ಸ್ಥಿತಿಲಯಗಳನ್ನು ನಡೆಸುತ್ತೇನೆ" ಎಂದು ಹೇಳಿದನು.